# ಕಗ್ಗ ರಸಧಾರೆ

ಸಂಪುಟ ೧

ಕಗ್ಗ ರಸಧಾರೆ-ಸಂಪುಟ-1 (ಡಿವಿಜಿಯವರ ಮಂಕುತಿಮ್ಮನ ಕಗ್ಗಗಳ ರಸಧಾರೆ)

JNANA002064

ಡಿವಿಜಿಯವರ ಮಂಕುತಿಮ್ಮನ ಕಗ್ಗಗ



ವ್ಯಾಖ್ಯಾತ: ರವಿ ತಿರುಮಲೈ

# ಕಗ್ಗರಸಧಾರೆ

## ಡಿವಿಜಿಯವರ ಮಂಕುತಿಮ್ಮನ ಕಗ್ಗಗಳ ರಸಧಾರೆ

## ಸಂಪುಟ-1

ವ್ಯಾಖ್ಯಾತ : ರವಿ ತಿರುಮಲೈ

ಪ್ರಕಾಶಕರು

ವಿಜಯರವಿ ಪ್ರಕಾಶನ

**"KAGGA RASADHARE"** Vol-1 Muktaka 1-200 Nos.
-A commentary in Kannada
on Dr. D.V.Gundappa's "Mankuthimmana Kagga"
by Ravi Tirumalai

Pages: xx+275

© : Author

Published: 2013
Copies: 1000
Price: Rs. 250/-

Author:
Ravi Tirumalai
Mobile: 96322 46255, 99451 56255
email: myrathy@gmail.com

Publisher:
Vijayaravi Prakashana
No. 586 21st Main 4th T Block
21st Main Jayanagar, Bangalore 560041
Tel: 080-22451417

Printed at:
Sun Prints
21/1, 2nd Cross,
4th Main, Chamarajapet
Bangalore-560 018
Tel: 94480 67224

ನನಗೆ ಬದುಕಿನ ಪಾಠ

ಹೇಳಿಕೊಟ್ಟ ಎಲ್ಲರಿಗೂ

ಅರ್ಪಣೆ

# ರಸಧಾರಾ ಸೂಚಿ


| ಕ್ರಸಂ. | ವಿಷಯ | ಮುಕ್ತಕ ಸಂಖ್ಯೆ | ಪುಟ ಸಂಖ್ಯೆ |
|---|---|---|---|
| 1. | ಪರಮಾತ್ಮ | 1-3 | 1 |
| 2. | ಏನು ಜೀವನದರ್ಥ | 4-8 | 4 |
| 3. | ಮಾನವರೋ ದಾನವರೋ | 9-13 | 11 |
| 4. | ಲೋಕಜೀವನ ಮಥನ | 14-18 | 19 |
| 5. | ಇದೇನು ಒಣರಗಳೆ | 19-23 | 29 |
| 6. | ಬಾಳಿಗೆ ನಕಾಶೆ | 24-28 | 38 |
| 7. | ಸಮಸ್ಯೆಗೆಲ್ಲಿ ಪುರಾಣ | 29-33 | 47 |
| 8. | ಬ್ರಹ್ಮವಸ್ತು ಊಸರವಳ್ಳಿಯೇ | 34-38 | 55 |
| 9. | ವಿದ್ಯುಲ್ಲಹರಿಯೇ | 39-43 | 63 |
| 10. | ಬೊಂಕು ದೀಪವೇ ತಂಟೆ | 44-48 | 70 |
| 11. | ಹೃದಯರುಚಿ ಚೋದ್ಯ | 49-53 | 78 |
| 12. | ಅಂತರನುಭವ | 54-58 | 86 |
| 13. | ಸಾಕ್ಷಿ ದ್ವಯ | 59-63 | 92 |
| 14. | ಅಂತರ್ವೀಕ್ಷೆ | 64-68 | 99 |
| 15. | ಪ್ರಕೃತಿ ರಸತಂತ್ರ | 69-73 | 106 |
| 16. | ಪಾಲ್ ಬ್ರಹ್ಮ-ನೊರೆ ಸೃಷ್ಟಿ | 74-78 | 113 |
| 17. | ವಿಶ್ವಲೀಲೆ | 79-83 | 119 |
| 18. | ಜೀವ ತಾಂಡವ | 84-88 | 126 |
| 19. | ಪ್ರಪಂಚನ-ಆಕುಂಚನ | 89-93 | 131 |
| 20. | ಬ್ರಹ್ಮವೇ ಜೀವನವೋ | 94-98 | 137 |
| 21. | ಮೇಯ-ಅಮೇಯ | 99-103 | 144 |
| 22. | ಅನಂತ ಚೌಕಟ್ಟು-ಸಾಂತ ಚಿತ್ರ | 104-108 | 151 |
| 23. | ಜಡ-ಜೀವ | 109-113 | 158 |

| | | | |
|---|---|---|---|
| 24. | ಭೌತ ವಿಜ್ಞಾನಿ | 114-118 | 164 |
| 25. | ಭೂವ್ಯೋಮ್ ಯಂತ್ರ | 119-121 | 176 |

| ಕ್ರ.ಸಂ. | ವಿಷಯ | ಮುಕ್ತಕ ಸಂಖ್ಯೆ | ಪುಟ ಸಂಖ್ಯೆ |
|---|---|---|---|
| 26. | ಸಚ್ಚಿದಾನಂದ ತತ್ವ | 122-128 | 174 |
| 27. | ನಿತ್ಯ ಪುರಾತನ-ನಿತ್ಯ ನೂತನ | 129-133 | 182 |
| 28. | ವಿಶ್ವಕೇಂದ್ರ ನೀನು | 134-138 | 189 |
| 29. | ಸತತ ಕೃಷಿ ಪ್ರಕೃತಿ | 139-143 | 195 |
| 30. | ಮಾಯೆ ಕೇಕಯಪುತ್ರಿ | 144-148 | 202 |
| 31. | ದೊರೆ ಮೂವರು | 149-153 | 209 |
| 32. | ವಿಧಿ-ವಿಧಾನ | 154-158 | 216 |
| 33. | ಅದೃಷ್ಟ ತಂತ್ರ | 159-163 | 222 |
| 34. | ಅಳಿವಿಲ್ಲ ವಿಶ್ವಕ್ಕೆ | 164-168 | 227 |
| 35. | ಋಣಾನುಬಂಧ | 169-173 | 234 |
| 36. | ಮಂದಹಸಿತದ ಕೊಲೆ | 174-178 | 240 |
| 37. | ಪುಣ್ಯ-ಪಾಪ | 179-183 | 247 |
| 38. | ಲೋಕ ಸಹವಾಸ | 184-188 | 253 |
| 39. | ನರಿ-ವಾನರ-ನರ | 189-193 | 260 |
| 40. | ನಾಲೊಗ | 194-198 | 266 |
| 41. | ವಿಧಿಯ ಕೈಚಕ್ರ | 198-200 | 273 |

# ಮುನ್ನುಡಿ

'ಡಿ.ವಿ.ಜಿ.' ಎಂಬ ಸಂಕೇತಾಕ್ಷರಗಳಿಂದ ಖ್ಯಾತರಾದ ಡಾ|| ಡಿ. ವಿ. ಗುಂಡಪ್ಪನವರು ರಚಿಸಿದ 'ಮಂಕುತಿಮ್ಮನ ಕಗ್ಗ' ಇಪ್ಪತ್ತನೇ ಶತಮಾನದ ಉತ್ತರಾರ್ಧದ ಕನ್ನಡ ಕೃತಿಗಳಲ್ಲಿ ಅತ್ಯಂತ ವಿಶಾಲ ಜನಾದರಣೆಯನ್ನು ಪಡೆದ ಕೃತಿ ಎಂಬ ಸಂಗತಿಯು ವಿವಾದಾತೀತವಾಗಿ ಸಿದ್ಧಪಟ್ಟಿದೆ. ನಿತ್ಯಜೀವನದಲ್ಲಿ ಎದುರಾಗುವ ಯಾವುದೇ ಸಮಸ್ಯೆಯ ಪ್ರಸಕ್ತಿ ಬಂದಾಗಲೂ, ಹಲವಾರು ವೈಪರೀತ್ಯಗಳಿಂದ ಕೂಡಿದ ಜಗತ್ತಿನ ವಿಷಯದಲ್ಲಿ ಸಾಮಾನ್ಯ ವ್ಯಕ್ತಿಯೊಬ್ಬನು ಯಾವ ಮನೋಭಂಗಿಯನ್ನು ಬೆಳೆಸಿಕೊಳ್ಳುವುದು, ನೆಮ್ಮದಿಗೆ ದಾರಿ ಮಾಡಬಹುದೆಂಬುದರ ಪ್ರಸಕ್ತಿ ಬಂದಾಗಲೂ, ಸರ್ವವಿದಿತ ಪೌರಾಣಿಕಾಖ್ಯಾನಗಳಿಂದ ಮತ್ತು ಐತಿಹಾಸಿಕ-ಸಾಹಿತ್ಯಕ ಸಂದರ್ಭಗಳಿಂದ ನಾವು ಕಲಿಯಬಹುದಾದ ಪಾಠಗಳು ಏನೆಂದು ಚಿಂತಿಸುವಾಗಲೂ, ಪರಸ್ಪರ ವಿರುದ್ಧಗಳಂತೆ ತೋರುವ (ಉದಾಹರಣೆ: ಸಂಪ್ರದಾಯ ಮತ್ತು ಆಧುನಿಕತೆ, ಶ್ರದ್ಧೆ ಮತ್ತು ವೈಚಾರಿಕತೆ, ಇತ್ಯಾದಿ) ದ್ವಂದ್ವಗಳ ನಡುವೆ ಸಮನ್ವಯ ಕುರಿತು ಚಿಂತಿಸುವಾಗಲೂ, ಹೀಗೆ ಜೀವನದ ಪ್ರಮುಖ ಸನ್ನಿವೇಶಗಳಲ್ಲಿ ನೆರವನ್ನೀಯುವ ಹಿತವಚನಗಳ ಒಟ್ಟಿಲು 'ಮಂಕುತಿಮ್ಮನ ಕಗ್ಗ'. ಇದಿಷ್ಟು ಪ್ರಯೋಜಕತೆಯ ಮಾತಾಯಿತು. ಎರಡನೆಯದಾಗಿ, ಇಂದಿನವರಿಗೆ ಅತ್ಯಂತ ಉಪಕಾರಕವಾದ ಈ ಹಿತಬೋಧನೆಯನ್ನು ಕಾವ್ಯಮುಕ್ತಕಗಳಾಗಿ ಪದ್ಯರೂಪದಲ್ಲಿ ನಿವೇಶನಗೊಳಿಸಿರುವುದರಿಂದ ಲಬ್ಧವಾಗಿರುವ ಸ್ಮರಣಾನುಕೂಲತೆ. ಮೇಲಿನ ಎರಡೂ ಲಾಕ್ಷಣಿಕ ಅಂಶಗಳು. ಇವೆರಡಕ್ಕೂ ಮೀರಿದ ಒಂದು ಅನನ್ಯತೆ 'ಮಂಕುತಿಮ್ಮನ ಕಗ್ಗ'ದಲ್ಲಿದೆ. ಅದೆಂದರೆ, ಈ ಇಡೀ ಕೃತಿಯ ಅಂತಃಶ್ರುತಿಯಂತೆ ಓದುಗರನ್ನು ತನ್ನೆಡೆಗೆ ಸೆಳೆದುಕೊಳ್ಳುವ ಸ್ನೇಹಧ್ವನಿ. ಇಲ್ಲಿಯ ಅನೇಕ ಉಕ್ತಿಗಳು ಉನ್ನತ ಪಾಂಡಿತ್ಯದಿಂದ, ಶಾಸ್ತ್ರಾಧ್ಯಯನದಿಂದ ಮತ್ತು ಗಾಢ ಲೋಕಾನುಭವದಿಂದ ಜನಿತವಾದವು. ಆದರೆ ಕೃತಿಯಲ್ಲಿ ಎಲ್ಲಿಯೂ 'ನಾನು ಜ್ಞಾನಿ', ಅನುಭವಿ; ನನ್ನ ಮಾತನ್ನು ನೀವೆಲ್ಲ ಕೇಳಿರಿ' ಎಂಬಂತಹ ಠೇಂಕಾರದ ಧ್ವನಿ ಇಲ್ಲ. ಪ್ರತಿಯಾಗಿ ಪದ್ಯಗಳುದ್ದಕ್ಕೂ ಎದ್ದು ಕಾಣುವುದು 'ನಾನು ನಿಮ್ಮಂತಹ ಒಬ್ಬ ಸಾಮಾನ್ಯ; ನಿಮ್ಮಂತೆ ನಾನೂ ಬವಣೆಪಟ್ಟವನು, ನಮ್ಮ ಅನುಭವಗಳನ್ನು ಹಂಚಿಕೊಳ್ಳೋಣ' ಎಂಬ ರೀತಿಯ ನಮ್ರತೆಯಿಂದಲೂ ಮೈತ್ರಿಭಾವದಿಂದಲೂ ಕೂಡಿದ ಪ್ರೇಮಳತೆ, ಲಕ್ಷಾಂತರ ಜನರಿಗೆ 'ಕಗ್ಗ'ದಿಂದ ಸಾಂತ್ವನವೂ ಸಮಾಧಾನವೂ ದೊರೆಯುತ್ತಿರುವುದು ಈ ಆದ್ರತೆಯಿಂದ, ಇದರಿಂದಾಗಿ ಅಸಂಖ್ಯ ಜನರ ಬಾಳಿನಲ್ಲಿ ಓರ್ವ ಆತ್ಮೀಯ ಸ್ನೇಹಿತನ ಸ್ಥಾನವನ್ನು 'ಕಗ್ಗ'ಪಡೆದುಕೊಂಡಿದೆ.

ವರ್ಷಗಳು ಕಳೆದಂತೆ 'ಕಗ್ಗ'ದ ಜನಪ್ರಿಯತೆ ನೂರ್ಮಡಿಯಾಗಿ ಹೆಚ್ಚುತ್ತಿರುವುದು ಸಾಹಿತ್ಯಲೋಕದ ಒಂದು ವಿಸ್ಮಯ. ಕಳೆದ ಅರ್ಧ ಶತಮಾನದುದಕ್ಕೂ ಗ್ರಂಥಗಳಲ್ಲಿ, ಲೇಖನಗಳಲ್ಲಿ, ಉಪನ್ಯಾಸಗಳಲ್ಲಿ, ಚಿಂತನಗೋಷ್ಠಿಗಳಲ್ಲಿ 'ಕಗ್ಗ'ದ ಪದ್ಯಗಳಷ್ಟು ಅಧಿಕವಾಗಿ ಮೇಲಿಂದ ಮೇಲೆ ಉದ್ಧತಗೊಳ್ಳುತ್ತ ಬಂದಿರುವ ಉಕ್ತಿಗಳು ಬೇರೆ ಇಲ್ಲ. 'ಕಗ್ಗ' ನಮ್ಮ

ಜನತೆಯ ಮನದಾಳದ ಯಾವುದೋ ಆಕಾಂಕ್ಷೆಗಳಿಗೆ ಸಮಾಧಾನ ನೀಡಲು ಶಕ್ತವಾಗಿದೆ ಎನ್ನಲು ಈ ವಿಶಾಲ ಜನಾದರಣೆಗಿಂತ ಬೇರೆ ಪುರಾವೆಯ ಅಗತ್ಯ ಇಲ್ಲ. ಯಾವ ರೀತಿಯ ಸಾಂತ್ವನಕ್ಕಾಗಿ ಜನತೆ ಕಾದಿದ್ದಿತೋ ಅದು 'ಕಗ್ಗ'ದಿಂದ ಲಬ್ಧವಾಯಿತೆಂಬುದು ಸ್ಪಷ್ಟವಿದೆ. ಹೀಗೆ ಸಾಹಿತ್ಯಕೃತಿಯೊಂದು ಜನಸಾಮಾನ್ಯರಿಗೆ ಆಪ್ತವಾಗುವುದು ವಿರಳವಾಗಿಯಷ್ಟೆ ನಡೆಯುವ ವಿದ್ಯಮಾನ.



ಈ ಹಿನ್ನೆಲೆಯಲ್ಲಿ 'ಕಗ್ಗ'ದ ಹಲವಾರು ಗದ್ಯಾನುವಾದಗಳೂ, ಅವಲೋಕನಗಳೂ, ವ್ಯಾಖ್ಯಾನಗಳೂ ಪರಾಮರ್ಶನಗಳೂ ಬಂದಿರುವುದು ಮತ್ತು ಈಗಲೂ ಬರುತ್ತಿರುವುದು ಸಹಜವೇ ಆಗಿದೆ. ಈ ಬಗೆಬಗೆಯ ಅನುಕೃತಿಗಳೂ ವಿಶಾಲ ಪ್ರಸಾರವನ್ನು ಪಡೆದುಕೊಂಡಿವೆ ಎಂಬುದು ಡಿ.ವಿ.ಜಿ.ಯವರ ಮೂಲಕೃತಿಯ ಸತ್ಯವಂತಿಕೆಗೆ ಸಾಕ್ಷ್ಯವಾಗಿದೆ. 'ಕಗ್ಗ'ವನ್ನು ಕುರಿತು ವಿವಿಧೆಡೆಗಳಲ್ಲಿ ಪದೇಪದೇ ನಡೆಯುವ ವಾಚನ- ವ್ಯಾಖ್ಯಾನ-ಪ್ರವಚನಗಳೂ ವಿಶಾಲ ಪ್ರಮಾಣದ ಶ್ರೋತೃಗಳನ್ನು ಆಕರ್ಷಿಸಿವೆ. ಮುದ್ರಿತ ರೂಪದಲ್ಲಿ ಮಾತ್ರವಲ್ಲದೆ ವಿದ್ಯುನ್ಮಾನ ಮಾಧ್ಯಮದ ಮೂಲಕವೂ 'ಕಗ್ಗ'ವನ್ನು ಕುರಿತ ವ್ಯಾಖ್ಯಾನಗಳನ್ನು ದೂರದ ಪ್ರದೇಶಗಳ ಮತ್ತು ವಿದೇಶಗಳ ಸಹಸ್ರಾರು ಸಾಹಿತ್ಯ ಪ್ರೇಮಿಗಳು ಆಸ್ವಾದಿಸುತ್ತಿದ್ದಾರೆ. ಈ ಹಿಂದೆಯೇ ಹಲವಾರು ಅನುವಾದ ಅಥವಾ ಅವಲೋಕನ ಕೃತಿಗಳು ಪ್ರಕಟಗೊಂಡಿದ್ದರೂ ಹೊಸ ಕೃತಿಗಳಿಗೂ ಸ್ವಾಗತ ದೊರೆಯುತ್ತಿದೆ.

ಹೀಗೆ ವರ್ಧಿಸುತ್ತ ಸಾಗಿರುವ 'ಕಗ್ಗ' ವಾಙ್ಮಯಕ್ಕೆ ಇದೀಗ ಸೇರ್ಪಡೆಯಾಗುತ್ತಿರುವುದು, ನನ್ನ ಮಿತ್ರರೂ ಮೌಲಿಕ ಸಾಹಿತ್ಯದ ಅಭ್ಯಾಸಿಗಳೂ ಅಧ್ಯಯನಶೀಲರೂ ಆದ ಶ್ರೀ ರವಿ ತಿರುಮಲೈ ರಚಿಸಿರುವ 'ಕಗ್ಗ- ರಸಧಾರೆ' ಎಂಬ ಶೀರ್ಷಿಕೆಯ ನೂತನ ವ್ಯಾಖ್ಯಾನ.

'ಕಗ್ಗ'ದ ಒಂದೊಂದು ಮುಕ್ತಕದಲ್ಲಿಯೂ ಜಗದ್ವಿಶಾಲವಾದ ಭಾವನಾ ಪ್ರಪಂಚವು ಘನೀಕೃತವಾಗಿದೆ. ಅಲ್ಲಿಯ ಶಬ್ದಗಳ ವಾಚ್ಯಾರ್ಥದ ಹತ್ತುಪಟ್ಟು ವಿಸ್ತ್ರತಾರ್ಥವು ಅಲ್ಲಿಯ ಮಾತುಗಳ ಹಿಂದಿನ ಧ್ವನಿಮೆಯಲ್ಲಿ ಸ್ಫೋಟಗೊಳ್ಳುತ್ತದೆ. ಹೀಗೆ ಒಳಹೊಕ್ಕಷ್ಟೂ ಹೆಚ್ಚುಹೆಚ್ಚು ಅರ್ಥಸೂಕ್ಷ್ಮಗಳು ಪ್ರಕಟಗೊಳ್ಳುತ್ತ ಹೋಗುತ್ತವೆ. ಭೌತಶಾಸ್ತ್ರದ ಪರಿಭಾಷೆಯಲ್ಲಿ ಹೇಳುವುದಾದರೆ 'ಕಗ್ಗ'ದ ಉಕ್ತಿಗಳು 'ಸ್ಟಾಟಿಕ್' ರೀತಿಯವಲ್ಲ, ಅವು 'ಡೈನಾಮಿಕ್' ರೀತಿಯವು, ಎಂದರೆ ಸಂಚಲನಾಶೀಲವಾದವು. ಈ ವೈಶಿಷ್ಟ್ಯದಿಂದಾಗೆಯೇ ಸಹೃದಯ ಓದುಗರಿಗೆ ಈ ಪದ್ಯಗಳಿಂದ ದೊರೆಯುವ

ಒಡನಾಟವು ಪ್ರವಾಹರೂಪದ್ದೂ ಸಾತತ್ಯಗುಣವುಳ್ಳದ್ದೂ ಆಗಿದೆ. ಮನನಮಾಡಿ ಧ್ಯಾನಿಸಿದೆಂತೆಲ್ಲ ಹೆಚ್ಚುಹೆಚ್ಚು ಅರ್ಥಸೂಕ್ಷ್ಮಗಳು ಹೊಳೆಯುತ್ತಾ ಹೋಗುತ್ತವೆ.

ಈ ಸತ್ತ್ವವಂತಿಕೆಯ ಕಾರಣದಿಂದ 'ಕಗ್ಗ'ವನ್ನು ಕುರಿತು ಈಗಾಗಲೇ ಹಲವಾರು ಕೃತಿಗಳು ಹೊರಬಂದಿದ್ದರೂ ನೂತನ ಅರ್ಥಶೋಧಗಳಿಗೆ ಸದಾ ಅವಕಾಶ ಉಳಿದೇ ಇರುತ್ತದೆ. ಕೃತಿಯ ಬಳಿಸಾರುವ ಜಿಜ್ಞಾಸುಗಳ ವ್ಯುತ್ಪತ್ತಿಗೂ ಮತ್ತು ಭಂಗ್ಯಂತರಕ್ಕೂ ಅನುಗುಣವಾಗಿ ಒಂದೊಂದು ಅನುಕೃತಿಗೂ ಅದರದ್ದೇ ವೈಶಿಷ್ಟ್ಯವಿರುವುದು ಸಾಧ್ಯವಿದೆ. ಅದರಂತೆ ಪ್ರಕೃತ 'ಕಗ್ಗ-ರಸಧಾರೆ' ವ್ಯಾಖ್ಯಾನ ಕೃತಿಯಲ್ಲಿ ಶ್ರೀ ರವಿ ತಿರುಮಲೈ ಅವರು ಒಂದು ವಿನೂತನ ಪ್ರಸ್ಥಾನವನ್ನು ಸಂಯೋಜಿಸಲು ಯತ್ನಿಸಿದ್ದಾರೆ. ಇಲ್ಲಿ ಪ್ರತಿ ಪದ್ಯದ ಪದವಿಭಾಗ, ಅಲ್ಲಲ್ಲಿ ಕಠಿಣ ಶಬ್ದಾರ್ಥ ಇದ್ದು ಅನಂತರ ಇಂಗಿತಾರ್ಥದ ವ್ಯಾಖ್ಯೆ ಇದೆ.

ಅಭಿಜಾತ ಸಾಹಿತ್ಯದ ವ್ಯಾಸಂಗದ ಹಿನ್ನೆಲೆ ಇದ್ದವರಿಗೆ ಪರಿಚಯವೇ ಆಗಿದ್ದರೂ ಅಂತಹ ಹಿನ್ನೆಲೆ ಇಲ್ಲದವರಿಗೆ ಸುಗಮವಾಗಲೆಂಬ ದೃಷ್ಟಿಯಿಂದ ಪದ್ಯಗಳಲ್ಲಿನ ಗ್ರಾಂಥಿಕ ಪ್ರಯೋಗಗಳಿಗೆ ಹೊಸಗನ್ನಡ ಆಡುಭಾಷೆಯ ವಿವರಣೆಗಳನ್ನು ಇಲ್ಲಿ ಕೊಡಲಾಗಿದೆ. (ಉದಾಹರಣೆ: ಕಗ್ಗ-135ರಲ್ಲಿ ಸಾಮಾನ್ಯ ಓದುಗರಿಗೆ ಸುಬೋಧವಲ್ಲದ 'ಶಂಪಾತರಂಗ' ಎಂದರೆ ಮಿಂಚಿನ ಅಲೆಗಳು ಎಂಬ ಮತ್ತು 'ಧಂಭೋಳಿ' ಎಂದರೆ ವಜ್ರಾಯುಧ ಎಂಬ ವಿವರಣೆ ಸೇರಿಸಲಾಗಿದೆ. ಮೂಲ ಪದ್ಯದೊಳಗಿನ ಉಲ್ಲೇಖಗಳ ಮತ್ತು ರೂಪಕಗಳ ಅರ್ಥದ ಗ್ರಹಿಕೆಗೆ ಪೂರಕವಾಗುವಂತೆ ಭೌತಜಗತ್ತಿನ ಮತ್ತು ಮಾನವ ಜೀವನದ ಸನ್ನಿವೇಶಗಳ ವಿವರಗಳನ್ನು ಅಳವಡಿಸಿರುವುದು ಪ್ರಾರಂಭಿಕ ಸ್ತರದ ವಾಚಕ ಸಮುದಾಯಕ್ಕೆ ಪ್ರಯೋಜಕವಾಗಿದೆ. ಅಲ್ಲಲ್ಲಿ ಸಮಾಂತರ ಆಶಯದ ಪೂರ್ವಸಾಹಿತ್ಯೋಲ್ಲೇಖಗಳನ್ನು ನೀಡಲಾಗಿದೆ. ಇಲ್ಲಿಯ ಉಕ್ತಿಗಳು ಪ್ರತಿಫಲಿಸುವ ದಾಸಸಾಹಿತ್ಯದ ಉದ್ಧೃತಗಳನ್ನು



ಹಲವಾರೆಡೆ ಕೊಡಲಾಗಿದೆ. ಭೌತವಿಶ್ವದ ರಚನೆಯ ವಿಸ್ಮಯಗಳ ಅವಲೋಕನವೇ ಹೇಗೆ ತತ್ತ್ವಬೋಧಕವಾಗಬಲ್ಲದೆಂಬುದನ್ನು ಹಲವಾರೆಡೆ ಸೂಚಿಸಲಾಗಿದೆ. ಉದಾಹರಣೆಗೆ “ಅಮಿತಪ್ರಪಂಚಾಕುಂಚನಾವರ್ತನ” ಎಂಬ (ಕಗ್ಗ-91) ಸೂತ್ರರೂಪ ಪದಗುಚ್ಛವನ್ನು ಬೀಜದಿಂದ ಮರವಾಗುವ ಪ್ರಕ್ರಿಯೆಯ ಮತ್ತು ರೇಷ್ಮೆಹುಳುವಿನ ಜೀವನಚಕ್ರದ ನಿದರ್ಶನ ನೀಡಿ ಪುಷ್ಟಿಕರಿಸಲಾಗಿದೆ. ಕಗ್ಗ-147ರಲ್ಲಿ ಒಮ್ಮೆ ಮೋಹಕವೆನಿಸಿ ಅನಂತರ ಮೈಮರೆತರೆ ಅಧಃಪತನಕಾರಿಯಾಗುವ ಮಾಯೆಯ ಸ್ವರೂಪವನ್ನು ವರ್ಣಿಸುವಲ್ಲಿ

ಜೀವನನಿರ್ವಹಣೆಯಲ್ಲಿ ಅಂತರ್ವಿವೇಚನೆಗೆ ಇರಬೇಕಾದ ಮುಖ್ಯ ಸ್ಥಾನವನ್ನು ವಿವರಿಸಲಾಗಿದೆ. 'ಕರವೆರಡರದೃಷ್ಟಕ್ಕೆ' ಎಂಬ ಕಗ್ಗ-158ರಲ್ಲಿ ಅಧ್ಯಾಹೃತವಾಗಿರುವ ಹಸ್ತಸಾಮುದ್ರಿಕ ವಿವರವನ್ನು ಲೇಖಕರು ಸ್ಫುಟಗೊಳಿಸಿದ್ದಾರೆ. ಕಗ್ಗ-162ರಲ್ಲಿ 'ಬಿಗಿಯದಿರು ನೀಂ ಬೀಗಿ' ಎಂಬ ವಾಕ್ಯಖಂಡಿಕೆಯಲ್ಲಿ ಹುದುಗಿರುವ ಶರಣಾಗತಿತ್ವದ ಉಪಾದೇಯತೆಯನ್ನು ಕಂಠೋಕ್ತಗೊಳಿಸಿದ್ದಾರೆ. ಕಗ್ಗ-185ರಲ್ಲಿ 'ಹೃದಯಜೀವನಕಿನಿತು ಬೆಲೆಯಿರದೇ?' ಎಂಬ ಮಾತುಗಳ ಆಶಯವನ್ನು ಸಾಂಪ್ರತಕಾಲದ ಕೇವಲ ವ್ಯವಹಾರ ಪ್ರಧಾನವೂ ಮೌಲ್ಯದೂರವೂ ಆದ ರೀತಿ-ನೀತಿಗಳ ಪ್ರಸ್ತಾಪದ ಮೂಲಕ ಸ್ಪಷ್ಟಗೊಳಿಸಿದ್ದಾರೆ.

ಹೀಗೆ 'ಕಗ್ಗ'ದ ಪದ್ಯಗಳ ಆಶಯದ ತಳಹದಿಯಾಗಿರುವ ಸತರ್ಕ ಚಿಂತನ ವಿನ್ಯಾಸದ ಹಂತಗಳನ್ನು ಸ್ಫುಟಗೊಳಿಸುವ ರೀತಿಯಲ್ಲಿ ಪ್ರಕೃತ 'ಕಗ್ಗ-ರಸಧಾರೆ' ವ್ಯಾಖ್ಯಾನವು ರೂಪುಗೊಂಡಿದೆ.

ಪ್ರಕೃತ ಸಂಪುಟದಲ್ಲಿ 'ಕಗ್ಗ'ದ ಮೊದಲ ಇನ್ನೂರು ಪದ್ಯಗಳ ಮೇಲಣ ವ್ಯಾಖ್ಯಾನವಿದೆ. ಉಳಿದ ಮುಂದಿನ ಪದ್ಯಗಳ ವ್ಯಾಖ್ಯಾನಗಳು ಈ ಸರಣಿಯ ಎರಡರಿಂದ ಐದನೆಯವರೆಗಿನ ಸಂಪುಟಗಳಲ್ಲಿ ಸಂಪನ್ನಗೊಳ್ಳಲಿವೆ.

ಶ್ರೀ ರವಿ ತಿರುಮಲೈ ಅವರ ಈ ಶ್ರದ್ಧಾಪೂರ್ವಕ ಸಾಹಿತ್ಯ ಕೈಂಕರ್ಯಕ್ಕಾಗಿ ಅವರನ್ನು ಅಭಿನಂದಿಸುತ್ತ ಈ ನೂತನ ವ್ಯಾಖ್ಯಾನಕ್ಕೆ ವಾಚಕರ ಪ್ರೋತ್ಸಾಹವೂ ಸಹೃದಯ ಸ್ಪಂದನವೂ ದೊರೆಯಲೆಂದು ಹಾರೈಸುತ್ತೇನೆ.

ಶ್ರೀ ನಂದನ ಸಂವತ್ಸರ
ಮಾಘ ಶುಕ್ಲ ಸಪ್ತಮಿ
ರಥಸಪ್ತಮಿ
17-2-2013

**ಡಾ|| ಎಸ್. ಆರ್. ರಾಮಸ್ವಾಮಿ**

# ಪ್ರಸ್ತಾವನೆ

ನಾನು ಸಾಹಿತಿಯೂ ಅಲ್ಲ, ಲೇಖಕನೂ ಅಲ್ಲ. ಹತ್ತಾರು ವಿಧವಾದ ಜೀವನಾನುಭವಗಳನ್ನು ಪಡೆದ ನನಗೆ, ಒಂದು ದಿನ ಶ್ರೀ ಶ್ರೀಕಾಂತರವರು ಸಂಪಾದಿಸಿದ ಪುಸ್ತಕ, ಮಾನ್ಯ ಶ್ರೀ ಡಿ.ವಿ. ಗುಂಡಪ್ಪನವರ ಮಂಕುತಿಮ್ಮನ ಕಗ್ಗ - ತಾತ್ಪರ್ಯ" ಸಿಕ್ಕಾಗ, ಒಂದು ನಿಧಿಯೇ ಸಿಕ್ಕಂತಾಗಿತ್ತು. ಆ ಸಮಯದಲ್ಲಿ "ಅಂತರ್ಜಾಲದ" ಮುಖ ಪುಸ್ತಕ (face book)ದಲ್ಲಿ ಸಕ್ರಿಯನಾಗಿದ್ದರಿಂದ ಅಲ್ಲಿನ 'ಕನ್ನಡ ಬ್ಲಾಗ್'ನಲ್ಲಿ “ಮಾನ್ಯ ಶ್ರೀ ಡಿ.ವಿ. ಗುಂಡಪ್ಪನವರ ಮಂಕುತಿಮ್ಮನ ಕಗ್ಗ, ಕನ್ನಡ ಸಾಹಿತ್ಯ ಲೋಕದ ಮೇರು ಕೃತಿ. ಆದರೆ ಈ ಕೃತಿಗೆ ಸಾಹಿತ್ಯ ಅಕಾಡಮಿ ಪ್ರಶಸ್ತಿಯೋ ಅಥವಾ ಜ್ಞಾನಪೀಠ ಪ್ರಶಸ್ತಿಯೋ ಲಭ್ಯವಾಗಲಿಲ್ಲ. ಅಕಸ್ಮಾತ್ ಇದಕ್ಕೆ ನೋಬಲ್' ಬಹುಮಾನ ಸಿಕ್ಕಿದ್ದಿದ್ದರೆ 'ನೋಬಲ್' ಗೆ ಹಿರಿಮೆಯಾಗುತ್ತಿತ್ತೇ ಹೊರತು ಮಂಕುತಿಮ್ಮನ ಕಗ್ಗಕ್ಕಲ್ಲ, ಏಕೆಂದರೆ ಎಲ್ಲ ಹಿರಿಮೆಗಳೂ ಅಡಕವಾಗಿರುವ ಮಂಕುತಿಮ್ಮನ ಕಗ್ಗವನ್ನು ಯಾರಾದರೂ ಕೊಂಡಾಡಿದರೆ ಅದು ಕೊಂಡಾಡುವವರಿಗೆ ಹಿರಿಮೆಯಷ್ಟೇ! ವಾಚಕರು ಇಷ್ಟಪಟ್ಟಲ್ಲಿ, ಪ್ರತಿನಿತ್ಯ ಒಂದೊಂದು ಮುಕ್ತಕಕ್ಕೆ ವಿವರಣೆಯನ್ನು ಬರೆಯಲು ಉದ್ಯುಕ್ತನಾಗುತ್ತೇನೆ' ಎಂದು, ಒಂದು ಪ್ರಕಟಣೆಯನ್ನು ಇತ್ತೆ, ಮರುಕ್ಷಣವೇ ಬಹಳಷ್ಟು ಜನ ಸಹೃದಯ ಸದಸ್ಯರು ನನ್ನ ಕೋರಿಕೆಯನ್ನು ಮನ್ನಿಸುತ್ತಾ, ಬರೆಯಬಹುದೆಂದು ಅಪ್ಪಣೆ ಕೊಟ್ಟರು. ಅಂದು ಮೊದಲಾದದ್ದು ಇಂದಿಗೂ ನಡೆದುಕೊಂಡು ಬಂದಿದೆ. ಹಾಗೆ ಬರೆದ ಮೊದಲ 200 ಮುಕ್ತಕಗಳ ವಿವರಣೆಯ ಹೊತ್ತಿಗೆಯೇ ನಿಮ್ಮ ಕೈಲಿರುವ "ಕಗ್ಗ ರಸಧಾರೆ"

ಬರೆಯಲೇನೋ ಮೊದಲಾದೆ. ಆದರೆ ಮನಸ್ಸಿನ ಒಂದು ಮೂಲೆಯಲ್ಲಿ ಒಂದು "ಭಯ" ಎಚ್ಚರಿಸುತ್ತಲೇ ಇತ್ತು. ಕಾಳಿದಾಸ 'ರಘುವಂಶ' ಕಾವ್ಯವನ್ನು ಬರೆಯಲುದ್ಯುಕ್ತನಾದಾಗ ಅವನಿಗೆ ಉಂಟಾದ ಶಂಕೆಗಳೇ ನನ್ನ ಮನಸ್ಸಿನಲ್ಲೂ ಸುಳಿದಾಡಿದವು. ಕಾಳಿದಾಸ ಬರೆಯುತ್ತಾನೆ, "ಕ್ವ ಸೂರ್ಯಃ ಪ್ರಭವೋ ವಂಶಃ, ಕ್ವಚಾಲ್ಪ ವಿಷಯಾ ಮತಿ: ತಿತೀರ್ಶುರ್ದುಸ್ತರಂ ಮೋಹಾತ್ ಉಡುಪೇನಾಸ್ಮಿ ಸಾಗರಂ" ಅರ್ಥಾತ್, ಎಲ್ಲಿ ಸೂರ್ಯ ಪ್ರಭೆಯಷ್ಟು ಪ್ರಾಜ್ವಲ್ಯಮಾನವಾದ ರಘುವಂಶ, ಅಲ್ಪ ವಿಷಯಗಳನ್ನರಿತ ನಾನೆಲ್ಲಿ, ಒಂದು ಸಣ್ಣ ಹರಿಗೋಲಿನ ಸಹಾಯದಿಂದ, ದುಸ್ತರವಾದ ಮತ್ತು ವಿಶಾಲವಾದ ಸಾಗರವನ್ನು ದಾಟಲು ಅತ್ಯಾಸೆಪಡುವವನಂತಿದೆ ನನ್ನ ಸ್ಥಿತಿ” ಎಂದು ಹೇಳುತ್ತಾನೆ.

ಜ್ಞಾನದ ಯಾವ ಭಾಗವನ್ನೂ ಆಳವಾಗಿ ಅಭ್ಯಾಸ ಮಾಡದ, ಅಲ್ಪ ಮತಿಯಾದ ನಾನು ಈ "ಕಗ್ಗ"ವೆಂಬ ಮಹಾಸಾಗರದಲ್ಲಿ ಈಜಲು ಮತ್ತು ಈಜಿ ದಾಟಲು ಅತಿ ಆಸೆಯಿಂದ ಹೊರಟಂತೆ ಇತ್ತು ನನ್ನ ಪರಿಸ್ಥಿತಿ. ಮೊದಮೊದಲು ಬಹಳ ಅಳುಕಿನಿಂದಲೇ ಬರೆಯಲು ಶುರುಮಾಡಿದೆ. ಗುಂಡಪ್ಪನವರು ಈ ಮುಕ್ತಕಗಳಲ್ಲಿ ಎರಕ ಹೊಯ್ದಿರುವ

ವಿಚಾರಗಳನ್ನು ಮನದೊಳಕ್ಕೆ ಇಳಿಸುತ್ತಾ ನನ್ನ ವಿಚಾರಗಳೂ ವಿಕಾಸಗೊಳ್ಳತೊಡಗಿದವು. ನಾನೂ ಸಹ ಇದನ್ನೊಂದು ಕಲಿಕೆಯ ಮಾಧ್ಯಮವಾಗಿ ಅನುಭವಿಸುತ್ತಾ ಹೋದೆ.



ಇದಕ್ಕೂ ಮುಂಚೆ ನಾ ಆರನೇ ತರಗತಿಯಲ್ಲಿ ಓದುತ್ತಿದ್ದಾಗ, ಮಾನ್ಯ ಡಿ.ವಿ.ಜಿ.ಯವರ "ವನಸುಮದೊಲೆನ್ನ ಜೀವನವು ವಿಕಸಿಸುವಂತೆ" ಎನ್ನುವ ಪದ್ಯ ನನ್ನನ್ನು ಬಹಳ ಆಕರ್ಷಿಸಿತ್ತು. ಶ್ರಾವ್ಯವಾಗಿ ಹಾಡುವ ಪ್ರಯತ್ನವನ್ನೂ ಸಹ ಮಾಡಿದ್ದೆ. ವೇದಾಂತದ ಸಾರವನ್ನು ಆ ಪದ್ಯದ ಸಾಲುಗಳಲ್ಲಿ ಗುಂಡಪ್ಪನವರು ತುಂಬಿ ಬಿಟ್ಟಿದ್ದಾರೆ ಎಂದು ನನಗೆ ಈಗ ಅನಿಸಿತು. ಈ ಕಗ್ಗದ ಮುಕ್ತಕಗಳನ್ನು ಓದಿದ ನಂತರ, ಆ ನಂಬಿಕೆ ದೃಡವಾಯಿತು. "ವಿಪುಲಾಶ್ರಯವನೀವ ಸುಫಲ ಸುಮಭರಿತ ಪಾದಪದಂತೆ" ಎಂಬಂತೆ ತಮ್ಮ ಜೀವನವನ್ನೂ ಮಾನ್ಯ ಗುಂಡಪ್ಪನವರು ನಡೆಸಿದರೆಂದೂ ನಾ ಬಲ್ಲೆ. ಅಂತಹ ಮಹನೀಯರು ಬರೆದ ಈ ಮುಕ್ತಕಗಳಿಗೆ, ವಿವರಣೆ ನೀಡುವ ಸೌಭಾಗ್ಯವನ್ನೂ ಅವರೇ ನನಗೆ ದಯ ಪಾಲಿಸಿದ್ದೆಂದು ನಾ ತಿಳಿದಿದ್ದೇನೆ.

ಜೀವನದಲ್ಲಿ ಪ್ರತಿಯೊಬ್ಬರ ಮನಗಳಲ್ಲೂ ಸಹಜವಾಗಿ ಉದ್ಭವವಾಗುವ ಸಾವಿರಾರು ಪ್ರಶ್ನೆಗಳಿಗೆ ಉತ್ತರಗಳು ಸಿಗುತ್ತವೆ ನಮಗೆ ಈ ಮುಕ್ತಕಗಳಲ್ಲಿ, ಇವುಗಳ ಪಠಣದಿಂದ ಅಧ್ಯಾತ್ಮಿಕವಾಗಿ ನಮಗಿರುವ ಸಂದೇಹಗಳಿಗೆ ಉತ್ತರವನ್ನು ಕಂಡುಕೊಳ್ಳುವ ಉಪಾಯವನ್ನು ನಮಗೆ ಮಾನ್ಯ ಗುಂಡಪ್ಪನವರು ಸೂಚಿಸಿದ್ದಾರೆ. ತತ್ವಶಾಸ್ತ್ರದ ಶಿಖರದಲ್ಲಿ ನಿಂತು, ಅಧಿಕಾರಯುಕ್ತವಾಗಿ ತತ್ವದ ಮತ್ತು ಸತ್ವದ ಸಮಗ್ರ ದರ್ಶನವನ್ನು ನೀಡುವ "ಮಂಕುತಿಮ್ಮನ ಕಗ್ಗ" ಕನ್ನಡ ಸಾಹಿತ್ಯದ ಮೇರುಕೃತಿ ಎಂಬುವುದರಲ್ಲಿ ಸಂದೇಹವೇ ಇಲ್ಲ. ಇದು ತತ್ವಶಾಸ್ತ್ರವಾಗಿ, ದರ್ಶನವಾಗಿ ಮತ್ತು ಅತ್ಯುತ್ತಮ ಸಾಹಿತ್ಯಿಕ ಕೃತಿಯಾಗಿ ಆರು ದಶಕಗಳಿಗೂ ಮೀರಿ, ಸಾರ್ವಕಾಲಿಕ ಸತ್ಯವನ್ನು ನಿರಂತರವಾಗಿ ಪ್ರತಿಪಾದಿಸುತ್ತದೆ.

ಡಿ.ವಿ.ಜಿ.ಯವರು ಕ್ಲುಪ್ತವಾಗಿ ಮತ್ತು ಚೊಕ್ಕವಾಗಿ ಬರೆದ ನಾಲ್ಕು ಸಾಲುಗಳನ್ನು ಪುಟಗಟ್ಟಲೆ ಬರೆಯುವ ಅವಶ್ಯಕತೆ ಏನು? ಎಂದು ಒಂದು ಸಂದೇಹವೂ ನನ್ನ ಮನದಲ್ಲಿ ಬಂದದ್ದು ಉಂಟು. ಆದರೆ ಕಗ್ಗದ ಮುಕ್ತಕಗಳು ಹಳೆಗನ್ನಡದಲ್ಲಿವೆ. ಇಂದಿನ ಪೀಳಿಗೆಗೆ ಕನ್ನಡವನ್ನು ಓದುವುದೇ ಕಷ್ಟ, ಇನ್ನು ಅವರಿಗೆ ಹಳೆಗನ್ನಡವನ್ನು ಓದುವುದು ಸಾಧ್ಯವಿಲ್ಲ ಅಥವಾ ಕಷ್ಟ ಸಾಧ್ಯ. ಅಷ್ಟೇ ಅಲ್ಲ ಇದು ತತ್ವಶಾಸ್ತ್ರ ಬಹಳ ಕ್ಲಿಷ್ಟವಾದ ವಿಷಯ. ಹಾಗಾಗಿ ಹಳೆಗನ್ನಡದ ಪ್ರಯೋಗವಿರುವ ಮತ್ತು ಉನ್ನತವಾದ ತತ್ವಶಾಸ್ತ್ರವನ್ನು ಪ್ರತಿಪಾದಿಸುವ ಈ ಮುಕ್ತಕಗಳನ್ನು ಓದಿ

ಅರ್ಥಮಾಡಿಕೊಳ್ಳುವುದೆಂದರೆ " ನೀರಿಳಿಯದ ಗಂಟಲಲ್ಲಿ ಕಡುಬು ತುರುಕಿದಂತಾಯ್ತು" ಎಂದು ಮುದ್ದಣನಿಗೆ ಮನೋರಮೆ ಹೇಳಿದಂತಾಯ್ತು. 'ಕಗ್ಗವೆಂದರೆ " ಕಗ್ಗಂಟು' ಎಂದು ಅದನ್ನು ನೋಡಿ " ಅಯ್ಯೋ ಇದು ನಮಗೆ ಅರ್ಥವಾಗುವುದಿಲ್ಲ" ಎನ್ನುವವರನ್ನು ನಾ ನೋಡಿದ್ದೇನೆ. ಆದ್ದರಿಂದಲೇ ಈ ಮುಕ್ತಕಗಳನ್ನು ಸರಳವಾದ ಭಾಷೆಯಲ್ಲಿ ಓದುಗರಿಗೆ ಇವುಗಳ ಸಾರಾಂಶವನ್ನು ತಿಳಿಸಲು ಪ್ರಯತ್ನಪಟ್ಟಿದೇನೆ.

ಡಿ.ವಿ.ಜಿ.ಯವರ "ಮಂಕುತಿಮ್ಮನ ಕಗ್ಗ'ಗಳ ಒಂದೊಂದು ಮುಕ್ತಕವೂ ಮುಕ್ತವಾಗಿ ಒಂದು ತತ್ವವನ್ನು ಪ್ರತಿಪಾದಿಸುತ್ತದೆ. ಒಂದೊಂದು ಮುಕ್ತಕಕ್ಕೂ ಒಂದೊಂದು ಪುಸ್ತಕವನ್ನೇ ಬರೆಯಬಹುದು. ಒಂದೊಂದು ಮುಕ್ತಕವೂ ಜ್ಞಾನಿಗಳ ಕೈಯಲ್ಲಿ ಸಿಕ್ಕಾಗ, ವಜ್ರಕ್ಕೆ ತಿಕ್ಕಿದಷ್ಟೂ ಹೊಳಪು ಹೆಚ್ಚಾಗುವಂತೆ, ಹೊಸ ಹೊಸ ಹೊಳಹುಗಳು, ಆಯಾಮಗಳ ವ್ಯಾಖ್ಯಾನ ಸಿಗುತ್ತದೆ. ಏಕೆಂದರೆ ಈ ಮುಕ್ತಕಗಳು ಪ್ರತಿಪಾದಿಸುವುದು ಸಾರ್ವಕಾಲಿಕ ತತ್ವಾಧಾರಿತ ಸತ್ಯಗಳು. ಆದರೆ ನಾನು ಜ್ಞಾನಿಯಲ್ಲ. ನಾನು ಜ್ಞಾನ ಪಿಪಾಸು. ಈ ಮುಕ್ತಕಗಳು



ನನ್ನ ಪಿಪಾಸೆಯನ್ನು ತಣಿಸುವಲ್ಲಿ ಬಹಳ ಉಪಯುಕ್ತವಾಗಿವೆ. ಪ್ರತಿಯೊಬ್ಬರೂ ಅವರವರದೇ ರೀತಿಯಲ್ಲಿ, ಅವರವರ ವಿದ್ಯೆ ಅನುಭವ, ಕಲಿಕೆ, ಮತ್ತು ಸಂಸ್ಕಾರಗಳ ಆಧಾರದ ಮೇಲೆ ಇದಕ್ಕೆ ತಮ್ಮದೇ ಒಂದು ಭಿನ್ನವಾದ ವ್ಯಾಖ್ಯಾನವನ್ನು ಮಾಡಬಹುದು. ಗುಂಡಪ್ಪನವರ ಈ ಮುಕ್ತಕಗಳು ಪ್ರತಿಯೊಬ್ಬರಿಗೂ ಅಂತಹ ಅವಕಾಶವನ್ನು ಕಲ್ಪಿಸಿದೆ. ಯಾರ ಪಾತ್ರೆ ದೊಡ್ಡದೋ ಅವರ ಗ್ರಹಿಕೆಯೂ ಅಷ್ಟೇ ದೊಡ್ಡದಾಗಿರುತ್ತದಲ್ಲವೇ?

ಹೀಗೆ ನನ್ನ ಜ್ಞಾನ ದಾಹವನ್ನು ತೀರಿಸಿಕೊಳ್ಳಲು ನಾ ಪ್ರಯತ್ನಪಟ್ಟಾಗ, ಫಲಸ್ವರೂಪದಲ್ಲಿ ಹೊರಬಂದದೇ "ಕಗ್ಗ ರಸಧಾರೆ" ಪ್ರತಿಯೊಂದು ಮುಕ್ತಕವನ್ನೂ ಬಿಡಿಸಲು ಕೈಗೆತ್ತಿಕೊಂಡಾಗ ಒಂದು ಹೊಸ ಹೊಳಹು, ಒಂದು ಹೊಸ ವಿಚಾರ ಮತ್ತು ಒಂದು ಹೊಸ ತತ್ವ ಕಣ್ಣ ಮುಂದೆ ನಿಲ್ಲುತ್ತಿತ್ತು. ಪ್ರತಿಯೊಂದು ಮುಕ್ತಕವನ್ನೂ, ನಾ, ನನ್ನ ಪರಿಮಿತ ಮತಿಯ ಪರಿಧಿಯೊಳಗೆ ಬಿಡಿಸಲು ಪ್ರಯತ್ನಪಟ್ಟಿದ್ದೇನೆ. ನಾ ಬರೆದಿರುವ ವಿವರಣೆ, ವ್ಯಾಖ್ಯಾನಗಳ ಪ್ರಸ್ತುತತೆ, ಕೇವಲ ನನ್ನ ಜೀವನಾನುಭವ, ನಾ ಹಲವರಿಂದ ಕಲಿತ ಜೀವನದ ಪಾಠ ಮತ್ತು ನಾನು ಓದಿದ ಪುಸ್ತಕಗಳ ಆಧಾರಿತವಾಗಿವೆ.

"ಕಗ್ಗ ರಸಧಾರೆ" ಕೇವಲ ಭಗವತ್ ಪ್ರೇರಣೆಯಿಂದ ನನ್ನಿಂದ ಬರೆಯಿಸಲ್ಪಟ್ಟಿದೆ. ಹೀಗೆ ನನ್ನನ್ನು ಬರೆಯಲು ಪ್ರೇರೇಪಿಸಿದ ಆ ಪರಮ ಚೇತನಕ್ಕೆ ಮತ್ತು ಆ ಪರಮ ಚೇತನದ ಪ್ರತಿರೂಪಗಳಾಗಿ ನನ್ನನ್ನು ಬರೆಯುವಲ್ಲಿ ಮತ್ತು ಇದನ್ನು ಪುಸ್ತಕ ರೂಪದಲ್ಲಿ ತರಲು ಪ್ರೋತ್ಸಾಹಿಸಿದ ನನ್ನ ಸಹೃದಯ ಮಿತ್ರರಿಗೂ ನನ್ನ ಅನಂತ ನಮನಗಳು.

ನನ್ನ ಈ ಪ್ರಯತ್ನದಲ್ಲಿ ನನಗೆ ದಾರಿದೀಪವಾಗಿ ಮಾನ್ಯ ಶ್ರೀ ಶ್ರೀಕಾಂತ್‌ರವರೂ ಮತ್ತು ಮಾನ್ಯ ಶ್ರೀ ಡಿ. ಆರ್. ವೆಂಕಟರಮಣನ್ ಅವರೂ ತಮ್ಮ ಕೃತಿರೂಪದಲ್ಲಿ ನನಗೆ ಸಹಕಾರಿಯಾಗಿದ್ದಾರೆ. ಅವರಿಗೆ ನನ್ನ ಅನಂತ ಧನ್ಯವಾದಗಳು.

**ಎಷ್ಟು ಚಿಂತಿಸಿದೊಡಂ ಶಂಕೆಯನೆ ಬೆಳೆಸುವೀ |**
**ಸೃಷ್ಟಿಯಲಿ ತತ್ತ್ವವೆಲ್ಲಿಯೋ ಬೆದಕಿ ನರನು ||**
**ಕಷ್ಟಪಡುತಿರಲೆನುವುದೇ ಬ್ರಹ್ಮ ವಿಧಿಯೇನೋ! |**
**ಅಷ್ಟೇ ನಮ್ಮಯ ಪಾಡು?-ಮಂಕುತಿಮ್ಮ ||**

ಎಂದು ಸಾವಿರಾರು ಪ್ರಶ್ನೆಗಳನ್ನು ತಮ್ಮ ಮೊದಲ 40 ಮುಕ್ತಕಗಳಲ್ಲಿ ನಮ್ಮ ಮುಂದೆ ಇರಿಸಿರುವ ಮಾನ್ಯ ಗುಂಡಪ್ಪನವರು, ನಮ್ಮ ಸ್ವತಂತ್ರ ಚಿಂತನೆಗೆ ಸಾಕಷ್ಟು ಅವಕಾಶವನ್ನು ಮಾಡಿಕೊಟ್ಟಿದ್ದಾರೆ. ಪ್ರತೀ ಮುಕ್ತಕದಲ್ಲೂ ಅವರು ಉಲ್ಲೇಖಿಸಿರುವ ಪ್ರಶ್ನೆಗಳು ಜಿಜ್ಞಾಸುವಿಗೆ ಒಂದು ದೀರ್ಘ ತಪಸ್ಸನ್ನು ಮಾಡುವಷ್ಟು ಹರಹನ್ನು ನೀಡುತ್ತದೆ. ಈ "ಮಂಕುತಿಮ್ಮನ ಕಗ್ಗ" ಒಂದು ಜೀವನ ದರ್ಶನ.

ಜಿಜ್ಞಾಸೆ ಹೆಚ್ಚಾಗಿ ಜ್ಞಾನ ಮನದಲ್ಲಿ ತುಂಬಿದಾಗ, ಲೋಕ ಕಲ್ಯಾಣಕ್ಕಾಗಿ ಅದನ್ನು ಹೊರಹಾಕುವುದು "ಋಷಿ ಸಂಸ್ಕೃತಿ". ಗುಂಡಪ್ಪನವರೇ ಒಂದು ಕಡೆ "ಯಾವ ತಿಳುವಳಿಕೆ ನಮ್ಮ ಜನಕ್ಕೆ ಇದ್ದರೆ ಸೂಕ್ತ ಎಂದು ನನಗೆ ಅನ್ನಿಸಿತೋ, ಅಂತಹ ತಿಳುವಳಿಕೆಯನ್ನು ನಾನು ಮೊದಲು ಸಂಪಾದಿಸಿಕೊಂಡು ಇತರರಿಗೆ



ತಿಳಿಯಪಡಿಸಬೇಕೆಂದೂ, ಜೀವನದ ಯಾವ ಸೊಬಗನ್ನು ನಾನು ಅನುಭವಿಸಿದಾಗ, ಅದನ್ನು ಇತರರೂ ಅನುಭವಿಸಿಯಾರೆಂದು ನನಗನ್ನಿಸಿತೋ ಅಂತಹ ಸೊಗಸನ್ನು ತೋರಿಸುವುದು ನನ್ನ ಎಲ್ಲ ಬರವಣಿಗೆಯಲ್ಲೂ, ಮಾತಿನಲ್ಲೂ ಇರುವ ತಾತ್ಪರ್ಯ" ಎಂದು ಹೇಳುತ್ತಾರೆ. ಪುರಾತನ ಋಷಿ ಮುನಿಗಳು ಈ ಜಗತ್ತಿಗೆ ಯಾವ ಉದ್ದೇಶದಿಂದ ವೇದೋಪನಿಷತ್ತುಗಳನ್ನು ನೀಡಿದರೋ ಅಂತಹ ಉದಾತ್ತ ಉದ್ದೇಶವು ನಮ್ಮ ಗುಂಡಪ್ಪನವರದಾಗಿತ್ತು. ಆ ದೃಷ್ಟಿಯಲ್ಲಿ ನೋಡಿದಾಗ, ನಮ್ಮ ಗುಂಡಪ್ಪನವರು "ಋಷಿ" ತುಲ್ಯರು. ಅವರಿಗೆ ಸಾಷ್ಟಾಂಗ ನಮನಗಳು.

ಮಾನ್ಯ ಗುಂಡಪ್ಪನವರ ಒಡನಾಟದ ಭಾಗ್ಯವನ್ನು ಪಡೆದ ಗೋಖಲೆ ಸಂಸ್ಥೆಯ ಮುಖ್ಯಸ್ಥರಾದ ಮಾನ್ಯ ಡಾ. ಎಸ್.ಆರ್. ರಾಮಸ್ವಾಮಿಗಳ ಸಹೃದಯದ 'ಮುನ್ನುಡಿಗೆ ನಾ ಆಭಾರಿಯಾಗಿದ್ದೇನೆ.

ಈ ಪುಸ್ತಕದ ಮುಖಪುಟಕ್ಕೆ, ತಾವು ಬರೆದ ಡಿ.ವಿ.ಜಿ.ಯವರ ಚುಕ್ಕಿ ಚಿತ್ರವನ್ನು ಉಪಯೋಗಿಸಲು ಅನುಮತಿ ನೀಡಿದ ಮಾನ್ಯ ಶ್ರೀ ಮೋಹನ್ ವರ್ಣೇಕರ್‌ರವರಿಗೆ ನನ್ನ ಹೃತ್ಪೂರ್ವಕ ಧನ್ಯವಾದಗಳು.

ಈ ಪುಸ್ತಕದ ಪ್ರಕಟಣೆಗೆ ಕೃಪೆಮಾಡಿ ಅನುಮತಿಸಿದ 'ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ'ಗೆ ನಾನು ಆಭಾರಿಯಾಗಿದ್ದೇನೆ.

ಈ ಪುಸ್ತಕದಲ್ಲಿ ಬರೆದ ಹಲವಾರು ವಿಚಾರಗಳನ್ನು ವಿಮರ್ಶೆಗೆ ಒಳಪಡಿಸಿ, ನನ್ನನ್ನು ತಿದ್ದಿ ತಮ್ಮ ಅನುಭವವನ್ನು ನನಗೆ ಎರಕ ಹೊಯ್ದು "ಕಗ್ಗದ ಭಟ್ಟರು" ಎಂದೇ ಪ್ರಸಿದ್ಧರಾದ ಮಾನ್ಯ ಶ್ರೀ ಹೆಚ್. ಎಸ್. ಲಕ್ಷ್ಮೀನಾರಾಯಣ ಭಟ್ಟರಿಗೂ ನನ್ನ ತುಂಬು ಹೃದಯದ ಕೃತಜ್ಞತೆಗಳು. ಈ ಪುಸ್ತಕದ ಪ್ರಕಟಣೆಗೆ ಅನುಕೂಲವಾದ ಅಮೂಲ್ಯ ಸಲಹೆಯನ್ನಿತ್ತ ನವಕರ್ನಾಟಕ ಪಬ್ಲಿಕೇಷನ್‌ನ ಶ್ರೀ ಉಡುಪರಿಗೂ ನಾನು ಕೃತಜ್ಞನಾಗಿದ್ದೇನೆ.

ವಿಚಾರಗಳ ಸಂಕೀರ್ಣತೆ ಮತ್ತು ಕ್ಲಿಷ್ಟತೆಗಳು ಇದಿರಾದಾಗ, ನನ್ನ ಸಹಾಯಕ್ಕೆ ಬಂದವರು ಮತ್ತು ಕಗ್ಗಗಳನ್ನು ದೀರ್ಘಕಾಲದ ಅಭ್ಯಾಸದಿಂದ ಅರಿತವರೂ ಆದ ನನ್ನ ಸ್ನೇಹಿತರು ಮಾನ್ಯ ಶ್ರೀಪಾದರಾವ್ ಮಂಜುನಾಥ್‌ರವರು, ಶ್ರೀ ರಮೇಶ್ ಜೋಯಿಸ್‌ರವರು, ಶ್ರೀ ಸದ್ಯೋಜ್ಜಾತ ಭಟ್ಟರು, ನನ್ನ "ಗುರು" ಸಮಾನರಾದ ಮೈಸೂರಿನ, ನಿವೃತ್ತ ಸಂಸ್ಕೃತ ಮಹೋಪಾಧ್ಯಾಯಿನಿ, ಶ್ರೀಮತಿ ಡಾ|| ಕೆ.ಎಲ್ ಪ್ರಸನ್ನಾಕ್ಷಿಯವರು. ಇವರೆಲ್ಲರಿಗೂ ನಾ ಚಿರಋಣಿ. ನನ್ನ ಈ ಪ್ರಯತ್ನದಲ್ಲಿ ನನಗೆ ಬೆನ್ನುಲುಬಾಗಿ ನಿಂತಿರುವ ನನ್ನ ಮಿತ್ರರಾದ ಎಮ್.ಎಸ್. ಪ್ರಸಾದ್, ಪುಷ್ಪರಾಜ ಚೌಟ, ಬದರೀನಾಥ ಪಲವಳ್ಳಿ, ಜಿ. ರವಿಕುಮಾರ್ ಮುಂತಾದವರೆಲ್ಲರಿಗೂ ನನ್ನ ಕೃತಜ್ಞತಾಪೂರ್ವಕ ನಮಸ್ಕಾರಗಳು.

ಈ ಪುಸ್ತಕಕ್ಕೆ 'ಕಗ್ಗ ರಸಧಾರೆ" ಎಂಬ ಹೆಸರನ್ನು ನೀಡಿದ ಶ್ರೀ ಪುಷ್ಪರಾಜ ಚೌಟ ಮತ್ತು ಸದಾ ನನಗೆ ಸೂಕ್ತ ಸಲಹೆಗಳನ್ನು ನೀಡುತ್ತಾ ಈ ಪುಸ್ತಕದ ಮುಖ ಪುಟದ ವಿನ್ಯಾಸವನ್ನು ನನಗೆ ಕೊಟ್ಟ ನನ್ನ ಮಿತ್ರ ಶ್ರೀ ವಸಂತ್ ಕುಮಾರ್ ಅವರಿಗೂ ನನ್ನ ಅನಂತ ನಮನಗಳು.

ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿಕೊಟ್ಟ ಮಿತ್ರ ಚಾಮರಾಜಪೇಟೆಯ ಸನ್ ಪ್ರಿಂಟ್ಸ್‌ನ ಮಾಲೀಕರಾದ ಶ್ರೀ ಕೇಶವಮೂರ್ತಿಯವರಿಗೂ ನನ್ನ ನಮನಗಳು.

ನನ್ನ ಈ ಕಿರು ಪ್ರಯತ್ನವು ಓದುಗರಿಗೆ ಹಿಡಿಸಿದರೆ ನಾ ಧನ್ಯ. ಓದುಗರ ಪ್ರೋತ್ಸಾಹವೇ ನನ್ನ ಈ ಪ್ರಯತ್ನಕ್ಕೆ ಸಿಗುವ ಪಾರಿತೋಷಕ.

ಬೆಂಗಳೂರು

17-3-2013 **ರವಿ ತಿರುಮಲೈ**



**ಅನಿಸಿಕೆ**

# ಬೆಳ್ಳಾಲ ಗೋಪಿನಾಥ ರಾವ್

ಮಾನ್ಯ ಡಿ.ವಿ. ಗುಂಡಪ್ಪನವರು ತಮ್ಮ ಜೀವನದಲ್ಲಿ ಆದ ಅನುಭವಗಳನ್ನು ಈ ಮಂಕುತಿಮ್ಮನ ಕಗ್ಗದಲ್ಲಿ ತುಂಬಿದ್ದಾರೆ. ಅವರ ಈ ಕೃತಿಯು ಕನ್ನಡದ ಭಗವದ್ಗೀತೆ' ಎಂದು ಪ್ರಸಿದ್ಧವಾಗಿದೆ. ಕುಗ್ಗಿದ ಮನಸ್ಸಿಗೆ ಸಾಂತ್ವನ ನೀಡುವಂತಹ ಮಹನ್ನೋತ ಕೃತಿ 'ಮಂಕುತಿಮ್ಮಕಗ್ಗ' ಅಪಾರ ಜನಮನ್ನಣೆ ಗಳಿಸಿತು. ಅದೇ ಕಗ್ಗವನ್ನು ಮತ್ತಷ್ಟು ಮನ ತಿಳಿಯಾಗಿಸಲು ನಮ್ಮ ಮುಂದೆ ಇಡುತ್ತಿದ್ದಾರೆ ನಮ್ಮ ನಿಮ್ಮೆಲ್ಲರ ನೆಚ್ಚಿನ ತಿರುಮಲ ರವಿಯವರು. ರವಿಯವರು ನನಗೆ ಕನ್ನಡ ಬ್ಲಾಗ್‌ನಿಂದ ಚಿರಪರಿಚಿತರು, ನಾವಿಬ್ಬರೂ ಅದೆಷ್ಟೋ ವಿಷಯಗಳನ್ನು ವಿನಿಮಯ ಮಾಡಿಕೊಳ್ಳುತ್ತಿರುತ್ತೇವೆ. ಅದರಲ್ಲೂ ಈ ಕಗ್ಗ ರಸಧಾರೆ ನನ್ನ ಮನಸ್ಸೆಳೆದದ್ದು ಅದರಲ್ಲಿನ ವಿಷಯವನ್ನು ಅವರು ನಮಗೆ ವಿವರಿಸುವ ಆಳದಿಂದಾಗಿ,

ನನ್ನ ಮನವನ್ನು ಆಕರ್ಷಿಸಿದ ಒಂದು ಕಗ್ಗವನ್ನು ನೋಡಿ:

**ಸಾರಸುಖರಸನಿಧಿ ಪರಬ್ರಹ್ಮನಿರುತಿರಲ್ ।**

**ಸ್ವಾರಸ್ಯಹೀನವೆನ್ನುವರೆ ಜೀವಿತವ ।**

**ಪೌರುಷ ಪ್ರೇಮ ಸೌಂದರ್ಯಗಳುಮಂತೆಯೇ ।**

**ಸ್ವಾರಸ್ಯವೋ ರಹಸ್ಯ- ಮಂಕುತಿಮ್ಮ.**

ತಾನು ಹಲವಾಗಿ ಪ್ರಕಟಗೊಳ್ಳಬೇಕು ಎಂದು ಸ್ವ-ಇಚ್ಛೆಯಿಂದ ಈ ಜಗತ್ತನ್ನು ಸೃಷ್ಟಿಸಿ ಇಲ್ಲಿನ ಎಲ್ಲ ಆನಂದ, ಸುಖ ಮತ್ತು ಸಾರಕ್ಕೆ ತಾನೇ ನಿಧಿಯಂತೆ ಪರಬ್ರಹ್ಮನು ಕಾರಣನಾಗಿರುವಾಗ ಈ ಜೀವನವನ್ನು ಸ್ವಾರಸ್ಯರಹಿತ ಎಂದು ಹೇಳಲಾಗುವುದೇ? ಇಲ್ಲಿನ ಶಕ್ತಿ, ಪ್ರೇಮ, ಪ್ರೀತಿ, ಸೌಂದರ್ಯ ಇತ್ಯಾದಿ ರೂಪಗಳೂ ಅವನೇ ಆಗಿರುವುದರಿಂದಲೇ ಈ ಜಗತ್ತು ಇಷ್ಟು ಸುಂದರವಾಗಿರುವುದು ಎಂದು ನಾವು ಅರಿತುಕೊಳ್ಳಬೇಕು. ಆ ಪರಬ್ರಹ್ಮ ತನ್ನ ಆನಂದಕ್ಕೆ ಈ ಜಗತ್ತನ್ನು ಸೃಜಿಸಿ ತಾನೇ ಎಲ್ಲ ರೂಪವೂ ಆಗಿ ಮತ್ತು ಎಲ್ಲ ರೂಪಗಳಲ್ಲಿಯೂ ಚೇತನನಾಗಿ ಅವನೇ ಇದ್ದುಕೊಂಡು ಸಂತಸಪಡುತ್ತಿದ್ದಾನೆ, ಎನ್ನುವುದು ನಮ್ಮ ನಂಬಿಕೆ. ಹಾಗಾಗಿ ನಮಗೆ ಎಲ್ಲವೂ ದೈವ ಸಮಾನ.

**ಈ ವಿಶ್ವರೂಪ ಸಂದರ್ಶನದಿ ಹೊಂದಿಹವು ।**

**ಜೀವ ರ್ಜೀವಗಳು, ಕ್ರಮ ಯದೃಚ್ಛೆಗಳು**

**ಅವಶ್ಯ ವಶ್ಯ; ಸ್ವಾಚ್ಛಂದ್ಯ ನಿರ್ಬಂಧಗಳು ।**

**ಕೈವಲ್ಯ ದೃಷ್ಟಿಯದು-ಮಂಕುತಿಮ್ಮ.**

ಈ ವಿಶ್ವದ ರೂಪದಲ್ಲಿ ಜೀವವಿರುವುದು ಮತ್ತು ಜೀವವಿಲ್ಲದವು, ಕ್ರಮಬದ್ಧವಾಗಿರುವುದು, ಕ್ರಮಕ್ಕೊಳಪಡದೆ ಸ್ವತಂತ್ರವಾಗಿರುವುದು, ನಮ್ಮ ವಶದಲ್ಲಿರುವುದು, ನಮ್ಮ ವರದಲ್ಲಿ ಇರದೇ ಇರುವುದು, ಸ್ವಚ್ಛಂದವಾಗಿ ನಡೆಯುವುದು, ನಿರ್ಬಂಧಕ್ಕೊಳಪಟ್ಟವು ಎಲ್ಲವೂ ಇವೆ. ಇವುಗಳನ್ನು ಹೇಗೆ ಇವೆಯೋ ಹಾಗೆಯೇ ನೋಡಿದರೆ ಅದು ನಿರ್ಮಲ ಅಥವಾ ಸ್ವಚ್ಛ ದೃಷ್ಟಿ ಎಂದು ಹೇಳುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

## ಅನಿಸಿಕೆಗಳು

**ಹಾಸ್ಯಗಾರನೊ ಬೊಮ್ಮ; ವಿಕಟ ಪರಿಹಾಸವದು |**

**ಆಸ್ಯ ಗಂಭೀರ; ಬೆರಲಿಂದ ಚಕಳಗುಳಿ ||**

**ವಿಶ್ವಾಸದುಪಚಾರ; ಹುಣಿಸೆಮೆಣಸಾಹಾರ |**

**ವಿಶ್ವಪಾಲನೆಯಿಂತು-ಮಂಕುತಿಮ್ಮ.**

ನಮ್ಮನ್ನು ಸೃಷ್ಟಿಸಿದ ಆ ಬ್ರಹ್ಮ ವಿಕಟತೆಯಿಂದ ಕೂಡಿದ ಹಾಸ್ಯಗಾರನೋ? ಅವನ ಮುಖ ಮಾತ್ರ ಗಂಭೀರವಾಗಿದ್ದರೂ, ಬೆರಳಿಂದ ಕಚಗುಳಿ ಇಡುತ್ತಾ ನಮ್ಮನ್ನು ನಗಿಸಲು ಪ್ರಯತ್ನಿಸುವ ಅಥವಾ ಬಹಳ ವಿಶ್ವಾಸದಿಂದ ನಮಗೆ ಉಪಚಾರ ಮಾಡುತ್ತಾ ಭೋಜನವ ಬಡಿಸಿ ಊಟದಲ್ಲಿ ಹುಣಸೆಯ ಹುಳಿಯನ್ನೂ, ಮೆಣಸಿನ ಖಾರವನ್ನೂ ಇಟ್ಟಂತೆ, ನಮಗೆ ಜೀವನದಲ್ಲಿ ಗುಣ-ಅವಗುಣ, ಸಂತೋಷ-ದುಃಖ, ಹೀಗೆ ಒಂದಕ್ಕೊಂದು ವಿರೋಧವಾದದ್ದನ್ನು ಇಟ್ಟು ನಮ್ಮ ಪರಿಸ್ಥಿತಿ ನೋಡಿ ತಾನು ಆನಂದವನ್ನು ಅನುಭವಿಸುತ್ತಿದ್ದಾನೋ ಆ ಬ್ರಹ್ಮ ಎಂದು ಪ್ರಸ್ತಾಪ ಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಕಗ್ಗದಲ್ಲಿ.

ಕನ್ನಡ ಬ್ಲಾಗ್‌ನಲ್ಲಿ ದಿನಾ ಒಂದೊಂದನ್ನೇ ಸವಿಯುತ್ತಿದ್ದ ನಮಗೆ ಈ ಕಗ್ಗ ರಸಧಾರೆಯ ಪುಸ್ತಕಾವೃತ್ತಿ ದಿನವೂ ಬಯಸಿದಾಗಲೆಲ್ಲಾ ಸಿಗುವ ಸಂಜೀವಿನಿಯಂತಾಗುತ್ತದೆ. ಶ್ರೀಯುತ ತಿರುಮಲ ರವಿಯವರು ನೂರ್ಕಾಲ ಬಾಳಲಿ ಅವರ ಈ ರಸ ಸವಿಯೂಟ ನಮಗೆ ಸದಾ ಸವಿಯುವಂತಾಗಲಿ.

**ಬೆಳ್ಳಾಲ ಗೋಪಿನಾಥ ರಾವ್**

# ಅನಿಸಿಕೆಗಳು

**ಜಿ.ವಿ. ಜಯಶ್ರೀ**, ಪತ್ರಕರ್ತೆ

ಭಾವಾನುವಾದದ ಸವಿ ಸವಿಯಲು ಪ್ರತಿದಿನ ಕಾಯುತ್ತಿದ್ದೆವು...

ಡಿ.ವಿ. ಗುಂಡಪ್ಪನವರ 'ಮಂಕುತಿಮ್ಮನ ಕಗ್ಗ' ಕನ್ನಡಿಗರ ಭಗವದ್ಗೀತೆ. ಅದರಲ್ಲಿ ಇರುವ ಒಂದೊಂದು ಕಗ್ಗಗಳು ಜೇನಿನಂತೆ ಸಿಹಿ, ಮಲ್ಲಿಗೆಯಂತೆ ಮಾಧುರ್ಯ. ಅಂತಹ ಕಗ್ಗವನ್ನು ಸರಳೀಕರಿಸಿ ಬರೆದ ಸಾಹಸಿಗಳು ಅನೇಕರಿದ್ದಾರೆ. ಹಾಗೆ ಪ್ರಯತ್ನಿಸಿದ ಯಾರನ್ನೂ ನಿರಾಶೆಗೊಳಿಸಿಲ್ಲ ಕಗ್ಗ, ನವನವೀನ ಭಾವಲಹರಿಯ ಮೂಲಕ ಹೊಸದೊಂದು ಪ್ರಪಂಚವನ್ನು ಸೃಷ್ಟಿ ಮಾಡಿ ಸಾಹಿತ್ಯಾಸಕ್ತರ ಮನವನ್ನು ತಣಿಸುವಲ್ಲಿ ಸಫಲವಾಗಿದೆ. ರವಿ ತಿರುಮಲೈ ಕಗ್ಗದ ಭಾವ ಸುಲಭ ರೀತಿಯಲ್ಲಿ ಅದರಲ್ಲೂ ಎಲ್ಲ ಮನಸ್ಥಿತಿ, ವಯೋಮಿತಿಯವರಿಗೆ ಅರ್ಥವಾಗುವಂತೆ ಬರೆದು ಫೇಸ್ ಬುಕ್ ಗೋಡೆಯ ಮೇಲೆ ಪ್ರಕಟಮಾಡುತ್ತಿದ್ದರು. ಆ ಭಾವಾನುವಾದದ ಸವಿ ಸವಿಯಲು ಪ್ರತಿದಿನ ಕಾಯುತ್ತಿದ್ದದ್ದು ಸುಳ್ಳಲ್ಲ. ಇದಕ್ಕಾಗಿ ರವಿ ಅವರು ಮಾಡಿರುವ ಸಾಧನೆ, ಕೆಲಸ, ಶ್ರಮ ಮರೆಯಲಾಗದ್ದು.

ಒಮ್ಮೆ ರವಿ ಮಾಮ ನನ್ನ ಈ ಪ್ರಯತ್ನಕ್ಕೊಂದು ಅಭಿಪ್ರಾಯ ನೀಡಬೇಕು ಎನ್ನುವ ಅಭಿಲಾಷೆ ಮುಂದಿಟ್ಟಾಗ ರೋಮಾಂಚನ, ಅದಕ್ಕಿಂತಲೂ ಹೆಚ್ಚಾಗಿ ವಿಶೇಷ ಅನುಭೂತಿಗೆ ಒಳಗಾದೆ. ಮಂಕುತಿಮ್ಮನ ಕಗ್ಗವನ್ನು ಕೈಲಿ ಹಿಡಿಯಲು ಸಹ ಯೋಗ್ಯತೆ ಇಲ್ಲದಂತಹ ಪಾಮರಳು ನಾನು, ಹಾಗಿರುವಾಗ ಒಂದು ಅಭಿಪ್ರಾಯ ಬರೆಯುವುದು ಅಂದ್ರೆ?

ಮಂಕುತಿಮ್ಮನ ಕಗ್ಗ ಮೊಗೆದಷ್ಟು ಮುಗಿಯದ ಸಿಹಿ ನೀರಿನ ಸರೋವರ. ಆಸ್ತಿಕ ಮನಗಳಿಗೆ ಹತ್ತಿರ ಆಗುವಂತಹ ಅನೇಕ ಸಾಲುಗಳು ಓದುಗರನ್ನು ಹಿಡಿದಿಡುತ್ತದೆ. ಮುಖ್ಯವಾಗಿ ಸಾವು-ಅದರಾಚೆಯ ಸಂಗತಿಗಳ ಬಗೆಗಿನ ನಮ್ಮ ಕುತೂಹಲ ಎಲ್ಲದರ ಬಗ್ಗೆ ಹೇಳುವ ಈ ನಾಲ್ಕು ಸಾಲುಗಳು ಬದುಕಿನ ಎಲ್ಲ ರಹಸ್ಯಗಳನ್ನು ಬಿಚ್ಚಿ ಹರಡುತ್ತದೆ. ಅದನ್ನು ಮತ್ತಷ್ಟು ಸುಲಭವಾಗಿ ರವಿ ಅವರು ಹೇಳಿರುವುದನ್ನು ಕೆಳಗೆ ನೀಡಿದ್ದೇನೆ.

**ಏನು ಜೀವನದರ್ಥ? ಏನು ಪ್ರಪಂಚಾರ್ಥ ? |**

**ಏನು ಜೀವಪ್ರಪಂಚಗಳ ಸಂಬಂಧ? ||**

**ಕಾಣದಿಲ್ಲಿರ್ಪುದೇನಾನುಮುಂಟೆ ? ಅದೇನು? |**

**ಜ್ಞಾನಪ್ರಮಾಣವೇಂ?-ಮಂಕುತಿಮ್ಮ||**

ವಿಚಾರಮಾಡುವ ಶಕ್ತಿ ಇರುವವರೂ ಸಹ ಈ ರೀತಿಯ ಪ್ರಶ್ನೆಗಳನ್ನು ತಮಲ್ಲೇ ತಾವು ಅನೇಕ ಬಾರಿ ಕೇಳಿಕೊಳ್ಳುತ್ತಾರೆ. ಅಲ್ಲವೇ? ನಾವು ಹುಟ್ಟುತ್ತೇವೆ, ಬೆಳೆಯುತ್ತೇವೆ, ಬದುಕುತ್ತೇವೆ ಮತ್ತು ಒಂದು ದಿನ ಸಾವಿನ ತೆಕ್ಕೆಗೆ ಬೀಳುತ್ತೇವೆ. ಈ ಎಲ್ಲಕ್ಕೂ ಏನಾದರೂ ಅರ್ಥವಿದೆಯೇ? ನಾವು ಇಲ್ಲಿರುವಾಗ ನಮ್ಮ ಜೀವನದಲ್ಲಿ ಜ್ಞಾನದ ಜೊತೆಯಲ್ಲಿ ಪ್ರೀತಿ, ಪ್ರೇಮ, ಕೋಪ, ದ್ವೇಷ, ಅಸೂಯೆ, ಅನುರಾಗ ಮುಂತಾದ ಹಲವಾರು ಭಾವನೆಗಳನ್ನು ಬೆಳೆಸಿಕೊಳ್ಳುತ್ತೇವೆ.



## ಅನಿಸಿಕೆಗಳು

ಅದೇ ರೀತಿ ಬದುಕಿಗೆ ಯಾರು ನಾಯಕರು ಎಂದು ಪ್ರಶ್ನಿಸಿಕೊಳ್ಳುವ ಹುಲುಮಾನವನ ಮನಸ್ಥಿತಿಯನ್ನು

**ಬದುಕಿಗಾರ್ ನಾಯಕರು, ಏಕನೊ ಅನೇಕರೋ?**

**ವಿಧಿಯೋ ಪೌರುಷವೋ ಧರುಮವೋ ಅಂಧಬಲವೋ?**

**ಕುದುರುವುದೆಂತು ಈಯವ್ಯವಸ್ಥೆಯ ಪಾಡು?**

**ಅದಿಗುದಿಯೆ ಗತಿಯೇನೋ?-ಮಂಕುತಿಮ್ಮ**

ನಮ್ಮಲ್ಲಿ ಉಂಟಾಗುವ ಸಂದೇಹಗಳ, ಜಿಜ್ಞಾಸೆಯನ್ನು ಈ ಸಾಲುಗಳು, ಅದರೊಂದಿಗೆ ಲೇಖಕರ ಅರ್ಥ ಆಗುವಂತಹ ವಿಚಾರಧಾರೆ ಎಲ್ಲವೂ ಓದುಗರನ್ನು ಹಿಡಿದಿಡುವಂತೆ ಮಾಡುವಲ್ಲಿ ಕಾವ್ಯಧಾರೆ ಯಶಸ್ವಿಯಾಗಿದೆ. ಒಂದಕ್ಕಿಂತ ಒಂದು ಗಂಧಕ್ಕಿಂತ ಪರಿಮಳ ಎನ್ನುವ ಮಾತಿದೆ. ಅಂತಹ ವಿಶೇಷವಾದ ಖುಷಿಯನ್ನು ಉಣಬಡಿಸುವಲ್ಲಿ ರವಿ ಅವರ 'ರಸಧಾರೆ' ಯಶಸ್ವಿ ಆಗಿದೆ. ಕೇವಲ ದೇವರ ಸಂಗತಿಗಳು ಮಾತ್ರವಲ್ಲ ಖಗೋಳ, ಭೂಗೋಳ, ವಿಜ್ಞಾನ, ಜೀವನಾಮೃತ ಎಲ್ಲದರ ಸಮಾಗಮವಾಗಿರುವ ಮಂಕುತಿಮ್ಮನ ಕಗ್ಗ ಈಗಿನ ಓದುಗರಿಗೆ ಕಲ್ಲು ಸಕ್ಕರೆ ಆಗದೆ ತಕ್ಷಣ

ಕರಗುವ ಸಿಹಿ ಬೆಲ್ಲವಾಗಿದೆ. ಕೇವಲ ಕೆಲವು ಸಂಖ್ಯೆಯ ಓದುಗರು ಮಾತ್ರವಲ್ಲ ಸಮಸ್ತ ಕನ್ನಡಿಗರಿಗೆ ತಲುಪಬೇಕಾದ ಪ್ರಯತ್ನ ಇದು. ಆ ನಿಟ್ಟಿನಲ್ಲಿ ಲೇಖಕರ ಶ್ರಮ ಅನನ್ಯ.

ನಾನು ಅದರ ಬಗ್ಗೆ ಹೆಚ್ಚು ಹೇಳಲು ಇಷ್ಟಪಡಲ್ಲ ಏಕೆಂದರೆ ಅದರ ಸವಿಯನ್ನು ನೀವು ಖುದ್ದು ಅನುಭವಿಸಿರಿ. ಆನಂದ ಪಡೆಯಿರಿ. ಒಟ್ಟಾರೆ ಹೇಳುವುದಾದರೆ ಆಸ್ತಿಕ ಮನಸ್ಸುಗಳಿಗೆ ಮಾತ್ರವಲ್ಲದೆ ಎಲ್ಲ ರೀತಿಯ ವ್ಯಕ್ತಿತ್ವಗಳಲ್ಲಿ ಚಿಂತನ-ಮಂಥನ ಉಂಟುಮಾಡುವ ಶಕ್ತಿ ಕಗ್ಗಕ್ಕಿದೆ. ಇದರ 'ರಸಧಾರೆ'ಯನ್ನು ಸಾಹಿತ್ಯಪ್ರೇಮಿಗಳಿಗೆ ಉಣಬಡಿಸ ಹೊರಟಿರುವ ರವಿ ಅವರ ಪ್ರಯತ್ನಕ್ಕೆ ನಮೋನ್ನಮಃ.

**ಜಿ.ವಿ. ಜಯಶ್ರೀ**

ಪತ್ರಕರ್ತೆ



## ಅನಿಸಿಕೆಗಳು

### ರಮೇಶ ಜೋಯಿಸ್

ಆತ್ಮೀಯ ರವಿ ತಿರುಮಲೆ,

ತಮ್ಮ ಪರಿಚಯ ನನಗಾದದ್ದು ಇದೇ ಸಾಮಾಜಿಕ ತಾಣದಲ್ಲಿ, ವಿವಿಧ ವಿಚಾರಗಳನ್ನು ಬಿಂಬಿಸುವ ತಮ್ಮ ಬರಹಗಳು ನನ್ನಲ್ಲಿ ಆಸಕ್ತಿಯನ್ನು ಕೆರಳಿಸಿ, ತಮ್ಮ ಪರಿಚಯವಾಗಲು ಮೂಲ ಕಾರಣವಾಗಿದ್ದು ಸರಿಯಷ್ಟೇ. ಅಂದಿನಿಂದಲೂ, ಸತತವಾಗಿ ತಮ್ಮ ಬರಹಗಳನ್ನು ಗಮನಿಸುತ್ತಿದ್ದೇನೆ. ಕವನವಿರಬಹುದು, ಬೇರೊಬ್ಬರ ಮಾತಿಗೆ ಪ್ರತಿಕ್ರಿಯೆ ಇರಬಹುದು ಅಥವಾ ತಮ್ಮದೇ ಆದ ಚೆನ್ನುಡಿಯೂ ಇರಬಹುದು, ವಿಶೇಷವಾಗಿ ಕನ್ನಡದ ಭಗವದ್ಗೀತೆಯೇ ಆಗಿರುವ 'ಮಂಕುತಿಮ್ಮನ ಕಗ್ಗ'ದ ರಸಧಾರೆಯೂ ಇರಬಹುದು. ಪರಿಸರದಲ್ಲಿ ದೊರೆಯುವ, ಕಣ್ಣಿಗೆ ಕಾಣುವ, ಅನುಭವಿಸುವ, ಕೇಳುವ ಯಾವುದೇ ವಸ್ತು, ವಿಚಾರವಾಗಿದ್ದರೂ ಅದನ್ನು ತಮ್ಮ ಜೀವನಾನುಭವದ ಮೂಸೆಯಲ್ಲಿ

ಕರಗಿಸಿ, ರಸಗಟ್ಟಿ ಹೊಯ್ದುಕೊಟ್ಟ ಮಹಾತ್ಮ ಶ್ರೀ ಡಿ.ವಿ.ಜಿ.ಯವರು. “ಯದಿಹಾಸ್ತಿ ತದನ್ಯತ್ರ ಯನ್ನೇಹಾಸ್ತಿ ನ ತತ್ ಕ್ವಚಿತ್” ಎಂಬ ಮಾತು ಮಹಾಭಾರತಕ್ಕೆ ಹೇಗೋ ಹಾಗೇ “ಕಗ್ಗ”ಕ್ಕೂ ಸಲ್ಲುತ್ತದೆ ಎಂದರೆ ಅತಿಶಯೋಕ್ತಿಯಾಗಲಾರದು.

ತಮ್ಮ ಬರಹಗಳಲ್ಲಿ ವಿಶೇಷವಾಗಿ “ಕಗ್ಗ ರಸಧಾರೆ” ಎಲ್ಲರ ಮನಸೆಳೆದು ನಿಲ್ಲಿಸಿದೆ ಎಂದರೆ ಸರಿಯಾದ ಮಾತೇ ಸರಿ. ಡಿವಿಜಿಯವರು ಸಂಕ್ಷಿಪ್ತವಾಗಿ ಹೇಳಿದ್ದನ್ನು ಇಂದಿನ ಕಾಲಮಾನಕ್ಕೆ, ಜನಮಾನಸಕ್ಕೆ ಮುಟ್ಟಿಸುವಲ್ಲಿ ತಮ್ಮ ಅವಿರತ ಪ್ರಯತ್ನ ಶ್ಲಾಘನೀಯ. ಹಾಗೆ ಮಾಡುವಲ್ಲಿ ತಾವು ಅಂದಂದಿನ ಉದಾಹರಣೆಗಳನ್ನು, ಅವಶ್ಯವಿದ್ದಲ್ಲಿ ವೇದ ಮೂಲದಿಂದ, ಪರಂಪರಾಗತವಾಗಿ ಸಾಗಿ ಬಂದಿರುವ ಭಾರತೀಯ ಜ್ಞಾನಗಂಗೆಯ ರಸಬಿಂದುಗಳನ್ನು ಉಲ್ಲೇಖ ಮಾಡಿ, ಕಗ್ಗದ ಕಗ್ಗಂಟನ್ನು ಬಿಡಿಸುವುದರಲ್ಲಿ ಸಫಲವಾಗಿದ್ದೀರಿ.

ಪ್ರಸ್ತುತದಲ್ಲಿ ನಾವು ನಮ್ಮ ಆಡುನುಡಿಯಾದ ಕನ್ನಡವನ್ನು ಮರೆತು ಅರೆ-ಬೆರಕೆ ಭಾಷೆಯನ್ನು ಮಾತನಾಡುತ್ತಿದ್ದೇವೆ. ಇದರಲ್ಲೂ ಅನ್ಯಭಾಷಾ ಪದಗಳ ಸಂಪರ್ಕವಿಲ್ಲದ 'ಶುದ್ಧ ಕನ್ನಡವೆಂಬ ಹೆಸರಿನಲ್ಲಿ ಭಾಷೆಯನ್ನೂ ಅರ್ಥವನ್ನೂ ಅಪಭ್ರಂಶಗೊಳಿಸುತ್ತಿರುವ ವೀರರ ನಡುವೆ, ಹಳೆಗನ್ನಡದ ಪದಗಳನ್ನೂ ಕನ್ನಡದ್ದೇ ಆದ ವಿಶೇಷ ಪದಪ್ರಯೋಗಗಳನ್ನೂ ಹೊಂದಿರುವ ಕನ್ನಡದ "ಕಗ್ಗ"ವನ್ನೂ ಎಲ್ಲರಿಗೂ ಅರ್ಥವಾಗುವಂತೆ, ಬರೆಯುವ ತಮ್ಮ ಶೈಲಿ ನೋಡಿದಾಗ "ಸುಲಿದ ಬಾಳೆಯ ಹಣ್ಣಿನಂದದಿ......." ನೆನಪಾಗದೇ ಇರದು.

ಜನಸಂಖ್ಯೆ ಹೆಚ್ಚಾದಂತೆ, ಜನಗಳಿಗೆ ವ್ಯವಧಾನವೂ ಕಮ್ಮಿಯಾಗುವುದೇನೋ ಎಂಬುದು ನಾನು ಗಮನಿಸಿದ ಅಂಶ. ಧಾವಂತದ ಬದುಕಿನಲ್ಲಿ ಎಲ್ಲವೂ ಸುಲಭಸಾಧ್ಯವಾದಾಗ ಮಾತ್ರ ಮಾನವನ ಬದುಕು ಸಹನೀಯವಾಗುವುದು ಸಹಜವೆನಿಸುತ್ತಿದೆ. ಎಲ್ಲವನ್ನೂ ಮೂಲದಲ್ಲಿ ಓದಿ, ತಿಳಿದು, ಅರ್ಥೈಸುವಲ್ಲಿ ನಮ್ಮ ಸಹನೆ ಕುಸಿದು ಬೀಳುತ್ತದೆ. ಇದು ನಾವು ಬದುಕುವ, ಬದುಕುತ್ತಿರುವ ಪರಿ. ಇಂತಹ ಜೀವನದಲ್ಲಿ, ಕೈಹಿಡಿದು ಮುನ್ನಡೆಸಲು “ಕಗ್ಗ ರಸಧಾರೆ”ಯ ಅಮೃತಧಾರೆ ಹರಸುತ್ತಿರುವ ತಾವು ಧನ್ಯ.

ಬ್ಯಾಂಕ್ ಉದ್ಯೋಗಿಯಾಗಿ, ಲೆಕ್ಕಾಚಾರದ ಬದುಕನ್ನು ಬಲ್ಲ ತಾವು, ಕಗ್ಗ ರಸಧಾರೆ'ಯಲ್ಲೂ ಅವಶ್ಯವಾದ ಮತ್ತು ಸಂದರ್ಭಕ್ಕೆ ತಕ್ಕ ವಿಚಾರ, ವಿಷಯಗಳನ್ನು ಪ್ರಸ್ತಾಪಿಸುವ ಮೂಲಕ "ಕಗ್ಗ ರಸಧಾರೆ'ಯನ್ನು “ಅಮೃತ ರಸಧಾರೆ”ಯನ್ನಾಗಿಸುತ್ತಿದ್ದೀರಿ.

**ವಂದನೆಗಳು,**

**ರಮೇಶ ಜೋಯಿಸ್**

# ಅನಿಸಿಕೆಗಳು

## ಆರ್. ಬಿ. ಶೆಟ್ಟಿ

ಡಿ.ವಿ.ಜಿ. ಯವರ ಮಂಕುತಿಮ್ಮನ ಬಗ್ಗೆ ಗೊತ್ತಿಲ್ಲದ ಕನ್ನಡಿಗರು ಇರಲಾರರು. ಆದರೆ ಅದರ ಆಳಕ್ಕೆ ಇಳಿದು ಅದನ್ನು ಸಂಪೂರ್ಣವಾಗಿ ಅರ್ಥ ಮಾಡಿಕೊಂಡವರು ಕಡಿಮೆ ಅನಿಸುತ್ತದೆ. ಸಾಮಾನ್ಯವಾಗಿ ಕಗ್ಗವನ್ನು ಓದಿದ ನಂತರ, ಸ್ವಲ್ಪ ಯೋಚಿಸುತ್ತೇವೆ, ಆಮೇಲೆ ಕೆಲವೊಂದನ್ನು ನೆನಪಿಟ್ಟುಕೊಂಡು, ಹೆಚ್ಚಿನವನ್ನು ಮರೆಯುತ್ತೇವೆ. ಆದರೆ, ರವಿ ತಿರುಮಲೈಯವರು ಪ್ರತಿಯೊಂದು ಕಗ್ಗದ ಒಳ ಹೊಕ್ಕು, ಅದರ ಆಳಕ್ಕೆ ಇಳಿದು, ತಾವು ಅನುಭವಿಸಿದ ಸಿಹಿಯನ್ನು ನಮಗೆಲ್ಲರಿಗೂ ಹಂಚಿದ್ದಾರೆ.

ಮಂಕುತಿಮ್ಮನ ಕಗ್ಗವನ್ನು ವಿವರಿಸಿ ಬರೆಯುತ್ತಿರುವ ರವಿ ತಿರುಮಲೈಯವರ ಈ ಕಾರ್ಯವನ್ನು ತಪಸ್ಸು ಎಂದು ಕರೆಯಬಹುದು. ಹಿಂದೆ ಋಷಿಗಳು ತಪಸ್ಸು ಮಾಡುತ್ತಿದ್ದಾಗ, ಅದರ ಫಲ ಆ ತಪಸ್ಸು ಮುಗಿದ ನಂತರ ಸಿಗುತ್ತಿತ್ತು. ಆದರೆ ರವಿಯವರ ಈ ತಪಸ್ಸಿನ ಫಲ ಜನರಿಗೆ ದಿನ ದಿನವೂ ಫೇಸ್‌ಬುಕ್‌ನ ಮುಖಾಂತರ ಸಿಗುತ್ತಿದೆ. ಸುಮಾರು ಒಂದು ವರ್ಷದಿಂದ ಅವರು ಮಾಡುತ್ತಿರುವ ಅವರ ಈ ಕಾರ್ಯದಿಂದ, ನಾವು ದಿನ ದಿನವೂ ಹೊಸ ಹೊಸ ಅನುಭವ ಪಡೆಯುತ್ತಿದ್ದೇವೆ.

“ಆ ಪರಮಾತ್ಮನೇನೋ ನಮ್ಮನ್ನು 'ಸೃಷ್ಟಿಯ ಶಿಖರ'ದಂತೆ ಸೃಷ್ಟಿಸಿದ. ನಾವು ನಮ್ಮ ದುರ್ಬುದ್ಧಿ ಮತ್ತು ಅಹಂಕಾರದಿಂದ ಆ ಶಿಖರದ ಮೇಲಿಂದ ಪತನವಾಗಿದ್ದೇವೆ. ಇದರಿಂದ ಮುಕ್ತಿಯುಂಟೋ ಅಥವಾ ವಿನಾಶವೇ ಗತಿಯೋ ನಾವು ಯೋಚನೆಮಾಡಬೇಕಾದ ವಿಷಯ”.

ಮೇಲಿನ ಮಾತುಗಳನ್ನು ರವಿಯವರು ನೀಡಿದ ವಿವರಣೆಯ ಒಂದು ಭಾಗ. ಇದು ಅವರ ಜೀವನ ದೃಷ್ಟಿಯನ್ನು ತೋರಿಸುತ್ತದೆ. ಇಲ್ಲಿ ಕಾಣ ಸಿಗುವುದು ಇಂತಹ ಸುಂದರ, ಅರ್ಥಪೂರ್ಣ ಮಾತುಗಳಲ್ಲಿ ನಮ್ಮ ಜೀವನದ ಅರ್ಥದ ಅನ್ವೇಷಣೆ.

ಇನ್ನೊಂದು ಉದಾಹರಣೆ ನೋಡೋಣ :

ಮನುಷ್ಯನ ಮನಸ್ಸಿನಲ್ಲಿರುವ ಈ ಅಭಿರುಚಿಯೇ ಈ ಜಗತ್ತಿನ ವೈವಿಧ್ಯತೆಗೆ ಕಾರಣ, ಇವನ ಅಭಿರುಚಿಗೆ ಸಿಕ್ಕ ಎಲ್ಲವನ್ನೂ ಮನುಷ್ಯ ಸುಂದರವಾಗಿಸಲು ಪ್ರಯತ್ನಿಸಿದ್ದಾನೆ ಮತ್ತು ಆ ಸುಂದರತೆಯನ್ನು ತಾನೂ ಅನುಭವಿಸಲು ಪ್ರಯತ್ನಿಸಿದ್ದಾನೆ. ಶಬ್ದ, ಸ್ಪರ್ಶ, ರೂಪ, ರಸ, ಗಂಧ, ಎಲ್ಲದರ ಮೂಲಕವೂ ಈ ಜಗತ್ತಿನ ಎಲ್ಲವನ್ನೂ ನೋಡಿ ಇಷ್ಟಪಟ್ಟು ಪಡೆದು ಅನುಭವಿಸಿ ಆನಂದಿಸುವ ಭಾಗ್ಯ ಮನುಷ್ಯನಿಗೆ ಮಾತ್ರ ಆ ಪರಮಾತ್ಮ ಕೊಟ್ಟಿದ್ದಾನೆ. ಇಂತಹ ಒಂದು ಗುಣವನ್ನು ಪಡೆದ ನಾವೇ ಧನ್ಯರು. ನಮ್ಮನ್ನು ರಂಜಿಸುವ ಈ ಪ್ರಕೃತಿಗೆ ಮತ್ತು ಅದನ್ನು ರುಚಿಸುತ್ತಾ ಆನಂದ ಪಡುವ ಗುಣ ನಮಗೆ ಕೊಟ್ಟ ಆ ಪರಮಾತ್ಮನಿಗೆ ನಾವು ಮನಸಾರ ವಂದಿಸೋಣ.

ರವಿಯವರ ಎಲ್ಲಾ ವಿವರಣೆಗಳನ್ನು ಓದಿದಾಗ ಅವರ ಅಗಾಧ ಜ್ಞಾನದ ಬಗೆಗೆ ನಿಬ್ಬೆರಗಾಗುತ್ತೇವೆ. ವೇದದಿಂದ, ಉಪನಿಷತ್‌ನಿಂದ, ಶೇಕ್ಸ್‌ಪಿಯರ್‌ನ ನಾಟಕಗಳಿಂದ ಉದಾಹರಣೆಗಳನ್ನು ನೀಡುತ್ತಾರೆ.

ಫೇಸ್‌ಬುಕ್‌ನಲ್ಲಿ ದಿನ ದಿನವೂ ಬರುತ್ತಿದ್ದ ಕಗ್ಗದ ಸಾರವನ್ನೆಲ್ಲಾ ಒಂದುಗೂಡಿಸಿ ಅವರು ಪುಸ್ತಕ ರೂಪದಲ್ಲಿ ತರುತ್ತಿದ್ದಾರೆ. ಅವರ ಈ ಕಾರ್ಯವು ಯಶಸ್ವಿ ಆಗಲಿ ಹಾಗು ಪ್ರತಿಯೊಬ್ಬ ಕನ್ನಡಿಗನನ್ನು ತಲುಪಲಿ ಎಂದು ಹಾರೈಸುತ್ತೇನೆ.

**ಆರ್. ಬಿ. ಶೆಟ್ಟಿ**

# ಅನಿಸಿಕೆಗಳು

## ಮಂಜುನಾಥ, ಎಸ್.

ನನ್ನ ಮಿತ್ರರಾದ ಶ್ರೀಯುತ ರವಿ ತಿರುಮಲೆರವರು ನನಗೆ ಪರಿಚಯವಾಗಿ ಇನ್ನೂ ಒಂದು ವರ್ಷವೂ ಆಗಿಲ್ಲ. ಆದರೆ ನಮ್ಮಲ್ಲಿ ಈ ಅಲ್ಪಾವಧಿಯಲ್ಲೇ ಬಹಳ ಸಲಿಗೆ ಬೆಳೆದಿದೆಯೆಂದರೆ ಆಶ್ಚರ್ಯವೇನಿಲ್ಲ. ನಾವಿಬ್ಬರೂ ಸಮ ವಯಸ್ಕರಾಗಿದ್ದು, ಬಹುತೇಕ ವಿಚಾರಗಳು, ಅನಿಸಿಕೆಗಳು, ನಂಬಿಕೆಗಳು ವಿವಿಧ ಸ್ತರಗಳಲ್ಲಿ ಹೊಂದಾಣಿಕೆಯಾಗುವುದು ಎನ್ನುವ ವಿಷಯ ಹೆಮ್ಮೆ ಪಡುವಂತದ್ದಾಗಿದೆ. ನಮ್ಮನ್ನು ಪರಿಚಯಿಸಿದ್ದು, ಅವರು ದಿನ ನಿತ್ಯ ಫೇಸ್‌ಬುಕ್ಕಿನಲ್ಲಿ ನನಗೆ ಅತಿ ಪ್ರಿಯವಾದ ಡಿ.ವಿ.ಜಿ.ರವರ ಕಗ್ಗದ ಅರ್ಥವಿವರಣೆಯಿಂದ. ಅದನ್ನು ದಿನವೂ ಓದುತ್ತಿದ್ದ ಬಹು ಜನರ ಪೈಕಿ ನಾನೂ ಒಬ್ಬನಾಗಿದ್ದು ದಿನ ನಿತ್ಯ ತಪ್ಪದೆ "ಲೈಕ್" ಗುಂಡಿಯನ್ನು ಒತ್ತುತ್ತಿದ್ದೆ. ಅವರ ಶೈಲಿ, ಭಾಷೆ, ವಿವರಣೆಯ ವಿಸ್ತಾರ ನನಗೆ ಇಷ್ಟವಾಗುತ್ತಿತ್ತು. ಹೀಗೆ ಒಂದು ದಿನ ಮಾತನಾಡುತ್ತಿರುವಾಗ ಅವರು ತಮ್ಮ ದಿನ ನಿತ್ಯ ಬರೆಯುತ್ತಿದ್ದದ್ದನ್ನೇ ಪುಸ್ತಕದ ರೂಪದಲ್ಲಿ ಅನಾವರಣಗೊಳಿಸುವ ಇಂಗಿತ ವ್ಯಕ್ತಪಡಿಸಿದಾಗ ನನ್ನ ಮನಸ್ಸಿಗೆ ಇದೆಲ್ಲಾ ಸಾಮಾನ್ಯವಾಗಿ ಜನ ಅತಿ ಉತ್ಸಾಹದಿಂದ ಮತ್ತು ಆರಂಭಶೂರತ್ವದಿಂದ ಆಡುವ ಉಡಾಫೆ ಮಾತು ಎಂದೆನಿಸಿದ್ದು ಸುಳ್ಳಲ್ಲ. ಆದರೆ ಅವರ ನಿಜವಾದ ಬದ್ಧತೆ, ಪ್ರಾಮಾಣಿಕ ಪ್ರಯತ್ನದ, ಕ್ರಿಯಾಶೀಲತೆಯ, ಶ್ರಮದ ಫಲಿತವೇ ಇಂದು ನಿಮ್ಮ ಕೈಯಲ್ಲಿ ಕಂಗೊಳಿಸುವ ಕೃತಿಯೆಂದರೆ ಉತ್ಪ್ರೇಕ್ಷೆಯಾಗಲಾರದು.

ರವಿ ಅವರ ಆಧ್ಯಾತ್ಮ ಚಿಂತನೆ, ಜ್ಞಾನ, ಬದುಕನ್ನು ನೋಡುವ ರೀತಿ ನನ್ನನ್ನು ಚಕಿತಗೊಳಿಸಿದ್ದು ನಿರಾಕರಿಸಲಾಗದ ಸತ್ಯ. ಈ ಕಗ್ಗದ ನಂಟು ಮತ್ತು ಡಿ.ವಿ.ಜಿ.ರವರ ಮೂಲ ಉದ್ದೇಶವನ್ನು ಸಮಾಜಕ್ಕೆ ತಲುಪಿಸಿ ಜನರ ಮನದಲ್ಲಿ ಕಾಡುವ ಹಲವಾರು ಪ್ರಶ್ನೆಗಳಿಗೆ ಬಹಳಷ್ಟು ಜನರು ತಮ್ಮ ತಮ್ಮದೇ ಆದ ಶೈಲಿಯಲ್ಲಿ ವಿವರಿಸಿ ತಲುಪಿಸಿರುವಂತೆಯೇ ಇವರನ್ನೂ ಸಹ ಡಿ.ವಿ.ಜಿ.ರವರು ಪ್ರಚೋದಿಸಿ ಕನ್ನಡ ಸಾರಸ್ವತ ಲೋಕವನ್ನು ಇವರ ಮೂಲಕ ಶ್ರೀಮಂತಗೊಳಿಸಿದ್ದಾರೆಂದರೆ ತಪ್ಪಾಗಲಾರದು. ಮಂಕುತಿಮ್ಮನ ಕಗ್ಗದ ಆಳ, ಅರ್ಥ, ವಿಸ್ತಾರ, ವ್ಯಾಪ್ತಿ, ಹರಿವುಗಳನ್ನು ಇವರ ಜೀವನಾನುಭವಕ್ಕೆ ಲೇಪಿಸಿ ಜನಕ್ಕೆ ಮುಟ್ಟಿಸುವ ಪ್ರಾಮಾಣಿಕ ಪ್ರಯತ್ನದ ಈ ಪುಸ್ತಕದ ಮೊದಲ ಭಾಗವನ್ನು ಇನ್ನೂ ಅಸಂಖ್ಯಾತ ಒದುಗರಿಗೆ ಕಗ್ಗ ಸಾಗರದಲ್ಲಿ ಮಿಂದೇಳುವಂತೆ ಮಾಡಿದ್ದಾರೆ. ಈ ಕೃತಿಯನ್ನು ಓದುವ ಓದುಗರು ಯಾವ ಪೂರ್ವಾಗ್ರಹವಿಲ್ಲದೆ ಪ್ರಾಮಾಣಿಕವಾಗಿ ಓದಲಿಚ್ಚಿಸುವರಿಗೆ ತಮ್ಮ ಜೀವನದಲ್ಲಿ ಕಾಣದೆ ಅವಿತುಕೊಂಡಿರುವ ಹೊಸ ಆಯಾಮದ ಪರಿಚಯ ವಾಗದಿರುವುದು ಅಸಾಧ್ಯ. ಬಹುತೇಕ ಪ್ರತಿಯೊಬ್ಬರ ಜೀವನದಲ್ಲೂ ಆಧ್ಯಾತ್ಮಿಕ ಚಿಂತನೆಯನ್ನೂ, ಸಾಮಾಜಿಕ ಅನಿವಾರ್ಯತೆಗಳನ್ನೂ, ಮೌಢ್ಯಗಳನ್ನೂ ಕಟುವಾಗಿ ಟೀಕಿಸಿ ಮನ ಮುಟ್ಟುವಂತೆ

ವಿವರಿಸಿ ಓದುಗನ ಆತ್ಮ ವಿಕಾಸಕ್ಕೂ ಮತ್ತು ಆತ್ಮ ವಿಶ್ವಾಸಕ್ಕೂ ಪೂರಕವಾಗುವಂತೆ ಪರಿಣಾಮಕಾರಿಯಾಗಿರುವುದೆಂಬ ದೃಢ ನಂಬಿಕೆಯಿದೆ.

ಡಿ.ವಿ.ಜಿ.ರವರ ಮೂಲ ಕೃತಿಗೆ ಯಾವ ವಿಧವಾದ ಚ್ಯುತಿ, ಕುಂದು ಬಾರದಂತೆ ಅತಿ ಶ್ರದ್ಧೆ ಹಾಗೂ ಜವಾಬ್ದಾರಿಯಿಂದ ನಿರ್ವಹಿಸಿದ್ದಾರೆಂದು ನನ್ನ ಅನಿಸಿಕೆ. ವಿಚಾರವಂತ ಓದುಗರು ಈ ಮೊದಲ ಪ್ರಯತ್ನವನ್ನು ಪ್ರೀತಿಯಿಂದ ಸ್ವೀಕರಿಸಿ ಓರೆ ಕೋರೆಗಳೇನಾದರೂ ಕಂಡುಬಂದಲ್ಲಿ ಅದನ್ನು ಸರಿ ಪಡಿಸುವ ನಿಟ್ಟಿನಲ್ಲಿ ಸಹಕರಿಸುತ್ತಾರೆಂದು ನಂಬಿ ವಿನಯಪೂರ್ವಕವಾಗಿ ವಿನಂತಿಸಿಕೊಳ್ಳುತ್ತಿದ್ದೇನೆ. ಈ ಕಗ್ಗದ ವಿಷಯವನ್ನು ಬರೆಯುವ ಅಸಂಖ್ಯಾತ ಜನರ ಪಟ್ಟಿಗೆ ಈ ಹೊಸ ಪ್ರತಿಭೆಯೂ ಸೇರಿ ಒಟ್ಟಾರೆ ಜನಮಾನಸದಲ್ಲಿ ನೆಲೆನಿಂತು



## ಅನಿಸಿಕೆಗಳು

ವೈಯ್ಯಕ್ತಿಕ ಬದುಕಿನ ಗುಣಮಟ್ಟವನ್ನು ಸುಧಾರಿತ ಮಟ್ಟಕ್ಕೆ ಕೊಂಡೊಯ್ಯಲು ಹಾಗೂ ಮನಃಶಾಂತಿಯನ್ನು ಸಂಪಾದಿಸಿಕೊಳ್ಳಲು ನೆರವಾಗುವುದು ಮತ್ತು ನಮ್ಮನ್ನು ಬೇರೆ ಬೇರೆ ಹೊಸ ಚಿಂತನೆಗಳಿಗೆ ಹಚ್ಚುತ್ತದೆಂಬುದು ನನ್ನ ಪ್ರಾಮಾಣಿಕ ಅನಿಸಿಕೆ ಹಾಗೂ ಅಭಿಲಾಷೆ.

ನಿಮ್ಮ ಪ್ರೋತ್ಸಾಹ ಪೋಷಣೆಯೊಂದಿಗೆ ಬೆಳೆದು ಉತ್ಕೃಷ್ಟ ಮೌಲ್ಯಗಳು ದೀರ್ಘಕಾಲ ಸಮಾಜದಲ್ಲಿ ಉಳಿದು ಸಮಾಜದ ಸರ್ವತೋಮುಖ ಉನ್ನತಿಗೆ ಕಾರಣೀಭೂತವಾಗಲೆಂದು ಆಶಿಸುವೆ. ಇವರಿಂದ ಇನ್ನೂ ಹೆಚ್ಚು ಸೇವೆ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಲಭಿಸಲೆಂಬ ನಿರೀಕ್ಷೆಯೊಂದಿಗೆ

**ಮಂಜುನಾಥ, ಎಸ್.**

# ಪರಮಾತ್ಮ 1-3

**ಮುಕ್ತಕ-1**

**ಶ್ರೀ ವಿಷ್ಣು ವಿಶ್ವಾದಿಮೂಲ ಮಾಯಾಲೋಲ |**
**ದೇವ ಸರ್ವೇಶ ಪರಬೊಮ್ಮನೆಂದು ಜನಂ ||**
**ಆವುದನು ಕಾಣದೊಡಮಳ್ಳಿಯಿಂ ನಂಬಿಹುದೋ |**
**ಆ ವಿಚಿತ್ರಕೆ ನಮಿಸೊ-ಮಂಕುತಿಮ್ಮ ||**

ವಿಶ್ವಾದಿಮೂಲ=ವಿಶ್ವ+ಆದಿಮೂಲ, ಕಾಣದೊಡಮಳ್ತಿಯಿಂ=ಕಾಣದೊಡಂ+ಅಳ್ತಿಯಿಂ.
ಪರಬೊಮ್ಮ=ಪರಬ್ರಹ್ಮ, ಕಾಣದೊಡಂ=ಕಾಣದಿದ್ದರೂ, ಅಳ್ತಿಯಿಂ=ಪ್ರೀತಿಯಿಂದ.

ಶ್ರೀ ವಿಷ್ಣು ವಿಶ್ವಕ್ಕೆ ಮೂಲ, ಮಾಯಾಲೋಲ, ದೇವ, ಸರ್ವಕ್ಕೂ ಒಡೆಯನಾದ ಪರಬ್ರಹ್ಮ ಎಂದು ಹತ್ತು ಹಲವಾರು ಹೆಸರುಗಳಿಂದ ಯಾವುದನ್ನು ಜನರು ಕಾಣದಿದ್ದರೂ ಪ್ರೀತಿ ಮತ್ತು ಭಕ್ತಿಯಿಂದ ನಂಬಿರುವರೋ ಆ ವಿಚಿತ್ರಕ್ಕೆ ನಮಿಸು ಎಂದು ಹೇಳುತ್ತಾರೆ ಶ್ರೀ ಗುಂಡಪ್ಪನವರು.

ನಾವೆಲ್ಲಾ ಆತ್ಮಗಳಾದರೆ ನಮ್ಮನ್ನು ಆಳುವವನು ಪರಮಾತ್ಮ, ಅದನ್ನು ನಿಯಾಮಕ, ನಿಯಂತ್ರಕ, ದೇವರು ಎಂದೆಲ್ಲ ಕರೆಯುತ್ತಾರೆ. ಯಾರು ಏನೇ ಹೆಸರಿಟ್ಟು ಕರೆದರೂ ಅದು ಪರಮ ಶಕ್ತಿ . ಇಡೀ ಜಗತ್ತನ್ನು ಸೃಷ್ಟಿಸಿ ನಿಯಂತ್ರಿಸುವ ಒಂದು ಪರಮ ಶಕ್ತಿ. ಇದನ್ನು ಹಲವಾರು ಸದ್ಭಕ್ತರು ತಮ್ಮ ತಮ್ಮದೇ ರೀತಿಯಲ್ಲಿ ತಮ್ಮ ಅಂತರಂಗದಲ್ಲಿ ಕಂಡುಕೊಂಡು ಅನುಭವಿಸಿದ್ದಾರೆ. ಯಾರು ಹೇಗೆ ಅನುಭವಿಸಿದರೋ ಅವರಿಗೆ ಹಾಗೆ ಕಂಡಿದೆ.

ನಾವಿರುವ ಭೂಮಿಯಂತಹ ೯.೮೦ ಲಕ್ಷ ಭೂಮಿಗಳನ್ನು ನಮ್ಮ ಸೌರವ್ಯೂಹದ ಸೂರ್ಯನೊಳಕ್ಕೆ ಹಾಕಿಬಿಡಬಹುದು ಎಂದು ವಿಜ್ಞಾನಿಗಳು ಹೇಳುತ್ತಾರೆ. ನಮ್ಮ ಸೌರಮಂಡಲವೂ ಸೇರಿದಂತೆ ಲಕ್ಷಾಂತರ ಸೌರಮಂಡಲಗಳಿರುವ ನಮ್ಮ ಕ್ಷೀರಪಥ. ನಮ್ಮ ಕ್ಷೀರಪಥವೂ ಸೇರಿದಂತೆ ಲಕ್ಷಾಂತರ ಕ್ಷೀರಪಥಗಳಿರುವ ಆಕಾಶಗಂಗೆ, ನಮ್ಮ ಆಕಾಶಗಂಗೆಯೂ ಸೇರಿದಂತೆ ಲಕ್ಷಾಂತರ ಆಕಾಶಗಂಗೆಗಳಿರುವ ಈ ವಿಶ್ವ, ಇಡೀ ವಿಶ್ವವನ್ನು ಒಂದು ಸೂತ್ರದಲ್ಲಿ ನಡೆಸುತ್ತಿರುವ ಒಂದು ಶಕ್ತಿ. ಅದನ್ನೇ ಬೇರೆ ಬೇರೆಯವರು ಬೇರೆ ಹೆಸರುಗಳಿಂದ ಕರೆಯುತ್ತಾರೆಂದು

ಈ ಮುಕ್ತಕದ ಆಂತರ್ಯ, ವಿಶ್ವದ ಒಂದು ಅಣುವಷ್ಟೂ ಅಲ್ಲದ ನಾವು, ಕಾಣದಿದ್ದರೂ ಆ ಶಕ್ತಿಯ ಅಧೀನದಲ್ಲಿರುವುದರಿಂದ, ಅದಕ್ಕೆ ಭಕ್ತಿಯಿಂದ, ಪ್ರೀತಿಯಿಂದ ನಮಿಸಬೇಕು ಎಂದು ಒಂದು ಆದೇಶ.

ಅದನ್ನು ಕಂಡವರಿಲ್ಲ. ಅದರ ಲೀಲೆಗಳನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳಲೂ ಸಾಧ್ಯವಿಲ್ಲ. ಪ್ರತಿಯೊಬ್ಬರೂ ಅವರವರದೇ ರೀತಿಯಲ್ಲಿ ವ್ಯಾಖ್ಯಾನ ಮಾಡಬಹುದಾದಂತಹ ಒಂದು ಪರಮ ವಸ್ತು. ಮಾನ್ಯ ಗುಂಡಪ್ಪನವರು





ಅದನ್ನು "ವಿಚಿತ್ರ" ಎಂದು ಕರೆದು ಅದಕ್ಕೆ ನಮಿಸು ಎಂದು ಒಂದು ಆದೇಶವನ್ನು ಕೊಟ್ಟುದ್ದಾರೆ . ನಾವೂ ಸಹ ನಮ್ಮ ನಮ್ಮ ಮನಸ್ಸುಗಳಲ್;ಲಿ ನಮ್ಮದೇ ರೀತಿಯಲ್ಲಿ ಆ ಪರಮಾತ್ಮನೆಂಬ ವಸ್ತುವನ್ನು ಭಾವಿಸಿ ಅನುಭವಿಸಬೇಕು ಹೃದಯದಲ್ಲಿ ತುಂಬಿಕೊಳ್ಳಬೇಕು

**ಮುಕ್ತಕ -2**

**ಜೀವ ಜಡರೂಪ ಪ್ರಪಂಚವನದಾವುದೋ |**
**ಆವರಿಸಿಕೊಂಡುಮೊಳನೆರೆದುಮಿಹುದಂತೆ ||**
**ಭಾವಕೊಳಪಡದಂತೆ ಅಳತೆಗಳವಡದಂತೆ |**
**ಆ ವಿಶೇಷಕೆ ಮಣಿಯೋ- ಮಂಕುತಿಮ್ಮ ||**

ಪ್ರಪಂಚವನದಾವುದೋ=ಪ್ರಪಂಚವನ್+ಅದು+ಆವುದೋ,

ಆವರಿಸಿಕೊಂಡುಮೊಳನೆರೆದುಮಿಹುದಂತೆ=ಆವರಿಸಿಕೊಂಡುಂ+ಒಳನೆರದುಂ+ಇಹುದಂತೆ,

ಭಾವಕೊಳಪಡದಂತೆ=ಭಾವಕೆ+ಒಳಪಡದಂತೆ, ಅಳತೆಗಳವಡದಂತೆ=ಅಳತೆಗೆ+ಅಳವಡದಂತೆ.

ಜೀವ=ಚೇತನ, ಜಡ=ಸ್ಥಾವರ ಅಥವಾ ಚಲನೆಯಿಲ್ಲದ್ದು, ಒಳನೆರದು=ಒಳಗೆಲ್ಲಾ ಆವರಿಸಿಕೊಂಡು,

ಅಳವಡದಂತೆ=ಅಳತೆಗೆ ಸಿಗದಂತೆ.

ಈ ಪ್ರಪಂಚದಲ್ಲಿ ಇರುವುದು ಎರಡೇ. ಒಂದು ಜಡ ಮತ್ತು ಮತ್ತೊಂದು ಜೀವ. ಜಡವೆಂದರೆ ಚೇತನವಿಲ್ಲದ್ದು. ಜೀವವೆಂದರೆ ಚೇತನ, ಇವೆರಡರ ಸಮ್ಮಿಲನವೇ ಜಗದ್ವ್ಯಾಪಾರ, ಇವೆರಡರಲ್ಲೂ ಆವರಿಸಿಕೊಂಡಿರುವ, ಭಾವದಿಂದ ಊಹಿಸಲಸಾಧ್ಯವಾದ, ಅಳತೆಗೆ ಸಿಗದ ವ್ಯಾಪಕತ್ವವು ಹೊಂದಿರುವ ಆ ವಿಶೇಷಕೆ, ಪರಮಾತ್ಮನಿಗೆ ನಮಿಸೋ, ಮಣಿಯೋ, ನಮಸ್ಕರಿಸೋ ಮಂಕುತಿಮ್ಮ ಎಂದು ಹೇಳುತ್ತಾರೆ ಡಿ.ವಿ.ಜಿ.

ಈ ಪರಮಾತ್ಮ-ಜಡ-ಜೀವ ಪರಸ್ಪರ ಸಂಬಂಧವನ್ನು ಕುರಿತು ಹೇರಳವಾದ ವ್ಯಾಖ್ಯಾನಗಳಿದ್ದರೂ "ಇದೇ-ಇದು" ಎಂದು ಹೇಳುವುದು ಅಸಾಧ್ಯ. ಅದು ಅನುಭವ ವೇದ್ಯ ತೆಲುಗಿನ ಭಕ್ತಿಮಾರ್ಗದ ಮಹಾನ್ ಕವಿ ಅನ್ನಮಾಚಾರ್ಯರು "ಅಂದರಿಲೋ ಪುಟ್ಟಿ ಅಂದರಿ ಚೇರಿ ಅಂದರಿ ರೂಪಮುಲು ಆಟು ತಾನೈ" ಎಂದು ಹೇಳುತ್ತಾರೆ. ಅಂದರೆ "ಎಲ್ಲರಲ್ಲೂ ಹುಟ್ಟಿ ಎಲ್ಲರಲ್ಲೂ ಸೇರಿ ಎಲ್ಲರ ರೂಪವು ತಾನೇ ಆಗಿ" ಎಂದು ಆ ಪರಮಾತ್ಮನನ್ನು ವರ್ಣಿಸುತ್ತಾರೆ. ಇಲ್ಲಿ ನಮಗೆ ಆ ಪರಮ ಪುರುಷನು ಇಡೀ ಜಗತ್ತು ಮತ್ತು ಅದರಲ್ಲಿರುವ ಸಕಲವೂ ಆಗಿ ತಾನೇ ಪ್ರಕಟಗೊಂಡಿದ್ದಾನೆ ಎಂದು ಅರ್ಥ ಬರುತ್ತದೆ. ಇರಲಿ ನಾವೂ ಸಹ ಇದನ್ನು ನಮ್ಮ ನಮ್ಮ ಮತಿಯ ಮಿತಿಯಲ್ಲಿ ವಿಚಾರದ ಓರಗೆ ಹಚ್ಚಿ ನಮ್ಮ ನಮ್ಮ ವಿಚಾರದ ಪರಿಧಿಯನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನಪಡಬೇಕು.

ಮಹಾಭಾರತ ಯುದ್ಧದ ಸಮಯದಲ್ಲಿ, ಭೀಷ್ಮ ಪಿತಾಮಹರು ಶರ ಶಯ್ಯೆಯ ಮೇಲೆ ಮಲಗಿರುವಾಗ, ಒಂದು ದಿನ ಸತ್ಸಂಗದಲ್ಲಿ ಯುಧಿಷ್ಠಿರನು ಕೇಳುವ ಪ್ರಶ್ನೆಗಳಿಗೆ ಉತ್ತರಿಸುತ್ತಾ, "ಯತಃ ಸರ್ವಾಣಿ ಭೂತಾನಿ ಭವಂತ್ಯಾದಿ ಯುಗಾಗಮೆ । ಯಸ್ಮಿಂಶ್ಚ ಪ್ರಳಯಂ ಯಾಂತಿ ಪುನರೇವ ಯುಗಕ್ಷಯೇ." ಎಂದು ಪರಮಾತ್ಮ ಸ್ವರೂಪವನ್ನು ವಿವರಿಸುತ್ತಾ "ಯುಗದ ಆದಿಯಲ್ಲಿ ಯಾರಿಂದ ಎಲ್ಲವೂ ಪ್ರಕಟಗೊಳ್ಳುತ್ತದೋ ಮತ್ತು ಯುಗದ ಅಂತ್ಯದಲ್ಲಿ ಯಾರಲ್ಲಿ ಎಲ್ಲವೂ ವಿಲೀನವಾಗುತ್ತದೋ, ಅದೇ ಪರಮಾತ್ಮ" ಎನ್ನುತ್ತಾರೆ.

ಆದರೆ ಎಂತೆಂತಹ ಮಹಾಮಹಿಮಾನ್ವಿತರಿಗೂ ಊಹಿಸಲು, ಅಳೆಯಲು ಮತ್ತು ತಿಳಿಯಲು ಕಷ್ಟಸಾಧ್ಯವಾದ ಆ ಪರಮಾತ್ಮನನ್ನು, "ವಿಚಿತ್ರ" "ವಿಶೇಷ"ಎಂದು ಕರೆದು, ಅದಕ್ಕೆ ನಮಿಸು, ಮಣಿ ಎಂದು ಆದೇಶಿಸುತ್ತಾರೆ ಮಾನ್ಯ ಡಿ.ವಿ.ಗುಂಡಪ್ಪನವರು.

**ಮುಕ್ತಕ-3**

**ಇಹುದೋ ಇಲ್ಲವೋ ತಿಳಿಯಗೊಡದೊಂದು ವಸ್ತು ನಿಜ |**
**ಮಹಿಮೆಯಿಂ ಜಗವಾಗಿ ಜೀವವೇಷದಲಿ ||**
**ವಿಹರಿಪುದದೊಳ್ಳಿತೆಂಬುದು ನಿಸದವಾದೊಡಾ |**
**ಗಹನ ತತ್ವಕೆ ಶರಣೋ-ಮಂಕುತಿಮ್ಮ ||**

ತಿಳಿಯಗೊಡದೊಂದು=ತಿಳಿಯಗೊಡದ ಒಂದು, ವಿಹರಿಪುದದೊಳ್ಳಿತೆಂಬುದು=ವಿಹರಿಪುದು (ವಿಹಾರ ಮಾಡುವುದು)+ಅದು+ಒಳ್ಳಿತು=ಒಳ್ಳೆಯದು+ಎಂಬುದು, ನಿಸದವಾದೊಡಾ=ನಿಸದವಾದೊಡೆ+ಆ

ವಿಹರಿಪುದು=ವಿಹರಿಸುತ್ತದೆ, ಒಳ್ಳಿತೆಂಬುದು=ಒಳ್ಳೆಯದು+ಎಂಬುದು, ನಿಸದವಾದೊಡೆ=ನಿಜವಾದರೆ, ಗಹನ ತತ್ವಕೆ=ಗುಹ್ಯವಾದ, ಮಹತ್ತರವಾದ ತತ್ತ್ವಕ್ಕೆ, ಶರಣೋ=ನಮಸ್ಕಾರ.

ವಿಹಾರಮಾಡುವುದು ಎಂದರೆ, ಎಲ್ಲದರಲ್ಲೂ ವ್ಯಾಪಕವಾಗಿ ಚೈತನ್ಯ ರೂಪದಲ್ಲಿರುವುದು ಎಂದೂ ಅರ್ಥೈಸಬಹುದು. ನಿಸದವಾದೊಡೆ ಎಂದರೆ ನಿಜವಾದರೆ ಎಂದೇ ಅರ್ಥೈಸಬೇಕು..

ಮಾನವರಲ್ಲಿ ಇದು ಒಂದು ನಿರಂತರ ಪ್ರಶ್ನೆ. ಆ ದೇವರೆಂಬ ವಸ್ತು "ಇದೆಯೋ-ಇಲ್ಲವೋ" ಎಂದು. ಇದೆ ಎಂದರೆ, ಅದಕ್ಕೆ ನಾನಾ ಹೆಸರುಗಳು, ರೂಪಗಳು, ಪೂಜೆಗಳು, ಹಲವು ಪೂಜಾ ವಿಧಾನಗಳು, ಆಚಾರಗಳು, ಸಂಪ್ರದಾಯಗಳು, ಆ ದೇವರ ರೂಪ ಮತ್ತು ಕಾರ್ಯವೈಖರಿಗೆ ನಾನಾ ಭಾಷ್ಯಗಳು, ಅನಾದಿ ಕಾಲದಲ್ಲೂ ಆ ದೇವರ ಅಸ್ತಿತ್ವವನ್ನು ಪ್ರಶ್ನಿಸುವ "ಚಾರ್ವಾಕರೆಂಬುವರೂ ಇದ್ದರು. ಇಂದಿಗೂ ಆ ದೇವರೆಂಬ ವಸ್ತುವನ್ನು ನಂಬದಿರುವರೂ ಇದ್ದಾರೆ. ಕೆಲವರಿಗೆ ದೃಢವಾದ ನಂಬಿಕೆ. ಇನ್ನೂ ಕೆಲವರಿಗೆ ಅನುಮಾನ. ಮತ್ತೆ ಕೆಲವರಿಗೆ ಅದು ಆಗಾಗ ಬಂದು

ಹೋಗುವ ವಿಚಾರ. ಕೆಲವರಿಗೆ ಸಂಕಟ ಬಂದಾಗ ಮಾತ್ರ ದೇವರ ನೆನಪು, ಕೆಲವರಿಗೆ ಬರೀ ತೋರಿಕೆಗೆ ಭಕ್ತಿ ಮತ್ತು ಕೆಲವರಿಗೆ ಹೊರಗೆ ತೋರದಿದ್ದರೂ ಆಂತರ್ಯದಲ್ಲಿ ಶುದ್ಧಭಕ್ತಿ.

ಇಲ್ಲಿ ಡಿ.ವಿ.ಜಿ.ಯವರೂ ಸಹ “ನಿಸದವಾದೊಡೆ” ಎಂದಿದ್ದಾರೆ. “ಜಗವ ಸೃಜಿಸಿ, ಗತಿ ಸೂತ್ರವನಾಡಿಸಿ” ಎಂದಿದ್ದಾರೆ ದಾಸರು. ಅಂದರೆ ಜಗತ್ತನ್ನು ಸೃಷ್ಟಿಸಿ, ಜಗತ್ತಿನ ಎಲ್ಲ ಜೀವರಾಶಿಗಳನ್ನೂ, ಪರಮಾತ್ಮ ತನ್ನ ಇಷ್ಟದಂತೆ ಆಡಿಸುವನೆಂಬ ಅರ್ಥದಲ್ಲಿದೆ ದಾಸರ ಉಕ್ತಿ. ಹಾಗೆ ಇಡೀ ವಿಶ್ವವನ್ನು ಸೃಷ್ಟಿಮಾಡಿ, ಎಲ್ಲ ಜಡ ಮತ್ತು ಜೀವಿಗಳಲ್ಲೂ ತಾನೇ ತಾನಾಗಿ ವ್ಯಾಪಿಸಿರುವ ಆ ಪರಮಾತ್ಮನೆಂಬುವುದು ಒಳ್ಳೆಯದು ಮತ್ತು ಇರುವುದು ಸತ್ಯವಾದರೆ, ಆ ಗಹನ'ಕ್ಕೆ ಅಂದರೆ ಗೂಢವಾದ, ಊಹೆ, ಅರಿವು ಮತ್ತು ತರ್ಕಕ್ಕೆ ನಿಲುಕದ, ಆ ಗುಹ್ಯವಾದ ವಸ್ತುವಿಗೆ ಶರಣಾಗು ಎನ್ನುತ್ತಾರೆ ಡಿ.ವಿ.ಜಿ. ಇಲ್ಲಿ 'ನಿಸದವಾದೊಡೆ' ಎಂದು ಸತ್ಯವಾದರೆ ಎಂದಿದ್ದಾರೆ. ಅಂದರೆ ಅದು ಅಸತ್ಯವೂ ಆಗಿರಬಹುದೇ? ಎಂದರೆ, ಅದು ಹಾಗಲ್ಲ. ನಂಬುವವನ ಮನಸ್ಸಿಗೆ, ಭಾವಕ್ಕೆ ಅದು ಸತ್ಯ ಎಂದು ಗೋಚರಿಸಿದರೆ, ಅದನ್ನು ನಂಬು ಮತ್ತು ಶರಣಾಗು ಎಂದು ಹೇಳಿದ್ದಾರೆ.

ನಾನು ನಂಬಲ್ಲ ಎಂಬುವವನೂ ಸಹ "ನಾನು ದೇವರನ್ನು ನಂಬುವುದಿಲ್ಲ" ಎನ್ನುತ್ತಾನೆ. ಅಂದರೆ ಅವನು "ದೇವರು" ಎನ್ನುವ ವಸ್ತುವೊಂದಿದೆ, ನಾನು ಅದನ್ನು ನಂಬುವುದಿಲ್ಲ ಎಂದು ಅರ್ಥವಲ್ಲವೇ?

ಹಾಗಾಗಿ ವಾಚಕರೆ ನಿಮಗೆ ಆ ಪರಮಾತ್ಮ ವಸ್ತುವಿನಲ್ಲಿ ನಂಬಿಕೆ ಇದ್ದರೆ, ಶುದ್ಧವಾಗಿ ನಂಬಿ, ಶರಣಾಗಿ ಎನ್ನುತ್ತಾರೆ ಡಿ.ವಿ.ಜಿ.

# ಏನು ಜೀವನದರ್ಥ 4-8

**ಮುಕ್ತಕ-4**

**ಏನು ಜೀವನದರ್ಥ? ಏನು ಪ್ರಪಂಚಾರ್ಥ? |**
**ಏನು ಜೀವಪ್ರಪಂಚಗಳ ಸಂಬಂಧ?**
**ಕಾಣದಿಲ್ಲಿರ್ಪುದೇನಾನುಮುಂಟೆ? ಅದೇನು? |**
**ಜ್ಞಾನಪ್ರಮಾಣವೇಂ?-ಮಂಕುತಿಮ್ಮ**

ಕಾಣದಿಲ್ಲಿರ್ಪುದೇನಾನುಮುಂಟೆ=ಕಾಣದೆ+ಇಲ್ಲಿ+ಇರ್ಪುದು+ಏನಾನುಂ(ಏನಾದರೂ)+ಉಂಟೆ.
ಇರ್ಪುದು=ಇರುವುದು, ಏನಾನುಂ=ಏನಾದರೂ.

"ಈ ನಮ್ಮ ಜೀವನಕ್ಕೆ ಏನಾದರೂ ಅರ್ಥ ಇದೆಯೇ? ನಾವಿರುವ ಈ ಪ್ರಪಂಚದ ಅರ್ಥವೇನು? ನಮ್ಮ ಮತ್ತು ನಾವು ಇರುವ ಈ ಪ್ರಪಂಚದ ಪರಸ್ಪರ ಸಂಬಂಧವೇನು? ಇವೆರಡನ್ನೂ ಬೆಸೆದಿರುವ, ನಮ್ಮ ಕಣ್ಣಿಗೆ ಕಾಣದ ಒಂದು ಶಕ್ತಿ ಏನಾದರೂ ಇದೆಯೇ? ಹಾಗಿದ್ದರೆ ಅದೇನು? ಅದು ನಮ್ಮ ವಿಚಾರ ಮತ್ತು ಜ್ಞಾನದ ಪರಿಧಿಯಿಂದ ಮೀರಿದೆಯೇ? ಹಾಗಾದರೆ ಅದು ಏನು?" ಎಂಬ ಭಾವಗಳನ್ನು ವ್ಯಕ್ತಪಡಿಸುತ್ತಾರೆ ಈ ಮುಕ್ತಕದಲ್ಲಿ ಮಾನ್ಯ ಶ್ರೀ ಡಿ.ವಿ.ಜಿ.ಯವರು.

ವಾಚಕರೇ, ಅಲ್ಪ ಸ್ವಲ್ಪ ವಿಚಾರಮಾಡುವ ಶಕ್ತಿ ಇರುವವರೂ ಸಹ ಈ ರೀತಿಯ ಪ್ರಶ್ನೆಗಳನ್ನು ತಮಲ್ಲೇ ತಾವು ಅನೇಕ ಬಾರಿ ಕೇಳಿಕೊಳ್ಳುತ್ತಾರೆ. ಅಲ್ಲವೇ? ನಾವು ಹುಟ್ಟುತ್ತೇವೆ, ಬೆಳೆಯುತ್ತೇವೆ, ಬದುಕುತ್ತೇವೆ ಮತ್ತು ಒಂದು ದಿನ ಸಾವಿನ ತೆಕ್ಕೆಗೆ ಬೀಳುತ್ತೇವೆ. ಈ ಎಲ್ಲಕ್ಕೂ ಏನಾದರೂ ಅರ್ಥವಿದೆಯೇ? ನಾವು ಇಲ್ಲಿರುವಾಗ ನಮ್ಮ ಜೀವನದಲ್ಲಿ ಜ್ಞಾನದ ಜೊತೆಯಲ್ಲಿ ಪ್ರೀತಿ, ಪ್ರೇಮ, ಕೋಪ, ದ್ವೇಷ, ಅಸೂಯೆ, ಅನುರಾಗ ಮುಂತಾದ ಹಲವಾರು ಭಾವನೆಗಳನ್ನು

ಬೆಳೆಸಿಕೊಳ್ಳುತ್ತೇವೆ. ಆ ಭಾವನೆಗಳ ಜೊತೆಗೆ ಜೀವಿಸುತ್ತೇವೆ. ಈ ರೀತಿಯ ಜೀವನಕ್ಕೇನಾದರೂ ಅರ್ಥವಿದೆಯೇ? ವಾಸ್ತವ ಬದುಕಿಗೆ ಮಾತ್ರ ವಾಸ್ತವವೇ ಕಾರಣವೋ ಅಥವಾ ನಮ್ಮ ಕಣ್ಣಿಗೆ ಕಾಣದ ಆದರೂ ಈ ಎಲ್ಲವನ್ನೂ ನಿಯಂತ್ರಿಸುವ ಬೇರೆ ಯಾವುದಾದರೂ ಶಕ್ತಿ ಇದೆಯೇ? ಇದ್ದರೆ ಅದರ ಸ್ವರೂಪವೇನು ಮತ್ತು ಅದರ ಕಾರ್ಯ ವೈಖರಿಯೇನು? ಎನ್ನುವುದು ಎಲ್ಲ ವಿಚಾರವಂತರಿಗೂ ಬರುವ ಸಂದೇಹಗಳು.

ಪ್ರತಿ ಜೀವಿಯ ಹುಟ್ಟು ಏಕಾಗುತ್ತದೆ? ಭೌತಿಕ ಕಾರಣವು ಎಲ್ಲರಿಗೂ ಗೊತ್ತು. ಆದರೆ ಈ ಭೌತಿಕ ಕಾರಣವಲ್ಲದೆ ಬೇರೆ ಏನಾದರೂ ಕಾರಣವಿದೆಯೇ? ಆ ಕಾರಣವೇ ನಮ್ಮ ಪ್ರತಿ ನಿಮಿಷದ ಕಾರ್ಯಗಳನ್ನೂ





ನಿಯಂತ್ರಿಸುತ್ತದೆಯೇ? ನಮ್ಮ ಭಾರತೀಯ ಸಿದ್ಧಾಂತದ ಪ್ರಕಾರ ಪ್ರತಿ ಜೀವಿಯೂ ಒಂದು ಪೂರ್ವ ನಿಯೋಜಿತ ಕಾರಣಕ್ಕಾಗಿ ಜನಿಸಿ ಮತ್ತು ಆ ಪೂರ್ವ ನಿಯೋಜಿತ ಕ್ರಮದಲ್ಲಿಯೇ ತನ್ನ ಜೀವನವನ್ನು ನಡೆಸುತ್ತದೆ ಎಂದು ಹೇಳಲ್ಪಟ್ಟಿದೆ. ಹಾಗಿದ್ದರೆ ಆ ಕಾರಣದ ಮೂಲವೇನು? ಆ ಕಾರಣಕ್ಕೆ ಕಾರಕರಾರು? ಬಹಳ ಕ್ಲಿಷ್ಟವಾದ ಪ್ರಶ್ನೆ.

ನಮ್ಮ ಋಷಿ ಮುನಿಗಳೂ ಸಹ ಈ ರೀತಿಯ ಪ್ರಶ್ನೆಗಳಿಗೆ ಉತ್ತರವನ್ನು ಕಾಣಲು ಮಾಡಿದ ಪ್ರಯತ್ನದ ಫಲವೇ ಭಾರತೀಯ ವೇದಶಾಸ್ತ್ರಗಳು, ಉಪನಿಷತ್ತುಗಳು. ಹೀಗೆ ಎಲ್ಲರಲ್ಲೂ ಸಾಮಾನ್ಯವಾಗಿ ಉದ್ಭವವಾಗುವ ಮತ್ತು ಎಲ್ಲರೂ ವಿಚಾರ ಮಾಡಬಹುದಾದ ಅಥವಾ ಮಾಡಲೇಬೇಕಾದ ಪ್ರಶ್ನೆಗಳ ಸ್ವರೂಪವೇ ಈ ಮುಕ್ತಕ.

**ಮುಕ್ತಕ-5**

**ದೇವರೆಂಬುದದೇನು ಕಗ್ಗತ್ತಲ ಗವಿಯೆ? |**
**ನಾವರಿಯಲಾರದೆಲ್ಲದರೊಟ್ಟು ಹೆಸರೇ? ||**
**ಕಾವನೊರ್ವನಿರಲ್ಕೆ ಜಗದ ಕಥೆಯೇಕಿಂತು? |**
**ಸಾವು ಹುಟ್ಟುಗಳೇನು?-ಮಂಕುತಿಮ್ಮ ||**

ದೇವರೆಂಬುದದೇನು-ದೇವರು+ಎಂಬುದದೇನು,

ನಾವರಿಯಲಾರದೆಲ್ಲದರೊಟ್ಟು=ನಾವು+ಅರಿಯಲಾರದ+ಎಲ್ಲದರ+ಒಟ್ಟು,

ಕಾವನೊರ್ವನಿರಲೆ=ಕಾವನು+ಓರ್ವನು+ಇರಲೆ, ಕಥೆಯೇಕಿಂತು=ಕಥೆಯು+ಏಕೆ+ಇಂತು,

ಕಾವನು=ಕಾಯುವವನು, ಓರ್ವನು=ಒಬ್ಬನು, ಇರ=ಇರಲು, ಏಕಿಂತು=ಏಕೆ ಹೀಗೆ.

ದೇವರು ಎನ್ನುವುದು ಏನು? ಅದೇನು ಕತ್ತಲು ಕವಿದ ಗವಿಯೆ? ನಾವು ಅರಿಯಲಾಗದ ಎಲ್ಲದರ ಒಟ್ಟು ಹೆಸರೇ? ಕಾಯುವವನು ಒಬ್ಬ ಇರಲು, ಈ ಜಗದ ಕಥೆಯು ಏಕೆ ಇನಿತು? ಹುಟ್ಟು ಸಾವುಗಳರ್ಥವೇನು? ಎನ್ನುತ್ತಾರೆ ಮಾನನೀಯ ಗುಂಡಪ್ಪನವರು.

ದೇವರೇನು ಅಷ್ಟೊಂದು ಗಹನನೆ? ಗುಹ್ಯನೆ? ಅರ್ಥವಾಗದವನೇ? ದೇವರು ಗಹನನೋ ಅಲ್ಲವೋ ಗೊತ್ತಿಲ್ಲ. ಆದರೆ ಇಂದಿಗೂ "ಅದು, ಇದೇ"ಎಂದು ಹೇಳುವ ಒಂದು ಪ್ರಮಾಣ ಸಿಕ್ಕಿಲ್ಲ ಅಲ್ಲವೆ? ಸಿಕ್ಕಿದ್ದಿದ್ದರೆ ಆ ದೇವರ ರೂಪ ಮತ್ತು ಸ್ವರೂಪಗಳ ಬಗ್ಗೆ ಇಷ್ಟೊಂದು ಭಿನ್ನ ಭಿನ್ನ ಅಭಿಪ್ರಾಯಗಳು ಇರುತ್ತಿರಲಿಲ್ಲ ಅಲ್ಲವೆ? ದೇವರನ್ನು ಪರಿಭಾಷಿಸಿದವರೆಲ್ಲ ತಮ್ಮ ತಮ್ಮ ಅನುಭವದ ವೃತ್ತದಲ್ಲೇ ಆ ದೇವರನ್ನು ವಿವರಿಸಿದ್ದಾರೆ. ಅಂದರೆ ಆ ದೇವರು ಎನ್ನುವ ವಸ್ತು ಅನುಭವ ವೇದ್ಯ ಮಾತ್ರ

ಈ ದೇವರು ಎಂಬುದು ಏನು? ಮಾನವನಿಗೆ ಯೋಚಿಸುವ ಶಕ್ತಿ ಬಂದಾಗಿನಿಂದ ಇದೊಂದು ಕಾಡುವ ಪ್ರಶ್ನೆ. ಅಂದು ಮನುಷ್ಯ ಕಾಡಿನಲ್ಲಿ ಅಲೆಮಾರಿಯಾಗಿದ್ದ. ಕೈಗೆ ಸಿಕ್ಕಿದ್ದನ್ನು ತಿಂದು, ತನ್ನನ್ನು ತಾನು ರಕ್ಷಿಸಿಕೊಳ್ಳಲು ಹೋರಾಡುತ್ತಿದ್ದ. ಆಗ ಅವನಿಗೆ ಬಂದ ಯೋಚನೆ ಹೀಗಿದ್ದಿರಬಹುದು. ದಿನದ ಯಾವುದೋ ಸಮಯದಲ್ಲಿ ಒಂದು ವಸ್ತು ಗಗನದಲ್ಲಿ ಬರುತ್ತದೆ. ಆಗ ಎಲ್ಲವೂ ನಿಚ್ಚಳವಾಗಿ ಕಾಣುತ್ತದೆ. ಕಾಡು ಪ್ರಾಣಿಗಳಿಂದ ತನ್ನನ್ನು

ತಾನು ರಕ್ಷಿಸಿಕೊಳ್ಳಲು ಸಹಾಯವಾಗುತ್ತದೆ. ಆಹಾರವನ್ನು ಹುಡುಕಲು ಆಡುವ ಬೇಟೆಯೂ ಯಶಸ್ವಿಯಾಗುತ್ತದೆ. ಆದರೆ ದಿನದ ಯಾವುದೋ ಸಮಯದಲ್ಲಿ ಗಗನದಲ್ಲಿ ಆ ವಸ್ತು ಕಾಣೆಯಾಗುತ್ತದೆ. ಆಗ ಎಲ್ಲವೂ ಕತ್ತಲೆ. ಕಾಡು ಪ್ರಾಣಿಗಳಿಂದ ತನ್ನ ರಕ್ಷಣೆ, ಕಷ್ಟ ಅಥವಾ ಅಸಾಧ್ಯ. ಹಾಗಾಗಿ ಗಗನದಲ್ಲಿ ಬರುವ ವಸ್ತು ತನಗೆ ಸಹಾಯ ಮಾಡುತ್ತದೆ. ಆಕಾಶದಿಂದ ನೀರು ಬೀಳುತ್ತದೆ. ಗಿಡಮರಗಳು ಚಿಗುರಿ ಗೆಡ್ಡೆ ಗೆಣಸುಗಳು, ಹಣ್ಣು ಹಂಪಲುಗಳು ಯಥೇಚ್ಚವಾಗಿ ಆಹಾರ ರೂಪದಲ್ಲಿ ಸಿಗುತ್ತದೆ. ಹಾಗೆ ಗಗನದಿಂದ ಬಂದ ಮಳೆ ತನಗೆ ಸಹಾಯಮಾಡುತ್ತದೆ. ಎಲ್ಲವೂ ಮೇಲಿಂದ ಬರುವುದರಿಂದ, ಇದನ್ನೆಲ್ಲಾ ಕೊಡುವ ಅಥವಾ ಕಳುಹಿಸುವ ಯಾರೋ ಮೇಲಿರಬೇಕು. ಅದನ್ನೇ ಅಂದು ಅವನು “ದೇವರು” ಎಂದ. ಮುಂದೆ ತನಗೆ ಉಪಯೋಗಕ್ಕೆ ಬರುವ ಎಲ್ಲಕ್ಕೂ ಆ ದೈವತ್ವವನ್ನು ಆರೋಪಿಸುತ್ತಾ ಹೋದ. ವಿಡಂಬನೆಯೇನೆಂದರೆ ಇಂದಿಗೂ ಮಾನವನ ಸ್ಥಿತಿ ಹಾಗೇ ಇದೆ. ತನಗೆ ಉಪಯೋಗಕ್ಕೆ ಬರುವುದೆಲ್ಲಾ, ಅಂದರೆ ಭೂಮಿ, ಮನುಷ್ಯ, ಪ್ರಾಣಿ, ಪಕ್ಷಿ, ಗಿಡ, ಮರ, ನದಿ, ಸಮುದ್ರ, ಮಳೆ, ಬಿಸಿಲು, ಬೆಳಕು, ಹೂವು, ಹಣ್ಣು ಹೀಗೆ ಎಲ್ಲವೂ ಅವನಿಗೆ ದೈವ ಸಮಾನ. ಆದರೂ ಇಂದಿಗೂ ಮಾನವನಿಗೆ ಆ 'ದೇವರ' ಖಚಿತ ಸ್ವರೂಪ ಅರ್ಥವಾಗಿಯೇ ಇಲ್ಲ.

ಈ ಜಗತ್ತಿನ ಅಥವಾ ಸೃಷ್ಟಿಯಲ್ಲಿ ನಡೆಯುವ ವಿದ್ಯಮಾನಗಳನ್ನೆಲ್ಲ ನಡೆಸುವವನು ದೇವರೆಂದು ನಾವು ಹೇಳುತ್ತೇವೆ. ಆದರೆ, ಅದರ ನಿಜ ಸ್ವರೂಪ ಏನು ಎಂದು ಇಂದಿಗೂ ಮಾನವ ಅರ್ಥೈಸಲಾಗಿಲ್ಲ. ವಿಜ್ಞಾನದ ಮೂಲಕ ಅವನು ಕಂಡು ಹಿಡಿದುಕೊಂಡಿರುವುದು, ಕೋಟಿಯಲ್ಲಿ ಒಂದು ಪಾಲೂ ಇಲ್ಲ. ಅಷ್ಟೇ ಅಲ್ಲ ನಿರಂತರ ಬದಲಾಗುತ್ತ ಹೊಸ ಹೊಸ ಆಯಾಮವನ್ನು ತಳೆಯುವ ಈ ದೇವರನ್ನು ವಿಜ್ಞಾನದ ಪ್ರಯೋಗಗಳಿಂದ ಅರಿಯಲು ಸಾಧ್ಯವೇ? ಹಾಗಾಗಿ ಅವನು "ಗುಹ್ಯನು ಎನ್ನುವ ಅರ್ಥದಲ್ಲಿ ಮಾನ್ಯ ಗುಂಡಪ್ಪನವರು ಹೇಳುತ್ತಾರೆ. ಹಾಗೆ ಆ ದೇವರು ಈ ಪ್ರಪಂಚವನ್ನು ಮತ್ತು ಇಲ್ಲಿರುವ ಎಲ್ಲವನ್ನೂ ಸೃಷ್ಟಿಸಿ ಎಲ್ಲರನ್ನೂ ಕಾಪಾಡುವವನಾಗಿದ್ದರೆ, ಎಲ್ಲರೂ ಸಮಾನವಾಗಿ ಸುಖವಾಗಿರಬೇಕಲ್ಲವೆ? ಈ ಹುಟ್ಟು ಸಾವುಗಳೇಕೆ? ನೋವು ದುಃಖಗಳೇಕೆ ? ಮನುಷ್ಯ ಮನುಷ್ಯರಲ್ಲಿ ಇಷ್ಟೊಂದು ಬೇಧವೇಕೆ? ಆ ದೇವರು ಎಲ್ಲರನ್ನೂ ಕಾಯುವವನಾದರೆ ಎಲ್ಲರನ್ನೂ ಸಮಾನವಾಗಿ ಕಾಯಬೇಕಲ್ಲವೇ? ಈ ಸಾವು ನೋವುಗಳಿಗೇನು ಅರ್ಥ? ಹೀಗೆ ಹತ್ತು ಹಲವಾರು ಪ್ರಶ್ನೆಗಳನ್ನು ಈ ಮುಕ್ತಕದ ಮೂಲಕ ಮಾನನೀಯ ಗುಂಡಪ್ಪನವರು ಎತ್ತಿದ್ದಾರೆ. ಇಂತಹ ಪ್ರಶ್ನೆಗಳು ಸಾಮಾನ್ಯವಾಗಿ ಎಲ್ಲರಲ್ಲೂ ಅವರವರ ಜೀವನದ ಯಾವುದಾದರೂ ಘಳಿಗೆಯಲ್ಲಿ ಉದ್ಭವಿಸಿರಬಹುದು.

**ಮುಕ್ತಕ-6**

**ಒಗಟೆಯೇನೀ ಸೃಷ್ಟಿ? ಬಾಳಿನರ್ಥವೇನು ? ।**
**ಬಗೆದು ಬಿಡಿಸುವರಾರು ಸೋಜಿಗವನಿದನು ? ।**
**ಜಗವ ನಿರಮಿಸಿದ ಕೈಯೊಂದಾದೊಡೇಕಿಂತು ॥**
**ಬಗೆಬಗೆಯ ಜೀವಗತಿ?-ಮಂಕುತಿಮ್ಮ ॥**

ಒಗಟೆಯೇನೀಸೃಷ್ಟಿ=ಒಗಟೇ+ಏನು+ಈ+ಸೃಷ್ಟಿ?, ಬಾಳಿನರ್ಥವೇನು=ಬಾಳಿನ+ಅರ್ಥವೇನು, ಬಗೆದು ಬಿಡಿಸುವರಾರು=ಬಗೆದು ಬಿಡಿಸುವವರು+ಯಾರು, ಸೋಜಿಗವನಿದನು=ಸೋಜಿಗವನು+ಇದನು.
ಕೈಯೊಂದಾದೊಡೇಕಿಂತು ಕೈ+ಒಂದು+ಆದೊಡೆ+ಏಕೆ+ಇಂತು.





ಈ ಸೃಷ್ಟಿಯು ಒಗಟೇ? ಈ ಬಾಳಿಗೆ ಅರ್ಥವೇನು? ಆದರೆ ಈ ಒಗಟನ್ನು ಬಿಡಿಸುವವರು ಯಾರು? ಈ ಜಗತ್ತನ್ನು ಸೃಷ್ಟಿಮಾಡಿದ ಕೈ ಒಂದೇ ಆದರೆ, ಸೃಷ್ಟಿಯಲ್ಲಿ ಸಮಾನತೆಯೇಕಿಲ್ಲ? ಬೇರೆ ಬೇರೆಯಾದ ಜೀವನಗತಿ ಏಕೆ? ಎನ್ನುವ ಪ್ರಶ್ನೆಗಳನ್ನು ತಮಗೆ ತಾವೇ ಕೇಳಿಕೊಳ್ಳುವ ರೀತಿಯಲ್ಲಿ ಶ್ರೀ ಗುಂಡಪ್ಪನವರು, ನಮ್ಮೆಲ್ಲರ ಮುಂದೆ ಈ ಮುಕ್ತಕದ ರೂಪದಲ್ಲಿ ಇಟ್ಟಿದ್ದಾರೆ.

ಎಲ್ಲ ಜೀವಿಗಳಲ್ಲೂ ಇರುವ ಆ ಚೇತನವು ಜ್ಞಾನ ಸ್ವರೂಪ. ಆದರೆ ಕೆಲವರು ಜ್ಞಾನಿಗಳು ಮತ್ತೆ ಕೆಲವರು ಏಕಿಲ್ಲ? ಎಂದರೆ, ಕೆಲವರ ಕನ್ನಡಿ ಒರೆಸಿ ಶುದ್ಧವಾಗಿದೆ, ಕೆಲವರ ಕನ್ನಡಿಯ ಮೇಲೆ ಧೂಳು ಕೂತಿದೆ. ಧೂಳನ್ನು ಒರೆಸಿದರೆ ಅದೂ ಸಹ ಪ್ರಕಾಶಿಸುತ್ತಾ, ಶುದ್ಧ ಬಿಂಬವನ್ನು ಪ್ರತಿಫಲಿಸುತ್ತದೆ. ಆದರೂ ಏನಿದು ಪ್ರಪಂಚ ಎಂಬ ಪ್ರಶ್ನೆ ಮತ್ತು ಅರ್ಥವೇ ಆಗುವುದಿಲ್ಲವಲ್ಲ ಅಥವಾ ನಮಗೆ ಅರ್ಥವಾಗಿರುವುದು ಪೂರ್ಣವಲ್ಲ ಎಂಬ ಭಾವ ಎಲ್ಲರಿಗೂ ಬರುತ್ತದೆ. ಇದು ಅರ್ಥವಾಗದ ಕಗ್ಗಂಟಾದರೆ ಯಾರಾದರೂ ಬಿಡಿಸಬಹುದಲ್ಲ ಎನ್ನುವ ಪ್ರಶ್ನೆಯೂ ಉದ್ಭವವಾಗುತ್ತದೆ. ಈ ಜಗತ್ತನ್ನು ನಿರ್ಮಿಸಿದ ಅಥವಾ ಸೃಷ್ಟಿಸಿದ "ಕೈ" ಒಂದೇ ಎಂದಾದರೆ, ವಿಧವಿಧವಾದ ಅಸಮತೆಯಿಂದ ಏಕೆ ಕೂಡಿದೆ,

ಎನ್ನುವ ಸಂದೇಹ, ಪ್ರಶ್ನೆ ವಿಚಾರವಂತರಾದ ಎಲ್ಲರ ಮನಸ್ಸಲ್ಲೂ ಉದ್ಭವವಾಗುತ್ತದೆ, ಅಲ್ಲವೇ! ಹಾಗೆಯೇ ಇದೆ, ಈ ಮುಕ್ತಕದ ಭಾವ.

ಈ ಹಿಂದೆಯೇ ಹೇಳಿದಂತೆ, ಈ ಜಗತ್ತಿನ ಗುಟ್ಟನ್ನು ಭೇಧಿಸಲು ಈವರೆಗೆ ಯಾರಿಂದಲೂ ಸಾಧ್ಯವಾಗಿಲ್ಲ. ಪ್ರಯತ್ನಪಟ್ಟವರಿಗೆಲ್ಲ ಒಂದೊಂದು ರೂಪದಲ್ಲಿ ಕಾಣುವ ಈ ಜಗತ್ತಿನ ನಿಜರೂಪ ಕಂಡುಕೊಳ್ಳುವಲ್ಲಿ ಯಾರೂ ಪೂರ್ಣ ಸಫಲರಲ್ಲ. ಹಾಗೆಯೇ ಈ ಜಗತ್ತಿನ ಎಲ್ಲ ಜೀವರಾಶಿಗಳಲ್ಲೂ ಹೇರಳವಾದ ವೈವಿಧ್ಯತೆ ಇದೆ. ಒಬ್ಬ ಮನುಷ್ಯನಿದ್ದಂತೆ ಇನ್ನೊಬ್ಬನಿಲ್ಲ. ಒಬ್ಬನ ಮನಸ್ಸು ಬುದ್ಧಿಗಳಿದ್ದಂತೆ ಮತ್ತೊಬ್ಬರದ್ದಿಲ್ಲ. ಅವರವರ ಜೀವನ ಅವರವರದ್ದು. ಅವರವರ ಭಾಗ್ಯ ಅವರವರದ್ದು. ಒಬ್ಬರ ನೋವು ಮತ್ತು ಆ ನೋವಿಗೆ ಕಾರಣ ಮತ್ತೊಬ್ಬರ ನೋವು ಮತ್ತು ಅದರ ಕಾರಣದಂತಿಲ್ಲ.

ಒಬ್ಬರ ಸುಖ ಮತ್ತದರ ಕಾರಣ ಇನ್ನೊಬ್ಬರಿಗಿಲ್ಲ. ಒಬ್ಬರ ಸುಖದ ಕಾರಣವು ಮತ್ತೊಬ್ಬರ ದುಃಖಕ್ಕೆ ಕಾರಣವಾಗಬಹುದು. ಇದರ ಗುಟ್ಟನ್ನು ಬಿಡಿಸುವವರಾರು? ಈ ಎಲ್ಲವೂ ಮಾನವನಿಗಷ್ಟೇ ಅಲ್ಲ. ಸಕಲ ಪ್ರಾಣಿಗಳಿಗೂ ಅನ್ವಯಿಸುತ್ತದೆ. ನಮ್ಮ ಮನೆಯ ಬೀದಿಯಲ್ಲಿ ಒಂದು ಮುದಿ ನಾಯಿ, ಹೊತ್ತು ಹೊತ್ತಿನ ಊಟಕ್ಕೆ ಹೋರಾಡುವಾಗ, ಹಾಕಿದ್ದ ಯಾವುದನ್ನೂ ತಿನ್ನಲಾಗದೆ ಮುದಿತನ, ಸಾವು-ಬದುಕಗಳ ಮಧ್ಯದಲ್ಲಿ ನರಳುವಾಗ ಅಥವಾ ಬಹಳ ದಿನಗಳಿಂದ ಬೆಳೆದು ಹೆಮ್ಮರವಾಗಿ ಎಲ್ಲರಿಗೂ ನೆರಳನ್ನೂ, ಪ್ರಾಣಿ-ಪಕ್ಷಿಗಳಿಗೆ ಆಹಾರವನ್ನೂ, ಆಶ್ರಯವನ್ನೂ ನೀಡಿದ ಒಂದು ಮರವನ್ನು ಯಾವುದೋ ಕಾರಣಕ್ಕೆ ಕಡಿದಾಗಲೂ, ಹೇ! ಪರಮಾತ್ಮ ಏನಿದು ಈ ಜೀವಿಯ ಅವಸ್ಥೆ ಎಂದು ನನ್ನ ಮನಸ್ಸು ಕರಗುತ್ತದೆ. ಆದರೆ ಅದರ ಅವಸ್ಥೆಗೆ ಉತ್ತರ ಖಂಡಿತ ನನಗೆ ಸಿಗುವುದಿಲ್ಲ. ಇದು ಎಲ್ಲ ಪ್ರಾಣಿಗಳ ಪರಿಸ್ಥಿತಿ.

ಅಷ್ಟೇ ಅಲ್ಲ ಇಂದು ಸುಖ, ನಾಳೆ ದುಃಖ, ಇಂದು ಆರೋಗ್ಯ, ನಾಳೆ ಅನಾರೋಗ್ಯ, ಇಂದು ಮಿತ್ರ, ನಾಳೆ ಶತ್ರು, ಇಂದು ಸಂತೋಷ, ನಾಳೆ ಬೇಸರ ಹೀಗೆ ಇಂದು ನಾಳೆಗಳಲ್ಲಿ ಮತ್ತು ದಿನದಿನಕ್ಕೆ ಬೇರೆಬೇರೆಯೇ

ಭಾವಗಳು, ಈ ರೀತಿಯ ವೈವಿಧ್ಯಕ್ಕೆ ಕಾರಣರಾರು ಅಥವಾ ಕಾರಣವೇನು? ನಾವೆಷ್ಟು ಕಾರಣ? ಪರರೆಷ್ಟು ಕಾರಣ? ವಿಧಿಯೆಷ್ಟು ಕಾರಣ? ವಿಧಾತನೆಷ್ಟು ಕಾರಣ? ಹೀಗೆ ಹತ್ತು ಹಲವಾರು ಪ್ರಶ್ನೆಗಳ ಭಾವವೇ ಈ ಮುಕ್ತಕ. ಈ ಮುಕ್ತಕ ದಲ್ಲಿ ಬರುವ ಸೂಕ್ತ ಪ್ರಶ್ನೆಗಳು ನಮ್ಮ ನಿಮ್ಮಲ್ಲಿಯೂ ಸಹ ಎಂದಾದರೂ ಉದ್ಭವಿಸಿರಬಹುದು ಉತ್ತರ ಸಿಕ್ಕಿಲ್ಲದಿರಬಹುದು.

**ಮುಕ್ತಕ-7**

**ಬದುಕಿಗಾರ್ ನಾಯಕರು, ಏಕನೊ ಅನೇಕರೋ? |**
**ವಿಧಿಯೋ ಪೌರುಷವೋ ಧರುಮವೋ ಅಂಧಬಲವೋ? ||**
**ಕುದುರುವುದೆಂತು ಈಯವ್ಯವಸ್ಥೆಯ ಪಾಡು? |**
**ಅದಿಗುದಿಯೆ ಗತಿಯೇನೋ?-ಮಂಕುತಿಮ್ಮ ||**

ಬದುಕಿಗಾರ್=ಬದುಕಿಗೆ+ಆರ್, ಧರುಮವೋ=ಧರ್ಮವೋ, ಅಂಧಬಲವೋ=ಅಂಧ ಶ್ರದ್ಧೆಯೋ, ಈಯವ್ಯವಸ್ಥೆಯ=ಈ+ಅವ್ಯವಸ್ಥೆಯ, ಅದಿಗುದಿ=ಸಂದೇಹ ಅಥವಾ ತಳಮಳ,

ಈ ಬದುಕಿಗೆ ಯಾರು ನಾಯಕರು? ಒಬ್ಬನೋ ಅಥವಾ ಅನೇಕರಿದ್ದಾರೆಯೋ? ಅಥವಾ ಈ ಬದುಕಿಗೆ ನಾಯಕ ವಿಧಿಯೋ, ಧರ್ಮವೋ, ಅಥವಾ ಅಂಧಶ್ರದ್ಧೆಯೋ? ಅವ್ಯವಸ್ಥೆ ಸರಿಯಾಗುವುದೋ ಇಲ್ಲವೋ? ಅಥವಾ ಇವೆಲ್ಲರದರ ವಿಚಾರದ ತಳಮಳದಲ್ಲಿಯೇ ನಾವು ಯಾವಾಗಲೂ ಇರಬೇಕೆ? ಈ ರೀತಿಯ ಪ್ರಶ್ನೆಗಳನ್ನು ಸನ್ಮಾನ್ಯ ಡಿ.ವಿ. ಗುಂಡಪ್ಪನವರು ತಮ್ಮನ್ನೇ ತಾವು ಕೇಳಿಕೊಳ್ಳುತ್ತಾ, ಓದುಗರ ಮುಂದೆ ಪ್ರಸ್ತಾಪಿಸುತ್ತಾರೆ.

ಈ ರೀತಿಯ ಸಂದೇಹಗಳು ಎಲ್ಲ ಕಾಲಕ್ಕೂ ಎಲ್ಲ ವಿಚಾರವಂತರಿಗೂ ಮನದಲ್ಲಿ ಉದ್ಭವವಾಗುತ್ತದೆ. “ಕಿಮೇಕಂ ದೈವತಂ ಲೋಕೆ? ಕಿಂ ವಾಪ್ಯೇಕಂ ಪರಾಯಣಂ? ಸ್ತುವನ್ತಃ ಕಂಕಮರ್ಚಂತಃ ಪ್ರಾಪ್ನುಯುರ್ಮಾನವಾಃ ಶುಭಂ? ಕೋ ಧರ್ಮಃ ಸರ್ವ ಧರ್ಮಾಣಾಂ ಭವತಃ ಪರಮೌ ಮತಃ? ಕಿಂ ಜಪನ್ಮುಚ್ಯತೇರ್ಜಂತುರ್ ಜನ್ಮ ಸಂಸಾರ ಬಂಧನಾತ್” ಇವು ಮಹಾಭಾರತದಲ್ಲಿ ಧರ್ಮರಾಯನು ಭೀಷ್ಮರು ಶರ ಶಯ್ಯೆಯಲ್ಲಿರುವಾಗ, ಸಂಜೆ ನಡೆಯುವ ಸತ್ಸಂಗದಲ್ಲಿ ಕೇಳುವ ಪ್ರಶ್ನೆ. ಒಬ್ಬನೇ ದೇವನಾರು? ಎಲ್ಲಕ್ಕಿಂತ ಮಿಗಿಲಾದ ಧರ್ಮವಾವುದು? ಎಂಬ ಸಂದೇಹಗಳು ಧರ್ಮರಾಯನಿಗೇ ಬರುವುದಾದರೆ, ಇನ್ನು ನಮಗೆ ಎಂತಹ ಸಂದೇಹಗಳು ಬರಬೇಕು ಹೇಳಿ? ಇದು ಸಹಜ. ಈ ಸೃಷ್ಟಿಯ ರಹಸ್ಯವನ್ನು ಭೇಧಿಸಲು ಅಷ್ಟು ಸುಲಭವೇ?

ದೇವನೊಬ್ಬ ನಾಮ ಹಲವು ಎಂಬ ಮಾತು ಎಲ್ಲರಿಗೂ ಗೊತ್ತಿರುವುದೇ, ಆದರೆ ಆ ದೇವನಾರು? ಮೂರ್ತರೂಪದಲ್ಲಿಹನೆ? ಅಥವಾ ಅಮೂರ್ತನೆ? ಅಂದರೆ ಆಕಾರ ಉಂಟೆ, ಇಲ್ಲವೇ? ಆ ಜಗತ್ತಿಗೆ ಮತ್ತು ಜಗತ್ತಿನ ಜೀವಿಗಳಿಗೆ ಅವನು ನಾಯಕನೇ? ಧರ್ಮಕ್ಕೆ ನಮ್ಮಲ್ಲಿ ಬಹಳ ಪ್ರಾಧಾನ್ಯವಿದೆ. ಧರ್ಮವೆಂದರೆ, ಒಂದು ವಸ್ತುವಿನ ಸ್ವಭಾವ ಎನ್ನುವ ಅರ್ಥವೂ ಇದೆ. ಹಾಗೆಯೇ, ಧರ್ಮಕ್ಕೆ ಬೇರೆ ಬೇರೆಯವರು ಬೇರೆ





ಬೇರೆ ರೀತಿಯಲ್ಲಿ ವ್ಯಾಖ್ಯಾನ ಮಾಡಿದ್ದಾರೆ. ಹಾಗಾಗಿ ಜಗತ್ತಿನಲ್ಲಿ ಇಷ್ಟೊಂದು ಭಿನ್ನ ಭಿನ್ನ ಮತಗಳು. ಅಂತಹ ಧರ್ಮವೇ ಈ ಜಗತ್ತಿನ ನಾಯಕನೇ? ಎನ್ನುವ ಪ್ರಶ್ನೆಯೂ ಸಹ ಬರುತ್ತದೆ. ವಿಧಿ ಎಂದರೆ ಪೂರ್ವ ನಿಯಮಿತ ಅಥವಾ ನಿರ್ಧಾರಿತ ಕ್ರಮ ಎಂದು ಅರ್ಥ. ಮೊದಲೇ ವಿಧಿಸಿದ ರೀತಿ, ಹಣೆಯ ಬರಹವೆಂದೂ ಅನ್ನುತ್ತಾರೆ. ನಮ್ಮ ಬದುಕನ್ನು ನಡೆಸುವುದು ಈ ಹಣೆಯ ಬರಹವೇ? ಯಾವುದಾದರೂ ಆಗಲಿ ಅಥವಾ ಇರಲಿ, ಈ ಜಗತ್ತಿನ ಅಸಮತೆ, ಅಸಮಾನತೆ, ವೈಚಿತ್ರ್ಯ, ಅಥವಾ ಅವ್ಯವಸ್ಥೆಯು ಸರಿಯಾಗುವ ಬಗೆ ಇದೆಯೋ ಇಲ್ಲವೋ? ಅಥವಾ ಇದನ್ನು ಅರಿಯುವ ಮತ್ತು ನಿರ್ಧರಿಸುವ ತಳಮಳದಲ್ಲಿಯೇ ನಾವು ಎಂದಿಗೂ ಇರಬೇಕೆ? ಎನ್ನುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ದೇವರನ್ನೇ ನಂಬುವ, ದೇವರನ್ನು ಮತ್ತು ಧರ್ಮವನ್ನು ನಂಬುವ (ಇಲ್ಲಿ ಧರ್ಮ ಬೇರೆಯಲ್ಲ ದೇವರು ಬೇರೆಯಲ್ಲ ಎಂಬ ವಾದ ಮಾಡುವವರೂ ಉಂಟು) ದೇವರನ್ನು ಮತ್ತು ವಿಧಿಯನ್ನು ಎಂದರೆ ಹಣೆಬರಹವನ್ನೇ ನಂಬುವ ಮತ್ತು ಸ್ವಶಕ್ತಿಯನ್ನೇ ನಂಬುವ, ಎಲ್ಲ ರೀತಿಯ ಜನರು ಜಗತ್ತಿನ ಎಲ್ಲೆಡೆಯಲ್ಲೂ, ಎಲ್ಲ ಮತಗಳಲ್ಲೂ ಇದ್ದಾರೆ. ಕಾರಣವೇ ತಿಳಿಯದ, ಈ ಜಗತ್ತಿನ ಅಸಮಾನತೆ, ಜಗತ್ತಿನಲ್ಲಿ ಎಲ್ಲೆಲ್ಲೂ ಇದೆ ಅಲ್ಲವೆ? ಇದು ಏಕೆ ಹೀಗೆ? ಇದು ಸರಿಯಾಗುವುದೋ ಇಲ್ಲವೋ? ಎನ್ನುವ ನೆನೆಗುದಿಯಲ್ಲೇ ಮಾನವರು ಬದುಕು ದೂಡುತ್ತಿದ್ದಾರೆ. ಇಂತಹ ಭಾವಗಳನ್ನೇ ವ್ಯಕ್ತಪಡಿಸುತ್ತಾರೆ ಮಾನ್ಯ ಗುಂಡಪ್ಪನವರು, ಈ ಮುಕ್ತಕದಲ್ಲಿ. ಇಂತಹ ಸಂದೇಹಗಳು ನಮ್ಮ-ನಿಮ್ಮ ಮತ್ತು ಸಕಲರಲ್ಲೂ ಉಂಟಾಗುತ್ತದಲ್ಲವೇ?

**ಮುಕ್ತಕ-8** **ಕ್ರಮವೊಂದು ಲಕ್ಷ್ಯವೊಂದುಂಟೇನು ಸೃಷ್ಟಿಯಲಿ?**

**ಭ್ರಮಿಪುದೇನಾಗಾಗ ಕರ್ತೃವಿನ ಮನಸು?**

**ಮಮತೆಯುಳ್ಳವನಾತನಾದೊಡೀ ಜೀವಗಳು**

**ಶ್ರಮಪಡುವುದೇಕಿಂತು ?-ಮಂಕುತಿಮ್ಮ**

ಮಮತೆಯುಳ್ಳವನಾತನಾದೊಡೀ=ಮಮತೆ+ಉಳ್ಳವನ್+ಆತನ+ಆಡೋದೇಈಕರ್ತೃ=ಜಗತ್ತನ್ನು ಸೃಷ್ಟಿದವ, ಆದೊಡೆ=ಆದರೆ, ಶ್ರಮ=ಕಷ್ಟ, ಕ್ರಮವು=ರೀತಿ, ಲಕ್ಷ್ಯವು=ಗುರಿ (pur- pose), ಭ್ರಮಿಪುದು=ವಿಕಾರಗೊಳ್ಳುವುದು ಅಥವಾ ವಿಚಲಿತವಾಗುವುದು,

ಇಲ್ಲಿ ಗುಂಡಪ್ಪನವರು ಕೇಳುವ ಪ್ರಶ್ನೆ ಹೀಗಿದೆ "ಈ ಭಗವಂತನ ಸೃಷ್ಟಿಯಲ್ಲಿ ಒಂದು ಕ್ರಮ ಅಥವಾ ಗುರಿ ಏನಾದರೂ ಇದೆಯೇ? ಈ ಸೃಷ್ಟಿಕರ್ತನ ಮನಸ್ಸು ಏಕೆ ಆಗಾಗ ವಿಚಲಿತವಾಗಿ ಎಲ್ಲೆಲ್ಲೋ ಹರಿದಾಡುತ್ತದೆ. ತಾನು ಸೃಷ್ಟಿಸಿದ ಜೀವಿಗಳ ಮೇಲೆ ಅವನಿಗೆ ಪ್ರೀತಿ ವಾತ್ಸಲ್ಯಗಳು ಇರುವುದಾದರೆ ಈ ಜೀವಿಗಳು ಏತಕ್ಕಾಗಿ ಈ ರೀತಿಯ ಕಷ್ಟಗಳನ್ನು ಅನುಭವಿಸುತ್ತವೆ? ಗುಂಡಪ್ಪನವರ ಮನಕರಗಿ ಇಂತಹ ಪ್ರಶ್ನೆಗಳನ್ನು ತಮ್ಮನ್ನು ತಾವೇ ಕೇಳಿಕೊಳ್ಳುತ್ತಾ, ಓದುಗರ ಮುಂದಿಡುತ್ತಾರೆ.





ಇದೀ ಜಗತ್ತಿನ ಆಗು ಹೋಗುಗಳಿಗೆ ಏನಾದರೂ ಒಂದು ಕ್ರಮವಿದೆಯೇ ಎಂದು ಅವರ ಪ್ರಶ್ನೆ. ಇದೆ ಎಂದು ಹೇಳಬಹುದು. ಹಗಲು ರಾತ್ರಿಗಳು ಭೂಮಿಯ ಸುತ್ತುವಿಕೆಯಿಂದ ಆಗುತ್ತದೆ. ಭೂಮಿಯೂ ಒಂದು ಲೆಕ್ಕಾಚಾರದಲ್ಲೇ ಸುತ್ತುತ್ತದೆ. ಹಾಗೆ ಸುತ್ತುವುದರಿಂದ ಋತುಮಾನಗಳು, ಬಿಸಿಲು, ಮಳೆ, ಚಳಿ ಮತ್ತು ಗಾಳಿ ಕಾಲಗಳು. ಬೆಳೆಗಳು, ಹೂ, ಹಣ್ಣುಗಳಿಗೂ ಒಂದೊಂದು ಕಾಲ.

ಆದರೂ ಆಗಾಗ ನಮಗರಿಯದಂತ ವ್ಯತ್ಯಾಸಗಳು ಆಗುತ್ತವೆ. ಅತೀವೃಷ್ಟಿ-ಅನಾವೃಷ್ಟಿಗಳು, ಜ್ವಾಲಾಮುಖಿಗಳು, ಭೂಕಂಪಗಳು, ಯುದ್ಧಗಳು, ಹೀಗೆ ಮಾನವನಿಗೆ ಮತ್ತು ಜೀವಿಗಳಿಗೆ ಮಾರಕವಾದ ನೈಸರ್ಗಿಕ ವಿದ್ಯಮಾನಗಳು ನಡೆಯುವಾಗ, ಏಕೆ ಈ ಭಗವಂತನ ಸೃಷ್ಟಿಯಲ್ಲಿ ಒಂದು ಕ್ರಮವೇ ಇಲ್ಲವೇ ಮತ್ತು ಇದನ್ನೆಲ್ಲಾ

ಆಗಗೊಡುವ ಆ ಪರಮಾತ್ಮನ ಮನಸ್ಸು ಏಕೆ ವಿಚಲಿತಗೊಳ್ಳುತ್ತದೆ? ಎಂಬ ಪ್ರಶ್ನೆ ಸಹಜವಾಗಿಯೇ ಮೂಡುತ್ತದೆ. ಅಂತಹ ಪ್ರಶ್ನೆಯನ್ನೇ ಡಿ.ವಿ.ಜಿ.ಯವರು ಕೇಳುತ್ತಾರೆ.

ಈ ಜಗತ್ತಿನಲ್ಲಿ ನಡೆಯುವ ಜೀವನದ ನಾಟಕದಲ್ಲಿ ಒಬ್ಬೊಬ್ಬರು ಒಂದು ರೀತಿ. ಒಬ್ಬರಂತೆ ಒಬ್ಬರಿಲ್ಲ, ಒಬ್ಬರ ಯೋಚನೆಯಂತೆ ಮತ್ತೊಬ್ಬರದಿಲ್ಲ, ಪ್ರತಿಯೊಬ್ಬರ ಆಸೆ ಆಕಾಂಕ್ಷೆಗಳೂ ಭಿನ್ನ ಭಿನ್ನ ಅಲ್ಲವೇ? ಅವನ ಬುದ್ಧಿ ಏಕೆ ಹಾಗೆ ಭಿನ್ನ ಭಿನ್ನ ಎನ್ನುವುದಕ್ಕೆ ವಿಜ್ಞಾನಿಗಳು, ಶಾಸ್ತ್ರಜ್ಞರೂ, ತತ್ವವೇತ್ತರೂ ಸಹ ಭಿನ್ನ ಭಿನ್ನವಾದ ವ್ಯಾಖ್ಯಾನ ಮಾಡುತ್ತಾರೆ. ಹಾಗಾಗಿ ಭಿನ್ನತೆಯೇ ಜೀವನದ ಲಕ್ಷಣ ಅಥವಾ ಗುಣ.

ಈ ಭಿನ್ನತೆಗೂ ಆ ಪರಮಾತ್ಮನೇ ಕಾರಣನೋ? ಎಂದರೆ, ಅಹುದು ಮತ್ತು ಅಲ್ಲ. ಇಲ್ಲಿ ಎರಡು ವಿಚಾರಗಳಿವೆ. ಒಂದು “ಎಲ್ಲವೂ ಪರಮಾತ್ಮನ ಇಚ್ಚೆಯಂತೆ ನಡೆಯುತ್ತದೆ” ಎಂದರೆ ಈ ಭಿನ್ನತೆಯೂ ಅವನ ಇಚ್ಚೆಯಂತೆಯೇ ಎಂದು ಆಯಿತು. “ಪ್ರತಿ ಜೀವಿಯೂ ಅವನವನ ಕರ್ಮಕ್ಕನುಗುಣವಾಗಿ ಫಲಾಫಲಗಳನ್ನು ಪಡೆದು ಜೀವಿಸುತ್ತಾನೆ” ಎಂದಾದರೆ ಇಲ್ಲಿ, ಪರಮಾತ್ಮನ ಪ್ರಮೇಯ ಕಡಿಮೆ. ಆದರೆ “ಇದೋ” ಅಥವಾ “ಅದೋ” ಎನ್ನುವ ದ್ವಂದ್ವ ಸಹ ಸದಾ ಮಹಾ ಮಹಾ ಪಂಡಿತರನ್ನೇ ಕಾಡಿದೆ ಮತ್ತು ಇಂದಿಗೂ ಇತ್ಯರ್ಥವಾಗದೆ ಉಳಿದಿದೆ.

ಈ ಮುಕ್ತಕಕ್ಕೆ ಮತ್ತು ಈ ಮುಕ್ತಕದ ಹಿಂದಿನ ನಾಲ್ಕು ಮುಕ್ತಕಗಳಿಗೂ ಮತ್ತು ಮುಂದೆ ಬರುವ ಮುಕ್ತಕಗಳಿಗೂ ಒಂದು ಹಿನ್ನೆಲೆಯುಂಟು. ಗುಂಡಪ್ಪನವರು ಈ ಕಗ್ಗವನ್ನು ಮೊದಲು ಪ್ರಕಟಿಸಿದ್ದು 1943ರಲ್ಲಿ. ಆಗ ಜಗತ್ತಿನೆಲ್ಲೆಲ್ಲೂ ಬರ, ಅನಾವೃಷ್ಟಿ, 2ನೇ ವಿಶ್ವ ಯುದ್ಧದ ಕಾಲ. ಎಲ್ಲೆಲ್ಲೂ ಹಾಹಾಕಾರ, ಆಕ್ರಂದನ, ಬಡತನ, ಆಹಾರದ ಕೊರತೆ, ರೋಗ-ರುಜಿನಗಳ ಮಹಾಪೂರ, ಹೀಗೆ ಹತ್ತು ಹಲವಾರು ಪ್ರಕೋಪಗಳಿಗೆ ಬಲಿಯಾಗಿ ಜನರು ತೊಳಲಾಡುತ್ತಿದ್ದರು. ಹಾಗಾಗಿ ಡಿ.ವಿ.ಜಿ.ಯವರು ಅಂದಿನ ಪರಿಸ್ಥಿತಿಗೆ ಪ್ರತಿಕ್ರಿಯೆಯ ರೂಪದಲ್ಲಿ, "ಆ ಪರಮಾತ್ಮನು ಎಲ್ಲರನ್ನೂ ಸೃಷ್ಟಿಸಿ, ಎಲ್ಲರಲ್ಲೂ ಸಮಾನವಾದ ಪ್ರೀತಿ ಇದ್ದರೆ ಈ ರೀತಿಯ ಸಂಕಷ್ಟಗಳು ಜನರಿಗೆ ಏಕೆ?" ಎಂಬಂತಹ ಕರುಣಾ ಪೂರಿತವಾದ ಪ್ರಶ್ನೆಗಳನ್ನು ತಮಗೆ ತಾವೇ ಕೇಳಿಕೊಳ್ಳುತ್ತಾರೆ.

ಆದರೆ ವಾಚಕರೇ, ಅಂದಿನ ಸ್ಥಿತಿಗೂ ಇಂದಿನ ಸ್ಥಿತಿಗೂ ಏನೂ ವ್ಯತ್ಯಾಸವಿಲ್ಲ. ಪ್ರಪಂಚದಲ್ಲಿ ಮಾನವನ ಜೀವನ ಇನ್ನಷ್ಟು ಕ್ಲಿಷ್ಟವಾಗಿದೆ, ಇನ್ನಷ್ಟು ಹದಗೆಟ್ಟಿದೆ, ಸ್ವಾರ್ಥದ ಬುದ್ಧಿ ಇನ್ನಷ್ಟು ಬಲವಾಗಿದೆ, ದೇಶ-

ದೇಶಗಳ ನಡುವೆ ದ್ವೇಷದ ಭಾವ ಇನ್ನೂ ಹಾಗೆ ಇದೆ. ಹಳೆಯದನ್ನು ಮರೆತು, ಪ್ರೀತಿ ವಿಶ್ವಾಸದಲಿ, ತೃಪ್ತಿ ಸಂತೋಷದಲಿ, ಬದುಕಿ ಪ್ರಗತಿಯತ್ತ ಹೋಗಲು ಯಾರಿಗೂ ಇಷ್ಟವಿಲ್ಲ. ಹಾಗಾಗಿ ಮಾನ್ಯ ಗುಂಡಪ್ಪನವರು ಅಂದು ಕೇಳಿದ ಪ್ರಶ್ನೆಗಳು ಇಂದಿಗೂ ಪ್ರಸ್ತುತ. ಅವರ ವಿಚಾರಗಳನ್ನು ನಮ್ಮ ಮನಸ್ಸುಗಳಲ್ಲೂ ವಿಚಾರದ ಒರೆಗೆ ಹಚ್ಚಿ ನೋಡೋಣ ಬನ್ನಿ ಮಿತ್ರರೇ.

# ಮಾನವರೋ ದಾನವರೋ 9-13

**ಮುಕ್ತಕ-9**

**ಏನು ಭೈರವಲೀಲೆಯೀ ವಿಶ್ವಭ್ರಮಣೆ |**
**ಏನು ಭೂತಗ್ರಾಮನರ್ತನೋನ್ಮಾದ ||**
**ಏನಗ್ನಿ ಗೋಳಗಳು ! ಏನಂತರಾಳಗಳು |**
**ಏನು ವಿಸ್ಮಯ ಸೃಷ್ಟಿ!-ಮಂಕುತಿಮ್ಮ ||**

ಭೈರವಲೀಲೆಯೀ=ಭೈರವ+ಲೀಲೆಯು+ಈ,
ಭೂತಗ್ರಾಮನರ್ತನೋನ್ಮಾದ=ಭೂತ+ಗ್ರಾಮ+ನರ್ತನ+ಉನ್ಮಾದ, ಏನಗ್ನಿ=ಏನು+ಅಗ್ನಿ,
ಭೈರವ=ಪರಮ ಶಿವ, ರುದ್ರ, ಉನ್ಮಾದ=ಉದ್ವೇಗ, ಗೋಳ=ಉಂಡೆ, ವಿಸ್ಮಯ=ಆಶ್ಚರ್ಯ.

ಏನಿದು ಭೈರವ ಲೀಲೆ? ಏನಿದು ಇಡೀ ವಿಶ್ವದ ಸುತ್ತಾಟ? ಏನಿದು ಪಂಚ ಮಹಾಭೂತಗಳ ಮತ್ತು ಆ ಭೂತಗಳ ವಾಸಸ್ಥಳವಾದ ಆ ಮಹಾ ಚೈತನ್ಯ ಮತ್ತು ಆ ಚೈತನ್ಯದ ಉನ್ಮಾದಭರಿತ ನರ್ತನ? ಏನಿದು ಅಗ್ನಿ ಗೋಳಗಳು, ಈ ಸೃಷ್ಟಿಯ ಅಂತರಾಳ? ಆಹಾ ಎಂತಹ ಈ ವಿಸ್ಮಯ ಈ ಸೃಷ್ಟಿ! ಇದು ಈ ಮುಕ್ತಕದ ಆಂತರ್ಯದ ಭಾವ.

ರುದ್ರ ತಾಂಡವ ಎನ್ನುವ ಅರ್ಥದಲ್ಲಿ ಈ ವಿಶ್ವದ ಸೃಷ್ಟಿಯನ್ನು ವಿಸ್ಮಯವೆಂದು ಕರೆಯುತ್ತಾರೆ ಶ್ರೀ ಗುಂಡಪ್ಪನವರು. ಹೌದು ಇದು ವಿಸ್ಮಯವೇ ಸರಿ. ಆ ಹಿಂದೆಯೇ ವಿವರಿಸಿದಂತೆ ಸೌರವ್ಯೂಹಗಳು, ಕ್ಷೀರಪಥಗಳು, ಆಕಾಶಗಂಗೆಗಳು ಮತ್ತು ಇಡೀ ವಿಶ್ವ ಈ ವಿಶ್ವದ ಆಂತರ್ಯದಲ್ಲಿ ನಡೆಯುವ ಅಗ್ನಿಸೋಟಗಳು, ಹೊಸ ಹೊಸ ನಕ್ಷತ್ರಗಳ, ಗ್ರಹಗಳ ಹುಟ್ಟು, ಸಿಡಿತ, ಒಂದರೊಳಗೆ ಒಂದು ವಿಲೀನವಾಗುವ ಪ್ರಕ್ರಿಯೆ, ಇವೆಲ್ಲವನ್ನೂ ನಾವು ಕಾಣುವುದಿರಲಿ, ಊಹಿಸಲೂ ಅಸಾಧ್ಯವಾದ ರೂಪ. ಅದನ್ನು ಪರಶಿವನ ಅಥವಾ ನಟರಾಜನ ರುದ್ರ ತಾಂಡವಕ್ಕೆ

ಹೋಲಿಸುತ್ತಾರೆ. ಈ ಸೃಷ್ಟಿ, ಸೃಷ್ಟಿಯಲ್ಲಿನ ಪಂಚ ಮಹಾಭೂತಗಳು ಮತ್ತು ಅವುಗಳ ಕಾರ್ಯ ವೈಖರಿಯೂ ಸಹ, ಊಹಾತೀತ. ಇದೊಂದು ಯಾರಿಗೂ ಅರ್ಥವಾಗದ ವಿಸ್ಮಯವೆನ್ನುತ್ತಾರೆ ಮಾನ್ಯ ಗುಂಡಪ್ಪನವರು.

152 ದಶಲಕ್ಷ ಕಿಲೋಮೀಟರ್ ದೂರದಲ್ಲಿರುವ ನಮ್ಮ ಸೌರಮಂಡಲದ ಸೂರ್ಯನಿಂದ ಹೊರಟ ಬೆಳಕು ಭೂಮಿಯನ್ನು ತಲುಪಲು ಬೇಕಾಗುವ ಸಮಯ 8.28 ನಿಮಿಷಗಳು. ಸೂರ್ಯ ಒಂದು ನಕ್ಷತ್ರ ನಮಗೆ ಆಕಾಶದಲ್ಲಿ ಕಾಣುವ ಅನ್ಯ ಅನೇಕ ನಕ್ಷತ್ರಗಳಂತೆ, 152 ದಶಲಕ್ಷ ಕಿಲೋಮೀಟರ್ ದೂರದಲ್ಲಿದ್ದರೂ ಇಷ್ಟು





ಹತ್ತಿರದಲ್ಲಿ ಕಂಡಂತೆ ಕಂಡು ಇಷ್ಟು ಬೆಳಕನ್ನು ಮತ್ತು ಶಾಖವನ್ನು ನೀಡುತ್ತಾನೆ. ಬೇಸಿಗೆ ಕಾಲದಲ್ಲಿ ಅವನ ಶಾಖವನ್ನು ತಡೆಯಲಾರದೆ ಸಾವನ್ನಪ್ಪುವ ಜನರೆಷ್ಟೋ! ಇದನ್ನೇ ಅಗ್ನಿ ಗೋಳವೆಂದರು ಶ್ರೀ ಗುಂಡಪ್ಪನವರು.

ವಾಚಕರೆ ಯೋಚಿಸಿ, ಇಷ್ಟು ಹತ್ತಿರ ಕಾಣುವ ನಮ್ಮ ಸೂರ್ಯನೇ 152 ದಶಲಕ್ಷ ಕಿಲೋಮೀಟರ್ ದೂರದಲ್ಲಿದ್ದಾನೆಂದರೆ, ಇನ್ನು ನಮ್ಮ ಕಣ್ಣಿಗೆ ಬೆಳ್ಳಿ ಚುಕ್ಕಿಯಂತೆ ಕಾಣುವ ಎಷ್ಟೋನಕ್ಷತ್ರಗಳು ಎಷ್ಟು ದೂರದಲ್ಲಿರಬೇಕು? ನಮ್ಮ ಸೌರಮಂಡಲದ ಸೂರ್ಯನ ನಂತರ ನಮಗೆ ಹತ್ತಿರದಲ್ಲಿರುವ ನಕ್ಷತ್ರವೆಂದರೆ "ಆಲ್ಫಾ ಸೆಂಚ್ಯುರಿ" ಅಥವಾ "ಮ್ಯಾಗ್ಜಿಮಾ ಸೆಂಚ್ಯುರಿ". ಇದು ನಮಗೆ ಎಷ್ಟು ದೂರದಲ್ಲಿದೆಯೆಂದರೆ, ಅಲ್ಲಿಂದ ಹೊರಟ ಬೆಳಕು ನಮ್ಮ ಭೂಮಿಯನ್ನು ತಲುಪಬೇಕಾದರೆ 4.7 ವರ್ಷಗಳು ಬೇಕಾಗುತ್ತದೆ. ಇನ್ನೂ ದೂರದಲ್ಲಿರುವ ನಕ್ಷತ್ರಗಳ ದೂರವೆಷ್ಟೋ, ನಮಗೆ ಕಾಣದಿರುವ ನಕ್ಷತ್ರಪುಂಜಗಳೆಷ್ಟೋ!! ಅಂದರೆ ಈಗ ನಾವು ಒಂದು ನಕ್ಷತ್ರವನ್ನು ನೋಡುತ್ತಿದ್ದೇವೆ ಎಂದರೆ ಅಲ್ಲಿಂದ ಎಂದೋ ಹೊರಟ ಬೆಳಕನ್ನು ನಾವು ಇಂದು ನೋಡುತ್ತಿದ್ದೇವೆ ಎಂದು ಅರ್ಥ. ಹಾಗೆ ನಮಗೆ ಕಾಣುವ ಅತೀ ದೂರದ ನಕ್ಷತ್ರ ನಮಗಿಂತ ಎಷ್ಟು ದೂರದಲ್ಲಿರಬಹುದು. ಕಾಣುವುದೇ ಎಷ್ಟೋ ದೂರದಲ್ಲಿದ್ದರೆ ಕಾಣದ್ದೆಷ್ಟೋ ಯಾರಿಗೆ ಗೊತ್ತು. ಇಂತಹ ವಿಶ್ವ, ನಮ್ಮ ಯೋಚನೆಗೂ ನಿಲುಕದ ಅದ್ಭುತ ಸೃಷ್ಟಿ. ಇದನ್ನೇ ಮಾನ್ಯ ಗುಂಡಪ್ಪನವರು "ಏನಂತರಾಳಗಳು ಏನು ವಿಸ್ಮಯ ಸೃಷ್ಟಿ!!!!"ಎಂದರು.

ಈ ಸೃಷ್ಟಿಯ ಗೂಢ ನಿಗೂಢ ವಿಸ್ಮಯಗಳು. ಅಬ್ಬ! ಎಂತಹ ವಿಚಿತ್ರ. ಇದನ್ನೇ ಗುಂಡಪ್ಪನವರು ವಿಸ್ಮಯ ಅಥವಾ ವಿಚಿತ್ರವೆನ್ನುತ್ತಾರೆ. ಈ ಸೃಷ್ಟಿಯನ್ನು ಒಂದು ಸೂತ್ರದಲ್ಲಿ ಹಿಡಿದಿಟ್ಟಿರುವ ಆ ಪರಮ ಶಕ್ತಿ. ಇವುಗಳ ಮುಂದೆ ನಾವೆಷ್ಟರವರು? ನಮ್ಮ ಸಾಮರ್ಥ್ಯದ ಮಿತಿ ಏನು? ನಾವು ಅಹಂಕಾರಪಡಲು ಏನಾದರೂ ಕಾರಣವಿದೆಯೇ? ಯೋಚಿಸಿ ವಾಚಕರೆ. ಈ ವಿಸ್ಮಯಭರಿತ ಮತ್ತು ವಿಚಿತ್ರವಾದ ವಿಶ್ವ, ಅದರ ನಿಗೂಢತೆ ಮತ್ತು ಇದರ ಸೃಷ್ಟಿಕರ್ತನ ಸಾಮರ್ಥ್ಯಗಳ ಅವಲೋಕಿಸೋಣವೇ?

**ಮುಕ್ತಕ-10**

**ಏನು ಪ್ರಪಂಚವಿದು! ಏನು ಧಾಳಾಧಾಳಿ |**
**ಏನದ್ಭುತಾಪಾರಶಕ್ತಿನಿರ್ಘಾತ! |**
**ಮಾನವನ ಗುರಿಯೇನು? ಬೆಲೆಯೇನು? ಮುಗಿವೇನು? |**
**ಏನರ್ಥವಿದಕೆಲ್ಲ? ಮಂಕುತಿಮ್ಮ ||**

ಏನದ್ಭುತಾಪಾರಶಕ್ತಿ ನಿರ್ಘಾತ=ಏನು ಅದ್ಭುತ+ಅಪಾರ+ಶಕ್ತಿ,
ನಿರ್ಘಾತ=ಹೊಡೆತ.

ಇಲ್ಲಿಯವರೆಗೆ ಬಂದ ೨ ಮುಕ್ತಕಗಳಲ್ಲಿ, ಮೊದಲ ಮೂರು ಮುಕ್ತಕಗಳಲ್ಲಿ, ಶ್ರೀ ಗುಂಡಪ್ಪನವರು, ಆ ಪರಮಾತ್ಮನೆಂದೆನಿಸಿಕೊಂಡ, ಪರಮಶಕ್ತಿಗೆ ನಮಿಸುತ್ತಾ, ಮುಂದಿನ ಮುಕ್ತಕಗಳಲ್ಲಿ ಮನುಷ್ಯನ ಜೀವನದ ಮತ್ತು ಸೃಷ್ಟಿಯ ವಿಚಿತ್ರಗಳನ್ನು ಬರೆದಿದ್ದಾರೆ. ಈ ಸಮಯಕ್ಕೆ ನಾ ಹಿಂದೆ ಹೇಳಿದಂತೆ ಎರಡನೇ ಮಹಾಯುದ್ಧ ಆರಂಭವಾಗಿ ಎಲ್ಲೆಲ್ಲೂ ಹಾಹಾಕಾರ ಧಾಳಿಗಳು. ಇವುಗಳನ್ನು ಕಂಡು ಅಂದಿನ ಸಮಯಕ್ಕೆ ಅವರ ಅನುಭೂತಿ ಏನಿತ್ತು ಎಂಬುದು ಮುಂದಿನ ಕೆಲವು ಮುಕ್ತಕಗಳಲ್ಲಿ ಕಾಣಬಹುದು.





ಈ ಪ್ರಪಂಚಕ್ಕೆ ಏನಾಗಿದೆ? ಏಕೆ ಈ ಮುತ್ತಿಗೆಗಳು? ಏನು ಈ ಹೊಡೆತಗಳು ಮತ್ತು ಆ ಹೊಡೆತಗಳ ಹಿಂದಿನ ಅಪಾರ ಶಕ್ತಿ ಏನು? ಮಾನವನ ಗುರಿಯೇನು? ಇದಕ್ಕೆಲ್ಲ ಬೆಲೆಯೇನು? ಇದಕ್ಕೆಲ್ಲ ಅಂತ್ಯವೇನು? ಮತ್ತು ಇದಕ್ಕೆಲ್ಲ ಏನು

ಅರ್ಥ ಎಂಬ ಭಾವಗಳನ್ನು ವ್ಯಕ್ತಪಡಿಸುತ್ತಾ ಅಂದು ನಡೆಯುತ್ತಿದ್ದ ಪ್ರಾಪಂಚಿಕ ವಿದ್ಯಮಾನಗಳನೆಲ್ಲ ಒಟ್ಟುಗೂಡಿಸಿ ಹಲವು ಪ್ರಶ್ನೆಗಳನ್ನು ನಮ್ಮ ಮುಂದಿಡುತ್ತಾರೆ.

ಯಾರೋ ಒಬ್ಬ ಸರ್ವಾಧಿಕಾರಿಯ ಅಧಿಕಾರ ದಾಹ, ಅಧಿಕಾರವನ್ನು ವಿಸ್ತರಿಸುವ ಮಹತ್ವಾಕಾಂಕ್ಷೆ ಮತ್ತು ಅಹಂಕಾರವನ್ನು ತಣಿಸುವ ಅತೀ ಆಸೆಗೆ ಬಲಿಯಾದದ್ದು ಇಡೀ ವಿಶ್ವ ಒಂದು ರಾಷ್ಟ್ರ ಮತ್ತೊಂದು ರಾಷ್ಟ್ರದ ಮೇಲೆ ದಾಳಿ. ಆ ರಾಷ್ಟ್ರಕ್ಕೆ ಕೆಲವು ಮತ್ತು ಈ ರಾಷ್ಟ್ರಕ್ಕೆ ಕೆಲವು ರಾಷ್ಟ್ರಗಳು ಸಹಾಯಕ್ಕೆ ನಿಲ್ಲುತ್ತವೆ. ಆಗ ಈ ಎರಡೂ ರಾಷ್ಟ್ರಗಳು ಮತ್ತು ಆ ರಾಷ್ಟ್ರಗಳ ಸಹಾಯಕ್ಕೆ ನಿಂತ ಬೇರೆ ರಾಷ್ಟ್ರಗಳ ಎಲ್ಲ ಸೈನಿಕರೂ ಹೊಡೆದಾಡುತ್ತಾರೆ. ಯಾರು, ಯಾರ ಮೇಲೋ ದಾಳಿ. ದಾಳಿಗೊಳಗಾದ ರಾಷ್ಟ್ರಕ್ಕಾಗಲೀ ದಾಳಿಮಾಡಿದ ರಾಷ್ಟ್ರಕ್ಕಾಗಲೀ ದಾಳಿಯ ಕಾರಣವೇ ತಿಳಿದಿರುವುದಿಲ್ಲ. ಆದರೆ ಹೊಡೆದಾಡುವುದು, ಪಾಪ ಮುಗ್ಧ ಸೈನಿಕರು. ಕೇವಲ ಜೀವಿಕೆಗಾಗಿ, ಇದು ಮಾನವನ ಜೀವನದ ಇತಿಹಾಸದಲ್ಲಿ ನಿರಂತರವಾಗಿ ನಡೆದಿದೆ. ಕ್ರಿಸ್ತಪೂರ್ವ ಸುಮಾರು 325 ವರ್ಷದಲ್ಲಿ ಅಲೆಕ್ಸಾಂಡರನ ವಿಶ್ವ ವಿಜಯ ಯಾತ್ರೆಯಿಂದ ಹಿಡಿದು, ಇಂದಿನವರೆಗೆ ನಡೆದ ಯುದ್ಧಗಳು ಆಯಾ ರಾಷ್ಟ್ರಗಳ ನಾಯಕರ ಬೌದ್ಧಿಕ ಮತ್ತು ನೈತಿಕ ದಿವಾಳಿತನದಿಂದಲೇ (intellectual & moral bankruptcy) ನಡೆದಿದೆ ಅಲ್ಲವೆ?

ಅಂತಹ ಒಂದು ಸ್ಥಿತಿಯೇ 2ನೇ ಮಹಾಯುದ್ಧದ ಕಾಲದಲ್ಲಿ ಹಿಟ್ಲರನ ತಿಳಿಗೇಡಿತನದಿಂದಾಗಿ ಆರಂಭವಾಗಿ ವಿಶ್ವವೆಲ್ಲ ಹರಡಿ ಹಲಕೆಲವರು ಕೆಲಕೆಲವರ ಪಕ್ಷ ಹಿಡಿದು ಹೋರಾಡಿ, ಇಡೀ ಪ್ರಪಂಚವನ್ನು ವಿನಾಶದಂಚಿಗೆ ತಳ್ಳಿದರು. ಘನಘೋರ ಯುದ್ಧ, ಅಪಾರ ಶಕ್ತಿಯ ವ್ಯಯ, ಸಾವು ನೋವು, ಪ್ರತಿ ದೇಶಕ್ಕೂ ಯುದ್ಧಕ್ಕಾಗಿ ಅಪಾರ ವೆಚ್ಚ. ಆ ವೆಚ್ಚವನ್ನು ಭರಿಸಲಿಕ್ಕಾಗಿ ಅಧಿಕ ಕರಗಳು ಮತ್ತು ಕರಭಾರದಿಂದ ತತ್ತರಿಸಿದ ಪ್ರಜೆಗಳು. ಯುದ್ಧದಲ್ಲಿ ಸಾವು ನೋವುಗಳು. ಇದೂ ಸಾಲದೆಂಬಂತೆ ಅಂದು ಇಡೀ ಪ್ರಪಂಚದಲ್ಲೇ 'ಬರ'ದ ಕರಾಳ ನೃತ್ಯ. ಎಲ್ಲದಕ್ಕೂ ಕೊರತೆ, ಕಾಲರಾ, ಪ್ಲೇಗ್ ನಂತಹ ಸೋಂಕು ರೋಗಗಳ ರುದ್ರ ನರ್ತನ, ನೋವು ಮಾತ್ರ ಅಧಿಕ. ಇದನ್ನು ಕಂಡೇ ಗುಂಡಪ್ಪನವರು, "ಮಾನವನ ಗುರಿಯೇನು"? ಎಂದು ಪ್ರಶ್ನಿಸುತ್ತಾರೆ. ಇದಕ್ಕೆಲ್ಲ ಏನು ಅರ್ಥ? ಎಂದು ಕೇಳುತ್ತಾರೆ.

ವಾಚಕರೆ, ನಿಮ್ಮಲ್ಲಿ ಬಹಳಷ್ಟು ಜನಗಳಿಗೆ ಗೊತ್ತೋ ಇಲ್ಲವೋ ನನಗೆ ಗೊತ್ತಿಲ್ಲ, ಅಂದು ಅನ್ನಕ್ಕೆ ಬರ. ಬಟ್ಟೆಗೆ ಬರ. ಹಾಲು ನೀರಿಗೂ ಬರ. ಪ್ರತಿ ಊರಿನಲ್ಲೂ ಗಂಜಿ ಕೇಂದ್ರಗಳು. ಪ್ರತಿಯೊಬ್ಬರಿಗೂ ಬೆಳಗ್ಗೆ ಎರಡು ಸೌಟು ಮತ್ತು ಸಂಜೆ ಎರಡು ಸೌಟು ಗಂಜಿ, ಬಟ್ಟೆ ಬೇಕಾದರೆ, ಸರ್ಕಾರದಿಂದ ಪರವಾನಗಿ (permit) ತೆಗೆದುಕೊಂಡು ಗುಟ್ಟಲ್ಲಿ ಖರೀದಿ ಮಾಡಬೇಕಾದ ಪರಿಸ್ಥಿತಿ. ಅಂತಹ ಪರಿಸ್ಥಿತಿಗೆ ಅರ್ಥವೇನು? ಎಂದು, ಅದು ಕೇವಲ ಅಂದರೆ ಅರ್ಥಹೀನ ಎಂಬ ರೀತಿ ಗುಂಡಪ್ಪನವರು ಪ್ರಶ್ನಿಸುತ್ತಾರೆ.

ಇಂದು ಕೂಡ ಈ ಪರಸ್ಥಿತಿ ಬದಲಾಗಿಲ್ಲ. ಅಂದು ಕೊರತೆಯಿಂದ ಇಂದು ಆಧಿಕ್ಯದಿಂದ ಮಾನವನಿಗೆ ತೊಂದರೆ, ಅಹಂಕಾರದ, ದ್ವೇಷದ, ಯುದ್ಧಗಳ, ನೋವಿನ, ಕೊರತೆಗಳ ರೂಪ ಬೇರೆ ಅಷ್ಟೇ! ಇಂದು ಕೂಡ ನಾವು ಅಂದು ಅವರು ಕೇಳಿದ ಪ್ರಶ್ನೆಗಳನ್ನೇ ಕೇಳುವ ಸ್ಥಿತಿ ಇದೆ ಅಲ್ಲವೇ?

**ಮುಕ್ತಕ-11** **ಮುತ್ತಿರುವುದಿಂದು ಭೂಮಿಯನೊಂದು ದುರ್ದೈವ ।**
**ಮೃತ್ಯು ಕುಣಿಯುತಲಿಹನು ಕೇಕೆಹಾಕುತಲಿ ॥**
**ಸುತ್ತಿಪುದು ತಲೆಯನನುದಿನದ ಲೋಕದ ವಾರ್ತೆ ।**
**ಎತ್ತಲಿದಕೆಲ್ಲ ಕಡೆ ಮಂಕುತಿಮ್ಮ ॥**

ಮುತ್ತಿರುವುದಿಂದು=ಮುತ್ತಿರುವುದು+ಇಂದು, ಭೂಮಿಯನೊಂದು=ಭೂಮಿಯನು+ಒಂದು, ಮೃತ್ಯುಕುಣಿಯುತಲಿಹನು=ಮೃತ್ಯು+ಕುಣಿಯುತಲಿ+ಇಹನು, ತಲೆಯನನುದಿನದ=ತಲೆಯನು+ಅನುದಿನದ, ಎತ್ತಲಿದಕೆಲ್ಲ=ಎತ್ತಲು+ಇದಕೆಲ್ಲ.

ಸುತ್ತಿಪುದು=ಸುತ್ತಿಸುತ್ತದೆ, ಅನುದಿನವು=ಪ್ರತಿನಿತ್ಯವು, ಎತ್ತಲಿದಕೆಲ್ಲ=ಇದಕ್ಕೆಲ್ಲ ಎಲ್ಲಿ.

ಭೂಮಿಕೆ ಅದೇ. ಯುದ್ಧ, ಘೋರ ವಿಶ್ವಮಹಾಯುದ್ಧ, ಇಡೀ ವಿಶ್ವವೇ ಅಲುಗಾಡುವಂಥ ಯುದ್ಧ, ಎಲ್ಲೆಲ್ಲೂ ರಕ್ತಪಾತ, ಎಲ್ಲೆಲ್ಲೂ ಯುದ್ಧದ ಕೂಗು. ಅದು ಈ ಭೂಮಿಗೆ ಆವರಿಸಿಕೊಂಡ ದುರ್ದೈವವೆಂದು ವ್ಯಾಖ್ಯಾನಿಸುತ್ತಾರೆ ಮಾನ್ಯ ಗುಂಡಪ್ಪನವರು. ಎಲ್ಲೆಲ್ಲೂ ಮೃತ್ಯುವಿನ ತಾಂಡವ, ಯುದ್ಧದಲ್ಲಿ, ತಂದೆಯನ್ನೋ ಅಣ್ಣನನ್ನೋ, ಮಗನನ್ನೋ, ಮಿತ್ರನನ್ನೋ, ತಮ್ಮನನ್ನೋ, ಭೂಮಿಯನ್ನೋ, ಹುಟ್ಟಿದೂರಲ್ಲಿ ಬಿಟ್ಟ ಬೇರನ್ನೋ, ಆ ಊರಿನ ಮಣ್ಣಿನ ಋಣವನ್ನೋ, ಕಳೆದುಕೊಂಡವರೆ ಬಹಳ ಜನ. ಕಳೆದುಕೊಂಡವರೆಲ್ಲರಿಗೂ ನೋವು. ಕಳೆದುಕೊಳ್ಳದವರಿಗೂ ಕಳೆದುಕೊಂಡವರ ನೋವಿಗಾಗಿ ಸಂತಾಪ. ಒಟ್ಟಾರೆ ಇಡೀ ಭೂಮಿಗೆ ಸೂತಕದ ಭಾವ. ಎಲ್ಲ ಕಡೆಯಿಂದಲೂ ಸಾವಿನ ನಷ್ಟದ

ಸಮಾಚಾರ, ಪ್ರತಿನಿತ್ಯ ಈ ಸಮಾಚಾರಗಳನೆಲ್ಲ ಕೇಳಿಕೇಳಿ, ಪತ್ರಿಕೆಗಳಲ್ಲಿ ಓದಿ ಓದಿ ತಲೆ ಸುತ್ತುವಂತಾಗುತ್ತದೆ. ಇದಕ್ಕೆಲ್ಲ ಎಂದಿಗಾದರೂ ಕೊನೆಯುಂಟೆ ಎಂದು ಲೋಕಶಾಂತಿಗಾಗಿ ಮರುಗುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಆ ಯುದ್ಧದಲ್ಲಿ ಗೆಲುವು ಯಾರದಾಯಿತು ಎಂದು ಯೋಚಿಸಿದರೆ, ಗೆದ್ದದ್ದು "ಮೃತ್ಯು" ಮತ್ತೆಲ್ಲರೂ ಸೋತವರೇ!! ಆ ಯುದ್ಧದಲ್ಲೇ ಅಲ್ಲ ಯಾವುದೇ ಯುದ್ಧವನ್ನು ನಾವು ಸೂಕ್ಷ್ಮವಾಗಿ ಅವಲೋಕಿಸಿದರೆ, ಗೆಲ್ಲುವುದು "ಮೃತ್ಯು" ಮಾತ್ರ ಮಿಕ್ಕೆಲ್ಲರೂ, ಎಲ್ಲ ದೇಶಗಳೂ ಸೋಲುತ್ತವೆ. ಕೇವಲ ಮೃತ್ಯು ಗೆಲ್ಲುತ್ತದೆ. ಎರಡನೇ ಮಹಾಯುದ್ಧದ ಸಮಯದಲ್ಲಿ ಕ್ರೂರತ್ವಕ್ಕೆ ಒಂದು ಅಂತ್ಯವೇ ಇರಲಿಲ್ಲ. ಹಿಟ್ಲರನ ರಕ್ತದಾಹಕ್ಕೆ ಕೊನೆಯೇ ಇರಲಿಲ್ಲ. ಅದಕ್ಕೊಂದು ನಿದರ್ಶನವೆಂದರೆ "ಸಾಬಿಬಾರ್" ಎಂಬಲ್ಲಿ ವಿಷಾನಿಲ ಘಟಕಗಳನ್ನು ನಿರ್ಮಿಸಿ, ಶತ್ರುದೇಶದ ಸೈನಿಕರಷ್ಟೇ ಅಲ್ಲ ಸೆರೆಸಿಕ್ಕ ಸಾಮಾನ್ಯ ಪ್ರಜೆಗಳನ್ನೂ ಅಲ್ಲಿಗೆ ತಂದು, ಶಕ್ತಿ ಇರುವವರನ್ನು ಹಲವಾರು ಕೆಲಸಗಳಿಗೆ ಕೆಲಸಮಾಡಲು ಹಚ್ಚಿ, ಕೆಲಸ ಮಾಡಲಾಗದ ಸ್ತ್ರೀಯರು, ವೃದ್ಧರು, ಮಕ್ಕಳು ಹೀಗೆ ಎಲ್ಲರನ್ನೂ ಅಮಾನವೀಯ ಕ್ರೌರ್ಯದಿಂದ ಆ ವಿಷಾನಿಲ ಘಟಕದೊಳಕ್ಕೆ ತಳ್ಳಿ ಕೊಂದುಬಿಡುವ ಪರಮ





ನೀಚತನವನ್ನು ಹಿಟ್ಲರ್ ತೋರಿಸಿದ್ದ. ಅದು ಕ್ರೌರ್ಯದ ಹಲವಾರು ಮಾರ್ಗಗಳಲ್ಲಿ ಒಂದಾಗಿತ್ತು. ಎಲ್ಲ ದೇಶಗಳೂ ಒಂದಲ್ಲ ಒಂದು ದೇಶದ ಪಕ್ಷವನ್ನು ತೆಗೆದುಕೊಂಡು ಇಡೀ ವಿಶ್ವವನ್ನೇ ವಿನಾಶದ ಅಂಚಿಗೆ ತಳ್ಳುವಂಥಾ ಯುದ್ಧವನ್ನು ನಡೆಸಿದರು. ಜಪಾನಿನ ಮೇಲೆ ಬಿದ್ದ ಎರಡು ಅಣುಬಾಂಬುಗಳು, ಈ ಯುದ್ಧವನ್ನು ಒಂದು ಕೊನೆಮುಟ್ಟಿಸಿತು. ಇದು ಚರಿತ್ರೆ,

ಆದರೆ ವರ್ತಮಾನವೇನೂ ಭಿನ್ನವಾಗಿಲ್ಲ. ಇನ್ನೂ ಭೀಕರವಾಗುತ್ತಿದೆ. ಆಗ ಒಂದು ಯುದ್ಧ ನಡೆದರೆ, ಈಗ ಹಲವಾರು ಯುದ್ಧಗಳು. ವೈಜ್ಞಾನಿಕವಾಗಿ, ಆರ್ಥಿಕವಾಗಿ ಮುಂದುವರೆದ ರಾಷ್ಟ್ರಗಳು ಹಿಂದಿರುವ ರಾಷ್ಟ್ರಗಳ ಮೇಲೆ ಆಧಿಪತ್ಯ, ದಬ್ಬಾಳಿಕೆ. ಷಡ್ಯಂತ್ರ, ಒತ್ತಡ, ಅನವಶ್ಯಕ ಹಸ್ತಕ್ಷೇಪದಿಂದ ಇಂದಿಗೂ ದೇಶದೇಶಗಳ ಮಧ್ಯೆ ದ್ವೇಷದ ಭಾವ ಒಂದಿಷ್ಟೂ ಕಡಿಮೆಯಾಗಿಲ್ಲ. ಜಾತಿ, ಮತ, ಭಾಷೆ, ಎಲ್ಲೆ, ಗಡಿ, ಹೀಗೆ ಹೊಡೆದಾಟಕ್ಕೆ ಹಲವಾರು ಕಾರಣಗಳು. ತನ್ನ ಬಲದ ಕಾರಣ ಪರದೇಶಗಳಿಗೆ ಕುಂಟು ನೆಪ ಒಡ್ಡಿ ನುಗ್ಗಿ ಮಾರಣಹೋಮ ನಡೆಸಿ ಅಲ್ಲಿರುವ ಸಂಪತ್ತನ್ನು ಲೂಟಿಮಾಡುವ ಪ್ರವೃತ್ತಿ ಸರಿಸುಮಾರು ಮೂರು ಸಾವಿರ ವರ್ಷಗಳ ಹಿಂದೆಯೂ ಇತ್ತು. ಇಂದೂ ಇದೆ. ಜನಾಂಗಗಳನ್ನು ಒಂದುಗೂಡಿಸುವುದಕ್ಕೆ ಪೂರಕವಾದ ಜಾತಿ, ಮತ, ಭಾಷೆಗಳೇ ಜನರ ಮಧ್ಯೆ ದೇಶ-ದೇಶಗಳ ಮಧ್ಯೆ ವೈರಕ್ಕೆ ಕಾರಣವಾಗಿರುವುದು ಒಂದು ವಿಪರ್ಯಾಸ. ಅಷ್ಟೇ ಅಲ್ಲ, ಅಂದು ಇದ್ದ ಅಸ್ತ್ರ-ಶಸ್ತ್ರಾಸ್ತ್ರಗಳಿಗೆ ಹೋಲಿಸಿದರೆ ಇಂದು ಪ್ರಪಂಚದಲ್ಲಿ, ಇಂತಹ 'ಹತ್ತು ಪ್ರಪಂಚಗಳನ್ನು ನಿಮಿಷದಲ್ಲಿ ಧ್ವಂಸ ಮಾಡಬಲ್ಲ ಮಾರಕಾಸ್ತ್ರಗಳನ್ನು ಹೊಂದಿರುವ ಹಲವಾರು ದೇಶಗಳುಂಟು. ನಮ್ಮಲ್ಲಿ ಬತ್ತಿಯನ್ನು ಕಿತ್ತು ಸಿದ್ಧವಾಗಿರುವ ಅಸ್ತ್ರಗಳುಂಟು. ಬೆಂಕಿಕಡ್ಡಿ ಗೀರಬೇಕಷ್ಟೇ. ಸಮಗ್ರವಾಗಿ ಇದನ್ನೆಲ್ಲಾ ಸೇರಿಸಿ ದುರ್ದೈವ ಎಂದರು ಮಾನ್ಯ ಗುಂಡಪ್ಪನವರು.

ಅಂದು ಗುಂಡಪ್ಪನವರು ಖೇದ ವ್ಯಕ್ತಪಡಿಸಿದ ಕಾರಣಗಳು ಇಂದಿಗೂ ಇವೆ. ಅಷ್ಟೇ ಅಲ್ಲ, ಇನ್ನೂ ವಿಕೃತ ರೂಪಪಡೆದುಕೊಂಡು ಇಡೀ ಪ್ರಪಂಚವನ್ನೇ ಎತ್ತ ಕೊಂಡುಹೋಗುತ್ತಿದೆಯೋ ಯಾರು ಬಲ್ಲರು. ಅಂದು ಅಷ್ಟಕ್ಕೇ ಮರುಗಿದ ಗುಂಡಪ್ಪನವರು ಇಂದು ಈಸ್ಥಿತಿಯನ್ನು ನೋಡಿದರೆ ಏನು ಹೇಳಬಹುದೆಂದು ಊಹಿಸಲೂ ಕಷ್ಟ. ಇಂತಹ ವಿಚಾರಗಳನ್ನು ಮಂಥನಮಾಡುತ್ತ, ಒಂದು ಶಾಂತ ಪ್ರಪಂಚವನ್ನು ನಿರ್ಮಿಸುವ ಪ್ರಯತ್ನವನ್ನು ಮಾಡೋಣ.

**ಮುಕ್ತಕ-12**

**ಮಾನವರೋ ದಾನವರೋ ಭೂಮಾತೆಯನು ತಣಿಸೆ |**
**ಶೋಣಿತವನೆರೆಯುವರು ಬಾಷ್ಪಸಲುವುದಿರೆ? ||**
**ಏನು ಹಗೆ! ಏನು ಧಗೆ! ಏನು ಹೊಗೆ! ಯೀ ಧರಣಿ |**
**ಸೌನಿಕನ ಕಟ್ಟೆಯೇಂ? ಮಂಕುತಿಮ್ಮ ||**

ಶೋಣಿತವನೆರೆಯುವರು=ಶೋಣಿತವನು+ಎರೆಯುವರು, ಭಾಷ್ಪಸಲುವುದಿರೆ=ಭಾಷೆ+ಸಲುವುದು+ಇರೆ, ಶೋಣಿತ=ರಕ್ತ, ಭಾಷ್ಪ=ಕಣ್ಣೀರು, ಎರೆಯುವುದು=ಸುರಿಸುವುದು, ಸಲುವುದಿರೆ=ಸುರಿಸಬೇಕಾದರೆ. ಸೌನಿಕ=ಕಟುಕ, ಕಟ್ಟೆ=ಜಗುಲಿ.

15

ಮಾನವರೋ ದಾನವರೋ 9-13 ಕಗ್ಗರಸಧಾರೆ

ಇವರೇನು ಮನುಷ್ಯರೋ ಅಥವಾ ರಾಕ್ಷಸರೋ? ಈ ಭೂಮಾತೆಯನು ತಣಿಸಲು ಅಂದರೆ ದಾಹವಿಂಗಿಸಲು ಕಣ್ಣೀರು ಸುರಿಸುವ ಬದಲು ರಕ್ತವನ್ನು ಸುರಿಸಿಹರಲ್ಲ!! ಈ ಪ್ರಪಂಚದಲ್ಲಿನ ಹಗೆ ಮತ್ತು ಹೊಗೆಗಳನ್ನು ನೋಡಿದರೆ ಇಡೀ ಪ್ರಪಂಚವೇ ಕಟುಕನ ಜಗುಲಿಯಂತಿದೆ ಎನ್ನುತ್ತಾರೆ ಮಾನ್ಯ ಗುಂಡಪ್ಪನವರು.

ಮತ್ತದೇ ಯುದ್ಧದ ಸನ್ನಿವೇಶವನ್ನು ಈ ಮುಕ್ತಕದಲ್ಲೂ ಉಲ್ಲೇಖಿಸುತ್ತಾರೆ, ಶ್ರೀ ಗುಂಡಪ್ಪನವರು. ಪಾಪ ಅವರ ಮನ ಎಷ್ಟು ನೊಂದಿತ್ತೋ ಏನೋ? ಇಲ್ಲದಿದ್ದರೆ ಅಂದಿನ ವರ್ತಮಾನ ಸ್ಥಿತಿಗೆ ಇಷ್ಟೊಂದು ಪ್ರತಿಕ್ರಿಯೆ ಬರುತ್ತಿತ್ತೆ? ಇರಲಿ. ಮಾನವರಾದ ನಾವು ಮಾನವರಂತೆ ಇರದೇ ದಾನವರಂತೆ ಏಕೆ ಒಬ್ಬರಿಗೆ ಮತ್ತೊಬ್ಬರ ರಕ್ತದಾಹ, ಬಾಳುವವನು, 'ಮಾನವ' ಎನ್ನುತ್ತದೆ ಪರಿಭಾಷೆ, ಬಾಳದೆ ಯುದ್ಧಮಾಡಿ ನಾಶಕ್ಕೆ ಕಾರಣರಾದವರನ್ನು ಮಾನ್ಯ ಗುಂಡಪ್ಪನವರು ದಾನವರೆಂದು ಸೂಕ್ತವಾಗಿಯೇ ಹೇಳಿದ್ದಾರೆ.

ಅಹಂಕಾರದಿಂದ, ಆಸೆಯಿಂದ, ಮದ, ಮತ್ಸರಗಳ ಕಾರಣಗಳಿಂದ ಎಲ್ಲ ಯುದ್ಧಗಳೂ ನಡೆಯುತ್ತವೆ. ನಮ್ಮ ಪುರಾಣಗಳಲ್ಲೂ ಇಂತಹ ಯುದ್ಧಗಳನ್ನು ನೋಡಬಹುದು. ದಾನವರಾಗಿ ಹುಟ್ಟಿದ ಹಿರಣ್ಯಾಕ್ಷ ಹಿರಣ್ಯಕಶಿಪುಗಳೂ ಸಹ ತಮಗೆ ಸಿಕ್ಕ ವರಗಳ ಬಲದಿಂದ, ಮದೋನ್ಮತ್ತರಾಗಿ ಭೂಲೋಕವೇನು ದೇವಲೋಕಕ್ಕೂ ಲಗ್ಗೆ ಇಟ್ಟ ಉಲ್ಲೇಖವುಂಟು. ಮಹಾಭಾರತದ ಯುದ್ಧದಲ್ಲೂ ಇಡೀ ಆರ್ಯಾವರ್ತವೇ ಇಬ್ಬಾಗವಾಗಿ ಕೆಲವರು ಕೌರವರ ಮತ್ತೆ ಕೆಲವರು ಪಾಂಡವರ ಪಕ್ಷ ವಹಿಸಿ ಯುದ್ಧಮಾಡಿ 18 ಅಕ್ಷೋಹಿಣಿ ಜನರನ್ನು ಬಲಿ ತೆಗೆದುಕೊಂಡಿತಂತೆ. ಅದು ಪುರಾಣ, ಗ್ರೀಕ್ ಪುರಾಣದಲ್ಲಿ ಬರುವ ಟ್ರೋಜನ್ ಯುದ್ಧವೂ ಸಹ ಒಂದು "ಹೆಲನ್ ಎನ್ನುವ ಹೆಣ್ಣಿಗಾಗಿ ಸುಮಾರು ವರ್ಷಗಳ ಕಾಲ ನಡೆದು ಅಪಾರ ಸಾವು ನೋವುಗಳಿಗೆ ಕಾರಣವಾಯಿತಂತೆ.

ಇನ್ನು ನಮ್ಮ ದೇಶದಲ್ಲಿ ಕ್ರಿಸ್ತ ಪೂರ್ವ 323ರ ಸುಮಾರಿಗೆ, ಚಾಣಕ್ಯ ಬರುವವರೆಗೆ, ಸಣ್ಣ ಸಣ್ಣ ರಾಜರು ಮತ್ತು ಕೆಲವು ದೊಡ್ಡ ರಾಜರುಗಳು ಸದಾ ಯುದ್ಧ ನಿರತರು. ಕೇವಲ ಅವರ ದಾನವೀ ಅಹಂಕಾರವನ್ನು ತಣಿಸಲಿಕ್ಕಾಗಿಯೇ ನಡೆದ ಯುದ್ಧಗಳು. ಕ್ಷುಲ್ಲಕ ಕಾರಣಕ್ಕಾಗಿಯೇ ನಡೆವ ಯುದ್ಧಗಳಲ್ಲೆಲ್ಲ ನಡೆಯುವುದು ಸಾಮಾನ್ಯರ ಮಾರಣ ಹೋಮ. ಅದು ದಾನವೀ ಪ್ರವೃತ್ತಿ. ನಮ್ಮ ದೇಶವನ್ನೇ ತೆಗೆದುಕೊಂಡರೆ, ಮೊದಲು ಯವನರು, ನಂತರ ಮೊಘಲರು, ನಂತರ ಬ್ರಿಟಿಷರು. ಹೀಗೆ ಆಕ್ರಮಣಕಾರರ ದಂಡೇ ನಮ್ಮ ದೇಶವನ್ನು ಲೂಟಿಮಾಡಲು ಹಿಂಡು ಹಿಂಡಾಗಿ ಬಂದವರೇ ಹೆಚ್ಚು. ಇವರು ಸಾಲದೆಂಬಂತೆ, ಬಂದವರು ಡಚ್ಚರು, ಪೋರ್ಚ್ಯುಗೀಸರು, ಎಲ್ಲರೂ ನಮ್ಮ ನಾಡಿನ ಮೇಲೆ ದಾಳಿಮಾಡಿದರು. ವಾಚಕರೆ ನೋಡಿ ಭಾರತವು ಯಾವುದೇ ಅನ್ಯ ದೇಶದ ಮೇಲೆ ದಾಳಿ ಮಾಡಿದ್ದನ್ನು ಯಾವುದಾದರೂ ಪುಸ್ತಕದಲ್ಲಿ ಕಂಡಿದ್ದೀರಾ? ಅಖಂಡವಾಗಿದ್ದ ಭಾರತ 200 ವರ್ಷಗಳಲ್ಲಿ ತುಂಡುತುಂಡಾಗಿ ಹರಿದು ಹಂಚಿಹೋಗಿದೆ.

ಹಾಗಾಗಿ ವಾಚಕರೆ, ಅಹಂಕಾರ ದುರಾಸೆ ಈ ಎಲ್ಲ ಯುದ್ಧಗಳಿಗೂ ಕಾರಣವಾಗಿತ್ತು. ಈ ಜಗತ್ತಿನಲ್ಲಿ ಮಾನವರು ಸುಸಂಸ್ಕೃತ ಪ್ರಾಣಿಗಳು, ಅನ್ಯ ಪ್ರಾಣಿಗಳಿಗಿಂತ ಭಿನ್ನ, ಮಾನವತೆಯಿಂದ ತನ್ನ ಜೀವನವನ್ನು ಮತ್ತು ಅನ್ಯರ ಜೀವನವನ್ನೂ ಸಹ ಸುಂದರವಾಗಿ ರೂಪಿಸಿಕೊಳ್ಳಬಲ್ಲ ಶಕ್ತಿ ಅವನಿಗೆ ಇದೆ. ಆದರೆ ಕೇವಲ ಅಹಂಕಾರದಿಂದ ತನ್ನ ಬುಡಕ್ಕೆ ತಾನೇ ಕೊಳ್ಳಿ ಇಟ್ಟುಕೊಂಡು ಅನ್ಯರನ್ನೂ ಸುಡುವ ಈ ದಾನವೀ ಅಥವಾ





ಪೈಶಾಚಿಕ ಪ್ರವೃತ್ತಿ ಏಕೆ? ಧರಣಿ ಸಸ್ಯಶ್ಯಾಮಲವಾಗಿರಬೇಕಾದರೆ, ನೀರು ಮತ್ತು ಶ್ರಮದ ಅವಶ್ಯಕತೆ ಉಂಟು. ಅದನ್ನು ಬಿಟ್ಟು ದ್ವೇಷದ ಬೀಜ ಮತ್ತು ರಕ್ತದ ಸಿಂಚನವಾದರೆ, ಬೆಳೆ ಬೆಳೆದೀತೆ? ಹೊಟ್ಟೆ ತುಂಬೀತೆ? ಹಗೆಯ ಹೊಗೆಯಿಂದ ಉಸಿರು ಕಟ್ಟುತ್ತದೆಯೇ ಹೊರತು ಜೀವ ಪೋಷಣೆಯಾಗದು. ಜೀವನ ನಡೆಯದು. ಈ ಪ್ರಪಂಚದ

ಗತಿಯೇನು? ಅದು ಹಾಗಾದರೆ ಇಡೀ ಪ್ರಪಂಚವೇ ಕಟುಕನ ಜಗಲಿಯಂತಾಗುತ್ತದೆ ಅಲ್ಲವೆ? ಅಂಥಹ ಭಾವಗಳನ್ನೇ ಮಾನ್ಯಶ್ರೀ ಗುಂಡಪ್ಪನವರು ವ್ಯಕ್ತಪಡಿಸುತ್ತಾರೆ ಈ ಮುಕ್ತಕದಲ್ಲಿ.

ಸಹೃದಯರೇ, ಒಂದು ಸಣ್ಣ ಬೀದಿ ಜಗಳದಿಂದ ಹಿಡಿದು ಒಂದು ಮಹಾ ಪ್ರಪಂಚ ಯುದ್ಧಕ್ಕೂ ಮಾನವತೆಯ ಕೊರತೆ ಮತ್ತು ಅಹಂಕಾರಭರಿತ ದಾನವತೆಯೇ ಕಾರಣ, ದ್ವೇಷವೇ ಕಾರಣ. ಇದರಿಂದ ನಾಶವೇ ಹೊರತು ಬಾಳು ಇಲ್ಲ ಎಂದು ನಾವೂ ಸಹ ಅರಿತು ನಮ್ಮ ನಮ್ಮಲ್ಲಿ ಇರುವ ಅಂತಹ ವಿನಾಶಕಾರಿ ಭಾವಗಳನ್ನು ತೊರೆದು, ಈ ಇಡೀ ಜಗತ್ತನ್ನು ಸುಂದರ ತಾಣವನ್ನಾಗಿ ಪರಿವರ್ತಿಸಲು ಪ್ರಯತ್ನಿಸೋಣ.

**ಮುಕ್ತಕ-13**

**ಪುರುಷಸ್ವತಂತ್ರತೆಯ ಪರಮಸಿದ್ಧಿಯದೇನು? |**
**ಧರಣಿಗನುದಿನದ ರಕ್ತಾಭಿಷೇಚನೆಯೇ? |**
**ಕರವಾಲವನು ಪುಷ್ಪಸರವೆಂದು ಸೆಳೆದಾಡೆ |**
**ಪರಿಮಳವ ಸೂಸುವುದೆ? ಮಂಕುತಿಮ್ಮ ||**

ಪುರುಷಸ್ವತಂತ್ರತೆಯ=ಪುರುಷ+ಸ್ವತಂತ್ರತೆಯು,ಪರಮಸಿದ್ಧಿಯದೇನು=ಪರಮಸಿದ್ಧಿಯು+ಅದೇನು, ಧರಣಿಗನುದಿನದ=ಧರಣಿಗೆ+ಅನುದಿನದ, ರಕ್ತಾಭಿಷೇಚನೆಯೇ?=ರಕ್ತ+ಅಭಿಷೇಚನೆಯೇ

ಸಿದ್ಧಿ=ಪ್ರಯೋಜನ, ಧರಣಿ=ಭೂಮಿ, ಅನುದಿನ=ಪ್ರತಿನಿತ್ಯ, ಪುರುಷ=ಶಕ್ತಿ, ಪರಮ=ಸರ್ವೋಚ್ಚ ಅಭಿಷೇಚನೆ=ಅಭಿಷೇಕ, ಕರವಾಲ=ಕತ್ತಿ, ಸೆಳೆದಾಡೆ=ಎಳೆದಾಡಿದರೆ, ಪರಿಮಳ=ಸುಗಂಧ,

ಆಗ ನಡೆಯುತ್ತಿದ್ದ ಯುದ್ಧ, ಯುದ್ಧದಿಂದ ಆಗುತ್ತಿದ್ದ ದುಷ್ಪರಿಣಾಮಗಳು, ಇವುಗಳ ಬಗ್ಗೆ ಮನಕರಗಿ ಭಾವುಕರಾದ ಮಾನ್ಯ ಗುಂಡಪ್ಪನವರು ಶಕ್ತಿಯ ಸ್ವಾತಂತ್ರದ ಸರ್ವೋಚ್ಚ ಗುರಿ ಏನು ಈ ಭೂಮಿಗೆ ಪ್ರತಿದಿನವೂ ರಕ್ತದ ಅಭಿಷೇಕವೇ? ಒರೆಯಿಂದ ಕತ್ತಿಯನ್ನು ಹೂವಿನ ಮಾಲೆ ಎಂದು ಎಳೆದರೆ ಅದರಿಂದ ಸುಗಂಧ ಬರಬಹುದೇ ಎನ್ನುತ್ತಾರೆ.

ಪುರುಷ ಎಂದರೆ ಗಂಡಸು ಎನ್ನುವ ಅರ್ಥದಲ್ಲಿ ಸಾಮಾನ್ಯ ಬಳಕೆ. ಆದರೆ ವಾಸ್ತವದಲ್ಲಿ ಪುರುಷ ಎಂದರೆ ಶಕ್ತಿ ಎಂದು ಅರ್ಥ "ಪುರೇ ಶೇತಿ ಇತಿ ಪುರುಷಃ" "ಚೇತನ" ಎಂದು ಅಸ್ತಿತ್ವವನ್ನು ಸೂಚಿಸುವಾಗ, ಕ್ರಿಯಾಶೀಲತೆಯನ್ನು

ಸೂಚಿಸುವಾಗ, ಚೈತನ್ಯ ಎಂದೂ ಕರೆಯಲಾಗುತ್ತದೆ. ಆದ್ದರಿಂದಲೇ ದೇವರನ್ನು ಸೂಚಿಸುವಾಗ "ಪರಮ" ಅಂದರೆ ಸರ್ವೋಚ್ಚ, ಪುರುಷ ಅಂದರೆ ಶಕ್ತಿ ಎಂಬ ಅರ್ಥದಲ್ಲಿ "ಪರಮ





ಪುರುಷ" ಅಥವಾ "ಪರಮಾತ್ಮ" ಎಂದು ಕರೆಯುತ್ತಾರೆ. ಒಟ್ಟಾರೆ, ಪುರುಷವೆಂದರೆ ಶಕ್ತಿ. ಈ ಶಕ್ತಿಯ ಉಪಯೋಗ ರಕ್ಷಣೆಗೆ ಮಾತ್ರ ಹೇಗೆ ಪರಮಪುರುಷನು ತನ್ನ ಸರ್ವೋಚ್ಚ ಶಕ್ತಿಯನ್ನು ಜಗದ್ರಕ್ಷಣೆಗೆ ವಿನಿಯೋಗಿಸುತ್ತಾನೋ ಹಾಗೆಯೇ, ಈ ಜಗತ್ತಿನಲ್ಲಿ ಹೆಚ್ಚು ಶಕ್ತಿ ಇರುವವರು ತಮಗಿಂತ ಕಡಿಮೆ ಶಕ್ತಿ ಇರುವವರನ್ನು ರಕ್ಷಿಸಬೇಕು ಮತ್ತು ಆ ಶಕ್ತಿಯನ್ನು ಕೇವಲ ಆತ್ಮ ರಕ್ಷಣೆ ಮತ್ತು ಇತರರನ್ನು ರಕ್ಷಿಸುವುದಕ್ಕಾಗಿಯೇ ಉಪಯೋಗಿಸಬೇಕು. ಇದು ಧರ್ಮ. ಇಲ್ಲಿ ಶಕ್ತಿಯೆಂದರೆ ಕೇವಲ, ದೈಹಿಕ ಶಕ್ತಿಯಷ್ಟೇ ಅಲ್ಲ. ಎಲ್ಲ ರೀತಿಯ ಶಕ್ತಿಯೂ ಇದರ ಪರಿಧಿಯೊಳಕ್ಕೆ ಬರುತ್ತದೆ. ದೇಹಬಲ, ಧನಬಲ, ಜನಬಲ, ಅಧಿಕಾರ ಬಲ, ಬುದ್ಧಿ ಬಲ, ಇತ್ಯಾದಿ ಇತ್ಯಾದಿ ಹೀಗೆ ಯಾವುದೇ ರೀತಿಯ ಶಕ್ತಿಯ ಆಧಿಕ್ಯವಿದ್ದರೂ ಅದನ್ನು ಪರರ ರಕ್ಷಣೆಗೆ ಮಾತ್ರ ಉಪಯೋಗಿಸುವುದು ಧರ್ಮ.

ಆದರೆ ಅಂದಿನ ಮತ್ತು ಇಂದಿನ ವಾಸ್ತವತೆಯೇ ಬೇರೆ. ಹಿಂದಿಯಲ್ಲಿ "ಜಿಸ್ಕಿ ಲಾಠಿ ಉಸ್ಕಿ ಭೈನ್ಸ್" ಎನ್ನುತ್ತಾರೆ. ಅಂದರೆ "ಯಾರ ಕೈಯಲ್ಲಿ ಕೋಲುಂಟೋ ಅವನದೇ ಎಮ್ಮೆ" ಎಂದು. ಯಾರಿಗೆ ಅಧಿಕ ಶಕ್ತಿ ಇದೆಯೋ ಅವನೇ ರಾಜ, ತನಗೆ ಶಕ್ತಿ ಇದೆ. "ನಾನು ಏನನ್ನಾದರೂ ಮಾಡಬಹುದು, ನನ್ನನ್ನು ಕೇಳುವವರಾರು, ಕೇಳಿದವರನ್ನು ಸದೆಬಡಿದುಬಿಡುತ್ತೇನೆ"ಎನ್ನುವ ದುರಾಚಾರದ ಜನರೇ ಅಧಿಕವಾಗಿದ್ದಾರೆ. ಇದು ಅಹಂಕಾರದ ಪರಮಾವಧಿ. ಎಲ್ಲ ಸಂಘರ್ಷಗಳೂ ಈ ಅಹಂಕಾರ ಜನಿತವಾದ ದಬ್ಬಾಳಿಕೆಯಿಂದಲೇ ನಡೆಯುತ್ತವೆ. ಇದು ತಪ್ಪು. ಇದರಿಂದ ಪ್ರತಿನಿತ್ಯದ ರಕ್ತಪಾತ ಸಾವು ನೋವು ಮಾತ್ರ ಎನ್ನುತ್ತಾರೆ ಶ್ರೀ ಗುಂಡಪ್ಪನವರು. ಅದಕ್ಕೊಂದು ಉಪಮೆಯನ್ನು ಕೊಡುತ್ತಾರೆ. ಹೂವಿನಮಾಲೆ ಎಂದು ಒರೆಯಿಂದ ಕತ್ತಿಯನ್ನು ಎಳೆದರೆ, ಅದು ಸುಗಂಧವನ್ನು ಬೀರುತ್ತದೆಯೇ!

ವಾಚಕರೆ, ನಮ್ಮಲ್ಲಿ ಶಕ್ತಿ ಇದ್ದರೆ ಮತ್ತು ಅದು ನಮ್ಮ ಅವಶ್ಯಕತೆಗೆ ಮೀರಿ ಇದ್ದರೆ, ಅದನ್ನು ಪರಹಿತಕ್ಕಾಗಿ ಉಪಯೋಗಿಸಬೇಕು. ಆ ಪರಮಾತ್ಮನ ಕೃಪೆಯಿಂದ ನಮಗೆ ಸಿಕ್ಕ ಅಧಿಕ ಶಕ್ತಿಯನ್ನು ನಮಗಿಂತ ಕಡಿಮೆ ಶಕ್ತಿ ಇರುವವರ ಒಳಿತಿಗಾಗಿ ಉಪಯೋಗಿಸಬೇಕು. ಹಾಗಾದಾಗ ಪರಸ್ಪರ ಪ್ರೀತಿ ವಿಶ್ವಾಸಗಳು ಬೆಳೆದು ಇಡೀ ಸಮಾಜವೇ ವಾಸಿಸಲು ಒಂದು ಸುಂದರ ತಾಣವಾಗುತ್ತದೆ. ಇಂದಿನ ಸ್ವಾರ್ಥಭರಿತ ಸಮಾಜದಲ್ಲಿ ಎಂತೆಂತಹ ವಿದ್ಯಮಾನಗಳು ನಡೆಯುತ್ತಿವೆ ಎಂದು ವಿಷದಪಡಿಸುವ ಅವಶ್ಯಕತೆಯೇ ಇಲ್ಲ. ಅದು ಸರ್ವರಿಗೂ ಗೊತ್ತಿರುವ ವಿಷಯವೇ. ಅದು ತಪ್ಪು. ಅದು ಸರಿಯಿಲ್ಲ ಎಂಬ ಅರಿವೂ ಎಲ್ಲರಿಗೂ ಇದೆ.

ವಾಚಕರೆ, ನಾವೂ ಆ ನಿಟ್ಟಿನಲ್ಲಿ ಯೋಚನೆ ಮಾಡಬೇಕು. ನಮ್ಮ ಶಕ್ತಿಯನ್ನು, ಸ್ವರಕ್ಷಣೆಗೆ ಉಪಯೋಗಿಸುವ, ಪರರ ರಕ್ಷಣೆಗೆ ಉಪಯೋಗಿಸುವ. ಆದರೆ ದುರಾಸೆಗೆ, ಸ್ವಾರ್ಥಕ್ಕೆ, ಪರರ ಭಕ್ಷಣೆಗೆ ಉಪಯೋಗಿಸುವ ಬುದ್ಧಿ ನಮಗೆ ಎಂದೂ ಬರದಿರಲಿ ಎಂದು ಪ್ರಾರ್ಥಿಸುತ್ತ, ನಮ್ಮಲ್ಲಿ ಇರಬಹುದಾದ ಕೊರತೆಗಳನ್ನು ನೀಗಿಸಿಕೊಳ್ಳುವ ಪ್ರಯತ್ನವನ್ನು ಮಾಡೋಣ.



# ಲೋಕಜೀವನ ಮಥನ 14-18

**ಮುಕ್ತಕ-14**

**ಒಂದೇ ಗಗನವ ಕಾಣುತೊಂದೆ ನೆಲವನು ತುಳಿಯು |**
**ತೊಂದೆ ಧಾನ್ಯವನುಣ್ಣುತೊಂದೆ ನೀರ್ಗುಡಿದು ||**
**ಒಂದೇ ಗಾಳಿಯನುಸಿರ್ವ ನರಜಾತಿಯೊಳಗೆಂತು |**
**ಬಂದುದೀ ವೈಷಮ್ಯ? ಮಂಕುತಿಮ್ಮ ||**

ಕಾಣುತೊಂದೆ=ಕಾಣುತ+ಒಂದೆ, ತುಳಿಯುತೊಂದೆ=ತುಳಿಯುತ+ಒಂದೆ, ನೀರ್ಗುಡಿದು=ನೀರು+ಕುಡಿದು, ಗಾಳಿಯನುಸಿರ್ವ=ಗಾಳಿಯನು+ಉಸಿರ್ವ, ನರಜಾತಿಯೊಳಗೆಂತು=ನರ+ಜಾತಿಯ+ಒಳಗೆ+ಎಂತು,

ಉಣ್ಣು=ತಿನ್ನು, ಉಸಿರ್ವ=ಉಸಿರಾಡುವ, ನರಜಾತಿ-ಮಾನವ ಜನಾಂಗ, ವೈಷಮ್ಯ-ದ್ವೇಷ, ಎಂತು-ಹೇಗೆ.

ಒಂದೇ ಆಕಾಶವ ಕಾಣುತ, ಒಂದೇ ನೆಲವನ್ನು ತುಳಿಯುತ ಒಂದೇ ಧಾನ್ಯವನ್ನು ಉಣ್ಣುತ ಒಂದೇ ಗಾಳಿಯನು ಉಸಿರಾಡುವ ಮಾನವಜಾತಿಯ ಒಳಗೆ ಈ ದ್ವೇಷ ಹೇಗೆ ಬಂತು ಎಂದು ತಮಗೆ ತಾವೇ ಪ್ರಶ್ನಿಸುತ್ತ ಈ ವಿಚಾರವನ್ನು ಓದುಗರ ಮುಂದಿಟ್ಟಿದ್ದಾರೆ, ಶ್ರೀ ಗುಂಡಪ್ಪನವರು.

ಈ ಜಗತ್ತಿನಲ್ಲಿರುವ ಮಾನವರಿಗಷ್ಟೇ ಏನು, ಸಕಲ ಜೀವಿ ಸಂಕುಲಕ್ಕೂ ತಲೆಯ ಮೇಲಿನ ಆಕಾಶ ಒಂದೇ. ಇರುವ ಭೂಮಿಯೂ ಒಂದೇ. ಎಲ್ಲರೂ ತಿನ್ನುವುದು ಈ ಭೂಮಿಯ ಮೇಲೆ ದೊರೆಯುವ ಆಹಾರವನ್ನೇ, ಕುಡಿಯುವ ನೀರಿಗೂ ಒಂದೇ ಮೂಲ, ಹಾಗಿದ್ದರೂ ಏಕೆ ಈ ವೈಷಮ್ಯ, ಈ ದ್ವೇಷ ಎಂಬ ಪ್ರಶ್ನೆ ಕಾಲಾನುಕಾಲಕ್ಕೆ ಎಲ್ಲ ಚಿಂತಕರ ಮನಗಳಲ್ಲೂ ಸುಳಿದು, ಉತ್ತರ ಕಂಡುಕೊಳ್ಳಲು ಪ್ರಯತ್ನ ನಡೆದಿದೆ.

ಆದರೆ ವಿಚಿತ್ರವೇನೆಂದರೆ, ಅನಾದಿ ಕಾಲದಿಂದಲೂ ಮನುಷ್ಯರ ಗುಂಪುಗಳ ನಡುವೆ, ಒಂದು ದೇಶ ಮತ್ತು ಮತ್ತೊಂದು ದೇಶದ ನಡುವೆ, ಅಣ್ಣ-ತಮ್ಮಂದಿರ ನಡುವೆ, ಎರಡು ಊರಿನ ನಡುವೆ, ಹೀಗೆ ಎರಡು ಗುಂಪುಗಳ ನಡುವೆ ಉದ್ಭವವಾಗುವ ದ್ವೇಷ, ದ್ವೇಷದಿಂದ ಆವೇಶ, ಇವೆರಡರ ಫಲವಾಗಿ ಜಗಳ, ಹೊಡೆದಾಟಕ್ಕೆ ಕಾರಣವಾಗುತ್ತದೆ. ಶ್ರೀ ಗುಂಡಪ್ಪನವರು ಉಲ್ಲೇಖಿಸಿರುವಂತೆ ಇವುಗಳ ಮೂಲ, ನೀರು ನೆಲಗಳೇ ಅಲ್ಲವೇ? ಇವುಗಳಿಗಾಗಿಯೇ ಜಗತ್ತಿನ ಎಲ್ಲ ಹೋರಾಟಗಳೂ ನಡೆದಿವೆ. ಇಂದು ನಮ್ಮ ದೇಶದ ನ್ಯಾಯಾಲಯಗಳಲ್ಲಿ ಹೂಡಲ್ಪಡುವ ಕಟ್ಟಳೆಗಳಲ್ಲಿ ೯೦ ಪ್ರತಿಶತ ಭೂಮಿಗೆ ಸಂಬಂಧಿಸಿದುವೆ ಆಗಿರುತ್ತದೆ.

"ಇಷ್ಟಿದ್ದರೆ ಮತ್ತಷ್ಟರಾಸೆ" ನಮ್ಮ ಜೀವಿಕೆಗೆ ಎಷ್ಟು ಬೇಕೋ ಅಷ್ಟನ್ನು ಪಡೆದು ಕಾಯ ಕರ್ಮ ಮಾಡಿ ಜೀವಿಸುವುದು ಸರಿಯಾದ ಕ್ರಮ. ಆದರೆ ಮಾನವನ ಆಸೆಗೆ ಗಗನವೇ ಮಿತಿ. ಹಿಂದೆ ನಾ ಕೇಳಿದ ಕಥೆಯನ್ನು ಮತ್ತೊಮ್ಮೆ ಹೇಳಬೇಕು. ಒಬ್ಬನಿಗೆ ಬಹಳ ಬಹಳ ಭೂಮಿ ಬೇಕೆನ್ನಿಸಿತಂತೆ. ಅವನ ತಪಸ್ಸಿಗೆ ಮೆಚ್ಚಿ ದೇವರು ಏನು ವರಬೇಕೆಂದಾಗ, "ನನಗೆ ಹೆಚ್ಚು ಭೂಮಿ ಬೇಕು" ಎಂದನಂತೆ. "ನೋಡು ನೀ ನಿಂತಿರುವ ಜಾಗದಿಂದ ಇಂದು ಸಂಜೆಯವರೆಗೆ ಎಷ್ಟುದೂರ ಓಡಿ, ಎಷ್ಟು ಭೂಮಿಯನ್ನು ಕ್ರಮಿಸಿ ಮತ್ತೆ ಸೂರ್ಯಾಸ್ತಮಾನದ





ವೇಳೆಗೆ ನೀ ಈಗ ನಿಂತಿರುವ ಜಾಗಕ್ಕೆ ಬಂದು ಸೇರಿದರೆ, ನೀ ಎಷ್ಟು ಭೂಮಿಯನ್ನು ಉಪಕ್ರಮಿಸಿರುತ್ತೀಯೋ ಅದನ್ನೆಲ್ಲ ನಿನಗೆ ಕೊಡುತ್ತೇನೆ" ಎಂದನಂತೆ ಆ ದೇವರು. ಮಾನವರ ಬಲಹೀನತೆ ಆ ದೇವರಿಗೇ ಗೊತ್ತಿಲ್ಲವೇ. ಅದನ್ನು ಕೊಟ್ಟದ್ದೂ ಅವನೇ ತಾನೇ? ಸರಿ ಇವ ಓಡಿದ, ಓಡಿದ. ಓಡಿ ಓಡಿ ಇನ್ನೂ ಸ್ವಲ್ಪ ಮುಂದೆ ಹೋಗುವ, ಇನ್ನೂ ಸ್ವಲ್ಪ ಮುಂದೆ ಹೋಗುವ, ಎಂದು ಓಡಿ ಓಡಿ ಮಧ್ಯಾಹ್ನದ ತನಕ ಓಡಿದ. "ಅಯ್ಯೋ ಹಿಂತಿರುಗಬೇಕಲ್ಲ ಎಂದು ಯೋಚನೆ ಮಾಡಿ ಮತ್ತೆ ಸ್ವಸ್ಥಾನ ಸೇರಲು ಮೊದಲಿಟ್ಟ. ಆರಂಭದ ಹುಮ್ಮಸ್ಸು ಮತ್ತು ಶಕ್ತಿ ಕುಂದಿತ್ತು. ಬರುತ್ತಾ ಬರುತ್ತಾ ಬಹಳ ಸುಸ್ತಾಗಿ ಕುಸಿದ. ಇನ್ನೇನು ತಾ ಶುರುಮಾಡಿದ ಸ್ಥಳ "ಅಗೋ, ಅಲ್ಲಿ ಕಾಣುತ್ತಿದೆ" ಎನ್ನುವಾಗ ಆ ಸೂರ್ಯ ಮುಳುಗಿಯೇ ಬಿಟ್ಟ. ಆ ದೇವರೂ ಮಾಯವಾಗಿಬಿಟ್ಟ. ಇವನಿಗೆ ಉಳಿದಿದ್ದು ಏನು ಬರೀ ಶ್ರಮ. ಪಶ್ಚಾತ್ತಾಪ. ಹೀಗೆ ನಾವು ಮಾಡುವ ಕೆಲಸ, ವಸ್ತು, ವ್ಯಕ್ತಿ, ವಿಷಯಗಳನ್ನು ಬಯಸುವಾಗ, ನಮ್ಮ ಮಿತಿಗಳನ್ನು ಅರಿತುಕೊಂಡರೆ ಸುಖ ಇಲ್ಲದಿದ್ದರೆ? ಇಲ್ಲದಿದ್ದರೆ, ನಮಗೆ ಸಿಗಲಿಲ್ಲವೆಂದು ಕೋಪ, ನಮಗಿಂತ ಪರರಿಗೆ ಅಧಿಕವಾಗಿ ಸಿಕ್ಕಿದೆ ಎಂದು ಅಸೂಯೆ, ಸಿಕ್ಕರೆ ಮತ್ತಷ್ಟರ ಲೋಭ, ಅಧಿಕವಾಗಿ ಸಿಕ್ಕರೆ ಮದ, ಸಿಕ್ಕದ್ದು ನನ್ನಲ್ಲೇ ಇರಬೇಕೆನ್ನುವ ಮೋಹ, ಹೀಗೆ ಎಲ್ಲವೂ ಅಂಟಿಕೊಳ್ಳುತ್ತದೆ. ಜೀವನವೇ ನರಕವಾಗುತ್ತದೆ.

ಒಂದೇ ಭೂಮಿ ಒಂದೇ ಆಕಾಶ. ಈ ಭೂಮ್ಯಾಕಾಶಗಳ ಸಂಬಂಧವನ್ನು ಎಲ್ಲರೂ ಒಂದೇ ರೀತಿಯಲ್ಲಿ ಹೊಂದಿರುವಾಗ ಏಕೆ ಈ ವೈಷಮ್ಯವೆಂದರೆ, ಜಾತಿ, ಮತ, ಭಾಷೆ, ಪ್ರಾಂತ, ದೇಶಗಳ ಎಲ್ಲೆಗಳನ್ನು ಹಾಕಿಕೊಂಡು ಮಾನವರು ಅದನ್ನು ದಕ್ಕಿಸಿಕೊಳ್ಳಲು, ಕಾಪಾಡಲು ಮತ್ತು ತಮ್ಮ ಆಧಿಕ್ಯವನ್ನು ಸಾರಲು, ಸ್ಥಿರಪಡಿಸಲು ಮಾಡುವ ನಿರಂತರ ಹೋರಾಟದ ಫಲವೇ ಈ ದ್ವೇಷಾಸೂಯೆಗಳ ವಿಷ ವೃತ್ತ. ತೃಪ್ತಿಗೆ ಒಂದು ಎಲ್ಲೆ ಅಥವಾ ಮಿತಿ

ಹಾಕಿಕೊಂಡರೆ ಎಲ್ಲರಿಗೂ ಸುಖ, ಇಲ್ಲದಿದ್ದರೆ ಎಲ್ಲರಿಗೂ ಹಿಂಸೆ ಮತ್ತು ಈ ಬಾಳೇ ನರಕ ಸದೃಶ. ಈ ಜಗತ್ತಿನ ಮಾನವರೆಲ್ಲ ಒಂದೇ. ಈ ಭೂಮಿ, ಆಕಾಶ, ನೀರು ಎಲ್ಲವನ್ನೂ ಪರಮಾತ್ಮ ಎಲ್ಲರ ಉಪಯೋಗಕ್ಕಾಗಿ ನಿರ್ಮಿಸಿದ್ದಾನೆ. ಇದು ಯಾವುದೂ ಶಾಶ್ವತವಾಗಿ ನಮ್ಮ ಸ್ವಂತವಾಗಲು ಸಾಧ್ಯವೇ ಇಲ್ಲ. ಏಕೆಂದರೆ ಈ ಭೂಮಿಯೇ ನಮಗೆ ಸ್ವಂತ, ನಿರಂತರ ಮತ್ತು ಶಾಶ್ವತವಲ್ಲದಿದ್ದ ಮೇಲೆ, ಈ ಭೂಮಿಯ ಮೇಲಿನ ವಸ್ತುಗಳು ಹೇಗೆ ಸ್ವಂತವಾಗಲು ಸಾಧ್ಯ. ಅಂತಕನೊಬ್ಬ ಬಾಳಿನಂಚಲ್ಲಿ ಕಾದಿಲ್ಲವೇ, ಇದಕ್ಕೆಲ್ಲ ಒಂದು ಅಂತ್ಯ ಹಾಡಲು.

ಇಂತಹ ಪ್ರವೃತ್ತಿಯಿಂದ, ನಿರಂತರ ದ್ವೇಷಾಸೂಯೆಗಳ ವಿಷ ವೃತ್ತದಲ್ಲಿ ನಾವು ಬೀಳುವುದು ಬೇಡ. ಹಾಗೆ ಬಿದ್ದವರನ್ನು ಬಿಡಿಸುವ ಪ್ರಯತ್ನ ಮಾಡುವ.





**ಮುಕ್ತಕ-15**

**ಹಳೆಯ ಭಕ್ತಿಶ್ರದ್ಧೆಯಳಿಸಿಹೋಗಿದೆ ಮಾಸಿ ।**
**ಸುಳಿದಿಲ್ಲವಾವ ಹೊಸ ದರ್ಶನದ ಹೊಳಪುಂ ॥**
**ಪಳಗಿದ್ದ ಮನೆ ಬಿದ್ದ ಕುಂಟ ಕುರುಡನ ತೆರದಿ ।**
**ತಳಮಳಿಸುತಿದೆ ಲೋಕ ಮಂಕುತಿಮ್ಮ ॥**

ಭಕ್ತಿಶ್ರದ್ಧೆಯಳಿಸಿಹೋಗಿದೆ=ಭಕ್ತಿ+ಶ್ರದ್ದೆಯು+ಅಳಿಸಿಹೋಗಿದೆ,ಸುಳಿದಿಲ್ಲವಾವ=ಸುಳಿದಿಲ್ಲವು+ಆವ,
ಮಾಸು=ಅಳಿಸು, ದರ್ಶನ=ಸಿದ್ಧಾಂತದ ಹೊಸರೂಪ, ತೆರದಿ=ತರಹೆ, ತಳಮಳಿಸು=ಒದ್ದಾಡು, ಪರದಾಡು.

ಈಗ್ಗೆ ಎಪ್ಪತ್ತು ವರ್ಷಗಳ ಕೆಳಗೇ ಗುಂಡಪ್ಪನವರಿಗೆ ಹೀಗೆ ಅನ್ನಿಸಿದ್ದರೆ, ಇಂದು ಅವರು ಏನನ್ನುತ್ತಿದ್ದರೋ ಏನೋ! ಪುರಾತನ ಕಾಲದಿಂದಲೂ ಅನೂಚಾನವಾಗಿ ಜನಗಳಲ್ಲಿ ದೇವರಲ್ಲಿ ಇದ್ದ ಭಕ್ತಿ ಮತ್ತು ಸಂಪ್ರದಾಯಗಳಲ್ಲಿ ಇದ್ದ ಶ್ರದ್ಧೆ ಈಗ ಅಳಿಸಿ ಹೋಗಿದೆ. ಇಲ್ಲಿ ಸಂಪ್ರದಾಯ ಎಂದರೆ ಹಿಂದಿನಿಂದ ಬಂದಿರುವ ನಡವಳಿಕೆ ಎಂದಷ್ಟೆ ಅರ್ಥ, ಜನರಲ್ಲಿ ಮತ್ತೆ ಈ ಭಕ್ತಿ ಮತ್ತು ಶ್ರದ್ಧೆಗಳನ್ನು ತರಲು ಯಾವ ಹೊಸ ಸಿದ್ಧಾಂತಗಳೂ ಪ್ರತಿಪಾದಿಸಲ್ಪಟ್ಟು ಪ್ರಚಾರಕ್ಕೆ ಬಂದಿಲ್ಲ. ಹಾಗಾಗಿ ಜನರೆಲ್ಲರೂ ಮೊದಲಿನಿಂದ ಬಂದದನ್ನು ಕಳೆದು ಕೊಂಡು ಹೊಸದಿಲ್ಲದೆ ಒಂದು ಅತಂತ್ರ ಸ್ಥಿತಿಯಲ್ಲಿದ್ದಾರೆ.

ಯಾರ ಸಹಾಯವೂ ಇಲ್ಲದೆ ಸುಲಭವಾಗಿ ಮತ್ತು ಚೆನ್ನಾಗಿ ಓಡಾಡಲು ಅಭ್ಯಾಸವಾಗಿರುವ ಮನೆ ಕುಸಿದು ಹೋದರೆ, ಆ ಮನೆಯಲ್ಲಿ ವಾಸಿಸುತ್ತಿರುವ ಕುಂಟನಿಗೋ ಕುರುಡನಿಗೋ, ಪಾಪ ತಳಮಳಿಸುವ ಮತ್ತು ಪರದಾಡುವಂತೆ ಆಗುತ್ತದಲ್ಲವೇ? ಹಾಗೆ ಆಗಿದೆ ಇಂದಿನ ಲೋಕದ ಪರಿಸ್ಥಿತಿ ಎನ್ನುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಇಲ್ಲಿ ಭಕ್ತಿ ಎಂದರೆ ಪರಮಾತ್ಮನ ಮೇಲಿರುವ ಭಕ್ತಿ ಎಂದೇ ತಿಳಿಯಬೇಕಿಲ್ಲ. ಆದರೆ ನಾವು ಮಾಡುವ ಎಲ್ಲ ಕೆಲಸಗಳೂ ನಮ್ಮೊಳಗಿರುವ ಪರಮಾತ್ಮ ಸ್ವರೂಪೀ ಜೀವಾತ್ಮನು ತೃಪ್ತನಾಗುವುದಕ್ಕೆ ಅಂದರೆ ಆತ್ಮ ತೃಪ್ತಿಗೆ, ಎಂದುಕೊಂಡಾಗ, ಆ ಕೆಲಸದಲ್ಲಿ ಭಕ್ತಿ, ಆ ಭಕ್ತಿ ಇದ್ದಾಗ, ಮಾಡುವ ಕೆಲಸದಲ್ಲಿ ಶ್ರದ್ಧೆ ಬರುತ್ತದೆ. ಹಾಗೆ ಭಕ್ತಿ ಮತ್ತು ಶ್ರದ್ಧೆ ಎರಡೂ ಇದ್ದಾಗ, ಮಾಡುವ ಕೆಲಸ ಸಮರ್ಪಕವಾಗಿದ್ದು ಅದರ ಫಲವೂ ಒಳ್ಳೆಯದಾಗಿರುತ್ತದೆ. “ಹೇಗೆ ಮನವೋ ಹಾಗೆ ಭಾವ, ಹೇಗೆ ಭಾವವೋ ಹಾಗೆ ಕಾರ್ಯ ಹೇಗೆ ಕಾರ್ಯವೋ ಹಾಗೆ ಫಲ. ಹಾಗಾಗಿ ಮನಸ್ಸಿನಲ್ಲಿ ಭಕ್ತಿ ಮತ್ತು ಶ್ರದ್ಧೆಗಳು ಬಹಳ ಮುಖ್ಯ. ಆದರೆ ಅದು ಈಗ ಮಾಸಿ ಹೋಗಿದೆ ಎನ್ನುತ್ತಾರೆ ಮಾನ್ಯ ಗುಂಡಪ್ಪನವರು.

ಹೇಗೆ ಮಾಸಿ ಹೋಯಿತು? ಹಲವಾರು ಕಾರಣಗಳು, ಕಾಲ ಬದಲಾದಂತೆ ಎಲ್ಲವೂ ಬದಲಾಗುತ್ತದೆ. ಆದರೆ ನಕಾರಾತ್ಮಕ ಬದಲಾವಣೆಯಾದರೆ ಅದು ಸರಿಯಲ್ಲ. ಆದ್ದರಿಂದಲೇ ಮಾಸಿ ಹೋದದ್ದು, ಹಿರಿಯರು ಮನೆಗಳಲ್ಲಿ ಕಿರಿಯರಿಗೆ ಮಾರ್ಗ ದರ್ಶನ ಮಾಡಬೇಕು. ಅವರ ಅನುಭವ ಮತ್ತು ಜ್ಞಾನದ ಮೂಸೆಯಿಂದ ಕಿರಿಯರಿಗೆ ಜ್ಞಾನವನ್ನು ಎರಕ ಹೊಯ್ದಂಗೆ ಎರೆಯಬೇಕು. ಆದರೆ ನಮ್ಮಲ್ಲಿ ಕಾಲಕ್ರಮೇಣ 'ಏನು' ಮಾಡಬೇಕು ಎನ್ನುವುದನ್ನು ಮಾತ್ರ ಹೇಳುತ್ತಿದ್ದರು. ಹೇಗೆ ಮಾಡಬೇಕು ಎನ್ನುವುದನ್ನೂ ಹೇಳುತ್ತಿದ್ದರು, ಆದರೆ 'ಏಕೆ' ಮಾಡಬೇಕು ಎಂದು ಕೇಳಿದರೆ ಅದಕ್ಕೆ “ಬಂಡಾಯವೆನ್ನುತ್ತಿದ್ದರು. “ಹೇಳಿದಷ್ಟು ಮಾಡೋ ತಲೆಹರಟೆ”





ಎನ್ನುತ್ತಿದ್ದರು. ಒಂದು ಅವರಿಗೆ ಹೇಳಲು ಗೊತ್ತಿರಲಿಲ್ಲ ಅಥವಾ ಹೇಳಬೇಕಾದ ವಿಷಯವೇ ಗೊತ್ತಿರಲಿಲ್ಲ ಅಥವಾ ಅವರಿಗೆ ಗೊತ್ತಿದ್ದ ವಿಷಯದ ಸಂಪೂರ್ಣ ಜ್ಞಾನವಿರಲಿಲ್ಲ. ಒಂದು ಕೆಲಸ, ಆ ಕೆಲಸ ಮಾಡುವ ರೀತಿ ಮತ್ತು ಅದರ ಅಂತರ್ಯದ ಉದ್ದೇಶ ಇವುಗಳನ್ನು ಅರಿಯುವುದು ಬಹಳ ಮುಖ್ಯ. ಇದು ಎಲ್ಲ ರೀತಿಯ ಕೆಲಸಗಳಿಗೂ

ಅನ್ವಯವಾಗುತ್ತದೆ. ಅದನ್ನು ವಿವರಿಸದೆ ಕೆಲಸವನ್ನಷ್ಟೇ ಮಾತ್ರ ವಿವರಿಸಿ ಮಾಡಲು ಬಿಟ್ಟಾಗ, ಆ ಕೆಲಸದಲ್ಲಿ ಅವರಿಗೆ ತಿರಸ್ಕಾರ ಹುಟ್ಟಿ ಮಾಡುವ ಕೆಲಸದಲ್ಲಿ ಶ್ರದ್ಧೆ ಇರುವುದಿಲ್ಲ. ಶ್ರದ್ಧೆ ಇಲ್ಲದಿದ್ದರೆ ಭಕ್ತಿಯೂ ಹುಟ್ಟುವುದಿಲ್ಲ. ಹಿಂದಿನವರು ಮಾಡಿದ ತಪ್ಪು ಅದೇ.

ಅಂತರ್ಯದ ಭಾವ ಹೇಳಿಕೊಡುವುದು ಅಷ್ಟು ಸುಲಭವಲ್ಲ. ಮೊದಲು ಹೇಳಿಕೊಡುವವನಿಗೆ, ಆ ಭಾವ ಸಿದ್ಧಿಯಾಗಿರಬೇಕು. ಹೇಳಿಕೊಡುವ ಮತ್ತು ಎರಕ ಹೊಯ್ಯುವ ಕಲೆ ಸಿದ್ಧಿಯಾಗಿರಬೇಕು ಮತ್ತು ಹೊಯ್ಯಬೇಕಾದ ಪಾತ್ರದ "ಪಾತ್ರತೆಯ" ಮತ್ತು "ಯೋಗ್ಯತೆಯ" ಅರಿವು ಅವನಿಗೆ ಇರಬೇಕು. (transmitter ಮತ್ತು receiver ಎರಡೂ ಸರಿ ಇರಬೇಕು) ಇಬ್ಬರೂ ಒಬ್ಬರಿಗೊಬ್ಬರು ಸರಿ ಹೋದರೆ ಆಗ ಶುದ್ಧ ಸತ್ವ ಮನದೊಳಕ್ಕೆ ಇಳಿದು, ಭಕ್ತಿ ಬರುತ್ತದೆ ಮತ್ತು ಶ್ರದ್ಧೆ ಬೆಳೆಯುತ್ತದೆ. ಅದು ನಮ್ಮ ಹಳೆಯ ಗುರುಕುಲ ಪದ್ಧತಿಯಲ್ಲಿ ಕಾಣಸಿಗುತ್ತಿತ್ತು. ಒಟ್ಟಾರೆ ಹೇಳಬೇಕೆಂದರೆ ಇಂದು ಹಾಗೆ ಹೇಳಿಕೊಡುವವರಾಗಲೀ, ಕಲಿಯುವವರಾಗಲೀ ಇಲ್ಲ. ಇದನ್ನೇ ಗುಂಡಪ್ಪನವರು "ಮಾಸಿ ಹೋಗಿದೆ" ಎನ್ನುತ್ತಾರೆ. ಇದಕ್ಕೆ ಪರಿಹಾರವೇನೆಂದು ಎಲ್ಲರೂ ಯೋಚಿಸಬೇಕು.

ಹಾಗೆ ಮಾಸಿಹೋದದ್ದರಿಂದ ಏನಾಗಿದೆ ಎಂದರೆ, ಮೊದಲೇ ನಾವು ಬಲಹೀನರು. ತತ್ವದ ಬಲವಿಲ್ಲದೆ ಸತ್ವಹೀನರು, ಸತ್ಯದ ಬಲವಿಲ್ಲದೆ ಸತ್ವಹೀನರು. ಯಾವುದೋ ಒಂದನ್ನು ಹಿಡಿದುಕೊಂಡು ಹೇಗೋ ಬದುಕುತ್ತಿದ್ದೆವು. ಈಗ ನಾವು ಹಿಡಿದಂತಾ ವಸ್ತುವೇ ಬಲಹೀನವಾಗಿ ನಮ್ಮ ಅಸ್ತಿತ್ವವೇ ಅಲುಗಾಡುತ್ತಿದೆ. ಹಿಡಿದ ಕೊಂಬೆ ಮುರಿದರೆ, ಹಿಡಿಯಲು ಮತ್ತೊಂದು ಕೊಂಬೆ ಇದ್ದರೆ ಹಿಡಿದು ತೂಗಾಡಬಹುದು. ಇಲ್ಲದಿದ್ದರೆ ಬೀಳುವುದೇ ದಾರಿ. ಚೆನ್ನಾಗಿ ಓಡಾಡಲು ಅಭ್ಯಾಸವಾಗಿರುವ ಮನೆ ಕುಸಿದು ಹೋದರೆ, ಆ ಮನೆಯಲ್ಲಿ ವಾಸಿಸುವ ಕುಂಟನಿಗೋ ಕುರುಡನಿಗೋ, ತೊಂದರೆಯಾಗಿ ಅವನು ತಡಬಡಾಯಿಸುವಂತೆ ನಾವೂ ಸಹ ನಮ್ಮ ಭಕ್ತಿ ಶ್ರದ್ಧೆಗಳನ್ನು ಕಳೆದು ಕೊಂಡು ಅತಂತ್ರದ ಸ್ಥಿತಿಯಲ್ಲಿದ್ದೇವೆ ಎಂದು ಹೇಳುತ್ತಾರೆ ಮಾನ್ಯ ಗುಂಡಪ್ಪನವರು.

ಹೋಗಲಿ ಹಳೆಯದನ್ನೇನೋ ಕಳೆದುಕೊಂಡಿದ್ದೇವೆ, ಹೊಸದೇನಾದರೂ ಇದೆಯೋ, ಅದನ್ನು ಹಿಡಿದುಕೊಳ್ಳೋಣವೆಂದರೆ ಅದೂ ಇಲ್ಲ. ನಮ್ಮ ದೇಶದಲ್ಲೇ ಅಲ್ಲ ಇಡೀ ಜಗತ್ತಿನ ಪರಿಸ್ಥಿತಿಯೇ ಹೀಗಿದೆ. ನಮ್ಮ ಭಾರತೀಯ ಸಮಾಜದಲ್ಲಿ ಬೇರೆ ಯಾವ ದೇಶದಲ್ಲೂ ಸಿಗದಂತ ಅತ್ಯಮೂಲ್ಯವಾದ ಸಂಸ್ಕೃತಿ, ಪರಂಪರೆ, ಧರ್ಮಬೋಧನೆ, ಎಲ್ಲವೂ ಇದೆ. ಅದನ್ನು ಪುನರುಜ್ಜಿವನಗೊಳಿಸಿ ಮುಂದಿನ ಪೀಳಿಗೆಗೆ ಎರಕಹೊಯ್ಯಬೇಕಾದ ಉತ್ತರದಾಯತ್ವ ನಮ್ಮೆಲ್ಲರ ಮೇಲಿದೆ. ಕನ್ನಡಿಯ ಮೇಲಿನ ಧೂಳನ್ನು ಒರೆಸಿ, ಶುದ್ಧಿಗೊಳಿಸಿ ಪ್ರತಿಬಿಂಬ ನಿಚ್ಚಳವಾಗಿ ಕಾಣುವಂತೆ ಮಾಡಬೇಕಾಗಿದೆ.

**ಮುಕ್ತಕ-16**

**ಇಳೆಯ ಬಿಟ್ಟಿನ್ನುಮೆತ್ತಲುಮೈದದ ಪ್ರೇತ |**
**ವಲೆವಂತೆ ಲೋಕ ತಲ್ಲಣಿಸಿಹುದಿಂದು ||**
**ಹಳೆಧರ್ಮ ಸತ್ತಿಹುದು ಹೊಸ ಧರ್ಮ ಹುಟ್ಟಿಲ್ಲ |**
**ತಳಮಳಕೆ ಕಡೆಯೆಂದೋ? -ಮಂಕುತಿಮ್ಮ**

ಇಳೆಯ ಬಿಟ್ಟಿನ್ನುಮೆತ್ತಲುಮೈದದ=ಇಳೆಯ+ಬಿಟ್ಟು+ಇನ್ನು+ಎತ್ತಲುಂ+ಐದದ, ಪ್ರೇತವಲೆವಂತೆ=ಪ್ರೇತವು+ಅಲೆವಂತೆ, ಕಡೆಯಂದು=ಕಡೆ+ಎಂದು, ಇಳೆ=ಭೂಮಿ, ಎತ್ತಲುಂ=ಯಾವಕಡೆಗೂ, ಐದದ=ಸೇರದ, ಪ್ರೇತ=ಮರಣಾನಂತರದ ಪ್ರಯಾಣದಲ್ಲಿ ಇರುವ ಆತ್ಮದ ಸ್ಥಿತಿ. ತಲ್ಲಣಿಸಿಹುದು=ಒದ್ದಾಡುತ್ತಿದೆ.

ಈ ಭೂಮಿಯನ್ನು ಬಿಟ್ಟು ಎತ್ತಲೂ ಸೇರದ ಪ್ರೇತದಂತೆ ಲೋಕ ತಲ್ಲಣಿಸುತ್ತಿದೆ. ಹಳೆ ಧರ್ಮ ಸತ್ತಿದೆ. ಹೊಸ ಧರ್ಮ ಹುಟ್ಟಿಲ್ಲ ತಳಮಳಕೆ 'ಕಡೆ' ಎಂದು? ಎಂದು ತಮ್ಮನ್ನು ತಾವೇ ಪ್ರಶ್ನಿಸುತ್ತಾ ಅದೇ ಪ್ರಶ್ನೆಯನ್ನು ನಮ್ಮ ಮುಂದಿಡುತ್ತಾರೆ.

ಭಾರತ ದೇಶವು ಅನ್ಯ ದೇಶದವರ ಆಕ್ರಮಣಕ್ಕೆ ಬಲಿಯಾಗಿ, ಹಾಗೆ ಬಂದ ಆಕ್ರಮಣಕಾರರು ಈ ದೇಶದಲ್ಲೇ ನೆಲೆಯೂರಿ ನಿಂತಾಗ, ಅವರ ನಂಬಿಕೆಗಳು, ವಿಶ್ವಾಸಗಳು, ಆಚಾರ-ವಿಚಾರಗಳು, ಉಡುಗೆ-ತೊಡಿಗೆಗಳ ಶೈಲಿ ಹೀಗೆ ಎಲ್ಲವೂ ನಮ್ಮ ದೇಶದ ಸಂಸ್ಕೃತಿಯ ಮೇಲೆ ತನ್ನ ಪರಿಣಾಮವನ್ನು ಬೀರುತ್ತ, ಕಾಲಕ್ರಮದಲ್ಲಿ ಇಲ್ಲಿನ ಸಂಸ್ಕೃತಿಯಲ್ಲಿ ಹಾಸುಹೊಕ್ಕಾಗಿ ನೆಲೆ ನಿಂತಿತು. ಆಗ ಅದರದು ಬೇರೆಯೇ ರೂಪ. ಆ ರೂಪ ಹಳೆಯದನ್ನು ಬಿಡಲಾಗದೆ, ಹೊಸದನ್ನು

ಸಂಪೂರ್ಣ ಅಳವಡಿಸಿಕೊಳ್ಳಲಾಗದೆ ಒಂದು ಹೊಸರೂಪವನ್ನೇ ತಾಳಿತು. ಆದರೆ ಆ ಹೊಸರೂಪದಲ್ಲೂ ಒಂದು ತಳಮಳ, ಒಂದು ಚಡಪಡಿಕೆ ಇದೆ. ಅತ್ತ ಹಳೆಯದನ್ನು ಬಿಟ್ಟರೆ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುವ ಭಯ, ಇತ್ತ ಹೊಸದರ ಹೊಸತನದ ಮೋಜು. ಇವೆರಡರ ರೂಪವೇ ಒಂದು ಎಡಬಿಡಂಗಿ ಸ್ವರೂಪ. ಇಂದು ನಾವು ಇರುವುದೇ ಅಂತಹ ಸ್ಥಿತಿಯಲ್ಲಿ. ಇದನ್ನು ಶ್ರೀ ಗುಂಡಪ್ಪನವರು "ಈ ಭೂಮಿಯನ್ನು ಬಿಟ್ಟು ಎತ್ತಲೂ ಸೇರದ ಪ್ರೇತದಂತೆ" ಎಂದು ಹೇಳುತ್ತಾರೆ. ಇದು ಒಂದು ಉಪಮೆ ಅಷ್ಟೇ. ಸನಾತನದಲ್ಲಿ ಆತ್ಮಗಳ ಬಗ್ಗೆ ಅಂತಹ ನಂಬಿಕೆ ಉಂಟು. ಅನ್ಯಧರ್ಮೀಯರಲ್ಲೂ ಬೇರೆ ಬೇರೆ ರೂಪದಲ್ಲಿ ಆ ನಂಬಿಕೆ ಉಂಟು. ಆದರೆ ತಮ್ಮನ್ನು ತಾವು ಪ್ರಗತಿಪರರು ಅಥವಾ ಬುದ್ಧಿಜೀವಿಗಳು ಎಂದು ಅಂದುಕೊಂಡಿರುವ ಕೆಲವರು, ಇದರ ಸೂಕ್ತತೆಯನ್ನು ಮತ್ತು ಪ್ರಸ್ತುತತೆಯನ್ನು ಪ್ರಶ್ನಿಸುತ್ತಾರೆ. ಹಾಗೆ ಪ್ರಶ್ನೆ ಮಾಡುವ, ಅಲ್ಲಗಳೆಯುವ ಮತ್ತು ಟೀಕಿಸುವ ಹಕ್ಕೂ ಅವರಿಗೆ ಉಂಟು.

ಹಾಗೆ ಹಳೆಯದನ್ನು ಬಿಟ್ಟೂ ಬಿಡದ ಹಾಗೆ, ಹೊಸದನ್ನು ಹಿಡಿದೂ ಹಿಡಿಯದ ಹಾಗೆ ಇಂದಿನ ಸಮಾಜದಲ್ಲಿ ಎಲ್ಲರೂ ಇದ್ದಾರೆ. ಅದಕ್ಕೆ ಹಲವಾರು ಕಾರಣಗಳು. ವಿದ್ಯಾಭ್ಯಾಸದ ಕ್ರಮ ಬದಲಾವಣೆ, ಹೊಸ ಹೊಸ ಸಾಧನಗಳು ಮತ್ತು ಮಾಹಿತಿ ತಂತ್ರಜ್ಞಾನದ ಸ್ಫೋಟ, ಜಾಗತೀಕರಣ, ಹೀಗೆ ಹತ್ತು ಹಲವಾರು ಕಾರಣಗಳು. ಹಿಂದೆ ಇದ್ದದ್ದು ಇಂದು ಇಲ್ಲ. ಇಂದು ಇರುವುದು ಮುಂದಿರುವುದಿಲ್ಲ. ಅಂತಹ ಸ್ಥಿತಿಯಲ್ಲಿ ಜನರು ಯಾವುದೇ ಒಂದು ನಿರ್ಧಿಷ್ಟತೆಯಲ್ಲಿ ಇರದೇ ಒಂದು ಅತಂತ್ರದ ಸ್ಥಿತಿಯಲ್ಲಿದ್ದಾರೆ ಎಂದು ಮಾನ್ಯ ಗುಂಡಪ್ಪನವರು ಹೇಳುತ್ತಾರೆ. ಭಾಷೆ, ಜೀವನದ ಶೈಲಿ, ಉದ್ಯೋಗ, ಸಂಪಾದನೆ ಎಲ್ಲವೂ ಇಂದಿನ ಜನಾಂಗದ ಮೇಲೆ



ಪರಿಣಾಮ ಬೀರಿದೆ. ಇಂದು ನಾವು ಹೊಸದಾಗಿ ಕಾಣುತ್ತಿರುವುದು ಹೊಸ ವಿದ್ಯಮಾನವೇನಲ್ಲ. ನಮ್ಮ ಭಾರತೀಯ ಇತಿಹಾಸದಲ್ಲೇ ಬೇರೆ ಬೇರೆ ಸಮಯಗಳಲ್ಲಿ ಇಂತಹ ಅತಂತ್ರ ಸ್ಥಿತಿಗಳನ್ನು ನೋಡಬಹುದು. ಅಂದಿನ ಭೌಗೋಳಿಕ, ರಾಜಕೀಯ, ಸಾಂಸ್ಕೃತಿಕ ಮತ್ತು ಆರ್ಥಿಕ ಸ್ಥಿತಿಗಳು ಅಂದಿಗೆ, ಇಂದಿನ ಭೌಗೋಳಿಕ ರಾಜಕೀಯ, ಸಾಂಸ್ಕೃತಿಕ ಮತ್ತು ಆರ್ಥಿಕ ಸ್ಥಿತಿಗಳು ಇಂದಿನ ಸ್ಥಿತಿಗೆ ಕಾರಣವಾಗುತ್ತದೆ.

ಚಾಣಕ್ಯನಂತಹ ಮುತ್ಸದ್ದಿಗಳು ಬಂದಾಗ ಏನೋ ಒಂದು ರೀತಿಯ ಕಲರವ ಉಂಟಾಗಿ ಸ್ವಲ್ಪ ಬದಲಾವಣೆಗಳನ್ನು ಕಾಣಬಹುದು. ಆದರೆ ಸ್ವಾಭಾವಿಕವಾಗಿ ಮಾನ್ಯ ಡಿ.ವಿ.ಜಿ.ಯವರು ಹೇಳಿದಂತೆ ಮತ್ತೆ ಅದೇ ಅತಂತ್ರ ಸ್ಥಿತಿಗೆ ಒಗ್ಗಿ ಹೋಗುತ್ತದೆ ಇಡೀ ಸಮಾಜ. ಆದರೆ ಇಂತಹ ಪ್ರತಿಪಾದನೆಗಳಿಗೆ, ಕೆಲವು ವ್ಯಕ್ತಿಗಳು ಭಿನ್ನವಾಗಿರಬಹುದು. ಶುದ್ಧ ಸತ್ವದಲ್ಲಿ ಯಾವುದು ಪುರಾತನವೋ ಯಾವುದು ಸನಾತನವೋ ಅದನ್ನು ಪಾಲಿಸುತ್ತಿರಬಹುದು. ಆದರೆ ಒಟ್ಟಾರೆ ಸಮಾಜವನ್ನು ನೋಡಿದಾಗ ಎಲ್ಲೋ ಏನೋ ಸರಿಯಿಲ್ಲ ಎನ್ನುವ ಭಾವನೆ ಬರುತ್ತದೆ. ಅದನ್ನೇ ಡಿ.ವಿ.ಜಿ.ಯವರು "ಲೋಕ ತಲ್ಲಣಿಸಿಹುದಿಂದು" ಎಂದರು.

ಆದರೆ ನಾವು ನೋಡಬೇಕಾದದ್ದು ಏನೆಂದರೆ, ಇದು ಸರಿಯೇ ಎಂದು ಬದಲಾವಣೆಯೇ ಪ್ರಪಂಚದ ಮೂಲ ಗುಣವಾದ್ದರಿಂದ ಇದು ಸರಿ. ಅಸ್ತಿತ್ವವನ್ನು ಕಳೆದುಕೊಳ್ಳುವುದರಿಂದ ಇದು ಸರಿಯಿಲ್ಲ. ಹಾಗಾಗಿ ಏನು ಮಾಡಬೇಕು. ಡಿ.ವಿ.ಜಿ.ಯವರೆ ಮುಂದಿನ ಒಂದು ಮುಕ್ತಕದಲ್ಲಿ ಹೇಳುತ್ತಾರೆ "ಹೊಸ ಚಿಗುರು ಹಳೆ ಬೇರು ಕೂಡಿರಲು ಮರ ಸೊಬಗು ಹೊಸ ಯುಕ್ತಿ ಹಳೆ ತತ್ವ ..." ಎಂದು, ಅಂದರೆ ನೈಸರ್ಗಿಕವಾದ ಮತ್ತು ಸ್ವಾಭಾವಿಕವಾದ ಬದಲಾವಣೆ ಬೇಕು ಮತ್ತು ಆಗಬೇಕು.

ಹಳೆಯ ಮತ್ತು ಕಾಲದಲ್ಲಿ ಪರಿಕಿಸಿ ನಿರೂಪಿಸಲ್ಪಟ್ಟು ಸರ್ವಕಾಲಕ್ಕೂ ಅನ್ವಯವಾಗುವಂತಾ ಸಿದ್ಧಾಂತಗಳ ಆಧಾರದಮೇಲೆ ಹೊಸತು ಪಲ್ಲವಿಸ ಬೇಕು. ಆಗ ಹಳತು ಆಂತರ್ಯದಲ್ಲಿ ಉಳಿದು ಹೊಸತು ಪಲ್ಲವಿಸಿ ಬೆಳೆದು ಹಳೆಯದಕ್ಕೆ ಹೊಳಪಿತ್ತಂತೆ ಆಗುತ್ತದೆ. ಹೊಸತು, ಆ ಹೊಳಪಿನ ಬೆಳಕಲ್ಲಿ ಸುಂದರವಾಗಿ ಕಾಣುತ್ತದೆ. ಆಗ ಎರಡೂ ಸಮನ್ವಯಗೊಂಡು ಒಂದು ಹೊಸ ನೆಲೆ ಸಿಕ್ಕಂತಾಗುತ್ತದೆ. ಆದರೆ ವಿಷಾದವೇನೆಂದರೆ ಇಂದು ಯಾರಿಗೂ ಹಳೆಯದು ಬೇಡ. ಅದರ ಅರ್ಥ ಬೇಡ. ಅದರ ಸತ್ವ ಬೇಡ, ಅದನ್ನು ಗೊಡ್ಡು ಸಂಪ್ರದಾಯ ಎಂದು ಮೂದಲಿಸುವ, ಜರಿಯುವ, ನೇಪಥ್ಯಕ್ಕೆ ಸರಿಸುವ ಇಂದಿನ ಜನಾಂಗವು ಸತ್ಯವಾಗಲೂ ಗುಂಡಪ್ಪನವರು "ಎತ್ತಲೂ ಸೇರದ ಪ್ರೇತದಂತೆ ಲೋಕ ತಲ್ಲಣಿಸುತ್ತಿದೆ" ಎಂದು ಹೇಳಿದಂತೆ ಇದೆ.

ಇಂದಿನ ಜನಾಂಗವೆಲ್ಲ ಅಂತರ್ ಪಿಶಾಚಿಗಳ ತರಹವೇ ಇದ್ದಾರೆ. ಹಾಗಾಗಿ ಎಲ್ಲರಲ್ಲೂ ಹಳೆಯ ಸತ್ವಯುತವಾದ ಸಿದ್ಧಾಂತಗಳ, ಸಂಸ್ಕೃತಿಯ, ಸಂಸ್ಕೃತಿಯನ್ನು ಒಳಗೊಂಡ ಭಾಷೆ, ಸಾಹಿತ್ಯ, ಕಲೆ ಮುಂತಾದವುಗಳನ್ನು ಪುನರುಜ್ಜಿವನ ಮಾಡಲು ಒಂದು ಪ್ರಾಮಾಣಿಕ ಪ್ರಯತ್ನ ನಡೆಯಬೇಕು. ಅಂತಹ ಪ್ರಯತ್ನ ಎಲ್ಲ ಆಯಾಮಗಳಿಂದಲೂ ಒಂದೇ ಸಲಕ್ಕೆ ಒಂದು ಸ್ಫೋಟದಂತೆ ಆದಾಗ ಮಾತ್ರ ಒಂದು ಸಕಾರಾತ್ಮಕವಾದ

ಬದಲಾವಣೆಯನ್ನು ನಾವು ನೋಡಬಹುದು. ನಮ್ಮ ಭಾರತೀಯತೆಯನ್ನು, ಸಂಸ್ಕೃತಿಯನ್ನು ಉಳಿಸಬೇಕಾದರೆ ಅಂತಹ ಪ್ರಯತ್ನ ಅಗತ್ಯ. ಬನ್ನಿ ಮಿತ್ರರೇ, ನಾವೂ ಅಂತಹ ಪ್ರಯತ್ನದಲ್ಲಿ ನಮ್ಮನ್ನು ತೊಡಗಿಸಿ ಕೊಳ್ಳೋಣ.





**ಮುಕ್ತಕ-17**

**ತಳಮಳವಿದೇನಿಳೆಗೆ? ದೇವದನುಜರ್ ಮಥಿಸೆ |**
**ಜಳಧಿಯೊಳಾದಂತೆ ಸುಧೆಗೆ ಪೀಠಿಕೆಯೇಂ? ||**
**ಹಾಲಾಹಲವ ಕುಡಿವ ಗಿರೀಶನಿರ್ದೊಡೀ |**
**ಕಳವಳವದೇತಕೆಲೋ?-ಮಂಕುತಿಮ್ಮ ||**

ತಳಮಳವಿದೇನಿಳೆಗೆ=ತಳಮಳವಿದು+ಏನು+ಇಳೆಗೆ,ದೇವದನುಜರ್=ದೇವದ+ಅನುಜರ್,
ಜಳಧಿಯೊಳಾದಂತೆ=ಜಲಧಿಯೊಳು+ಆದಂತೆ,ಗಿರೀಶನಿರ್ದೊಡೀಗಿರೀಶನು+ಇರ್ದೊಡೆ,
ಕಳವಳವದೇತಕೆಲೋ=ಕಳವಳವು+ಅದು+ಏತಕೆ+ಎಲೋ,

ದೇವದನುಜರ್=ದೇವಲೋಕದ ಅಣ್ಣ ತಮ್ಮಂದಿರು, ಮಥಿಸೆ=ಕಡೆಯೆ, ಜಲಿಧಿ=ಸಮುದ್ರ, ಸುಧೆ=ಅಮೃತ, ಪೀಠಿಕೆ=ಭೂಮಿಕೆ, ಪ್ರಸ್ತಾವನೆ, ಹಾಲಾಹಲ=ವಿಷ, ಗಿರೀಶ=ಶಿವ

ಇಲ್ಲಿ ಒಂದು ಆಶಾಭಾವನೆಯನ್ನು ವ್ಯಕ್ತಪಡಿಸುತ್ತಾರೆ, ಶ್ರೀ ಗುಂಡಪ್ಪನವರು. ಆಗ ಎಲ್ಲೆಲ್ಲೂ ಅತಂತ್ರದ ಸ್ಥಿತಿ. ಹಳೆಯ ಭಕ್ತಿ ಶ್ರದ್ಧೆಗಳು ನಶಿಸಿ ಹೊಸದು ಯಾವುದೂ ಇಲ್ಲದೆ, ಒಂದು ಅತಂತ್ರದ ಸ್ಥಿತಿ ಇದೆ. ಜನರೆಲ್ಲಾ ಕಳವಳಗೊಂಡು ತಳಮಳಿಸುತ್ತಿದ್ದಾರೆ. ಅಂತಹ ಸ್ಥಿತಿಯಲ್ಲಿ ಇವರಿಗೊಂದು ಆಶಾಭಾವನೆ. ಅದನ್ನು ಅವರು ಈ ಮುಕ್ತಕದಲ್ಲಿ ಸೂಚಿಸುತ್ತಾರೆ.

ಹಿಂದೆ, ದೇವಲೋಕದಲ್ಲಿ ಅಮೃತವನ್ನು ಪಡೆಯಲು ಸಮುದ್ರ ಮಂಥನ ನಡೆಯಿತು. ಅದನ್ನು ನಡೆಸಿದವರು ದೇವತೆಗಳು ಮತ್ತು ದಾನವರು. ಇವರನ್ನು ಗುಂಡಪ್ಪನವರು ಸೂಕ್ತವಾಗಿ “ದೇವಲೋಕದ ಅನುಜರ್” ಎಂದು

ಸಂಬೋಧಿಸುತ್ತಾರೆ. ಏಕೆಂದರೆ ಪುರಾಣದ ಪ್ರಕಾರ ಈ ದೇವತೆಗಳು ಮತ್ತು ದಾನವರು ಇಬ್ಬರೂ ಕಶ್ಯಪ ಬ್ರಹ್ಮನ ಮಕ್ಕಳು. ಹಾಗಾಗಿ ಅವರನ್ನು ಅಣ್ಣ ತಮ್ಮಂದಿರು ಎಂದಿದ್ದಾರೆ. ವಾಚಕರು ಈ ದೇವದಾನವರು ನಡೆಸಿದ ಅಮೃತ ಮಂಥನದ ಕಥೆಯನ್ನು ಬೇರೆಯಾಗಿ ಓದಬೇಕಾಗಿ ವಿನಂತಿ. ಆದರೆ ಆ ಮಂಥನದಲ್ಲಿ ಮೊದಲು ಹಾಲಾಹಲ ಅಂದರೆ ವಿಷದ ಉದ್ಭವವಾಯಿತಂತೆ. ಘನ ಘೋರ ವಿಷವನ್ನು ಲೋಕ ಕಲ್ಯಾಣಕ್ಕಾಗಿ ಗಿರಿಜಾಪತಿ ಪರಮಶಿವನು ಕುಡಿದುಬಿಟ್ಟನಂತೆ. ಅದನ್ನು ಪಾರ್ವತಿ ಕಂಠದಲ್ಲೇ ತಡೆದದ್ದರಿಂದ ಅದು ಅಲ್ಲೇ ನಿಂತು, ಶಿವನು, "ನೀಲಕಂಠ ಮತ್ತು ವಿಷಕಂಠ" ನಾದನಂತೆ. ಹಿಂದಿನ ಮುಕ್ತಕದಲ್ಲಿ ಮಾನ್ಯ ಗುಂಡಪ್ಪನವರು 'ಹಳೆ ಧರ್ಮ ಸತ್ತಿಹುದು ಹೊಸ ಧರ್ಮ ಹುಟ್ಟಿಲ್ಲ-ತಳಮಳಕೆ ಕಡೆಯೆಂದು" ಎಂದು ತಮ್ಮ ಕಳವಳವನ್ನು ವ್ಯಕ್ತಪಡಿಸುತ್ತಾರೆ. ಆ ಕಳವಳಕ್ಕೆ ಉತ್ತರವೆಂಬಂತೆ ಈ ಮುಕ್ತಕದಲ್ಲಿ ಈ ರೀತಿಯ ಕಳವಳ, ತಳಮಳಗಳು ಸಹಜ. ಒಂದು ಉತ್ತಮವಾದ ವಸ್ತು ಈ ಪ್ರಪಂಚಕ್ಕೆ ಸಿಗಬೇಕಾದರೆ ಈ ರೀತಿಯ ಮಂಥನವಾಗಬೇಕು. ಇಲ್ಲಿ ದೇವದಾನವರ ಉಲ್ಲೇಖ ಮಾಡಿ ಮನುಷ್ಯನ ಅಂತರ್ಯದಲ್ಲಿರುವ ಒಳ್ಳೆಯ ಮತ್ತು ಕೆಟ್ಟ ಗುಣಗಳನ್ನು ಸೂಚ್ಯವಾಗಿ ಹೇಳುತ್ತಾರೆ.

ಮನುಷ್ಯನ ಮನಸ್ಸಿನಲ್ಲಿ ಒಳ್ಳೆಯದು ಕೆಟ್ಟದ್ದು ಎರಡೂ ಇರುತ್ತದೆ. ಪ್ರಮಾಣ ಮತ್ತು ಪರಿಮಾಣಗಳ ವ್ಯತ್ಯಾಸ ಅಷ್ಟೇ. ಯಾವುದು ಅಧಿಕವಾಗಿದ್ದರೆ ಅದರ ಪ್ರಾಬಲ್ಯ. ಆದರೆ ಒಂದು ವ್ಯಕ್ತಿಯಿಂದ ಮಹತ್ತರ ಕಾರ್ಯವಾಗಬೇಕಾದರೆ ಆಂತರ್ಯದಲ್ಲೂ ತಿಕ್ಕಾಟಗಳು ತುಮುಲಗಳು ನಿರಂತರ ನಡೆಯಬೇಕು ಸಮುದ್ರ





ಮಂಥನದ ರೀತಿ, ನಮ್ಮ ಲೋಕದ ಮಹಾ ಮಹಿಮರೆಲ್ಲರಿಗೂ ಇಂಥಹ ಅನುಭವವಾಗಿದೆ. ಅವರ ಪ್ರಯತ್ನದಲ್ಲಿ ಅವರಿಗೆ "ವಿಷ" ರೂಪದಲ್ಲಿ ಬೇಕಾದಷ್ಟು ಕಷ್ಟಗಳು ಬಂದಿವೆ. ಆ ಮಹಾಮಹಿಮರೆಲ್ಲ ಅಂತಹ ಕಷ್ಟಗಳನ್ನೆಲ್ಲ "ಪರಶಿವನು ಹಾಲಾಹಲವನ್ನು ಕುಡಿದಂತೆ" ನುಂಗಿ ಲೋಕ ಕಲ್ಯಾಣಕ್ಕಾಗಿ ತಮ್ಮ ಜೀವನವನ್ನು ತ್ಯಾಗಮಾಡಿದ್ದಾರೆ. ಉದಾಹರಣೆಗೆ, ನಮ್ಮ ದೇಶಕ್ಕೆ ಚಾಣಕ್ಯ (ವಿಷ್ಣುಶರ್ಮ)ನ ಕೊಡುಗೆ ಅಪಾರ. ಅಷ್ಟೇ ಕಷ್ಟ ನಿಷ್ಠೂರಗಳನ್ನು ಅನುಭವಿಸಿದ ಅವನು. ಹೀಗೆ, ಶಂಕರರು, ರಾಮಾನುಜರು, ಬಸವಣ್ಣನವರು, ನಮ್ಮ ದೇಶದ ಸ್ವಾತಂತ್ರ್ಯ

ಹೋರಾಟಗಾರರಾದ ಭಗತ್‌ಸಿಂಗ್, ಚಂದ್ರಶೇಖರ್ ಅಜಾದ್, ರಾಜಗುರು, ಬೋಸ್ ಮುಂತಾದ ಅನೇಕ ವೀರರು ಸ್ವಾರ್ಥ ತೊರೆದು ಲೋಕಕಲ್ಯಾಣಕ್ಕಾಗಿ ಕಷ್ಟಗಳೆಂಬ ವಿಷವನ್ನು, ಪರಶಿವನಂತೆ ಕುಡಿದ ದೃಷ್ಟಾಂತಗಳು ನಮಗೆ ಹೇರಳವಾಗಿ ಸಿಗುತ್ತದೆ.

ಅದೇ ರೀತಿ ಇಂದು ಇರುವ ಪರಿಸ್ಥಿತಿಯೂ ಬದಲಾಗಿ ಇಂದಿರುವ ವಿಷ ಮತ್ತ ವಿಷಮ ಪರಿಸ್ಥಿತಿ ಕರಗಿ ಅಮೃತ ಹುಟ್ಟುವುದಕ್ಕೆ ಈ ರೀತಿಯ ತಿಕ್ಕಾಟವೇ, ತುಮುಲಗಳೇ, ತಳಮಳವೇ, ಪೀಠಿಕೆಯೋ ಎಂದು ಕೇಳುತ್ತಾರೆ ಶ್ರೀ ಗುಂಡಪ್ಪನವರು. ಅಂದು ಪರಶಿವನು "ವಿಷ"ವನ್ನು ಕುಡಿದು ಲೋಕಕಲ್ಯಾಣವನ್ನು ಮಾಡಿದ ಹಾಗೆ ಇಂದೂ ಯಾರಾದರೂ ಬರಬಹುದೆಂದು ಅವರ ಆಸೆ. ಅವರ ಆಶಾಭಾವಕ್ಕೆ ಒಂದು ನಮಸ್ಕಾರ. ಆದರೆ ವಾಚಕರೆ, ವಿಚಾರ ಮಾಡಿ ನೋಡಿ, ಇಂದಿನ ಮಥನದಿಂದ ಅಂದರೆ ಲೋಕದ ದ್ವಂದ್ವಗಳಿಂದ ಮತ್ತು ಆ ದ್ವಂದ್ವಗಳ ತಿಕ್ಕಾಟದಿಂದ, ತೊಳಲಾಟದಿಂದ ಇನ್ನೂ ಅಮೃತ ಬಂದೇ ಇಲ್ಲ. ಎಲ್ಲೆಲ್ಲೂ ವಿಷಮ ಸ್ಥಿತಿಯ ವಿಷದ ಧಾರೆ ಹರಿಯುತ್ತಿದೆ. ದ್ವೇಷಾಸೂಯೆಗಳ, ಭಾಷಾಸೂಯೆಗಳ, ಅಹಂಕಾರದ, ಜನಬಲದ ಮದ, ಧನಬಲದ ಮದ, ಅಧಿಕಾರ ಮದದ ವಿಷದ ಗಾಳಿ ಎಲ್ಲೆಲ್ಲೂ ಹರಡಿದೆ. ಸಮಾಜ ಪ್ರೀತಿ ಕರುಣೆ ವಾತ್ಸಲ್ಯಗಳ ಕೊರತೆಯಿಂದ ಸೊರಗಿದೆ. ಹಳೆಯ ಶ್ರದ್ಧೆ-ಭಕ್ತಿಗಳ ಮತ್ತು ಆಧುನಿಕತೆಯ, ಡಂಬ ತೋರಿಕೆಯ ಜೀವನದ ನಡುವೆಯ ಅಂತರ ಅಗಾಧವಾಗುತ್ತಿದೆ.

ಅಂದು ಈಗ್ಗೆ ಎಂಬತ್ತು ವರ್ಷಗಳ ಹಿಂದೆ ಡಿ.ವಿ.ಜಿ.ಯವರು ಕಂಡ ಅಮೃತದ ಕನಸು ನನಸಾಗುವ ಕಾಲ ಬಂದೀತೆ ಎಂದರೆ, ನಾವು ಆಶಾಭಾವನೆಯನ್ನು ಎಂದಿಗೂ ಬಿಡಬಾರದು, ಇಂದಿನ ಯುವ ಪೀಳಿಗೆಗೆ ಮತ್ತು ಮುಂದಿನ ಪೀಳಿಗೆಗೆ, ಹಿಂದಿನ ತತ್ವಗಳ ಸತ್ವವನ್ನು ತಿಳಿಸಿಕೊಡಬೇಕು. ಅವುಗಳ ಅರಿವು ಮೂಡಿಸಬೇಕು. ಬಹಳಷ್ಟು ಜನ ಆ ಪ್ರಯತ್ನದಲ್ಲಿ ಇದ್ದರೂ ಇಷ್ಟು ವಿಶಾಲವಾದ ದೇಶದಲ್ಲಿ ಆಧುನಿಕತೆಯ ಪೊಳ್ಳು ಸಂಸ್ಕೃತಿಯ ವ್ಯಾಪ್ತಿಯನ್ನು ಮಟ್ಟಹಾಕಲು ಇನ್ನೂ ಸಾಧ್ಯವಾಗಿಲ್ಲ. ಶೀಘ್ರವೇ ಫಲ ಬೇಕಾದಲ್ಲಿ, ಸಮರೋಪಾದಿ ಕಾರ್ಯಗಳು ನಡೆದು ನಮ್ಮ ಭಾರತೀಯತೆಯನ್ನು ಅರಿತುಕೊಳ್ಳಲು ಮತ್ತು ಕಾಪಾಡಲು ಎಲ್ಲರೂ ಪ್ರವೃತ್ತರಾಗಬೇಕು. ಅದಕ್ಕೆ ನಾವು ನೀವು ಎಲ್ಲರೂ ಪ್ರಯತ್ನಪಟ್ಟು ನಮ್ಮ ಸುತ್ತು ಮುತ್ತಲಿನವರನ್ನೂ ಅದಕ್ಕೆ ಪ್ರೇರೇಪಿಸಿದರೆ ಅದು ಸಾಧ್ಯ.

**ಮುಕ್ತಕ-18**

**ನದಿಯ ತೆರೆಯವೊಲುರುಳಿ ಹೊರಳುತಿರುವುದು ಜೀವ |**
**ಮೊದಲಿಲ್ಲ ಮುಗಿವಿಲ್ಲ ನಿಲುವಿಲ್ಲವದಕೆ ||**
**ಬದುಕೇನು ಸಾವೇನು ಸೊದೆಯೇನು ವಿಷವೇನು? |**
**ಉದಕಬುದ್ಬುದವೆಲ್ಲ!-ಮಂಕುತಿಮ್ಮ ||**

ತೆರೆಯವೊಲುರುಳಿ=ತೆರೆಯವೊಲು+ಉರುಳಿ, ಉದಕಬುದ್ಬುದವೆಲ್ಲ=ಉದಕ+ಬುದ್ಬುದವು+ಎಲ್ಲ, ತೆರೆಯವೊಲು=ನದಿಯ ಅಲೆಯಂತೆ, ಮುಗಿವಿಲ್ಲ=ಕೊನೆಯಿಲ್ಲ, ನಿಲುವಿಲ್ಲ-ನಿಲುವು ಅಂದರೆ ಸ್ಥಿರತೆ, ಸೊದೆಯೇನು=ಅಮೃತವೇನು, ಉದಕ=ನೀರು, ಬುದ್ಬುದ=ಗುಳ್ಳೆ

ವಾಚಕರೆ ಹಿಂದಿನ ಮುಕ್ತಕದಲ್ಲಿ ಈ ಹಳತು ಹೊಸತನದ ತಿಕ್ಕಾಟವನ್ನು ಅಮೃತಕ್ಕಾಗಿ ನಡೆಯುವ ಸಮುದ್ರ ಮಂಥನಕ್ಕೆ ಹೋಲಿಸಿದರು ಮಾನ್ಯ ಡಿ.ವಿ.ಜಿ. ಯವರು. ಆದರೆ ಈ ಮುಕ್ತಕದಲ್ಲಿ ಒಂದು ವೇದಾಂತದ ಮಾತನ್ನು ಸೂಚಿಸಿದ್ದಾರೆ. ಇಡೀ ಜೀವನವನ್ನು ಅವರು ಒಂದು ನದಿಯ ತೆರೆ ಅಥವಾ ಅಲೆಯಂತೆ ಎಂದಿದ್ದಾರೆ. ಒಂದು ನಿಮಿಷವೂ ಒಂದೇ ತೆರನಾಗಿ ಇರದ ನದಿಯ ತೆರೆಗೆ ಹೋಲಿಸಿದ್ದಾರೆ.

ಹೌದು ಯಾರ ಜೀವನವೂ ಎಂದೂ ಒಂದೇ ತೆರನಾಗಿ ಇರುವುದಿಲ್ಲ. ಬದಲಾವಣೆಯಾಗುತ್ತಲೇ ಇರುತ್ತದೆ. ಅದಕ್ಕೆ ನಾನು ಅದನ್ನು kaleidoscopic ಲೈಫ್ ಎಂದು ಕರೆಯುತ್ತೇನೆ. ಕೆಲಿಡೋಸ್ಕೋಪ್ ಎನ್ನುವುದು ನಾವು ಚಿಕ್ಕಂದಿನಲ್ಲಿ ಮೂರು ಬಿಳಿಯ ಗಾಜಿನ ಪಟ್ಟಿಗಳನ್ನು ತೆಗೆದುಕೊಂಡು ಮೂರನ್ನೂ ತ್ರಿಕೋನಾಕಾರದಲ್ಲಿ ಜೋಡಿಸಿ ಎಲ್ಲ ಬದಿಯಿಂದಲೂ ಬಂಧಿಸಿ ಒಂದು ಕೊನೆಯನ್ನು ಮುಚ್ಚಿ ಸುತ್ತಲೂ ಕಾಗದವನ್ನು ಸುತ್ತಿ ಬಿಡುತ್ತಿದ್ದೆವು. ತೆರೆದ ಬದಿಯಿಂದ ಒಡೆದ ಗಾಜಿನ ಬಳೆಯ ಚೂರುಗಳನ್ನು ಹಾಕಿದರೆ ಒಂದು ಚಿತ್ತಾರ (ಡಿಸೈನ್) ಮೂಡುತ್ತಿತ್ತು. ಅದನ್ನು ತಿರುಗಿಸುತ್ತಾ ಹೋದಂತೆಲ್ಲ, ಬೇರೆಬೇರೆ ಚಿತ್ತಾರಗಳು ಮೂಡುತ್ತಿದ್ದವು. ಒಂದು ಬಾರಿ ಮೂಡಿದ ಚಿತ್ತಾರ ಮತ್ತೊಂದು ಬಾರಿಗೆ ಎಂದೂ ಬರುವುದಿಲ್ಲ. ಹಾಗೆಯೇ ನಮ್ಮ ಜೀವನಗಳು ಈಗ ಇದ್ದಂತೆ ಎಲ್ಲವೂ ಮತ್ತೆಂದಿಗೂ ಇರುವುದಿಲ್ಲ. ದಿನಕಳೆದಂತೆ ನಮ್ಮ ವಯಸ್ಸು ಒಂದು ದಿನ ಹೆಚ್ಚಾಗುತ್ತದೆ. ಒಂದು ದಿನ ಇದ್ದ ಮನೋಭಾವ ಮತ್ತೊಂದು ದಿನ ಇರುವುದಿಲ್ಲ, ಒಂದು ಗಳಿಗೆ ಇದ್ದ ನಮ್ಮ ಯೋಚನಾ ವಿಧ ಮತ್ತೊಂದು ಗಳಿಗೆ ಇರುವುದಿಲ್ಲ. ಇದನ್ನೇ ಮಾನ್ಯ ಗುಂಡಪ್ಪನವರು "ನಿಲುವಿಲ್ಲ" ಎಂದರು.

ಇನ್ನು ನಾವು ಈಗ ಮನುಷ್ಯರಾಗಿ ಹುಟ್ಟಿದ್ದೇವೆ, ಹಿಂದೆ ಏನಾಗಿದ್ದೆವೋ ಮುಂದೆ ಏನಾಗುತ್ತೇವೆಯೋ ಗೊತ್ತಿಲ್ಲ. ನಮ್ಮ ಈ ಜೀವನ ಪ್ರಯಾಣ ಎಂದು ಮೊದಲಾಯಿತೋ ಗೊತ್ತಿಲ್ಲ. ಎಂದು ಮುಗಿಯುವುದೋ ಗೊತ್ತಿಲ್ಲ. ಪ್ರಶ್ನೆಗಳು ಉದ್ಭವವಾಗಬಹುದು. ಉತ್ತರವು ಮಾತ್ರ ಸಿಗುವುದಿಲ್ಲ. ಇದಕ್ಕೇ, ಮೊದಲಿಲ್ಲ ಕೊನೆಯಿಲ್ಲ ಎನ್ನುತ್ತಾರೆ ಶ್ರೀ ಗುಂಡಪ್ಪನವರು. ನಮ್ಮ ಸನಾತನ ವೇದಾಂತದ ಪ್ರಕಾರ ಒಂದು ಜೀವಿ ಮಾನವನಾಗಿ ಹುಟ್ಟಬೇಕಾದರೆ ಅದಕ್ಕೆ ಮೊದಲು 84 ಲಕ್ಷ ಬಾರಿ (ಏಸು ಕಾಯಂಗಳ ಕಳೆದು 84 ಲಕ್ಷ ಜೀವರಾಶಿಯನ್ನು ದಾಟಿ ಬಂದ ಈ ಶರೀರ ಎಂಬುದು ದಾಸರ ಪದ.) ಬೇರೆ ಬೇರೆ ದೇಹಗಳನ್ನು ಹೊಕ್ಕು ಹೊರಗೆ ಬಂದು ಮನುಷ್ಯನಾಗುತ್ತಾನೆ, ಅಂದರೆ ಜೀವ ಈ ಮನುಷ್ಯ ದೇಹವನ್ನು ಸೇರುತ್ತದೆ. ನಾವು ಎಂದು ಈ ಮನುಷ್ಯ ದೇಹವನ್ನು ಹೊಕ್ಕೆವೋ ಇದರಿಂದ ಮುಂದೆ ಏನೋ ಎನ್ನುವುದು ಗೊತ್ತಿಲ್ಲ. ಮತ್ತೆ ಈ ಜನ್ಮದ ನಮ್ಮ





ಕರ್ಮಗಳು ಮುಂದಿನ ಜನ್ಮವನ್ನು ನಿರ್ಧರಿಸುತ್ತವೆ ಎಂದೂ ಹೇಳುತ್ತಾರೆ. ಇನ್ನೂ ಕೆಲವರು ಜೀವಿ ತಾನು ಏನಾಗಬೇಕು, ಎಲ್ಲಿಗೆ ಹೋಗಬೇಕು ಎನ್ನುವುದನ್ನು ತಾನೇ ನಿರ್ಧರಿಸುತ್ತಾನೆ ಎನ್ನುತ್ತಾರೆ. ಆ ನಿರ್ಧಾರಗಳು ನಮ್ಮ ಮನಸ್ಸು ಬುದ್ಧಿಗಳಿಗೆ ಗೊತ್ತಾಗುತ್ತವೆಯೋ ಇಲ್ಲವೋ, ಎಲ್ಲವೂ ಅನಿಶ್ಚಯ. ಇದಕ್ಕೆ ಇರುವ ಆದಿಯೂ ಗೊತ್ತಿಲ್ಲ ಅಂತ್ಯವೂ ಗೊತ್ತಿಲ್ಲ. ಇದನ್ನೇ ಗುಂಡಪ್ಪನವರು “ಮೊದಲಿಲ್ಲ ಮುಗಿವಿಲ್ಲ ನಿಲುವಿಲ್ಲವದಕೆ” ಎಂದರು.

ಬದುಕಿನ ಅರ್ಥ ಗೊತ್ತಿಲ್ಲ, ಅಥವಾ ನಮಗೆ ಗೊತ್ತಿರುವುದು ನಮ್ಮ ದೃಷ್ಟಿಕೋನವಷ್ಟೇ, ಸಮಗ್ರ ಸತ್ಯವಲ್ಲವಲ್ಲ. ಸಾವಿನ ಅರ್ಥವಂತೂ ಗೊತ್ತಿಲ್ಲ. ಸಾವೆಂದರೆ ನಮಗೆ ಗೊತ್ತಿರುವುದು, ಒಂದು ವ್ಯಕ್ತಿ ಮೂರ್ತರೂಪದಲ್ಲಿ ಶರೀರದಿಂದ ಇರಲಾಗದ ಸ್ಥಿತಿಯೇ ಸಾವು. ನಾನು ಇದನ್ನು "ರೂಪ ಬದಲಾವಣೆ" ಎನ್ನುತ್ತೇನೆ. ಹಾಗಾಗಿ ಸಾವಿನ ಬಗ್ಗೆಯೂ ನಿಖರವಾದ ಅಭಿಪ್ರಾಯವಿಲ್ಲ. ಬದುಕೇ ನಿರ್ದಿಷ್ಟವಲ್ಲ. ಇನ್ನು ಬದುಕಿಗೆ ಸಂಬಂಧಿಸಿದ ಸುಖವೇನು? ಅಮೃತ ಅಂದರೆ ಸವಿ. ಆ ಸವಿಯನ್ನೇ ಸುಖ ಎಂದುಕೊಳ್ಳಬೇಕು. ವಿಷ (ದುಃಖ) ವೇನು? ಅದೂ ಅರ್ಥವಾಗುವುದಿಲ್ಲ. ಬದುಕೆಲ್ಲ ಒಂದು ಉದಕಬುದ್ದುದ, ಅಂದರೆ ನೀರಿನ ಮೇಲಿನ ಗುಳ್ಳೆ ಎಂದು ಹೇಳುತ್ತಾರೆ ಗುಂಡಪ್ಪನವರು. “ನೀರ ಮೇಲಣ ಗುಳ್ಳೆ ನಿಜವಲ್ಲ ಹರಿಯೇ” ಎಂದು ಪುರಂದರ ದಾಸರು “ಯಾರಿಗೆ ಯಾರುಂಟು ಎರವಿನ ಸಂಸಾರ” ಎಂಬ ಹಾಡಿನಲ್ಲಿ

ಬರೆಯುತ್ತಾರೆ. ಯಾವುದೂ ನಿರಂತರವಲ್ಲ, ನಿಶ್ಚಯವಿಲ್ಲ, ನಿಶ್ಚಯವಿದ್ದರೂ ನಮಗೆ ಅದರ ಅರಿವಿಲ್ಲ. ಅಂತಹ ಭಾವಗಳನ್ನೇ ವ್ಯಕ್ತಪಡಿಸುತ್ತಾರೆ ಶ್ರೀ ಗುಂಡಪ್ಪನವರು.

ಇದು ವೇದಾಂತದ ಮಾತು. ಇದು ಸತ್ಯ. ಈ ಸತ್ಯದ ತಳಹದಿಯಲ್ಲೇ ನಮ್ಮ ಜೀವನ ಸಾಗಬೇಕು. ಆದರೆ ನಾವು "ಅಯ್ಯೋ ಜೀವನವೆಲ್ಲ ನಶ್ವರ, ಯಾವುದೂ ಶಾಶ್ವತವಲ್ಲ ನಾನೇಕೆ ಏನಾದರೂ ಮಾಡಬೇಕು" ಎಂದು ನಿರಾಸೆಯ ಭಾವ ತಳೆಯಬಾರದು. ಅದು ಬದುಕಿಗೆ ಮಾರಕ, ಬದುಕಿಗೆ ಪೂರಕವಾದ ಸದಾಶಾಭಾವವನ್ನೇ ಇಟ್ಟುಕೊಂಡು ಜೀವನವನ್ನು ಸಾಗಿಸಬೇಕು. "ಸದಾಶಾಭಾವವಷ್ಟೇ" ಇರಬೇಕು. ಎಲ್ಲವೂ ಯಾವುದೋ ಒಂದು ಪರಮ ಶಕ್ತಿಯ ಅಧೀನದಲ್ಲಿ ಮತ್ತು ಅದರ ಇಚ್ಛೆಯಂತೆ ನಡೆಯುತ್ತದೆ. ನಮ್ಮ ಪ್ರಮೇಯವಿದ್ದಂತೆ ಕಂಡರೂ ಇಲ್ಲದ ಮತ್ತು ಅದಕ್ಕೆ ತದ್ವಿರುದ್ಧವಾದ ಅನುಭವಗಳು ನಮಗೆ ಆಗುತ್ತವೆ. ಹಾಗಾಗಿ ನಾವು ಆ ಪರಮ ಶಕ್ತಿಯ ಅಧೀನದಲ್ಲಿರುವುದರಿಂದ ಅದಕ್ಕೆ ಡಿ.ವಿ.ಜಿ.ಯವರು ಹೇಳುವಂತೆ "ಆ ವಿಚಿತ್ರಕೆ ಶರಣಾಗೋ" ಎಂಬಂತೆ ಇರಬೇಕು.

ಆದರೆ ಜೀವನದಲ್ಲಿ ಇರುವಾಗ ಯಾವುದಕ್ಕೂ ಅಂಟದೆ ತಾವರೆ ಎಲೆಯ ಮೇಲಿನ ನೀರ ಹನಿಯಂತೆ ಇರಬೇಕು. ಇದ್ದರೆ ನೆಮ್ಮದಿ, ಸುಖ ಮತ್ತು ಆನಂದ. ಹೇಳುವುದು ಸುಲಭ ಆಚರಣೆ ಬಹಳ ಕಷ್ಟ. ಆದರೆ ಅಸಾಧ್ಯವಲ್ಲವಲ್ಲ!!! ಪ್ರಯತ್ನಪಡೋಣ ಎಂದೋ ಒಂದು ದಿನ ನಮಗೂ ಆ ಆನಂದದ ನೆಲೆ ಸಿಗಬಹುದು.





# ಇದೇನು ಒಣರಗಳೆ 19-23

**ಮುಕ್ತಕ-19**

**ಗಾಳಿ ಮಣ್ಣುಂಡೆಯೊಳಹೊಕ್ಕು ಹೊರಹೊರಳದು ।**
**ಆಳೆನಿಪುದಂತಾಗದಿರೆ ಬರಿಯ ಹೆಂಟೆ ॥**
**ಬಾಳೇನು ಧೂಳು ಸುಳಿ, ಮರ ತಿಕ್ಕಿದುರಿಯ ಹೊಗೆ ।**

## ಕ್ಷೇಳವೇನಮೃತವೇಂ?-ಮಂಕುತಿಮ್ಮ||

ಮಣ್ಣುಂಡೆಯೊಳಹೊಕ್ಕು=ಮಣ್ಣ+ಉಂಡೆ+ಒಳ+ಹೊಕ್ಕು, ಹೊರಹೊರಳದು=ಹೊರ+ಹೊರಳದು
ಆಳೆನಿಪುದಂತಾಗದಿರೆ=ಆಳು+ಎನಿಪುದು+ಅಂತೆ+ಆಗದಿರೆ, ತಿಕ್ಕಿದುರಿಯತಿಕ್ಕಿದ+ಉರಿಯ,
ಕೇಳವೇನಮೃತವೇಂ=ಕೇಳವೇನು+ಅಮೃತವೇನು.

ಕ್ಷೇಳ=ವಿಷ.

ಈ ದೇಹವನ್ನು ಮಣ್ಣುಂಡೆಗೆ ಹೋಲಿಸಿದ್ದಾರೆ ಮತ್ತು ಈ ದೇಹದಲ್ಲಿ ಆಡುವ ಉಸಿರು (ಗಾಳಿ) ಆಡುತ್ತಿದ್ದರೆ ನಾವುಗಳು "ಆಳು" ಎಂದು ಎನ್ನಿಸಿಕೊಳ್ಳುತ್ತೇವೆ. ಇಲ್ಲದಿದ್ದರೆ ಈ ದೇಹ ಬರೀ ಮಣ್ಣಿನ ಹೆಂಟೆ ಎಂದು ಒಂದು ಅತ್ಯುತ್ತಮ ಸತ್ಯವನ್ನು ಪ್ರತಿಪಾದಿಸುತ್ತಾರೆ. "ಬಡಿತ ನಿಂತರೆ ಬಡಿವಾರ ಬಂದ್" ಅಲ್ಲವೇ?. ಇರಲಿ ಗುಂಡಪ್ಪನವರು ಈ ಬಾಳನ್ನು ಧೂಳ ಸುಳಿ ಎಂದು ಕರೆಯುತ್ತಾರೆ. ಇದು ಬಹಳ ಸೂಕ್ತವಾಗಿದೆ.

ನಾನು ಹಿಂದೆ ಒಮ್ಮೆ ಈ ಬ್ರಹ್ಮಾಂಡದ ವಿವರಣೆಯನ್ನು ಮಾಡುವಾಗ, ಇಡೀ ಬ್ರಹ್ಮಾಂಡವು ಎಷ್ಟು ದೊಡ್ಡದೆಂದರೆ, ಇದರೆದುರು ನಾವು ಒಂದು ಧೂಳ ಕಣವೂ ಅಲ್ಲ ಎಂದು ಹೇಳಿದ್ದೆ. ಈಗ ಮಣ್ಣಿಂದ ಆದ ಮತ್ತು ಈ ಸಮಸ್ತ ಭೂಮಂಡಲವನ್ನು ನಿವಾಸಸ್ಥಾನವನ್ನಾಗಿಸಿಕೊಂಡ ಪ್ರಾಣಿಗಳೆಲ್ಲವೂ ಧೂಳ ಕಣಗಳೇ ಎಂದು ಗುಂಡಪ್ಪನವರು ಹೇಳುತ್ತಾರೆ. ಮಣ್ಣಿಂದ ಆದ ಜೀವಕಣಗಳು ಮತ್ತು ಈ ಜೀವಕಣಗಳಿಂದಾದ ಈ ದೇಹವೂ ಮಣ್ಣಲ್ಲವೇ? "ಮಣ್ಣಿಂದ ಕಾಯ ಮಣ್ಣಿಂದ" ಎಂದು ನಾವು ಕೇಳಿಲ್ಲವೇ? ಹಾಗೆ ಮಣ್ಣಿಂದ ಆದ ಈ ದೇಹವನ್ನು ಮಣ್ಣ ಉಂಡೆ ಎಂದು ಹೇಳಿದ್ದಾರೆ. ಈ ಮಣ್ಣ ಉಂಡೆಯಲಿ ಗಾಳಿ ಆಡುತ್ತಿದ್ದರೆ ನಾವೂ ಸಹ "ಆಳು" ಅಂದರೆ ಮನುಷ್ಯ ಎಂದು ಕರೆಯಲ್ಪಡುತ್ತೇವೆ. ಇಲ್ಲದಿದ್ದರೆ ಬರೇ ಮಣ್ಣ ಉಂಡೆ. ಆಗ ನಮ್ಮನ್ನು ಹೆಣ ಎನ್ನುತ್ತಾರೆ. ಮಣ್ಣಿನಲ್ಲೇ ಹೂಳುವುದೋ ಅಥವಾ ಸುಟ್ಟು ಮಣ್ಣಲ್ಲಿ ಒಂದಾಗಿಸುವುದೋ ಆಗುತ್ತದೆ ಅಲ್ಲವೇ?

ಹಾಗಿದ್ದರೆ, ಈ ಬಾಳು ಅಂದರೆ ಜೀವನವು ಏನು? ಎಂದರೆ ಮಣ್ಣ ಕಣಗಳ ತಿಕ್ಕಾಟವೆನ್ನುತ್ತಾರೆ ಶ್ರೀ ಗುಂಡಪ್ಪನವರು. ಮಣ್ಣು ಉಂಡೆಗಳಾದ ಮಾನವರ ಪರಸ್ಪರ ಈ ತಿಕ್ಕಾಟದಲ್ಲಿ ಬೆಂಕಿ ಉಂಟಾಗುತ್ತದೆ ಮತ್ತು ಹೊಗೆಯಾಡುತ್ತದೆ. ದ್ವೇಷದ ಬೆಂಕಿ, ಅಸೂಯೆಯ ಬೆಂಕಿ, ಕೋಪದ ಬೆಂಕಿ ಹೀಗೆ ಹಲವಾರು ವಿಧದಲ್ಲಿ ಮನುಜ ಮನುಜರ ಮಧ್ಯೆ ಉಂಟಾಗುವ ತಿಕ್ಕಾಟದಿಂದ ಹತ್ತಿಕೊಳ್ಳುತ್ತದೆ ಬೆಂಕಿ. ಆ ತಿಕ್ಕಾಟದ ಪರಿಣಾಮ

ಸಾವು ನೋವುಗಳ ಪರಿಣಾಮವೇ ಬೆಂಕಿಯಿಂದ ಬರುವ ಹೊಗೆ. ಇದರಿಂದ ಕೆಲವರಿಗೆ ಸುಖ ಕೆಲವರಿಗೆ ದುಃಖ. ಇದನ್ನೇ "ಕ್ಷೇಳ" ಅಂದರೆ ವಿಷವೆಂದು, ಸುಖ ಮತ್ತು ಆನಂದವನ್ನು "ಅಮೃತ"ವೆಂದೂ ಕರೆಯುತ್ತಾರೆ ಗುಂಡಪ್ಪನವರು.

ಪರಮಾತ್ಮನೆಂಬ ಮಹಾಜ್ವಾಲೆಯಲ್ಲಿ ಉರಿಯುವ ಬೆಂಕಿಯಿಂದ ಸಿಡಿದ ಕೋಟ್ಯಾಂತರ ಕಿಡಿಗಳೇ, ಈ ಜೀವಿಗಳು. ಈ ಜಗತ್ತಿನಲ್ಲಿ, ಮಣ್ಣಿನ ಉಂಡೆಗಳಂತೆ ಇರುವ ನಾವೂ ಮತ್ತು ಈ ಉಂಡೆಯೊಳಗೆ ಗಾಳಿ ಎಂಬಂತೆ ಇರುವ ಆತ್ಮ ಅಥವಾ ಚೇತನದ ಸಮ್ಮಿಲನದಿಂದ ಉಂಟಾದ ಬದುಕೆಂಬ ತಿಕ್ಕಾಟದಲ್ಲಿ ಬೆಂಕಿಯುಗುಳಿ, ವಿಷಕಾರಿ, ಅಮೃತವ ಸವಿದು ಬಾಳ ಸವೆಸಿ ಮತ್ತದೇ ಚೇತನವನ್ನು ಸೇರುವಾಗ, ಇಲ್ಲಿ ಪಡೆದ ಅಮೃತದ ಬೆಲೆಯೇನು? ಕುಡಿದ ಅಥವಾ ಕಕ್ಕಿದ ವಿಷದ ಬೆಲೆಯೇನು? ಎಂದು ಕೇಳುತ್ತಾರೆ ಶ್ರೀ ಗುಂಡಪ್ಪನವರು.

ಈ ಮುಕ್ತಕದ ಒಟ್ಟಾರೆ ಆಂತರ್ಯವೇನೆಂದರೆ, ಮಣ್ಣಿಂದ ಆಗಿ, ಮಣಲ್ಲೇ ಇದ್ದು ಮಣಲ್ಲೇ ಸೇರುವ ಈ ಮಾನವನ ಬಾಳು ಕೇವಲ ಉಸಿರಿರುವ ತನಕ. ಹೀಗೆ ಬದುಕಿರುವಾಗ ನಾವು ಪಡೆಯುವ ಸುಖ ದುಃಖ, ಅನುಭವಿಸುವ, ಕೋಪ ದ್ವೇಷ, ಅಸೂಯೆ, ಪ್ರೀತಿ, ಪ್ರೇಮ, ಅನುರಾಗ, ಬಂಧನಗಳಂಥಹ ಭಾವಗಳೆಲ್ಲವೂ, ಬಡಿತವಿರುವತನಕ (ಹೃದಯದ) ಅದು ನಿಂತರೆ "ಬಡಿವಾರ ಬಂದ್." ಈ ಜೀವನದ ಎಲ್ಲಕ್ಕೂ ಒಂದು ಮಂಗಳವನ್ನು ಹಾಡುವ, ಸಾವನ್ನು ಅಪ್ಪಿ ಎಲ್ಲವನ್ನೂ ಅಲ್ಲೇ ಬಿಟ್ಟು ಹೋಗುವಾಗುವಂಥಾ ಈ ಜೀವನದಲ್ಲಿ ಪಡೆದ ಸುಖಕ್ಕೆ ಏನು ಬೆಲೆ, ದುಃಖಕ್ಕೆ ಏನು ಬೆಲೆ? ಎಲ್ಲವೂ ಶೂನ್ಯ.

ಇಂತಹ ಭಾವಗಳನ್ನು ವ್ಯಕ್ತಪಡಿಸುವ ಈ ಮುಕ್ತಕದ ಆಂತರ್ಯವನ್ನು ವಾಚಕರು ಅವರದೇ ಅನುಭವದ ಮೂಸೆಯಲ್ಲಿ ಹಾಕಿ ನೋಡಿದಾಗ, ಪ್ರತಿಯೊಬ್ಬರಿಗೂ ಅವರವರದೇ ಅನುಭವದ ಭಾವ ಸಿಗುತ್ತದೆ.

**ಮುಕ್ತಕ-20** **ಕಂಡದೈವಕ್ಕೆಲ್ಲಕೈಯಮುಗಿದೇನಹುದು?**

**ಚಂಡಚತುರೋಪಾಯದಿಂದಲೇನಹುದು?**

**ತಂಡುಲದಹಿಡಿಯೊಂದು ತುಂಡುಬಟ್ಟೆಯದೊಂದು**

**ಅಂಡಲೆತವಿದಕೇನೋ?-ಮಂಕುತಿಮ್ಮ**

ಕೈಯಮುಗಿದೇನಹುದು=ಕೈ+ಮುಗಿದು+ಏನು+ಅಹುದು,

ಚಂಡಚತುರೋಪಾಯದಿಂದಲೇನಹುದು=ಚಂಡ+ಚತುರೋಪಾಯದಿಂದಲಿ+ಏನು+ಅಹುದು,

ಚಂಡ=ಉಗ್ರ,

ತಂಡುಲದಹಿಡಿಯೊಂದುತುಂಡುಬಟ್ಟೆಯದೊಂದು=ತಂಡುಲದ+ಹಿಡಿಯೊಂದು+ತುಂಡು+ಬಟ್ಟೆಯದೊಂದು,

ಅಂಡಲೆತವಿದಕೇನೋ?=ಅಂಡ+ಅಲೆತವು ಇದಕೇನೋ.

ಮುಗಿದೇನಹುದು=ಮುಗಿದು+ಏನು+ಅಹುದು=ಮುಗಿದರೆ ಏನಾಗುತ್ತದೆ.

ಚತುರೋಪಾಯ=ನಾಲ್ಕು ವಿಧವಾದ ಉಪಾಯಗಳು (ಸಾಮ, ದಾನ, ಭೇದ ಮತ್ತು ದಂಡ.)

ತಂಡುಲ=ಅಕ್ಕಿ, ಅಂಡಲೆತ=ಸುಮ್ಮನೆ ಸುತ್ತಾಟ.



ಅಂದಿನ ಮತ್ತು ಇಂದಿನ ವಾಸ್ತವಿಕ ಚಿತ್ರಣವನ್ನು ನಮಗೆ ಗುಂಡಪ್ಪನವರು ಕೊಟ್ಟಿದ್ದಾರೆ ಈ ಮುಕ್ತಕದಲ್ಲಿ. ನಮ್ಮಲ್ಲಿ ಅನೇಕ ದೇವರುಗಳು. ಆ ದೇವರುಗಳ ಸಂಖ್ಯೆ ಎಷ್ಟಿದೆಯೆಂದರೆ ಎಣಿಸಲೂ ಸಾಧ್ಯವಿಲ್ಲ. ಒಂದು ಕಡೆ ತಿರುಪತಿ ತಿಮ್ಮಪ್ಪನಾದರೆ, ಇನ್ನೊಂದು ಕಡೆ, ಬದರಿಯ ಬದರೀನಾಥ, ಒಂದುಕಡೆ ಮಧುರೆಯ ಮೀನಾಕ್ಷಿಯಾದರೆ, ಇನ್ನೊಂದು ಕಡೆ ಕಾಶಿಯ ವಿಶಾಲಾಕ್ಷಿ, ಒಂದುಕಡೆ ಪುರಿಯ ಜಗನ್ನಾಥನಾದರೆ ಇನ್ನೊಂದು ಕಡೆ ತಿರುವನಂತಪುರದ ಅನಂತಪದ್ಮನಾಭ, ಒಂದುಕಡೆ ವಿನಾಯಕನಾದರೆ, ಇನ್ನೊಂದುಕಡೆ ಷಣ್ಮುಖ, ಹೀಗೇ ಬರೆಯುತ್ತ ಹೋದರೆ ಪಟ್ಟಿ ಬಹಳ ಉದ್ದ ಆದೀತು. ದೇಶ ಕಾಲ ಸಂದರ್ಭಕ್ಕನುಗುಣವಾಗಿ ನಮಗೆ ನಾವು ಪೂಜಿಸುವ ದೇವತೆಗಳು ಬದಲಾಗುತ್ತ ಹೋಗುತ್ತಾರೆ. ಇದನ್ನೇ ಗುಂಡಪ್ಪನವರು “ಕಂಡ ದೈವಕ್ಕೆಲ್ಲ” ಎಂದಿರಬೇಕು.

ಆದರೆ ಇದು ಸರಿಯೇ ಅಲ್ಲವೇ ಎಂದು ಸ್ವಲ್ಪ ವಿಶ್ಲೇಷಿಸೋಣವೇ? ಭಾರತೀಯರಾದ ನಮಗೆ ಎಲ್ಲವೂ ದೈವವೇ!! ಗಿಡ, ಮರ, ಬಳ್ಳಿ, ನದಿ, ಗುಡ್ಡ, ಬೆಟ್ಟ, ಆಕಾಶ, ಸೂರ್ಯ, ಚಂದ್ರ, ಎಲ್ಲ ಗ್ರಹಗಳು, ಪಕ್ಷಿ, ಮೀನು, ಪ್ರಾಣಿಗಳು, ಎಲ್ಲವೂ ದೇವರೇ. ಅಷ್ಟೇ ಅಲ್ಲ ಎಲ್ಲದರಲ್ಲೂ ದೈವವನ್ನು ಕಾಣುವ ಸಂಸ್ಕೃತಿ ನಮ್ಮದು. ಅವುಗಳನ್ನೆಲ್ಲ ಕಾಪಾಡುವ ಕಾರಣದಿಂದ ಅವುಗಳಿಗೆಲ್ಲ ದೈವತ್ವವನ್ನು ಆರೋಪಿಸಿದ್ದಾರೆ, ನಮ್ಮ ಪೂರ್ವಜರು. ಒಂದು ರೀತಿಯಲ್ಲಿ ಇದು ಒಳ್ಳೆಯದೇ ಅಲ್ಲವೇ ವಾಚಕರೆ? ಆದರೆ ವ್ಯಕ್ತಿ ಆಂತರ್ಯದಲ್ಲಿ ಬೆಳೆಯುತ್ತಾ ಹೋದಂತೆಲ್ಲ ಅನೇಕದಿಂದ ಏಕಕ್ಕೆ ಬರುವುದೇ ಆಧ್ಯಾತ್ಮಸಾಧನೆಯ ಗುರಿ. ಆಕಾರದಿಂದ ನಿರಾಕಾರಕ್ಕೆ ಬರುವುದೇ ಎಲ್ಲ ಸಾಧನೆಯ ಫಲ.

ಆದರೆ ನಾವು ಏಕೆ ಈ ದೈವಕ್ಕೆ ಕೈ ಮುಗಿಯುತ್ತೇವೆ? ಇದಕ್ಕೆ ನನ್ನ ಅರಿವಿನ ಪರಿಮಿತಿಯಲ್ಲಿ ವಿವರಿಸುತ್ತೇನೆ. ನಮಗೆ ಆಸೆಗಳುಂಟು. ಆಸೆಗಳು ನಾವು ಈ ಬದುಕಿಗೆ ಅಂಟಿಕೊಂಡಿರುವುದರಿಂದ ಉಂಟು. ಈ ಆಸೆಯ ಪಕ್ಕ ಪಕ್ಕದಲ್ಲೇ ಒಂದು ಭಯವೂ ಉಂಟು. ಮಾನವರಿಗೆ ಎರಡು ರೀತಿಯ ಭಯಗಳುಂಟು. ಒಂದು ತನ್ನಲ್ಲಿರುವ ವಸ್ತು, ವಿಷಯ ಅಥವಾ ವ್ಯಕ್ತಿಯನ್ನು ಕಳೆದುಕೊಳ್ಳುವ ಭಯ. ಎರಡು, ತಾನು ಆಸೆ ಪಟ್ಟ ವಸ್ತು, ವ್ಯಕ್ತಿ, ವಿಷಯಗಳು ಸಿಗದೆ ಹೋಗುವ ಭಯ. ಮಾನವನ ಎಲ್ಲ ಭಯಗಳನ್ನೂ ಈ ಎರಡು ಅಂದರೆ ಎರಡೇ ವಿಭಾಗಗಳಲ್ಲಿ ಸೇರಿಸಬಹುದು. ಮೂರನೆಯದು ನನಗೆ ಗೋಚರಿಸುತ್ತಿಲ್ಲ.

ಆದರೆ ಈ ಭಯ ಸಹಜವಾದದ್ದೇ. ಮನುಷ್ಯನಿಗೆ ತನ್ನ ಜೀವನದಲ್ಲಿ ತನಗೆ ಸಂಬಂಧಿಸಿದ ಎಲ್ಲ ವ್ಯಕ್ತಿ, ವಿಷಯ ಮತ್ತು ವಸ್ತುವಿನ ಮೇಲೆ ಮಮಕಾರವಿರುತ್ತದೆ. ಈ ಮಮಕಾರವೇ ಈ ಭಯಕ್ಕೆ ಕಾರಣ. ಈ ವ್ಯಕ್ತಿ, ವಿಷಯ ಮತ್ತು ವಸ್ತುಗಳು ಹಲವಿಧದಲ್ಲಿ ಇರಬಹುದು, ತನ್ನವರು, ಅವರಿಗೆ ಸಂಬಂಧಿಸಿದ ವಿಷಯಗಳಾದ, ಆರೋಗ್ಯ, ವಿದ್ಯೆ, ಪರಸ್ಪರ ಸಂಬಂಧಗಳು, ವಿವಾಹಕ್ಕೆ, ಪ್ರೇಮಕ್ಕೆ, ಉದ್ಯೋಗ, ಹಣಕಾಸು, ಹೀಗೆ ಹತ್ತು ಹಲವಾರು ವಿಷಯಗಳಿಗೆ ನಾವು ಅಂಟಿಕೊಂಡಿರುತ್ತೇವೆ. ಅವುಗಳಲ್ಲಿ ಇರುವುದು ಕಳೆದು ಹೋಗುವ ಭಯ ಅಥವಾ ಬಯಸಿದ್ದು ಆಗದೆ ಹೋಗಬಹುದಾದ ಭಯ. ಕಳೆದು ಹೋಗುವುದು ಏಕೆ? ಬಯಸಿದ್ದು ಆಗದೆ ಹೋಗುವುದು ಏಕೆ? ಎಂದು ಖಚಿತವಾಗಿ ನಮಗೆ ಅರಿಯದಾದಾಗ ಮತ್ತು ಸಂಶಯಗಳಿದ್ದಾಗ, ನಮಗರಿಯದ

ಯಾವುದೋ ಶಕ್ತಿ ಅಥವಾ ನಮ್ಮನ್ನು ಕಾಯುವ, ಯಾವುದೋ ಶಕ್ತಿಗೆ ನಾವು ಕೈಮುಗಿದು, ಬೇಡುವುದೋ ಅಥವಾ ಶರಣಾಗುವುದೋ ಮಾಡುತ್ತೇವೆ. ಅದನ್ನೇ ಗುಂಡಪ್ಪನವರು "ಆ ವಿಚಿತ್ರಕೆ ಶರಣಾಗೋ" ಎನ್ನುತ್ತಾರೆ.

ಭಾರತೀಯರಾದ ನಮಗೆ ಎಲ್ಲವೂ ದೇವರೇ ಆದ್ದರಿಂದ, ಇಷ್ಟೊಂದು ಬಗೆಬಗೆಯ ದೇವರುಗಳು ನಮ್ಮಲ್ಲಿ, ಹಣಕ್ಕೊಬ್ಬ, ಗುಣಕ್ಕೊಬ್ಬ, ವಿದ್ಯೆಗೊಬ್ಬ, ಆರೋಗ್ಯಕ್ಕೊಬ್ಬ, ಪಾಪನಾಶನಕ್ಕೊಬ್ಬ, ಪರಮಾರ್ಗಕ್ಕೊಬ್ಬ, ಮತ್ತು ಈ ದೇವತೆಗಳನ್ನು ಒಲಿಸಿಕೊಳ್ಳಲು ಹಲವಾರು ವಿಧಾನಗಳು, ದರ್ಶನ, ಅರ್ಚನೆ, ಅಭಿಷೇಕ, ದಾನ, ಧ್ಯಾನ, ಭಜನೆ, ಅನ್ನ ಸಂತರ್ಪಣೆ, ಸಮಾರಾಧನೆ, ಪರೋಪಕಾರದ ಕೆಲಸಗಳು, ಹೋಮ, ಹವನ, ಯಜ್ಞ ಯಾಗಾದಿಗಳು, ಹೀಗೆ ನಮಗೆ ತೋಚಿದ್ದು ಮತ್ತು ಪರರಿಂದ ಸೂಚಿಸಲ್ಪಟ್ಟ, ಸಾಮ, ದಾನ, ಭೇದ, ದಂಡದಂತ ಚತುರೋಪಾಯಗಳನ್ನೂ ಉಪಯೋಗಿಸಿ, ನಮ್ಮ ಕಾರ್ಯ ಸಾಧನೆಗೆ ಆ ದೇವರನ್ನು ಸದಾಕಾಲ ಒಲಿಸಿಕೊಳ್ಳಲು ಪ್ರಯತ್ನಿಸುತ್ತೇವೆ. ಇದು ಒಂದು ಮಾನಸಿಕ ಸ್ವಯಂ ಚಿಕಿತ್ಸೆ. ನಮ್ಮ ಮನಸ್ಸುಗಳಲ್ಲಿ ಉದ್ಭವಿಸುವ ಹಲವಾರು ಪ್ರಶ್ನೆ ಮತ್ತು ಸಂದೇಹಗಳಿಗೆ ನಾವೇ ಕಂಡುಕೊಳ್ಳುವ ಸಮಾಧಾನ.

ಇದು ಆಧ್ಯಾತ್ಮ ಪ್ರಯಾಣದ ಒಂದು ಸ್ತರ. ಅವರವರ ಮಟ್ಟಿಗೆ ಸರಿ. ಆದರೆ ಗುಂಡಪ್ಪನವರು "ತಂಡುಲದ ಹಿಡಿಯೊಂದು ತುಂಡುಬಟ್ಟೆಯದೊಂದು" ಒಂದು ಹಿಡಿ ಅಕ್ಕಿಗಾಗಿ, ಹೊಟ್ಟೆ ತುಂಬಿಸಿಕೊಳ್ಳಲು, ಗೇಣುದ್ದ ಬಟ್ಟೆಗಾಗಿ, ಮೈಮುಚ್ಚಲು ಮನುಷ್ಯ ಇಷ್ಟೆಲ್ಲಾ ಮಾಡಬೇಕೆ ಎಂಬ ಭಾವದಲ್ಲಿ ಒಂದು ವೈರಾಗ್ಯದ ವಿಷಯವನ್ನು ಪ್ರಸ್ತಾಪ ಮಾಡುತ್ತಾರೆ. ಆದರೆ ವೈರಾಗ್ಯವು ಅನುಭವದಿಂದ ಮಾತ್ರ ಬರಲು ಸಾಧ್ಯ. ಅಂತಹ ಅನುಭವವನ್ನು ಕೊಡುವುದೇ ಜೀವನ.

**ಮುಕ್ತಕ-21**

**ಹೊನ್ನೆಂದು ಜಗದಿ ನೀಂ ಕೈಗೆ ಕೊಂಡದನು ವಿಧಿ ।**
**ಮಣ್ಣೆನುವನ್, ಅವನವರ ಮಣ್ಣೆನುವೆ ನೀನು ॥**
**ಭಿನ್ನವಿಂತಿರೆ ವಸ್ತು ಮೌಲ್ಯಗಳ ಗಣನೆಯೀ ।**
**ಪಣ್ಯಕ್ಕೆ ಗತಿಯಂತೋ?-ಮಂಕುತಿಮ್ಮ ॥**

ಹೊನ್ನೆಂದು=ಹೊನ್ನು+ಎಂದು, ಬಿನ್ನವಿಂತಿರೆ=ಭಿನ್ನವು+ಇಂತಿರೆ

ಹೊನ್ನು=ಚಿನ್ನ, ಜಗದಿ=ಜಗತ್ತಿನಲ್ಲಿ, ಭಿನ್ನ=ವ್ಯತ್ಯಾಸ, ಪಣ್ಯ=ವ್ಯಾಪಾರ.

ಯಾವುದನ್ನು ನೀನು ಚಿನ್ನ ಎಂದು ಕೈಗೆ ಎತ್ತಿಕೊಳ್ಳುತೀಯೋ, ಅದು ವಾಸ್ತವದಲ್ಲಿ ಚಿನ್ನವಾಗಿರದೆ, ಮಣ್ಣಂತೆ ನಿಷ್ಪ್ರಯೋಜಕವಾಗುತ್ತದೆ. ಆದರೆ ಕೆಲವು ಬಾರಿ ಬಯಸದೆ ಸಂದ ಭಾಗ್ಯವನ್ನು, ಆ ಪರಮಾತ್ಮನ ಕರುಣೆಯಿಂದ ವರ ರೂಪದಲ್ಲಿ ಸಂದದ್ದು ನಿನಗೆ ನಿಷ್ಪ್ರಯೋಜಕವಾಗಿ ಕಾಣುತ್ತದೆ. ಹೀಗೆ ವಸ್ತುಗಳ ನಿಜರೂಪ ಗುರುತಿಸುವುದರಲ್ಲಿ ನಾವು ವಿಫಲರಾದರೆ, ಈ ಜಗತ್ತಿನ ವ್ಯಾಪಾರ ನಡೆಯುವುದು ಹೇಗೆ ಎಂದು ಪ್ರಶ್ನಿಸುತ್ತಾರೆ ಮಾನ್ಯ ಗುಂಡಪ್ಪನವರು.





ನಮ್ಮ ಜೀವನಗಳಲ್ಲಿ ಇದು ಬಹಳ ಸತ್ಯವಾದ ಮಾತು. ನಮಗೆ ವಸ್ತುಗಳು ಬೇಕು. ವ್ಯಕ್ತಿಗಳು ಬೇಕು, ವಿಷಯಗಳು ಬೇಕು. ಆದರೆ ಆ ವಸ್ತು, ವ್ಯಕ್ತಿ, ವಿಷಯಗಳು ನಮಗೆ ಒಳಿತೋ ಇಲ್ಲವೋ ನಮಗೆ ಗೊತ್ತಿಲ್ಲ. ಎಷ್ಟೋ ಬಾರಿ ನಾವು ಇಷ್ಟಪಟ್ಟು ಆಯ್ದುಕೊಂಡದ್ದು ನಮಗೆ ತೊಂದರೆಗಳಿಗೆ, ಮಾನಸಿಕ ಹಿಂಸೆಗೆ, ಕಾರಣವಾಗಬಹುದು. ಹೀಗೆ ಆಗಲಿಕ್ಕೆ ಕಾರಣವೇನು ಎಂದರೆ, ಅದಕ್ಕೆ “ವಿಧಿ”ಯನ್ನು ಕಾರಣರಾಗಿಸುತ್ತಾರೆ ಶ್ರೀ ಗುಂಡಪ್ಪನವರು. ಆದರೆ ಅದು ಹೀಗೂ ಇರಬಹುದು. ನಾವು ಒಂದು ವಸ್ತು, ವ್ಯಕ್ತಿ, ವಿಷಯವನ್ನು ಬೇಕು ಎಂದುಕೊಳ್ಳುವುದೇ ತಪ್ಪಿರಬಹುದು. ಅಥವಾ ನಮ್ಮ ಆಯ್ಕೆಯೇ ತಪ್ಪಾಗಿರಬಹುದು. ಹೊರನೋಟಕ್ಕೆ ಆ ವಸ್ತು, ವ್ಯಕ್ತಿ, ವಿಷಯಗಳು ನಮಗೆ ಹಿತವಾಗಿಯೋ,

ಸವಿಯಾಗಿಯೋ ಕಂಡರೂ ನಮ್ಮ ದೈಹಿಕ ಮತ್ತು ಮಾನಸಿಕ ಪ್ರಕೃತಿಗೆ ವಿರುದ್ಧವಾಗಿರಬಹುದು. ಹಾಗಾಗಿ ದೋಷ ನಮ್ಮ ಆಯ್ಕೆಯಲ್ಲಿದೆಯೇ ಹೊರತು ಆ ವಸ್ತು, ವ್ಯಕ್ತಿ, ವಿಷಯದಲ್ಲಿ ಇಲ್ಲ ಅಲ್ಲವೇ?. ಹಾಗಾದಾಗ "ಹೊನ್ನೆಂದು" ನಾವು ವಸ್ತು, ವ್ಯಕ್ತಿ, ವಿಷಯಗಳನ್ನು ಆಯ್ಕೆಮಾಡಿದಾಗ, ಅದು ನಮಗೆ ಹಿತವಾಗಿಲ್ಲದೆ ನಿಷ್ಪ್ರಯೋಜಕವಾದ "ಮಣ್ಣಂತೆ" ತೋರುವುದು ಎಂಬುದು ಇಲ್ಲಿನ ಆಂತರ್ಯ.

ಇನ್ನು ನಾವು ಬಯಸದೆ ಬಂದ, ಸಂದ ಮತ್ತು ಪಡೆದುಕೊಂಡ ವಸ್ತು, ವ್ಯಕ್ತಿ, ವಿಷಯಗಳು ನಮಗರಿವಿಲ್ಲದಂತೆಯೇ ನಮಗೆ ಹಿತವನ್ನು ಮಾಡುತ್ತಿರಬಹುದು. ಇದರ ಅನುಭವ ನಮಗೆ ಬಹಳ ಬಾರಿ ಆಗಿರುತ್ತದೆ. ಆದರೆ ಅದು ನಾವು ಇಷ್ಟಪಟ್ಟು ಪಡೆದುಕೊಂಡಿಲ್ಲವಾದ್ದರಿಂದ ನಮಗೆ ಅದರ ಮಹತ್ವ ಅರ್ಥವಾಗುವುದಿಲ್ಲ. "ಅವನದೇ ಕಣಪ್ಪ ಅದೃಷ್ಟ, ಹಿಂಗೆ ಅಂಡ್ಕೊಂಡೆ ಇರ್ಲಿಲ್ಲ ಕಣಯ್ಯಾ, ಎಂಥ ಚಾನ್ಸು ನೋಡು" ಇಂತಹ ಮಾತುಗಳನ್ನು ನಾವು ಎಷ್ಟೋ ಬಾರಿ ಕೇಳಿರುತ್ತೇವೆ. ಇದನ್ನೇ "ಅವನ ವರ" ಎಂದು ಶ್ರೀ ಗುಂಡಪ್ಪನವರು ಹೇಳುತ್ತಾರೆ.

ಹಾಗಾದರೆ ನಾವು ಇಷ್ಟಪಟ್ಟಿದ್ದೆಲ್ಲ ಹಾಗೆ ಆಗುವುದೇ? ಎಂದರೆ ಇಲ್ಲ. ಎಲ್ಲ ಹಾಗಾಗುವುದಿಲ್ಲ. ಆದರೆ ಹೆಚ್ಚಿನ ಮಟ್ಟಿಗೆ ಹಾಗಾಗುತ್ತದೆ. ಮೇಲ್ನೋಟಕ್ಕೆ ಎಲ್ಲ ಸರಿಯಾಗಿದೆ ಎಂದು ನಾವು ಕಂಡರೂ, ಪ್ರತಿ ವ್ಯಕ್ತಿಯೂ, ತಾನು ಬಯಸಿದ್ದು, ತಾನು ಪಡೆದಿದ್ದು, ಅದರಿಂದ ತಾನು ಅನುಭವಿಸುವ ಕಷ್ಟ, ಸಂಕಟ, ಜಿಗುಪ್ಸೆ, ಇವುಗಳನ್ನು ತೋರ್ಪಡಿಸದೆ, ಆಂತರ್ಯದಲ್ಲಿ ಅನುಭವಿಸುವುದು ಎಲ್ಲರಿಗೂ ಗೊತ್ತಿರುವ ವಿಷಯವೇ. ಏಕೆಂದರೆ ನಾವು ನೀವು ಎಲ್ಲರೂ ಇದನ್ನು ಅನುಭವಿಸಿಯೇ ಇರುತ್ತೇವೆ. ಹಾಗಾದರೆ ನಾವು ಬಯಸುವುದೇ ಬೇಡವೇ? ಎಂದು ವಿಚಾರ ಮಾಡಿದರೆ ನಮಗೆ ಸಿಗುವ ಉದಾಹರಣೆ ಹೀಗಿದೆ. ಒಂದು ತಾಯಿ, ತನ್ನ ಮಗುವಿಗೆ ಏನು ಬೇಕು, ಯಾವುದು ಒಳ್ಳೆಯದು, ಯಾವುದರಿಂದ ಆ ಮಗುವಿಗೆ ಹಿತ ಆರೋಗ್ಯಕರ ಎಂದೆಲ್ಲ ಅರಿತು ಸರಿಯಾದ ಸಮಯಕ್ಕೆ ಕೊಡುತ್ತಾಳೆ. ಆದರೆ ಆ ಮಗುವಿಗೆ ಅದು ಅರ್ಥವಾಗದೆ ಕಂಡ ಕಂಡದ್ದಕ್ಕೆಲ್ಲ ರಚ್ಚೆ ಮಾಡಿ, ಹಠಮಾಡುತ್ತದೆ. ನಮ್ಮ ಪರಿಸ್ಥಿತಿಯೂ ಹಾಗೆ ಇದೆ. ನಮಗೆಲ್ಲರಿಗೆ ತಾಯಿ ಸ್ಥಾನದಲ್ಲಿರುವ ಆ ಪರಮಾತ್ಮ ನಮಗೆ ವಿಧಿ ಪ್ರಕಾರ, ಏನು, ಎಷ್ಟು, ಯಾವಾಗ, ಯಾರ ಮೂಲಕ, ಹಿತವಾದದ್ದನ್ನು ಕೊಡಿಸಬೇಕೋ ಕೊಡಿಸುತ್ತಾನೆ. ಅದನ್ನರಿಯದೆ ನಾವು ಬಯಸಿದ ವಸ್ತು ಸಿಗದೇ ಹೋದರೆ, "ಅಯ್ಯೋ ದೇವರೇ ನನಗೇ ಯಾಕೆ ಹೀಗೆ" ಎಂದು ಆ ದೇವರನ್ನು ಬಯ್ಯುತ್ತ, ನಮ್ಮ "ಹಣೆಬರಹಾನೆ ಇಷ್ಟು" ಎಂದು ನಮ್ಮನ್ನು ನಾವೇ ಹಳಿದುಕೊಳ್ಳುತ್ತಾ ಬದುಕುತ್ತೇವೆ.

ನೋಡಿ ಒಂದು ವಿಷಯ. ಒಂದು ನೆಮ್ಮದಿಯ ವಿಷಯ. ಆ ಪರಮಾತ್ಮನ ಉಕ್ತಿ "ನೀನು ನನಗೆ ಶರಣಾಗು. ನಾನು ನಿನ್ನ ಯೋಗಕ್ಷೇಮವನ್ನು ನೋಡಿಕೊಳ್ಳುತ್ತೇನೆ." ಎಂದು ಹೇಳಿರುವಾಗ ಮತ್ತೇನು. ಮತ್ತೆ "ನೀ ಏನೂ ಕೇಳಬೇಡ, ಹಾಗೆ ನೀ ಏನು ಕೇಳಿದರೂ ಕೊಡುವೆ. ಆದರೆ ನೀ ಹಾಗೆ ಕೇಳಿ ಪಡೆದುಕೊಂಡ ವಸ್ತುವಿನಿಂದ ಬರುವ ಎಲ್ಲ ದುಃಖ, ಆನಂದ, ನೋವು, ಸಂಕಟ, ಕಷ್ಟ, ಕಾರ್ಪಣ್ಯಗಳನ್ನೆಲ್ಲ ನೀನೇ ಅನುಭವಿಸಬೇಕು. ಆದರೆ ನೀ ನನ್ನನ್ನು ಏನೂ ಕೇಳದಿದ್ದರೆ, ನಿನಗೇನು ಸೂಕ್ತವೋ, ಹಿತವೋ, ಅದನ್ನು ನಾನೇ ನಿನಗೆ ಸರಿಯಾದ ಸಮಯಕ್ಕೆ ಕೊಡುವೆ. ಆಯ್ಕೆ ನಿನ್ನದು" ಎಂದಾಗ, ಮತ್ತೇಕೆ ನಾವು ಕೇಳಬೇಕು?. ಹಾಗೆ ಕೇಳಬೇಕೆಂದರೆ ಆ ಪರಮಾತ್ಮನನ್ನೇ "ನನ್ನ ಮನಸ್ಸಿನಲ್ಲಿ ನಿರಂತರವಾಗಿ ನಿಲ್ಲು ಬಾ" ಎಂದು ಕೇಳಬೇಕು, ಅಲ್ಲವೆ ವಾಚಕರೆ?.

ಇನ್ನು ಹೀಗೆ ನಮಗೆ ಬೇಡದ ಹಿತವಲ್ಲದ ವಸ್ತು, ವ್ಯಕ್ತಿ, ವಿಷಯಗಳನ್ನು ಬಯಸಿ ಅದರಿಂದ ಪಡಬಾರದ ಕಷ್ಟಗಳನ್ನು ಪಡುವಾಗ, ಆ ವಿಧಿಯಿಂದ ಸಿಕ್ಕ ವಸ್ತುಗಳ ಬೆಲೆ ನಾವು ಅರಿಯದಾದಾಗ ಇಲ್ಲಿ ಜಗದ್ವಾಪಾರದಲ್ಲಿ ವ್ಯತ್ಯಯ ಉಂಟಾಗದೇ ಇನ್ನೇನು ಎನ್ನುವ ಅರ್ಥದಲ್ಲಿ "ಭಿನ್ನವಿಂತಿರೆ ವಸ್ತು ಮೌಲ್ಯಗಳ ಗಣನೆಯ ಪಣ್ಯಕ್ಕೆ ಗತಿಯಂತೋ" ಎನ್ನುತ್ತಾರೆ ಮಾನ್ಯ ಗುಂಡಪ್ಪನವರು. ಹಾಗಾಗಿ ವಾಚಕರೆ, ತಾಯಿ ಸ್ವರೂಪದ ಆ ಪರಮಾತ್ಮನಲ್ಲಿ ಶರಣಾಗಿ ನಮ್ಮ ಆಸೆ ಆಕಾಂಕ್ಷೆಗಳನ್ನು ತೀರಿಸಿಕೊಳ್ಳಲು, ನಮ್ಮ ಆಯ್ಕೆಯ ಮೇಲೆ ಆಧಾರಪಡದೆ, ಎಲ್ಲವನ್ನೂ ಆ ಪರಮಾತ್ಮನಿಗೆ ಅರ್ಪಿಸಿ, ನಮಗೆ ಸಿಕ್ಕ ಕೆಲಸವನ್ನು ನಿಷ್ಠೆಯಿಂದ ಮಾಡಿಕೊಂಡು ಹೋದರೆ, ನಮಗೇನು ಹಿತವೋ ಅದನ್ನು ಆ ಪರಮಾತ್ಮ ನೀಡುತ್ತಾನೆ. ಅದೇ ನನಗೆ ಹಿತ ಎಂದು ಅರಿತರೆ, ನಮಗೆ ಹಿತ. ಒಟ್ಟಾರೆ ಹೇಳುವುದಾದರೆ, "ಅಹಂಕಾರ" ಬಿಟ್ಟರೆ ಹಿತ ಎನ್ನುವ ಅರ್ಥದಲ್ಲಿದೆ ಈ ಮುಕ್ತಕದ ಆಂತರ್ಯ.

**ಮುಕ್ತಕ-22**

**ಕೃತ್ರಿಮವೋ ಜಗವೆಲ್ಲ | ಸತ್ಯತೆಯದೆಲ್ಲಿಹುದೋ? |**
**ಕರ್ತೃವೆನಿಸಿದನೆ ತಾಂ ಗುಪ್ತನಾಗಿಹನು ||**
**ಚತ್ರವೀ ಜಗವಿದರೋಳಾರ ಗುಣವೆಂತಹುದೋ |**
**ಯಾತ್ರಿಕನೆ, ಜಾಗರಿರೋ-ಮಂಕುತಿಮ್ಮ ||**

ಸತ್ಯತೆಯದೆಲ್ಲಿಹುದೋ=ಸತ್ಯತೆ+ಎಲ್ಲಿ+ಇಹುದೋ,ಕರ್ತೃವೆನಿಸಿದನೆ=ಕರ್ತೃವು+ಎನಿಸಿದನೆ, ಜಗವಿದರೋಳಾರ=ಜಗವು+ಇದರೊಳು+ಯಾರ, ಗುಣವೆಂತಹುದೋ=ಗುಣವು+ಎಂತಹುದೋ,

ಕೃತ್ರಿಮ=ಢಾಂಬಿಕತೆ, ನಾಟಕ, ಬೂಟಾಟಿಕೆ, ಕರ್ತೃವು=ಜಗತ್ತನ್ನು ಸೃಷ್ಟಿಮಾಡಿದ ಶಕ್ತಿ, ಗುಪ್ತ=ಅವ್ಯಕ್ತನಾಗಿ, ಅಮೂರ್ತನಾಗಿ, ಕಣ್ಣಿಗೆ ಕಾಣದೆ. ಯಾತ್ರಿಕ=ಪಯಣಿಗ, ಜಾಗರಿರು-ಜಾಗ್ರತೆಯಾಗಿರು.

ಹಿಂದಿನ ಐದು ಮುಕ್ತಕಗಳಲ್ಲಿ ವೇದಾಂತದ ಹಲವು ವಿಚಾರಗಳನ್ನು ನಮಗೆ ಅರುಹುತ್ತಾ, ಈ ಮುಕ್ತಕದಲ್ಲಿ ಮಾನ್ಯ ಗುಂಡಪ್ಪನವರು, ಈ ಜಗತ್ತಿನ ಪ್ರಸ್ತಾಪ ಮಾಡುತ್ತಾರೆ. ಈ ಜಗತ್ತು ಕೃತ್ರಿಮವೆನ್ನುತ್ತಾರೆ. ಇದನ್ನು ಕೇವಲ ಮಾನವರ ಜಗತ್ತಿಗೆ ಅನ್ವಯಿಸಿಕೊಳ್ಳಬೇಕು. ಏಕೆಂದರೆ, ಗಿಡ, ಮರ, ಪಶು ಪಕ್ಷಿ ಮತ್ತು ಅನ್ಯ





ಜೀವಿಗಳಲ್ಲಿ ಇಂದಿಗೂ ಕೃತ್ರಿಮತೆ ನಾವು ಕಾಣುವುದಿಲ್ಲ. ಈ ಕೃತ್ರಿಮತೆ ಏನಿದ್ದರೂ ಕೇವಲ ಮಾನವರಿಗೆ ಅನ್ವಯಿಸುತ್ತದೆ. "ಏಕೆ ಹೀಗೆ? ಮಾನವರಲ್ಲಿ ಮಾತ್ರ ಏಕೆ? ಮಾನವರು ಮೊದಲಿನಿಂದಲೂ ಹೀಗೇ ಇದ್ದಾರೆಯೇ ಅಥವಾ ಈ ಕೃತ್ರಿಮತೆ ಕಾಲಕ್ರಮೇಣ ಜನಮಾನಸದಲ್ಲಿ ಹೊಕ್ಕಿದೆಯೇ?" ಎಂಬುದನ್ನು ಯೋಚಿಸಿದಾಗ ನಮಗೆ ಕಾಣುವುದು ಹೀಗೆ. ಮಾನವ ಮೊದಲಿನಿಂದಲೂ ಕೃತಿಮನಲ್ಲ. ಪ್ರಕೃತಿಯ ಮಗುವಾಗಿ ಪ್ರಕೃತಿಯಲ್ಲಿ ಒಂದಾಗಿ ಅಲ್ಲೇ ಜೀವಿಸುತ್ತಿದ್ದ. ಅವನೂ ಸಹ ಮಿಕ್ಕೆಲ್ಲ ಪ್ರಾಣಿಗಳಂತೆ, ತನ್ನ ಆಹಾರ ಹುಡುಕುವುದು, ತನ್ನನ್ನು ತಾನು ರಕ್ಷಿಸಿಕೊಳ್ಳುವುದು ಮತ್ತು ತನ್ನ ಸಂತತಿಯನ್ನು ಬೆಳೆಸುವುದು, ಇಷ್ಟಕ್ಕೆ ತನ್ನ ಚಟುವಟಿಕೆಗಳನ್ನು ಸೀಮಿತಗೊಳಿಸಿಕೊಂಡಿದ್ದ.

ಮಾನವ ಕಾಲಕ್ರಮೇಣ ಸಂಘ ಜೀವಿಯಾದ. ಅಲೆಮಾರಿಯಾಗಿದ್ದ ಅವನು ಒಂದು ಕಡೆ ನೆಲೆನಿಲ್ಲಲು ಆರಂಭಿಸಿದ ದಿನದಿಂದ ಅಲ್ಪ ಅಲ್ಪವಾಗಿ ಇವನಲ್ಲಿ ಇದು ತನ್ನದು, ಇದು ತನಗೆ, ಇವರು ತನ್ನವರು ಎಂಬ ಮಮಕಾರದ ಭಾವಗಳು ಬಂದವು. ಮುಕ್ತನಾಗಿದ್ದ ಮನುಷ್ಯ ತನ್ನ ಸುತ್ತ ಒಂದು ವೃತ್ತವನ್ನು ಎಳೆದುಕೊಂಡ. ಆ ವೃತ್ತದಲ್ಲಿ ಇರುವುದೆಲ್ಲ ತನ್ನದು ಎನ್ನುವ ಮಮಕಾರವನ್ನು ಬೆಳೆಸಿಕೊಂಡ. ಕ್ರಮೇಣ ಅವನ ಪರಿವಾರ ಬೆಳೆದಂತೆ, ಆ ವೃತ್ತವನ್ನೂ ದೊಡ್ಡದಾಗಿಸುವ ಪ್ರಯತ್ನ, ಹೀಗೇ ಅವನಿಗೆ ವಸ್ತು ಸಂಚಯನ ಅಭ್ಯಾಸವಾಗಿ ಹೋಯಿತು. “ಇಷ್ಟಿದ್ದರೆ ಇನ್ನಷ್ಟರಾಸೆ” “ಕಡಿಮೆ ಸಂಪನ್ಮೂಲಗಳಿಗೆ ಅಧಿಕ ಬೇಡಿಕೆಯಾದರೆ, ಪೈಪೋಟಿ ಬೆಳೆಯುತ್ತದೆ” ಎನ್ನುವುದು ಅರ್ಥಶಾಸ್ತ್ರದ ಸಿದ್ಧಾಂತ. ಆ ಸಿದ್ಧಾಂತದ ಪ್ರಕಾರ, ಮನುಷ್ಯ ಮನುಷ್ಯನ ಮಧ್ಯೆ ತೀವ್ರ ಪೈಪೋಟಿ. ಎಲ್ಲ ವಿಷಯದಲ್ಲೂ. ಅಲ್ಲಿ ಎಲ್ಲರೂ, ಎಂದಿಗೂ ಮುಂಚೂಣಿಯಲ್ಲಿ ನಿಲ್ಲಲು ಸುಳ್ಳು, ಮೋಸ, ದಗಾ, ಎಲ್ಲವನ್ನೂ ತನ್ನ ಮನೋಭಾವದಲ್ಲಿ ಅಳವಡಿಸಿಕೊಂಡರು. ಯಾರು ಹೆಚ್ಚು ಸುಳ್ಳನ್ನು, ಹೆಚ್ಚು ಸಮರ್ಪಕವಾಗಿ, ಸುಳ್ಳರೆಂದು ಬಯಲಾಗದೆ, ಹೆಚ್ಚು ಸಮಯಕ್ಕೆ ಹೇಳಬಲ್ಲವರೋ ಅವರೇ ಈ ಪೈಪೋಟಿಯಲ್ಲಿ ಗೆಲ್ಲುತ್ತಾ ಬಂದರು. ಗೆಲುವಿಗೆ ಇದು ಒಂದು ಸೂಕ್ತ ಮಾರ್ಗವೆಂದು ಮನಗಂಡು ಅದನ್ನೇ ಅಭ್ಯಾಸಮಾಡಿ, ತಮ್ಮ ಸ್ವಭಾವವಾಗಿಸಿಕೊಂಡರು. “ಋತವೆಂದರೆ ಮನದೊಳಗಿನ ಭಾವ. “ಸತ್ಯ”ವೆಂದರೆ ಆ ಮನದೊಳಗಿನ ಆ ಭಾವ ಹಾಗೇ, ಬದಲಾಗದೆ, ವ್ಯಕ್ತವಾದರೆ ಅದು ಸತ್ಯ. ಆದರೆ ಇಂದು ಋತದಲ್ಲೂ ಕುಟಿಲತೆ, ಸತ್ಯದಲ್ಲೂ ಕುಟಿಲತೆ. ಇದನ್ನೇ ಮಾನ್ಯ ಗುಂಡಪ್ಪನವರು “ಕೃತ್ರಿಮವು ಜಗವೆಲ್ಲ ಸತ್ಯತೆಯೆದಲ್ಲಿಹುದೋ”ಎಂದರು.

ಆದರೆ ಇವುಗಳನ್ನೆಲ್ಲ ಮತ್ತು ಎಲ್ಲ ಪ್ರಾಣಿಗಳನ್ನು ಸೃಷ್ಟಿಸಿದ ಆ ಸೃಷ್ಟಿಕರ್ತನೂ ಎಲ್ಲೋ ಗುಹ್ಯನಾಗಿಬಿಟ್ಟಿದ್ದಾನೆ ಎನ್ನುತ್ತಾರೆ, ಶ್ರೀ ಡಿ. ವಿ. ಜಿ. ಅಂದರೆ ಮನುಷ್ಯರ ಮನಸ್ಸುಗಳಲ್ಲಿ ಆ ದೈವ ಭಕ್ತಿ, ಪರಮಾತ್ಮ ಸೃಷ್ಟಿಯಾದ ಈ ಜಗತ್ತನ್ನು ಪೂಜಾಭಾವದಿಂದ ನೋಡುವ ಪರಿ, "ಎಲ್ಲವೂ ಆ ಪರಮಾತ್ಮನ ಸೃಷ್ಟಿ, ಇದನ್ನು ನಾನು ದುರುಪಯೋಗಪಡಿಸಿಕೊಳ್ಳಬಾರದು ಮತ್ತು ಅವನು ನಿರ್ಮಿಸಿದ ಲೋಕದಲ್ಲಿ ನಾನೂ ಎಲ್ಲರಂತೆ, ಹಾಗಾಗಿ ದುರಾಸೆ, ದುರ್ಭಾವ, ದುರಾಲೋಚನೆ, ಸುಳ್ಳು, ಮೋಸ, ತಟವಟ ಇವೆಲ್ಲವೂ ಇರಬಾರದು, ಇದ್ದರೆ ನಾನು ಆ ದೈವದ ಅಪಕೃಪೆಗೆ ಪಾತ್ರನಾಗುತ್ತೇನೆ” ಎಂಬ ಭಾವನೆಗಳು ಯಾವುದೂ ಇಲ್ಲದೆ ಸ್ವೇಚ್ಛಾ ಮನೋಭಾವ ಬೆಳೆಸಿಕೊಂಡಿರುವುದರಿಂದ, ಅವನ ಮನಸ್ಸಿನಲ್ಲಿ ಆ ದೈವವಿಲ್ಲದಿರುವುದರಿಂದ, ಆ “ಸೃಷ್ಟಿಕರ್ತನೂ ಎಲ್ಲೋ ಗುಹ್ಯನಾಗಿಬಿಟ್ಟಿದ್ದಾನೆ” ಎನ್ನುತ್ತಾರೆ ಮಾನ್ಯ ಗುಂಡಪ್ಪನವರು.

ಆ ದೇವರು ನಮ್ಮೆಲ್ಲರ ಕಲ್ಪನೆಯೆಂತೆ ಇರುವನೋ ಇಲ್ಲವೋ ಎಂಬ ಜಿಜ್ಞಾಸೆ ಬೇಡ. ಆದರೆ ಒಂದು ಮಾತು ಸತ್ಯ. ಆ ದೈವವಿದೆ, ನಾವದರ ಅಧೀನ ಎಂಬ ಭಾವಗಳು, ಮಾನವರು ಸಂಸ್ಕಾರವನ್ನು ಬೆಳೆಸಿಕೊಳ್ಳಲು ಮತ್ತು ಅವರೇ ನಿರ್ಮಿಸಿಕೊಂಡ ಸಮಾಜದಲ್ಲಿ ಒಂದು ಸಂಯಮ ಮತ್ತು ಶಿಸ್ತು ಇರಲು ಕಾರಣವಾಗಿದೆ ಎಂದರೆ ಅದು ಒಳ್ಳೆಯದೇ ಅಲ್ಲವೇ. ಅಂತಹ ದೈವದಲ್ಲಿ ಇಂದು ಭಯ ಭಕ್ತಿಗಳು ಕಾಣೆಯಾಗಿವೆ ಎನ್ನುವ ಅರ್ಥದಲ್ಲಿ "ಆ ಸೃಷ್ಟಿಕರ್ತನೂ ಎಲ್ಲೋ ಗುಹ್ಯನಾಗಿಬಿಟ್ಟಿದ್ದಾನೆ" ಎನ್ನುತ್ತಾರೆ ಮಾನ್ಯ ಗುಂಡಪ್ಪನವರು. ವಾಚಕರೆ ಇದರ ವಿಚಾರವನ್ನು ಎಲ್ಲರೂ ಮಾಡಲೇಬೇಕು. ಏಕೆಂದರೆ "ಯಾವುದೋ ಒಂದು ಸದ್ವಸ್ತು ಇದ್ದರೆ ಸಮಾಜ ಒಳ್ಳೆಯ ಸಮಾಜವಾಗಿ ಪರಿವರ್ತನೆಗೊಳ್ಳುತ್ತದೆ ಎಂದು ಅರಿತರೆ, ನಮ್ಮ ಸಮಾಜ ಸುಧಾರಿಸಲು ಎಲ್ಲೋ ಒಂದು ಮಾರ್ಗವಿದೆ ಎಂದು ಅರಿತುಕೊಳ್ಳಬಹುದು. ಎಲ್ಲರೂ ಅದನ್ನು ಸಾಧಿಸಲು ಪ್ರಯತ್ನಿಸಬೇಕು.

ಇನ್ನು ಈ ಸಮಾಜದಲ್ಲಿ ಹೇಗಿರಬೇಕೆಂದು ಒಂದು ಎಚ್ಚರಿಕೆಯನ್ನು ನೀಡುತ್ತಾರೆ ಶ್ರೀ ಡಿ. ವಿ. ಜಿ ಯವರು, ಇಂತಹ ವಿಚಿತ್ರವಾದ ಜಗತ್ತಿನಲ್ಲಿ ಯಾರ ಗುಣ ಹೇಗಿರುತ್ತೋ ತಿಳಿಯುವುದು ಕಷ್ಟ ಎನ್ನುತ್ತಾರೆ. ನಯ ವಂಚಕರಿರುವ ಈ ಜಗತ್ತಿನಲ್ಲಿ ಮೋಸ ಮಾಡುವವರು ಕಡಿಮೆಯಾದರೂ ಮೋಸ ಹೋಗುವವರ ಸಂಖ್ಯೆ ಅಧಿಕ. ಇಲ್ಲಿ ಒಂದು ವಿಷಯ ಹೇಳಬೇಕು. ಮೋಸಮಾಡಲು ಬುದ್ಧಿವಂತಿಕೆ ಬೇಕು. "ಎಲ್ಲ ಬುದ್ಧಿವಂತರೂ ಮೋಸಗಾರರಲ್ಲ. ಆದರೆ ಎಲ್ಲ ಮೋಸಗಾರರೂ ಬುದ್ಧಿವಂತರು" ಎನ್ನುವುದು ಸತ್ಯವಾದ ಮಾತು. ಇಂತಹವರ ಸಂಖ್ಯೆ ಕಡಿಮೆಯಾದರೂ ಅವರ ಬಲೆಗೆ ಬೀಳುವ ಜನರ ಸಂಖ್ಯೆ ಹೆಚ್ಚಾದ್ದರಿಂದ ಎಲ್ಲರೂ ಒಂದಲ್ಲ ಒಂದು ಬಾರಿ ಆ ಮೋಸದ ವಂಚನೆಯ ಕೃತ್ರಿಮತೆಯ, ತಟವಟದ ಜನರ ಬಲೆಯಲ್ಲಿ ಸಿಕ್ಕು ಕಷ್ಟಪಟ್ಟಿರುವವರೇ ಆಗಿರುತ್ತಾರೆ. ಹಾಗಾಗಿ ನೀ ಜಾಗರೂಕನಾಗಿರು ಎಂದು ಎಚ್ಚರಿಕೆಯನ್ನು ನೀಡುತ್ತಾರೆ. ಹಾಗೇ ನೀಡುವಾಗ "ಯಾತ್ರಿಕನೆ" ಎನ್ನುವ ಪದ ಪ್ರಯೋಗ ಮಾಡುತ್ತಾರೆ. ಹೌದು ನಾವೆಲ್ಲರೂ ಈ ಜಗತ್ತಿನಲ್ಲಿ ಜೀವನವೆನ್ನುವ ಪ್ರಯಾಣವನ್ನು ಮಾನವರೂಪದ ಈ ಮಣ್ಣಿನ ಬಂಡಿಯಲ್ಲಿ ಮಾಡುವ "ಪ್ರಯಾಣಿಕ"ರೇ, ಅಲ್ಲವೇ?

ಹಾಗಾಗಿ ಈ ಜಗತ್ತು ಕೃತ್ರಿಮತೆ, ಕುಟಿಲತೆ, ಸುಳ್ಳು ಮತ್ತು ಮೋಸದಿಂದ ತುಂಬಿದೆ. ದೈವಭಕ್ತಿಯು ನಶಿಸಿದೆ. ಇಲ್ಲಿ ನೀನು ಜಾಗರೂಕನಾಗಿರು ಎಂದು ಎಚ್ಚರಿಸುವ ಭಾವವೇ ಈ ಮುಕ್ತಕ. ಆದರೆ ಈ ಸ್ಥಿತಿ ಅ-ನಿವಾರ್ಯ(incurable) ಅಲ್ಲ. ಎಲ್ಲರೂ ಮನಸ್ಸು ಮಾಡಿದರೆ ಸಾಧ್ಯ. ಇಲ್ಲಿ ಕೃತ್ರಿಮತೆ, ಕುಟಿಲತೆ, ಸುಳ್ಳು ಮತ್ತು

ಮೋಸಗಳ ಸ್ಥಾನದಲ್ಲಿ ಕರುಣೆ, ಪ್ರೀತಿ, ಪ್ರೇಮ, ಸಹೃದಯತೆ ಮುಂತಾದ ಭಾವಗಳನ್ನು ಬೆಳೆಸಿಕೊಂಡು ನಾವಿರುವ ಜಗತ್ತನ್ನು ಸುಂದರವನ್ನಾಗಿಸಲು ನಾವೆಲ್ಲರೂ ಪ್ರಯತ್ನಪಡೋಣವೆಂದು ಹೇಳುತ್ತಾ, ಇವುಗಳನ್ನೇ ಚಿಂತಿಸುತ್ತಾ ವಿಚಾರಮಾಡುತ್ತಾ ಸುಧಾರಣೆಯ ಮಾರ್ಗ ಹುಡುಕುವ ಪ್ರಯತ್ನವನ್ನು ನಾವೂ ಸಹ ಮಾಡೋಣ.





**ಮುಕ್ತಕ-23**

**ತಿರು ತಿರುಗಿ ತೊಳಲುವುದು ತಿರಿದನ್ನವುಣ್ಣುವುದು |**
**ಮೆರೆದು ಮೈಮರೆಯುವುದು ಹಲ್ಲ ಕಿರಿಯುವುದು ||**
**ಮರಳಿ ಕೊರಗಾಡುವುದು, ಕೆರಳುವುದು ನರಳುವುದು |**
**ಇರವಿದೇನೊಣರಗಳೇ?-ಮಂಕುತಿಮ್ಮ ||**

ತಿರಿದನ್ನವುಣ್ಣುವುದು=ತಿರಿದು+ಅನ್ನವನ್ನು+ಉಣ್ಣುವುದು,

ಇರವಿದೇನೊಣರಗಳೇ=ಇರವು+ಇದೇನು+ಒಣ+ರಗಳೆ,

ತಿರುದು=ಭಿಕ್ಷೆಯೆತ್ತಿ, ಉಣ್ಣುವುದು=ತಿನ್ನುವುದು, ಕೆರಳುವುದು=ಕೋಪಗೊಳ್ಳುವುದು, ರಗಳೆ=ಪರದಾಟ.

ಮನುಷ್ಯ ಮತ್ತೆ ಮತ್ತೆ ಪರದಾಡುವುದು, ನಾವು ಎಲ್ಲ ಕಡೆಯೂ ಕಾಣಬಹುದು. ಪರದಾಡಿ ಅವರಿವರನ್ನು ಕಾಡಿ ಬೇಡಿ ಹೊಟ್ಟೆ ತುಂಬಿಸಿಕೊಳ್ಳುವುದು. ಪಡೆದದ್ದು ಹೆಚ್ಚಾದರೆ ಮೆರೆದು ಅಹಂಕಾರ ತೋರಿಸುವುದು. ತಮ್ಮನ್ನು ತಾವು, ಬಹಳ ಸಾಧಿಸಿದೆವೆಂದು ಅಹಂಕಾರದಿಂದ ಮೆರೆಯುವುದು, ಪಡೆದದ್ದನ್ನು ಉಳಿಸಿಕೊಳ್ಳಲು ಅವರಿವರ ಮುಂದೆ ಹಲ್ಲು ಕಿರಿಯುವುದು, ಗಿಂಜುವುದು, ಬೇಡುವುದು ನಾವು ಸರ್ವೇಸಾಮಾನ್ಯವಾಗಿ ಎಲ್ಲರಲ್ಲೂ ಕಾಣುತ್ತೇವೆ. ತಾವು ಅಂದುಕೊಂಡದ್ದು ಸಿಕ್ಕದಿದ್ದರೆ ಕೋಪಗೊಳ್ಳುವುದು, ಹಾಗೂ ಕೈಲಾಗದತನದಿಂದ ಸಂಕಟಪಡುವುದು ಅಥವಾ ನರಳುವುದು, ಇದನ್ನೆಲ್ಲಾ ಮಾನ್ಯ ಡಿ.ವಿ.ಜಿ.ಯವರು ಸತ್ವವಿಲ್ಲದ ಒಣ ರಗಳೆ ಅಥವಾ ಸತ್ವವಿಲ್ಲದ ಜೀವನದ ಪರಿ ಎಂದು ಈ ಮುಕ್ತಕದಲ್ಲಿ ಸೂಚ್ಯವಾಗಿ ಹೇಳುತ್ತಾರೆ.

ಹೊಟ್ಟೆಪಾಡಿಗಾಗಿಯೇ ಮತ್ತೆ ಮತ್ತೆ ಪರದಾಡುವುದು, ನಮಗೆ ಸೂಕ್ತವೋ ಅಲ್ಲವೋ, ನಾವು ಇಷ್ಟಪಟ್ಟು ಮಾಡುವ ಕೆಲಸವೋ ಅಲ್ಲವೋ, ಆ ಕೆಲಸದಲ್ಲಿ ನಮಗೆ ತೃಪ್ತಿ ಸಿಗುತ್ತದೆಯೋ ಇಲ್ಲವೋ, ಇವೆಲ್ಲವನ್ನೂ ಪರಿಗಣಿಸದೆ ಕೇವಲ ಉದರ ಪೋಷಣೆಗಾಗಿಯೇ ಕೆಲಸ ಮಾಡುವುದು. ಇದು ಅವಶ್ಯಕವೇ ಹೌದು. ಆದರೆ ಹೀಗೆ ಮಾಡುವ ಕೆಲಸದಲ್ಲಿ ಒಂದು ಉತ್ಸಾಹವಿಲ್ಲದೆ, ತೃಪ್ತಿಯಿಲ್ಲದೆ, ಕೇವಲ ಯಾಂತ್ರಿಕವಾಗಿ ನಾವು ನಮ್ಮ ಕೆಲಸಕಾರ್ಯಗಳನ್ನು ಮಾಡುತ್ತಿದ್ದೇವೆ. ನಮ್ಮ ಗುಣಕ್ಕೆ, ನಮ್ಮ ಸ್ವಭಾವಕ್ಕೆ ಹೊಂದುವ ಕೆಲಸ ನಾವು ಮಾಡಬೇಕೆಂದರೂ ಆಗದೆ ಕೇವಲ ಹೊಟ್ಟೆಪಾಡಿಗಾಗಿ ಕೆಲಸ ಮಾಡುತ್ತ ರಸಾನುಭವವಿಲ್ಲದೆ, ನೀರಸವಾದ ಜೀವನ ಮಾಡುತ್ತೇವೆ. ಅದನ್ನೇ ಒಣ ರಗಳೆ ಎಂದು ಗುಂಡಪ್ಪನವರು ಹೇಳುತ್ತಾರೆ.

"ಉದರ ವೈರಾಗ್ಯವಿದು" ಎಂದು ಹೇಳುವ ಪುರಂದರ ದಾಸರ ಪದದಲ್ಲಿನ ಆಂತರ್ಯವೂ ಇದೇ ಆಗಿರುತ್ತೆ. ಹೀಗೆ ಹೊಟ್ಟೆಪಾಡಿಗಾಗಿ ಕೆಲಸಮಾಡುವಾಗ, ನಮಗೆ ಬೇಸರ, ಕೋಪ, ದ್ವೇಷ, ಅಸೂಯೆ ಮುಂತಾದವುಗಳೆಲ್ಲ ಮನಸ್ಸಿಗೆ ಬಂದು ಒಂದು ರಸಾನುಭಾವವಿಲ್ಲದೆ ಅತೃಪ್ತಿಯ ಭಾವನೆಯೇ ಇರುವುದು, ಹಾಗಾಗಿ ಈ ಜೀವನವೆಲ್ಲ ಒಂದು ಒಣ ರಗಳೆ ಎಂದು ಹೇಳುತ್ತಾರೆ.

ಇದು ಹೀಗೆ ಎಲ್ಲರಿಗೂ ಇರುವುದಿಲ್ಲ. ತಮ್ಮ ಕೆಲಸವನ್ನು ಬಹಳ ಇಷ್ಟಪಟ್ಟು ಮಾಡುವವರೂ ತಾವು ಮಾಡುವ ಕೆಲಸದಲ್ಲಿ ಸಂಪೂರ್ಣ ಆಸಕ್ತಿ ತನ್ಮಯತೆ ಮತ್ತು ತೃಪ್ತಿಯನ್ನು ಕಂಡುಕೊಳ್ಳುವವರೂ ಇದ್ದಾರೆ.



ಆದರೆ ಅವರ ಸಂಖ್ಯೆ ಬಹಳ ಕಡಿಮೆ. ಬಹಳ ಸಂಖ್ಯೆಯ ಜನ, ಶ್ರೀ ಗುಂಡಪ್ಪನವರು ಹೇಳುವ ಹಾಗೆ ನೀರಸವಾದ ಜೀವನವನ್ನೇ ನಡೆಸುತ್ತಾರೆ. ನಾವೂ ಸಹ ನಮ್ಮ ನಮ್ಮ ಕಾರ್ಯಕ್ಷೇತ್ರಗಳಲ್ಲಿ ತೃಪ್ತಿಯನ್ನು ಕಂಡುಕೊಳ್ಳಬಹುದೇನೋ ಎಂದು ಆಲೋಚಿಸೋಣ.

# ಬಾಳಿಗೆ ನಕಾಶೆ 24-28

**ಮುಕ್ತಕ-24**

**ನರರ ಬಯಕೆಗಳ ಸುರರ ತಾಯ್ತಂದೆಗಳೋ? |**
**ಸುರರಟ್ಟಹಾಸದಿನೆ ನರಭಕ್ತಿಯೊರಲೋ? ||**
**ಪರಕಿಸುವರೇನವರ್ಗಳನ್ಯಶಕ್ತಿಗಳ |**
**ಧರುಮವೆಲ್ಲಿದರಲ್ಲಿ ಮಂಕು ತಿಮ್ಮ? ||**

ತಾಯ್ತಂದೆಗಳೋ?=ತಾಯಿ+ತಂದೆಗಳೋ, ಸುರರಟ್ಟಹಾಸದಿನೆ=ಸುರರ+ಅಟ್ಟಹಾಸದಿ+ಇನೆ, ಪರಕಿಸುವರೇನವರ್ಗಳನ್ಯೋನ್ಯಶಕ್ತಿಗಳ=ಪರಕಿಸುವರೇನು+ಅವರ್ಗಳ+ಅನ್ಯೋನ್ಯ+ಶಕ್ತಿಗಳ, ಧರುಮವೆಲ್ಲಿದರಲ್ಲಿ=ಧರುಮವೆಲ್ಲಿ+ಇದರಲ್ಲಿ

ನರರ=ಮನುಷ್ಯರ, ಬಯಕೆಗಳ್=ಆಸೆಗಳ್, ಸುರರ=ದೇವತೆಗಳ ಅಟ್ಟಹಾಸದಿ=ಆರ್ಭಟದಲ್ಲಿ, ಇನೆ=ಇರಲು, ಒರಲೋ=ಕೂಗೋ, ಪರಕಿಸುವರೇನು=ಪರೀಕ್ಷಿಸುವರೇನು, ಅವರ್ಗಳ=ಅವರೀರ್ವರ, ಶಕ್ತಿಗಳ=ಪರಸ್ಪರ ಶಕ್ತಿಗಳ, ಧರುಮ=ಧರ್ಮ,

ಮನುಷ್ಯರ ಬಯಕೆಗಳೇ ಈ ದೇವತೆಗಳಿಗೆ ತಂದೆ ತಾಯಿಗಳೋ ಎಂದು ಕೇಳುತ್ತಾರೆ ಶ್ರೀ ಗುಂಡಪ್ಪನವರು. ಹೌದಲ್ಲವೇ ಈ ವಿಶ್ವದ ಎಲ್ಲವನ್ನೂ ಸೃಷ್ಟಿಸಿ ನಡೆಸಿಕೊಂಡು ಹೋಗುವವ ಆ ಪರಮಾತ್ಮನಾಗಿರುವಾಗ, ಮನುಷ್ಯರು ತಮ್ಮ ತಮ್ಮ ಸಣ್ಣ ಸಣ್ಣ ಬಯಕೆಗಳನ್ನು ಈಡೇರಿಸಿಕೊಳ್ಳಲು ಬೇರೆ ಬೇರೆ ದೇವತೆಗಳನ್ನು ಸೃಷ್ಟಿಸಿಕೊಂಡಿರುವುದರಿಂದ, ಅವರಿಗೆ ನಮ್ಮ ಬಯಕೆಗಳೇ ತಂದೆ ತಾಯಿಗಳ ಸ್ಥಾನದಲ್ಲಿರುವುದು ತಥ್ಯವಲ್ಲವೇ? ಇದನ್ನೇ ಶ್ರೀ ಗುಂಡಪ್ಪನವರು ಹೇಳುತ್ತಾರೆ. ವಿದ್ಯೆಗೆ ಒಂದು ದೇವತೆ, ಹಣಕ್ಕೆ ಒಂದು ದೇವತೆ, ಮಳೆಗೆ ಒಂದು ದೇವತೆ, ಗಾಳಿಗೊಂದು ದೇವತೆ. ನಮಗೆ ಗಿಡ ಮರ ಬಳ್ಳಿಗಳೂ ನದಿ ಬೆಟ್ಟ ಕಾಡುಗಳೂ, ಎಲ್ಲವೂ ದೇವತಾ ಸ್ವರೂಪವೇ, ಹಾಗಾಗಿ ನಾವೇ ನಮ್ಮ ಕಲ್ಪನಾ ಶಕ್ತಿಯಿಂದ, ಆ ಪರಮಾತ್ಮನ ಸೃಷ್ಟಿ ಎಲ್ಲಕ್ಕೂ ದೇವತಾ ರೂಪವನ್ನು ಕೊಟ್ಟಿರುವುದರಿಂದ, ಮನುಷ್ಯರ ಬಯಕೆಗಳೇ ದೇವತೆಗಳಿಗೆ ತಂದೆ ತಾಯಿ ಸ್ಥಾನದಲ್ಲಿದ್ದಾನೆ, ಎಂದು ಗುಂಡಪ್ಪನವರು ಹೇಳುತ್ತಾರೆ.

ಆದರೆ ನಾವು ಯಾವುದನ್ನು ದೇವತೆ ಎಂದು ಕರೆಯುತ್ತೇವೆಯೋ, ಅವುಗಳು, ಆ ಪರಮ ಶಕ್ತಿಯು ಇಡೀ ಸೃಷ್ಟಿಯನ್ನು ನಿಯಂತ್ರಿಸಲು ನಿಯಮಿಸಲ್ಪಟ್ಟು, ಬೇರೆ ಬೇರೆ ರೂಪದಲ್ಲಿ ಇಂದ್ರ, ವರುಣ, ಅಗ್ನಿ, ವಾಯು, ದಿಕ್ಪಾಲಕರು ಎಂದು ಕರೆಸಿಕೊಳ್ಳುತ್ತ, ಈ ಜಗದ್ವ್ಯಾಪಾರವನ್ನು ನಡೆಸುತ್ತಿದೆ. ಹಾಗಾಗಿ ಇವರೆಲ್ಲ ಆ ಪರಮಶಕ್ತಿಯ ಅಧೀನದಲ್ಲಿರುವ

ಮತ್ತು ಆದೇಶದಂತೆ ನಡೆಯುವವರು. “ಭೀಷಾಸ್ಮಾದ್ ವಾತಃ ಪವತೆ, ಭೀಷೋದೇತಿ ಸೂರ್ಯಃ, ಭೀಷಾಸ್ಮಾದ್ ಅಗ್ನಿಸ್ವೇಂದ್ರಶ್ಚ ” ಎಂದು ವೇದ ಹೇಳುತ್ತದೆ. ಅಂದರೆ ಆ ಪರಮ ಶಕ್ತಿಯ





ಅಧೀನದಲ್ಲಿರುವುದೇ ಇವುಗಳೆಲ್ಲ ಎಂದು ಅರ್ಥ. ಅಂತಹ ದೇವತೆಗಳು ತಮ್ಮ ಅಟ್ಟಹಾಸದಿಂದ, ತಮ್ಮ ಅಧಿಪತ್ಯದಿಂದ ಮತ್ತು ಆಧಿಕ್ಯದಿಂದ ಇರುವುದರಿಂದ, ಮನುಷ್ಯರು ಹೆದರಿ ತಮ್ಮ ಬಯಕೆಗಳನ್ನು ಈಡೇರಿಸಿಕೊಳ್ಳಲು ಈ ದೇವತೆಗಳನ್ನು ಕುರಿತು ಭಕ್ತಿಯಿಂದ ಹುಯಿಲಿಡುತ್ತಿದ್ದಾರೋ ಏನೋ ಎಂಬ ಅರ್ಥದಲ್ಲಿ “ನರಭಕ್ತಿಯೊರಲೋ”ಎಂದು ಹೇಳುತ್ತಾರೆ ಶ್ರೀ ಗುಂಡಪ್ಪನವರು.

ಅಥವಾ ದೇವತೆಗಳು ತಮ್ಮ ದೈವೀ ಶಕ್ತಿಯನ್ನು ಮನುಷ್ಯರ ಮೇಲೆ, ಅವರನ್ನು ಪರೀಕ್ಷಿಸಲು ಮತ್ತು ಮನುಷ್ಯರು ತಮ್ಮ ಭಕ್ತಿಯ ಶಕ್ತಿಯಿಂದ ಈ ದೇವತೆಗಳನ್ನೊಲಿಸಿಕೊಳ್ಳಲು, ಒಬ್ಬರಿಗೊಬ್ಬರು ಪೈಪೋಟಿ ಮಾಡುತ್ತಾ ಇದ್ದಾರೋ ಎಂದು ಒಂದು ಶಂಕೆಯನ್ನು ವ್ಯಕ್ತಪಡಿಸುತ್ತಾರೆ. ಇದರಿಂದ ಎಲ್ಲರೂ ತಾವು ಆ ಪರಮಶಕ್ತಿಯಿಂದ ಸೃಷ್ಟಿಸಲ್ಪಟ್ಟು, ಸಲಹಲ್ಪಟ್ಟು, ಅಸ್ತಿತ್ವದಲ್ಲಿದ್ದೇವೆಂಬ ಮೂಲ ಧರ್ಮವನ್ನೇ ಮರೆತಿಹರೇನು ಎಂದು ಕೇಳುತ್ತಾರೆ ಶ್ರೀ ಗುಂಡಪ್ಪನವರು.

ಇಲ್ಲಿ ದೇವತೆಗಳನ್ನು ಪೂಜೆ ಮಾಡುವ ಪ್ರಕ್ರಿಯೆಯನ್ನು ವಿಮರ್ಶೆ ಮಾಡಿದ್ದಾರೆ, ಶ್ರೀ ಗುಂಡಪ್ಪನವರು. ನಾನಾ ದೇವತೆಗಳ ಪೂಜೆಯನ್ನು ವಿಮರ್ಶೆ ಮಾಡಿದ್ದಾರೆ. ಆದರೆ ವಿಮರ್ಶೆಯಷ್ಟೇ, ಅದು ಟೀಕೆಯಲ್ಲ. ಏಕೆಂದರೆ ಅನೇಕ ದೇವತಾ ಪೂಜೆಯಿಂದ ಏಕ ದೇವ ಪೂಜೆಗೆ ಹೋಗುವುದೇ ಆಧ್ಯಾತ್ಮ ಚಿಂತನೆಯ ಮತ್ತು ಪ್ರಯಾಣದ ಮೂಲ ಉದ್ದೇಶ. ಹಲವಾರು ದೇವತೆಗಳನ್ನು ಪೂಜಿಸುವುದು ಪ್ರಾಥಮಿಕ ಹಂತ. ಏಕದೈವವನ್ನು ಪೂಜೆಮಾಡುವುದು, ಆಧ್ಯಾತ್ಮದ ಉನ್ನತ ಹಂತ. ಈ ಪೂಜೆಗಳು ಅದರೊಳಗೆ ವೈವಿಧ್ಯತೆ ಮತ್ತು ಹಲ ದೇವತಾ ಪೂಜೆ ಮತ್ತು ಅಲ್ಲಿಂದ ಏಕ

ದೈವದ ಆರಾಧನೆಯ ಕ್ರಮ ಇವೆಲ್ಲವನ್ನೂ ವಿಷದವಾಗಿ ತಿಳಿಯಬೇಕು. ನಾವು ಯಾವ ಸ್ತರದಲ್ಲಿದ್ದೇವೆ ಎಂದು ನಮ್ಮನ್ನೇ ನಾವು ಪರೀಕ್ಷಿಸಿಕೊಳ್ಳಬೇಕು ಮತ್ತು ಆ ಪರದೈವದಿಂದ ನಿಯಮಿಸಲ್ಪಟ್ಟ ದೇವತಾ ಆರಾಧನೆಯ ಮೂಲಕ ಆ ಪರದೈವವನ್ನು ಅರಿಯುವುದರ ಪ್ರಯತ್ನ ಮಾಡಬೇಕು. ಅನೇಕದಿಂದ ಏಕಕ್ಕೆ ಹೋಗುವ ಮಾರ್ಗದಲ್ಲಿ ಪಯಣಿಸಿ ಪರಮಾರ್ಥವನ್ನು ಸಾಧಿಸಬೇಕು.

**ಮುಕ್ತಕ-25**

**ಜೀವಗತಿಗೊಂದು ರೇಖಾಲೇಖವಿರಬೇಕು |**
**ನಾವಿಕನಿಗಿರುವಂತೆ ದಿಕ್ಕುದಿನವಣಿಸೆ |**
**ಭಾವಿಸುವುದೆಂತದನು ಮೊದಲು ಕೊನೆ ತೋರದಿರೆ? ||**
**ಆವುದೀ ಜಗಕಾದಿ?-ಮಂಕುತಿಮ್ಮ ||**

ಜೀವಗತಿಗೊಂದು=ಜೀವಗತಿಗೆ+ಒಂದು, ಭಾವಿಸುವುದೆಂತದನು=ಭಾವಿಸುವುದು+ಎಂತೆ+ಅದನು
ರೇಖಾಲೇಖ=ಒಂದು ಗೆರೆ ಅಥವಾ ನಿರ್ದಿಷ್ಟ ಮಾರ್ಗ, ನಾವಿಕ=ಹಡಗ ನಡೆಸುವವ, ಎಂತೆ=ಹೇಗೆ

ಸಮುದ್ರ ಮಧ್ಯದಲ್ಲಿ ಒಂದು ಹಡಗನ್ನು ನಡೆಸಲು ನಾವಿಕನಿಗೆ ಒಂದು ದಿಕ್ಸೂಚಿ ಇರುತ್ತದೆ. ಅದರ ಸೂಚನೆಯಂತೆ ನಾವಿಕನು ಮುಂದುವರೆಯುತ್ತಾನೆ. ಆಗ ಹಡಗು ಹೋಗಬೇಕಾದ ದಿಕ್ಕಿನಲ್ಲಿ ಹೋಗುತ್ತದೆ. ಅಂತಹ ಒಂದು ದಿಕ್ಸೂಚಿ ಜೀವನದ ಗತಿಗೆ ಬೇಕು ಎನ್ನುತ್ತಾರೆ ಮಾನ್ಯ ಗುಂಡಪ್ಪನವರು. ಅಂದರೆ ಜೀವನದ ಗತಿಗೆ ಒಂದು



ನೇರ ನಡೆ ಇಲ್ಲ. ಆ ನೇರ ನಡೆ ಬೇಕಾದರೆ ಒಂದು ನೇರ ಗೆರೆ ಬೇಕು ಎನ್ನುತ್ತಾರೆ. ಹೌದು ಇಡೀ ಬದುಕಿಗೆ ಒಂದು ನಿರ್ದಿಷ್ಟ ಗತಿ ಅಥವಾ ಒಂದು ನಿರ್ಧಿಷ್ಟಯಾನದ ದಾರಿ ಇಲ್ಲ.

ಒಟ್ಟಾರೆ ಎಲ್ಲರ ಜೀವನದ ಗತಿಯನ್ನೂ ಅವಲೋಕಿಸಿದರೆ, ಏರು ತಗ್ಗುಗಳು, ಏಳು ಬೀಳುಗಳು, ಸುಖ ದುಃಖಗಳು, ಒಂದೇ ರೀತಿ ಇರದ ಬಂಧ-ಸಂಬಂಧಗಳು. ಹೀಗೆ ಯಾವ ಆಯಾಮದಲ್ಲಿ ನೋಡಿದರೂ ಒಂದು ನಿರ್ದಿಷ್ಟ ಗತಿ ಇಲ್ಲ. ಏಕೆ ಹೀಗೆ, ಎಂದು ಮಂಥನ ಮಾಡಿದರೆ, ನಮಗೆ ತೋರುವುದು ಯಾವುದೋ ಒಂದು ಅವ್ಯಕ್ತ ಶಕ್ತಿಯೇ

ನಮ್ಮೆಲ್ಲರ ಜೀವನವನ್ನೂ ನಡೆಸಿಕೊಂಡು ಹೋಗುತ್ತಿದೆ ಎಂದು. ಆವುದಾ ಶಕ್ತಿ ಎಂದು ಅನಾದಿಕಾಲದಿಂದಲೂ ಒಂದು ಜಿಜ್ಞಾಸೆ ನಡೆದೇ ಇದೆ. ಆದರೆ ಇನ್ನೂ ನಿರ್ದಿಷ್ಟ ಉತ್ತರ ಸಿಕ್ಕಿಲ್ಲ. ಒಬ್ಬ ಬಡವ, ಒಬ್ಬ ಧನಿಕ, ಒಬ್ಬ ರೋಗಿ ಇನ್ನೊಬ್ಬ ನಿರೋಗಿ, ಒಬ್ಬ ಅಲ್ಪಾಯುಷಿ ಮತ್ತೊಬ್ಬ ದೀರ್ಘಾಯುಷಿ, ಒಬ್ಬ ಹೆಡ್ಡ ಮತ್ತೊಬ್ಬ ಅತಿ ಬುದ್ಧಿವಂತ, ಒಬ್ಬ ಸುಂದರ, ಮತ್ತೊಬ್ಬ ಕುರೂಪಿ, ಹೀಗೆ ಹಲವಾರು ವೈವಿಧ್ಯಗಳಿಂದ ಕೂಡಿರುವುದೇ ಜೀವನ.

ಹೀಗಿರುವವರು ಹಾಗೇ ಇದ್ದು ಅವರ ಜೀವನ ಅದೇ ಗತಿಯಲ್ಲಿ ಅಂದರೆ ನೇರ ರೇಖೆಯಲ್ಲಿ ಮುಂದುವರೆಯುತ್ತದೆಯೇ? ಎಂದರೆ ಅದೂ ಇಲ್ಲ. ಎಲ್ಲವೂ ಬದಲಾಗುತ್ತದೆ, ಇಂದು ಇದ್ದಂತೆ ನಾಳೆ ಇರುವುದಿಲ್ಲ. ಎಲ್ಲವೂ ಕೆಲವೊಂದು ಬಾರಿ ಏರು ಪೇರು. ಏಕೆ ಹೀಗೆ? ಗೊತ್ತಿಲ್ಲ. ಆದರೂ ಮುಂದೆ ಹೋಗುತ್ತದೆ, ಒಂದು ಅಂತ್ಯವನ್ನು ಕಂಡುಕೊಳ್ಳುತ್ತದೆ. ಯಾವುದೂ ನಾವು ಅಂದುಕೊಂಡಂತೆ ನಡೆಯುವುದಿಲ್ಲ. ಎಲ್ಲವೂ ನಿಗೂಢ. ಆ ನಿಗೂಢತೆಯನ್ನೇ ಎಲ್ಲರೂ ವಿಧಿ, ದೇವರು, ಭಾಗ್ಯ, ಅದೃಷ್ಟ ಹೀಗೆ ನಾನಾ ಹೆಸರುಗಳಿಂದ ಕರೆದರು. ಯಾರಿಗೂ "ಅದು" ಅರ್ಥವಾಗದಿದ್ದರೂ ಅದರ ಹಿಡಿತದಿಂದ ಬಿಡಿಸಿಕೊಳ್ಳಲಾಗದು.

ಪ್ರತಿಯೊಬ್ಬ ಜೀವಿಯೂ ತನ್ನ ಪೂರ್ವ ಕರ್ಮದ ಅನುಸಾರ ಅವನ ಜೀವನವನ್ನು ಅನುಭವಿಸುತ್ತಾನೆ, ಎಂದು ನಮ್ಮ ಪೂರ್ವಜರು ಹೇಳಿದ್ದಾರೆ. ಆ ಪೂರ್ವಕರ್ಮವೂ ಅವನಿಗೆ ಅರ್ಥವಾಗುವುದಿಲ್ಲ. ಯಾವ ಪೂರ್ವ ಕರ್ಮದಿಂದ ಇಂದಿನ ವಿದ್ಯಮಾನ ಹೀಗೆ ನಡೆಯುತ್ತಿದೆ ಎಂದು ಅರ್ಥವಾಗುವುದಿಲ್ಲ. ಶುದ್ಧವಾಗಿ, ಪರಮಾತ್ಮನಿಂದ ಬಂದ ಆತ್ಮಕ್ಕೆ, ಈ ಪೂರ್ವಕರ್ಮದ ಸಂಚಯನ ಹೇಗೆ ಆಯ್ತು, ಎಂಬುದೇ ಒಂದು ನಿಗೂಢ, ಆ ಪರಮಾತ್ಮನ ಇಚ್ಛೆಯಂತೆ ಎಲ್ಲ ನಡೆಯುತ್ತದೆ ಎನ್ನುತ್ತಾರೆ. ಅವನ ಇಚ್ಛೆಯೆಂದರೆ ಏನು? ಅದು ಏಕೆ ಹೀಗಿರುತ್ತದೆ, ಅದು ಬದಲಾಗುತ್ತಿದ್ದರೂ, ಆ ಬದಲಾವಣೆಗೆ ಕಾರಣವೇನು ಎಂದು ಅರ್ಥವಾಗುವುದಿಲ್ಲ. ಇದರ ಗುಟ್ಟನ್ನು ಭೇದಿಸಲು, ಅನಾದಿಕಾಲದಿಂದಲೂ ಪ್ರಯತ್ನ ನಡೆಯುತ್ತಿದ್ದರೂ ಅದು ಏನು ಎನ್ನುವುದು ಇನ್ನೂ ಸಹ ನಿಗೂಢ. ಇದರ ಮೊದಲು-ಕೊನೆಗಳನ್ನು ಅರ್ಥಮಾಡಿಕೊಳ್ಳುವುದು ಹೇಗೆ ಎಂದು ಮಾನ್ಯ ಗುಂಡಪ್ಪನವರು ನಮ್ಮ ಮುಂದೆ ಒಂದು ಪ್ರಶ್ನೆ ಇಡುತ್ತಾರೆ.

ಮಾನ್ಯ ವಾಚಕರೆ, ಇದು ನಿಗೂಢ. ಆದರೆ ನಮ್ಮ ಭಾರತೀಯ ಚಿಂತಕರು ಅದಕ್ಕೆ ತಮ್ಮ ತಮ್ಮದೇ ಆದ ಪರಿಭಾಷೆ, ವಿವರಣೆ ಮತ್ತು ವ್ಯಾಖ್ಯಾನಗಳನ್ನು ನೀಡಿದ್ದರೂ ಯಾವುದೂ ನಿರ್ದಿಷ್ಟವಿಲ್ಲ. ಆದರೆ ನಮಗೆ ಒಂದು ಗೊತ್ತು. ಯಾವುದು ನಿರ್ದಿಷ್ಟವಲ್ಲವೋ ಅದನ್ನು ಆ ಪರಮಾತ್ಮನ ಇಚ್ಛೆ ಎಂದುಕೊಂಡು ಅವನಿಗೆ

ಶರಣಾಗಿ, ಇದೆಲ್ಲದರ ಬಗ್ಗೆ ಚಿಂತಿಸದೆ, ಬಂದ ಜೀವನವನ್ನು ಸಂತೋಷದಿಂದ ತೃಪ್ತಿಯಿಂದ ಕಳೆದರೆ ಆ ಸಂತೋಷ, ಪ್ರೀತಿ, ಪ್ರೇಮ, ನಿಸ್ವಾರ್ಥತೆ, ತೃಪ್ತಿ, ಶ್ರದ್ಧೆ, ಭಕ್ತಿಗಳೇ ನಮ್ಮ ಜೀವನಕ್ಕೆ ಒಂದು ದಿಕ್ಸೂಚಿಯಾಗಿ ನಮ್ಮನ್ನು ನೆಮ್ಮದಿಯ ದಡಕ್ಕೆ ಮುಟ್ಟಿಸಬಹುದು ಎಂದು ಆಶಿಸೋಣ.

**ಮುಕ್ತಕ-26**

**ಸೃಷ್ಟಿಯಾಶಯವದೇನಸ್ಪಷ್ಟ ಸಂಕ್ಲಿಷ್ಟ |**
**ಇಷ್ಟ ಮೋಹಕ ದಿವ್ಯ ಗುಣಗಳೊಂದು ಕಡೆ ||**
**ಕಷ್ಟ ಭೀಭತ್ಸ ಘೋರಗಳಿನ್ನೊಂದು ಕಡೆ |**
**ಕ್ಲಿಷ್ಟವೀ ಬ್ರಹ್ಮ ಕೃತಿ-ಮಂಕುತಿಮ್ಮ ||**

ಸೃಷ್ಟಿಯಾಶಯವದೇನಸ್ಪಷ್ಟ=ಸೃಷ್ಟಿಯ+ಆಶಯವು+ಅದು+ಏನು+ಅಸ್ಪಷ್ಟ.
ಆಶಯ=ಉದ್ದೇಶ, ಸಂಕ್ಲಿಷ್ಟ=ತೊಡಕಾದದ್ದು, ದಿವ್ಯ=ಸುಂದರ ಬೀಭತ್ಸ=ಭಯಂಕರ, ಘೋರ=ಕಷ್ಟಕರ, ಕ್ಲಿಷ್ಟ=ಬಿಡಿಸಲಾಗದ ಗಂಟು. ಬ್ರಹ್ಮ ಕೃತಿ=ಈ ಜಗತ್ತಿನ ಸೃಷ್ಟಿ

ಆಹಾ ಎಂತಹ ವಿಷಯ! ಜಗತ್ತಿನ ಸೃಷ್ಟಿಯನ್ನು ವಿಶ್ಲೇಷಣೆ ಮಾಡುವಂತಹ ವಿಚಾರ. ಈ ಸೃಷ್ಟಿಯಾಗುವುದಕ್ಕೆ ಉದ್ದೇಶವು ಏನಿತ್ತು ಎಂದು ಯೋಚಿಸುತ್ತಾರೆ ಮಾನ್ಯ ಗುಂಡಪ್ಪನವರು. ಅದೊಂದು ಬ್ರಹ್ಮಗಂಟು. ಬಿಡಿಸಲಾಗದ್ದು. ಏಕೆಂದರೆ ಎಂತೆಂತಾ ಮಹಾ ಮಹಿಮರು ಈ ವಿಷಯದಲ್ಲಿ ಯೋಚನೆ, ಜಿಜ್ಞಾಸೆ, ತಪಸ್ಸು, ಧ್ಯಾನ ಎಲ್ಲ ಮಾಡಿ ತಮಗೆ ತೋಚಿದ್ದನ್ನು ನಮಗೆ ಉಲ್ಲೇಖಿಸಿ ಕೊಟ್ಟಿದ್ದಾರೆ. ವೈಜ್ಞಾನಿಕ ಪರಿಭಾಷೆಗಳು ಬೇರೆ, ವೇದಾನ್ವಯ ಪರಿಭಾಷೆಗಳು ಬೇರೆ. ಸಿದ್ಧಾಂತಗಳು ಬೇರೆ, ನಂಬಿಕೆಗಳು ಬೇರೆ. ಆದರೆ ಎಲ್ಲೂ ಸಹಮತವಿಲ್ಲ. ನಾನು ಇಲ್ಲಿ ೯ನೆ ಮುಕ್ತಕಕ್ಕೆ ವಿವರಣೆ ನೀಡುವಾಗ ಸೃಷ್ಟಿಯ ವಿಷಯಕ್ಕೆ ಸಂಬಂಧಿಸಿದ ಕೆಲವು ವಿಚಾರಗಳನ್ನು ಮಂಡಿಸಿದ್ದೆ. ಅಂದು ಇಡೀ ವಿಶ್ವದ ಅಗಾಧತೆ, ನಮ್ಮ ಯೋಚನೆಗೆ ನಿಲುಕದಷ್ಟು ವಿಸ್ತಾರದ ಒಂದು ಸೂಕ್ಷ್ಮ ವಿಚಾರ ಮಾಡಿದ್ದೆ.

ಆದರೆ ಯಾವ ಶಕ್ತಿ ಈ ಪ್ರಪಂಚವನ್ನು ಆಗ ಮಾಡಿಸಿತೋ, ಅದಕ್ಕೆ ಹೀಗೆ ಮಾಡುವುದಕ್ಕೆ ಯಾವ ಉದ್ದೇಶವಿತ್ತು ಎಂಬುದು ಯಾರಿಗೂ ಗೊತ್ತಿಲ್ಲ. ಎಲ್ಲವೂ ಆ ಪರಮಾತ್ಮನ ಸಂಕಲ್ಪದಿಂದಲೇ ಆದದ್ದು ಎನ್ನುತ್ತಾರೆ. ಆ ಪರಮಾತ್ಮನ ಲೀಲಾ ವಿನೋದವೆನ್ನುತ್ತಾರೆ. ಆದರೆ ಹಾಗೆ ಸಂಕಲ್ಪ ಬರಲು ಕಾರಣವೇನು? ಈ ಲೀಲೆಗೆ ಕಾರಣವೇನು ಎಂದು ಗೊತ್ತಿಲ್ಲ!!!. ಇದು ಅರ್ಥವಾಗದ ವಿಷಯವೆನ್ನುತ್ತಾರೆ ಶ್ರೀ ಗುಂಡಪ್ಪನವರು. ಆದರೆ ಇಡೀ ಸೃಷ್ಟಿಯು ಬಹಳ ವೈವಿಧ್ಯಮಯ. ಒಂದು ಕಡೆ ಸುಂದರ ಮತ್ತೊಂದು ಕಡೆ ಭೀಭತ್ಸ , ನಮಗೆ ನಮ್ಮ ಭೂಮಿಯ ವಿಷಯ ಮತ್ತು ನಾವಿರುವ ಸೌರಮಂಡಲದ ಸ್ವಲ್ಪ ವಿಷಯ ಮಾತ್ರ ಗೊತ್ತು. ಅದರಾಚಿನ ವಿಷಯ ಕೆಲವು ವಿಜ್ಞಾನಿಗಳಿಗೆ ಅಲ್ಪ ಮಾತ್ರ ಗೊತ್ತಿರಬಹುದು. ಆದರೆ ಇಡೀ ಬ್ರಹ್ಮಾಂಡದ ವಿಚಾರ ನಮ್ಮ ಊಹೆಗೂ ನಿಲುಕದ್ದು, ಅದರ ವಿಚಾರ ಬಿಡಿ, ನಾವು ನಮ್ಮ ಭುವಿಯ ವಿಚಾರವನ್ನು ಮಾಡೋಣ.





ನಮ್ಮ ಈ ಭುವಿಯ ಸುಂದರತೆಯ ಭಾಗವನ್ನು ನೋಡಿದರೆ ಅಲ್ಲಿ ನಮಗೆ ಸಿಗುವುದು, ಅಪ್ರತಿಮ ಬುದ್ಧಿಶಕ್ತಿಯ ಮನುಷ್ಯ, ಎಷ್ಟೊಂದು ಆವಿಷ್ಕಾರಗಳು, ಸಂಗೀತ, ಭಾಷೆ, ಕಲೆ, ವಿಜ್ಞಾನ, ಸಂಸ್ಕೃತಿ ಸಾಹಿತ್ಯದಂತಹ ಎಲ್ಲ ರೀತಿಯ ವೈವಿಧ್ಯತೆಯಿಂದ ಕೂಡಿ, ಇಡೀ ಸೃಷ್ಟಿಯನ್ನು ತನ್ನ ಉಪಯೋಗಕ್ಕೆ ಸೂಕ್ತವಾಗಿಸಿಕೊಳ್ಳಲು ನಿರಂತರ ಪ್ರಯತ್ನ. ಆ ಪ್ರಯತ್ನದಲ್ಲಿ ಸಾಕಷ್ಟು ಯಶಸ್ವಿ ಸಹ ಸಿಕ್ಕಿದೆ, ಹಾಗೆ ಮಾಡುವ ಪ್ರಯತ್ನದಲ್ಲಿ ನಿಸರ್ಗದ ದುರುಪಯೋಗವಾಗಿರುವುದೊಂದನ್ನು ಬಿಟ್ಟರೆ. ಇನ್ನು ಅನ್ಯ ಪ್ರಾಣಿಗಳು, ಒಂದೊಂದೂ ಒಂದೊಂದು ರೀತಿ, ಹಲವಾರು ಬಣ್ಣಗಳು ಅದರೊಳಗೂ ಜಿರಾಫೆ, ಮೊಸಳೆ, ಹಾವು, ಹೇಸರಕತ್ತೆ, ಜಿಂಕೆ, ಹುಲಿ ಸಿಂಹ, ಚಿರತೆ ಮುಂತಾದ ಪ್ರಾಣಿಗಳನ್ನು ನೋಡಿದಾಗ, ಏನು ವಿನ್ಯಾಸ, ಏನು ರಂಗಿನಾಟ, ಆಹಾ, ಆ ಪರಮಾತ್ಮ ಎಷ್ಟು "ಒಳ್ಳೆಯ ಚಿತ್ರಕಾರ"ನೆನ್ನದ ಮನಸ್ಸಿರದು. ಇನ್ನು ಜಲಗರ್ಭದಲ್ಲಿರುವ ಆ ಚಿತ್ರ ವಿಚಿತ್ರ ಮೀನು ಮತ್ತು ಇತರ ಜಲಚರಗಳನ್ನು ಕಂಡಾಗ, ಅಬ್ಬಾ ಎಂತಹ ಸೃಷ್ಟಿ, ಎಂದು ಉದ್ಗಾರ ತೆಗೆಯದವನು ಅರಸಿಕನೆ ಸರಿ. ಮನುಷ್ಯನಿಗೆ ಮತ್ತು ಕೆಲವು ಪ್ರಾಣಿಗಳಿಗೆ ಒಂದೇ ಬಣ್ಣ. ಇನ್ನು ಪಕ್ಷಿ, ಕೀಟ, ಚಿಟ್ಟೆಗಳ ಪ್ರಪಂಚದಲ್ಲಿ ನುಸುಳಿದರೆ ಈ ಚಿಟ್ಟೆಗಳು ಮತ್ತು ಕೆಲವು ಚಿಟ್ಟೆಗಳನ್ನು ನೋಡಿದರೆ ಆ ಬಣ್ಣಗಳು ಆ ರಂಗೋಲೆಯಂತಹ ಚಿತ್ತಾರಗಳು ಆಹಾ! ಏನು ಸುಂದರ, ಆದರೆ ಅಯ್ಯೋ

ನಾವು ಎಲ್ಲ ನ್ಯೂನತೆಗಳನ್ನೂ ಹೊಂದಿರುವ ಮನುಷ್ಯರಾಗಿ ಹುಟ್ಟಿಬಿಟ್ಟೆವಲ್ಲ, ಎಂದು ಒಂದು ಕ್ಷಣ ಅನಿಸಿಯೇ ಅನಿಸುತ್ತದೆ. ಗಿಡಮರಗಳು, ಹೂ ಹಣ್ಣುಗಳ ಪ್ರಪಂಚವೇ ಬೇರೆ, ವರ್ಣಿಸಲು ಪದಗಳೇ ಸಾಲದು. ಇದು ಈ ಸೃಷ್ಟಿಯ ಸುಂದರತೆಯ ಒಂದು ಮುಖ.

ಇನ್ನು ಭೀಭತ್ಸದ, ಭೀಕರತೆಯ ಆಯಾಮವನ್ನು ನೋಡಿದರೆ, ರುದ್ರ ಭೀಕರತೆಯನ್ನು ಕಾಣಬಹುದು. ಸೃಷ್ಟಿಯ ಅಂದಗೆಡಿಸುವ ಮತ್ತು ಪ್ರಾಣ ಹಾನಿಮಾಡುವ ಧಾರಾಕಾರವಾಗಿ ಸುರಿದು ಪ್ರವಾಹವನ್ನು ಸೃಷ್ಟಿಸುವ ಮಳೆ, ಧೂಳಿನಿಂದ ಕೂಡಿದ ಬಿರುಗಾಳಿ, ಕಾಳಿಚ್ಚು, ಭೂಕಂಪಗಳು, ಸುನಾಮಿಗಳು, ಅಗ್ನಿ ಪರ್ವತಗಳು, ಅನ್ಯ ಪ್ರಾಣಿಗಳಿಗೆ ಪ್ರಾಣ ಭಯವನ್ನುಂಟುಮಾಡುವ ಭಯಂಕರ ಪ್ರಾಣಿಗಳು, ಹೀಗೆ ಹತ್ತು ಹಲವಾರು ಭೀಕರಗಳೂ ಈ ಜಗತ್ತಿನಲ್ಲಿ ಇವೆ. ಪ್ರೀತಿ ಪ್ರೇಮಗಳು, ಸ್ನೇಹ ಸೌಹಾರ್ದಗಳು, ಒಲುಮೆ ಔದಾರ್ಯಗಳು, ಧರ್ಮ, ದಯಾ-ದಾಕ್ಷಿಣ್ಯಗಳಂತಹ ಸುಂದರ ಭಾವಗಳು ಮನುಷ್ಯರಲ್ಲೇ ಅಲ್ಲ ಹಲವಾರು ಪ್ರಾಣಿ ಪಕ್ಷಿಗಳಲ್ಲೂ ನಮಗೆ ಕಾಣಸಿಗುವುದು. ಇದು ಭಾವನೆಗಳ ಸುಂದರತೆಯಾದರೆ, ಇನ್ನು ಕೋಪ, ದ್ವೇಷ, ರೋಷ, ಅಸೂಯೆ, ಅಹಂಕಾರ, ದುರಾಸೆ, ಮೋಹ, ಲಂಪಟತನ, ಅವ್ಯವಹಾರ, ವ್ಯಭಿಚಾರ ಇಂತಹ ದುರ್ಗುಣಗಳನ್ನು ಹೊಂದಿರುವ ಮನುಷ್ಯರೇ ಅಧಿಕ. ಪ್ರಾಣಿಗಳಲ್ಲೂ ಈ ರೀತಿಯ ಭಾವಗಳು ಇದ್ದರೂ ಅವು ಅಸ್ತಿತ್ವದ ಹೋರಾಟಕ್ಕೆ ಮಾತ್ರ ಸೀಮಿತ. ಆದರೆ ಮನುಷ್ಯ ಮಾತ್ರ ಅನಿಯಮಿತ ದುಷ್ಟ ಒಂದು ಕಾಡಿನಲ್ಲಿ ನೀವು ಒಬ್ಬರೇ ಹೋಗುವಾಗ, ಒಂದು ಹುಲಿಯೋ ಸಿಂಹವೋ ಎದುರು ಬಂದರೆ ಹೆದರಬೇಕಾಗಿಲ್ಲ. ಏಕೆಂದರೆ ಅದು ಹಸಿದಿದ್ದರೆ ಮಾತ್ರ ನಿಮ್ಮ ಮೇಲೆರಗುವುದು. ಆದರೆ ಒಬ್ಬ ಮನುಷ್ಯ ಎದುರಿಗೆ ಬಂದರೆ, ನೀವು ಖಂಡಿತ ಹೆದರಿ ನೀರಾಗತ್ತೀರಿ. ಏಕೆಂದರೆ, ಮಾನವನಿಗೆ ಅನ್ಯರ ಮೇಲೆರಗುವುದಕ್ಕೆ ಕಾರಣವೇ ಬೇಕಿಲ್ಲ.

ಇಂತಹ ವೈವಿಧ್ಯಮಯ ಜಗತ್ತನ್ನು ಸೃಜಿಸಲು ಆ ಪರಮಾತ್ಮನಿಗೆ ಏನು ಕಾರಣವಿತ್ತು. ಏನೋ ಇದ್ದಿರಬಹುದು ನಮಗೆ ಗೊತ್ತಿಲ್ಲ, ಆದರೆ ಮೇಲೆ ಹೇಳಿದ ಎಲ್ಲವನ್ನೂ ಒಳಗೊಂಡ ಸೃಷ್ಟಿಯನ್ನು ಏಕೆ ಸೃಷ್ಟಿಸಿದ ಎನ್ನುವುದು ಒಂದು ಚಿದಂಬರ ರಹಸ್ಯ, ಯಾರಿಗೂ ಅರ್ಥವಾಗದು ಎನ್ನುವ ಅರ್ಥದಲ್ಲಿ ಶ್ರೀ ಗುಂಡಪ್ಪನವರು ಈ

ಮುಕ್ತಕವನ್ನು ರಚಿಸಿದ್ದಾರೆ. ಅರ್ಥವಾಗುವುದಿಲ್ಲಪ್ಪ, ಹೌದು ಅದಕ್ಕೆ ನಾವು ಏನು ಮಾಡಬೇಕು? ಎಂದರೆ ಒಳ್ಳೆಯದನ್ನು ಆರಾಧಿಸೋಣ, ಅಭಿನಂದಿಸೋಣ, ಸೃಷ್ಟಿಕರ್ತನಿಗೆ ವಂದಿಸಿ ಕೃತಜ್ಞತೆ ಸಲ್ಲಿಸೋಣ, ಒಳ್ಳೆಯದನ್ನು ಮತ್ತು ಸುಂದರವಾದದ್ದನ್ನು ಕಾಪಾಡೋಣ, ಕೆಟ್ಟದ್ದು ಅನಿವಾರ್ಯವಾದರೆ, ವಿಧಿಯೆಂದು ಅನುಭವಿಸೋಣ, ಸಾಧ್ಯವಾದರೆ ನಿವಾರ್ಯವನ್ನು ನಿವಾರಿಸೋಣ, ಮನುಷ್ಯ ಪ್ರಯತ್ನವನ್ನು ಸುಮುಖವಾಗಿ ತೆಗೆದುಕೊಂಡು ಹೋಗೋಣ.

**ಮುಕ್ತಕ-27**

**ಧರೆಯ ಬದುಕೇನದರ ಗುರಿಯೇನು ಫಲವೇನು? |**
**ಬರಿ ಬಳಸು ಬಡಿದಾಟ ಬರಿ ಪರಿಭ್ರಮಣೆ ||**
**ತಿರುತಿರುಗಿ ಹೊಟ್ಟೆ ಹೊರಕೊಳುವ ಮೃಗಖಗಕಿಂತ |**
**ನರನು ಸಾದಿಪುದೇನು?-ಮಂಕುತಿಮ್ಮ ||**

ಧರೆ=ಭೂಮಿ, ಬಳಸು=ಸುತ್ತು, ಪರಿಭ್ರಮಣೆ=ಸುತ್ತಾಟ, ಮೃಗ=ಪ್ರಾಣಿ, ಖಗ=ಪಕ್ಷಿ

ಈ ಭೂಮಿಯಲ್ಲಿ ಜನಿಸಿದ ನಾವು ಮತ್ತು ನಮ್ಮ ಬದುಕು, ಇದರ ಗುರಿಯೇನು? ಇದಕ್ಕಿರುವ ಪ್ರಯೋಜನವೇನು? ಸುಮ್ಮನೆ ಸುತ್ತಾಟ. ಕೇವಲ ಪ್ರದಕ್ಷಿಣೆ ಬಂದ ಹಾಗೆ. ಕೇವಲ ಹೊಟ್ಟೆ ಪಾಡಿನ ಜೀವನ, ಪ್ರಾಣಿ ಪಕ್ಷಿಗಳೂ ಸಹ ಈ ರೀತಿಯ ಹೊಟ್ಟೆ ಪಾಡಿನ ಜೀವನ ಮಾಡುತ್ತವೆ. ನಾವು ಅದಕ್ಕಿಂತ ಉತ್ತಮರೇನು ಅಲ್ಲ. ಇದೆಲ್ಲದರಿಂದ ಮನುಷ್ಯರು ಸಾಧಿಸುವುದೇನು? ಎಂದು ಈ ಮುಕ್ತಕದಲ್ಲಿ ಕೆಲವು ಪ್ರಶ್ನೆಗಳನ್ನು ನಮ್ಮ ಮುಂದಿಡುತ್ತಾರೆ.

ಇದೊಂದು ಸುಂದರವಾದ ಮುಕ್ತಕ. ಆಂತರ್ಯದಲ್ಲಿ ಅಡಗಿರುವ ಭಾವ ಬೇಸರದ, ನಿರಾಸೆಯ ಭಾವ. "ಮಾನವ ಜನ್ಮ ದೊಡ್ಡದು" ಎಂದು ದಾಸರೂ ಸಹ ಹೇಳಿದರು. ಬೇರೆ ಎಲ್ಲ ಪ್ರಾಣಿಗಳಿಗಿಂತಲೂ ನಾವೇನು ಭಿನ್ನ? ಆ ಪ್ರಾಣಿಗಳೂ ಹೊಟ್ಟೆ ಹೊರೆಯುತ್ತವೆ, ತಮ್ಮ ಸಂತತಿಯನ್ನು ಬೆಳೆಸುತ್ತವೆ. ತಮ್ಮ ಇರುವಿಕೆಗೆ ಹೋರಾಡುತ್ತವೆ ಮತ್ತೆ ಸಾಯುತ್ತವೆ. ನಾವು ಅಂದರೆ ಮನುಷ್ಯರೂ ಸಹ, ಇವುಗಳನ್ನು ಮಾಡುತ್ತೇವೆ. ಆದರೆ ಮಾನವರಾದ, ನಾವು ಉತ್ತಮ ಜೀವಿಗಳು ಎಂದು ಕರೆದುಕೊಳ್ಳಲು ನಮ್ಮ ಸಾಧನೆಯೇನು? ಎಂದು ಪ್ರಶ್ನಿಸುತ್ತಾ, ಒಂದು ಅವಲೋಕನಕ್ಕೆ ಆಸ್ಪದ ಈ ಮುಕ್ತಕದಲ್ಲಿ ಮಾಡಿಕೊಡುತ್ತಾರೆ, ಮಾನ್ಯ ಗುಂಡಪ್ಪನವರು. ಅನಾದಿ ಕಾಲದ ಮಾನವನ ಮತ್ತು ಪ್ರಾಣಿಗಳ ಬದುಕುವ ಶೈಲಿಯನ್ನು ಅವಲೋಕಿಸಿದರೆ ನಮಗೆ ವೇದ್ಯವಾಗುವುದು ಒಂದು ವಿಷಯ. ಪ್ರಾಣಿಗಳ ಜೀವನದಲ್ಲಿ ಏರು ಪೇರು ಇಲ್ಲ. ಮನುಷ್ಯನ ದುರಾಸೆಯಿಂದ ಉಂಟಾದ ಅಭಾವ ಅನಾನುಕೂಲಗಳನ್ನು ಬಿಟ್ಟರೆ ಬೇರೆ ಯಾವ ಬದಲಾವಣೆಯೂ ಇಲ್ಲ. ಆದರೆ ಮನುಷ್ಯನೋ ಬಹಳ ಬದಲಾಗಿದ್ದಾನೆ. ಪ್ರಗತಿಯ ಪಥದಲ್ಲಿರುವವನು, ಪುರೋಗಾಮಿ, ಎಂದೆಲ್ಲ ಹೊಗಳಿಕೆಗೆ

ಪಾತ್ರನಾದ ಈ ಮನುಷ್ಯನ ಬದಲಾದ ಸ್ಥಿತಿಯನ್ನು ಗಮನಿಸಿದರೆ ನಮಗೆ ಕಾಣುವುದು ಒಂದು ಬೇರೆಯೇ ಚಿತ್ರ, ಬಹಳ ವಿಚಿತ್ರ





ಉತ್ತರೋತ್ತರ ಬದಲಾವಣೆಗೆ ಪ್ರಗತಿ ಎಂದು ಹೆಸರು. "ತಮಸೋಮಾ ಜ್ಯೋತಿರ್ಗಮಯ" ಕತ್ತಲೆಯಿಂದ ಬೆಳಕಿಗೆ. "ಅಸತೋಮಾ ಸದ್ಗಮಯ" ಅಸತ್ಯದಿಂದ ಸತ್ಯದೆಡೆಗೆ, ನಮ್ಮ ನಡಿಗೆಯಾದರೆ ಅಂದು ಸಕಾರಾತ್ಮಕವಾದ ಬೆಳವಣಿಗೆ ಮತ್ತು ಪ್ರಗತಿಪರ ಬದಲಾವಣೆ, ಆದರೆ ಅಂತಹ ಬದಲಾವಣೆಯಾಗಿದೆಯೇ? ಖಂಡಿತ ಇಲ್ಲ.

ವಿಜ್ಞಾನದಲ್ಲಿ ಪ್ರಗತಿ? ಅಣು ಬಾಂಬು, ಮುಂತಾದ ಮಾರಕಾಸ್ತ್ರಗಳ ತಯಾರಿಕೆ, ನಾಶಕ್ಕೆ ನಾಂದಿ. ವೇಷ ಭೂಷಣದಲ್ಲಿ ಪ್ರಗತಿ? ಮೈ ಮುಚ್ಚುವುದಕ್ಕಿಂತ ತೋರುವುದೇ ಅಧಿಕ. ಭಾಷೆಯಲ್ಲಿ ಪ್ರಗತಿ? ನಮಗೆ ಯಾವುದೇ ಭಾಷೆಯೂ ಸರಿಯಾಗಿ ಮಾತನಾಡಲು, ಓದಲು ಬರೆಯಲು ಬರುವುದಿಲ್ಲ. ಸಮಾಜದಲ್ಲಿ ಪ್ರಗತಿ? ಸೌಹಾರ್ದ ಭಾವ, ಸ್ನೇಹ, ಪ್ರೀತಿ-ಪ್ರೇಮ, ಅನ್ಯೋನ್ಯ ಜೀವನ, ಒಟ್ಟು ಕುಟುಂಬಗಳ ಸಹಜೀವನ ಶೈಲಿ, ಹಿರಿಯರಲ್ಲಿ ಗೌರವ, ಮಕ್ಕಳಲ್ಲಿ ಮಮತೆ, ಕೆಲಸದಲ್ಲಿ ಶ್ರದ್ಧೆ, ದೈವದಲ್ಲಿ ಭಕ್ತಿ, ಮುಂತಾದ್ಯಾವುದಕ್ಕೂ ಮೂರು ಕಾಸಿನ ಬೆಲೆ ಇಲ್ಲದೆ, ಕೇವಲ ಸ್ವಾರ್ಥ, ದ್ವೇಷ, ಲಾಲಸೆ, ಲಂಪಟತನ, ಮೋಸ, ದಾರಿದ್ರ, ಭೌದ್ಧಿಕ ದಿವಾಳಿತನ, ಮೌಲ್ಯಗಳ ದಿವಾಳಿತನ, ತುಂಬಿದೆ. ಇದು ಪ್ರಗತಿಯೇ? ಇನ್ನು ವಿದ್ಯಾಭ್ಯಾಸದಲ್ಲಿ ಪ್ರಗತಿ? ಸತ್ವ ಹೀನ, ಸತ್ಯ ರಹಿತ, ಆಳವಾದ ಅಭ್ಯಾಸವಿಲ್ಲದ, ವ್ಯಕ್ತಿತ್ವವನ್ನು ರೂಪಿಸುವಂತಹ ಅಭ್ಯಾಸಕ್ರಮವಿಲ್ಲದ, ಕೇವಲ ಹೊಟ್ಟೆಪಾಡಿಗಾಗಿ, ವಿದ್ಯೆ ಇಲ್ಲದಿದ್ದರೂ ವಿದ್ಯಾವಂತರೆನ್ನಿಸಿಕೊಳ್ಳುವ, ವ್ಯಕ್ತಿತ್ವವಿಲ್ಲದಿದ್ದರೂ ವ್ಯಕ್ತಿಗಳೆನಿಸಿಕೊಳ್ಳುವವರನ್ನು ತಯಾರು ಮಾಡುವುದಕ್ಕೆ, ಪ್ರಗತಿ ಎಂದು ಹೆಸರೇ?

ಇನ್ನು ಆರ್ಥಿಕವಾಗಿ ನಾವು ಬಹಳಷ್ಟು ಪ್ರಗತಿಯನ್ನು ಸಾಧಿಸಿದ್ದೇವೆಂದು ಕೊಚ್ಚಿಕೊಳ್ಳುವ ನಮ್ಮ ಆರ್ಥಿಕ ತಜ್ಞರ ಅವಿವೇಕಕ್ಕೆ ಏನು ಹೇಳುವ? ಸಸ್ಯಶ್ಯಾಮಲವಾಗಿರುತ್ತಿದ್ದ ನಮ್ಮ ಹಳ್ಳಿಗಳೆಲ್ಲವೂ ಇಂದು ಬರಡು ಬೆಂಗಾಡಾಗಿದೆ. ಹಳ್ಳಿಯ ಜನರೆಲ್ಲರೂ ಪಟ್ಟಣಕ್ಕೆ ವಲಸೆ. ಬಡವ ಬಲ್ಲಿದರ ನಡುವಿನ ಅಂತರ ಇನ್ನಷ್ಟು ವಿಸ್ತಾರ. ಇಡೀ ಸಮುದಾಯದ ಸಂಪತ್ತನ್ನು ಅಧಿಕಾರ ಬಲದಿಂದ, ವಶೀಲಿಯ ಬಲದಿಂದ ಕೇವಲ ಕೆಲವೇ ವ್ಯಕ್ತಿಗಳು ತಮ್ಮದಾಗಿಸಿಕೊಳ್ಳುವ ಹುನ್ನಾರ.

ಯಾರಿಗೂ ಒಟ್ಟು ಸಮಾಜದ ಆರ್ಥಿಕ ಪ್ರಗತಿಯ ಬಗ್ಗೆ ಕಿಂಚಿತ್ತೂ ಕಾಳಜಿ ಇಲ್ಲ. ಪ್ರಜೆಗಳಿಂದ ಆಯ್ಕೆಯಾಗಿ, ಪ್ರಜಾಪಾಲನೆ ಮಾಡಲು ಅಧಿಕಾರವನ್ನು ಸ್ವೀಕರಿಸಿದ ದಿನದಿಂದಲೇ ಪ್ರಜೆಗಳ ಪೀಡನೆ ಶುರುವಾಗುವುದು ಪ್ರಗತಿಯೇ?

ಭಾಷೆ, ಜಾತಿ, ಭೂಮಿ, ನೀರು, ದೇವರು, ಪಂಗಡ, ಮುಂತಾದವುಗಳಿಗಾಗಿ ನಿರಂತರ ಹೊಡೆದಾಟ, ಯುದ್ಧ. ಇದು ಪ್ರಗತಿಯೇ? ಯಾವುದೇ ವಿಷಯವನ್ನು ನೋಡಿದರೂ ಸತ್ವಹೀನತೆ ಮತ್ತು ಸತ್ಯಹೀನತೆ ಇದು ಪ್ರಗತಿಯೇ? ಹಾಗಾಗಿ ನರರ ಅಂದರೆ ನಾವು ಮನುಷ್ಯರ ಸಾಧನೆ ಏನೂ ಇಲ್ಲ. ನಾವು ಯಾವುದನ್ನು ಇಂದು ಸಾಧನೆ ಎಂದು ಕರೆಯುತ್ತಿದ್ದೇವೋ ಅದು ಸಾಧನೆಯಲ್ಲ. ಅಧೋಗತಿ, ಹೆತ್ತ ತಂದೆ ತಾಯಿಯರನ್ನು ವೃದ್ಧಾಶ್ರಮಕ್ಕೊ, ಅನಾಥಾಶ್ರಮಕ್ಕೊ, ಇಲ್ಲ ಬೀದಿಯಲ್ಲಿ ಭಿಕ್ಷೆ ಬೇಡಲು ಅಟ್ಟುವ ಸಮಾಜ ನಮ್ಮದಾಗಿರಲಿಲ್ಲ. ಇಂದು ಹಾಗಾಗಿದೆ ಎಂದರೆ, ಇದು ಪ್ರಗತಿಯೇ ವಾಚಕರೆ?

ಇದನ್ನೆಲ್ಲ ಕಂಡು ಹೊಟ್ಟೆಯುರಿಯಬೇಕು, ಕೋಪಬರಬೇಕು, ಇದು ಸರಿಯಿಲ್ಲ, ಇದು ಬದಲಾಗಬೇಕು, ಸತ್ಯದ, ಸತ್ವದ, ತತ್ವದ, ಶ್ರದ್ಧೆಯ, ಪ್ರೀತಿ ಪ್ರೇಮಗಳ, ಸ್ನೇಹ ಸೌಹಾರ್ದತೆಗಳ ಪುನರುತ್ಥಾನವಾಗಬೇಕು.





ಮುಂದಿನ ಪೀಳಿಗೆಗೆ ಒಂದು ಸುಂದರವಾದ ಸಮಾಜದ ನಿರ್ಮಾಣವಾಗಬೇಕು. ಹಾಗಾಗದಿದ್ದಲ್ಲಿ ನಮ್ಮೆಲ್ಲರ ಸರ್ವಾಂಗೀಣ ಅಂದರೆ ಸಮಗ್ರ ನಾಶ ಖಂಡಿತ. ನಮ್ಮೆಲ್ಲರ ಪತನ ಖಂಡಿತ. ಸರಿಪಡಿಸುವ ಕೆಲಸ ತ್ವರಿತವಾಗಿ ಶುರುವಾಗಬೇಕು.

ವಾಚಕರೆ, ನಮ್ಮ ನಮ್ಮ ವೃತ್ತಗಳನ್ನು ಬದಲಾಯಿಸಲು ನಾವು ಪ್ರಯತ್ನಿಸಿ ಆ ವೃತ್ತವನ್ನು ದೊಡ್ಡದಾಗಿಸಿ, ನಮ್ಮ ಕಾರ್ಯಕ್ಷೇತ್ರವನ್ನು ಇಡೀ ಸಮಾಜಕ್ಕೆ ವಿಸ್ತರಿಸಿ, ಈ ರೋಗಿಷ್ಟ ಸಮಾಜವನ್ನು ಬದಲಾಯಿಸಲು ಪ್ರಯತ್ನಿಸುವ.

**ಮುಕ್ತಕ-28** **ಕಾರುಣ್ಯ ಸರಸ ಸೌಂದರ್ಯ ರುಚಿಗಳೇ ಸೃಷ್ಟಿ |**
**ಕಾರಣಮೆನಿಪ್ಪವೊಲು ತೋರ್ಪುದೊಂದು ಚಣ ||**
**ಕಾರ್ಪಣ್ಯ ಕಟುಕತೆಗಳೆನಿಪುದಿನ್ನೊಂದು ಚಣ |**
**ತೋರುವುದಾವುದು ದಿಟವೋ?-ಮಂಕುತಿಮ್ಮ |**

ಕಾರಣಮೆನಿಪ್ಪವೊಲು=ಕಾರಣ+ವೆನಿಪ್ಪ+ವೊಲು, ತೋರ್ಪುದೊಂದು=ತೋರ್ಪುದು+ಒಂದು,
ಕಟುಕತೆಗಳೆನಿಪುದಿನ್ನೊಂದು=ಕಟುಕತೆಗಳೇ+ಎನಿಪುದು+ಇನ್ನೊಂದು,
ತೋರುವುದಾವುದೋ=ತೋರುವುದು+ಅದು+ಆವುದೋ.

ಕಾರುಣ್ಯ-ಅನುಕಂಪ, ಸರಸ=ವಿನೋದ, ವೆನಿಪ್ಪ=ಎನ್ನಿಸುವ, ವೊಲು=ತರಹೆ / ರೀತಿ,
ಕಾರ್ಪಣ್ಯ=ಬಡತನ, ಕಟುಕತೆಗಳು=ಕಷ್ಟ ಮತ್ತು ಕ್ಲಿಷ್ಟತೆಗಳು, ಎನಿಪುದು=ತೋರುವುದು. ದಿಟ=ಸತ್ಯ,
ಚಣ=ಕ್ಷಣ.

ಸಮಗ್ರ ಜೀವನದ ಚಿತ್ರದಲ್ಲಿ, ಈ ಜಗದ್ವ್ಯಾಪಾರಕ್ಕೆ, ಒಂದು ಬಾರಿ ಎನಗೆ, ಮಾನವರ ನಡುವಿನ ಕರುಣೆ, ವಿನೋದ ಸೌಂದರ್ಯ ಮುಂತಾದ ಸುಭಾವಗಳೇ ಕಾರಣವೆನಿಸುತ್ತದೆ. ಮತ್ತೆ ಕೆಲವು ಬಾರಿ ಜೀವನದ ಕಷ್ಟ ದುಃಖಗಳು, ಬಡತನ ಮತ್ತು ಬಡತನದಿಂದ ಕೂಡಿದ ಬದುಕಿನ ಕ್ಲಿಷ್ಟತೆಯಿಂದ ಕೂಡಿದ ಕಷ್ಟಗಳೇ ಕಾರಣವೆಂದು ಅನಿಸುತ್ತದೆ, ಇದು ಸತ್ಯವೋ ಅಥವಾ ಅದು ಸತ್ಯವೋ ಎಂದು ಅರಿಯದಾಗಿದೆ ಎಂದು ಒಂದು ಡೋಲಾಯಮಾನವಾದ ಭಾವನೆ ವ್ಯಕ್ತಪಡಿಸುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಆದರೆ, ಅವರು ಅಂದು ಕಂಡಂತೆ ಮತ್ತು ಮಾನವನ ಅಸ್ತಿತ್ವದ ಇತಿಹಾಸದ ಎಲ್ಲ ಪುಟಗಳಲ್ಲೂ ನಮಗೆ ಈ ಎರಡೂ ಮುಖಗಳು ಕಾಣುತ್ತವೆ. ಪುರಾಣಗಳಲ್ಲಿಯೂ ಅಂದಿನ ಕೆಲವು ಪಾತ್ರಗಳು ಆನಂದವನ್ನು ಅನುಭವಿಸುವುದೂ ಮತ್ತೆ ಕೆಲವು ಪಾತ್ರಗಳು ಅತೀವ ಸಂಕಷ್ಟಗಳಿಗೆ ಸಿಕ್ಕು ತೊಳಲಾಡುವುದನ್ನು ನಾವು ಕಾಣಬಹುದು. ಇಂದಿಗೂ ಅದೇ ಪರಿಸ್ಥಿತಿ. ಒಂದಿಷ್ಟೂ ಬದಲಾವಣೆಯೇ ಇಲ್ಲ. ಏಕೆ ಹೀಗೆ? ಎಂದು ಆಲೋಚಿಸಿದರೆ, ನಮಗೆ ಸೂಕ್ತ ಮತ್ತು ಸಮರ್ಪಕ ಉತ್ತರ ಸಿಗುವುದಿಲ್ಲ. ಹಾಗಾಗಿ ಸತ್ಯ "ಇದೋ ಅದೋ" ಎನ್ನುವ ದ್ವಂದ್ವದ ಭಾವ ನಮ್ಮಲ್ಲೂ ಬರಬಹುದು. ಅದೇ ಭಾವ ಮಾನ್ಯ ಡಿ.ವಿ.ಜಿ.ಯವರಿಗೂ ಬಂದಿತ್ತು.

ಕಷ್ಟ ಸುಖಗಳು ಮನುಷ್ಯರಿಗಷ್ಟೇ ಅಲ್ಲ, ಸೃಷ್ಟಿಯ ಸಕಲ ಚರಾಚರಗಳಿಗೂ, ಪ್ರಮಾಣ ಭೇದವಿದ್ದರೂ ಇದ್ದೇ ಇರುವಂಥಹದು ಸರ್ವವೇದ್ಯ ಮತ್ತು ಅನಿವಾರ್ಯ. ಆದರೆ ಇಲ್ಲಿ ನೋಡಬೇಕಾದ ವಿಷಯವೇನೆಂದರೆ, ನಮ್ಮ ನಮ್ಮ ಜೀವನಗಳಲ್ಲಿ ಕಷ್ಟ ಸುಖಗಳು ಏಕೆ ಮತ್ತು ಹೇಗೆ ಬರುತ್ತವೆ? ಎಂದು. ಅದಕ್ಕೂ ಮೊದಲು ಕಷ್ಟವೆಂದರೇನು? ಸುಖವೆಂದರೇನು? ಎಂದು ವಿಶ್ಲೇಷಿಸಿದರೆ ನಮ್ಮ ಅರಿವಿಗೆ ಬರುವುದು ಹೀಗೆ, ನಮಗೆ "ಮಮ"ಕಾರವಿದೆ. ಈ "ಮಮ"ಕಾರಕ್ಕೆ ಹಿತವಾದದ್ದು ಸುಖ ಮತ್ತು ಅಹಿತವಾದದ್ದು ದುಃಖ. ಅಂದರೆ ಕಷ್ಟ ಸುಖ ಎನ್ನುವುದು ಬಹಳಷ್ಟು ಬಾರಿ ಕೇವಲ ಒಂದು ಭಾವನೆ ಮಾತ್ರ ಹಾಗಾಗಿ "ಮಮಕಾರವನ್ನು ತೊರೆದರೆ, ಜೀವಿ ಮಾನಸಿಕವಾಗಿ ತಟಸ್ಥನಾಗಿ ಸುಖದುಃಖಗಳನ್ನು ಸಮಭಾವದಿಂದ ತೆಗೆದುಕೊಳ್ಳಬಹುದು" ಎನ್ನುವ ಒಂದು ಸಿದ್ಧಾಂತವಿದೆ. ಭಗವದ್ಗೀತೆಯಲ್ಲಿ "ಸ್ಥಿತಪ್ರಜ್ಞನೆಂದರೆ ಯಾರು" ಎಂದು ಅರ್ಜುನ ಕೇಳುವ ಪ್ರಶ್ನೆಗೆ ಶ್ರೀ ಕೃಷ್ಣ ಉತ್ತರಿಸಿದ್ದೂ ಇದನ್ನೇ. ಇದು ತತ್ವ ಶಾಸ್ತ್ರ(ಫಿಲಾಸಫಿ), ಪರರಿಗೆ ಹೇಳುವುದು ಸುಲಭ, ಆದರೆ ಪಾಲಿಸುವುದು ಸುಲಭವಲ್ಲ.

ಈ ಪ್ರಪಂಚದಲ್ಲಿ ನಮ್ಮ ಅಸ್ತಿತ್ವಕ್ಕೆ ಅವಶ್ಯವಾದ ಕೆಲವು ಮೂಲಭೂತ ಅವಶ್ಯಕತೆಗಳಿವೆ. ಅವುಗಳ ಅಭಾವವೇ ನಮ್ಮ ಅನಿವಾರ್ಯ ಕಷ್ಟಕ್ಕೆ ಕಾರಣ. ಅದರ ಪೂರೈಕೆ ಸಮರ್ಪಕವಾಗಿ ಆದಾಗ, ನೆಮ್ಮದಿ ಎಂದು ಅಂದುಕೊಳ್ಳುತ್ತೇವೆ ಮತ್ತು ಅವುಗಳನ್ನು ಪೂರೈಸಿಕೊಳ್ಳಲು ಹೋರಾಡುತ್ತೇವೆ. ಆದರೆ ಅಷ್ಟಕ್ಕೇ ನಮಗೆ ನೆಮ್ಮದಿ ಸಿಗುತ್ತದೆಯೇ? ಖಂಡಿತ ಇಲ್ಲ. ಏಕೆಂದರೆ "ಬಡತನಕೆ ಉಂಬುವ ಚಿಂತೆ, ಉಂಬುವುದಾದರೆ ಉಡುವ ಚಿಂತೆ, ಉಡುವುದಾದರೆ, ಮನೆಯ ಚಿಂತೆ, ಮನೆಯದಾದರೆ ಮಡದಿಯ ಚಿಂತೆ" ಎನ್ನುವುದು ಶಿವ ಶರಣರ ಉಕ್ತಿ ಎಷ್ಟು ಸತ್ಯ. ನಮ್ಮ ಆಸೆಗಳಿಗೆ ಮಿತಿಯೇ ಇಲ್ಲ.

ನಮ್ಮ ಪರಿಮಿತ ಸಾಮರ್ಥ್ಯದಲ್ಲಿ ಮತ್ತು ಯೋಗ್ಯತೆಯಲ್ಲಿ ನಾವು ಏನನ್ನು ಪಡೆಯಬಹುದೋ ಅದನ್ನು ಪಡೆದು ಸಂತುಷ್ಟರಾದರೆ ಸುಖ ಮತ್ತು ನೆಮ್ಮದಿ. ಆದರೆ ನಮಗೆ ನಮ್ಮ "ಯೋಗ್ಯತೆಯ ಮತ್ತು ಸಾಮರ್ಥ್ಯದ" ಮಿತಿಯ ಅರಿವೇ ಇಲ್ಲ. ಹಾಗಾಗಿ ನಮ್ಮ ಆಸೆಗಳಿಗೂ ಕೊನೆಯಿಲ್ಲ. ನಮಗೆ ನಮ್ಮ "ಯೋಗ್ಯತೆಯ ಮತ್ತು ಸಾಮರ್ಥ್ಯದ" ಮಿತಿಯ ಅರಿವು ಏಕಿರುವುದಿಲ್ಲವೆಂದರೆ, "ಅಹಂಕಾರ" , ನಾನು, ನನಗೆ, ನನ್ನ, ಎನ್ನುವ ಭಾವ ನಮ್ಮಲ್ಲಿ ತುಂಬಿ

ತುಳುಕುತ್ತಿದೆ. ಇನ್ನು ಮಿತಿಯನ್ನು ಅರಿಯುವ ಪ್ರಯತ್ನವೂ ಇಲ್ಲ. ಹಾಗಿದ್ದ ಮೇಲೆ ಇನ್ನೇನು? ಈ ಜೀವನದ ಜಂಜಾಟದಲ್ಲಿ ತೊಳಲಾಡದೆ ಬೇರೆ ದಾರಿಯೇ ಇಲ್ಲ. ಈ "ಅಹಂಕಾರ" ದಿಂದ ಮತ್ತೆಲ್ಲ ದುರ್ಭಾವಗಳೂ ನಮ್ಮೊಳಗೆ ನುಗ್ಗಿ ನಮ್ಮನ್ನು ಈ ಜೀವನದ "ಆಸೆ-ಅಭಾವಗಳ" ವಿಷ ವೃತ್ತದಲ್ಲಿ ನೂಕಿ ಅದರಿಂದ ಹೊರಗೆ ಬರುವ ಮಾರ್ಗವನ್ನು ಕಾಣದೆ ತೊಳಲಾಡುವ ಪರಿಸ್ಥಿತಿ ಸೃಷ್ಟಿಯಾಗುತ್ತದೆ. "ಅಯ್ಯೋ ಎಂತಹ ದೌರ್ಭಾಗ್ಯ" ವೆಂದು ನಮ್ಮ ಸ್ಥಿತಿಗೆ ನಾವೇ ಕೊರಗುವಂತೆ ಮರುಗುವಂತೆ ಮಾಡುತ್ತದೆ.

ಹಾಗಾದರೆ ಸುಖ-ದುಃಖಗಳೆಂಬುದು ಕೇವಲ ಭ್ರಮೆಯೆಂದಾದರೆ, ಅದರ ಹಿಂದೆ ಮನುಷ್ಯ ಏಕೆ ಇಷ್ಟೊಂದು ಪರದಾಡುತ್ತಾನೆ? ಎಂದರೆ, ಕೇವಲ ಅಜ್ಞಾನದಿಂದ, ವಸ್ತು, ವಿಷಯಗಳ ಪರಿಚಯ, ಪೂರ್ವಾಪರಗಳ





ವಿವೇಚನೆ ಸರಿಯಾಗಿ ಆದಲ್ಲಿ, ತೃಪ್ತಿಯ ಒಂದು ಭಾವ ಬಂದಾಗ, ಸುಖ ದುಃಖಗಳನ್ನು ಸಮವಾಗಿ ತೆಗೆದುಕೊಳ್ಳಲು ಮನಸ್ಸಿಗೆ ಸಾಮರ್ಥ್ಯ ಮತ್ತು ಶಕ್ತಿ ಎರಡೂ ಬಂದು ನೆಮ್ಮದಿ ಸಿಗುತ್ತದೆ.

ವಾಚಕರೆ, ಎಲ್ಲಿಯವರೆಗೆ, ನಮಗೆ ಈ ಪ್ರಪಂಚದ ಅಂಟು ಇದೆಯೋ ಅಲ್ಲಿಯ ತನಕ ಈ ಸುಖ ದುಃಖದ ಸಂಕೋಲೆಯಿಂದ ಮುಕ್ತಿ ಇಲ್ಲ. ಆದರೆ ಸಹನೆ, ಸಹಿಷ್ಣುತೆ, ತೃಪ್ತಿಯಂತಹ ಭಾವಗಳನ್ನು ನಮ್ಮ ಸ್ವಭಾವವಾಗಿಸಿಕೊಂಡರೆ, ಸುಖ ದುಃಖಗಳನ್ನು ಸಮನಾಗಿ, ಅಂದರೆ ಸುಖದಲ್ಲಿ ಉಬ್ಬದೆ ಮತ್ತು ದುಃಖದಲ್ಲಿ ಕುಗ್ಗದೆ, ತೆಗೆದುಕೊಳ್ಳುವ ಶಕ್ತಿ ನಮಗೆ ಬಂದು ನಾವು ನೆಮ್ಮದಿಯಾಗಿರಬಹುದು.

# ಸಮಸ್ಯೆಗೆಲ್ಲಿ ಪುರಾಣ 29-33

**ಮುಕ್ತಕ-29**

**ಎರಡುಮಿರಬಹುದು ದಿಟ, ಶಿವರುದ್ರನೆಲೆ ಬೊಮ್ಮ |**
**ಕರವೊಂದರಲಿ ವೇಣು, ಶಂಖವೊಂದರಲಿ ||**
**ಬೆರಳ್ಗೆಳೆರಡಾನುಮಿರೆ ಕೈ ಚಿಟಿಕೆಯಾಡುವುದು |**
**ಒರುವನಾಡುವುದೆಂತು? ಮಂಕುತಿಮ್ಮ ||**

ಎರಡುಮಿರಬಹುದು=ಎರಡುಂ+ಇರಬಹುದು, ಬೆರಳ್ಗೆಳೆರಡಾನುಮಿರೆ=ಬೆರಳಳು+ಎರಡು+ಆನುಂ+ಇರೆ, ಒರುವನಾಡುವುದೆಂತು=ಒರುವನು+ಆಡುವುದು+ಎಂತು

ದಿಟ=ಸತ್ಯ. ಬೊಮ್ಮ=ಪರಬ್ರಹ್ಮ, ಪರಮಾತ್ಮ, ಕರ=ಕೈ, ವೇಣು=ಕೊಳಲು, ಆನುಮಿರೆ=ಒಂದಕ್ಕೊಂದು ಸೇರಿದರೆ. ಒರುವ=ಒಬ್ಬ ಅಥವಾ ಒಂದು.

ಪರಮಾತ್ಮನಿಗೆ, ಶಿವನೆಂಬ ಶಾಂತ ಸುಂದರ ಮತ್ತು ಶುಭಕರವಾದ ರೂಪವೂ ಇರಬಹುದು ಅಥವಾ ರುದ್ರನೆಂದು ಕರೆಯಲ್ಪಡುವ ಭಯಂಕರ ರೂಪವೂ ಇರಬಹುದು ಅಥವಾ ಸರ್ವರನೂ ತನ್ನೆಡೆಗೆ ಆಕರ್ಷಿಸುವ, ನಯನ ಮನೋಹರ, ವೇಣುಗಾನಲೋಲನ ರೂಪವೂ ಇರಬಹುದು ಅಥವಾ ರಣ ಕಹಳೆಗೆ ದನಿಗೂಡಿಸಿ ಯುದ್ಧಕ್ಕೆ ಆಹ್ವಾನವೀಯುವ ಪಾಂಚಜನ್ಯವನ್ನೂದುವ ಕ್ಷಾತ್ರ ರೂಪವೂ ಇರಬಹುದು. ಎರಡು ರೂಪಗಳೂ ಸತ್ಯವಿರಬಹುದು. ಏಕೆಂದರೆ ಕೈ ಚಿಟಿಕೆಯಾಡಿಸಲು, ಎರಡು ಬೆರಳುಗಳೂ ಬೇಕು. ಒಂದೇ ಬೆರಳಲ್ಲಿ ಚಿಟಿಕೆಯಾಗುವುದೇ ಎನ್ನುತ್ತಾರೆ ಶ್ರೀ ಡಿ.ವಿ.ಜಿ.ಯವರು ಈ ಮುಕ್ತಕದಲ್ಲಿ.

ಇಡೀ ಸೃಷ್ಟಿಯೇ ಪರಮಾತ್ಮನ ಹಲವು ರೂಪಗಳ ಬಿಂಬವು. ಒಂದು ಅದ್ಭುತ ಪರಮ ಶಕ್ತಿಯೇ ಹಲವು ರೂಪಗಳಲ್ಲಿ ಕಾಣಿಸಿಕೊಳ್ಳುವುದನ್ನು ನಾವು ನೋಡಬಹುದು. ಸಂಸ್ಕಾರ, ಶ್ರದ್ಧೆ, ವಿದ್ಯೆ, ಕಲೆ, ಸಂಗೀತ, ಸಾಹಿತ್ಯ, ಪ್ರೇಮ, ಪ್ರೀತಿ, ಸ್ನೇಹ, ಕರುಣೆ, ಸೌಹಾರ್ದದಂತಹ ಸುಂದರ ಮಾನವೀಯ ಭಾವಗಳು, ಪ್ರಕೃತಿ ಮತ್ತದರ ಉಪಯುಕ್ತ ರೂಪಗಳಾದ, ಮಳೆ, ಬೆಳೆ, ಹೊಸ ಚಿಗುರು, ಹೂವು ಹಣ್ಣು, ಮನಸ್ಸಿಗೆ ಆಹ್ಲಾದವೀಯುವ, ಪ್ರಕೃತಿ ಸೌಂದರ್ಯ, ಬೆಟ್ಟ ಗುಡ್ಡ, ನದಿ, ಝರಿ, ವೈವಿಧ್ಯಮಯ ಸಸ್ಯ ಜಗತ್ತು ಮತ್ತು ಪ್ರಾಣಿಜಗತ್ತು ಎಲ್ಲವೂ

ಆ ಪರಮ ಶಕ್ತಿಯ ಒಂದು ಸುಂದರ ರೂಪವಾದರೆ, ಕುಯುಕ್ತಿ, ದ್ವೇಷ, ಮೋಸ, ಕೊಲೆ, ದರೋಡೆ, ಯುದ್ಧ, ರಕ್ತಪಾತ, ಹಸಿವು, ದಾರಿದ್ರ್ಯ, ನೋವು ಭಯೋತ್ಪಾದನೆಯಂತಹ ಅಮಾನವೀಯ ಭಾವಗಳು, ಅತಿವೃಷ್ಟಿ, ಅನಾವೃಷ್ಟಿ, ಅಗ್ನಿಪರ್ವತಗಳು, ಸುನಾಮಿ, ಭೂಕಂಪಗಳಂತಹ ಪ್ರಕೃತಿಯ ಕ್ರೂರತೆಯ ಇನ್ನೊಂದು ರೂಪ. ಇವೆಲ್ಲವೂ ಪರಮಾತ್ಮನ ಪ್ರೇರಣೆಯಿಂದಲೇ ನಡೆಯುತ್ತೆ ಎಂದರೆ, ಈ ಎರಡೂ ಮುಖಗಳು ಆ ಪರಮಾತ್ಮನ ಮುಖಗಳೇ ಅಲ್ಲವೇ? ಎರಡು ರೂಪಗಳಿಗೂ ಆ ಪರಮ ಶಕ್ತಿಯೇ ಪ್ರೇರಕವಲ್ಲವೇ?

ಈ ಎರಡೂ ಮುಖಗಳ ಪರಿಚಯವನ್ನು ಮಾಡಿಸಿದ ಘಟನೆಗಳ ಉಲ್ಲೇಖ ನಮ್ಮಲ್ಲಿ ಹೇರಳವಾಗಿ ಸಿಗುತ್ತದೆ. ಭಕ್ತಿಗೆ ಮೆಚ್ಚಿ ಕಾರಣ ಜನ್ಮವೆತ್ತಿದ ಮಹಾನ್ ಭಕ್ತ ರಾವಣನಿಗೆ ವರ ಕೊಟ್ಟ ಶಿವನ ಶಾಂತ ರೂಪ. ಅದೇ ರಾವಣನನ್ನು ಯುದ್ಧದಲ್ಲಿ ಕೊಂದು ಮೋಕ್ಷವನ್ನು ಕರುಣಿಸಿದ ರಾಮನ ರುದ್ರ ರೂಪ. ಪರಶಿವನ ಸ್ತ್ರೀ ರೂಪವಾದ ಶಕ್ತಿದೇವತೆಯು, ತನ್ನ ಇಚ್ಛಾ ಮಾತ್ರದಿಂದಲೇ ಸೃಷ್ಟಿ-ಸ್ಥಿತಿ-ಲಯಗಳನ್ನು ಮಾಡತಕ್ಕ ಶಕ್ತಿ ಸಂಪನ್ನಳಾದರೂ, ಅಧರ್ಮಿಯಾದ ಮಹಿಷಾಸುರನನ್ನು ಕೊಲ್ಲಲು ರುದ್ರರೂಪ ತಾಳಿ ತನ್ನ ಆಯುಧಗಳನ್ನು ಉಪಯೋಗಿಸಿ ಅವನನ್ನು ಹತ ಮಾಡಿದ ರುದ್ರ ರೂಪ. ಆ ರುದ್ರತೆಯಲ್ಲೂ, ತನ್ನ ಆಯುಧಗಳ ಸ್ಪರ್ಶದಿಂದ ಅವನ ಪಾಪಗಳನ್ನೆಲ್ಲ ನಾಶಮಾಡಿ ಅವನಿಗೆ ಮುಕ್ತಿಯನ್ನು ನೀಡಿದ ಕರುಣಾಮಯ ತಾಯ ರೂಪ. ಶಬರಿ, ಭೀಷ್ಮ, ಜಟಾಯು, ಪ್ರಹ್ಲಾದ, ಧ್ರುವ ಇಂತಹವರಿಗೆ ಪ್ರೇಮದಿಂದ ಮುಕ್ತಿ, ಹಿರಣ್ಯಾಕ್ಷ, ಹಿರಣ್ಯಕಶಿಪು, ಪೂತನೆ, ಕಂಸ, ಚಾಣೂರ, ಮುಷ್ಟಿಕ, ಶಿಶುಪಾಲ, ಪೌಂಡ್ರಕ ವಾಸುದೇವ, ಜರಾಸಂದ, ದಂತವಕ್ತ್ರ, ಮುಂತಾದವರಿಗೆ ಉಗ್ರ ರೂಪದಿ ಮುಕ್ತಿ, ಹೀಗೆ ಹತ್ತು ಹಲವಾರು ಪ್ರಸಂಗಗಳು ನಮಗೆ ಆ ಪರಮ ಶಕ್ತಿಯ ಎರಡೂ ರೂಪಗಳ ಪರಿಚಯ ಮಾಡುತ್ತದೆ.

ಪ್ರಸಕ್ತ ಜಗತ್ತಿನಲ್ಲೂ ಸಹ ಇಂಥಹ ಭಿನ್ನ ರೂಪಗಳನ್ನು ನಾವು ಕಾಣುತ್ತೇವೆ. ಪರಸ್ಪರ ಸ್ನೇಹಭಾವ, ಉಪಕಾರ ಬುದ್ಧಿ, ಪ್ರೀತಿ, ಪ್ರೇಮ, ಕರುಣೆಯಂತಹ ಸಕಾರಾತ್ಮಕ ಭಾವಗಳೂ, ದುರ್ಬುದ್ಧಿ, ದುರ್ಭಾವ, ದ್ವೇಷ, ಅಸೂಯೆ, ಕ್ರೌರ್ಯದಂತಹ ನಕಾರಾತ್ಮಕ ಭಾವಗಳು ಒಂದರ ಪಕ್ಕದಲ್ಲಿ ಇನ್ನೊಂದೆಂಬಂತೆ ನಮ್ಮ ಸಮಾಜದಲ್ಲಿ ನಾವು ಕಾಣಬಹುದು. ಅಷ್ಟೇ ಏಕೆ ವಾಚಕರೆ ಒಂದೇ ವ್ಯಕ್ತಿಯಲ್ಲೇ ಇಂತಹ ಎರಡು ಮುಖಗಳನ್ನೂ ನಾವು ಕಾಣುವುದಿಲ್ಲವೇ. ಒಬ್ಬನೇ ವ್ಯಕ್ತಿ ಕೆಲವರಿಗೆ ಒಳ್ಳೆಯವನಾಗಿಯೂ, ಕೆಲವರಿಗೆ ದುಷ್ಟನಾಗಿಯೂ ತೋರುವುದಿಲ್ಲವೇ. ನಮ್ಮ

ಮನಸ್ಸುಗಳಲ್ಲೇ ಈ ರೀತಿಯ ದ್ವಿಭಾವಗಳ ಗುಚ್ಚವೇ ಇಲ್ಲವೇ? ಇಂತಹ ದ್ವಿಭಾವಯುಕ್ತವೆ ಜೀವನ. ಎರಡೂ ಇರಬೇಕು ಜಗದ್ವ್ಯಾಪಾರಕ್ಕೆ ಎಂದಿಗೂ ಎಲ್ಲರೂ ಎಲ್ಲ ಕಾಲಕ್ಕೂ ಒಳ್ಳೆಯವರಾಗಿಯೂ ಅಥವಾ ಎಲ್ಲ ಕಾಲಕ್ಕೂ ಕೆಟ್ಟವರಾಗಿಯೂ ಇರುವುದಿಲ್ಲ. ಇವೆರಡರ ಸಮ್ಮಿಶ್ರ ರೂಪವೇ ಈ ಜಗದ್ವ್ಯಾಪಾರ,

ಒಂದು ಮನುಷ್ಯನಿಗೆ ಹೇಗೆ ಅಸತ್ತಿನಿಂದ ಸತ್ತಿನೆಡೆಗೆ, ಅಜ್ಞಾನದಿಂದ ಜ್ಞಾನದೆಡೆಗೆ, ದುಃಖದಿಂದ ನೆಮ್ಮದಿಯೆಡೆಗೆ ಹೋಗಲು ಸಾಧ್ಯ ಉಂಟೋ ಹಾಗೆಯೇ ಇದರ ವಿರುದ್ಧ ದಿಕ್ಕಿನಲ್ಲಿ ಹೋಗಲೂ ಸಹ ಸಾಧ್ಯ ಉಂಟು. ಒಟ್ಟು ಸಮುದಾಯದ ಸಾಮೂಹಿಕ ಇಚ್ಛಾಶಕ್ತಿಯ ಮೇಲೆ ಆ ಸಮಾಜದ ಆಗುಹೋಗುಗಳು ನಿರ್ಭರವಾಗಿವೆ. ನಾವೂ ಸಹ ನಮ್ಮ ಸಮಾಜದ ಸಮಗ್ರ ವಿಶ್ಲೇಷಣೆ ಮಾಡಿ ನಾವು ಎಲ್ಲಿದ್ದೇವೆ ಎಲ್ಲಿಗೆ ಹೋಗಬೇಕು ಎಂದು ದೃಢ ನಿಶ್ಚಯ ಮಾಡಿದರೆ, ಎಂದೋ ಒಂದು ದಿನ ಸಮಾಜದ ಸಮೃದ್ಧ ಸಂಪನ್ನ ಶಾಂತ ರೂಪವನ್ನು ಕಾಣಬಹುದು.





**ಮುಕ್ತಕ-30**

**ಬ್ರಹ್ಮವೇ ಸತ್ಯ ಸೃಷ್ಟಿಯೆ ಮಿಥ್ಯೆಯೆನ್ನುವೊಡೆ**
**ಸಂಬಂಧವಿಲ್ಲವೇನು ವಿಷಯಯುಗಕೆ?**
**ನಮ್ಮ ಕಣ್ಮನಸುಗಳೇ ನಮಗೆ ಸಟೆ ಪೇಳುವೊಡೆ**
**ನೆಮ್ಮುವುದದಾರನೋ? ಮಂಕುತಿಮ್ಮ**

ಮಿಥ್ಯೆಯೆನ್ನುವೊಡೆ=ಮಿಥ್ಯೆ+ಎನ್ನುವೊಡೆ, ಕಣ್ಮನಸುಗಳೇ=ಕಣ್ಣು+ಮನಸ್ಸುಗಳೇ,
ನೆಮ್ಮುವುದದಾರನೋ=ನೆಮ್ಮುವುದು+ಅದು+ಯಾರನೋ

ಬ್ರಹ್ಮ=ಸೃಷ್ಟಿಕರ್ತ, ಪರಮಾತ್ಮ, ಸೃಷ್ಟಿ=ಈ ಜಗತ್ತು, ಮಿಥ್ಯೆ=ಅಸತ್ಯವಾದದ್ದು ಎನ್ನುವೊಡೆ=ಎಂದರೆ, ವಿಷಯಯುಗ=ಎರಡು ವಿಷಯಗಳು, ಸಟೆ=ಸುಳ್ಳು, ನೆಮ್ಮುವುದು=ನಂಬುವುದು.

ಬ್ರಹ್ಮವೇ ಸತ್ಯ ಸೃಷ್ಟಿಯೇ ಮಿಥ್ಯ ಎನ್ನುವುದಾದರೆ ಈ ಜಗತ್ತು ಮತ್ತು ಅದನ್ನು ಸೃಷ್ಟಿಮಾಡಿದ ಆ ಪರ ಬ್ರಹ್ಮನಿಗೂ ಯಾವುದೇ ಸಂಬಂಧವಿಲ್ಲವೇನು? ನಮ್ಮ ಕಣ್ಣು ಮನಸ್ಸುಗಳೇ ನಮಗೆ ಅಸತ್ಯವನ್ನು ಹೇಳುವುದಾದರೆ ನಂಬುವುದು ಯಾರನ್ನು ಎಂದು, ಸೃಷ್ಟಿಕರ್ತ ಮತ್ತು ಸೃಷ್ಟಿಯ ನಡುವಿನ ಸಂಬಂಧ ಕುರಿತಾದಂತಹ ಒಂದು ಅದ್ಭುತ ವಿಷಯವನ್ನು ನಮ್ಮ ಮುಂದಿಡುತ್ತಾರೆ ಶ್ರೀ ಡಿ.ವಿ.ಜಿ.ಯವರು ಈ ಮುಕ್ತಕದ ರೂಪದಲ್ಲಿ.

ಆ ಪರಮ ಶಕ್ತಿಯೇ ಈ ಸೃಷ್ಟಿಗೆ ಮೂಲ. ತನ್ನ ಇಚ್ಛಾ ಶಕ್ತಿಯಿಂದಲೇ ಇಡೀ ಬ್ರಹ್ಮಾಂಡವನ್ನು ಸೃಜಿಸಿದ ಆ ಪರಮಾತ್ಮ ಎಂದು ಪುರಾಣಗಳು ಹೇಳುತ್ತವೆ. ಆ ಪರಬ್ರಹ್ಮ ಸತ್ಯವೆಂದಮೇಲೆ, ಈ ಜಗದ್ವ್ಯಾಪಾರವನ್ನು, ಎಂದರೆ ಹಗಲು ರಾತ್ರಿಗಳು, ಋತುಮಾನಗಳು, ಮಳೆಗಳು ಬೆಳೆಗಳು, ಜೀವಿಗಳ ಹುಟ್ಟುಸಾವಿನ ಪ್ರಕ್ರಿಯೆಗಳು, ಹೀಗೆ ಎಲ್ಲವೂ ಆ ಪರಮಾತ್ಮನ ಅಧೀನದಲ್ಲಿದೆಯೆಂದರೆ, ಆ ಪರಮ ವಸ್ತುವಿಗೂ ಮತ್ತು ಅದು ಸೃಜಿಸಿದ ಈ ಸೃಷ್ಟಿಗೂ ಒಂದು ಅವಿನಾಭಾವ ಸಂಬಂಧವಿರಬೇಕಲ್ಲವೇ? ಅವನ ಸೃಷ್ಟಿಯೂ ಸತ್ಯವಾಗಿರಬೇಕಲ್ಲವೇ. ಆದರೆ “ಜಗತ್ ಮಿಥ್ಯ” ಎನ್ನುವ ಒಂದು ತತ್ವ ಪ್ರತಿಪಾದನೆಯೂ ಇದೆ. ನಮ್ಮ ಕಣ್ಣಿಗೆ ಕಾಣುತ್ತದಲ್ಲ!! ಹಾಗೆ ಕಣ್ಣಿಗೆ ಕಾಣುವುದನ್ನು ನಾವು ಅಸತ್ಯ ಎಂದು ಹೇಗೆ ನಂಬುವುದು. ಇದರಲ್ಲಿ ಯಾವುದನ್ನು ನಂಬುವುದು ಎಂದು ಒಂದು ಗಹನವಾದ ವಿಚಾರವನ್ನು ಶ್ರೀ ಗುಂಡಪ್ಪನವರು ಪ್ರಸ್ತಾಪಿಸಿದ್ದಾರೆ.

ಸತ್ಯವೆಂದರೇನು? ಸಿದ್ಧಾಂತ ಪ್ರತಿಪಾದಕರ ಪ್ರಕಾರ, ಯಾವುದು ನಿತ್ಯವೋ ಅದು ಸತ್ಯ. ನಿತ್ಯವೆಂದರೆ ನಿರಂತರವಾಗಿರುವುದು. ಅಂದರೆ ಸದಾಕಾಲ ಬದಲಾಗದೆ ಹಾಗೆ ಇರುವುದು. ಹೌದು ಆ ಅರ್ಥದಲ್ಲಿ ಈ ಜಗತ್ತು ಕೇವಲ ಮಿಥ್ಯೆ ಅಥವಾ ಭ್ರಮೆ. ಈಗ ಕಂಡದ್ದು ಇನ್ನೊಂದು ಕ್ಷಣಕ್ಕೆ ಇಲ್ಲ. ಹಾಗೆ ನೋಡಿದರೆ ಪರಮಾತ್ಮಶಕ್ತಿಯನ್ನು ಬಿಟ್ಟರೆ, ಮಿಕ್ಕ ಎಲ್ಲಕ್ಕೂ ಒಂದು ಕಾಲ ಉಂಟು, ಆಮೆಗೆ 350ವರ್ಷ, ಆನೆಗೆ 185, ಮನುಷ್ಯನಿಗೆ 100 ಆದರೆ ಇರುವೆಗೆ 5 ದಿನ, ಸೊಳ್ಳೆಗೆ 3 ದಿನ. ಯಾವುದೂ ಶಾಶ್ವತವಲ್ಲ. ಪುರಾಣಗಳ ಪ್ರಕಾರ, ಬ್ರಹ್ಮ ಇಂದ್ರ ಮತ್ತು ಅವನ ಸಹಚರರಾದ ದಿಕ್ಪಾಲಕರು ಅಷ್ಟವಸ್ತುಗಳು, ಇವರೆಲ್ಲರೂ ಕೇವಲ ನಿಯಮಿತ ಅಧಿಕಾರಿಗಳು, (appointed officers) ಪರಮಾತ್ಮನ ಆದೇಶದ ಮೇರೆಗೆ ಜಗತ್ತನ್ನು ನಿಯಂತ್ರಿಸುವ ಇವರುಗಳಿಗೂ ಒಂದು ಕಾಲದ ಮಿತಿ ಉಂಟು. ಹಾಗಾಗಿ ಅವರೂ ಸಹ ನಿತ್ಯರಲ್ಲದ ಕಾರಣ ಅವರನ್ನು ಸತ್ಯವಲ್ಲವೆಂದು ಪರಿಗಣಿಸಬೇಕಾಗುತ್ತದೆ, ಅಲ್ಲವೇ?

ಇಂದು ನಮಗೆ ಕಾಣುವುದು, ನಮ್ಮ ಅನುಭವಕ್ಕೆ ಬರುವುದು, ನಮ್ಮ ಸಂಪರ್ಕಕ್ಕೆ ಬರುವುದು ಎಲ್ಲವೂ ನಮಗೆ ಇಂದಿಗೆ ಸತ್ಯ ಅಲ್ಲದಿದ್ದರೆ, ಅದು ಬರೀ ಭ್ರಮೆಯಾದರೆ ನಮ್ಮ ಅನುಭವಗಳು ಸುಳ್ಳೇ? ಸಾಧ್ಯವಿಲ್ಲ. ವೇದಾಂತದ ಪ್ರಕಾರ ಹಾಗಿರಬಹುದು ಆದರೆ ವಾಸ್ತವಿಕ ಬದುಕಿನಲ್ಲಿ ಆ ರೀತಿಯ ಭಾವನೆಗಳು ಜೀವನದಲ್ಲಿ ಉತ್ಸಾಹವನ್ನು ಕುಗ್ಗಿಸಿ, ಬದುಕನ್ನು ಬರಡಾಗಿಸುತ್ತದೆ. ನಾವು ಇದ್ದೇವೆ ಎಂದರೆ ನಮ್ಮ ಸುತ್ತ ಇರುವುದೆಲ್ಲ ಇದೆ ಎಂದು ಅರ್ಥ. ಇದೆ ಎಂದರೆ ಅದು ಸತ್ಯ ಇಲ್ಲವೆಂಬುದನ್ನು ಇದೆ ಎಂದುಕೊಂಡರೆ, ಅದು ಭ್ರಮೆ. ಇರುವುದನ್ನು ಇಲ್ಲವೆಂದರೂ ಭ್ರಮೆಯೇ ತಾನೇ?

ಈ ನಮ್ಮ ಜೀವನದ ಪ್ರಯಾಣದಲ್ಲಿ, ವಾಸ್ತವಿಕ ಬದುಕು ಬೇರೆ ವೇದಾಂತದ ಬದುಕು ಬೇರೆ. ವೇದಾಂತದಲ್ಲಿ ವಾಸ್ತವವನ್ನೂ ಮತ್ತು ವಾಸ್ತವದಲ್ಲಿ ವೇದಾಂತವನ್ನೂ ಸಮನ್ವಯವಾಗಿ ಬೆರೆಸಿಕೊಂಡು ನಮ್ಮನ್ನು ನಾವು ಸಾರ್ಥಕ್ಯದೆಡೆಗೆ ತೆಗೆದುಕೊಂಡು ಹೋಗಬೇಕು. ಇದಕ್ಕೆ ಅಧ್ಯಯನ ನಿಧಿಧ್ಯಾಸನಗಳ ಅವಶ್ಯಕತೆ ಇದೆ. ಅದರ ಪ್ರಯತ್ನವೇ ನಮ್ಮ ಬದುಕಾಗಬೇಕು. ಸತ್ಯ ಅಸತ್ಯಗಳ ದ್ವಂದ್ವವಿಲ್ಲದೆ ಉತ್ಸಾಹದಿಂದ ಜೀವನವನ್ನು ಆಸಕ್ತಿಯಿಂದ ಜೀವಿಸಬೇಕು. ಹಾಗೆ ಆಸಕ್ತಿಯ ಜೀವನವನ್ನು ನಡೆಸುವಾಗ ಅಂತರಂಗದಲ್ಲಿ ವಿರಕ್ತಿಯ ಭಾವವಿರಬೇಕು. ಹಾಗಿದ್ದರೆ ಸುಖ ಸಂತೋಷ ನೆಮ್ಮದಿ. ಅಂತಹ ಸ್ಥಿತಿಯನ್ನು ಸಾಧಿಸುವ ಪ್ರಯತ್ನವನ್ನು ನಾವೂ ಮಾಡೋಣವೆ?

**ಮುಕ್ತಕ-31**

**ಬಚ್ಚಿಟ್ಟುಕೊಂಡಿಹುದೆ ಸತ್ಯ ಮಿಥ್ಯೆಯ ಹಿಂದೆ?**
**ನಚ್ಚುವುದೆ ಮರೆಯೊಳಿಹುದನೆ ಸತ್ಯವೆಂದು?**
**ಅಚ್ಚರಿಯ ತಂತ್ರವಿದು; ಬ್ರಹ್ಮ ಸೃಷ್ಟಿಗಳೇಕೋ**
**ಮುಚ್ಚಿಹವು ಸಾಜತೆಯ-ಮಂಕುತಿಮ್ಮ**

ಬಚ್ಚಿಟ್ಟುಕೊಂಡಿಹುದೆ=ಬಚ್ಚಿಟ್ಟುಕೊಂಡು+ಇಹುದೆ, ಮರೆಯೊಳಿಹುದನೆ=ಮರೆಯೊಳು+ಇಹುದನೆ,
ಸೃಷ್ಟಿಗಳೇಕೋ=ಸೃಷ್ಟಿಗಳು+ಏಕೋ
ನಚ್ಚುವುದು=ನೆಚ್ಚುವುದು, ನಂಬುವುದು, ಇಹುದನೆ=ಇರುವುದನ್ನು, ಸಾಜತೆಯ=ಸಹಜತೆಯ.

ಸತ್ಯವಾದ ಆ ಪರಮಾತ್ಮ ವಸ್ತು ಅಸತ್ಯವಾದ ಈ ಸೃಷ್ಟಿಯ ಹಿಂದೆ ಬಚ್ಚಿಟ್ಟುಕೊಂಡಿರುವುದೇ? ನಮಗೆ ಜಗತ್ತು ಕಾಣುತ್ತದೆ. ಸಕಲವೂ ಇಂದ್ರಿಯ ಗ್ರಾಹ್ಯ. ಇದನ್ನು ಮಿಥ್ಯವೆಂದು, ಅಸತ್ಯವೆಂದು ಹೇಳುತ್ತಾರೆ. ಆದರೆ ಅದನ್ನು ಸೃಜಿಸಿದ ಶಕ್ತಿ ಕಾಣುವುದಿಲ್ಲ. ಭಾವಿಸಬಹುದು ಮತ್ತು ಕೇವಲ ಅನುಭವ ವೇದ್ಯ, ಅದನ್ನು ಸತ್ಯವೆನ್ನುತ್ತಾರೆ. ಕಣ್ಣಿಗೆ ಕಾಣದೆ, ಮರೆಯಲ್ಲಿರುವುದನ್ನು ಸತ್ಯವೆಂದು ನಂಬುವುದು ಹೇಗೆ? ಈ ಸೃಷ್ಟಿಕರ್ತ ಮತ್ತು ಅವನ ಸೃಷ್ಟಿಯ ತಂತ್ರ ಬಹಳ ಆಶ್ಚರ್ಯಕರವಾದವು ಮತ್ತು ಸಹಜತೆಯು ಮುಚ್ಚಿಹುದು, ಎನ್ನುತ್ತಾರೆ ಈ ಮುಕ್ತಕದಲ್ಲಿ ಮಾನ್ಯ ಗುಂಡಪ್ಪನವರು.

ನೋಡಿ ಒಂದು ಮಗುವಿಗೆ ಆನೆಯನ್ನು ನೀವು ಬಹಳ ಚೆನ್ನಾಗಿ ವಿವರಿಸುತ್ತೀರಿ. ದೊಡ್ಡ ಕಿವಿ, ಸಣ್ಣ ಕಣ್ಣು, ಸಣ್ಣ ಬಾಲ, ಬೃಹತ್ತಾದ ದೇಹ ಮತ್ತು ಕಾಲುಗಳು, ಒಂದು ದೊಡ್ಡ ಸೊಂಡಿಲು ಎಂದು ಎಷ್ಟು ಹೇಳಿದರೂ





ಆ ರೂಪವನ್ನು ಆ ಮಗು ಕಲ್ಪಿಸಿಕೊಳ್ಳಲು ಸಾಧ್ಯವೇ?, ಇಲ್ಲ. ಬದಲಿಗೆ ಅದಕ್ಕೊಂದು ಆನೆಯನ್ನು ತೋರಿಸಿ, ಇದು ಆನೆ, ಎಂದು ಹೇಳಿದರೆ, ಮುಂದೆ ಅದಕ್ಕೆ ಆನೆ ಎಂಬ ಶಬ್ದ ಕಿವಿಗೆ ಬಿದ್ದರೆ ಸಾಕು ನಿಜವಾದ ಆನೆಯ ರೂಪ ಅದರ ಮನಸ್ಸಿಗೆ ಬರುತ್ತದೆ. ನಮಗೆ ಯಾರೂ ಆ ಪರಮಾತ್ಮನನ್ನು ತೋರಿಸಿಲ್ಲ. ಹಾಗಿರಬೇಕಾದರೆ ನಾವು ಯಾವುದನ್ನು ಪರಮಾತ್ಮ ಎಂದು ನಂಬುವುದು. ಹಾಗೆ ನಾವು ಕಾಣದೆ ಇರುವ, ನಾವು ಕಲ್ಪಿಸಿಕೊಳ್ಳಲೂ ಸಾಧ್ಯವಿಲ್ಲದ ಒಂದು ವಸ್ತುವನ್ನು ಸತ್ಯವೆಂದೂ, ಕಣ್ಣಿಗೆ ಕಾಣುವ ಮತ್ತು ನಮ್ಮ ನಿತ್ಯಜೀವನದಲ್ಲಿ ನೋಡುವ ಅನುಭವಿಸುವ ಮತ್ತು ಒಡನಾಡುವ ವಸ್ತು, ವ್ಯಕ್ತಿ, ವಿಷಯಗಳನ್ನು ಸುಳ್ಳು ಅಥವಾ ಮಿಥ್ಯೆ ಎನ್ನುವುದು ಏಕೆ? ಏನಿದು ತಂತ್ರ ಎನ್ನುತ್ತಾರೆ ಶ್ರೀ ಗುಂಡಪ್ಪನವರು.

ನಮ್ಮ ಋಷಿ ಮುನಿಗಳು ಬಹಳ ಗಹನವಾದ ತತ್ವವನ್ನು ಪ್ರತಿಪಾದಿಸಿದ್ದಾರೆ. ಜಗತ್ತಿನಲ್ಲಿ ಯಾರೂ ಕಾಣದನ್ನು ಬಹಳ ಹಿಂದೆಯೇ ಅನುಭವದಿಂದ ಕಂಡುಕೊಂಡಿದ್ದಾರೆ. ತೆಲುಗಿನಲ್ಲಿ, ನಮ್ಮ ಗುಂಡಪ್ಪನವರಂತೆಯೇ ಒಬ್ಬ ತತ್ವಪ್ರತಿಪಾದಕ ಕವಿ, ವೇಮನ ಎಂಬುವವರಿದ್ದರು. ಸರಿ ಸುಮಾರು ಹದಿನಾರನೇ ಶತಮಾನದ ಮಧ್ಯಭಾಗದಲ್ಲಿ ಜನಿಸಿದ, ಆ ಕವಿ ನಮ್ಮ ಗುಂಡಪ್ಪನವರ ಮುಕ್ತಕಗಳ ರೂಪದಲ್ಲಿಯೇ ತತ್ವಪ್ರತಿಪಾದಕ ಕೃತಿ “ವೇಮನ ಶತಕ"ವನ್ನು

ರಚಿಸಿದ್ದಾರೆ. ಅವರು ಬರೆಯುತ್ತಾರೆ "ಇಂದು ಗಲಡು ಅಂದು ಲೇಡನಿ ಸಂದೇಹಮು ವಲದು, ಚಕ್ರಿ ಎಂದೆಂದು ವೆದಕಿತೆ ಅಂದಂದೇ ಗಲಡು" ಎಂದು. 'ಇಲ್ಲಿರುವ ಅಲ್ಲಿ ಇಲ್ಲ' ಎಂಬ ಸಂದೇಹವು ಬೇಡ. ಆ ಚಕ್ರಧಾರಿಯು ಎಲ್ಲೆಲ್ಲಿ ಹುಡುಕಿದರೆ ಅಲ್ಲಲ್ಲಿ ಕಾಣುವ" ಎನ್ನುತ್ತಾರೆ. ಆ ಪರಮಾತ್ಮನ ಸರ್ವವ್ಯಾಪಕತ್ವವನ್ನು ಪ್ರತಿಪಾದಿಸುವ ಸಾಹಿತ್ಯ ನಮ್ಮಲ್ಲಿ ಹೇರಳವಾಗುಂಟು. "ಅವರವರ ಭಾವಕ್ಕೆ ಅವರವರ ಭಕುತಿಗೆ ಅವರವರ ತೆರನಾಗಿ ಇರುತಿಹನು ಶಿವಯೋಗಿ" ಎನ್ನುವ ಶಿವಶರಣರು, 'ಆ ಪರಮಾತ್ಮ ಎಲ್ಲಕಡೆಯೂ ಇರುವುದರಿಂದ, ಈ ಬಾಳೆ ಹಣ್ಣನ್ನು ನಾ ಮರೆಯಲ್ಲಿ ತಿನ್ನಲಾಗಲಿಲ್ಲ' ಎಂದು ತನ್ನ ಗುರುಗಳಿಗೆ ಹೇಳಿದ ನಮ್ಮ ಕನಕದಾಸರು. ಎಲ್ಲರೂ ಆ ಕಾಣದ ದೈವದ ಸರ್ವವ್ಯಾಪಕತ್ವವನ್ನು ಪ್ರತಿಪಾದಿಸಿದ್ದಾರೆ.

ಕಾಣದ್ದೆಲ್ಲ ಅಸತ್ಯವೆಂದು ಹೇಳುವುದು ತಪ್ಪು. ಪ್ರೀತಿ ಪ್ರೇಮಗಳು ಕಾಣದಿದ್ದರೂ ಅದರ ಅನುಭವವಾಗುವುದಿಲ್ಲವೇ? ಗಾಳಿ ಕಾಣದಿದ್ದರೂ ನಮ್ಮನ್ನೆಲ್ಲ ಜೀವಂತವಾಗಿರಿಸಿಲ್ಲವೇ? ನಮಗೆ ವಿದ್ಯುತ್ ಕಣ್ಣಿಗೆ ಕಾಣದಿದ್ದರೂ ಬೆಳಕು ಬರುವುದಿಲ್ಲವೇ? "ಕಾಣುವುದಿಲ್ಲವಲ್ಲ' ಎಂದು ಪರೀಕ್ಷಿಸಲು ಕೈ ಇಟ್ಟು ನೋಡಿ. ಅಷ್ಟೇ ನಿಮ್ಮನ್ನೇ ಬಲಿ ತೆಗೆದುಕೊಂಡು ಬಿಡುತ್ತದೆ ಅಲ್ಲವೇ? ಹಾಗೆ ನಾವು ನಮಗೆ ಕಣ್ಣಿಗೆ ಕಾಣುವುದು ಮಾತ್ರ ಸತ್ಯ ಕಾಣದ್ದೆಲ್ಲ ಅಸತ್ಯವೆಂದು ಹೇಳಲಾಗುವುದಿಲ್ಲ. ಇದ್ದರೂ ಕಾಣದ ಆದರೆ ಸತ್ಯವೆನ್ನಿಸಿಕೊಳ್ಳುವ, ಈಗ ಕಂಡರೂ ಬದಲಾಗುತ್ತ ತನ್ನ ಅಸ್ತಿತ್ವವನ್ನೇ ಕಳೆದುಕೊಳ್ಳುವ ಅಸತ್ಯವೆನ್ನಿಸಿಕೊಳ್ಳುವ, ಈ ಪರಮಾತ್ಮ-ಜಗತ್ಸಂಬಂಧವನ್ನೇ ಗುಂಡಪ್ಪನವರು ಅಚ್ಚರಿಯ ತಂತ್ರ ಎನ್ನುತ್ತಾರೆ.

ಕಾಣದ ದೇವರು ಮತ್ತು ಕಾಣುವ ಈ ಜಗತ್ತು ಇವುಗಳ ಬಾಂಧವ್ಯವೇ ಈ ಜಗದ್ವ್ಯಾಪಾರ. ಆದರೆ ಒಂದು ಶಕ್ತಿ, ಕಣ್ಣಿಗೆ ಕಾಣದಿದ್ದರೂ ತನ್ನ ಪ್ರಭಾವ ಮತ್ತು ಪ್ರತಾಪವನ್ನು ಎಲ್ಲ ಕಡೆಯೂ ಬೀರುತ್ತಿರುವ ಅತ್ಯುತ್ತಮ ಶಕ್ತಿ, "ಪರಮ ಪೌರುಷವನ್ನು ಪಡೆದಿರುವ ಪರಮ ಪುರುಷನೆಂದು ಕರೆಯಲ್ಪಡುವ ಆ ಶಕ್ತಿಯೇ ಎಲ್ಲವೂ ಆಗಿರುವಾಗ, ನಾವು ಅದನ್ನು ನಂಬದೆ ಬೇರೆ ಗತ್ಯಂತರವೇ ಇಲ್ಲ. ನಂಬದೆ ಸತ್ಯ-ಮಿಥ್ಯೆಗಳ ದ್ವಂದ್ವಗಳಲ್ಲಿ

ತೊಳಲಾಡುವುದಕ್ಕಿಂತ, ನಂಬಿ ನೆಮ್ಮದಿಯಿಂದ ಇರಬಹುದಲ್ಲವೇ? ನಮ್ಮ ಭಾರತೀಯ ಸಿದ್ಧಾಂತಗಳಲ್ಲಿ ಪ್ರತಿಪಾದಿಸಲ್ಪಟ್ಟಂತೆ ಎಲ್ಲವೂ ಆ ಪರಮಾತ್ಮನೇ ಆದಮೇಲೆ ನಾನು, ನೀವು, ಅವನು, ಅವಳು, ಇದು, ಅದು, ಎಲ್ಲವೂ ಆ ಪರಮ ಶಕ್ತಿಯ ಸ್ವರೂಪವೇ ಎಂದ ಮೇಲೆ, ಎಲ್ಲವನ್ನೂ ಪ್ರೀತಿ ಪ್ರೇಮ ವಿಶ್ವಾಸದಿಂದ ಕಂಡು ಒಂದು ಸೌಹಾರ್ದಯುತವಾದ ಬಾಳು ನಡೆಸಲು ಸಾಧ್ಯವಲ್ಲವೇ?

**ಮುಕ್ತಕ-32**

**ಪರಬೊಮ್ಮನೀ ಜಗವ ರಚಿಸಿದವನಾದೊಡದು ।**
**ಬರಿಯಾಟವೋ ಕನಸೋ ನಿದ್ದೆ ಕಲವರವೋ? ॥**
**ಮರುಳನವನಲ್ಲದೊಡೆ ನಿಯಮವೊಂದಿರಬೇಕು ।**
**ಗುರಿಗೊತ್ತದೇನಿಹುದೋ?-ಮಂಕುತಿಮ್ಮ ॥**

ರಚಿಸಿದವನಾದೊಡದು=ರಚಿಸಿದ+ಅವನು+ಆದೊಡೆ,
ಮರುಳನವನಲ್ಲದೊಡೆ=ಮರುಳನು+ಅವನು+ಅಲ್ಲದೊಡೆ,
ನಿಯಮವೊಂದಿರಬೇಕು=ನಿಯಮವು+ಒಂದು+ಇರಬೇಕು,
ಗುರಿಗೊತ್ತದೇನಿಹುದೋ=ಗುರಿ+ಗೊತ್ತು+ಅದು+ಏನಿಹುದೋ
ಪರಬೊಮ್ಮ=ಪರಬ್ರಹ್ಮ, ಪರಮಾತ್ಮ, ಜಗವ=ಜಗತ್ತನ್ನು, ಆದೊಡೆ=ಆದರೆ, ಕಲವರ=ಅರೆ ನಿದ್ರಾವಸ್ಥೆಯಲ್ಲಿ ಬಡಬಡಿಸುವುದು. ಮರುಳ=ಹುಚ್ಚ, ಗುರಿ=ಧೇಯ, ಗೊತ್ತು=ಗತಿ ಮಾರ್ಗ.

ಆ ಪರಮಾತ್ಮನು, ನಾವು ಹಿಂದೆ ಹೇಳಿದಂತೆ, ಈ ಜಗತ್ತನ್ನು ಸೃಷ್ಟಿಸಿದ ಎಂದರೆ ಇದರ ಧ್ಯೆಯ ಮತ್ತು ದಿಶೆ ಎರಡೂ ಇಲ್ಲದೆ, ಒಂದು ನಿರ್ದಿಷ್ಟ ನಿಯಮವಿಲ್ಲದೆ ಏಕೆ ಹೀಗೆ ಇದೆ? ಮಾನವರಿಗೆ ಅರ್ಥವಾಗದ ಈ ಜಗತ್ತನ್ನು ಸೃಷ್ಟಿಸಿ, ಈ ಜಗತ್ತನ್ನು, ಬರಿ ಅವನಾಟವೆಂದೋ, ಕನಸೆಂದೋ, ಮಾಯೆಯೆಂದೋ ಹೇಳಿ, ಅರೆ ನಿದ್ರೆಯಲಿ ಆಡುವ ಅಸ್ಪಷ್ಟಮಾತುಗಳಂತೆ, ಈ ಜಗತ್ತಿನ ವಿಷಯದಲ್ಲಿ ಒಂದು ಸ್ಪಷ್ಟ ನಿರೂಪಣೆ ಏಕಿಲ್ಲವೆಂದು ಮತ್ತು ಇಂತಹ ಜಗತ್ತನ್ನು ಸೃಷ್ಟಿಮಾಡಿದ, ಆ ಪರಮಾತ್ಮನು ಹುಚ್ಚನಲ್ಲವಷ್ಟೇ ಎಂದು ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ ಪ್ರಸ್ತಾಪಿಸುತ್ತಾರೆ. ಈ ಮುಕ್ತಕಗಳನ್ನು ನೋಡಿದರೆ ಏಕೆ ಹೀಗೆ ಗುಂಡಪ್ಪನವರು ಮತ್ತೆ ಮತ್ತೆ ಇದೇ ಪ್ರಶ್ನೆಗಳನ್ನು ಬೇರೆ ಬೇರೆ ರೀತಿಯಲ್ಲಿ ಕೇಳಿದ್ದಾರೆ ಎಂದು ಸಂದೇಹವು ಬರುವುದು, ಸಹಜ. ವಿಷಯವೇ ಹಾಗಿದೆ. ಇದರ ವಿಚಾರವನ್ನು ಮತ್ತೆ ಮತ್ತೆ ಜಿಜ್ಞಾಸೆಗೆ ಒಳಪಡಿಸಿದರೂ ಅರ್ಥವಾಗದಷ್ಟು ಕ್ಲಿಷ್ಟ. ಓದುಗರ ಮನಸ್ಸನ್ನು ಮತ್ತೆ ಮತ್ತೆ ಚಿಂತನೆಗೆ ಹಚ್ಚುವ ಪ್ರಯತ್ನ ಮಾನ್ಯ ಗುಂಡಪ್ಪನವರದು.

ಹೀಗೆ ಅನ್ನಿಸುವುದು ಸಹಜ. ಆದರೆ ಇದರ ವ್ಯಾಪ್ತಿ ಮತ್ತು ವೈಶಾಲ್ಯ ಎಷ್ಟಿದೆ ಎಂದರೆ, ಸಮಗ್ರ ಸೃಷ್ಟಿಯನ್ನು ಅವಲೋಕನಮಾಡಲು ಮಾನವ ಮಾತ್ರರಿಂದೇನು, ದೇವತೆಗಳಿಗೂ ಅಸಾಧ್ಯವಾದ ವಿಷಯ. ಬ್ರಹ್ಮಾಂಡದ ಬೃಹದಾಕಾರವನ್ನು ಈಗಾಗಲೇ ಪ್ರಸ್ತಾಪ ಮಾಡಿದ್ದೇನೆ. ಕಣ್ಣಿಗೆ ಕಾಣದ್ದನ್ನು ನಾವು ಕಲ್ಪನೆ ಮಾಡಿಕೊಳ್ಳಬಹುದು ಅಥವಾ ಊಹಿಸಿಕೊಳ್ಳಬಹುದು. ಆದರೆ ಊಹೆಗೆ ನಿಲುಕದ್ದನ್ನ, ಅರ್ಥಮಾಡಿಕೊಳ್ಳುವುದು ಹೇಗೆ? ಆದರೆ





ಮನುಷ್ಯನಿಗೆ ಚಿಂತನೆಯ ಶಕ್ತಿ ಎಂದಿನಿಂದ ಬಂತೋ ಅಂದಿನಿಂದ ಮೊದಲುಗೊಂಡು ಇಂದಿನವರೆಗೆ, ಹಲವಾರು ಮಹನೀಯರು. ತಮ್ಮ ತಮ್ಮ ಅರಿವಿನ ಮಿತಿಯೊಳಗೆ ಈ ಜಗತ್ತಿನ ಅರ್ಥವನ್ನು ಕಂಡುಕೊಳ್ಳಲು ಪ್ರಯತ್ನಪಟ್ಟಿದ್ದಾರೆ. ಆದರೆ ಎಲ್ಲೂ ಸಮಗ್ರ ಚಿತ್ರ ನಮಗೆ ಕಾಣುವುದಿಲ್ಲ. ಒಬ್ಬೊಬ್ಬರದು ಒಂದೊಂದು ವಿಶ್ಲೇಷಣೆ. ದೂರದಲ್ಲಿ ನಿಂತು ಒಬ್ಬೊಬ್ಬರ ವಿವರಣೆಯನ್ನು ಕಂಡಾಗ, ನಾವು ಬಹಳ ವಿಚಲಿತರಾಗಿ ಪರದಾಡುವಂತಾಗುತ್ತದೆ. ಏಕೆಂದರೆ, ಅಷ್ಟೊಂದು ವೈವಿಧ್ಯಮಯ ಚಿತ್ರಗಳು ನಮಗೆ ಕಾಣುತ್ತದೆ. ಇದೇನು ಬೊಂಬೆಯಾಟದಲ್ಲೋ ಅಥವಾ ಕನಸಿನಲ್ಲೋ ಘಳಿಗೆಗೊಂದು ಚಿತ್ರ ಮೂಡುವಂತೆ ಇದೆಯಲ್ಲ, ಈ ಸೃಷ್ಟಿಯ ವಿದ್ಯಮಾನಗಳೆಲ್ಲ, ಒಂದೇ ರೀತಿಯಲ್ಲಿ ಇಲ್ಲದಿರುವುದರಿಂದ ಅರ್ಥಮಾಡಿಕೊಳ್ಳಲು ಮತ್ತು ಮುಂದಣ ಚಿತ್ರವನ್ನು ಕಲ್ಪಿಸಿಕೊಳ್ಳಲೂ ಆಗುವುದಿಲ್ಲವಲ್ಲ ಎಂದು ನಾವು ಪರದಾಡುವಾಗ, 'ಇದೊಂದು ಹುಚ್ಚು ಪ್ರಪಂಚ" ಎನ್ನುವ ಭಾವ ನಮಗೆಲ್ಲರಿಗೂ ಯಾವುದಾದರೂ ಸಮಯದಲ್ಲಿ ಬಂದಿರಬಹುದು ಅಥವಾ ಮುಂದೆ ಬರಬಹುದು. ಇದನ್ನೇ ಮಾನ್ಯ ಗುಂಡಪ್ಪನವರು "ಬರಿ ಆಟವೋ ಕನಸೋ ಕಲವರವೋ"  ಎಂದಿದ್ದಾರೆ.

ವಾಚಕರೆ, ದಯವಿಟ್ಟು ಆಲೋಚಿಸಿ. ನಮ್ಮ ಜೀವನದಲ್ಲೂ ಸಹ ನಮಗೆ ಈ ರೀತಿಯ ಭಾವನೆ ಬಂದಿರಬಹುದು. ಅರ್ಥವಾಗದ್ದನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತೇವೆ. ನಮ್ಮ ಜೀವನದ ಗತಿಗೇಕೆ ಒಂದು ನಿಯಮವಿಲ್ಲ ಎಂದು ಮಾನ್ಯ ಗುಂಡಪ್ಪನವರು ಪ್ರಸ್ತಾಪಿಸುತ್ತಾರೆ. ಆದರೆ ನಿಯಮ ಇದೆ. ನಮಗೆ ಕಾಣುವುದಿಲ್ಲ. ಕಂಡರೂ ಅರ್ಥವಾಗುವುದಿಲ್ಲ. ಅರ್ಥವಾದರೂ ನಮ್ಮ ಮತಿಯ ಮಿತಿಯಿಂದ ಸಮಗ್ರ ಚಿತ್ರ ನಮ್ಮ ಮನಸ್ಸಿನಲ್ಲಿ

ಮೂಡುವುದಿಲ್ಲ. ಯಾವುದು ನಮಗೆ ಅರ್ಥವಾಗುವುದಿಲ್ಲವೋ ಅದನ್ನು ನಾವು, ಈ ಜಗತ್ತು ಒಂದು ಮಾಯೆ, ಮಿಥ್ಯಾ ಲೋಕ ಮತ್ತು ನಮಗೆ ಈ ಜೀವನದಲ್ಲಿ ಸಂಭವಿಸುವುದೆಲ್ಲಾ ಆ ಪರಮಾತ್ಮನ ಇಚ್ಛೆಯಂತೆ ನಡೆಯುವುದು, ವಿಧಿ, ಹಣೆಬರಹ ಎಂದೆಲ್ಲ ಪರಿಭಾಷೆಯನ್ನು ಕೊಡುತ್ತಾ ಇರುತ್ತೇವೆ.

ನಮಗಿರುವುದು ಅಲ್ಪ ಆಯಸ್ಸಿನ ಜೀವನ ಎಂದು ಕೊನೆಯೋ ಗೊತ್ತಿಲ್ಲ. ಹತ್ತಾರು ಜನ್ಮದಲ್ಲಿ ಅದನ್ನೇ ಸಂಶೋಧನೆಯ ರೀತಿಯಲ್ಲಿ ಅರ್ಥೈಸುವುದಕ್ಕೆ ಪ್ರಯತ್ನಪಟ್ಟರೂ ಅರ್ಥವಾಗದ ಈ ಪರಮಾತ್ಮನ ಲೀಲೆಯನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುವುದು, ವೃಥಾ ವ್ಯರ್ಥ. ನಮಗಿಂತ ಹಿರಿಯರು, ಅನುಭವಿಗಳು, ಜ್ಞಾನವಂತರು, ಬುದ್ಧಿವಂತರು ನಮ್ಮೆದುರಿಗೆ ಇರುವಾಗ, ಅವರಾಡುವ ಮಾತುಗಳನ್ನು ಆಲಿಸಿ, ಒಳಗೆ ಮಂಥನ ಮಾಡಿ ಸಾರವನ್ನು ಹೀರುವ ಕೆಲಸ ಮಾಡಬೇಕೆ ಹೊರತು ವಾದ ಮತ್ತು ತರ್ಕದಲ್ಲಿ ಸಮಯ ಕಳೆದು ಸಿಕ್ಕ ಅವಕಾಶವನ್ನು ಕಳೆದುಕೊಳ್ಳುವುದು ಅವಿವೇಕದ ಕೆಲಸ. ಒಂದು ಜೀವನ ಸಿಕ್ಕಿದೆ. ಅರ್ಥಪೂರ್ಣವಾಗಿ ಜೀವಿಸುವುದು ಬಿಟ್ಟು ಅದರ ವಿಶ್ಲೇಷಣೆ ಮಾಡುತ್ತಾ, ಈಗಿರುವ ಜೀವನವನ್ನು ಹಾಳು ಮಾಡಿಕೊಳ್ಳಬಾರದು. ಈ ವಿಷಯದಲ್ಲಿ ನಾವು ನಮ್ಮದೇ ನಿಲುವನ್ನು ತಳೆಯಬೇಕು. ಸಾಧ್ಯವಾದಷ್ಟು ಅರ್ಥಮಾಡಿಕೊಳ್ಳಬೇಕು. ಅರ್ಥವಾಗದ್ದನ್ನು ಅವನಿಚ್ಛೆ, ವಿಧಿ ಎಂದು ಬಿಟ್ಟುಬಿಟ್ಟು ನೆಮ್ಮದಿಯಾಗಿ ಜೀವನ ಮಾಡಬೇಕು. ನಾವೂ ನೆಮ್ಮದಿಯಾಗಿದ್ದು ಮತ್ತೊಬ್ಬರ ನೆಮ್ಮದಿಯನ್ನು ಕೆಡಿಸದೆ ಜೀವನ ಮಾಡಿದರೆ ಅದು ಸಾರ್ಥಕ ಜೀವನ.





**ಮುಕ್ತಕ-33**

**ನರಪರೀಕ್ಷೆಯೇ ಬೊಮ್ಮನಾಶಯವೇ? ನಮ್ಮ ಬಾಳ್ |**
**ಬರಿ ಸಮಸ್ಯೆಯೆ? ಅದರ ಪೂರಣವದೆಲ್ಲಿ? ||**
**ಸುರಿದು ಪ್ರಶ್ನೆಗಳನುತ್ತರವ ಕುಡೆ ಬಾರದನ |**
**ಗುರುವೆಂದು ಕರೆಯುವೆಯ?-ಮಂಕುತಿಮ್ಮ ||**

ಬೊಮ್ಮನಾಶಯವೇ=ಬೊಮ್ಮನ+ಆಶಯವೇ,ಪೂರಣವದೆಲ್ಲಿ=ಪೂರನವು+ಅದೆಲ್ಲಿ,
ಪ್ರಶ್ನೆಗಳನುತ್ತರವ=ಪ್ರಶ್ನೆಗಳನು+ಉತ್ತರವ, ಗುರುವೆಂದು=ಗುರುವು+ಎಂದು.
ನರ=ಮಾನವ, ಬೊಮ್ಮ=ಪರಬ್ರಹ್ಮ, ಪೂರಣ=ಮುಗಿವು, ಅಂತ್ಯ, ಕುಡೆ=ಕೂಡ, ಬಾರದನ=ಬಾರದವನ

"ಬಸ್ಸಿನಲ್ಲಿ ಹೋಗುವಾಗ, ಹಿಂದೆ ನೋಡಲು ತಲೆ ಹೊರಗೆ ಹಾಕಿ, "ತಲೆ ಒಡೆಸಿಕೊಂಡವನಂತೆ, ನಮಗೆ ನಮ್ಮ ಜೀವನದಲ್ಲಿ ಮರುಕ್ಷಣ ಏನಾಗುತ್ತದೆ ಎಂದು ಗೊತ್ತಿಲ್ಲ. ನಾವು ನೆನೆವುದು ಒಂದು ನಡೆಯುವುದೇ ಒಂದು. ಇಲ್ಲಿ "ನಾವು ನೆನೆದದ್ದೇ ಸರಿ ಇರಲಿಲ್ಲ, ಹಾಗಾಗಿ ಹೀಗಾಯಿತು" ಎಂದು ಅಂದುಕೊಳ್ಳುವವರು ಎಷ್ಟು ಜನ, ಅಯ್ಯೋ ದೇವರೇ ಇದೇನು ನಿನ್ನ ಆಟ" "ನಮ್ಮ ಹಣೆಬರಹವೇ ಸರಿ ಇಲ್ಲ" "ಆ ದೇವರು ನಮ್ಮನ್ನು ಏಕೆ ಹೀಗೆ ಪರೀಕ್ಷೆ ಮಾಡುತ್ತಾನೆ" ಎಂದು ಅಂದುಕೊಳ್ಳುವವರೇ ಬಹಳ ಜನ. ಅದನ್ನು ದೇವರಾಟ, ನಮ್ಮ ಹಣೆಬರಹ, ವಿಧಿಲಿಖಿತ ಎಂದು ಏನೇನೋ ವ್ಯಾಖ್ಯಾನವನ್ನು ನಾವು ಮಾಡುತ್ತಿರುತ್ತೇವೆ. ಅದನ್ನೇ ಮಾನ್ಯ ಗುಂಡಪ್ಪನವರು "ನರಪರೀಕ್ಷೆಯೇ ಬೊಮ್ಮನಾಶಯವೇ" ಎಂದು ಕೇಳುತ್ತಾ ನರರನ್ನು ಅವರವರ ಜೀವನದಲ್ಲಿ ಪರೀಕ್ಷಿಸುವುದೇ ಆ ಪರಮಾತ್ಮನ ಆಶಯವೋ? ಎಂದು ಪ್ರಸ್ತಾಪಿಸುತ್ತಾರೆ.

ಕೆಲವರಿಗೆ ಕೊರತೆಯ ಅಥವಾ ಆಧಿಕ್ಯದ ಸಮಸ್ಯೆ, ಹಣದ, ಆರೋಗ್ಯದ, ವೃತ್ತಿಯ, ಮಕ್ಕಳ ಓದು ವಿದ್ಯಾಭ್ಯಾಸದ, ಮಕ್ಕಳೇ ಇಲ್ಲದ, ಅಕ್ಕ ಪಕ್ಕದ ಜನರ, ಪ್ರೇಮದ, ದಾಂಪತ್ಯದ, ಹೀಗೆ ಎಲ್ಲರಿಗೂ ಯಾವುದೋ ಒಂದು ರೀತಿಯ ಸಮಸ್ಯೆ ಇದೆ. ಇದು ಪ್ರಪಂಚದಲ್ಲಿರುವ ಎಲ್ಲ ಮನುಷ್ಯರಿಗೂ ಅನ್ವಯವಾಗುತ್ತದೆ. ಸಮಸ್ಯೆಗಳಿಲ್ಲದವರು ಈ ಪ್ರಪಂಚದಲ್ಲೇ ಅತೀ ವಿರಳ, ಆ ಪರಮಾತ್ಮನಿಗೂ ಇಷ್ಟು ಜೀವರಾಶಿಗಳು ಮತ್ತು ಇಡೀ ಜಗತ್ತಿನ ನಿಯಮವನ್ನು ಪಾಲಿಸುವುದೇ ಕಷ್ಟವೆನಿಸಬಹುದು. ಪ್ರತಿ ನಿಯಮಕ್ಕೂ ಒಂದು ಅಪವಾದವಿರುವಂತೆ, ಎಲ್ಲೋ ಕೋಟಿಗೊಬ್ಬನಿಗೆ ಯಾವ ಸಮಸ್ಯೆಯೂ ಇಲ್ಲದಂತೆ ಇರಬಹುದು. "ಇರಬಹುದು' ಎಂದೆ. ಎಲ್ಲವನ್ನೂ ಆ ಪರಮಾತ್ಮನೇ ಸೃಜಿಸುವವನು ಎಂಬುವುದನ್ನು ಒಪ್ಪಿಕೊಂಡರೆ, ಈ ರೀತಿಯ ಸಮಸ್ಯೆಗಳನ್ನು ಕೊಟ್ಟು ಆ ಪರಮಾತ್ಮ ಮನುಷ್ಯರನ್ನು ಪರೀಕ್ಷಿಸುವುದೇ ಆಶಯವೇನು? ಈ ಸಮಸ್ಯೆಗಳಿಗೆ ಕೊನೆಯಾವುದು? ಎಂದು ಗುಂಡಪ್ಪನವರು ಕೇಳುತ್ತಾರೆ.

ಹಾಗೆ ಸಮಸ್ಯೆ ಇರುವವರೆಲ್ಲರೂ ತಮ್ಮ ತಮ್ಮ ಸಮಸ್ಯೆಗಳಿಗೆ ಕಾರಣವನ್ನೋ ಅಥವಾ ಪರಿಹಾರವನ್ನೂ ಕಂಡುಕೊಳ್ಳಲು ಪ್ರಯತ್ನಿಸುತ್ತಾರೆ. ತೃಪ್ತಿ ಇಲ್ಲದವರಿಗೆ, ಒಂದು ಸಮಸ್ಯೆ ಪರಿಹಾರವಾದರೆ ಇನ್ನೊಂದು ಉದ್ಭವವಾಗುತ್ತದೆ. ನಮ್ಮ ಅರಿವಿಗೆ ಬಾರದ ಕಾರಣಗಳಿಗಾಗಿ ನಾವು ಏನನ್ನಾದರೂ ಅನುಭವಿಸುತ್ತೇವೆ ಅದನ್ನು ತಿಳಿದುಕೊಳ್ಳಲು ಮತ್ತು ಪರಿಹಾರ ಕಂಡುಕೊಳ್ಳಲು ನಮಗಿಂತ ಅಧಿಕವಾಗಿ ತಿಳಿದವರೆನಿಸಿಕೊಂಡವರಲ್ಲಿ, ಸಂದೇಹ ನಿವಾರಣೆಗೋ ಅಥವಾ ಸೂಕ್ತ ಪರಿಹಾರಕ್ಕಾಗಿಯೋ ಹೋಗುವುದು ಸಹಜ. ಆದರೆ ಇಂದಿಗೂ

ಈ ಜೀವನದಲ್ಲಿ ನಮಗೆ ನಡೆದ ವಿಷಯಗಳ ವಿಶ್ಲೇಷಣೆಯನ್ನು ಕರಾರುವಾಕ್ಕಾಗಿ ಹೇಳಿದವರಾಗಲೀ ಅಥವಾ ಸತ್ಯವನ್ನು ಅರ್ಥಮಾಡಿಕೊಂಡವರಾಗಲೀ ಇಲ್ಲ. ಆದರೆ ಕೇವಲ ಊಹೆಯಿಂದ ಮತ್ತು ತಮ್ಮ ವಾಕ್ಚಾತುರ್ಯದಿಂದ ಜನರನ್ನು ನಂಬಿಸುವುದೋ ಅಥವಾ ತೋರಿಕೆಯ ಶಾಸ್ತ್ರಗಳನ್ನು ಹೇಳಿ ಉಪಾಯವನ್ನು ಸೂಚಿಸುವುದೋ ಮಾಡುತ್ತಾರೆ. ಅದನ್ನು ಕೇಳಿದ ನಮ್ಮ "ಸಮಸ್ಯಾಪ್ರಾಣಿ" ಒಂದು ಮಾನಸಿಕ ನೆಮ್ಮದಿಯನ್ನು ಪಡೆದು ಅದನ್ನು ಪಾಲಿಸುವುದೋ ಅಥವಾ ಒಂದು ತಾತ್ಕಾಲಿಕ ಸಾಂತ್ವನವನ್ನು ಕಂಡುಕೊಳ್ಳುವುದೋ ನಡೆಯುತ್ತದೆ. ಅಂದರೆ ನಮ್ಮ ಸಮಸ್ಯೆಗಳು ಅರ್ಥವೇ ಆಗದ ಮತ್ತು ಸತ್ಯದ ಆಧಾರದ ಮೇಲೆ ನಮಗೆ ಸೂಕ್ತ ಮಾರ್ಗದರ್ಶನ ಮಾಡಲಾಗದ ವ್ಯಕ್ತಿಯನ್ನು ನಾವು "ಗುರು" ಎಂದು ಹೇಗೆ ಒಪ್ಪಿಕೊಳ್ಳುವುದು ಎಂದು ಮಾನ್ಯ ಗುಂಡಪ್ಪನವರು ಪ್ರಶ್ನಿಸುತ್ತಾರೆ.

ಏನು ಮಾಡಬೇಕು ಎನ್ನುವುದೇ ಒಂದು 'ಸಮಸ್ಯೆ'. ಹುಟ್ಟಿಯಾಗಿದೆ, ಸಾಯುವತನಕ ಕಷ್ಟವೋ ನಿಷ್ಟೂರವೋ ಅನುಭವಿಸಲೇ ಬೇಕು. ನಮಗೆ ಈ ಜೀವನದಲ್ಲಿ ನಡೆಯುವ ಗತಿ ವಿಧಿಗಳು ಸಂಪೂರ್ಣವಾಗಿ "ಏಕೆ ಹೀಗೆ ನಡೆಯುತ್ತದೆ" ಎಂದು ಅರ್ಥವಾಗುವುದೇ ಇಲ್ಲ. ನಮಗೆ ಅರ್ಥವಾಗದ ವಿಷಯವಾದ್ದರಿಂದ ಗತ್ಯಂತರವಿಲ್ಲದೆ ಬೇರೆ ಏನನ್ನೂ ನಂಬಬೇಕು, ಅನ್ಯ ದಾರಿಯಿಲ್ಲ. ಈ ಜಗತ್ತು ಮತ್ತು ಅದರಲ್ಲಿ ನಮ್ಮಂತಹ ಪಾತ್ರಧಾರಿಗಳ ನಡುವೆ ನಡೆಯುವ ನಾಟಕವೆಲ್ಲ, ಆ ಪರಮಾತ್ಮನ ಇಚ್ಛೆಯಂತೆ ನಡೆಯುತ್ತದೆ ಎನ್ನುವುದನ್ನು ಒಪ್ಪುವುದಾದರೆ, ಆ ದೇವರನ್ನು ನಂಬಬೇಕು. "ಪರೀಕ್ಷೆಯೋ ವಿಧಿಲಿಖಿತವೋ" ಅನುಭವಿಸಬೇಕು. ಏಕೆಂದರೆ ಬೇರೆ ದಾರಿ ಅಥವಾ ಪರಿಹಾರ ಇಲ್ಲ ಅಥವಾ ಇದ್ದರೂ ನಮಗೆ ಗೊತ್ತಿಲ್ಲ. ಇದನ್ನು ನಿವಾರಿಸಲು ಸಾಧ್ಯವಾಗದಾಗ ಆ ದೇವರನ್ನು ನಂಬಿ ಬಂದದ್ದನ್ನೆಲ್ಲಾ ಅನುಭವಿಸುವುದು, ನೆಮ್ಮದಿ. ಮಾಡುವ ಕೆಲಸವನ್ನು ನಿರ್ವಂಚನೆಯಿಂದ ಮಾಡುತ್ತಾ, ಎಲ್ಲವೂ ಆ ಪರಮಾತ್ಮನ ಇಚ್ಛೆಯಂತೆ ನಡೆಯುತ್ತದೆ ಎಂದು ಆ "ವಿಚಿತ್ರಕೆ" ಶರಣಾದರೆ ಸುಖ, ಶಾಂತಿ ಮತ್ತು ನೆಮ್ಮದಿ. ನಂಬದೆ ತೊಳಲಿ ಬಳಲುವುದೋ, ನಂಬಿ ಆನಂದಿಸುವುದೋ ನಮ್ಮ ಕೈಯಲ್ಲೇ ಇದೆ.

# ಬ್ರಹ್ಮವಸ್ತು ಊಸರವಳ್ಳಿಯೇ 34-38

**ಮುಕ್ತಕ-34** **ಎಷ್ಟು ಚಿಂತಿಸಿದೊಡಂ ಶಂಕೆಯನೆ ಬೆಳೆಸುವೀ |**

**ಸೃಷ್ಟಿಯಲಿ ತತ್ತ್ವವೆಲ್ಲಿಯೋ ಬೆದಕಿ ನರನು ||**

**ಕಷ್ಟಪಡುತಿರಲೆನುವುದೇ ಬ್ರಹ್ಮ ವಿಧಿಯೇನೋ! |**

**ಅಷ್ಟೇ ನಮ್ಮಯ ಪಾಡು-ಮಂಕುತಿಮ್ಮ ||**

ಚಿಂತಿಸಿದೊಡಂ=ಚಿಂತಿಸಿ+ದೊಡಂ,ತತ್ವವೆಲ್ಲಿಯೋ=ತತ್ವವು+ಎಲ್ಲಿಯೋ,

ಕಷ್ಟಪಡುತಿರಲೆನುವುದೇ=ಕಷ್ಟ+ಪಡುತಿರಲಿ+ಎನುವುದೇ

ಚಿಂತಿಸಿದೊಡಂ=ಚಿಂತಿಸಿದರೂ, ಶಂಕೆಯನು=ಸಂದೇಹವನ್ನು, ಬೆಳೆಸುವೀ=ಅಧಿಕವಾಗಿಸುವ





ಈ ಜಗತ್ತಿನ ಸೃಷ್ಟಿಯ ಬಗ್ಗೆ ಎಷ್ಟು ಚಿಂತಿಸಿದರೂ ನಿವಾರಣೆಯಾಗದ ಅನುಮಾನಗಳು, ಸಂದೇಹಗಳು ಹಾಗೆ ಉಳಿದಿವೆ. ಈ ಸೃಷ್ಟಿಯ ರಹಸ್ಯವನ್ನು ಭೇಧಿಸುವುದಕ್ಕಾಗಿ, ತತ್ವಗಳ ಹುಡುಕಿ, ತಡಕಿ ಕಷ್ಟಪಡುವುದೇ ಮಾನವರಿಗೆ ಆ ಪರಮಾತ್ಮ ಬರೆದ ಹಣೆಬರಹವೋ, ಇಷ್ಟೇಯೇ? ನಮ್ಮ ಪಾಡು ಎಂದು ಪ್ರಸ್ತಾಪಿಸುತ್ತಾರೆ ಮಾನ್ಯ ಗುಂಡಪ್ಪನವರು.

ಗಾಳಿ ಹೇಗೆ ಬೀಸುತ್ತದೆ, ಮಳೆ ಹೇಗೆ ಬೀಳುತ್ತದೆ, ಬೆಂಕಿ ಏಕೆ ಸುಡುತ್ತದೆ, ಸೂರ್ಯನಾರು, ಚಂದ್ರನಾರು ಈ ಗ್ರಹಗಳೇನು?? ನಕ್ಷತ್ರಗಳೇನು? ಇಡೀ ಸೃಷ್ಟಿಯಲ್ಲಿ ಇಷ್ಟೊಂದು ಬಗೆ ಏಕೆ? ಹುಟ್ಟು ಎಂದರೆ ಏನು? ಯಾವುದರ ಹುಟ್ಟು? ಸಾವು ಎಂದರೇನು? ಸಾವಿನ ನಂತರ ಏನು? ಕೋಟಿ ಕೋಟಿ ವೈವಿಧ್ಯತೆಯನ್ನು ಹೊಂದಿರುವ ಈ ಜಗತ್ತಿನ ಸೃಷ್ಟಿಯ ಉದ್ದೇಶವೇನು? ಸೃಷ್ಟಿಯು ಹೀಗೆ ಏಕೆ ಇದೆ? ಇದರ ಹಿಂದಿನ ಶಕ್ತಿ ಯಾವುದು? ಅದರ ಸ್ವರೂಪವೇನು? ಇದು ಹೀಗಿರಬಹುದೇ ಅಥವಾ ಹಾಗಿರಬಹುದೇ? ಹೀಗೆ ಮಾನವನಲ್ಲಿ ವಿಚಾರ ಶಕ್ತಿ ಮೂಡಿದಾಗಿನಿಂದ ಇಂದಿನವರೆಗೆ ಹತ್ತು ಹಲವಾರು ಸಾವಿರಾರು ಪ್ರಶ್ನೆಗಳು ಮನುಷ್ಯರನ್ನು ಕಾಡಿದೆ. ಪ್ರಾಣಿಗಳನ್ನೂ ಕಾಡುತ್ತದೆಯೋ ಏನೋ! ನಮಗೆ ಗೊತ್ತಿಲ್ಲ.

ಈ ಸೃಷ್ಟಿಯನ್ನು ಪರಮಾತ್ಮನ ಲೀಲಾ ವಿನೋದವೆಂದರು. ಇದು ಅವನ ಸಂಕಲ್ಪದಿಂದ ಆದದ್ದು ಎಂದರು. ಆ ಸಂಕಲ್ಪಕ್ಕೆ ಕಾರಣವನ್ನು ಬೆದಕಿ ಬೆದಕಿ, ಅವರವರಿಗೆ ಏನೇನು ತೋಚಿತೋ ಅದನ್ನೇ ಒಂದು ಸಿದ್ಧಾಂತದ ರೂಪದಲ್ಲಿ ಪ್ರತಿಪಾದಿಸಿದರು. ಅದಕ್ಕೊಂದು ಕ್ರಮವನ್ನು ವಿವರಿಸಿದರು. "ತಸ್ಮಾದ್ವಾ ಏತಸ್ಮಾದಾತ್ಮನ ಆಕಾಶಃ ಸಂಭೂತಃ

ಆಕಾಶಾದ್ವಾಯುಃ ವಾಯೋರಗ್ನಿ ಅಗ್ನಿರಾಪಃ ಅದ್ಭ್ಯಃ ಪೃಥಿವೀ, ಪ್ರಥಿವ್ಯಾ ಓಷದಯಃ ಓಷದೀಭ್ಯೋನ್ನಂ, ಅನ್ನಾತ್ ಪುರುಷಃ" ಹೀಗೆ ಆತ್ಮನಿಂದ ಆಕಾಶ, ಆಕಾಶದಿಂದ ವಾಯು, ವಾಯುವಿನಿಂದ ಅಗ್ನಿ, ಅಗ್ನಿಯಿಂದ ನೀರು, ನೀರಿನಿಂದ ಪೃಥ್ವಿ, ಪೃಥ್ವಿಯಿಂದ ಗಿಡಮರಗಳು, ಗಿಡಮರಗಳಿಂದ ಆಹಾರ, ಆಹಾರದಿಂದ ಶಕ್ತಿ ಉಂಟಾಯಿತು ಎಂದು ಒಂದು ಕ್ರಮವಾದ ಸೃಷ್ಟಿಯ ಪ್ರಕ್ರಿಯೆಯನ್ನು ಹೇಳುತ್ತಾರೆ. ಬಹಳ ವೈಜ್ಞಾನಿಕವಾಗಿ ಕಾಣುತ್ತದೆ. ನಮ್ಮ ಅನುಭವಕ್ಕೆ ಹತ್ತಿರವಾಗಿ ಕಾಣುತ್ತದೆ. ಆದರೆ ಇದನ್ನು ಎಲ್ಲರೂ ಒಪ್ಪುವುದಿಲ್ಲವೇ? ಹಾಗಾಗಿ ಇದು ಸರ್ವ ಮಾನ್ಯವಾಗಿಲ್ಲ. ಬೇರೇನೋ ಇರಬೇಕೆಂಬ ಹುಡುಕಾಟ ನಡೆದೇ ಇರುತ್ತದೆ. ಈ ರೀತಿ ಹುಡುಕಾಡುವುದೇ ಮಾನವನ ಹಣೆ ಬರಹವೋ? ಎಂದು ಶ್ರೀ ಗುಂಡಪ್ಪನವರು ಕೇಳುತ್ತಾರೆ.

ನಮಗೆ ಯಾವುದೋ ತಿಳಿದಿಲ್ಲವೆಂದು ಇಟ್ಟುಕೊಳ್ಳೋಣ. ಆಗ ಯಾರೋ ಒಬ್ಬರು ತಮ್ಮ ಆತ್ಮವಿಶ್ವಾಸದಿಂದ ಮತ್ತು ವಾಗ್ಝರಿಯಿಂದ ಹೇಳಿದ ಮಾತುಗಳನ್ನು ನಂಬುವುದು ನಮ್ಮ ಪರಿಪಾಠ. ಏಕೆಂದರೆ ಮಹಾಸಾಗರದಲ್ಲಿ ಈಜಲು ಬಾರದವನಿಗೆ ಒಂದು ಹುಲ್ಲು ಕಡ್ಡಿಯನ್ನಾದರೂ ಸಹ ಹಿಡಿದುಕೊಳ್ಳಲು ಪ್ರಯತ್ನಪಡುತ್ತಾನೆ ಅಲ್ಲವೆ. ಹಾಗಿದೆ ನಮ್ಮ ಸ್ಥಿತಿಯೂ ಕೂಡ. ದೇಶ, ಕಾಲ, ಪ್ರದೇಶಗಳಿಗೆ ಅನುಗುಣವಾಗಿ ಆಯಾ ಸಮಯದಲ್ಲಿ ಯಾರು ಯಾರು ಏನೇನನ್ನು ಹೇಳಿದರೋ ಅದೆಲ್ಲ ಬೇರೆ ಬೇರೆ ತತ್ವಗಳಾಗಿ ಪ್ರತಿಪಾದಿಸಲ್ಪಟ್ಟು ಬೇರೆ ಬೇರೆ ಸಿದ್ಧಾಂತಗಳು ಆಗಿವೆ. ಅಂದರೆ ಆಂತರ್ಯದಲ್ಲಿ ಎಲ್ಲ ಸಿದ್ಧಾಂತಗಳೂ ಹೇಳುವುದು ಒಂದೇ ಸತ್ಯವನ್ನಾದರೂ, ಹೇಳುವ ರೀತಿ ಬೇರೆ ಆದ್ದರಿಂದ ಮತ್ತು ಅದರ ಬಾಹ್ಯ ರೂಪ ಬೇರೆ ಆದ್ದರಿಂದ "ಅದು ಮತ್ತು ಇದು ಬೇರೆ





ಬೇರೆ" ಎನ್ನುವ ರೀತಿಯಲ್ಲಿ ನೋಡಲಾಗಿದೆ. ಹಾಗೆ ಬಂದುದೇ ಅನೇಕಾನೇಕ ಸಿದ್ಧಾಂತಗಳು, ಅದ್ವೈತ, ದ್ವೈತ, ವಿಶಿಷ್ಟಾದ್ವೈತ, ಶೈವ, ವೈಷ್ಣವ, ಬೌದ್ಧ, ಜೈನ, ಪಾರಸೀಕ, ಕ್ರೈಸ್ತ, ಇಸ್ಲಾಮಿಕ ಹೀಗೆ ಹತ್ತು ಹಲವಾರು ಮತಗಳು ಬೇರೆ ಬೇರೆ ರೀತಿಯಲ್ಲಿ ಬೇರೆ ಬೇರೆ ರೂಪದಲ್ಲಿ ಬೇರೆ ಬೇರೆ ಸಮಯದಲ್ಲಿ ಪ್ರತಿಸಾದಿಸಿದ ತತ್ವಗಳು ಮೂಲದಲ್ಲಿ ಒಂದೇ ಆದರೂ ಹೊರಗೆ ಭಿನ್ನ ಭಿನ್ನವಾಗಿ ಕಂಡು, ಜನರ "ಇದು ಸರಿಯೋ ಅಥವಾ ಅದು ಸರಿಯೋ"

ಎನ್ನುವ ಸಂದೇಹಗಳಿಗೆ ಕಾರಣವಾಗುತ್ತದೆ. ಒಂದು ತತ್ವ ಎಲ್ಲರಿಗೂ ಸಮಾನವಾಗಿ ಅರ್ಥವಾಗುವಂತೆ ಇಲ್ಲದೆ, ಜನರು ಈ ಸೃಷ್ಟಿಯನ್ನು ಅರ್ಥೈಸಿಕೊಳ್ಳಲು ಪರದಾಡುತ್ತಿದ್ದಾರೆ ಎಂದು ಈ ಮುಕ್ತಕದ ಭಾವ.

ಒಂದು ಶಕ್ತಿ ಈ ಸೃಷ್ಟಿಯ ಮೂಲ. ಅದರ ರೂಪಗಳು ಹಲವಾರು. ನಾವು ರೂಪಗಳನ್ನು ಬಿಡುವ, ನಾಮಗಳನ್ನು ಬಿಡುವ, ಭೇದಗಳನ್ನು ಬಿಡುವ, ಪ್ರಭೇದಗಳನ್ನು ಬಿಡುವ, ವಿದ್ಯುತ್ ತಂತಿಯಲ್ಲಿ ಹರಿಯುವ ವಿದ್ಯುತ್ ಬೇರೆ ಬೇರೆ ಸಾಧನಗಳ ಮೂಲಕ ಬೇರೆ ಬೇರೆ ಕೆಲಸಗಳಿಗಾಗಿ ಉಪಯೋಗಿಸಿದರೂ ತಾನು ಒಂದೇ ರೀತಿ ಇದ್ದಂತೆ ನಮ್ಮ ನಿಮ್ಮಲ್ಲಿ ಮತ್ತು ಎಲ್ಲ ಪ್ರಾಣಿಗಳಲ್ಲೂ ಏಕ ರೂಪದಲ್ಲಿ ಚೇತನಾ ಸ್ವರೂಪದಲ್ಲಿರುವ ಆ ಪರಮಾತ್ಮ ಶಕ್ತಿಯನ್ನು ನಾವು ಈ ಜಗತ್ತಿನಲ್ಲಿ ನಮ್ಮ ಅಸ್ಥಿತ್ವಕ್ಕೆ ಕಾರಣವೆಂದು ಸ್ಮರಿಸಿ, ನಮಿಸಿ, ಕೃತಜ್ಞತೆಯನ್ನು ಸಲ್ಲಿಸುತ್ತಾ, ನಮ್ಮ ನಮ್ಮಲ್ಲಿರುವ ಭೇದಗಳನ್ನು ಅಳಿಸುವ ಪ್ರಯತ್ನವನ್ನು ಮಾಡೋಣವೆ?

**ಮುಕ್ತಕ-35**

**ಇರಬಹುದು; ಚಿರಕಾಲ ಬೊಮ್ಮ ಚಿಂತಿಸಿ ದುಡಿದು ।**
**ನಿರವಿಸಿಹ ವಿಶ್ವಚಿತ್ರವ ಮರ್ತ್ಯನರನು ।**
**ಅರಿತೆನಾನೆನ್ನುವಂತಾಗೆ ಕೃತಿಕೌಶಲದ ।**
**ಹಿರಿಮೆಗದು ಕುಂದಲ್ತೆ?-ಮಂಕುತಿಮ್ಮ ॥**

ಅರಿತೆನಾನೆನ್ನುವಂತಾಗೆ=ಅರಿತೆ+ನಾನು+ಎನ್ನುವಂತೆ+ಆಗೆ, ಹಿರಿಮೆಗದು=ಹಿರಿಮೆಗೆ+ಅದು, ಬೊಮ್ಮ=ಪರಬ್ರಹ್ಮ, ಪರಮಾತ್ಮ, ನಿರವಿಸಿಹ=ನಿರ್ಮಿಸಿರುವ, ವಿಶ್ವಚಿತ್ರವ=ಈ ಜಗತ್ತಿನ ರಹಸ್ಯವನ್ನು, ಮರ್ತ್ಯನರನು=ಮರಣವನ್ನು ಹೊಂದುವ ಮನುಷ್ಯನು, ಅರಿತೆನಾನೆನ್ನುವಂತಾಗ=ನಾನು ಅರಿತಿದ್ದೇನೆ. ಎನ್ನುವಂತಾದರೆ, ಕೃತಿಕೌಶಲದ=ಕುಶಲತೆಯಿಂದ ಮಾಡಿದ ಈ ಕೃತಿಯ (ಜಗತ್ತು), ಹಿರಿಮೆ=ಹೆಗ್ಗಳಿಕೆ, ಕುಂದಲ್ತೆ=ಕುಂದಲ್ಲವೇ?

ಬಹಳ ಕಾಲ ಯೋಚನೆ ಮಾಡಿ ಶ್ರಮಪಟ್ಟು ಆ ಪರಮಾತ್ಮ ಈ ಅದ್ಭುತವಾದ ಜಗತ್ತನ್ನು ನಿರ್ಮಿಸಿರುವಾಗ, ಕೆಲ ಕಾಲ ಬದುಕಿ ಸಾವನ್ನಪ್ಪುವ ಯಃಕಶ್ಚಿತ್ ಮಾನವನೆಂಬ ಪ್ರಾಣಿ ಇದರ ರಹಸ್ಯವನ್ನು ತಾನು ಅರಿತುಕೊಂಡು ಬಿಟ್ಟೆ" ಎಂದರೆ, ತನ್ನ ಹಿರಿಮೆ, ಶ್ರಮ ಮತ್ತು ಕುಶಲತೆಗಳಿಗೆ ಕುಂದು ಅಥವಾ ಕಳಂಕ ಬಂದಂತೆ ಆಗುತ್ತದೆ ಎಂದು, ಆ ಪರಮಾತ್ಮ, ಆ ಜಗತ್ತಿನ ರಹಸ್ಯಗಳನ್ನು ಸಂಪೂರ್ಣವಾಗಿ ಮಾನವರು ಅರಿತುಕೊಳ್ಳುವ ಶಕ್ತಿಯನ್ನು ಕೊಡಲಿಲ್ಲವೋ

ಏನೋ? ಎಂಬ ಕುಹಕವನ್ನಾಡುತ್ತಾ, ಒಂದು ವಿಡಂಬನಾತ್ಮಕವಾದ ವಿಚಾರಧಾರೆಯನ್ನು ನಮ್ಮ ಮುಂದಿಡುತ್ತಾ, ಎರಡು ವಿಚಾರಗಳನ್ನು ನಮಗೆ ತಿಳಿಸುತ್ತಾರೆ ಶ್ರೀ ಗುಂಡಪ್ಪನವರು.





ಒಂದು, ಈ ಜಗತ್ತಿನ ಸೃಷ್ಟಿಯ ವೈಶಾಲ್ಯತೆ ಮತ್ತು ಸುಂದರತೆ. ಎಲ್ಲವೂ ಸಮರ್ಪಕವಾಗಿ ಎಲ್ಲೆಲ್ಲಿ, ಹೇಗೆ, ಯಾವ ಪ್ರಮಾಣದಲ್ಲಿ ಇರಬೇಕೋ ಎಲ್ಲವೂ ಹಾಗೆ ಇದೆ ಈ ಸೃಷ್ಟಿ ಅದಕ್ಕೆ ನಮ್ಮ ದೇಹಗಳನ್ನೇ ತೆಗೆದುಕೊಳ್ಳೋಣ. ತಲೆ, ಮೆದುಳು, ಕಣ್ಣು, ಕಿವಿ, ಕತ್ತು, ಮೂಳೆಗಳು, ಚರ್ಮ, ಎಲ್ಲ ಅಂಗಾಂಗಗಳೂ ಸಹ ಒಂದಕ್ಕೊಂದು ಪೂರಕವಾಗಿ ಕೆಲಸಮಾಡುವಂತೆ ಎಷ್ಟು ಸುಂದರವಾಗಿದೆ. ಸೂರ್ಯ ಚಂದ್ರರು, ಎಲ್ಲ ಗ್ರಹಗಳು, ಅವುಗಳಲ್ಲಿನ ಪರಸ್ಪರ ಅಂತರ ಮತ್ತು ಆ ಅಂತರದಿಂದಾಗುವ ಋತುಮಾನಗಳು ಮತ್ತು ಋತುಮಾನ ಬದಲಾವಣೆಯ ಸಮಯಕ್ಕೆ ಸರಿಯಾಗಿ ಆಗಬೇಕಾದ ಬದಲಾವಣೆಗಳು ಬಹಳ ಸಮರ್ಪಕವಾಗೇ ಇದೆಯಲ್ಲ. ಇದು ಏಕೆ ಹೀಗೆ? ಹಾಗೆ ಯಾಕಿರಬಾರದು ಎಂದು ಪ್ರಶ್ನೆಯೇ ಉದ್ಭವವಾಗಬಾರದು, ಹಾಗಿದೆ ಆ ಪರಬ್ರಹ್ಮನ ಕುಶಲತೆ. ಹೀಗೇ ವರ್ಣಿಸುತ್ತಾ ಹೋದರೆ ಪದಗಳು ಮತ್ತು ಪುಟಗಳು ಸಾಲುವುದೇ ಇಲ್ಲ. ಅಷ್ಟು ಸಮರ್ಪಕ ಮತ್ತು ಪರಿಪೂರ್ಣ ಮತ್ತು ಅಷ್ಟು ಸುಂದರ.

ಮತ್ತೊಂದು ಕಡೆ ಇರುವುದು, ಮಾನವರ ಅಪರಿಪೂರ್ಣತೆ, ಅಸಹಾಯಕತೆ ಮತ್ತು ನ್ಯೂನತೆಗಳು. ನಮಗೆ ಯಾವುದೂ ಸಂಪೂರ್ಣ ಅರ್ಥವಾಗುವುದಿಲ್ಲ. ಯಾವುದನ್ನೂ ಸರಿಯಾದ ದಿಕ್ಕಿನಲ್ಲಿ ಯೋಚಿಸಲಾಗುವುದಿಲ್ಲ. ಎಲ್ಲವೂ ಅಯೋಮಯ. ದಿಕ್ಕು ತೋಚದ ಪರಿಸ್ಥಿತಿ. ನಮ್ಮ ಮಿತಿಗಳು ಹೇಗಿವೆ ಎಂದರೆ, ಕೆಲವರು ಯೋಚಿಸಲು ಅಸಮರ್ಥರು. ಕೆಲವರಿಗೆ ಯೋಚಿಸಲು ಸಮಯವಿಲ್ಲ. ಕೆಲವರಿಗೆ ಯೋಚಿಸುವುದು ಬೇಕಿಲ್ಲ.

ಕೆಲವರು ಪೂರ್ವಾಗ್ರಹ ಪೀಡಿತರು. ಕೆಲವರು ಯೋಚಿಸಲು ಇಷ್ಟಪಟ್ಟರೂ ಸಾಮರ್ಥ್ಯದ ಮಿತಿ ಇರುವವರು. ಅಂದರೆ ಒಂದು ಮಿತಿಗೆ ಮೀರಿ ಅವರು ಯೋಚಿಸಲಾರರು. ಕೆಲವರು ಅಹಂಕಾರದಿಂದ ಇಲ್ಲದ್ದನ್ನು ಇದೆಯೆಂದು ಕಲ್ಪಿಸುತ್ತಾ ತಮ್ಮ ವಾದವೇ ಸರಿಯಾದದ್ದು ಎಂದು ಮೊಂಡುವಾದ ಮಾಡುವವರು. ಹಾಗಾಗಿ ನಮಗೆ ಯಾವುದೂ ಅರ್ಥವಾಗುವುದಿಲ್ಲ. ಇದೊಂದು ಬಹಳ ವೈಶಾಲ್ಯವಿರುವ ಚಿತ್ರ. ಒಂದು ಕಡೆಯಿಂದ ಇನ್ನೊಂದು ಕಡೆಗೆ ನೋಡುವುದಕ್ಕೆ ನಮ್ಮ ಕಣ್ಣ ದೃಷ್ಟಿಯ ಹರಹು ಸಾಲದು. ಯಾವುದೋ ಒಂದು ಚೂರನ್ನು ಅರ್ಥಮಾಡಿಕೊಂಡಿದ್ದೇವೆ

ಎಂದುಕೊಳ್ಳುವಷ್ಟರಲ್ಲೇ, ಮತ್ತ್ಯಾವುದೋ ಹೊಸದೊಂದು ಆಯಾಮ ಕಾಣುತ್ತದೆ. ಹೀಗೆ ಅರ್ಥಮಾಡಿಕೊಳ್ಳುವ ಪ್ರಯತ್ನದಲ್ಲಿ ಇರುವಾಗಲೇ, ನಮ್ಮ ಇಹಲೋಕ ಯಾತ್ರೆ ಮುಗಿಯುತ್ತದೆ. ಮತ್ತೆ ಮೊದಲಿಂದ ಎಲ್ಲ ಶುರು. ಹಾಗಾಗಿ ಈ ಸೃಷ್ಟಿಯನ್ನು ಮನುಷ್ಯರಿಗೆ ಅರ್ಥವಾಗದ ರೀತಿಯಲ್ಲಿ ಅಥವಾ ಮನುಷ್ಯರಿಗೆ ಇದರ ರಹಸ್ಯ ಅರ್ಥವಾಗಬಾರದೆಂದು ಆ ಪರಮಾತ್ಮ ಈ ರೀತಿ ಸೃಷ್ಟಿಸಿದ್ದಾನೆಯೇ? ಎಂದು ಪ್ರಶ್ನೆ. ಹೆಚ್ಚು ಕ್ಷಮತೆ ಇರುವವರು ಇದನ್ನು ತಮ್ಮ ಧ್ಯಾನದಿಂದ ತಪಸ್ಸಿನಿಂದ ವೈಜ್ಞಾನಿಕ ಸಂಶೋಧನೆಗಳಿಂದ ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಿದ್ದಾರೆ.

ಆದರೆ ಅವರಿಗೆ ಸಿಕ್ಕ ಯಶಸ್ಸು ಕೇವಲ ಅಲ್ಪ ಮಾತ್ರ ಮತ್ತು ಆ ಯಶನ್ನೂ ಸಹ ತಾತ್ಕಾಲಿಕ, ನಮಗಿಂತ ಬಲವಂತನನ್ನು ಗೆಲ್ಲಲು ನಮಗೆ ಅವನಿಗಿಂತ ಅಧಿಕ ಶಕ್ತಿ ಬೇಕು. ಇಲ್ಲದಿದ್ದರೆ ಹೋರಾಡಲು ಹೋಗಬಾರದು. ಹೋದರೆ ಸೋಲು ಖಂಡಿತ. ಈ ಜಗತ್ತಿನ ಸೃಷ್ಟಿಯ ರಹಸ್ಯ ಮತ್ತು ರೂಪವನ್ನು ಅರ್ಥೈಸಿಕೊಳ್ಳಲು ಶಕ್ತಿಯಿಲ್ಲದೆ ಇರುವಾಗ ಆ ಪರಮ ಶಕ್ತಿಗೆ ಶರಣಾಗಿ ನೆಮ್ಮದಿಯಿಂದ ಇರಬಹುದಲ್ಲವೆ?





**ಮುಕ್ತಕ-36**

**ಎಲ್ಲೆಲಿಯುಂ ಮೋಹಸಂಭ್ರಾಂತಿಗಳ ಕವಿಸಿ |**
**ಸಲ್ಲದ ಕುಮಾರ್ಗದೊಳು ನಿನ್ನ ತಾಂ ನಡೆಸಿ ||**
**ಗೆಲ್ಲಲಿಲ್ಲಿವನಾ ಪರೀಕ್ಷೆಯೊಳಗೆಂದು ವಿಧಿ |**
**ಸೊಲ್ಲಿಪುದು ಸರಿಯೇನೋ? ಮಂಕುತಿಮ್ಮ ||**

ಗೆಲ್ಲಲಿಲ್ಲವನಾ=ಗೆಲ್ಲಲಿಲ್ಲ+ಅವನಾ, ಪರೀಕ್ಷೆಯೊಳಗೆಂದು=ಪರೀಕ್ಷೆಯೊಳಗೆ+ಎಂದು,

ಎಲ್ಲೆಲಿಯಿಯುಂ=ಎಲ್ಲೆಲ್ಲಿಯೂ, ಮೋಹ=ವ್ಯಾಮೋಹ, ಸಂಭ್ರಾಂತಿ=ಸಂಭ್ರಮ ಸಡಗರಕೂಡಿದ ಭಾವ, ಭ್ರಾಂತಿಯಿಂದ ಕೂಡಿದ. ಕವಿಸಿ=ಹರಡಿ, ವ್ಯಾಪಿಸಿ, ಸಲ್ಲದ=ಸರಿಯಲ್ಲದ, ಕುಮಾರ್ಗ=ಕೆಟ್ಟ ದಾರಿ, ಸೊಲ್ಲಿಪುದು=ಹೇಳುವುದು.

ಇಡೀ ಜಗತ್ತೇ ಒಂದು ಭ್ರಾಂತಿಯ ಉಂಡೆ. ಮಾನವನಿಗೆ ಯಾವುದೂ ಅರ್ಥವಾಗುವುದಿಲ್ಲ ಆದರೂ ಪ್ರಯತ್ನ ಮಾಡುತ್ತಾನೆ. ಅವನಿಗೆ ತನ್ನ ಅರಿವಿನ ಮಿತಿ ಉಂಟು. ಅಮಿತವಾದ ಜಗತ್ಸೃಷ್ಟಿಯ ರಹಸ್ಯವನ್ನು ಪರಿಮಿತ ಮತಿಯಿಂದ ಅರಿಯುವುದು ಹೇಗೆ? ಈ ಜಗತ್ತನ್ನು ತನ್ನ ಅಪರಿಮಿತ ಶಕ್ತಿಯಿಂದ ಅಗಾಧವಾಗಿ ಸೃಷ್ಟಿಸಿ, ಮಾನವರನ್ನು ಅಲ್ಪಮತಿಗಳನ್ನಾಗಿಸಿ, ಅವನು ಅರಿಯುವ ಪ್ರಯತ್ನದಲ್ಲಿ ಸೋತಾಗ, ಇವನು ಗೆಲ್ಲಲಿಲ್ಲ ಎಂದು ಹೇಳುವುದು ಆ ಪರಮಾತ್ಮನಿಗೆ ಸರಿಯೇ? ಎಂದು ಪ್ರಸ್ತಾಪಿಸುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಹಿಂದೆಯೇ ಹೇಳಿದಂತೆ, ಮಾನವನಲ್ಲಿ ವಿಚಾರ ಶಕ್ತಿ ಮೂಡಿದಂದಿನಿಂದ, ಈ ವಿಶ್ವದ ಗುಟ್ಟನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಪಡುತ್ತಲೇ ಇದ್ದಾನೆ. ಅವನಿಗೆ ಸಿಕ್ಕ ಸಫಲತೆ ಅಲ್ಪ. ಬದಲಿಗೆ ಆ ಪರತತ್ವವನ್ನು ಅರ್ಥೈಸುವ ಇವನ ಪ್ರಯತ್ನದಲ್ಲಿ ಕೇವಲ ಭ್ರಾಂತಿ, ಭ್ರಮೆಗಳನ್ನು ಬೆಳೆಸಿಕೊಂಡಿದ್ದಾನೆ. ಬಹಳಷ್ಟು ಜನ ತಮಗೆ ಕಂಡಂತೆ ಬೇರೆ ಬೇರೆ ಸಿದ್ಧಾಂತಗಳನ್ನು ಪ್ರತಿಪಾದಿಸಿದ್ದಾರೆ. ಒಬ್ಬರು ಹೇಳುವುದನ್ನು ಮತ್ತೊಬ್ಬರು ಒಪ್ಪುವುದಿಲ್ಲ. ಪರತತ್ವವನ್ನು ಅರಿಯದಿದ್ದರೂ ತಾವು ಅರಿತಿದ್ದೇವೆ ಎನ್ನುವ ಭ್ರಮೆಯಲ್ಲಿದ್ದಾರೆ. ತಮ್ಮ ವಾದವನ್ನು ದೃಢೀಕರಿಸಲು, ತಮ್ಮ ಮತವನ್ನು ಪ್ರತಿಷ್ಠಾಪಿಸಲು ಏನು ಬೇಕಾದರೂ ಮಾಡುತ್ತಾರೆ. ಅಹಂಕಾರವನ್ನು ಬೆಳೆಸಿಕೊಳ್ಳುತ್ತಾರೆ. ಮಠ ಕಟ್ಟುತ್ತಾರೆ. ಗುಂಪುಗಾರಿಕೆ ಮಾಡುತ್ತಾರೆ. ತಮ್ಮ ಅಹಂಕಾರವನ್ನು ಮತ್ತು ಆಧಿಪತ್ಯವನ್ನು ಸ್ಥಾಪಿಸಲು ಶತಪ್ರಯತ್ನ ಮಾಡುತ್ತಾರೆ. ಇದನ್ನೇ ಕುಮಾರ್ಗವೆನ್ನುತ್ತಾರೆ ಮಾನ್ಯ ಗುಂಡಪ್ಪನವರು.

ವ್ಯಕ್ತಿಗತವಾಗಿ ಎಲ್ಲ ಆತ್ಮಗಳೂ ಶುದ್ಧಾತ್ಮಗಳೇ. ಪರಮಾತ್ಮನಿಂದ ಹೊರಟು ಇಂದ್ರಿಯ ಸಹಿತವಾದ ದೇಹಧಾರಣೆ ಮಾಡಿದ ನಂತರ, ಪಂಚಭೂತಗಳ ಸಂಪರ್ಕಕ್ಕೆ ಬಂದೊಡನೆಯೇ ಎಲ್ಲ ರೀತಿಯ ಭ್ರಮೆ, ಭ್ರಾಂತಿಗಳನ್ನು ಬೆಳೆಸಿಕೊಳ್ಳುತ್ತದೆ. ಇಲ್ಲಿದ್ದೂ ಅಲ್ಲಿಗೆ ಹೋಗುವ ಪ್ರಯತ್ನವನ್ನು ಮಾಡುತ್ತದೆ. ಆ ಪ್ರಯತ್ನದ ಫಲ ಸ್ವರೂಪವೇ ಅವನ ಆಧ್ಯಾತ್ಮಿಕ ಪ್ರಯಾಣ. ಎಷ್ಟೊಂದು ಮತಗಳು ಎಷ್ಟೊಂದು ಧರ್ಮಗಳು. ಇಲ್ಲಿಂದ ಅಲ್ಲಿಗೆ, ಅಲ್ಲಿಂದ ಇಲ್ಲಿಗೆ ಇವನ ಹಾರಾಟ ನಿರಂತರ, ಯಾವುದರಲ್ಲೂ ದೃಢವಾದ ನಂಬಿಕೆ ವಿಶ್ವಾಸವಿಲ್ಲ. ದೂರದಲ್ಲಿರುವುದು ಇವನಿಗೆ ಹಿತವಾಗಿ ಕಾಣುತ್ತದೆ. ಈ ಹುಡುಕಾಟ ಬೆದಕಾಟದಲ್ಲಿ ಇವನು ಎಲ್ಲಿಯೂ ಸಲ್ಲ. ಕಡೆಗೊಂದು ದಿನ ಇವನ ದೇಹದ ಅಂತ್ಯ. ಮತ್ತೆ

ಮೊದಲಿನಿಂದ ಶುರು. ಅದೇ ಹುಡುಕಾಟ ಅದೇ ಬೆದಕಾಟ. ಇವನಿಗೆ ಆ ಪರಮಾತ್ಮನನ್ನು ಅರಿತುಕೊಳ್ಳಲು ಸಾಧ್ಯವೇ ಇಲ್ಲವೇನೋ ಎಂದು ಅನಿಸುತ್ತದೆ.





ಆ ಪರಮ ಶಕ್ತಿಯ ಸ್ವರೂಪವೂ ಹಾಗೆ ಇದೆ. ಇಂದು ಕಂಡಂತೆ ನಾಳೆ ಇಲ್ಲ. ಒಂದೇ ವಿಷಯಕ್ಕೆ ಹತ್ತು ಹಲವಾರು ಆಯಾಮಗಳು. ಯಾವುದನ್ನು ನಂಬುವುದು ಯಾವುದು ಸತ್ಯ ಎಂದು ಈ ಮನುಷ್ಯನ ಅಲ್ಪಮತಿಗೆ ಅರ್ಥವೇ ಆಗುವುದಿಲ್ಲ. ಹಾಗಾಗಿ ಇವನು ಆ ಪರಮಾತ್ಮನ ಪರೀಕ್ಷೆಯಲ್ಲಿ ಎಂದಿಗೂ ಗೆಲ್ಲಲಾರ. ಇವನನ್ನು ಸೋಲಿಸಿ, ನೋಡಿದೆಯಾ ನೀನು ಗೆಲ್ಲಲೇ ಇಲ್ಲ ಎಂದು ಆ ಪರಮಾತ್ಮ ಕುಹಕವಾಡುವುದು ಸರಿಯೇ? ಎಂದು ಮಾನ್ಯ ಗುಂಡಪ್ಪನವರು ಕೇಳುತ್ತಾರೆ.

ವಾಚಕರೆ, ಹೌದು ಆ ಪರಮಾತ್ಮನ ಸೃಷ್ಟಿ ವಿಚಿತ್ರ, ಅಗಾಧ, ಅನಂತ. ಒಂದು ಜನ್ಮದಲ್ಲಲ್ಲ ಜನ್ಮ ಜನ್ಮಾಂತರದಲ್ಲಿ ಇದನ್ನು ಅರ್ಥಮಾಡಿಕೊಳ್ಳುವುದು ಕಷ್ಟ. ಆದರೆ ಅಸಾಧ್ಯವಲ್ಲ. ಪ್ರತಿಯೊಬ್ಬರ ಆತ್ಮವೂ ಮೂಲ ಸ್ವರೂಪದಲ್ಲಿ ಶುದ್ಧ, ಇಂದ್ರಿಯಾಕರ್ಷಣೆಯ, ಅರಿಷಡ್ವರ್ಗಗಳ, ಸಂಪರ್ಕದಿಂದ ಧೂಳು ಆವರಿಸಿದೆ. ನಿರಂತರ ಪ್ರಯತ್ನದಿಂದ ಆ ಧೂಳನ್ನು ಒರೆಸಿದರೆ, ಸತ್ವ ಮತ್ತು ತತ್ವ ಎರಡೂ ನಿಚ್ಚಳವಾಗಿ ಪ್ರಕಟವಾಗಿ ಪ್ರತಿ ಜೀವಿಯೂ ಆ ಪರಮಾತ್ಮನನ್ನು ಅರಿತುಕೊಳ್ಳಲು ಸಾಧ್ಯವಾಗಬಹುದು. ಇಂತಹ ವಿಚಾರಗಳನ್ನೇ ಮನನ ಮಾಡುತ್ತಾ ನಾವು ಆ ಪರತತ್ವವನ್ನು ಅರಿಯುವ ಪ್ರಯತ್ನವನ್ನು ಮಾಡೋಣವೆ?

**ಮುಕ್ತಕ-37** **ಅವತರಿಸಿಹನು ಬೊಮ್ಮ ವಿಶ್ವದೇಹದೊಳೆನ್ನ |**
**ಅವನ ವೇಷಗಳೇಕೆ ಮಾರ್ಪಡುತಲಿಹವು? ||**
**ತವಕಪಡನೇತಕೋ ಕುರುಹ ತೋರಲು ನಮಗೆ |**
**ಅವಿತುಕೊಂಡಿಹುದೇಕೋ?-ಮಂಕುತಿಮ್ಮ ||**

ಅವತರಿಸಿಹನು=ಅವತರಿಸಿ+ಇಹನು,ವಿಶ್ವದೇಹದೊಳೆನ್ನ=ವಿಶ್ವದೇಹದೊಳು+ಎನ್ನ,

ವೇಷಗಳೇಕೆ=ವೇಷಗಳು+ಏಕೆ, ಮಾರ್ಪಡುತಲಿಹವು=ಮಾರ್ಪಡುತಲಿ+ಇಹವು,

ತವಕಪಡನೇತಕೋ=ತವಕ+ಪಡನು+ಏತಕೋ,

ಅವಿತುಕೊಂಡಿಹುದೇಕೋ=ಅವಿತು+ಕೊಂಡಿಹುದು+ಏಕೋ

ಅವತರಿಸಿಹನು=ಅವತಾರ ಎತ್ತಿಹನು, ಬೊಮ್ಮ=ಪರಬ್ರಹ್ಮ, ವಿಶ್ವದೇಹ=ವಿಶ್ವದಲ್ಲೆಲ್ಲ, ಎನ್ನೆ=ಎನಲು,

ತವಕ-ಆತುರ, ಕುರುಹ=ಗುರುತು.

ಈ ಜಗತ್ತನ್ನು ಆ ಪರಮಾತ್ಮನೇ ಸೃಷ್ಟಿಮಾಡಿದ. ಈ ಜಗತ್ತಿನಲ್ಲಿರುವ ಎಲ್ಲವನ್ನೂ ಆ ಪರಮಾತ್ಮನೇ ಸೃಷ್ಟಿಮಾಡಿದ ಮತ್ತು ಎಲ್ಲದರಲ್ಲೂ ಅವನೇ ಇರುವನೆಂದು ತತ್ವಜ್ಞಾನಿಗಳು ಹೇಳುತ್ತಾರೆ. ಎಲ್ಲವೂ ಅವನ ರೂಪವೇ ಎಂದು ಹೇಳುತ್ತಾರೆ. ಹಾಗಾದರೆ ಎಲ್ಲದರಲ್ಲೂ ಅವನೇ ಅವತರಿಸಿದ್ದಾನೆ ಎಂದಾದರೆ ಮತ್ತು ಪರಮಾತ್ಮ ನಿತ್ಯನೂ ಸತ್ಯನೂ ಆದಾಗ, ಈ ರೂಪಗಳ ಬದಲಾವಣೆ ಏಕೆ? ಎಲ್ಲ ರೂಪವೂ ಅವನೇ ಆದರೆ, ಅವನು ತನ್ನ ನಿಜ ರೂಪವನ್ನೇಕೆ ತೋರಿಸುವುದಿಲ್ಲ. ಏಕೆ ಅವಿತುಕೊಂಡಿದ್ದಾನೆ? ಎಂದು ಒಂದು ವಿಷಯವನ್ನು ಪ್ರಸ್ತಾಪಮಾಡುತ್ತಾರೆ, ಮಾನ್ಯ ಗುಂಡಪ್ಪನವರು.





ತೆಲುಗಿನ ಕವಿ, ಭಕ್ತ, ಶ್ರೀ ತಾಳ್ಳಪಾಕ ಅನ್ನಮಾಚಾರ್ಯರು, ತಮ್ಮ ಒಂದು ಹಾಡಿನಲ್ಲಿ ಅಂದರಿಲೋ ಪುಟ್ಟಿ ಅಂದರಿಲೋ ಚೇರಿ ಅಂದರಿ ರೂಪಮುಲು ಅಟು ತಾನೈ" ಎನ್ನುತ್ತಾರೆ. ಅಂದರೆ "ಎಲ್ಲರಲ್ಲೂ ಹುಟ್ಟಿ, ಎಲ್ಲರಲ್ಲೂ ಸೇರಿ ಎಲ್ಲರ ರೂಪವೂ ತಾನೇ ಆಗಿ" ಎಂದು ಆ ಪರಮಾತ್ಮನ ಸರ್ವವ್ಯಾಪಕತ್ವವನ್ನು ಕೊಂಡಾಡುತ್ತಾರೆ. ಅಣುವಿನಲ್ಲೂ ಬೃಹತ್ತಲ್ಲೂ, ಕೃಶದಲ್ಲೂ, ಸ್ಥೂಲದಲ್ಲೂ, ಗುಣದಲ್ಲೂ, ನಿರ್ಗುಣದಲ್ಲೂ ಹೀಗೆ ಎಲ್ಲದರಲ್ಲೂ ಚೇತನಾ ಸ್ವರೂಪನಾಗಿ ತಾನೇ ಇದ್ದರೂ ತನ್ನದೇ ಆದಂತಹ ಒಂದು ರೂಪವಿಲ್ಲದೆ ಎಲ್ಲ ರೂಪಗಳೂ ತಾನೇ ಆಗಿರುವ ಆ ಪರಮಾತ್ಮ ತನ್ನ ನಿಜ ರೂಪವನ್ನು ತೋರಲಾರನೇಕೆ ಎನ್ನುವುದೇ ಜಿಜ್ಞಾಸೆ.

ಇಡೀ ಜಗತ್ತೇ ಚೇತನ ಮತ್ತು ಜಡದಿಂದಾಗಿದೆ. ಇವೆರಡರ ಸಮ್ಮಿಳಿತ ರೂಪವೇ ಈ ಜಗತ್ತು ಮತ್ತು ಈ ಜಗತ್ತಿನಲ್ಲಿರುವ ಎಲ್ಲವೂ ಆ ಬೃಹತ್ ಚೇತನದಿಂದಲೇ ಬಂದಿದೆ ಎನ್ನುವ ಒಂದು ಸಿದ್ಧಾಂತವೂ ಇದೆ. "ಯತಃ ಸರ್ವಾಣಿ ಭೂತಾನಿ ಭವನ್ತ್ಯಾದಿ ಯುಗಾಗಮೆ. ಯಸ್ಮಿನ್ನಪ್ರಳಯಂ ಯಾಂತಿ ಪುನರೇವ ಯುಗಕ್ಷಯ" ಎನ್ನುವಂತೆ ಎಲ್ಲವೂ ಆ ಮಹಾನ್ ಚೇತನದಿಂದ ಬಂದು ಮತ್ತೆ ಆ ಮಹಾನ್ ಚೇತನಕ್ಕೆ ಸೇರಿಕೊಳ್ಳುತ್ತದೆ. ಈ ಪ್ರಕ್ರಿಯೆಯಲ್ಲಿ ರೂಪ ಬದಲಾವಣೆಯಾಗುತ್ತಾ ಇರುತ್ತದೆ. ಹೇಗೆ ಎಲ್ಲ ವಿದ್ಯುತ್ ಉಪಕರಣಗಳನ್ನೂ ಬೆಳಗುವ ವಿದ್ಯುತ್ ಕಣ್ಣಿಗೆ ಕಾಣದಿದ್ದರೂ ಮತ್ತು ಅದಕ್ಕೊಂದು ರೂಪವಿಲ್ಲದಿದ್ದರೂ ತಾನು ಬೆಳಗುವ ಉಪಕರಣದ ಮೂಲಕ ತನ್ನ ಅಸ್ತಿತ್ವವನ್ನು ತೋರುವಂತೆ, ಆ ಪರಮಾತ್ಮನೂ ಸಹ ತನಗೊಂದು ರೂಪವಿಲ್ಲದಿದ್ದರೂ ಈ ಜಗತ್ತಿನ ಎಲ್ಲ ವಸ್ತುಗಳಲ್ಲೂ, ಆ ವಸ್ತುವೇ ಆಗಿ ಪ್ರಕಟಗೊಂಡಿದ್ದಾನೆ ಎನ್ನುವುದು ಸಿದ್ಧಾಂತ. ರೂಪ ಕಣ್ಣಿಗೆ ಕಾಣದಿದ್ದರೂ ಆ ಚೇತನ ಅನುಭವಕ್ಕೆ ಬರುತ್ತದೆ, ಅನುಭವಿಸುವ ಮನವಿದ್ದರೆ. ವಾಚಕರೆ, ನಾವೂ ಸಹ ಅದನ್ನು ಅನುಭವಕ್ಕೆ ತಂದುಕೊಳ್ಳೋಣವೇ?

**ಮುಕ್ತಕ-38**

**ಬೇರೆಯಿಸಿ ನಿಮಿಷನಿಮಿಷಕಮೊಡಲಬಣ್ಣಗಳ |**
**ತೋರಿಪೂಸರವಳ್ಳಿಯಂತೇನು ಬೊಮ್ಮಂ? ||**
**ಪೂರ ಮೈದೋರೆನೆಂಬಾ ಕಪಟಿಯಂಶಾವ |**
**ತಾರದಿಂದಾರ್ಗೇನು?-ಮಂಕುತಿಮ್ಮ ||**

ನಿಮಿಷನಿಮಿಷಕಮೊಡಲಬಣ್ಣಗಳ=ನಿಮಿಷ+ನಿಮಿಷಕೆ+ಒಡಲ+ಬಣ್ಣಗಳ,
ತೋರಿಪೂಸರವಳ್ಳಿಯಂತೇನು=ತೋರಿಪ+ಊಸರವಳ್ಳಿಯಂತೆ+ಏನು+ಬೊಮ್ಮಂ,
ಮೈದೋರೆನೆಂಬಾ=ಮೈ+ತೋರೆನು+ಎಂಬ.
ಕಪಟಿಯಂಶಾವತಾರದಿಂದಾರ್ಗೇನು=ಕಪಟಿಯ+ಅಂಶಾವತಾರದಿಂದ+ಯಾರಿಗೆ+ಏನು?

ಬೇರೆಯಿಸಿ=ಬೇರೆಬೇರೆಯಾಗಿಸಿ, ಒಡಲ=ರೂಪದ, ತೋರಿಪ=ತೋರಿಸುವ, ಊಸರವಳ್ಳಿ=ಗೋಸುಂಬೆ, ಬೊಮ್ಮ=ಬ್ರಹ್ಮ, ಪೂರ=ಸಂಪೂರ್ಣ, ಮೈದೋರೆ=ರೂಪತೋರೆ.

ನಾನು ಈವರೆಗೆ ಹೇಳಿರುವುದೇನು ಎಂದು ಒಂದು ಬಾರಿ ನೋಡೋಣ. ಎಲ್ಲವೂ ಆ ಪರಮಾತ್ಮನಿಂದ ಆಗಿ ಅವನೇ ಎಲ್ಲ ರೂಪಗಳಲ್ಲಿಯೂ ಪ್ರಕಟವಾಗಿರುವ ಎಂದು ನಮ್ಮ ನಂಬಿಕೆ. ಈ ಪ್ರಪಂಚದಲ್ಲಿ ಇರುವ

ಎಲ್ಲವೂ ಆ ಪರಮಾತ್ಮನೇ, ತನ್ನ ಅಂಶದಿಂದ ಪ್ರಕಟವಾಗಿ(ಸಿ)ದ್ದಾನೆ ಎಂದು. ಹಾಗಾಗಿ ಯಾರು ಯಾರು ಏನೇನು ಎಂದು ಭಾವಿಸಿದರೆ ಹಾಗೆ ಅವರಿಗೆ ತೋರುವ ಆ ಪರಮಾತ್ಮ ವಸ್ತು ಏಕ ರೂಪದಲ್ಲಿ ಏಕೆ ಇಲ್ಲ? ಎಂದು ಈ ಮುಕ್ತಕದ ಹೂರಣ. ಘಳಿಗೆ ಘಳಿಗೆಗೆ ಬದಲಾಗುವ ಮನುಷ್ಯರ ಮನದ ಭಾವಕ್ಕೆ ತಕ್ಕಂತೆ ಬದಲಾಗುವ ಆ ಪರಮಾತ್ಮ ಸ್ವರೂಪವನ್ನು ಗುಂಡಪ್ಪನವರು, ಊಸರವಳ್ಳಿಯಂತೆ ಕ್ಷಣಕ್ಕೊಂದು ರೂಪವನ್ನು ಏಕೆ ತೋರುತ್ತಾನೆ ಈ ಪರಮಾತ್ಮ? ಆಗಾಗ ಅವನೆತ್ತುವ ಅಂಶಾವತಾರಗಳಿಂದ ಯಾರಿಗೆ ಏನು ಪ್ರಯೋಜನ? ತನ್ನ ನಿಜ ರೂಪವನ್ನೇ ತೋರಬಹುದಲ್ಲ ಎಂದು, ಪ್ರಸ್ತಾಪಿಸಿ, ಓದುಗರನ್ನು ಆ ಪರಮಾತ್ಮನ ನಿಜ ಸ್ವರೂಪವನ್ನು ಅರ್ಥಮಾಡಿಕೊಳ್ಳಲು ಪ್ರೇರೇಪಿಸುತ್ತಾರೆ.

ಒಂದು ಬಾರಿ ದೇವರನ್ನು ಕಾಣುವ ತವಕದಿಂದ ಸ್ವಾಮಿ ರಾಮತೀರ್ಥರ ಬಳಿ ಒಬ್ಬ ಬಂದ. ಆಗ ನಡೆದ ಸಂವಾದ ಹೀಗಿತ್ತು :

ವ್ಯಕ್ತಿ : "ಸ್ವಾಮಿ ನೀವು ದೇವರನ್ನು ನೋಡಿದ್ದೀರಂತೆ. ನನಗೂ ಆ ದೇವರನ್ನು ತೋರಿಸುತ್ತೀರಾ"

ಸ್ವಾಮಿ : "ಓಹೋ ಅದಕ್ಕೇನಂತೆ, ತೋರಿಸುತ್ತೇನೆ, ಹಾ! ಅವರ ಬಳಿ ಹೋದಾಗ, ನಿನ್ನ ಪರಿಚಯಮಾಡಿಕೊಡಬೇಕು. ಹಾಗಾಗಿ ನೀ ಯಾರೆಂದು ಹೇಳು?"

ವ್ಯಕ್ತಿ : "ರಾಜ ಗಜಪತಿ ರಾಜು"

ಸ್ವಾಮಿ : "ಅದು ನಿನ್ನ ಹೆಸರು, ನೀ ಯಾರು?"

ವ್ಯಕ್ತಿ : "ವಿಜಯನಗರ ಸಾಮ್ರ್ಯಾಜ್ಯದ ನಿರ್ವಾಹಕ"

ಸ್ವಾಮಿ : "ಅದು ನೀನಿರುವ ಹುದ್ದೆ, ಈ ಹಿಂದೆಯೂ ಆ ಹುದ್ದೆಯಲ್ಲಿ ಯಾರೋ ಇದ್ದರು. ಮುಂದೆಯೂ ಯಾರೋ ಇರುತ್ತಾರೆ, ನೀ ಯಾರು?"

ಹೀಗೇ ನಾಲ್ಕಾರು ಬಾರಿ ಸ್ವಾಮಿ "ನೀ ಯಾರು, ನೀ ಯಾರು" ಎಂದು ಕೇಳಿದಾಗ, ಆ ವ್ಯಕ್ತಿ ರೋಸಿ, "ನಾ ಏನೇ ಹೇಳಿದರೂ, ನೀ ಅದು ಅಲ್ಲ, ನೀ ಯಾರು? ಎನ್ನುತ್ತೀರಿ, ಹಾಗಾದರೆ ನಾ ಯಾರು" ಎಂದು ಕುಪಿತಗೊಂಡು ಕೇಳಿದ. ಅದಕ್ಕವರು ಅಲ್ಲಿ ಕುಳಿತುಕೋ. ನೀ ಯಾರೆಂದು ಯೋಚಿಸು, ನಿನಗೆ ನೀ ಯಾರೆಂದು ಅರಿವಾದಾಗ, ಆ ದೇವರು ನಿನಗೇ ಕಾಣುತ್ತಾನೆ, ನಾ ತೋರಿಸುವ ಅವಶ್ಯಕತೆಯೇ ಬರುವುದಿಲ್ಲ"ಎಂದರಂತೆ.

ಆ ಪರಮಾತ್ಮನಿಗೆ ಒಂದು ರೂಪವಿದ್ದಿದ್ದರೆ, ಪಾಪ ಅವನೂ ತೋರಿಸಿಯಾನು. ಎಲ್ಲ ರೂಪಗಳೂ ಅವನೇ ಆಗಿರುವಾಗ, ಒಂದು ರೂಪವನ್ನು ಹೇಗೆ ತೋರುವುದು. ಹಾಗಾಗಿ ವಾಚಕರೆ, ಶುದ್ಧ ಮನಸ್ಸಿನಿಂದ, ಅಹಂಕಾರವನ್ನು ತೊರೆದು, ಧ್ಯಾನದಿಂದ ಆ ಪರಮ ಶಕ್ತಿಯ ಸ್ವರೂಪವನ್ನು ಎಲ್ಲೆಲ್ಲೂ ಕಾಣಬಹುದು. ಈ





ರೀತಿಯ ಪ್ರೇರಣೆಯನ್ನು ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ ನಮಗೆ ನೀಡುತ್ತಾರೆ. ನಾವೂ ಸಹ, ಅಹಂಕಾರವನ್ನು ತೊರೆಯೋಣ. ನಮ್ಮ ಅಸ್ತಿತ್ವಕ್ಕೆ ಮೂಲವಾದ ಆ ಪರಮಾತ್ಮನನ್ನು ಭಾವಿಸೋಣವೇ?

# ವಿದ್ಯುಲ್ಲಹರಿಯೇ 39-43

**ಮುಕ್ತಕ-39** **ಪುಸಿಯ ನೀಂ ಹುಸಿಗೈದು ದಿಟವ ಕಾಣ್ಬವೊಲೆಸಗೆ |**

**ಮುಸುಕ ತಳೆದಿಹನು ಪರಬೊಮ್ಮನೆನ್ನುವೊಡೆ ||**

**ಒಸೆದೇತಕವನೀಯನೆಮಗೊಂದು ನಿಜ ಕುರುಹ|**

**ನಿಷೆಯೊಳುಡಕರಡವೊಲು?-ಮಂಕುತಿಮ್ಮ||**

ಕಾಣ್ಬಲೆಸಗೆ=ಕಾಣ್ಣ+ಒಲ್+ಎಸಗೆ, ಪರಬೊಮ್ಮನೆನ್ನುವೊಡೆ=ಪರಬೊಮ್ಮನು+ಎನ್ನುವೊಡೆ,

ಒಸದೇತಕವನೀಯನೆಮಗೊಂದು=ಒಸೆದು+ಏತಕೆ+ಆವನು+ಈಯನು+ಎಮಗೆ+ಒಂದು,

ನಿಷೆಯೊಳುಡಕರಡವೋಲು=ನಿಶೆಯ+ಒಳು+ಉಡುಕರದ+ಒಲು

ಪುಸಿಯ=ಸುಳ್ಳನ್ನು, ದಿಟವ=ನಿಜವನ್ನು, ಒಸಗೆ=ಸಹಾಯಮಾಡಲು, ಒಸೆದು=ದಯತೋರಿ,

ಉಡುಕರದ=ನಕ್ಷತ್ರದ.

ಸುಳ್ಳನ್ನು ನೀನು ಸುಳ್ಳು ಎಂದು ಅರಿತುಕೊಂಡು ಸತ್ಯವನ್ನು ಕಾಣಲು ನಿನಗೆ ಸಹಾಯ ಮಾಡುವವನಂತಾದರೆ, ಆ ಪರಮಾತ್ಮನು ಮರೆಯಾಗಿ ಮುಸುಕು ಹಾಕಿಕೊಂಡಂತೆ ಇರುವುದಾದರೆ, ಅವನು ನಮ್ಮ ಮೇಲೆ ಪ್ರಸನ್ನನಾಗಿ, ರಾತ್ರಿ ಹೊತ್ತು ನಕ್ಷತ್ರದ ಕಿರಣಗಳು ನಮಗೆ ದಾರಿ ತೋರುವಂತೆ, ಒಂದು ಗುರುತನ್ನು ತನ್ನ ಇರುವಿಕೆಯ ಕುರುಹಾಗಿ ತೋರಿಸಬಾರದೇನು? ಎನ್ನುತ್ತಾರೆ ಶ್ರೀ ಗುಂಡಪ್ಪನವರು ಈ ಮುಕ್ತಕದಲ್ಲಿ.

"ಜಗತ್ ಮಿಥ್ಯ"ವೆನ್ನುವ ಮಿಥ್ಯಾ ವಾದವನ್ನು ಒಪ್ಪುವುದಾದರೆ, ಜಗತ್ತು ಮಾಯೆ, ಮಿಥ್ಯೆಯಾದರೆ, ಸತ್ಯವಾವುದು ಎಂದು ನಾವು ಅರಿತುಕೊಳ್ಳಲು, ಪ್ರಯತ್ನಪಡುತ್ತೇವೆ. ಎಲ್ಲ ವೇದಾಂತಿಗಳೂ, ಸಿದ್ಧಾಂತಿಗಳೂ, ಸಾಧು ಸಂತರೂ ಎಲ್ಲರೂ ಅನಾದಿಕಾಲದಿಂದಲೂ ಆ ಪರಮ ಸತ್ಯವನ್ನು ಅರಿತುಕೊಳ್ಳಲು ಪ್ರಯತ್ನಪಟ್ಟು ತಮ್ಮ ಅರಿವನ್ನು ಪ್ರತಿಪಾದಿಸಿದ್ದಾರೆ. ಅದರ ಪ್ರತಿಫಲವೇ, ಎಲ್ಲ ಮತಗಳು ಮತ್ತು ವೇದಾಂತದ ಹಲವಾರು ಕವಲುಗಳು.

ಇಲ್ಲಿ ಸತ್ಯವೆಂದರೇನು? ಸುಳ್ಳೆಂದರೇನು? ಯಾವುದು ನಿತ್ಯವಲ್ಲವೋ, ಯಾವುದು ಕಾಲಕ್ರಮೇಣ ಬದಲಾಗುತ್ತದೋ, ಯಾವುದು ನಾಶವಾಗುತ್ತದೋ ಅದನ್ನು ಮಿಥ್ಯ, ಸುಳ್ಳು, ಎಂದರು. ಅದನ್ನೇ ಸತ್ಯವೆಂದು ನಂಬಿದರೆ, ಅದನ್ನು ಮಾಯೆ ಎಂದರು. ಆದರೆ, ಯಾವುದು ಸದಾಕಾಲ ಒಂದೇ ರೀತಿ ಇರುತ್ತದೋ ಅದನ್ನು ನಿತ್ಯವೆಂದರು, ಸತ್ಯವೆಂದರು. ಹಾಗಾದರೆ ನಾವು ಕಾಣುವುದೆಲ್ಲವೂ, ಬದಲಾಗುವುದೆಲ್ಲವೂ ಅಸತ್ಯವಾದರೆ ಮಿಥ್ಯವಾದರೆ ಸತ್ಯವಾವುದು? ಹೀಗೆ ನಾವು ಮಿಥ್ಯೆಯನ್ನು ಗುರುತಿಸಿ, ಸತ್ಯವನ್ನು ಅರಿತುಕೊಳ್ಳಲು, ಆ ಪರಮಾತ್ಮನೇ

ಸಹಾಯ ಮಾಡುವುದಾದರೆ, ಸತ್ಯವಾದ ತನ್ನ ನಿಜ ರೂಪವನ್ನು ನಮಗೆ ತೋರಿಸಲು ಯಾವುದಾದರೂ ಒಂದು ಕುರುಹನ್ನು ನೀಡಬಹುದಲ್ಲ? ಎಂದು ಪ್ರಸ್ತಾಪಿಸುತ್ತಾರೆ, ಮಾನ್ಯ ಗುಂಡಪ್ಪನವರು.





ಮನಸ್ಸು ಬುದ್ಧಿ ದೇಹ ಆತ್ಮಗಳು ಒಂದಾದಾಗ ಒಂದು ಜೀವಿಯ ಆವಿರ್ಭಾವ. ಜೀವವನ್ನು ಪ್ರಾಣವೆಂದೂ ಕರೆಯುತ್ತಾರೆ. ಒಂದು ಜೀವಿಯ ಪ್ರಾಣ, ಮನಸ್ಸು ಬುದ್ಧಿ ದೇಹವನ್ನು ಬಿಟ್ಟಾಗ, ಜೀವಿಯನ್ನು ಸತ್ತ (ಸತ್ತಿತೆಂದು)ನೆಂದು ಹೇಳುತ್ತಾರೆ. ಅಂದರೆ ಪ್ರಾಣ ಸಾಯುವುದಿಲ್ಲ, ಹೋಗುತ್ತದೆ. ಮನಸ್ಸು ಬುದ್ಧಿಗಳು, ದೇಹದಂತೆ ಇಲ್ಲವಾಗುತ್ತದೆಯಾದರೆ, ನಮ್ಮ ಅಸ್ತಿತ್ವದಲ್ಲಿ ಸತ್ಯವಾದದ್ದು ಈ ಪ್ರಾಣ ಅಥವಾ ಆತ್ಮವೊಂದೇ. ಈ ಆತ್ಮದ ಅರಿವನ್ನು ಪಡೆಯುವುದೇ ಸತ್ಯವನ್ನು ಅರಿಯುವ ದಾರಿ. ಇದು ನಮ್ಮ ಆಧ್ಯಾತ್ಮದ ಪ್ರತಿಪಾದನೆ.

ಮನಸ್ಸು ಬುದ್ಧಿ ದೇಹ ಆತ್ಮಗಳಿಗೆ ಒಂದೊಂದು ಮೂಲ ಉಂಟು. ಮನಸ್ಸು ಬುದ್ಧಿಗಳಿಗೆ ಮೂಲ ಪಂಚ ಭೂತಗಳು, ದೇಹಕ್ಕೆ ಈ ಭೂಮಿ ಮತ್ತು ಆತ್ಮಕ್ಕೆ ಆ ಪರಮಾತ್ಮ. ಆತ್ಮವು ಸತ್ಯವಾದರೆ, ಆ ಪರಮಾತ್ಮನೂ ಸತ್ಯವಲ್ಲವೇ. ಆತ್ಮ ಆ ಪರಮಾತ್ಮನಂತೆಯೇ ಸಾಕ್ಷೀ ಭೂತವಾಗಿ ಇದೆ. ಇದನ್ನರಿಯುವುದೇ ಆಧ್ಯಾತ್ಮದ ಮೂಲ ಗುರಿ. ಇದನ್ನರಿತವರಿಗೆ ಪರಮಾತ್ಮ ಸಾಕ್ಷಾತ್ಕಾರ. ಇದನ್ನು ಯಾರು ಬೇಕಾದರೂ ಸಾಧಿಸಬಹುದು. ಅದಕ್ಕೆ ಸಾಧನೆಯ ಅವಶ್ಯಕತೆಯುಂಟು ಅಷ್ಟೇ. ಅಂತಹ ಸಾಧನೆಯ ದಾರಿಯನ್ನು, ಸತ್ಯವನ್ನರಿಯುವ ಮಾರ್ಗವನ್ನು ನಮಗೆ ಆ ಪರಮಾತ್ಮ ಕರುಣಿಸಲಿ ಎಂದು ಬೇಡುವುದೇ ಈ ಮುಕ್ತಕದ ಮೂಲ ಆಂತರ್ಯ. ಇಂತಹ ಸಾಧನೆಗೆ ನಮ್ಮನ್ನು ನಾವು ಸಿದ್ಧಪಡಿಸಿಕೊಳ್ಳಲು, ಸರಿಯಾದ ಮಾರ್ಗವನ್ನು ನಾವೂ ಸಹ ಹುಡುಕೋಣವೇ?

**ಮುಕ್ತಕ-40**

**ನಿಶೆಯೊಳೇಂ ಕಾಣಬಾರನು ಹಗಲನೊಲ್ಲದೊಡೆ |**
**ಶಶಿರವಿಗಳವನ ಮನೆಕಿಟಕಿಯಾಗಿರರೇಂ? ||**
**ಮಸುಕುಬೆಳಕೊಂದಾದ ಸಂಜೆಮಂಜೇನವನು |**
**ಮಿಸುಕಿ ಸುಳಿಯುವ ಸಮಯ?-ಮಂಕುತಿಮ್ಮ ||**

ನಿಶೆಯೊಳೇಂ=ನಿಶೆಯೊಳು+ಏಂ, ಹಗಲನೊಲ್ಲದೊಡೆ=ಹಗಲನು+ಒಲ್ಲದೊಡೆ,

ಮಸುಕುಬೆಳಕೊಂದಾದ=ಮಸುಕು+ಬೆಳಕು+ಒಂದಾದ,

ಸಂಜೆಮಂಜೇನವನು=ಸಂಜೆ+ಮಂಜೇನು+ಅವನು.

ನಿಶೆಯೊಳು=ರಾತ್ರಿಯಲಿ, ಶಶಿರವಿಗಳು=ಸೂರ್ಯ ಚಂದ್ರರು, ಮಸುಕು=ಹಗಲು ರಾತ್ರಿಗಳೊಂದಾಗುವ ವೇಳೆ, ಮಂಜೇನು=ಕಂಡೂ ಕಾಣದ, ಮಿಸುಕಿ ಅಲೆದಾಡುವ

ಹಗಲಲ್ಲಿ ಕಾಣಬಾರದೆಂತಾದರೆ, ರಾತ್ರಿಯಲ್ಲಿ ಏಕೆ ಕಾಣುವುದಿಲ್ಲ ಆ ಪರಮಾತ್ಮ? ರವಿ ಚಂದ್ರರು ಅವನ ಮನೆಯ ಕಿಟಕಿಗಳೇನು? ಇತ್ತ ಹಗಲೂ ಅಲ್ಲದೆ ನಿಶೆಯೂ ಅಲ್ಲದೆ ಇರುವ ಮುಸ್ಸಂಜೆಯ ಸಮಯವೇನು ಅವನು ಅಲೆದಾಡುವ ಸಮಯ ಎಂದು ಒಂದು ನೇರ ಪ್ರಶ್ನೆಯನ್ನು ಕೇಳುತ್ತಾರೆ. ಮಾನ್ಯ ಗುಂಡಪ್ಪನವರು.

ಆ ದೇವರು ಯಾರು? ಅವನ ಸ್ವರೂಪವೇನು? ಅವನನ್ನು ಹೇಗೆ ಸಾಕ್ಷಾತ್ಕರಿಸಿಕೊಳ್ಳಬಹುದು? ಹೀಗೆ ಹತ್ತು ಹಲವಾರು ಸಂಶಯಗಳು ಅನಾದಿಕಾಲದಿಂದಲೂ ಮಾನವನನ್ನು ಕಾಡುತ್ತಿದೆ. ಕಣ್ಣು ತೆರೆದರೆ ಬೆಳಕು.





ಅದನ್ನೇ ಹಗಲು ಎನ್ನುತ್ತಿರಬಹುದು ಮಾನ್ಯ ಗುಂಡಪ್ಪನವರು. ಕಣ್ಣು ತೆರೆದರೆ, ನಮಗೆ ಪ್ರಪಂಚವೆಲ್ಲ ಕಾಣುವುದು. ಕಂಡ ವಸ್ತುವಿನ ಮೇಲೆ ನಮ್ಮ ಗಮನ ಮತ್ತು ಆಲೋಚನೆ. ನಾವು ಕಣ್ಣು ತೆರೆದಿರುವಾಗ, ಇಂದ್ರಿಯಗಳ ಸೆಳೆತದಿಂದ ಮನಸ್ಸು ಚಂಚಲವಾಗಿರುವುದರಿಂದ, ಆ ಪರಮಾತ್ಮನನ್ನು ಭಾವಿಸುವುದು ಬಹಳ ಕಷ್ಟ. ಆದರೆ ಕಣ್ಣು ಮುಚ್ಚಿದರೆ, ಕತ್ತಲು. ಇದನ್ನೇ ನಿಶೆಯಂದಿರಬಹುದು. ಹಾಗಾಗಿ ಕಣ್ಣು ಮುಚ್ಚಿರುವಾಗ, ಬಾಹ್ಯ ವಸ್ತುಗಳು ಕಾಣದಾದಾಗ, ಅಂತರ್ಮುಖಿಯಾಗಲು ಸಾಧ್ಯ. ಹಾಗೆ ಅಂತರ್ಮುಖಿಯಾದಾಗಲಾದರೂ ಆ ಪರಮಾತ್ಮ ನಮ್ಮ ಅರಿವಿಗೆ ಬರಬಹುದಲ್ಲ", ಎಂದರೆ ಕಷ್ಟ. ಆದರೆ ಅಸಾಧ್ಯವಲ್ಲ. "ಹರಿದಾಡುವಂತ, ಮನವ ನಿಲಿಸುವುದು ಬಲು ಕಷ್ಟ. ಕಾಶೀಗ್

ಹೋಗಲುಬಹುದು, ದೇಶ ಸುತ್ತಲು ಬಹುದು, ಆಸೆ ಸುಟ್ಟಂತಿರಬಹುದು, ಹರಿದಾಡುವಂತ, ಮನವ ನಿಲಿಸುವುದು ಬಲು ಕಷ್ಟ" ಎಂದು ದಾಸರು ಹೇಳಿದ್ದಾರೆ. ಹಾಗೆ ಕಣ್ಣು ಮುಚ್ಚಿ ಕುಳಿತರೂ ಈ ಮನಸ್ಸೆಂಬುದು ಒಂದು ಇದೆಯಲ್ಲ, ಎಲ್ಲೆಲ್ಲೋ ಸುತ್ತುತ್ತದೆ. ಏನೇನೋ ಯೋಚಿಸುತ್ತದೆ. ಈ ಯೋಚನೆ ಆಲೋಚನೆಗಳ ಸುಳಿಯಲ್ಲಿ ಆ ಪರಮಾತ್ಮನ ಧ್ಯಾನಮಾಡುವುದೂ ಸಹ ಕಷ್ಟ.

ಆದರೆ, ಎಚ್ಚರ ಮತ್ತು ನಿದ್ದೆಗಳ ನಡುವಿನ ಒಂದು ಸ್ತರ ಉಂಟು. ಅದು ಜಾಗೃತಾವಸ್ಥೆ, ಮನದ ಎಲ್ಲ ಕೋಣೆಗಳ ಕಾಲ್ಪನಿಕ ಗೆರೆಗಳನ್ನು ಅಳಿಸಿ, ಮನದ ಪಟಲವನ್ನು ಒಂದೇ ಆಗಿಸಿ ಅಲ್ಲಿ ಧ್ಯಾನಮಾಡಿದರೆ, ಈ ಪ್ರಪಂಚದ ಸೆಳೆತಗಳನ್ನು ಮೀರಿ ಇಡೀ ಸೃಷ್ಟಿಗೆ ಕಾರಣವಾದ ಆ ಚೇತನವನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಪಡಬಹುದು. ಈ ಪ್ರಯತ್ನ ನಿರಂತರವಾಗಿ ಸಾಗಿದಾಗ, ಧ್ಯಾನ ಗಟ್ಟಿಯಾಗಿ ಆ ಪರಮ ಶಕ್ತಿಯ ದರ್ಶನ ಅಂತಃಚಕ್ಷುಗಳಿಗೆ ಆಗಬಹುದು.

ಆದರೆ ಅದೂ ಸಹ ಒಂದು ಕ್ಷಣ ಬಂದು ಹೋಗಿಬಿಡುತ್ತದೆ. ಇದು ಅನುಭವ ವೇದ್ಯ. ಇದನ್ನೇ ಮಾನ್ಯ ಗುಂಡಪ್ಪನವರು "ಮಂಜೇನು" ಎನ್ನುತ್ತಾರೆ. ಹಾಗೆ ಒಂದು ಕ್ಷಣ ಬಂದು ಹೋಗುವ ಭಾವಕ್ಕೆ "ಮಿಸುಕು" ಎಂದಿದ್ದಾರೆ. ಆ ಸ್ಥಿತಿಯಲ್ಲಿ ಹೆಚ್ಚು ಸಮಯ ಇರಲು ಪ್ರಯತ್ನಪಟ್ಟರೆ ಅದು ಧ್ಯಾನವಾಗುತ್ತದೆ. ಎಲ್ಲ ಭಾವಗಳೂ ಕರಗಿ ಹೋಗಿ, ಕೇವಲ ಆ ಪರಮ ಶಕ್ತಿಯನ್ನೇ ಅನುಭವಕ್ಕೆ ತಂದುಕೊಳ್ಳುವ ಪ್ರಕ್ರಿಯೆ ಇದು. ಒಂದು ವ್ಯಕ್ತಿ, ಕೇವಲ, ತೊಂಬತ್ತು ಕ್ಷಣಗಳು, ಅಂದರೆ ಒಂದೂವರೆ ನಿಮಿಷಗಳ ಕಾಲ ಯಾವ ಅಡಚಣೆಯೂ ಇಲ್ಲದೆ ಈ ಸ್ಥಿತಿಯಲ್ಲಿ ಇರಲು ಆದರೆ ಅವನನ್ನು ಯೋಗಿ ಎನ್ನಬಹುದು.

ಆಧ್ಯಾತ್ಮ ಸಾಧನೆಯ ಉತ್ತುಂಗ ಸ್ತರವದು. ಆದರೆ ಇಂದಿನ ಜಗತ್ತಿನ ಹಲವಾರು ಸೆಳೆತಗಳ ನಡುವೆ ಇದು ಬಹಳ ಕಷ್ಟ, ಆದರೆ ಅಸಾಧ್ಯವಲ್ಲ. ಇದಕ್ಕೊಂದು ಮಾರ್ಗ ಬೇಕು, ಒಬ್ಬ ಮಾರ್ಗದರ್ಶಕಬೇಕು, ನಿರಂತರ ಪ್ರಯತ್ನ ಬೇಕು. ಸಾಧಿಸಬಹುದು. ಅಂತಹ ಸಾಧನೆಯನ್ನು ನಾವೂ ಸಹ ಮಾಡಬಹುದೇನೋ ಎಂದು ಯೋಚಿಸುವ.

**ಮುಕ್ತಕ-41** **ಕದಕಗಳಿಯನು ಬಿಗಿದು ಬೊಮ್ಮ ಗುಡಿಯೊಳಗಿರಲಿ |**
**ಅದರ ಕೀಲ್ಕುಂಚಿಕೆಯ ಹೊರಕೆಸೆಯೆ ಸಾಕು ||**
**ಪದವಾಕ್ಯವಿದರಾಗ ವಾದಗಡಣೆಯ ಬಿಟ್ಟು |**
**ಒದವಿಪರು ದಿಟದರಿವ-ಮಂಕುತಿಮ್ಮ? ||**

ಕದಕಗಳಿಯನು=ಕದಕೆ+ಅಗಳಿಯನು, ಹೊರಕೆಸೆಯೇ=ಹೊರಕ್ಕೆ+ಎಸೆಯೇ
ಪದವಾಕ್ಯವಿದರಾಗ=ಪದ+ವಾಕ್ಯ+ವಿದರು+ಆಗ

ಕದ-ಬಾಗಿಲು, ಅಗಳಿ=ಚಿಲಕ, ಕೀಲ್ಕುಂಚಿಕೆ=ಬೀಗದ ಕೈ, ಪದವಾಕ್ಯವಿದರು=ಪದ, ವಾಕ್ಯ, ವ್ಯಾಕರಣ ಇತ್ಯಾದಿಗಳನ್ನರಿತ ಪಂಡಿತರು, ವಾದ=ಚರ್ಚೆ, ಗಡಣೆ=ಸಂಭ್ರಮ, ಒದವಿಪರು=ಸಹಾಯ ಮಾಡುತ್ತಾರೆ, ದಿಟದರಿವ=ಸತ್ಯವನ್ನು ಅರಿಯುವ.

ಆ ದೇವರನ್ನು ಗುಡಿಯಲಿ ಬಿಟ್ಟು, ಬಾಗಿಲನ್ನು ಹಾಕಿ, ಚಿಲಕ ಹಾಕಿ, ಬೀಗ ಜಡಿದು ಬೀಗದ ಕೈಯನ್ನು ಎಸೆದುಬಿಟ್ಟರೆ, ಆಗ ಪಂಡಿತರು ಮತ್ತು ವಿದ್ವಾಂಸರು ಆ ದೇವರನ್ನು ಕುರಿತ, ತಮ್ಮ ಪಾಂಡಿತ್ಯವನ್ನು ಪ್ರದರ್ಶಿಸುವ ವ್ಯರ್ಥವಾದವನ್ನು ಬಿಟ್ಟು, ಆ ದೇವರನ್ನು ಕುರಿತಾದ ಸತ್ಯವನ್ನು ಅರಿಯಲು ಸಹಾಯ ಮಾಡುವರು ಎಂಬುದು ಈ ಮುಕ್ತಕದ ವಾಚ್ಯಾರ್ಥವು.

ಸಾಮಾನ್ಯವಾಗಿ ಎಲ್ಲರೂ ದೇವಸ್ಥಾನಗಳಿಗೆ ಹೋಗುತ್ತಾರೆ. ಅದು ಮಂದಿರಗಳಾಗಿರಬಹುದು, ಮಸೀದಿಗಳಾಗಿರಬಹುದು, ಚರ್ಚುಗಳಾಗಿರಬಹುದು ಅಥವಾ ಬೇರೆ ಯಾವುದೇ ಮತಕ್ಕೆ ಸೇರಿದ ಪೂಜಾ ಮಂದಿರವಾಗಿರಬಹುದು. ಕೆಲವರು ಪ್ರತಿನಿತ್ಯ ಹೋಗುತ್ತಾರೆ. ಕೆಲವರು ವಾರಕ್ಕೊಮ್ಮೆ ಹೋಗುತ್ತಾರೆ. ಕೆಲವರು ವಿಶೇಷ ದಿನಗಳಲ್ಲಿ ಹೋಗುತ್ತಾರೆ. ಕೆಲವರು ಒಂದು ವಾರದಲ್ಲಿ ಬೇರೆ ಬೇರೆ ದಿನಗಳಲ್ಲಿ, ಬೇರೆ ಬೇರೆ ದೇವಸ್ಥಾನಗಳಿಗೆ ಹೋಗುತ್ತಾರೆ, ಕೆಲವರು ಹೋಗುವುದೇ ಇಲ್ಲ. ಕೆಲವರು ಭಕ್ತಿಯಿಂದ ಹೋಗುತ್ತಾರೆ, ಕೆಲವರು ಶ್ರದ್ಧೆಯಿಂದ ಹೋಗುತ್ತಾರೆ, ಕೆಲವರು ಕೇವಲ ಅಭ್ಯಾಸಬಲದಿಂದ ಹೋಗುತ್ತಾರೆ, ಮತ್ತೆ ಕೆಲವರು ಕಾಟಾಚಾರಕ್ಕೆ ಹೋಗುತ್ತಾರೆ. ಹೀಗೆ ದೇವಾಲಯಗಳಿಗೆ ಹೋಗುವುದು ಸರಿಯೇ ತಪ್ಪೇ? ಅದು ಅವರವರ ಅಭಿಮತಕ್ಕೆ ಬಿಟ್ಟದ್ದು, ಆದರೆ ಹೀಗೆ ದೇವಸ್ಥಾನಕ್ಕೆ ಹೋಗುವುದು ಆಧ್ಯಾತ್ಮ ಪ್ರಯಾಣದ ಒಂದು ಹಂತ. ಮೂರ್ತಿ ಪೂಜೆ ಒಂದು ಹಂತ. ಅದೇ ಪರಿಪೂರ್ಣವೂ ಅಲ್ಲ ಮತ್ತು ಪರಮಾರ್ಥವೂ ಅಲ್ಲ.

ಅದು ಒಂದು ಹಂತವೆಂದರೆ ಅದಕ್ಕಿಂತ ಮೇಲಿನ ಸ್ತರಕ್ಕೆ ಹೋಗುವುದು ಸರಿಯಲ್ಲವೇ? ಎಂದರೆ, ಹೌದು ಅದೇ ಸರಿಯಾದ ಆಧ್ಯಾತ್ಮ ಚಿಂತನೆ. ಯಾವುದೋ ಒಂದೇ ಒಂದು ಗುಣವಿರುವ ವಸ್ತುವಿನ ಗುಣವನ್ನು ಆ ವಸ್ತುವಿನಲ್ಲೇ ನೋಡುವುದು ಸಹಜ. ಅನ್ಯ ಮಾರ್ಗವಿಲ್ಲ. ಆದರೆ ಅನಂತ ಕಲ್ಯಾಣ ಗುಣಗಳನ್ನು ಹೊಂದಿರುವ ಆ ಪರಮಾತ್ಮ, ಸಕಲ ಚರಾಚರಗಳ ಒಡೆಯ, ಎಲ್ಲಕ್ಕೂ ಮೂಲ ಮತ್ತು ಗಮ್ಯನಾದ ಆ ಪರಮಾತ್ಮ, ಎಲ್ಲ ಜೀವಿಗಳಲ್ಲೂ ಚೇತನ ಸ್ವರೂಪನಾಗಿ ಇರುವಂತಹ ಪರಮಾತ್ಮ, ಒಂದು ಬೃಹತ್ ವ್ಯಾಪಕತ್ವವನ್ನು ಹೊಂದಿರುವ ಆ ಪರಮಾತ್ಮನನ್ನು ಒಂದು ಚಿತ್ರಪಟದಲ್ಲೋ ಅಥವಾ ಒಂದು ವಿಗ್ರಹದಲ್ಲೋ ಅಥವಾ ಒಂದು ದೇವಸ್ಥಾನದಲ್ಲೋ ಸೀಮಿತಗೊಳಿಸಲು ಸಾಧ್ಯವೇ? ಹಾಗೆ ಮಾಡಿದರೆ, ನಮ್ಮ ದೃಷ್ಟಿಕೋನವೂ ಕಿರಿದಾಗಿ ಸತ್ಯದ ಅರಿವು





ಸಂಪೂರ್ಣವಾಗುವುದಿಲ್ಲ. ಹಾಗಾಗಿ ಆ ದೇವರನ್ನು ಆ ದೇವಸ್ಥಾನದಲ್ಲಿ ಇರಿಸಿ, ಬಾಗಿಲಿಗೆ ಬೀಗಹಾಗಿ, ಕೀಲಿಯನ್ನು ಬಿಸುಟು, ಎಂದರೆ ಆ ದೇವರನ್ನು ಆ ದೇವಸ್ಥಾನದಲ್ಲಿರುವ ವಿಗ್ರಹಕ್ಕೆ ಸೀಮಿತಗೊಳಿಸದೆ, ಪರಮಾತ್ಮನ ಒಂದು ವಿಸ್ತಾರವಾದ ಚಿತ್ರವನ್ನು ಕಾಣಬೇಕು ಎನ್ನುವುದು ಈ ಮುಕ್ತಕದ ಗೂಢ ಅರ್ಥ.

ಎಲ್ಲಿಯತನಕ ಸೀಮಿತ ವಿಚಾರಗಳು ಇರುತ್ತವೆಯೋ, ಪಂಡಿತರು ಅದನ್ನೇ ಮಂಡಿಸುತ್ತಾ, ವಿದ್ವಾಂಸರು ತಮ್ಮ ಪಾಂಡಿತ್ಯವನ್ನು ಪ್ರದರ್ಶಿಸುತ್ತಾ ಜನರನ್ನು ತಪ್ಪುದಾರಿಗೆ ಕೊಂಡೊಯ್ಯುವ ವ್ಯರ್ಥವಾದವನ್ನು ಮಾಡುತ್ತಾರೆ, ಎಂದು ಹೇಳುತ್ತಾ, ಎಲ್ಲರೂ ಪರಮಾತ್ಮನ ಒಂದು ವಿಶಾಲ ರೂಪವನ್ನು ನೋಡಲು ಪ್ರಯತ್ನಿಸಿದರೆ, ಆಗ ಆ ವಿದ್ವಾಂಸರೂ ಸಹ ವ್ಯರ್ಥವಾದವನ್ನು ಬಿಟ್ಟು ನಮಗೆ ಸತ್ಯದ ಅರಿವು ಉಂಟಾಗಿಸಲು ಸಹಾಯ ಮಾಡಬಹುದು ಎಂದು ಹೇಳುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದ ಮೂಲಕ.

ವಿಗ್ರಹಾರಾಧನೆ, ದೇವಸ್ಥಾನಕ್ಕೆ ಹೋಗುವುದು, ಸರಿಯಲ್ಲ ಎಂದು ಅಲ್ಲ. ಆದರೆ ಅದೇ ಪರಮಾರ್ಥವಲ್ಲ. ಅದಕ್ಕಿಂತ ಬೆಳೆದು ವಿಸ್ತಾರವಾದ ರೂಪ ಮತ್ತು ಗಹನವಾದ ತತ್ವ ಮತ್ತು ಸತ್ಯವನ್ನು ಅರಿತುಕೊಳ್ಳುವುದು ಎಲ್ಲ ಆಧ್ಯಾತ್ಮಾಧ್ಯಾಯಿಗಳ ಕರ್ತವ್ಯ. ಮಹಡಿಯ ಮೇಲೆ ಹೋಗಲು ಮೆಟ್ಟಿಲುಗಳು ಬೇಕು. ಮೆಟ್ಟಿಲೇ ಮಹಡಿಯಾಗಲು ಸಾಧ್ಯವೇ? ನಮ್ಮ ಆಚಾರ ವಿಚಾರ ಮತ್ತು ಸಂಪ್ರದಾಯಗಳೆಲ್ಲ ಉನ್ನತ ಸತ್ಯದ ಅರಿವಿಗಾಗಿ ಇರುವ ಮೆಟ್ಟಿಲುಗಳು

ಅಥವಾ ಉಪಕರಣಗಳು ಅಷ್ಟೇ. ಅವೇ ಪರಮಾರ್ಥವಲ್ಲ. ಅವುಗಳು ಬೇಕು. ಅವುಗಳ ಮೂಲಕ ಎಲ್ಲರೂ ಉನ್ನತ ಸತ್ಯದ ದರ್ಶನ ಮಾಡಿಕೊಳ್ಳಬೇಕು. ಈ ರೀತಿಯ ಉಪಕರಣಗಳನ್ನು ಉಪಯೋಗಿಸುತ್ತಾ ಮತ್ತು ಅವುಗಳನ್ನು ತೊರೆದು ಮೀರಿ ಉನ್ನತ ಸ್ಥಾನಕ್ಕೆ ಬೆಳೆದಾಗ, ಸತ್ಯವಾಗಲೂ ನಮ್ಮ ಪರಿಶ್ರಮಕ್ಕೆ ತಕ್ಕ ಫಲ ಸಿಗುತ್ತದೆ.

**ಮುಕ್ತಕ-42** **ಆಹ! ಈ ಮೋಹಗಳೊ,ನೇಹಗಳೋ,ದಾಹಗಳೋ ।**
**ಊಹಿಪೆಯ ಸೃಷ್ಟಿಯಲಿ ಹೃದಯಮಿಹುದೆಂದು? ॥**
**ಹೋಹೋ ಹಾಹಾ ಎಂದು ನಮ್ಮ ಬಾಯ್ದಿಡಿಸುವುದೆ ।**
**ಈ ಹರಿಬದೊಳಗುಟ್ಟು?-ಮಂಕುತಿಮ್ಮ ॥**

ಹೃದಯಂ+ಇಹುದೆಂದು, ಬಾಯ್ದಿಡಿಸುವುದೆ=ಬಾಯಿ+ಬಿಡಿಸ+ಬಹುದೇ,
ಹರಿಬದೊಳಗುಟ್ಟು=ಹರಿಬದ+ಒಳಗುಟ್ಟು

ನೇಹಗಳು=ಸ್ನೇಹಗಳು, ಊಹಿಸೆಯ=ಊಹಿಸುತ್ತೀಯಾ, ಹರಿಬ=ವ್ಯಾಪಾರ.

ಆಹಾ! ಈ ಬಂಧನಗಳು ಸ್ನೇಹಗಳು ಮತ್ತು ಬಯಕೆಗಳು ಇವುಗಳ ಮಧ್ಯೆ ಈ ಜಗತ್ತಿನ ಎಲ್ಲರಲ್ಲೂ ಹೃದಯವಿದೆಯೆಂದು ನೀನು ಅಂದುಕೊಂಡಿದ್ದೀಯಾ. ಪರಸ್ಪರ ಮಾತುಗಳ ಅಟ್ಟಹಾಸದಿಂದ ನಿಮ್ಮನ್ನೂ ಅಂತಹ ಅಟ್ಟಹಾಸಕ್ಕೆ ಪ್ರತಿಕ್ರಿಯಿಸುವುದೇ ಈ ಜಗದ್ವ್ಯಾಪಾರದ ಗುಟ್ಟು ಎನ್ನುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.





ಜಗತ್ತಿನ ಪರಸ್ಪರ ಸಂಬಂಧಗಳಲ್ಲಿರುವ ಪೊಳ್ಳುತನವನ್ನು ಕುಹಕವಾಡುತ್ತಾರೆ, ಡಿ.ವಿ.ಜಿ.ಯವರು. ಎಲ್ಲ ಸಂಬಂಧಗಳೂ ಕೇವಲ ವ್ಯಾವಹಾರಿಕವಾಗಿದೆಯೇ ಹೊರತು ಹೃದಯದ ಸಂಬಂಧಗಳು ನಶಿಸಿಹೋಗಿವೆ.

ಬೂಟಾಟಿಕೆಯ ಸ್ನೇಹ, ತೋರಿಕೆಯ, ಅಟ್ಟಹಾಸದ ಸಂಬಂಧಗಳು ಮತ್ತು ಈ ಸಂಬಂಧಗಳಲ್ಲಿನ ಪೊಳ್ಳುತನ, ಇವುಗಳೇ ಈ ಮುಕ್ತಕದ ಹೂರಣ. ಅಂದು ಅವರಿಗೆ ಹಾಗೆ ಅನ್ನಿಸಿರಬೇಕಾದರೆ, ಇಂದು ಅವರಿಗೆ ಏನು ಅನ್ನಿಸುತ್ತಿತ್ತೋ ಕಾಣೆ. ಇಂದು ನಾವೆಲ್ಲಾ ಕಾಣುವ, ನಮ್ಮ ಸಮಾಜದ ವಿಷಯವನ್ನೇ ನೋಡೋಣ.

ಒಂದು ಮನೆ. ಆ ಮನೆಯಲ್ಲಿ ಗಂಡ ಹೆಂಡತಿಯರ ಸಂಬಂಧ ಕೇವಲ ಒಡಂಬಡಿಕೆಯಾಗಿ ಉಳಿದಿದೆ. ಪರಸ್ಪರ ಸ್ನೇಹ, ಪ್ರೀತಿ, ತ್ಯಾಗ, ನಂಬಿಕೆಗಳ ಆಧಾರದ ಮೇಲೆ ನಿಲ್ಲಬೇಕಾದ ಈ ನಂಟು ಇಂದು ಕೇವಲ ಒಡಂಬಡಿಕೆಯಾಗಿದೆ. ಇನ್ನು ಆ ಮನೆಯಲ್ಲಿ ತಂದೆ ತಾಯಿಗಳ ಜೊತೆಗೆ ಮಕ್ಕಳ ಸಂಬಂಧ, ಮಕ್ಕಳಲ್ಲೇ ಪರಸ್ಪರ ಸಂಬಂಧ ಎಲ್ಲವೂ ಹೃದಯವಂತಿಕೆಯಿಲ್ಲದೆ, ಗಟ್ಟಿ ಇಲ್ಲದೆ ಟೊಳ್ಳಾಗಿದೆ. ಅವರವರ ಅವಶ್ಯಕತೆಗಳನ್ನು ಪೂರೈಸುವ ತನಕ ಎಲ್ಲರೂ ಬೇಕು. ಇದರಲ್ಲಿ ಒಂದು ಸಣ್ಣ ಬೆಳ್ಳಿಗೆರೆಯೆಂದರೆ ಆ ತಾಯಿಗೆ ಮಕ್ಕಳೊಡನೆ ಇರುವ ಸಂಬಂಧ. ಇದರಲ್ಲಿ ಇನ್ನೂ ಸ್ವಲ್ಪ ಸತ್ವವನ್ನು ನಾವು ಕಾಣುತ್ತೇವೆ. ಆದರೆ ತಾಯಿಯೇನೋ ಶುದ್ಧ ಮಮತೆ, ಪ್ರೀತಿ, ಅನುರಾಗ ಎಲ್ಲವನ್ನೂ ಹರಿಸುತ್ತಾಳೆ. ಆದರೆ ಮಕ್ಕಳೇ ರೆಕ್ಕೆ ಮೂಡಿದಮೇಲೆ ತಮ್ಮದೇ ಲೋಕದಲ್ಲಿ ವಿಹರಿಸುತ್ತಾ, ಆ ತಾಯಿಯನ್ನೇ ಕಡೆಗಣಿಸುತ್ತಾರೆ. ಹಾಗೆ ಮಾಡದೆ ಇರುವ ಮಕ್ಕಳಿದ್ದರೆ, ಆ ತಾಯಿ ಪುಣ್ಯವಂತೆ.

ಸ್ವಾರ್ಥಪೂರಿತ ಜನರೇ ತುಂಬಿರುವ ಈ ಸಮಾಜದಲ್ಲಿ ಹೃದಯವಂತಿಕೆಯನ್ನು ದುರ್ಬೀನು ಹಾಕಿಕೊಂಡು ನೋಡಿದರೂ ಕಾಣಸಿಗದು. ಅಕಸ್ಮಾತ್ ಯಾರಾದರೂ ಇದ್ದರೆ, ಅವರನ್ನು ದುರುಪಯೋಗ ಪಡಿಸಿಕೊಂಡು, ಹಿಂಡಿ ಹಿಪ್ಪೆ ಮಾಡಿ ಬಿಡುತ್ತಾರೆ, ಈ ಲೋಕದ ಜನರು, ಅಥವಾ ಅವನಿಗೆ "ಸ್ವಲ್ಪ ಹುಚ್ಚ' ಎಂದು ಹಣೆಪಟ್ಟಿ ಕಟ್ಟುತ್ತಾರೆ. ಚೆನ್ನ ಎನ್ನುವ ಪದಕ್ಕೆ ಅರ್ಥ ತಿಳಿಯದಿದ್ದರೂ, ನಾನು-ನಾನೊಬ್ಬನೇ ಚೆನ್ನಾಗಿರಬೇಕು" ಎನ್ನುವ ದುರ್ಭಾವ. "ನಾನು" ಎನ್ನುವ ಅಹಂಕಾರ, ಸಂಸ್ಕಾರದ ಕೊರತೆ, ಸಂಸ್ಕೃತಿಯ ನಾಶ, ದುರಾಚಾರ, ವಿದ್ಯೆಗೆ ತಿರಸ್ಕಾರ ಮತ್ತು ತಾತ್ಸಾರ. ಹಿರಿಯರಲ್ಲಿ ಗೌರವವಿಲ್ಲ. ಅವರಿಂದ ಕಲಿಯಬೇಕು ಎನ್ನುವ ಆಸೆಯಿಲ್ಲ. ಒಟ್ಟಾರೆ ಹೇಳಬೇಕೆಂದರೆ ಅಧಃಪತನ. ಹೃದಯವಂತಿಕೆಯ ಕೊರತೆಯಿಂದಲೇ, ಎಲ್ಲ ಸಮಸ್ಯೆಗಳು. ಇರುವವರ ಮತ್ತು ಇಲ್ಲದವರ ನಡುವಿನ ಅಗಾಧ ಅಂತರ, ತತ್ಕಾರಣ ಪರಸ್ಪರ ದ್ವೇಷಾಸೂಯೆಗಳು, ಅಯ್ಯೋ ಹೇಳುತ್ತಾ ಹೋದರೆ ಕೊನೆ ಮೊದಲಿಲ್ಲ!!!. ಒಟ್ಟಿನಲ್ಲಿ ಹೃದಯವಂತಿಕೆಯ ಕೊರತೆಯಿಂದ ಮನುಷ್ಯರ ಪರಸ್ಪರ ಸಂಬಂಧಗಳು ಹಾಳಾಗಿವೆ, ಟೊಳ್ಳಾಗಿದೆ, ಪೊಳ್ಳಾಗಿದೆ. ಸಮಸ್ಯೆ ಏನೆಂದು ಗೊತ್ತು. ಪರಿಹಾರವನ್ನು ನಾವುಗಳೇ ಕಂಡು ಹಿಡಿದುಕೊಂಡು ಸಾಧ್ಯವಾದಷ್ಟು ಮಟ್ಟಿಗೆ ನಮ್ಮ ಸಮಾಜವನ್ನು ಮತ್ತು ಒಟ್ಟು ಪರಿಸರವನ್ನು ಸರಿಪಡಿಸಿಕೊಳ್ಳುವುದೇ, ಈಗ ಆಗಬೇಕಾಗಿರುವ ಕೆಲಸ. ಪ್ರಯತ್ನ ಪಟ್ಟರೆ ಅಸಾಧ್ಯವಾದುದೇನಲ್ಲ. ಈ ನಿಟ್ಟಿನಲ್ಲಿ ನಾವೂ ಸಹ ಪ್ರಯತ್ನಪಡೋಣ.

**ಮುಕ್ತಕ-43** **ಮೇಲೆ ಕೆಳಗೊಳಗೆ ಬಳಿ ಸುತ್ತಲೆತ್ತತ್ತಲುಂ |**

**ಮೂಲೆಮೂಲೆಯಲಿ ವಿದ್ಯುಲ್ಲಹರಿಯೊಂದು ||**

**ಧೂಲಿಕಣ ಭೂಗೋಳ ರವಿ ಚಂದ್ರ ತಾರೆಗಳ |**

**ಚಾಲಿಪುದು ಬಿಡು ಕೊಡದೆ-ಮಂಕುತಿಮ್ಮ ||**

ಸುತ್ತಲೆತ್ತತ್ತಲುಂ=ಸುತ್ತಲು+ಎತ್ತೆತ್ತಲುಂ, ವಿದ್ಯುಲ್ಲಹರಿಯೊಂದು=ವಿದ್ಯುಲ್ಲಹರಿ+ಒಂದು, ವಿದ್ಯುಲ್ಲಹರಿ=ಚೇತನದ ಲಹರಿ, ಧೂಲಿಕಣ=ಧೂಳಿನ ಕಣ, ಚಾಲಿಪುದು=ಸಕ್ರಿಯವಾಗಿಡುವುದು.

ಸಕಲ ಜೀವರಾಶಿಗಳ ಅಸ್ತಿತ್ವಕ್ಕೆ ಕಾರಣೀಭೂತವಾದ ಆ ಪರಮ ಶಕ್ತಿಯನ್ನು ಎಲ್ಲ ಸಾಧಕರೂ, ಸಿದ್ಧರೂ, ಸತ್ಪುರುಷರೂ, ಭಕ್ತರೂ ತಮ್ಮ ಭಕ್ತಿ ಪಾರವಶ್ಯದಲ್ಲಿ ಅನುಭವಿಸಿದ್ದಾರೆ. ಮೇಲೆ, ಕೆಳಗೆ, ಒಳಗೆ, ಹತ್ತಿರ, ದೂರ, ಸುತ್ತಲು ಮತ್ತು ಎತ್ತೆತ್ತಲೂ ಆ ವಿದ್ಯುಲ್ಲಹರಿಯು ಎಲ್ಲವನ್ನು "ಬಿಡು ಕೊಡದೆ' ಎಂದರೆ ನಿರಂತರವಾಗಿ, ಒಂದು ಕ್ಷಣವೂ ವಿರಾಮವಿಲ್ಲದೇ ನಡೆಸುತ್ತಿದೆ ಎಂದು ಈ ಮುಕ್ತಕದ ಆಂತರ್ಯ.

ಆದಿ ಕಾವ್ಯ ಋಗ್ವೇದದ, ಪುರುಷ ಸೂಕ್ತದಲ್ಲಿ 'ಸ ಭೂಮಿಂ ವಿಶ್ವತೋ ವೃತ್ವಾ ಅತ್ಯತಿಷ್ಠತ್ ದಶಾಂಗುಲಂ"ಎಂದು ಬರುತ್ತದೆ. ಅಂದರೆ ಯಾವುದೇ ಒಂದು ವಸ್ತುವು ಮಿಕ್ಕೆಲ್ಲ ವಸ್ತುಗಳನ್ನೂ ತನ್ನ ಅಧೀನದಲ್ಲಿಟ್ಟುಕೊಂಡಿರಬೇಕಾದರೆ, ತಾನು ಅದೆಲ್ಲದರಕ್ಕಿಂತ ಮೇಲೆ ಇರಬೇಕು. ಹೌದಲ್ಲವೇ? ಹಾಗೆಯೇ, ಎಲ್ಲ ಸೃಷ್ಟಿಯನ್ನು ತನ್ನ ಅಧೀನದಲ್ಲಿಟ್ಟುಕೊಂಡಿರುವ ಆ ಪರಮ ಶಕ್ತಿಯು, ಈ ನಾವಿರುವ ಭೂಮಿಯನ್ನೂ ಸೇರಿ ಇಡೀ ವಿಶ್ವವನ್ನೇ ತನ್ನ ಅಧೀನದಲ್ಲಿಟ್ಟುಕೊಂಡಿರುವುದರಿಂದ ಅದು "ಅತ್ಯತಿಷ್ಠತ್ ದಶಾಂಗುಲಂ", ಇವೆಲ್ಲವನ್ನೂ ಮೀರಿ ಹತ್ತು ಅಂಗುಲ ಮೇಲಿದೆ ಎಂದು ಅರ್ಥ. ಅಷ್ಟೇ ಅಲ್ಲ ಅದು ತಾನೇ ಸೃಷ್ಟಿಸಿರುವ, ತನ್ನ ಅಧೀನದಲ್ಲಿರುವ, ಇಡೀ ಸೃಷ್ಟಿಯನ್ನು ತನ್ನ ಶಕ್ತಿಯಿಂದಲೇ ನಡೆಸಿಕೊಂಡು ಹೋಗುತ್ತದೆ ಎಂದು ಈ ಮುಕ್ತಕದ ಆಂತರ್ಯ.

ಆದರೆ ನಾವು ನೋಡಬೇಕಾದ ಒಂದು ಅಂಶವಿದೆ. ಸಕಲ ಪ್ರಾಣಿಗಳಿಗೂ, ಅಂದರೆ ಆಕಾಶದಲ್ಲಿ ಹಾರುವ ಎಲ್ಲ ಪಕ್ಷಿಗಳಿಗೂ, ಭೂಮಿಯ ಮೇಲಿರುವ ಎಲ್ಲ ಪ್ರಾಣಿಗಳಿಗೂ, ಕೀಟಗಳಿಗೂ, ಕ್ರಿಮಿಗಳಿಗೂ ಮತ್ತು ಎಲ್ಲ ಜಲಚರಗಳಿಗೂ ಒಂದು ಸಮಾನವಾದ ಅಂಶವುಂಟು. ಅದೇನೆಂದರೆ, ಎಲ್ಲಕ್ಕೂ ಒಂದು ದೇಹ, ಒಂದು ಮನಸ್ಸು, ಒಂದು ಬುದ್ಧಿ ಮತ್ತು ಒಂದು ಚೇತನ ಉಂಟು. ಈ ನಾಲ್ಕೂ ಬೇಕಾದ ಪ್ರಮಾಣದಲ್ಲಿ ಇರುವುದರಿಂದ ಈ ಎಲ್ಲ ಪ್ರಾಣಿಗಳ ಅಸ್ತಿತ್ವ, ದೈಹಿಕ ರೂಪ ಮತ್ತು ಅದರ ಮಿತಿ ಮತ್ತು ಪರಿಮಿತಿಗಳು, ಮನಸ್ಸು ಬುದ್ಧಿಗಳ ವಿಕಾಸದ ಸ್ತರಗಳ ಅನ್ವಯ, ಆಯಾ ಪ್ರಾಣಿಗಳ ಸ್ವಭಾವಗಳು, ಕ್ರಿಯೆಗಳು ಇರುತ್ತವೆ. ಈ ಎಲ್ಲ ಪ್ರಾಣಿ ಪಕ್ಷಿಗಳೂ ಭೂಮಿಗೆ ಸಮಾನಾಂತರವಾಗಿದ್ದರೆ, ಮನುಷ್ಯ ಮಾತ್ರ ಲಂಬವಾಗಿದ್ದಾನೆ. ಹಾಗಾಗಿ ಮನುಷ್ಯ ಊರ್ಧ್ವಮುಖನಾಗಿ ಯೋಚಿಸಲು ಸಾಮರ್ಥ್ಯವನ್ನು ಪಡೆದುಕೊಂಡು ಅನ್ಯ ಪ್ರಾಣಿಗಳಿಗಿಂತ ಭಿನ್ನವಾಗಿದ್ದಾನೆ. ಸರಿ ಹಾಗಿದ್ದರೆ ಅನ್ಯ ಪ್ರಾಣಿಗಳಿಗೆ ಹೋಲಿಸಿದರೆ, ಮಾನವರ ಜಗತ್ತಿನಲ್ಲಿ ಮಾತ್ರ ಏಕೆ ಇಷ್ಟೊಂದು ಹಿಂಸೆ ದ್ವೇಷ ಮುಂತಾದ ಕುಬುದ್ಧಿಗಳೇ ತುಂಬಿದೆ ಎಂದರೆ, ಆ ಪರಮಾತ್ಮ ಎಲ್ಲ ಮನಸ್ಸು ಬುದ್ಧಿ ದೇಹಾತ್ಮಗಳನ್ನು ಒಂದುಗೂಡಿಸಿ, ಅಷ್ಟಕ್ಕೇ ಬಿಟ್ಟಿದ್ದರೆ ಸಾಕಿತ್ತು.





ಆದರೆ ಇವೆಲ್ಲವನ್ನೂ ಸೇರಿಸಿ ಒಂದು ಚೂರು "ಅಹಂಕಾರ" ವನ್ನೂ ಇಟ್ಟ. ಅನ್ಯ ಪ್ರಾಣಿಗಳಲ್ಲಿ ಅದು ಕೇವಲ ತನ್ನ ಆಹಾರ ಹುಡುಕುವುದು ಮತ್ತು ತನ್ನನ್ನು ತಾನು ರಕ್ಷಿಸಿಕೊಳ್ಳುವುದಕ್ಕೆ ಮಾತ್ರ ಉಪಯೋಗಿಸಿದರೆ, ಈ ಮನುಷ್ಯ ಮಾತ್ರ ಸ್ವಾರ್ಥದಿಂದ ಅಹಂಕಾರವನ್ನು ಪರ ಹಿಂಸೆಗೆ, ದುರಾಸೆಗೆ, ಲೂಟಿಗೆ, ಹೀಗೆ ಮಾನವಕುಲಕ್ಕೆ ಮಾರಕವಾದ ಎಲ್ಲ ಕಾರ್ಯಗಳಿಗೂ ಉಪಯೋಗಿಸುತ್ತಾ ಇಡೀ ಪ್ರಪಂಚವನ್ನು ಒಂದು ಮಹಾ ರಣರಂಗವನ್ನಾಗಿ ಪರಿವರ್ತಿಸಿದ್ದಾನೆ.

ಎಲ್ಲ ಜೀವಿಗಳಲ್ಲೂ ಎಲ್ಲ ಸೃಷ್ಟಿಗೂ ಕಾರಣನಾದವನು ಮತ್ತು ನಡೆಸುವವನೂ ಪರಮಾತ್ಮನೇ ಆದಾಗ, ಇಂದಿನ ಪರಿಸ್ಥಿತಿಗೂ ಆ ಪರಮಾತ್ಮನೇ ಕಾರಣವೆನ್ನುವವರು ಬಹಳ ಮಂದಿ. ಒಂದು ಉಸಿರು ಒಳಗೆ ಹೋದದ್ದು ಹೊರಗೆ ಬಾರದಿದ್ದರೋ ಅಥವಾ ಹೊರಗೆ ಬಂದ ಒಂದು ಉಸಿರು ಒಳಗೆ ಹೋಗದಿದ್ದರೋ ಮುಗಿಯಿತು ಇವನ ಕಥೆ. ಇಷ್ಟು ಪರಿಮಿತ ಸಾಮರ್ಥ್ಯವನ್ನಿಟ್ಟುಕೊಂಡು ಈ ಮನುಷ್ಯ ಹಾರಾಡುವುದನ್ನು ನೋಡಿದರೆ, ಅವನ ಮೌಢ್ಯಕ್ಕೆ ಅಚ್ಚರಿಯಾಗುತ್ತದೆ. ಇದು ಅಹಂಕಾರದ ಫಲ. ನಾನು ಎಲ್ಲ ಪ್ರಾಣಿಗಳಂತೆ. ನಮ್ಮ ಅಸ್ತಿತ್ವಕ್ಕೆ ಕಾರಣವಾದ ಆ ವಿದ್ಯುಲ್ಲಹರಿ ಅಥವಾ ಆ ಮಹಾ ಚೇತನದ ಮುಂದೆ ನಾನೇನೂ ಇಲ್ಲ, ಹಾಗಾಗಿ ತಗ್ಗಿ ಬಗ್ಗಿ, ವಿನಯದಿಂದ,

ಅಹಂಕಾರವನ್ನು ತೊರೆದು ನಡೆದು ಒಂದು ಸು-ಸಮಾಜದ ನಿರ್ಮಾಣಕ್ಕೆ ನಾವು ನಾಂದಿ ಹಾಡುವ ಎನ್ನುವ ಭಾವನೆ ತಳೆದರೆ ಚೆಂದ. ಇಲ್ಲದಿದ್ದರೆ ಪತನವೇ ಹಾದಿ. ಆಯ್ಕೆ ನಮ್ಮದು ಸುಖ ನಮ್ಮದು ದುಃಖ ನಮ್ಮದು. ಅಳಿವು ಮತ್ತು ಉಳಿವು ನಮ್ಮ ಕೈಯಲ್ಲಿಯೇ ಇದೆ. ವಾಚಕರೆ, ನಾವೆಲ್ಲ ಆತ್ಮಾವಲೋಕನ ಮಾಡಿಕೊಳ್ಳಲು ಸೂಕ್ತ ಸಮಯ ಬೇರೊಂದಿಲ್ಲ. ನಮ್ಮನ್ನು ನಾವು ಸರಿಪಡಿಸಿಕೊಳ್ಳುವ ಪಣ ತೊಡಬೇಕು ಅಷ್ಟೇ!!!!

# ಬೊಂಕು ದೀಪವೇ ತಂಟೆ 44-48

**ಮುಕ್ತಕ-44**

**ಮಂದಾಕ್ಷಿ ನಮಗಿಹುದು ಬಲುದೂರ ಸಾಗದದು |**
**ಸಂದೆ ನಸುಕಿನೊಳಿಹುದು ಜೀವನದ ಪಥವು ||**
**ಒಂದುಮೆಟುಕದು ಕೈಗೆ, ಏನೋ ಕಣ್ಕೆಕುವುದು |**
**ಸಂದಿಯವೆ ನಮ್ಮ ಗತಿ-ಮಂಕುತಿಮ್ಮ ||**

ನಮಗಿಹುದು=ನಮಗೆ+ಇಹುದು, ನಸುಕಿನೊಳಿಹುದು=ನಸುಕಿನೊಳು+ಇಹುದು,
ಒಂದುಮೆಟುಕದು=ಒಂದು+ಎಟುಕದು, ಕಣೆಣಕುವುದು=ಕಣ್+ಕೆಣಕುವುದು
ಮಂದಾಕ್ಷಿ=ಸ್ಪಷ್ಟವಿಲ್ಲದ ದೃಷ್ಟಿ, ಸಂದೆ=ಸಂಜೆ, ಸಂದಿ=ಸಂದೇಹ ಅಥವಾ ಸಂದಿಗ್ಧ

ನಮ್ಮ ಮನಸ್ಸಿನ ಕಣ್ಣುಗಳು ಮಂದವಾಗಿವೆ. ಒಂದು ವಿಶಾಲವಾದ ದೃಷ್ಟಿ ನಮಗೆ ಇಲ್ಲ. ನಮ್ಮ ಆಲೋಚನೆಗಳು ಸ್ಪಷ್ಟವಿಲ್ಲದೆ ಸಂಜೆಗತ್ತಲಂತೆ ಮಸುಕು ಮಸುಕಾಗಿರುವುದರಿಂದ ನಾವು ನಡೆಸುವ ನಮ್ಮ ಜೀವನದ ಪರಿಯೂ ಸಹ ಸ್ಪಷ್ಟತೆ ಇಲ್ಲದೆ ಮಸುಕಾಗಿದೆ. ನಮ್ಮ ಅಪೇಕ್ಷೆಗಳು ನಮಗೇ ಸ್ಪಷ್ಟವಾಗಿಲ್ಲ. ಸರಿಯಾದ ವಸ್ತು ಇನ್ನೇನು ಸಿಕ್ಕಿತು ಎನ್ನುವ ವೇಳೆಗೆ, ನಮ್ಮ ಕಣ್ಣು ಅನ್ಯ ವಸ್ತುವಿನ ಮೇಲೆ ಬಿದ್ದು ನಮ್ಮನ್ನು ವಿಚಲಿತಗೊಳಿಸಿ, ಸಂದೇಹ ಮತ್ತು ಸಂದಿಗ್ಧಕ್ಕೆ ತಳ್ಳಿಬಿಡುತ್ತದೆ ಎನ್ನುವುದು ಈ ಮುಕ್ತಕದ ಹೂರಣ.

ಇಲ್ಲಿ ಮಾನ್ಯ ಗುಂಡಪ್ಪನವರು, ನಮ್ಮ ಮಾನಸಿಕ ದೃಷ್ಟಿಕೋನದ ಬಗ್ಗೆ ಪ್ರಸ್ತಾಪ ಮಾಡುತ್ತಾರೆ. ಸಂಕುಚಿತ ಸ್ವಭಾವದ ನಮ್ಮ ದೃಷ್ಟಿಯೂ ಸಂಕುಚಿತ. ಒಂದು ವಿಶಾಲ ಮನೋಭಾವವನ್ನು ನಾವು ಕಳೆದುಕೊಂಡಿದ್ದೇವೆ. ನಾವು ಯಾವುದೇ ವಿಚಾರವನ್ನು ತೆಗೆದುಕೊಂಡರೂ ಒಂದು ವಿಶಾಲ ಮನೋಭಾವವನ್ನು ಬೆಳೆಸಿಕೊಳ್ಳಲು ಅಸಮರ್ಥರಾಗಿದ್ದೇವೆ. ಯಾವುದೂ ಸ್ಪಷ್ಟವಿಲ್ಲ. ನಮ್ಮ ಸಂಬಂಧಗಳು ಸ್ಪಷ್ಟವಾಗಿ ಗಟ್ಟಿಯಾಗಿಲ್ಲ. ನಮ್ಮ ಸ್ನೇಹಗಳು ಗಟ್ಟಿಯಾಗಿಲ್ಲ. ನಮ್ಮ ಬೇಕು ಬೇಡಗಳ ಬಗ್ಗೆ ನಮಗೆ ನಿಖರವಾದ ಅಭಿಪ್ರಾಯವಿಲ್ಲ. ಒಟ್ಟಾರೆ ನಮಗೆ ಯಾವುದೂ ಸ್ಪಷ್ಟವಿಲ್ಲ. ಎಲ್ಲಾ ಮಸುಕು ಮಸುಕು. ನಮ್ಮ ದೃಷ್ಟಿಯೇ ಹಾಗಿರಬೇಕಾದರೆ ನಮ್ಮ ಜೀವನವೂ ಹಾಗೇ ಇರುವುದು ಸಹಜ ತಾನೇ?

ನಮ್ಮ ಜೀವನಗಳನ್ನೇ ತೆಗೆದು ಕೊಳ್ಳೋಣ. ನಮ್ಮ ವಿದ್ಯಾಭ್ಯಾಸದಲ್ಲಿ ನಮಗೆ ನಮ್ಮ ಸಾಮರ್ಥ್ಯದ ಅರಿವಿಲ್ಲ. ಆ ಸಾಮರ್ಥ್ಯಕ್ಕೆ ತಕ್ಕಂತ ವಿದ್ಯಾಭ್ಯಾಸವಿಲ್ಲ. ಸರಿ ಏನೋ ಓದಿದ್ದಾರೆ ಎಂದರೆ ಆ ಓದಿಗೆ ತಕ್ಕಂತ ಉದ್ಯೋಗವಿಲ್ಲ. ಓದು ಸಿವಿಲ್ ಇಂಜಿನಿಯರಿಂಗ್, ಸಾಫ್ಟ್‌ವೇರ್ ಕಂಪನಿಯಲ್ಲಿ ಕೆಲಸ ಎಂತಹ ವಿಪರ್ಯಾಸ. ಸರಿ ಏನೋ ಉದ್ಯೋಗ ಮಾಡುತ್ತಾರೆ ಎಂದರೆ, ಮಾಡುವ ಕೆಲಸದಲ್ಲಿ ಆಸ್ಥೆ ಇಲ್ಲ, ಆಸಕ್ತಿಯಿಲ್ಲ ಮತ್ತು ತೃಪ್ತಿಯೂ ಇಲ್ಲ.

ಅಕಸ್ಮಾತ್ ನಮಗೆ ಒಂದು ಹುಟ್ಟು ಸಿಕ್ಕಿದೆ. ನಮಗೆ ನಮ್ಮ ಜೀವನದ ಗುರಿಯಿಲ್ಲ. ನಾವು ಏನಾಗಬೇಕು ಅಥವಾ ನಮಗೆ ಏನು ಬೇಕು ಎನ್ನುವುದು ನಮಗೆ ಗೊತ್ತಿಲ್ಲ. ಸುಮ್ಮನೆ ಬೆಳಗಾಗುತ್ತದೆ, ಏಳುತ್ತೇವೆ, ತಿನ್ನುತ್ತೇವೆ. ಏನೋ ಕೆಲಸ ಮಾಡುತ್ತೇವೆ, ಮತ್ತೆ ತಿನ್ನುತ್ತೇವೆ, ಮಲಗುತ್ತೇವೆ. ಮಲಗುವ ಮುಂಚೆ ನಾವು ಇಂದಿನ ಸಾಧನೆಯೇನು ಎಂದು ಯೋಚನೆ ಮಾಡಿದರೆ, ಎಲ್ಲವೂ ಶೂನ್ಯ. ನಮ್ಮ ಸಂಬಂಧಗಳನ್ನು ತೆಗೆದುಕೊಳ್ಳೋಣ. ನಮಗೆ ನಮ್ಮ ತಂದೆ ತಾಯಿಗಳೊಡನಾಗಲೀ, ಅಣ್ಣತಮ್ಮಂದಿರೊಡನಾಗಲೀ, ಬಂಧುಗಳೊಡನಾಗಲೀ, ಸ್ನೇಹಿತರೊಡನಾಗಲೀ, ಸಮಗ್ರವಾಗಿ ಸಮಾಜದೊಡನಾಗಲೀ ಒಂದು ಸ್ಪಷ್ಟವಾದ ಗಟ್ಟಿಯಾದ ಸಂಬಂಧವೇ ಇಲ್ಲ. ನಮ್ಮ ಸಂಸ್ಕೃತಿಯ ಬಗ್ಗೆಯಾಗಲೀ ಸಂಸ್ಕಾರಗಳ ಬಗ್ಗೆಯಾಗಲೀ ಒಂದು ನಿಖರವಾದ ಅಭಿಪ್ರಾಯ ಮತ್ತು ದೃಷ್ಟಿಕೋನವಿಲ್ಲ. ಎಲ್ಲವೂ ಮಸುಕು ಮಸುಕು. ಇನ್ನು ನಮ್ಮ ಜೀವನದ ಪಥವು ಸ್ಪಷ್ಟವಾಗಿರುವುದೆಂತು? ಆ ಪ್ರಾಣಿಗಳ ಬದುಕಿಗೂ ನಮ್ಮ ಬದುಕಿಗೂ ಎಷ್ಟು ವ್ಯತ್ಯಾಸವಿದೆ? ಕಡೆಯ ಪಕ್ಷ ಅವುಗಳಿಗೆ "ಏನೋ ಒಂದು ಇಲ್ಲ" ಎನ್ನುವುದು ಸ್ಪಷ್ಟ. ನಮಗೆ ಆ ಸ್ಪಷ್ಟತೆಯೂ ಇಲ್ಲ.

ಇದಕ್ಕೆಲ್ಲ ಏನು ಕಾರಣ? ನನ್ನ ಅಲ್ಪ ಮತಿಗೆ ಹೊಳೆಯುವುದು ಇಷ್ಟು. ಸ್ವಾರ್ಥ ಮತ್ತು ಅಹಂಕಾರಗಳೇ ನಮ್ಮನ್ನು ಈ ಗತಿಗೆ ತಳ್ಳಿವೆ. "ನನಗೆ ಎಲ್ಲವೂ ಬೇಕು" ಎನ್ನುವ ಸ್ವಾರ್ಥದಿಂದ ಏನು ಬೇಕು ಎನ್ನುವುದೇ ತಿಳಿಯದಾಗಿದೆ. ಎಲ್ಲವೂ ಬೇಕು ಎನ್ನುವವನು ಏನೇನನ್ನು ಪಡೆದುಕೊಳ್ಳಲು ಸಾಧ್ಯ? ಪಡೆದುಕೊಂಡು ಅಥವಾ ದಕ್ಕಿಸಿಕೊಂಡು ಅನುಭವಿಸುವ ಸಾಮರ್ಥ್ಯ ಬೇಡವೇ? ಏನನ್ನೋ ಪಡೆದಾಕ್ಷಣ ಬೇರೆ ವಸ್ತುಗಳ ಮೇಲೆ ಕಣ್ಣು. ಹೀಗೆ ನಮ್ಮ ಬೇಕು ಬೇಡಗಳ ಅಸ್ಪಷ್ಟತೆ.

"ನನಗೆ ಎಲ್ಲವೂ ತಿಳಿದಿದೆ" ಎನ್ನುವ ಅಹಂಕಾರದಿಂದ ಅರಿವಿನ ಬಾಗಿಲು ಮುಚ್ಚಿ ಹೋಗಿದೆ. ಮೇಲಕ್ಕೆ ಹೋಗಬೇಕಾದವನು, ನಾನು ಕೆಳಗೆ ಇದ್ದೇನೆ ಎಂದು ಅರಿತರೆ ಮಾತ್ರ ಮೇಲಕ್ಕೆ ಹೋಗಲು ಸಾಧ್ಯ. ನಾನು





ಮೇಲೆ ಇದ್ದೇನೆ ಎನ್ನುವವನು, ಇನ್ನು ಮೇಲಕ್ಕೆ ಹೋಗುವುದು ಹೇಗೆ? ಅಗಾಧ ಜ್ಞಾನ ಸಮುದ್ರದಲ್ಲಿ ನನಗೆ ತಿಳಿದಿರುವುದು ಒಂದು ತೊಟ್ಟು ಹನಿಯೂ ಅಲ್ಲ ಎಂದು ತಿಳಿದವನಿಗೆ, ಇನ್ನಷ್ಟು ತಿಳಿದುಕೊಳ್ಳುವ ಅವಕಾಶ. ನನಗೆ ಎಲ್ಲ ಗೊತ್ತು ಎನ್ನುವ ಮೂರ್ಖತನಕ್ಕೆ ಮದ್ದುಂಟೆ?

ಎಲ್ಲರೂ ಹಾಗಿದ್ದಾರೆಯೇ? ಖಂಡಿತ ಇಲ್ಲ, ಎಲ್ಲೋ ಕೆಲವು ಜನ ಸಜ್ಜನರು, ಸ್ವಾರ್ಥರಹಿತರು, ನಿಜಾರ್ಥದಲ್ಲಿ ಜ್ಞಾನಿಗಳು, ವಿಶಾಲ ಮನೋಭಾವದ ಮಹಾನುಭಾವರು, ಲೋಕ ಕಲ್ಯಾಣಕ್ಕಾಗಿಯೇ ತಮ್ಮ ಜೀವನವನ್ನು ಮುಡುಪಿಟ್ಟಿರುವವರೂ, ಸಕಲ ಜೀವರಾಶಿಗಳ ಹಿತವನ್ನೇ ಬಯಸುವವರೂ ಇದ್ದಾರೆ. ಎಲೆಮರೆ ಕಾಯಿಗಳಂತಿರುವ, ಸ್ವ-ಪ್ರಚಾರಕ್ಕೆ ಬಾಯಿಬಿಡದ ಅಂತಹವರ, ನಿಸ್ವಾರ್ಥ ಕಾರ್ಯ ಕಲಾಪಗಳಿಂದಲೇ ಈ ಜಗತ್ತಿನಲ್ಲಿ ಇನ್ನೂ ಸ್ವಲ್ಪ ಒಳಿತು ಉಳಿದಿದೆ. ಅಂಥವರಿಗೆ ನಮ್ಮ ನಮನ.

ನಾವೂ ಸಹ ಆತ್ಮಾವಲೋಕನ ಮಾಡಿಕೊಳ್ಳಬೇಕು. ನಮ್ಮ ಮನಸ್ಸೇನು? ಆ ಮನಸ್ಸಿನ ಬೇಕು ಬೇಡಗಳೇನು? ಸ್ಪಷ್ಟವೇ? ಅಸ್ಪಷ್ಟವೆ? ಸರಿಯೇ? ತಪ್ಪೇ? ನಮ್ಮ ಸಾಮರ್ಥ್ಯವೇನು? ಅರ್ಹತೆಗಳೇನು? ಹೀಗೆ ಸಮಗ್ರ

ಚಿಂತನೆ ಮಾಡಿ ನಮ್ಮನ್ನು ನಾವು ಸರಿಪಡಿಸಿಕೊಂಡರೆ, ನಮ್ಮ ಬದುಕು ಮತ್ತು ಇತರರ ಜೀವನವೂ ಸುಧಾರಿಸುವುದರಲ್ಲಿ ನನಗೆ ಸಂದೇಹವೇ ಇಲ್ಲ.

**ಮುಕ್ತಕ-45**

**ಬೆಂಕಿಯುಂಡೆಯ ಬೆಳಕು ಬೆಣ್ಣೆಯುಂಡೆಯ ಬೆಳಕು |**
**ಮಂಕುವಿಡಿಸಲು ಸಾಕು ಮಣ್ಣುಂಡೆ ಕಣ್ಗೆ ||**
**ಶಂಕೆಗೆಡೆಯಿರದು ಕತ್ತಲೆಯೇ ಜಗವನು ಕವಿಯೆ |**
**ಬೊಂಕುದೀವಿಗೆ ತಂಟೆ-ಮಂಕುತಿಮ್ಮ ||**

ಬೆಂಕಿಯುಂಡೆಯ=ಬೆಂಕಿಯ+ಉಂಡೆಯ, ಬೆಣ್ಣೆಯುಂಡೆಯ=ಬೆಣ್ಣೆಯ+ಉಂಡೆಯ,
ಮಂಕುವಿಡಿಸಲು=ಮಂಕು+ವಿಡಿಸಲು, ಮಣ್ಣುಂಡೆ=ಮಣ್ಣ+ಉಂಡೆ,
ಶಂಕೆಗೆಡೆಯಿರದು=ಶಂಕೆಗೆ+ಎಡೆ+ಇರದು

ಬೆಂಕಿಯುಂಡೆ=ಸೂರ್ಯ, ಬೆಣ್ಣೆಯುಂಡೆ=ಚಂದ್ರ, ವಿಡಿಸಲು-ಬಿಡಿಸಲು, ಮಣ್ಣುಂಡೆ=ಹಣತೆ, ಶಂಕೆಗೆಡೆಯಿರದು=ಸಂಶಯಕ್ಕೆ ಸ್ಥಳವಿರದು, ಬೊಂಕುದೀವಿಗೆ=ಅಸತ್ಯವಾದ ಜ್ಞಾನ.

ಸೂರ್ಯನ ಬೆಳಕಾಗಲೀ ಅಥವಾ ಚಂದ್ರನ ಬೆಳಕಾಗಲೀ ಅಥವಾ ಒಂದು ಪುಟ್ಟ ಹಣತೆಯಾದರೂ ಸಹ ನಮಗೆ ನೋಡಲು ಅನುವು ಮಾಡಿಕೊಡುತ್ತದೆ. ಆದರೆ ಜಗತ್ತನ್ನು ಸಂಪೂರ್ಣ ಕತ್ತಲೆ ಆವರಿಸಿದರೆ, ನೋಡುವ ಪ್ರಶ್ನೆಯೇ ಬರುವುದಿಲ್ಲ. ಆದರೆ ಒಂದು ಅರ್ಧಂಬರ್ಧವಾಗಿ ಕತ್ತಲೆ ಬೆಳಕಿನಾಟ ಕೇವಲ ತೊಂದರೆಯನ್ನು ಕೊಡುತ್ತದೆ ಎಂದು ಸೂಚ್ಯವಾಗಿ ಒಂದು ಗಹನವಾದ ವಿಷಯವನ್ನು ಪ್ರಸ್ತಾಪ ಮಾಡುತ್ತಾರೆ, ಮಾನ್ಯ ಗುಂಡಪ್ಪನವರು.

ವಾಚಕರೆ ನೋಡಿ ಸತ್ಯವನ್ನು ಅರಿಯಲು ಅಥವಾ ನೋಡಲು ನಮಗೆ ಬೆಳಕು ಜ್ಞಾನದ ರೂಪದಲ್ಲಿ ಬೇಕು. ಆ ಬೆಳಕು ಪ್ರಖರವಾದ ಮತ್ತು ಜ್ಞಾನಕ್ಕೆ ಪ್ರತೀಕವಾದ ಸೂರ್ಯನ ಬೆಳಕಿನಂತಹ ಜ್ಞಾನವಾಗಬಹುದು. ಹೆಚ್ಚು ತೀಕ್ಷ್ಣವಲ್ಲದ ಬೆಳಕನ್ನು ನೀಡುವ ಚಂದ್ರನಂತೆ, ಶಾಂತ ಜ್ಞಾನವಾಗಬಹುದು ಅಥವಾ ಎಲ್ಲಕಡೆಯೂ ಕತ್ತಲಿದ್ದರೂ ಸಮೀಪದ ವಸ್ತುಗಳನ್ನು ನಿಚ್ಚಳವಾಗಿ ತೋರುವ ಹಣತೆಯ ಬೆಳಕಂತೆ ಕ್ಲುಪ್ತವಾದರೂ ಸತ್ಯವಾದ ಜ್ಞಾನವನ್ನು ನೀಡುವ ಬೆಳಕಾದರೂ ಸಾಕು. ನಮಗೆ ಸತ್ಯದ ಅರಿವಾಗುತ್ತದೆ.

ಬೆಳಕಿನಲ್ಲಿ ವಸ್ತು ವಿಷಯಗಳನ್ನು ಕಂಡರೆ ವಸ್ತುಗಳಲ್ಲಿ ವ್ಯತ್ಯಾಸ ಕಾಣುವುದು ಮತ್ತು ಅರಿತುಕೊಳ್ಳುವ ಅಪೇಕ್ಷೆ ಮತ್ತು ಪ್ರಕ್ರಿಯೆ ನಡೆಯುತ್ತದೆ. ಆದರೆ ಸಂಪೂರ್ಣ ಕತ್ತಲೆಯೇ ಆಗಿಬಿಟ್ಟರೆ, ನಮಗೆ ಶಂಕೆಯೇ ಇರದು ಎನ್ನುತ್ತಾರೆ ಮಾನ್ಯ ಗುಂಡಪ್ಪನವರು. ಅಂದರೆ ಸಂಪೂರ್ಣ ಕತ್ತಲೆಯಂತೆ, ಸಂಪೂರ್ಣ ಅಜ್ಞಾನವೇ ತುಂಬಿಬಿಟ್ಟರೂ “ಇದೋ, ಅದೋ, ಅಥವಾ ಯಾವುದು” ಎನ್ನುವ ಶಂಕೆ ಬರುವುದಿಲ್ಲ.

ಆದರೆ ಅರ್ಧಂಬರ್ಧ ಬೆಳಕು ಅಥವಾ ಸುಳ್ಳಾದ, ಬೆಳಕಲ್ಲದ ಬೆಳಕು ಬಂದಾಗ, ಅಂದರೆ, ಸತ್ಯವಾದ ಜ್ಞಾನವಲ್ಲದೆ ಇದ್ದರೆ ಅಸತ್ಯ ವಾದವನ್ನು ಪ್ರತಿಪಾದಿಸುವ “ಪದವಿದರು” ತಮ್ಮ ತಮ್ಮ ಸಿದ್ಧಾಂತಗಳಿಂದ ಜನರಲ್ಲಿ ಇನ್ನಷ್ಟು ಶಂಕೆ, ಗೊಂದಲ ಮತ್ತು ತಂಟೆ ಉಂಟು ಮಾಡುತ್ತಾರೆ ಎಂದು ಹೇಳುತ್ತಾರೆ ಮಾನ್ಯ ಗುಂಡಪ್ಪನವರು.

ಯಾವುದೇ ವಿಷಯದ ಬಗ್ಗೆ ಒಂದೇ ಒಂದು ಸತ್ಯವಿರುತ್ತದೆ. ಎರಡು ಸತ್ಯವಿರಲು ಸಾಧ್ಯವಿಲ್ಲ. ಹಾಗೆ ಆ ಸತ್ಯವನ್ನು ಅರಿತುಕೊಳ್ಳಲು ಜ್ಞಾನ ಬೇಕು. ಅದು ಪ್ರಖರವಾದ ಶಾಸ್ತ್ರಾಧಾರಿತ ಜ್ಞಾನವಾಗಬಹುದು ಅಥವಾ ಶಾಂತ ಸ್ವರೂಪದ, ಕೇಳಿದ, ಚಿಂತಿಸಿ ಕಂಡುಕೊಂಡ, ಅನುಭವದ ಜ್ಞಾನವಾಗಬಹುದು ಅಥವಾ ನಮ್ಮ ಪರಿಮಿತ ಅರಿವಿಗೆ ಬಂದ ಸತ್ಯದ ರೂಪವಿರಬಹುದು. ಯಾವುದಾದರೂ ಸರಿಯೇ ಅದು ಜ್ಞಾನ ಮತ್ತು ಸತ್ಯವಾದ ಜ್ಞಾನವಾಗಿರಬೇಕು.

ಅಕಸ್ಮಾತ್ ನಾವು ಈ ಜ್ಞಾನದ ಮತ್ತು ಜ್ಞಾನವನ್ನು ಪಡೆದುಕೊಂಡು ಸತ್ಯದ ಶೋಧಕ್ಕೆ ಹೋಗದೆ ಅಜ್ಞಾನಿಗಳಾಗಿ ಉಳಿದರೆ ನಮಗೆ ಶಂಕೆಯೇ ಬರುವುದಿಲ್ಲ. ಆದರೆ ತಂಟೆ ಎಲ್ಲಿದೆಯೆಂದರೆ, ಎಡಬಿಡಂಗಿ ಜ್ಞಾನ, ಶಾಸ್ತ್ರವನ್ನು ಓದಿಕೊಂಡು (ಅರಿತುಕೊಂಡು ಅಲ್ಲ) ತಾನೇ ಮಹಾ ಪಂಡಿತ ಎಂದು ಕೊಚ್ಚಿಕೊಳ್ಳುವ ಅರೆ ಜ್ಞಾನಿಗಳು ಪ್ರತಿಪಾದಿಸುವ ತತ್ವಗಳು ಭಿನ್ನ ಭಿನ್ನವಾಗಿ ಜನರನ್ನು ಗೊಂದಲಕ್ಕೆ ಈಡುಮಾಡುತ್ತದೆ ಮತ್ತು ಭೇದಗಳನ್ನು ಉಂಟುಮಾಡಿ ತಂಟೆಗೆ ಕಾರಣವಾಗುತ್ತದೆ.

ವಾಚಕರೆ, ಒಟ್ಟಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದ ಮೂಲಕ ನಮಗೆ ಒಂದು ಸಂದೇಶವನ್ನು ಕೊಡುತ್ತಾರೆ. ಅದೇನೆಂದರೆ ಯಾವುದನ್ನೂ ಸರಿಯಾಗಿ ವಿಚಾರ ಮತ್ತು ವಿಮರ್ಶೆ ಮಾಡದೆ ಅರೆ ಬರೆ ಜ್ಞಾನ ಪಡೆಯುವುದಕ್ಕಿಂತ ತಿಳಿದುಕೊಳ್ಳುವುದನ್ನು ಸರಿಯಾಗಿ ಅಥವಾ ಸತ್ಯವಾದುದನ್ನೇ ತಿಳಿದುಕೊಳ್ಳಬೇಕು ಎಂದು. ಅಂತಹ ಸತ್ಯವಾದ ಜ್ಞಾನವನ್ನು ಪಡೆದುಕೊಳ್ಳುವ ನಿಟ್ಟಿನಲ್ಲಿ ನಮ್ಮ ಪ್ರಯತ್ನವೂ ನಡೆಯಲಿ.





**ಮುಕ್ತಕ-46**

**ಇರಲಿ ಜೀವರಹಸ್ಯವರೆಪರದೆಯೊಳಗಡಗಿ ।**
**ಅರಸಿ ವರಿಸುವರಾರು ಬೀದಿಬತ್ತಲಿಯ? ॥**
**ಅರಳಿಪುದದಡಗಿರ್ದೊಡಾಗ ನಮ್ಮೆದೆಗಣ್ಣ ।**
**ಸುರಸತೆಯ ಕುತುಕದಿಂ-ಮಂಕುತಿಮ್ಮ ॥**

ಜೀವರಹಸ್ಯವರೆಪರದೆಯೊಳಗಡಗಿ=ಜೀವ+ರಹಸ್ಯ+ಅರೆಪರದೆ+ಒಳಗೆ+ಅಡಗಿ,
ಅರಳಿಪುದದಡಗಿರ್ದೊಡಾಗ=ಅರಳಿಪುದು+ಅದು+ಅಡಗಿ+ಇರ್ದೊಡೆ+ಆಗ
ನಮ್ಮೆದೆಗಣ್ಣ=ನಮ್ಮ+ಎದೆಗಣ್ಣು

ಅರೆಪರದೆ=ಮಸುಕಾದ ಜ್ಞಾನ, ಅರಳಿಪುದು=ವಿಕಸನ ಮಾಡುವುದು, ಎದೆಗಣ್ಣು=ಅಂತರ್ಜ್ಞಾನ.

ಈ ಸೃಷ್ಟಿಯ ರಹಸ್ಯವು ತನ್ನ ನಿಜರೂಪವ ತೋರದೆ, ಒಂದು ಮಸುಕಾದ ಪರದೆಯೊಳಗೆ ಅಡಗಿದ್ದರೆ ಇರಲಿ, ನಮಗೆ ನಿಜವಾದ ಜ್ಞಾನವನ್ನು ಕೊಡಬೇಕಾದ ವಸ್ತು ಹೀಗೆ ಅಡಗಿ ಕುಳಿತಿದ್ದರೆ, ಹಾದಿಯಲ್ಲಿ ಹೋಗುವ ಓರ್ವ ಹುಚ್ಚಿಯನ್ನು ಯಾರಾದರೂ ಹುಡುಕಿಕೊಂಡು ಹೋಗಿ ಹೇಗೆ ವರಿಸುವುದಿಲ್ಲವೋ ಹಾಗೆ, ನಮ್ಮ ಅಂತಃಚಕ್ಷು ಕಾಣದ ವಸ್ತುವನ್ನು ಅರಿಯಲು ಕಾತರದಿಂದ ಕಾಯುತ್ತಿರುತ್ತದೆ ಎಂದು ಪರಮಾತ್ಮನನ್ನು ಅರಿತುಕೊಳ್ಳುವ ವಿಚಾರವನ್ನು ಮಾನ್ಯ ಗುಂಡಪ್ಪನವರು ಪ್ರಸ್ತಾಪಿಸುತ್ತಾರೆ.

ಹೌದು ನಮಗೆ ಅರಿವಾಗುವುದಿಲ್ಲ. ನಮಗೆ ಎಲ್ಲವೂ ಮಸುಕು. ಯಾವುದೂ ನಿಚ್ಚಳವಿಲ್ಲ. ನಾವೆಲ್ಲಾ ಬಹಳ ವಿಚಲಿತರಾಗಿದ್ದೇವೆ. ಏಕೆಂದರೆ ನಮ್ಮೆದುರಿಗೆ ಹಲವಾರು ರೂಪಗಳ ವಿವರಣೆ ಇದೆ. ಹಲವಾರು ಸಿದ್ಧಾಂತಗಳು, ಹಲವಾರು ಭೇದಗಳು ಮತ್ತು ಮತಗಳು. ಯಾವುದನ್ನು ನಂಬುವುದು, ಯಾವುದನ್ನು ಹಿಡಿದುಕೊಳ್ಳುವುದು, ಯಾವುದನ್ನು ಬಿಡುವುದು. ಎಲ್ಲವೂ ಮಸುಕು ಮಸುಕು. ಏಕೆಂದರೆ ನಮ್ಮನ್ನು ಸತ್ಯವಾದ ಜ್ಞಾನದೆಡೆಗೆ ಕೊಂಡೊಯ್ಯಬೇಕಾದ ವಸ್ತುವೇ ಅಡಗಿ ಕುಳಿತಿದೆ.

"ಅರಳಿಪುದು ಅದು ಅಡಗಿ ಇರ್ದೊಡೆ" ಹಾಗಿರುವಾಗ ನಾವು ಏನು ಮಾಡಬೇಕು. ಆ ಸತ್ಯದ ಅರಿವಾಗುವತನಕ ಹೃದಯದ ಕಣ್ಣನ್ನು, ಮನಸ್ಸಿನ ಕಣ್ಣನ್ನು ತೆರೆದಿಟ್ಟುಕೊಂಡು ಕಾತರದಿ ಕಾಯುವುದನ್ನು ಬಿಟ್ಟರೆ ಬೇರೆ ಏನು ದಾರಿ ಎನ್ನುವ ಭಾವ ವ್ಯಕ್ತವಾಗಿದೆ ಈ ಮುಕ್ತಕದಲ್ಲಿ.

ನೋಡಿ ನಮ್ಮ ಸಮಾಜದಲ್ಲಿ ಏನೆಲ್ಲ ನಂಬಿಕೆಗಳುಂಟು. ಆದರೆ ಯಾವುದೂ ಸಹ "ಇದೇ ಪರಮ ಸತ್ಯವೆನ್ನುವ ಗುಂಪಿಗೆ ಸೇರಲಾರದು. ಏಕೆಂದರೆ ಪರಮ ಸತ್ಯದ ಅರಿವು ನಮಗಿಲ್ಲ. ಹಾಗೆ ಇದ್ದಿದ್ದರೆ, ಇಷ್ಟು ಭೇದಗಳು ಇರುತ್ತಿರಲಿಲ್ಲ ಅಲ್ಲವೇ? ಕೆಲವರಿಗೆ, ಶಿವರೂಪ, ಕೆಲವರಿಗೆ ವಿಷ್ಣುರೂಪ, ಕೆಲವರಿಗೆ ಎರಡೂ, ಕೆಲವರಿಗೆ "ಒಂದು" (ಅದ್ವೈತ) ಕೆಲವರಿಗೆ ಯಾವುದೋ ವಿಶೇಷವಾದ "ಒಂದು" (ವಿಶಿಷ್ಟಾದ್ವೈತ) ಕೆಲವರಿಗೆ ಒಂದಲ್ಲ, ಎರಡು (ದ್ವೈತ). ಕೆಲವರಿಗೆ "ಕರ್ತಾರ" ಕೆಲವರಿಗೆ "ಅಲ್ಲಾ" . ಹೀಗೆ ಬೇರೆ ಬೇರೆ ಜನರಿಗೆ ಬೇರೆಯಾದರೆ, ಒಂದೇ ಸತ್ಯದ ದರ್ಶನವಾಗಿಲ್ಲವೆಂದೇ ಅರ್ಥವಲ್ಲವೇ?

ಇನ್ನೂ ಸ್ವಲ್ಪ ಆಳವಾಗಿ ಹೋದರೆ, ಆ ಒಂದನ್ನೋ ಅಥವಾ ಎರಡನ್ನೋ ಅರಿಯುವ ಪರಿಯಾದರೂ ಒಂದೇ ಇದೆಯೋ ಎಂದರೆ, ಅದೂ ಇಲ್ಲ. ವೈಷ್ಣವರಲ್ಲಿ ಶ್ರೀ ವೈಷ್ಣವರು, ಮಾಧ್ವರು, ಸ್ಮಾರ್ತರು, ಗೌಡೀಯರು, ಸ್ವಾಮೀ ನಾರಾಯಣ ಪಂಥದವರು, ಇನ್ನು ಶೈವರಲ್ಲಿ "ಸ್ಥಾವರ" ಲಿಂಗವನ್ನು ಪೂಜಿಸುವ ಶೈವರು, "ಜಂಗಮ" ಲಿಂಗವನ್ನು ಪೂಜಿಸುವ ವೀರಶೈವರು. ಈ ಎಲ್ಲ ಪಂಗಡಗಳಲ್ಲೂ ಒಳಪಂಗಡಗಳು ಮತ್ತು ಆ ಒಳಪಂಗಡಗಳಲ್ಲಿ ಒಳಪಂಗಡಗಳು. ಈ ಭೇದಗಳ ಬಗ್ಗೆ ಬರೆದರೆ ಒಂದು ಗ್ರಂಥವನ್ನೇ ಬರೆಯಬಹುದು. ಆದರೆ ಆ ಪರಮ ಸತ್ಯದ ಬಗ್ಗೆ ಬರೆಯಲು ಒಂದು ಪುಟದಷ್ಟೂ ಗೊತ್ತಿಲ್ಲ. ಇದೆಲ್ಲ ಏಕೆ, ಏನು ಎಂದು ಆಲೋಚನೆ ಮಾಡಿದರೆ, ನಮಗೆ ಇನ್ನಷ್ಟು ಗೊಂದಲವುಂಟಾಗುತ್ತದೆ.

ಕೆಲವರಿಗೆ ವಾರಕ್ಕೊಂದು ದೇವರು. ದಿನಕ್ಕೊಂದು ದೇವರು. ಆ ದೇವರುಗಳಿಗೆ ಬೇರೆ ಬೇರೆಯಾದ ವ್ರತ ನೇಮಗಳು. ಕೆಲವರಿಗೆ ಇದ್ದಾನೆ, ಕೆಲವರಿಗೆ ಇಲ್ಲ. ಕೆಲವರಿಗೆ ಗೊತ್ತಿಲ್ಲ. ಯಾರೋ ಒಬ್ಬ ಅವನ ಅನುಭವದ ಸೀಮಿತ ಮಿತಿಯಿಂದ ಏನನ್ನೋ ಹೇಳುತ್ತಾನೆ. ನಾವು ಯೋಚನೆ, ಚಿಂತನೆ ಮಾಡಲು ಅಸಮರ್ಥರು. ಅವನ ಬಾಲ ಹಿಡಿದು ಅವನು ಹೇಳಿದ್ದನ್ನು ನಂಬುತ್ತೇವೆ. ಅವನ ದರ್ಶನವನ್ನು ನಮ್ಮ ದರ್ಶನವೆಂದು ಹೇಗೆ ನಂಬುವುದು. ಹೀಗೆ ಇಷ್ಟೊಂದು ಭೇದಗಳಿರುವಾಗ, ಒಂದು ಸತ್ಯವು ಇನ್ನೂ ಪ್ರಕಟವಾಗದೆ, ಅಡಗಿ ಕುಳಿತಂತೆ ಅಲ್ಲವೇ? ಯಾವುದೂ "ಇದೇ-ಇದು" ಎಂದು ನಿಷ್ಕರ್ಷೆಯಾಗದಿರುವಾಗ, ನಾವು ಯಾವುದನ್ನೂ ಒಂದನ್ನು ಹಿಡಿದುಕೊಂಡು ಹೋದರೆ ದಾರಿಯಲ್ಲಿ ಹೋಗುವ ಹುಚ್ಚಿಯನ್ನು ಇಷ್ಟಪಟ್ಟು ಮದುವೆ ಮಾಡಿಕೊಂಡಹಾಗೆ ಎನ್ನುತ್ತಾರೆ ಶ್ರೀ.ಡಿ.ವಿ.ಜಿ. ಯವರು.

ಹಾಗಾಗಿ ವಾಚಕರೆ, ನಾವು ಏನು ಮಾಡಬೇಕು ಎಂದರೆ, ಅಂತರ್ಮುಖಿಗಳಾಗಬೇಕು. ನಮ್ಮ ಒಳಗಿರುವ ಜ್ಞಾನದ ಕಣ್ಣನ್ನು ಉದ್ದೀಪನಗೊಳಿಸಬೇಕು, ಒಬ್ಬ ಸರಿಯಾದ ಗುರುವನ್ನು ಆಶ್ರಯಿಸಬೇಕು ಮತ್ತು ನಮಗೆ ಆ ಪರಮ ಸತ್ಯದ ಅರಿವಾಗುವ ತನಕ ಕಾಯಬೇಕು. ಎಂದೋ ಒಂದು ದಿನ ನಮಗೂ ಅರಿವು ಮೂಡುತ್ತದೆ ಮತ್ತು ಆ ಪರಮ ಶಕ್ತಿಯ ನಿಜ ಸ್ವರೂಪದ ದರ್ಶನವಾಗುತ್ತದೆ. ಹಾಗೆಂದರೆ, ನಾಲ್ಕು ಕೈಗಳಿಂದ, ಶಂಖ ಚಕ್ರಗಳಿಂದ ಅಲಂಕೃತನಾದ ವಿಷ್ಣುವೋ ಅಥವಾ ತ್ರಿಶೂಲಪಾಣಿಯಾಗಿ ವಿಷಕಂಠನಾದ ಶಿವನೋ ಕಾಣುತ್ತಾರೆಂದಲ್ಲ. ಆ ರೂಪದ ಹಿಂದಿರುವ ತತ್ವದ ದರ್ಶನವಾಗುತ್ತದೆ. ಅದೇ ಆಧ್ಯಾತ್ಮ ಸಾಧನೆಯ ಉದ್ದೇಶ.

ಬನ್ನಿ ನಾವೆಲ್ಲರೂ ಈ ನಿಟ್ಟಿನಲ್ಲಿ ನಮ್ಮ ಹೃದಯದ ಕಣ್ಣುಗಳನ್ನು ತೆರೆಯಲು ಪ್ರಯತ್ನಪಟ್ಟು ಒಂದೇ ಸತ್ಯದ ಮತ್ತು ಸತ್ವ ಭರಿತವಾದ ತತ್ವದ ದರ್ಶನಕ್ಕಾಗಿ ಕಾಯೋಣ.

**ಮುಕ್ತಕ-47**

**ಅರೆಗಣ್ಣು ನಮದೆಂದು ಕೊರಕೊರಗಿ ಫಲವೇನು? |**
**ಅರೆಬೆಳಕು ಧರೆಯೊಳೆಂದೊರಲಿ ಸುಖವೇನು? ||**
**ಇರುವ ಕಣ್ಣಿರುವ ಬೆಳಕಿನೊಳಾದನಿತ ನೋಡಿ |**
**ಪರಿಕಿಸಿದೊಡದು ಲಾಭ-ಮಂಕುತಿಮ್ಮ ||**

ಧರೆಯೊಳೆಂದೊರಲಿ=ಧರೆಯೊಳು+ಎಂದು+ಒರಲಿ, ಬೆಳಕಿನೊಳಾದನಿತ=ಬೆಳಕಿನೊಳು+ಆದ+ಇನಿತ. ಅರೆಗಣ್ಣು=ಅರ್ಧಂಬರ್ಧ ಜ್ಞಾನ. ಅರೆಬೆಳಕು=ಅರ್ಧಬೆಳಕು. ಒರಲಿ=ಕೂಗಿ. ಇನಿತ=ಒಂದಿಷ್ಟು, ಪರಿಕಿಸಿದೊಡದು=ಪರೀಕ್ಷಿಸಿದರೆ ಅದು.

"ನಮಗೆ ತಿಳಿದಿರುವುದು ಅರೆ ಬರೆ. ಈ ಅರೆ ಬರೆ ಜ್ಞಾನವನ್ನು ಇಟ್ಟುಕೊಂಡು ನಾವು ಪೂರ್ಣ ಸತ್ಯವನ್ನು ಪಡೆಯುವುದು ಹೇಗೆ?" ಎಂದು ಗೋಳಾಡದೆ, ಇರುವ ಅರಿವಿನಿಂದ ಸಂಪೂರ್ಣ ಜ್ಞಾನವನ್ನು ಪಡೆದುಕೊಳ್ಳಲು ಪ್ರಯತ್ನಿಸಿದರೆ ಅದು ಲಾಭದಾಯಕವೆನ್ನುತ್ತಾರೆ ಶ್ರೀ ಗುಂಡಪ್ಪನವರು. ಈ ಜಗತ್ತಿನ ಯಾವುದೇ ಭಾಗದಲ್ಲಿ ದಿನದ ಅರ್ಧಭಾಗ ಬೆಳಕು ಇನ್ನರ್ಧ ಭಾಗ ಕತ್ತಲು, ಬೆಳಕಿನಲ್ಲಿ ನಾವು ನಮ್ಮ ಕೆಲಸ ಕಾರ್ಯಗಳು ಮಾಡುವ ಹಾಗೆ, ಇರುವ ಜ್ಞಾನವನ್ನು ಉಪಯೋಗಿಸಿದರೆ ಲಾಭ ಎನ್ನುತ್ತಾರೆ. ಮಾನ್ಯ ಗುಂಡಪ್ಪನವರು.

ಒಬ್ಬ ಒಂದು ರಾತ್ರಿ ಎಲ್ಲೋ ಹೋಗಬೇಕಿತ್ತು. ಕತ್ತಲೆ. ಕೈನಲ್ಲಿ ಒಂದು ಲಾಟೀನು. ಅವನು ಹೋಗಬೇಕಾದ ದೂರ ಹತ್ತು ಮೈಲು. ಅಯ್ಯೋ ಈ ಕಡಿಮೆ ಬೆಳಕಿನ ಲಾಟೀನು ಇಟ್ಟುಕೊಂಡು ಅಷ್ಟು ದೂರ ನಾ ಹೇಗೆ ಸವೆಸುವುದು ಎಂದು ಯೋಚಿಸುತ್ತಾ ಕುಳಿತಿದ್ದ. ಆಗ ಅವನಿಗೆ ಒಬ್ಬರು ಒಂದು ಸೂಚನೆಯನ್ನು ಕೊಟ್ಟರು. "ನಿನ್ನ ಲಾಟೀನಿನ ಬೆಳಕು ಹತ್ತು ಹೆಜ್ಜೆಗೆ ಸಾಕಾಗುವಷ್ಟು ಬೆಳಕನ್ನು ನೀಡುತ್ತದೆ. ಹಾಗಾಗಿ ಮೊದಲ ಹತ್ತು ಹೆಜ್ಜೆ ಆ ಬೆಳಕಿನ ಸಹಾಯದಿಂದ ನಡೆ. ಮುಂದಕ್ಕೆ ಇನ್ನೂ ಹತ್ತು ಹೆಜ್ಜೆ ನಿಚ್ಚಳವಾಗಿ ಕಾಣುವುದು. ಇದೇ ರೀತಿ ನೀ ಸವೆಸಬೇಕೆಂದಿರುವ ಹತ್ತೂ ಮೈಲಿಗಳನ್ನು ದಾಟಬಹುದು" ಎಂದು. ಅವರ ಮಾತ ಕೇಳಿ ಅವನು ಹತ್ತೂ ಮೈಲಿಗಳನ್ನು ಅನಾಯಾಸವಾಗಿ ದಾಟಿದ.

ವಾಚಕರೆ, ಎಲ್ಲ ಮಾನವರಿಗೂ ಒಂದಿನಿತು ಜ್ಞಾನವಿರುತ್ತದೆ. ಅವರು ಹುಟ್ಟಿಬಂದ ಮನೆಯ ವಾತಾವರಣ, ಅವರಿರುವ ಸಮಾಜ, ಅವರಿಗೆ ದೊರೆತ ವಿದ್ಯಾಭ್ಯಾಸ, ಅವರಿಗೆ ದೊರೆತ ಸಾಂಗತ್ಯ ಅವರು ಓದುವ ಪುಸ್ತಕ, ಹೀಗೆ ಹಲವಾರು ವಿಷಯಗಳ ಮೇಲೆ ಆಧಾರವಾಗಿರುತ್ತದೆ. ಹಾಗಾಗಿಯೇ ಜನರಲ್ಲಿ ಅರಿವಿನ ಪ್ರಮಾಣದ ವ್ಯತ್ಯಾಸ ಮತ್ತು ಅರಿವಿನ ವ್ಯತ್ಯಯ. ಅಯ್ಯೋ ಅವರಿಗೆ ಎಷ್ಟು ವಿಷಯ ಗೊತ್ತು, ನನಗೇನೂ ಗೊತ್ತಿಲ್ಲ ಎಂದು ಹಲುಬುವುದಕ್ಕಿಂತ, ನಮಗೆ ಗೊತ್ತಿರುವ ವಿಚಾರಗಳನ್ನೇ ಚಿಂತಿಸಿ, ಅಂತರಂಗದಲ್ಲಿ ಮಥಿಸಿ, ಜ್ಞಾನಿಗಳೊಡಗೂಡಿ, ಆಲಿಸಿ, ಸಂದೇಹಗಳನ್ನು ನಿವಾರಿಸಿಕೊಂಡು, ನಮ್ಮೊಳಗೆ ನಾವೇ ವಿಚಾರಮಂಥನ ಮಾಡಿಕೊಂಡರೆ, ನಮ್ಮ ಅರಿವಿನ ಪರಿಧಿಯನ್ನು ವಿಸ್ತರಿಸಿಕೊಳ್ಳಬಹುದು.

ಹಾಗಾಗಿ, ನಾವು ಸತ್ಯವಾಗಿ ನಮ್ಮ ನಮ್ಮ ಅರಿವಿನ ಸ್ತರವನ್ನು ಅರಿತುಕೊಳ್ಳಬೇಕು. ಅರಿತಿದ್ದನ್ನು ಸಂದೇಹವಿಲ್ಲದೆ ಗಟ್ಟಿಮಾಡಿಕೊಳ್ಳಬೇಕು. ಮೇಲೆ ಹೇಳಿದ ವಿಧಾನದಲ್ಲಿ ಅದನ್ನು ವಿಸ್ತರಿಸಿಕೊಳ್ಳಲು ಪ್ರಾಮಾಣಿಕ ಪ್ರಯತ್ನ





ಮಾಡಬೇಕು. ಹಾಗೆ ಮಾಡಿದರೆ ನಮಗೆ ನಮ್ಮ ಜ್ಞಾನವನ್ನು ವೃದ್ಧಿಸಿಕೊಳ್ಳಲು ಲಾಭವಾಗುತ್ತದೆ ಎನ್ನುವುದೇ ಈ ಮುಕ್ತಕದ ಹೂರಣ.

**ಮುಕ್ತಕ-48**

**ಒಂದಿಹುದುಪಾಯವೋರೊರ್ವನರೆಗಣ್ಣುಗಳು |**
**ವೊಂದೊಂದು ಸತ್ಯಾಂಶಕಿರಣಗಳ ಪಿಡಿದು ||**
**ಒಂದುಗೂಡಿದೊಡವರ್ಗಳರಿವನೆಲ್ಲವನಾಗ |**
**ಮುಂದುಸಾಗುವೆವಿನಿತು-ಮಂಕುತಿಮ್ಮ ||**

ಒಂದಿಹುದುಪಾಯವೋರೊರ್ವನರೆಗಣ್ಣುಗಳು=ಒಂದು+ಇಹುದು+ಉಪಾಯ+ವೋರೊರ್ವನ+ಅರೆಗಣ್ಣುಗಳು,
ಒಂದುಗೂಡಿದೊಡವರ್ಗಳರಿವನೆಲ್ಲವನಾಗ=ಒಂದು+ಕೂಡಿದೊಡೆ+ಅವರ+ಅರಿವನೆಲ್ಲವ+ಆಗ

ಅರೆಗಣ್ಣುಗಳು-ಅರೆಬರೆ ಜ್ಞಾನ, ಇನಿತು=ಸ್ವಲ್ಪ.

ಎಲ್ಲರಲ್ಲೂ ಅವರವರ ಭಾವಕ್ಕೆ ಅನುಗುಣವಾಗಿ ಅಲ್ಪ ಸ್ವಲ್ಪ ಜ್ಞಾನವಿರುತ್ತದೆ. ಜ್ಞಾನಶೂನ್ಯ ಎಂಬುವವನು ಇರಲು ಸಾಧ್ಯವೇ ಇಲ್ಲ. ಹಾಗೆ ಎಲ್ಲರಿಗೂ ಇರುವ ಅಲ್ಪಸ್ವಲ್ಪ ಜ್ಞಾನಗಳನ್ನೆಲ್ಲ, ಎಲ್ಲರ ಮನದಲ್ಲಿರುವ ಸತ್ಯವಾದ ವಿಚಾರಗಳನ್ನು ಒಂದು ಕಡೆ ಸೇರಿಸಿ ಎಲ್ಲರೂ ತಮ್ಮ ಮತವೇ ಉತ್ತಮವಾದದ್ದು ಎಂಬ ಭಾವನೆ ತೊರೆದು ಒಮ್ಮತದಿಂದ ಮುಂದೆ ಹೋದರೆ, ಎಲ್ಲರೂ ಪರಮಸತ್ಯವನ್ನರಿಯುವ ಹಾದಿಯಲ್ಲಿ ಒಂದಿಷ್ಟು ಮುಂದಕ್ಕೆ ಹೋಗಬಹುದು ಎನ್ನುವುದು ಈ ಮುಕ್ತಕದ ಮೂಲಕ ಮಾನ್ಯ ಗುಂಡಪ್ಪನವರ ಪ್ರಸ್ತಾಪ.

ನೋಡಿ ಪ್ರತಿಯೊಂದು ವಿಷಯದಲ್ಲೂ ಪ್ರತಿಯೊಬ್ಬರೂ ಅವರವರದೇ ಅಭಿಪ್ರಾಯಗಳನ್ನು ಇಟ್ಟುಕೊಂಡಿರುತ್ತಾರೆ. ಬಹಳ ಕಡಿಮೆ ಸಂದರ್ಭದಲ್ಲಿ ಇಬ್ಬರ ಅಭಿಮತ ಸೇರುತ್ತದೆ. ಆದರೆ ಪ್ರತಿಯೊಬ್ಬರ ಅಭಿಮತವನ್ನೂ ಬೇರೆ ಬೇರೆಯಾಗಿ, ಪೂರ್ವಾಗ್ರಹವಿಲ್ಲದೆ, ನೋಡಿದರೆ ಎಲ್ಲವೂ ಸರಿಯೆಂದು ಕಾಣುತ್ತದೆ. ಇದೇ ರೀತಿ ಆ ಪರಮಾತ್ಮನನ್ನು ಅರಿಯುವ ಪರಿಯಲ್ಲೂ ಪ್ರತಿಯೊಬ್ಬರಿಗೂ ಅವರವರದೇ ಆದಂತಹ ಅಭಿಪ್ರಾಯಗಳಿರುತ್ತದೆ. ಅದು ಅವರವರ ಭಾವಕ್ಕೆ ಬಂದದ್ದು. ಅಲ್ಲಗೆಳೆಯುವಂತಿಲ್ಲ. ಆದರೆ ಯಾವುದೂ ಸಂಪೂರ್ಣ ಸತ್ಯದೆಡೆಗೆ ನಮ್ಮನ್ನು ಕೊಂಡುಹೋಗುವಲ್ಲಿ ಅಸಮರ್ಥವಾಗಿರುತ್ತದೆ.

ಈ ಜಗತ್ತಿನಲ್ಲಿರುವ ಎಲ್ಲ ಮತಗಳೂ ಹಾಗೆಯೇ. ಹತ್ತು ಹಲವಾರು. ಉದ್ದೇಶ ಒಂದೇ ಆದರೂ ಮಾರ್ಗಗಳು ಬೇರೆ ಬೇರೆ. ಕೆಲವರದು ವಿಸ್ತಾರ, ಮತ್ತೆ ಕೆಲವರದು ಕ್ಲುಪ್ತ. ಕೆಲವರದು ಸುಲಭ, ಮತ್ತೆ ಕೆಲವರದು ಕ್ಲಿಷ್ಟ. ಗುಂಪು ಗುಂಪುಗಳಾಗಿ ಜನರು, ತಮ್ಮ ಯೋಚನಾ ಸಾಮರ್ಥ್ಯಕ್ಕೆ ತಿಲಾಂಜಲಿ ಕೊಟ್ಟು ಕೆಲವರನ್ನು ಮತ್ತು ಕೆಲವರ ಅಭಿಮತವನ್ನು ನಂಬುತ್ತಾರೆ. ಅದನ್ನು ಅಂಧಾನುಕರಣೆ ಎನುತ್ತೀರೋ ಅಥವಾ ಮೂಢನಂಬಿಕೆ ಎನುತ್ತೀರೋ ವಾಚಕರ ಅಭಿಮತಕ್ಕೆ ಬಿಟ್ಟದ್ದು. ಈ ಮತ ಪ್ರತಿಪಾದಕರು ತಮ್ಮ ಮತವೇ ಉತ್ತಮ, ಉತ್ಕೃಷ್ಟ, ಬೇರೆಲ್ಲವೂ ಸರಿಯಿಲ್ಲ ಎನ್ನುವ ಭೇದವನ್ನು ಅವರ ಅನುಯಾಯಿಗಳ ಮನದಲ್ಲಿ ಬಿತ್ತಿ, ತಮ್ಮ ಅನುಯಾಯಿಗಳ

ಸಂಖ್ಯೆಯನ್ನು ಬೆಳೆಸಿಕೊಳ್ಳುವುದರಲ್ಲಿ ನಿರಂತರ ನಿರತರು. ಹಾಗಾಗಿಯೇ ಇಷ್ಟೊಂದು ಮತಗಳು, ಮತಭೇದಗಳು ಮತ್ತು ಮತೀಯ ಕಲಹಗಳು.

ಅಜ್ಞಾನದ ಪರಮಾವಧಿ !!!! ನಾವೇನು ಮಾಡಬೇಕು ಎಂದರೆ, ಮೊದಲು ನಮ್ಮ ಮನದಿಂದ ದ್ವೇಷವನ್ನು ತೆಗೆಯಬೇಕು. ಅಹಂಕಾರವನ್ನು ತೆಗೆಯಬೇಕು. ಅನ್ಯರನ್ನು ಸಹಿಸಿಕೊಳ್ಳುವ ಮನೋಭಾವ ಬೆಳೆಸಿಕೊಳ್ಳಬೇಕು. ಆಗ ನಮಗೆ ಪ್ರತಿಯೊಬ್ಬರ ಮತದಲ್ಲೂ ಒಂದು ಮೂಲ ಸತ್ಯದ ದರ್ಶನವಾಗುತ್ತದೆ. ಹಾಗೆ ಎಲ್ಲರಲ್ಲೂ ಕಾಣುವ ಒಂದು ಸಮಾನ ಸತ್ಯಾಂಶವನ್ನು ತೆಗೆದುಕೊಂಡು ಅದನ್ನು ನಮ್ಮೆಲ್ಲರ ನಡಿಗೆಯ ಪ್ರಾರಂಭ ಬಿಂದುವನ್ನಾಗಿ ಗುರುತಿಸಿಕೊಂಡು ಅಲ್ಲಿಂದ ಮುಂದಕ್ಕೆ ಹೋದರೆ, ನಾವೆಲ್ಲರೂ ಏಕಮತದಿಂದ ಪರಮಾತ್ಮನನ್ನು ಅರಿಯುವ ನಮ್ಮ ಪ್ರಯತ್ನದಲ್ಲಿ ಸಫಲತೆಯನ್ನು ಪಡೆಯಬಹುದು ಅಲ್ಲವೆ? ಆದರೆ ಎಲ್ಲಿಯತನಕ, ಅಸಹಿಷ್ಣುತೆ ಮತ್ತು ಅಹಂಕಾರಗಳು ಇರುತ್ತವೆಯೋ, ಅದು ಅಸಾಧ್ಯ.

ಹಾಗಾಗಿ ನಾವು ಅಹಂಕಾರವನ್ನು ಮತ್ತು ಅಂಧಾನುಕರಣೆಯನ್ನು ತೊರೆದು ಜಾತಿ, ಮತ, ವರ್ಣ, ಲಿಂಗ ಭೇದಗಳನ್ನು ಅಳಿಸಿ ಒಮ್ಮತದಿಂದ ನಮ್ಮೆಲ್ಲರ ಅಂತಃಸತ್ಯವನ್ನು ಒಂದೆಡೆ ಸೇರಿಸುವ ಪ್ರಯತ್ನವನ್ನು ಮಾಡಿ ತನ್ಮೂಲಕ ಪರಮ ಸತ್ಯದ ಅರಿವಿನೆಡೆಗೆ ಹೋಗೋಣ.

# ಹೃದಯರುಚಿ ಚೋದ್ಯ 49-53

**ಮುಕ್ತಕ-49**

**ಪಂಡಿತರೆ ಶಾಸ್ತ್ರಿಗಳ ಮಿಥ್ಯೆಯಿಂ ತಥ್ಯಕ್ಕೆ |**
**ಖಂಡಿತದಿ ಸೇತುವೆಯ ಕಟ್ಟುವೊಡೆ ನೀವು ||**
**ಕಂಡಿಹಿರ ನರಹೃದಯದಾಳ ಸುಳಿ ಬಿರುಬುಗಳ |**
**ದಂಡವದನುಳಿದ ನುಡಿ-ಮಂಕುತಿಮ್ಮ ||**

ನರಹೃದಯದಾಳ=ನರ+ಹೃದಯದ+ಆಳ, ದಂಡವದನುಳಿದ=ದಂಡವು+ಅದನು+ಉಳಿದ,
ಪಂಡಿತರೆ=ಪಾಂಡಿತ್ಯವನ್ನರಿತವರೆ, ಶಾಸ್ತ್ರಗಳೆ=ಶಾಸ್ತ್ರಗಳನ್ನರಿತವರೆ, ಮಿಥ್ಯೆಯಿಂ=ಸುಳ್ಳಿನಿಂದ,
ತಥ್ಯಕ್ಕೆ=ಸತ್ಯಕ್ಕೆ ಕಟ್ಟುವೊಡೆ=ಕಟ್ಟುವಾಗ, ಬಿರುಬು=ಕಾಠಿಣ್ಯ

ಪಾಂಡಿತ್ಯವನ್ನು ಪ್ರತಿಪಾದಿಸುವ ಪಂಡಿತರೆ ಮತ್ತು ಶಾಸ್ತ್ರವನ್ನು ಪ್ರತಿಪಾದಿಸುವ ಶಾಸ್ತ್ರಿಗಳೆ, ನಿಮ್ಮ ಪಾಂಡಿತ್ಯದಿಂದ ಮತ್ತು ಶಾಸ್ತ್ರ ಪ್ರತಿಪಾದನೆಯಿಂದ ಸುಳ್ಳನ್ನೇ ನಿಜವೆಂದು ನಿರೂಪಿಸಲು ಮತ್ತು ಇವೆರಡರ ಮಧ್ಯೆ ಒಂದು ಸೇತುವೆಯನ್ನು ಕಟ್ಟುವಾಗ ಸಾಮಾನ್ಯ ಮನುಜರ ಹೃದಯದಾಳದಲ್ಲಿ ಇರುವ ಗೊಂದಲಗಳು, ಅವರು ಅನುಭವಿಸುವ ಕಾಠಿಣ್ಯಗಳನ್ನು ಕಂಡಿದ್ದೀರಾ ಎಂದು ಕೇಳುತ್ತಾ ಸಾಮಾನ್ಯರ ಮನದ ಭಾವದ ಮುಂದೆ ಎಲ್ಲ ಪಾಂಡಿತ್ಯವೂ ಮತ್ತು ಶಾಸ್ತ್ರಗಳೂ ದಂಡವೆನ್ನುತ್ತಾರೆ (ನಿಷ್ಪ್ರಯೋಜಕ) ಮಾನ್ಯ ಗುಂಡಪ್ಪನವರು.





"ಪುಸ್ತಕದ ಬದನೇಕಾಯಿ" ಎನ್ನುವ ಮಾತು ಒಂದು ಇದೆ. ಅಂದರೆ ಯಾರೋ ಬರೆದ ವಿಷಯವನ್ನು ಓದಿಕೊಂಡು ಮನನಮಾಡಿಕೊಂಡು ತಮ್ಮ ವಾಗ್ಝರಿಯಿಂದ ತಾವು ಅರಿತಿದ್ದು ಸತ್ಯವೋ ಸುಳ್ಳೋ ಎಂದು ವಿವೇಚನೆಯಿಲ್ಲದೆ ತಮ್ಮ ಪಾಂಡಿತ್ಯವನ್ನು ಪ್ರಸ್ತುತಪಡಿಸುವ ಪಂಡಿತರ ಪರಿ ಮತ್ತು ತಮ್ಮ ಅನುಭವಕ್ಕೆ ತಂದುಕೊಳ್ಳದೆ ಶಾಸ್ತ್ರವನ್ನು ಓದಿಕೊಂಡು, ಆ ಶಾಸ್ತ್ರದಲ್ಲಿನ ವಿಧಾನಗಳು, ವೈಜ್ಞಾನಿಕವೋ ಅಥವಾ ಮಾತ್ರ ಮೂಢನಂಬಿಕೆಯೋ ಎಂಬುದನ್ನು ಪರೀಕ್ಷಿಸದೆ ತಾವು ತಿಳಿದದ್ದೇ ಸತ್ಯವೆಂದು ಜನಗಳಿಗೆ ತಮ್ಮ ಮತವನ್ನು ರುಬ್ಬುವ ಶಾಸ್ತ್ರ ಪ್ರತಿಪಾದಕರ ವಿಧಾನ, ಎರಡೂ ಸರಿಯಲ್ಲ. ಅವರು ಕೆಲವು ಬಾರಿ ತಮ್ಮ ಅರಿವು ಸತ್ಯಕ್ಕೆ ದೂರವಾಗಿದೆ ಎಂದು ಅರಿತಿದ್ದರೂ ತಾವು ತಿಳಿದದ್ದೇ ಸತ್ಯವೆಂದು ಪ್ರತಿಪಾದಿಸಿ, ತಮ್ಮ ಸ್ಥಾನವನ್ನು ಸುಭದ್ರವಾಗಿಸಿಕೊಳ್ಳಲು ಸತ್ಯ ಮತ್ತು ಸುಳ್ಳಿನ ಮಧ್ಯೆ ಒಂದು ಸೇತುವೆಯನ್ನು ಕಟ್ಟುತ್ತಾರೆ. ಇವರು ಪ್ರತಿಪಾದಿಸುವ ವಿಷಯಗಳನ್ನು ಇನ್ನು ಸ್ವಲ್ಪ ಸಮಯದ ನಂತರ ಬೇರೆ ಯಾರೋ ಸುಳ್ಳೆಂದು ನಿರೂಪಿಸುತ್ತಾರೆ!!!

ಏಕೆಂದರೆ ಅವರಿಗೆ ಸಾಮಾನ್ಯ ಮಾನವರ ಮನದ ಅಂತರಂಗದಲ್ಲಿರುವ ಭಾವನೆಗಳು ಅರ್ಥವೇ ಆಗುವುದಿಲ್ಲ ಅಥವಾ ಇವರುಗಳು ಅದನ್ನು ಅರ್ಥಮಾಡಿಕೊಳ್ಳುವ ಪ್ರಯತ್ನವನ್ನೇ ಮಾಡುವುದಿಲ್ಲ. ಅವುಗಳು ಸತ್ಯಕ್ಕೆ ಹತ್ತಿರವಾಗಿರುತ್ತವೆ. ಏಕೆಂದರೆ ಅವು ಅನುಭವದ ಮೂಸೆಯಿಂದ ಎರಕ ಹೊಯ್ದಂತಾಗಿರುತ್ತದೆ. ಪ್ರತಿಯೊಂದು ವಸ್ತು ಮತ್ತು ವಿಷಯ ಅವರು ಸ್ವತಃ ಅನುಭವಿಸಿ ನಿಜ ಭಾವಗಳನ್ನು ಅರ್ಥೈಸಿಕೊಂಡು ಅನುಭವಿಸಿರುತ್ತಾರೆ. ಆ ರೀತಿಯ ಯಾವ ಅನುಭವವೂ ಇಲ್ಲದೆ, ಕೇವಲ ಪುಸ್ತಕದ ಮಾತು ಶಾಸ್ತ್ರದ ವಿಷಯವನ್ನು ಪ್ರತಿಪಾದಿಸುವ ಪಂಡಿತರ

ನುಡಿಗಳಿಗಿಂತ ಜನ ಸಾಮಾನ್ಯರ ಆಂತರ್ಯದ ಅನುಭವದ ಭಾವಗಳಿಗೆ ಹೆಚ್ಚು ಮಹತ್ವ ಎನ್ನುತ್ತಾರೆ ಶ್ರೀ ಗುಂಡಪ್ಪನವರು.

ವಾಚಕರೆ ಇದು ನಮಗೂ ಅನುಭವಕ್ಕೆ ಬಂದಿರುವ ವಿಷಯವೇ. ಆದರೆ ಶಾಸ್ತ್ರ ಮತ್ತು ಪುಸ್ತಕದ ವಿಚಾರಗಳನ್ನು ಸಂಪೂರ್ಣ ತೊರೆಯಬೇಕೆ ಎನ್ನುವುದು ಪ್ರಶ್ನೆ? ಅಲ್ಲ. ಹಾಗೆ ತೊರೆಯುವುದೂ ಬೇಡ. ನಾವು ಏನು ಮಾಡಬೇಕೆಂದರೆ, ಆ ಪುಸ್ತಕಗಳ ಮತ್ತು ಶಾಸ್ತ್ರಗಳ ವಿಷಯಗಳನ್ನು ನಮ್ಮ ವಿಚಾರಕ್ಕೆ ಒಳಪಡಿಸಿ, ತಿಕ್ಕಿ, ತೀಡಿ, ಕಡೆದು ಅದರೊಳಗಿನ ಸತ್ವವನ್ನು ನಮ್ಮ ಅನುಭವಗಳೊಂದಿಗೆ ಮಿಶ್ರಣ ಮಾಡಿ ನಮಗೆ ಗೋಚರವಾದ ಸತ್ಯವನ್ನು ನಾವು ನಮ್ಮ ಮನಸ್ಸುಗಳಲ್ಲಿ ಗಟ್ಟಿಮಾಡಿಕೊಳ್ಳಬೇಕು. ಹೇಗೆ ಒಂದು ಹಂಸವು ನೀರು ಬೆರೆತ ಹಾಲಿನಲ್ಲಿ ನೀರನ್ನು ತೊರೆದು ಹಾಲನ್ನು ಮಾತ್ರ ಹೀರುತ್ತದೋ ಹಾಗೆ ನಾವು ಈ ಶಾಸ್ತ್ರ ಮತ್ತು ಪಾಂಡಿತ್ಯದ ವಿಚಾರಗಳಲ್ಲಿರುವ ಸತ್ವವನ್ನು ಹೀರಿ ನಮ್ಮ ವಿಚಾರವನ್ನು ಶುದ್ಧಿಮಾಡಿಕೊಳ್ಳಬೇಕು. ಶುದ್ಧ ವಿಚಾರದಿಂದ, ಶುದ್ಧ ಆಚರಣೆ. ಶುದ್ಧ ಆಚರಣೆಯಿಂದ ಮನೋ ನೆಮ್ಮದಿ.





**ಮುಕ್ತಕ-50**

**ಮನೆಯೆಲ್ಲಿ ಸತ್ಯಕ್ಕೆ? ಶೃತಿ ತರ್ಕಮಾತ್ರದೊಳೆ? |**
**ಅನುಭವಮುಮದರೊಂದು ನೆಲೆಯಾಗದಿಹುದೇಂ? ||**
**ಮನುಜಹೃದಯಾಂಗಣದೊಳೆನಿತೆನಿತೊ ದನಿಯುದಿಸಿ |**
**ಅಣಕಿಸುವು ತರ್ಕವನು-ಮಂಕುತಿಮ್ಮ ||**

ಅನುಭವಮುಮದರೊಂದು=ಅನುಭವಮುಂ+ಅದರೊಳು+ಒಂದು,

ನೆಲೆಯಾಗದಿಹುದೇಂ=ನೆಲೆ+ಆಗದಿಹುದು+ಅದೇಂ,

ಮನುಜಹೃದಯಾಂಗಣದೊಳೆನಿತೆನಿತೊ=ಮನುಜ+ಹೃದಯ+ಆಂಗಣದೊಳು+ಎನಿತು+ಇನಿತೋ,

ದನಿಯುದಿಸಿ=ದನಿಯು+ಉದಿಸಿ

ಅಣಕಿಸುವು=ಅಣಕವಾಡುತ್ತದೆ. ಉದಿಸಿ=ಉದ್ಭವವಾಗಿ

ಸತ್ಯಕ್ಕೆ ಎಲ್ಲಿ ಮನೆ? ಶೃತಿ ತರ್ಕ ಮತ್ತು ವಾದಗಳಲ್ಲಿ ಮಾತ್ರವೇನು? ಮನುಜರ ಅನುಭವವೂ ಸತ್ಯವನ್ನು ನುಡಿಯಬಾರದೇನು? ಮನುಜರ ಹೃದಯದ ಆಂಗಣದಲ್ಲಿ ಹತ್ತು ಹಲವಾರು ಸತ್ಯದ ಭಾವಗಳು ಉದಯಿಸಿ ಈ ಶಾಸ್ತ್ರ ತರ್ಕ ಮತ್ತು ವಾದಗಳು ಪ್ರತಿಪಾದಿಸುವ ಸತ್ಯವನ್ನೆಲ್ಲ ಅಣಕಿಸುತ್ತವೆ ಎನ್ನುತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಹಿಂದಿನ ಮುಕ್ತಕದಲ್ಲಿ ಹೇಳಿದ ಪಂಡಿತರು ಮತ್ತು ಶಾಸ್ತ್ರಿಗಳು ಉಲ್ಲೇಖಿಸುವ ಶೃತಿ, ತರ್ಕ ಮತ್ತು ವಾದಗಳಲ್ಲಿ ಮಾತ್ರ ಸತ್ಯವಿದೆಯೋ? ಏಕೆ ಸಾಮಾನ್ಯ ಜನರ ಅನುಭವಗಳಲ್ಲೂ ಸತ್ಯವಿರಬಾರದೇನು? ಎಂದು ಕೇಳುತ್ತಾರೆ ಗುಂಡಪ್ಪನವರು ಈ ಮುಕ್ತಕದಲ್ಲಿ, ಮುತ್ತಿನಂಥಾ ಮಾತು. ಏಕೆಂದರೆ ನಮ್ಮಲ್ಲಿ ಒಂದು ಮಾತಿದೆ. "ವೇದ ಸುಳ್ಳಾದರೂ ಗಾದೆ ಸುಳ್ಳಾಗೋದಿಲ್ಲ" ಎಂದು. ಅಂದರೆ ಎಲ್ಲರೂ ನಂಬುವುದು ವೇದಗಳು ಸತ್ಯವನ್ನು ಮತ್ತು ಸತ್ವವನ್ನು ನುಡಿಯುತ್ತದೆ ಎಂದು. ಅಂದರೆ ವೇದದಲ್ಲಿ ಸತ್ಯವಿದೆ ಎಂದು. ಅದು ಅಕ್ಷರಶಃ ಸತ್ಯ. ಆದರೆ ಅವುಗಳನ್ನು ಓದಿ ಅವಕ್ಕೆ ವ್ಯಾಖ್ಯಾನ ಬರೆಯುವ ಪಂಡಿತರು ಅವುಗಳನ್ನು ತಮ್ಮ ಚಿಂತನೆಯ ಹಾದಿಯಲ್ಲಿ ವಿಮರ್ಶಿಸುತ್ತಾ, ಹಲಬಾರಿ ಮೂಲದಲ್ಲಿರುವ ಸತ್ಯವನ್ನು ಮತ್ತು ಸತ್ವವನ್ನು ತಿರುಚಿ ಬರೆಯುತ್ತಾರೆ. ಅದು ಅವರ ಅನುಭವ. ಪೂರ್ಣ ಸತ್ಯವಾಗಿರುವುದಿಲ್ಲ. ಅಂತಹಾ ಉಕ್ತಿಗಳಾದರೂ ಎಂದಾದರೂ ಸುಳ್ಳಾಗಿರಬಹುದು ಆದರೆ ಗಾದೆ ಸುಳ್ಳಾಗೋಲ್ಲ ಎಂದು. ಏಕೆಂದರೆ ಗಾದೆ ಮಾತುಗಳು ಈ ಮುಕ್ತಕದಲ್ಲಿ ಹೇಳಿದ ಹಾಗೆ "ಸಾಮಾನ್ಯ ಮನುಜಹೃದಯದ ಆಂಗಣದೊಳಗಿಂದ" ಬಂದಂತಹ ಅಣಿಮುತ್ತುಗಳು.

ಗಟ್ಟಿ ಮತ್ತು ಆಳವಾದ ಅನುಭವದಿ ನುಡಿಯುವ ಮಾತುಗಳು ಮನುಜನ ಹೃದಯಾಂತರಾಳದಿಂದ ಮೂಡಿ ಬರುತ್ತವೆ ಮತ್ತು ಅವು ಸತ್ಯವನ್ನೇ ಹೇಳುತ್ತವೆ. ಅಂಥಹ ಸತ್ಯವಾದ ಮಾತುಗಳು ಮೇಲೆ ಹೇಳಿದ ಶೃತಿ ಮತ್ತು ತರ್ಕದೊಳಗಿನ ವಿಶ್ಲೇಷಣೆಗಳನ್ನು ಅಣಕಿಸುವಂತಿರುತ್ತವೆ. ಹಾಗಾಗಿ ನಾವು ಇವೆರಡನ್ನೂ ಪರೀಕ್ಷಿಸಿ ಸತ್ಯವನ್ನು ಮಾತ್ರ ಗ್ರಹಿಸಬೇಕು ಎಂದು ಅವರ ಅಭಿಪ್ರಾಯ.

ವಾಚಕರೆ, ಸಾಮಾನ್ಯ ಜನರ ಮತ್ತು ಅವರ ಅನುಭವದಿಂದ ಮೂಡಿದ ಮತ್ತು ಮನಸ್ಸಿನಿಂದ ಮೂಡಿದ ಮಾತುಗಳು ಸದಾಕಾಲಕ್ಕೂ ಸತ್ಯವಾಗಿ ಉಳಿಯುತ್ತವೆ. ತರ್ಕಮೀಮಾಂಸೆಗಳಂತಹ ಗ್ರಂಥಗಳು ಪ್ರತಿಪಾದಿಸುವುದಕ್ಕಿಂತ ಹೆಚ್ಚಾಗಿ ಈ ಜನಮನ ನುಡಿಗಳು ನಮಗೆ ಹೃದ್ಯವಾಗಿರುತ್ತವೆ, ಬೇಗ ಮನಸ್ಸಿಗೆ ನಾಟುತ್ತವೆ ಮತ್ತು ಬಹಳ ಕಾಲ ನಿಲ್ಲುತ್ತವೆ. ಅಂತಹ ವಿಷಯಗಳನ್ನು ನಾವೂ ಸಹ ಗ್ರಹಿಸಿ ಸತ್ಯವನ್ನರಿಯುವ ಪ್ರಯತ್ನವನ್ನು ಮಾಡೋಣ.

**ಮುಕ್ತಕ-51**

**ಸೆಳೆಯುತಿರ್ಪುದೊಂದು ಹೊರಬೆಡಗಿನೆಳೆಗಳ |**
**ನ್ನೊಳಗಿನಸುವೆಲ್ಲವನು ಕಟ್ಟೆನಿಂ ಬಿಗಿದು ||**
**ಎಳೆದಾಟವೇಂ ಋಣಾಕರ್ಷಣೆಯೋ? ಸೃಷ್ಟಿ ವಿಧಿ |**
**ಯೊಳತಂತ್ರವೋ? ನೋಡು-ಮಂಕುತಿಮ್ಮ ||**

ಸೆಳೆಯುತಿರ್ಪುದೊಂದು=ಸೆಳೆಯುತ+ಇರುವುದು+ಅದು+ಒಂದು,
ಹೊರಬೆಡಗಿನೆಳೆಗಳೆನ್ನೊಳಗಿನಸುವೆಲ್ಲವನು=ಹೊರ+ಬೆಡಗಿನ+ಎಳೆಗಳು+ಎನ್ನ+ಒಳಗಿನ+ಅಸು+ಎಲ್ಲವನು,
ಸೃಷ್ಟಿ ವಿಧಿ ಯೊಳತಂತ್ರವೋ=ಸೃಷ್ಟಿ+ವಿಧಿಯ+ಒಳತಂತ್ರವೋ.

ಬೆಡಗು=ಆಕರ್ಷಣೆ, ಅಸು=ಪ್ರಾಣ, ಚೇತನ, ಋಣಾಕರ್ಷಣೆ=ಪೂರ್ವಕರ್ಮದ ಸೆಳೆತ.

ಹೊರಜಗತ್ತಿನ ಆಕರ್ಷಣೆಗಳು ನನ್ನೊಳಗಿನ ಚೇತನವನ್ನು ಬಿಗಿದು ಕಟ್ಟಿ ಹಾಕಿ ಎಳೆಯುತ್ತಿದೆ. ಇದು ಏನು ಎಳೆದಾಟವೋ ಅಥವಾ ಪೂರ್ವ ಕರ್ಮಗಳ ಸೆಳೆತವೋ? ಅಥವಾ ಈ ಜಗತ್ತಿನ ಸೃಷ್ಟಿಯ ನಿಯಮದ ಒಳತಂತ್ರವೋ ಎನ್ನುವುದನ್ನು ನೀನೆ ಪರಿಕಿಸಿ ನೋಡು ಎನ್ನುತ್ತಾರೆ ಈ ಮುಕ್ತಕದಲ್ಲಿ ಮಾನ್ಯ ಗುಂಡಪ್ಪನವರು.

ಹೊರ ಜಗತ್ತಿನಲ್ಲಿರುವ ಎಲ್ಲ ವಸ್ತುಗಳೂ ನಮ್ಮನ್ನು ತುಂಬಾ ಆಕರ್ಷಿಸುತ್ತವೆ. ಹಾಗೆಯೇ ಎಲ್ಲ ಪ್ರಾಣಿಗಳಿಗೂ ಈ ಜಗತ್ತಿನ ಎಲ್ಲ ವಸ್ತುಗಳೂ ಆಕರ್ಷಣೀಯವೇ. ನಾವು ನಮ್ಮ ಅನುಭವವನ್ನು ಹೇಳಿಕೊಳ್ಳುತ್ತೇವೆ. ಅನ್ಯ ಪ್ರಾಣಿಗಳು ಹೇಳಿಕೊಳ್ಳಲಾಗದಿದ್ದರೂ ಅನುಭವಿಸುತ್ತವೆ. ಇರಲಿ "ದೃಷ್ಯಮಾಣೆ ಭವೇತ್ ಪ್ರೀತಿ:" ಎಂದರೆ ವಸ್ತುಗಳನ್ನು ಕಂಡರೆ

ಅದರಲ್ಲಿ ನಮಗೆ ಪ್ರೀತಿಯುಂಟಾಗುತ್ತದೆ. ಪಡೆಯಬೇಕು ಎನ್ನುವ ಆಸೆಯುಂಟಾಗುತ್ತದೆ. ಪಡೆಯುವಂತಹ ಸಾಧ್ಯತೆಗಳಿದ್ದರೆ, ಪ್ರಯತ್ನವೂ ನಡೆಯುತ್ತದೆ. ಕೆಲವು ಸಲ ಸಫಲತೆಯೂ ದೊರಕುತ್ತದೆ. ಸಿಗಲಿ ಬಿಡಲಿ ಆಸೆಪಡುವುದಂತೂ ಉಂಟು. ಆಕರ್ಷಿತರಾಗುವುದಂತೂ ಉಂಟು. ಆ ಆಕರ್ಷಣೆಯಿಂದ ನಮ್ಮ ಅಸ್ತಿತ್ವವು ಸಂತಸಪಡುವುದೂ ಉಂಟು, ಹಾಗೇ ನೋವುಣ್ಣುವುದೂ ಉಂಟು. ಏಕೆ ಈ ನೋವು? ಏಕೆ ಈ ಆಕರ್ಷಣೆ? ಎನ್ನುವುದೇ ಈ ಮುಕ್ತಕದ ಹೂರಣ.

ನೋಡಿ, ನಮ್ಮಲ್ಲಿ ಶುದ್ಧವಾದ ಆತ್ಮ ಉಂಟು. ಯುಕ್ತಾಯುಕ್ತಗಳ ವಿವೇಚನೆಯೂ ಉಂಟು. ಬಹು ಚಂಚಲ ಮನಸೂ ಉಂಟು. ಒಂದಕ್ಕೊಂದಕ್ಕೆ ಅವಿನಾಭಾವ ಸಂಬಂಧ. ಈ ಸಂಬಂಧಕ್ಕೆ ಕಾರಣಗಳು ಹಲವು.





ನಾವು ಎಲ್ಲದರಿಂದಲೂ ಯಾವಾಗಲೂ ಆಕರ್ಷಿತರಾಗುವುದಿಲ್ಲ. ಈ ಆಕರ್ಷಣೆಯ ಸ್ವರೂಪ ಬದಲಾಗುತ್ತಾ ಇರುತ್ತದೆ. ಇಂದು ಇದ್ದಂತೆ ನಾಳೆ ಇಲ್ಲ. ಮುಂಜಾನೆಗಿದ್ದದ್ದು, ಸಂಜೆಗಿಲ್ಲ. ಹೀಗೆ ಒಂದೇ ರೂಪದಲ್ಲಿ ಇರದೇ ನಮ್ಮನ್ನು ಬೇಕು ಬೇಡಗಳ, ಇಷ್ಟ, ಅನಿಷ್ಟಗಳ ನಡುವೆ ಗೊಂದಲಕ್ಕೆ ಸಿಲುಕಿಸುತ್ತದೆ. ನಾವು "ಇಲ್ಲಿ" ಅಂದರೆ ಈ ಜಗತ್ತಿನ ವಸ್ತು, ವಿಷಯ, ವ್ಯಕ್ತಿಗಳ ಸಂಪರ್ಕದಲ್ಲಿ ನಮ್ಮ ಮನಸ್ಸನ್ನು ಸದಾ ತೊಡಗಿಸಿಕೊಂಡರೆ ಈ ಗೊಂದಲಗಳು ಸಹಜ. ಹಾಗೆಂದು, ಇದನ್ನು ಬಿಡಬೇಕು ಎಂದಲ್ಲ. ಇರಬೇಕು, ಇರದಂತೆ ಇರಬೇಕು.

ಈ ಆಕರ್ಷಣೆಗಳು, ಅಂಟುಗಳು ನಮ್ಮ ಮನಸ್ಸಿನ ತುಮುಲ ತೊಯ್ದಾಟಗಳಿಗೆ ಕಾರಣವೇನು? ನಮ್ಮ ಸ್ವಭಾವ, ಪೂರ್ವಸಂಚಿತ ಗುಣಗಳ ವಾಸನೆ, ಇಲ್ಲಿ ನಾವು ಜನಿಸಿದಂದಿನಿಂದ ಪಡೆದು ಕೊಂಡು, ಬೆಳೆಸಿಕೊಂಡ ಹತ್ತು ಹಲವಾರು ಗುಣ ಸ್ವಭಾವಗಳು. ಆ ವಸ್ತು ವಿಷಯಗಳ ಅಂದ ಚೆಂದ ರುಚಿ ಗುಣಗಳೆಲ್ಲವೂ ನಮ್ಮನ್ನು ಸೆಳೆಯುತ್ತವೆ. ಇವೆಲ್ಲವೂ ಈ ಆಕರ್ಷಣೆಗೆ ಕಾರಣ. ಆದರೆ ಇದು ಸರಿಯೇ? ತಪ್ಪೇ? ಸರಿ ಮತ್ತು ತಪ್ಪು ಎರಡೂ, ಸರಿ ಏಕೆಂದರೆ, ಜಗತ್ತಿನ ಎಲ್ಲರೂ ಈ ಜಗತ್ತಿನ ವಸ್ತು ವಿಷಯಗಳಿಂದ ವಿಮುಖರಾದರೆ ಈ ಜಗದ್ವ್ಯಾಪಾರದ ಗತಿ, ಎಲ್ಲವೂ ನಿಂತುಹೋದರೆ, ಎಲ್ಲ ನಿಸ್ತೇಜ, ನೀರವ ಮತ್ತು ಬರಡು. ಆ ಪರಮಾತ್ಮನ ಲೀಲಾವಿನೋದ ಕೊನೆಯಾದರೆ ಏನು ಚೆನ್ನ? ಹಾಗಾಗಿ ಈ ಆಕರ್ಷಣೆ ಸರಿ. ತಪ್ಪು ಏಕೆಂದರೆ "ಸಿಂಬಳದ ಹುಳು"ವಿನ ತರಹೆ ಇದರಲ್ಲೇ ಅಂಟಿಕೊಂಡರೆ ಅದೂ

ಅಸಹ್ಯ. ಹಾಗಾಗಿ ಎಲ್ಲವನ್ನೂ ನೋಡಬೇಕು ಆಕರ್ಷಿತರಾಗಬೇಕು, ಅನುಭವಿಸಬೇಕು ಮತ್ತು ಬಿಡಬೇಕು. ಆಗಲೇ ಜೀವನದಲ್ಲಿ ಒಂದು ಚೆಂದ, ಚೆಲುವು.

ಆದರೆ ಎಷ್ಟು ಆಕರ್ಷಿತರಾಗಬೇಕು, ನಮ್ಮನ್ನು ನಾವು ಅದರೊಳಗೆ ಎಷ್ಟರಮಟ್ಟಿಗೆ ಮುಳುಗಿಸಿಕೊಳ್ಳಬೇಕು, ಯಾವಾಗ ಬಿಡಬೇಕು ಎನ್ನುವುದೇ ಪ್ರಶ್ನೆ. ಬಿಡುವ ಪ್ರಯತ್ನ ಮಾಡುವುದೇ ಆಧ್ಯಾತ್ಮ ಪ್ರಯಾಣದ ಗುರಿ. ಆ ಪ್ರಯಾಣವನ್ನು ಮಾಡಬೇಕು ಎನ್ನುವ ರೀತಿಯಲ್ಲಿ "ನೋಡು" ಎನ್ನುತಾರೆ ಮಾನ್ಯ ಗುಂಡಪ್ಪನವರು, ಈ ಮುಕ್ತಕದಂತ್ಯದಲ್ಲಿ. ನಾವೂ ಸಹ ಈ ವಿಷಯದಲ್ಲಿ ನಮ್ಮ ನಮ್ಮ ವಿಶ್ಲೇಷಣೆಯನ್ನು ನಾವೇ ಮಾಡಿಕೊಳ್ಳಬೇಕು. ಗುರಿ ಮುಟ್ಟುವ ಪ್ರಯತ್ನ ಮಾಡಬೇಕು.

**ಮುಕ್ತಕ-52** **ಗಗನನೀಲಿಮೆಯೆನ್ನ ಕಣ್ ಸೊಗವೀವಂತೆ |**
**ಮುಗಿವ ತರಣಿಯ ರಕ್ತ ಹಿತವೆನಿಸದೇಕೋ ||**
**ಸೊಗದ ಮೂಲವದೆಲ್ಲಿ ನೀಲದೊಳೊ ಕೆಂಪಿನೊಳೊ |**
**ಬಗೆವೆನ್ನ ಮನಸಿನೊಳೊ? ಮಂಕುತಿಮ್ಮ ||**

ಗಗನನೀಲಿಮೆಯೆನ್ನ=ಗಗನದ+ನೀಲಿಮೆಯು+ಎನ್ನ, ಸೊಗವೀವಂತೆ=ಸೊಗವ+ಈವಂತೆ, ಹಿತವೆನಿಸದೇಕೋ=ಹಿತವೆನಿಸದು+ಏಕೋ

ನೀಲಿಮೆ=ನೀಲಿ ಬಣ್ಣ, ಎನ್ನ=ನನ್ನ, ಕಣ್ಣೆ=ಕಣ್ಣುಗಳಿಗೆ, ಸೊಗವ=ಆನಂದವ, ಈವಂತೆ=ಕೊಡುವಂತೆ, ಮುಗಿವ=ಮುಳುಗುವ, ತರಣಿ+ಸೂರ್ಯ, ರಕ್ತ=ಕೆಂಪು, ಸೊಗದ=ಸೊಗಸಿನ, ಬಗೆವ=ತಿಳಿಯುವ.





ಆಕಾಶದ ತಿಳಿನೀಲಿ ಬಣ್ಣವು ಎನ್ನ ಮನಸ್ಸಿಗೆ ಹಿತವನ್ನು ಕೊಡುತ್ತದೆ. ಆದರೆ ಮುಳುಗುವ ಸೂರ್ಯನ ಕೆಂಪು ಬಣ್ಣ ಎನಗೇಕೋ ಹಿತವನ್ನು ಕೊಡುವುದಿಲ್ಲ. ಆ ಹಿತ ಎನ್ನುವುದು ಆಕಾಶದ ನೀಲಿ ಬಣ್ಣದಲ್ಲಿದೆಯೋ ಅಥವಾ

ಮುಳುಗುವ ಸೂರ್ಯನ ರಕ್ತ ವರ್ಣದಲ್ಲಿದೆಯೋ ಅಥವಾ ಎರಡೂ ಅಲ್ಲದೆ, ಹಿತವೆಂದು ತಿಳಿಯುವ ನಮ್ಮ ಮನಸ್ಸಿನಲ್ಲಿ ಇದೆಯೋ ಎಂದು ಪ್ರಸ್ತಾಪ ಮಾಡುತ್ತಾರೆ, ಶ್ರೀ ಗುಂಡಪ್ಪನವರು.

ನೀಲಿ ಬಣ್ಣ ಪ್ರಶಾಂತತೆಯ ಪ್ರತೀಕ. ಅದಕ್ಕೆ ನಮ್ಮಲ್ಲಿ ಹಲವು ದೇವತೆಗಳಿಗೆ ನೀಲಿಬಣ್ಣದ ವರ್ಣನೆ. ಹಾಗಾಗಿ ನೀಲಿ ಬಣ್ಣ ಮನಸ್ಸಿಗೆ ಮುದವನ್ನು ಕೊಡುವುದು ಸಹಜ. ಆದರೆ ತನ್ನ ಕೆಲಸ ಮುಗಿಸಿ ಹಿಂತಿರುಗಿ ಹೋಗುವ ಆ ಸೂರ್ಯನ ರಕ್ತವರ್ಣವು ರುದ್ರತೆಯನ್ನು ತೋರುತ್ತದೆ. ಹಾಗಾಗಿ ನನಗೆ ಮನಸ್ಸಿಗೆ ಹಿತವೆನಿಸುವುದಿಲ್ಲ ಎನ್ನುತ್ತಾರೆ ಶ್ರೀ ಗುಂಡಪ್ಪನವರು. ಅಷ್ಟಕ್ಕೇ ನಿಲ್ಲಿಸದೆ, ಹೌದು ಆ ಹಿತವು ನೀಲಿ ಬಣ್ಣದಲ್ಲಿದೆಯೋ ಅಥವಾ ರಕ್ತವರ್ಣದಲ್ಲಿದೆಯೋ ಅಥವಾ ನನ್ನ ಭಾವನೆಯಲ್ಲಿ ಮಾತ್ರ ಆ ಹಿತ ಮತ್ತು ಅಹಿತಗಳಿವೆಯೋ ಎಂದು ತಮ್ಮನ್ನು ತಾವೇ ಪ್ರಶ್ನಿಸಿಕೊಳ್ಳುತ್ತಾರೆ.

ಹೌದು ಒಂದು ಆಂಗ್ಲ ನುಡಿ "ಚೆಂದ ನೋಡುವವನ ಕಣ್ಣಲ್ಲಿ" ಎಂದು ಹೇಳುತ್ತದೆ. ಒಬ್ಬರಿಗೆ ಚೆಂದವಾಗಿ ಕಂಡದ್ದು ಮತ್ತೊಬ್ಬರಿಗೆ ಚೆಂದವಲ್ಲದೆ ಇರಬಹುದು. ಒಬ್ಬರಿಗೆ ಇಂದು ಚೆಂದವಾಗಿ ಕಂಡದ್ದು ನಾಳೆ ಚಂದವಲ್ಲದೆ ಇರಬಹುದು. ಈ ಅದು ಚೆನ್ನ-ಇದು ಚೆನ್ನ, ಅದು ಚೆನ್ನಾಗಿಲ್ಲ, ಅಥವಾ ಇದು ಚೆನ್ನಾಗಿಲ್ಲ, ಇದು ಸುಮಾರು, ಇದು ಅಸಹ್ಯ, ಇದು ಅತೀ ಸುಂದರ, ಹೀಗೆ ಒಂದು ವಸ್ತು ಅಥವಾ ವಿಷಯದ ಬಗ್ಗೆ ನಮ್ಮ ಅಭಿಪ್ರಾಯಗಳು, ಅಭಿಪ್ರಾಯಗಳಷ್ಟೇ ಆಗಿರುತ್ತದೆ ಹೊರತು, ನಾವು ಅಭಿಪ್ರಾಯ ವ್ಯಕ್ತಪಡಿಸುವ ಆ ವಸ್ತು ವಿಷಯದಲ್ಲಿ ಯಾವ ವ್ಯತ್ಯಾಸವೂ ಆಗುವುದಿಲ್ಲ. ಅಲ್ಲವೇ?

ಆದರೆ ಆ ಚೆಲುವು ಎನ್ನುವುದು ನೋಡುವವನ ಮನಸ್ಸಿನಲ್ಲಿ ಇರುತ್ತದೆ ಎನ್ನುವುದು ವಾಡಿಕೆ. "ಯ ಭಾವಂ ತದ್ಭವತಿ" ನಾವು ಹೇಗೆ ಅಂದುಕೊಂಡರೆ ಹಾಗೆ ಎನ್ನುವುದು ಸೂಕ್ತ. ಹಾಗಾಗಿ ಒಂದು ವಸ್ತುವಿನ ಚೆಂದ ನಮ್ಮ ಮನಸ್ಸಿನ ಮೇಲೆ ಆಧಾರಪಟ್ಟಿರುತ್ತದೆ. ನನಗೆ ಒಬ್ಬ ಸ್ನೇಹಿತರಿದ್ದಾರೆ, ನಮ್ಮ ಬೀದಿಯ ನಾಯಿಗಳ ಕಂಡು ಅವರಿಗೆ ತುಂಬಾ ಪ್ರೀತಿ ತುಂಬಾ ಮರುಕ "ಅಯ್ಯೋ ಪಾಪ ಅದನ್ನು ನೋಡಿ ಹೇಗೆ ಸೊರಗಿ ಹೋಗಿದೆ. ಇವಕ್ಕೆಲ್ಲ ಯಾರು ಊಟ ಹಾಕುತ್ತಾರೋ" ಹೀಗೆ ಅವರ ಕರುಣಾ ಪೂರಿತ ಭಾವ ಲಹರಿ ಹರಿಯುತ್ತಲೇ ಇರುತ್ತದೆ. ಪುಟ್ಟಮರಿಗಳನ್ನು ನೋಡಿದಾಗ "ಅಯ್ಯೋ ಮುಂಡೇದು, ಎಷ್ಟು ಚೆನ್ನಾಗಿದೆ ನೊ" ಎಂದು ರಾಗ ಎಳೀತಾರೆ. ಕೆಲವರಿಗೆ ಆ ನಾಯಿಗಳನ್ನು ಕಂಡರೆ ಹೆದರಿಕೆ. ಕೆಲವರಿಗೆ ಅದನ್ನು ಕಂಡರೆ ಅಸಹ್ಯ. ಆದರೆ ಆ ನಾಯಿ ಚೆನ್ನವೂ ಅಲ್ಲ ಅಸಹ್ಯವೂ ಅಲ್ಲ. ಚೆನ್ನ ಅಥವಾ ಅಸಹ್ಯ ಎನ್ನುವುದು ನಮ್ಮ ನಮ್ಮ ಭಾವನೆ ಅಷ್ಟೇ.

"ಸದಾ ಮುದವ ನೀಡುವುದೇ ಸೊಬಗು" ಎನ್ನುವ ಒಂದು ಆಂಗ್ಲ ನುಡಿ ಇದೆ. ಅಂದರೆ ಯಾವುದು ಸದಾಕಾಲ ಮನಸ್ಸಿಗೆ ಹಿತವೆನಿಸುತ್ತದೋ ಅದೇ ಸುಂದರ. ಆದರೆ ಚೆನ್ನ, ಸೊಬಗು, ಸುಂದರ, ಸೊಗಸು

ಎನ್ನುವ ಗುಣವಾಚಕಗಳೆಲ್ಲ ಮನೋಜನ್ಯ. ಹಾಗಾಗಿ ಇವೆಲ್ಲ (relative) ಒಂದೇ ರೀತಿ ಇರುವುದಿಲ್ಲ. ಮನಸ್ಸಿನ ಭಾವ ಬದಲಾಗುತ್ತಾ ಇದ್ದಂತೆ ನಮ್ಮ ಅಭಿಪ್ರಾಯಗಳೂ ಬದಲಾಗುತ್ತಾ ಇರುತ್ತವೆ.

ಆದರೆ ಒಂದು ಒಳ್ಳೆಯ ಮನಸ್ಸು ಎಲ್ಲದರಲ್ಲೂ ಸೊಬಗನ್ನೇ ನೋಡುತ್ತದೆ. ಈ ಪರಮಾತ್ಮನ ಸೃಷ್ಟಿಯಲ್ಲಿ ಪ್ರತಿಯೊಂದಕ್ಕೂ ಒಂದು ಅಂದವಿದೆ. ಅದು ಅವನ ಇಚ್ಛೆಯಿಂದ ಆದದ್ದು. ಸೃಷ್ಟಿಯಲ್ಲಿ ಪ್ರತಿಯೊಂದಕ್ಕೂ ಒಂದು ಕಾರಣವಿದೆ. ಅದನ್ನು ವಿಮರ್ಶಿಸುವ ಅರ್ಹತೆ ಅಧಿಕಾರ ನಮಗಿಲ್ಲ. ಏಕೆಂದರೆ ನಾವೂ ಸಹ ಈ ಸೃಷ್ಟಿಯ ಒಂದು ಭಾಗ ಅಲ್ಲವೇ? ಅದು ಯಾರಾದರೂ ಚೆನ್ನಾಗಿಲ್ಲ ಎಂದರೆ, ಆ ಪರಮಾತ್ಮನ ಸೃಷ್ಟಿಯನ್ನೇ ಪ್ರಶ್ನಿಸಿದಂತಾಗುತ್ತದೆ. ಒಳ್ಳೆಯ ಮನಸ್ಸನ್ನು ಬೆಳೆಸಿಕೊಳ್ಳಬೇಕು. ಎಲ್ಲವನ್ನೂ ಪ್ರೀತಿಸಬೇಕು. ಯಾವುದನ್ನೂ ಇಷ್ಟಪಡದಂತಹ ಮನೋಭಾವ ನಮಗೆ ಬರಲೇಬಾರದು. ಎಲ್ಲವನ್ನು ಇಷ್ಟಪಡುವ ಮತ್ತು ಎಲ್ಲದರಲ್ಲೂ ಚೆಲುವನ್ನು ಕಾಣುವ ಮನೋಭಾವವನ್ನು ನಾವೂ ಬೆಳೆಸಿಕೊಳ್ಳೋಣವೇ?

**ಮುಕ್ತಕ-53**

**ತೃಣಕೆ ಹಸಿರೆಲ್ಲಿಯದು? ಬೇರಿನದೆ? ಮಣ್ಣಿನದೆ?**
**ದಿನಪನದೆ? ಚಂದ್ರನದೆ? ನೀರಿನದೇ? ನಿನದೆ?**
**ತಣಿತಣಿವ ನಿನ್ನ ಕಣ್ಣಿನ ಪುಣ್ಯವೋ? ನೋಡು?**
**ಗುಣಕೆ ಕಾರಣವೊಂದೆ?-ಮಂಕುತಿಮ್ಮ**

ತೃಣಕೆ=ಹುಲ್ಲಿಗೆ, ದಿನಪ=ಸೂರ್ಯ, ತಣಿತಣಿವ=ಆನಂದಿಸುವ.

ಭೂಮಿಯಲ್ಲಿ ಚಿಗುರುವ ಹುಲ್ಲಿಗೆ ಆ ಹಸಿರುಬಣ್ಣ ಎಲ್ಲಿಂದ ಬಂತು. ಅದರ ಮೂಲವಾದ ಬೇರಿನದೋ? ಅದು ಬೆಳೆವ ಭೂಮಿಯದೋ? ಬೆಳಕ ನೀಡುವ ಸೂರ್ಯನದೋ? ಅಥವಾ ಚಂದ್ರನದೋ? ಬೆಳೆಗೆ ಪೂರಕವಾದ ನೀರಿನದೋ? ಅಥವಾ ಅದನ್ನು ಬೆಳೆಸಿದ ನಿನ್ನದೋ? ಅಥವಾ ತಂಪ ಕಾಣುವ ನಿನ್ನ ಕಣ್ಣಿನ ಪುಣ್ಯದ್ದೋ? ನೀ

ನೋಡುವ ಆ ಹಸಿರಿನ ಗುಣಕ್ಕೆ ಒಂದೇ ಕಾರಣವೋ? ಎಂದು ಹಲವಾರು ಪ್ರಶ್ನೆಗಳನ್ನು ಕೇಳುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಹೌದಲ್ಲವಾ? ಹಲವು ಬಾರಿ ನಮಗೂ ಇಂತಹ ಪ್ರಶ್ನೆಗಳು ಮನದಲ್ಲಿ ಉದ್ಭವವಾಗಿರಬಹುದು. ನಾವು ನೋಡುವ ಪ್ರತಿ ವಸ್ತುವಿನಲ್ಲೂ ಹಲವು ಸೋಜಿಗಗಳನ್ನು ನಾವು ಕಾಣಬಹುದು. ಆದರೆ ಆ ಸೋಜಿಗಕ್ಕೆ ಒಂದು ಕಾರಣವನ್ನು ಹುಡುಕಲು ನಮ್ಮಿಂದಾಗುವುದಿಲ್ಲ. ಏಕೆಂದರೆ ಒಂದು ಕಾರಣದಿಂದ ಆದಂತಹ ವಸ್ತುವಾವುದೂ ಈ ಪ್ರಪಂಚದಲ್ಲಿ ಇಲ್ಲವೆಂಬುದೆ ನನ್ನ ಗಟ್ಟಿ ನಂಬಿಕೆ. ಹಾರುವ ಹಕ್ಕಿಯ ಬಣ್ಣ, ರೆಕ್ಕೆಯ ವಿನ್ಯಾಸ, ಹಾವಿನ ರೂಪ, ಅದರ ಮೈಮೇಲಿನ ಚಿತ್ತಾರಗಳು, ಅಬ್ಬಾ ಎಂತಹ ವಿಚಿತ್ರ. ಇದೊಂದೂ ನಮಗೆ ಅರ್ಥವಾಗುವುದಿಲ್ಲ. ಎಲ್ಲವೂ ವಿಸ್ಮಯ.
ಈಗ ಆ ಹಸಿರು ಹುಲ್ಲಿನ ವಿಷಯವನ್ನೇ ತೆಗೆದುಕೊಳ್ಳೋಣ. ಅದರ ಹಸಿರು ಬಣ್ಣ ಎಲ್ಲಿಂದ ಬಂತು. ಅದರ ಮೂಲ ಬೇರಿನಿಂದ ಬಂತೆ? ಅಲ್ಲ. ಏಕೆಂದರೆ ಬೇರಿನ ಬಣ್ಣ ಹಸುರಲ್ಲ. ಅದು ಬೆಳೆದ ಭೂಮಿಯಿಂದ





ಬಂತೆ, ಅಲ್ಲ. ಭೂಮಿಯ ಬಣ್ಣ ಕೆಂಪು. ಸೂರ್ಯನಿಂದಲೇ ಅಥವಾ ಚಂದ್ರನಿಂದಲೇ ಎಂದರೆ, ಅವರ ಬಣ್ಣವೂ ಹಸುರಲ್ಲ. ಇನ್ನು ಅದನ್ನು ಪೋಷಿಸಿ ಬೆಳೆಸಿದ ನೀರಿನಿಂದ ಬಂತೆ ಎಂದರೆ ಅದೂ ಅಲ್ಲ. ಏಕೆಂದರೆ ನೀರಿನ ಬಣ್ಣವೂ ಹಸಿರಲ್ಲ ಅಥವಾ ಅದನ್ನು ಬೆಳೆಸಿದ ನಿನ್ನಿಂದ ಬಂತೆ ಎಂದರೆ, ನೀನೋ ಕರಿಯ, ಅಥವಾ ಯಾವುದೋ ಪುಣ್ಯಶೇಷದಿಂದ ನಿನ್ನ ಕಣ್ಣಿಗೆ ಅದು ಹಸಿರಾಗಿ ಕಾಣುತ್ತದೆಯೇ ಎಂದರೆ ಅಲ್ಲ ಏಕೆಂದರೆ ಅದು ಕಾಣುವುದಷ್ಟೇ ಅಲ್ಲ ವಾಸ್ತವವಾಗಿಯೂ ಅದು ಹಸುರಾಗೆ ಇದೆ. ಹಾಗಾದರೆ ಆ ಹಸಿರಬಣ್ಣ ಎಲ್ಲಿಂದ ಬಂತು? ಇದು ಯಕ್ಷಪ್ರಶ್ನೆ, ವಿಜ್ಞಾನಿಗಳು ಹೇಳುತ್ತಾರೆ, "ಅದು ಅದೇನನ್ನೋ ಹೀರಿಕೊಂಡು, ಇದರೊಳಗೆ ಸೇರಿ, ಅದಾಗಿ ಅದರಿಂದ ಇದಾಗಿ ಹೀಗೆ ಹಸುರಾಗಿದೆ" ಎಂದು. ಅವರ ವಾದವನ್ನು ಸತ್ಯವೆಂದೊಪ್ಪಿಕೊಂಡರೂ ಅದನ್ನೆಲ್ಲ ಆಗ ಮಾಡಿಸಿದ ಶಕ್ತಿ ಯಾವುದು?' ಅಂದರೆ ಒಂದು ಪರಮ ಶಕ್ತಿ. ಅದೇ ಪರಮಾತ್ಮ ಶಕ್ತಿ, ಅದಕ್ಕೆ ಅದೇ ಸಾಟಿ.

ಇದನ್ನೇಕೆ ಹೇಳಿದ್ದಾರೆ ಗುಂಡಪ್ಪನವರು ಎಂದು ಯೋಚನೆ ಮಾಡಿದರೆ, ನನಗೆ ಒಂದು ವಿಷಯ ಹೊಳೆಯುತ್ತದೆ. ನಾವು ಮನುಷ್ಯರು, ನಾನು ಮಾಡಿದೆ ಅಥವಾ ನಾ ಹಾಗೆ ಮಾಡುತ್ತೇನೆ ಎಂದು ಡಂಬವಾಡುತ್ತೇವೆ. ಎಂತಹ ಹೀನ ಯೋಚನೆ ನಮ್ಮದು. ಒಂದು ತುತ್ತು ಅನ್ನ ತಿನ್ನಬೇಕಾದರೆ, ಅದಕ್ಕೆ ಕಾರಣವಾದ ಆ ಕಾಳು, ಆ ಭೂಮಿ, ಆ ಭೂಮಿಯ ಸತ್ವ, ನೀರು, ಬಿಸಿಲು, ಅದನ್ನು ಬೆವರು ಸುರಿಸಿ ಬೆಳೆದು ಕಾಪಾಡಿದ ಆ ರೈತನ ಶ್ರಮ, ಭತ್ತವನ್ನು ಅಕ್ಕಿಯನ್ನಾಗಿಸಲು ಸಾಗಿಸಿದ ಆ ಬಂಡಿ ಮತ್ತದನ್ನು ಮಾಡಿದ ಬಡಗಿ, ಆ ಬಂಡಿಯನ್ನು ಹೊತ್ತು ಎಳೆದ ಆ ಎತ್ತುಗಳು, ಅದನ್ನು ಕುಟ್ಟಿದ ಕೈಗಳು, ಅಯ್ಯೋ ಬಿಡಿ ಹೇಳುತ್ತಾ ಹೋದರೆ, ಹನುಮಂತನ ಬಾಲದಂತೆ ಬೆಳೆಯುತ್ತದೆ ಪಟ್ಟಿ. ನಾವು ಕೇವಲ ತಿನ್ನುತ್ತೇವೆ ಅಷ್ಟೇ. ಒಂದಿಷ್ಟೂ ಕೃತಜ್ಞತೆ ಇಲ್ಲದೆ, ಕೇವಲ ದುಡ್ಡು ಕೊಟ್ಟಿದ್ದೇನೆ ಎನ್ನುವ ಅಹಂಕಾರ ಬಿಟ್ಟರೆ ಇನ್ನೇನೂ ಇಲ್ಲ. ಅಹಂಕಾರಪಡಲಿಕ್ಕೆ ಒಂದಿಷ್ಟೂ ಅರ್ಹತೆ, ಯೋಗ್ಯತೆ ಎರಡೂ ಇಲ್ಲದ ನಾವೂ ಸಹ ಹೀಗೆ ಮಾತನಾಡುತ್ತೇವೆ.

ಆ ಪರಮಾತ್ಮ ತನ್ನಿಚ್ಛೆಯಂತೆ ತನ್ನ ಸಂತೋಷಕ್ಕಾಗಿಯೇ ಎಲ್ಲವನ್ನೂ ಸೃಜಿಸಿ ತಾನು ಆನಂದಪಡುತ್ತಾನೆ. ಇದರಲ್ಲಿ ನಾವು ಅಹಂಕಾರಪಡಬಾರದು. "ಈಶಾವಾಸ್ಯಮಿದಂ ಸರ್ವಂ ಯತ್ ಕಿಂಚಿತ್ ಜಗತ್ಯಾಂ ಜಗತ್, ತೇನ ತ್ಯಕ್ತೇನ ಭನ್ವಿತಾ ಮಾ ಗ್ರುಧಃ ಕಸ್ಯಸ್ವಿದ್ಧನಂ" ಎನ್ನುತ್ತದೆ ಈಶಾವಾಸ್ಯ. ಹಾಗಾಗಿ ಎಲ್ಲವೂ ಪರಮಾತ್ಮ, ಎಲ್ಲವೂ ಪರಮಾತ್ಮನಿಂದ ಮತ್ತು ಎಲ್ಲವೂ ಪರಮಾತ್ಮನಿಗಾಗಿ ಎನ್ನುವುದನ್ನು ಮನದಟ್ಟು ಮಾಡಿಕೊಂಡರೆ ಅಹಂಕಾರ ಬಿಡಬಹುದು. ಅಹಂಕಾರ ಬಿಟ್ಟರೆ ಆನಂದವಾಗಿರಬಹುದು. ವಾಚಕರೆ ಎಲ್ಲರೂ ಆಲೋಚನೆ ಮಾಡಬೇಕಾದ ವಿಷಯ. ನಾನು ಮಾಡುತ್ತೇನೆ. ನೀವೂ ಮಾಡುತ್ತೀರಾ?





# ಅಂತರನುಭವ 54-58

**ಮುಕ್ತಕ-54**

**ಫಲವಿಲ್ಲ ಕಾರ್ಯಕಾರಣವಾದದಿಂ ತತ್ವ |**
**ಸಿಳುಕದೆಮ್ಮೆಯ ತರ್ಕಕರ್ಕಶಾಂಕುಶಕೆ ||**
**ಸುಳಿವುದಾಗೀಗಳದು ಸೂಕ್ಷ್ಮಾನುಭವಗಳಲಿ |**

**ತಿಳಿಮನದೆ ನೋಳಂಗೆ-ಮಂಕುತಿಮ್ಮ ||**

ಕಾರ್ಯಕಾರಣವಾದದಿಂ=ಕಾರ್ಯ+ಕಾರಣ+ವಾದದಿಂ, ಸಿಳುಕದೆಮ್ಮೆಯ=ಸಿಲುಕದು+ಎಮ್ಮಯ, ತರ್ಕಕರ್ಕಶಾಂಕುಶಕೆ=ತರ್ಕ+ಕರ್ಕಶ+ಅಂಕುಶಕೆ, ಸುಳಿವುದಾಗೀಗಳದು=ಸುಳಿವುದು+ಆಗೀಗಳು+ಅದು, ಸೂಕ್ಷ್ಮಾನುಭವಗಳಲಿ-ಸೂಕ್ಷ್ಮ+ಅನುಭವಗಳಲಿ.

ಈ ಜಗತ್ತಿನ ಸೃಷ್ಟಿಯ ಕರ್ತೃ, ಕರಣ, ಕಾರ್ಯ, ಕಾರಣ ಇವುಗಳ ಬಗ್ಗೆ ಅತಿಯಾದ ವಾದ ವಿವಾದದಿಂದ ನಮಗೆ ತತ್ವವು ಸಿಗುವುದೇ ಇಲ್ಲ. ಆದರೆ ನಿರ್ಮಲವಾದ ಮತ್ತು ತಿಳಿಯಾದ ಮನದಲ್ಲಿ ಆಗಾಗ ಸೂಕ್ಷ್ಮಾನುಭವಕ್ಕೆ

ಅದು ಗೋಚರವಾಗಬಹುದು. ಯಾರಿಗೆ? ನೋಡಲು ಇಚ್ಛಿಸುವವರಿಗೆ ಮತ್ತು ನೋಡುವವರಿಗೆ ಅದು ಆಗಾಗ ಗೋಚರಿಸುತ್ತದೆ ಎನ್ನುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ನೋಡಿ, ಒಂದು ಸೃಷ್ಟಿಯಿದೆ. ಹಾಗೆಂದ ಮೇಲೆ ಅದಕ್ಕೊಂದು ಸೃಷ್ಟಿಕರ್ತನಿದ್ದಾನೆ. ಈ ಸೃಷ್ಟಿ ಕಾರ್ಯಕ್ಕೊಂದು ಕರಣವಿರಬೇಕು. ಕರಣ ಮತ್ತು ಕಾರ್ಯವಿದ್ದರೆ ಕಾರಣವೂ ಇರಬೇಕು. ಇದರ ಬಗ್ಗೆ ಲಕ್ಷಾಂತರ ವಾದಗಳು ವಿವಾದಗಳು ತರ್ಕಗಳು ಇವೆ. ಆದರೂ ಅದು ಏನು ಎಂದು ಯಾರಿಗೂ ನಿಚ್ಚಳವಾಗಿ ತಿಳಿದಿಲ್ಲ. ಅದನ್ನು ತಿಳಿಯಲು ಪ್ರಯತ್ನಿಸಿದವರೆಲ್ಲಾ, ತಮ್ಮ ತಮ್ಮದೇ ಆದ ವಿಧಾನದಲ್ಲಿ ಅದನ್ನು ನೋಡಲು ಪ್ರಯತ್ನಿಸಿ, ತಮ್ಮದೇ ಆದ ತತ್ವವನ್ನು ಪ್ರತಿಪಾದಿಸಿದ್ದಾರೆ. ಯಾವುದೂ ಅಂತಿಮವಲ್ಲ. ಹಾಗಾಗಿ ನಮ್ಮ ತರ್ಕವೆಂಬ ಒರಟಾದ ಆಯುಧಗಳಿಂದ ಅದನ್ನು ಕೆದಕುವ ಬದಲು ಮನವನ್ನು ನಿರ್ಮಲವಾಗಿಸಿಕೊಂಡು ಅದರ ಬಗ್ಗೆ ಚಿಂತಿಸಿದರೆ, ಪ್ರತಿಯೊಬ್ಬರಿಗೂ ಅದು ಗೋಚರವಾಗುತ್ತದೆ. ಆದರೆ ಮನಸ್ಸನ್ನು ನಿಲ್ಲಿಸಲು ಸಾಧ್ಯವಿಲ್ಲ. ಹಾಗಾಗಿ ಕೆಲವು ಬಾರಿ ನಮ್ಮ ಅನುಭವಕ್ಕೆ ಒಂದು ಮಿಂಚಂತೆ ಬಂದು ಹೋಗುತ್ತದೆ. ಇದು ಪ್ರತಿಯೊಬ್ಬರಿಗೂ ಅನುಭವ ವೇದ್ಯ.

ಅದನ್ನು ಅರಿತುಕೊಳ್ಳಲು, ಪಾಂಡಿತ್ಯ ಬೇಕಿಲ್ಲ. ವಾದ ಬೇಕಿಲ್ಲ. ಚರ್ಚೆ ಬೇಕಿಲ್ಲ. ಏಕೆಂದರೆ ವಾದ ಮಾಡಿದರೆ ವಿವಾದವಾಗುತ್ತದೆ. ಚರ್ಚೆ ಮಾಡಿದರೆ, ಹಲವು ಆಯಾಮಗಳು ತೆರೆದುಕೊಳ್ಳುತ್ತವೆ. ಸತ್ಯ ಗೋಚರವಾಗುವುದಿಲ್ಲ. ಸತ್ಯ ಗೋಚರವಾಗಬೇಕಾದರೆ, ಮನಸ್ಸಿನ, ಬುದ್ಧಿಯ ಚಟುವಟಿಕೆಗಳನ್ನು, ಎಲ್ಲ ವಿಚಾರ, ತರ್ಕಗಳನ್ನೂ ಕುತರ್ಕಗಳನ್ನೂ ಬದಿಗಿಟ್ಟು ನಿರ್ಮಲ ಅಂತಃಕರಣದಲ್ಲಿ ಅದನ್ನು ಅನುಭವಿಸಿದರೆ, ಆಗಾಗ ನಮಗೆ ಗೋಚರವಾಗಬಹುದು. ಅಂತಹ ಸತ್ವಯುತವಾದ ಸತ್ಯವನ್ನು ಮನಸ್ಸಿನಲ್ಲಿ ದೀರ್ಘಕಾಲ ಅನುಭವಿಸಿದರೆ, ನಮಗೆ ಶಾಂತಿ ಮತ್ತು ನೆಮ್ಮದಿ. ಇದರ ಬಗ್ಗೆ ಹೆಚ್ಚು ವಿವರಣೆ ಅನಗತ್ಯ. ವಾಚಕರು ತಮ್ಮ ತಮ್ಮಲ್ಲೇ ಅನುಭವಿಸಬೇಕು.

**ಮುಕ್ತಕ-55**

**ಕುರುಡನಿನಚಂದ್ರರನು ಕಣ್ಣಿಂದ ಕಾಣುವನೆ? |**
**ಅರಿಯುವಂ ಸೋಂಕಿಂದೆ ಬಿಸಿಲುತನಿವುಗಳ ||**
**ನರನುಮಂತೆಯೇ ಮನಸಿನನುಭವದಿ ಕಾಣುವನು |**
**ಪರಸತ್ವಮಹಿಮೆಯನು-ಮಂಕುತಿಮ್ಮ ||**

ಕುರುಡನಿನಚಂದ್ರರನು=ಕುರುಡ+ಇನ+ಚಂದ್ರರನು,ಬಿಸಿಲುತನಿವುಗಳ=ಬಿಸಿಲು+ತನಿವುಗಳ, ನರನುಮಂತೆಯೇ=ನರನುಂ+ಅಂತೆಯೇ, ಮನಸಿನನುಭವದಿ=ಮನಸಿನ+ಅನುಭವದಿ, ಪರಸತ್ವಮಹಿಮೆಯನು=ಪರಸತ್ವ+ಮಹಿಮೆಯನು.

ಇನ=ಸೂರ್ಯ, ಸೋಂಕಿಂದೆ=ಸ್ಪರ್ಶದಿಂದ, ತನಿವುಗಳ=ತಂಪನ್ನು, ನರನುಮಂತೆಯೇ=ನರನೂ ಹಾಗೆಯೇ, ಪರಸತ್ವ=ಪರಮಾತ್ಮ ತತ್ವವನು.

ಕುರುಡನಿಗೆ ಸೂರ್ಯ ಚಂದ್ರರನು ಕಾಣಲಾಗುವುದೆ? ಬಿಸಿಲು ಮತ್ತು ತಂಪನ್ನು ಅವನು ಸ್ಪರ್ಶಮಾತ್ರದಿಂದಲೇ ಅರಿಯುವುದಿಲ್ಲವೇ ಮನುಷ್ಯನೂ ಸಹ ಮನಸ್ಸಿನ ಅನುಭವದಿಂದ ಪರಮಾತ್ವ ತತ್ವವನು ಕಾಣುತ್ತಾನೆ ಎನ್ನುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ, “ಅವರವರ ಭಾವಕ್ಕೆ ಅವರವರ ಬಕುತಿಗೆ

ಅವರವರ ತೆರನಾಗಿ ಇರುತಿಹನು ಶಿವಯೋಗಿ, ಹರನ ಭಕ್ತರಿಗೆ ಹರ, ಹರಿಯ ಭಕ್ತರಿಗೆ ಹರಿ, ನರರೇನು ಭಾವಿಸುವರದರಂತೆ ಕಾಣುವನು" ನಿಜಗುಣ ಶಿವಯೋಗಿಗಳ ಮಾತು.

ಎಂತಹ ಸತ್ಯ. ಇಲ್ಲಿ ಕಣ್ಣಿಗೆ ಕಾಣುವುದು ಇಲ್ಲ. ಪರಮಾತ್ಮ ಎನ್ನುವುದು ಕೇವಲ ಭಾವನೆಗೆ ಬರುವ ವಿಚಾರ ಮತ್ತು ವಿಷಯ. ಹೇಗೆ ಒಬ್ಬ ಕಣ್ಣಿಲ್ಲದ ಮನುಷ್ಯ, ಸೂರ್ಯನ ತಾಪ ಮತ್ತು ಶೀತಲ ಚಂದ್ರನನ್ನು ತನ್ನ ಅನುಭವದಿಂದಲೇ ತಿಳಿದುಕೊಳ್ಳುತ್ತಾನೋ ಹಾಗೆಯೇ ಪ್ರತಿಯೊಬ್ಬ ನರನೂ ಆ ಪರಮಾತ್ವ ತತ್ವವನ್ನು ಕೇವಲ ಭಾವನೆಯಿಂದಲೇ ತಿಳಿದುಕೊಳ್ಳಬೇಕು ಎಂದು ಈ ಮುಕ್ತಕದ ಹೂರಣ.

ನೋಡಿ ಒಬ್ಬ ವಟುವಿಗೆ ಉಪನಯನವನ್ನು ಮಾಡುತ್ತಾರೆ. ಆಚಮನ, ಪ್ರಾಣಾಯಾಮ ಜಪ ತಪಗಳ ನಿಯಮವನ್ನು ಬಾಹ್ಯ ಚಟುವಟಿಕೆಗಳಿಂದ ಹೇಳಿಕೊಡುತ್ತಾರೆ. ಅವನೂ ಸಹ ಅವರು ಹೇಳಿ ಕೊಟ್ಟಂತೆಯೇ, ನಿಲ್ಲುವುದು, ಕೂರುವುದು, ಪ್ರಾಣಯಾಮ, ಅರ್ಘ್ಯ ಮುಂತಾದ ಕರ್ಮಗಳನ್ನು ಮಾಡುತ್ತಾನೆ ಮತ್ತು ಆ ಸಮಯದಲ್ಲಿ ಬಾಯಿಂದ ಉಚ್ಚರಿಸುವ ಮಂತ್ರಗಳನ್ನೂ ಸ್ಪುಟವಾಗಿ ಉಚ್ಚಾರ ಮಾಡುತ್ತಾನೆ. ಗಾಯತ್ರಿ ಮಂತ್ರವನ್ನೂ ಹೇಳುತ್ತಾ ಜಪ ಮಾಡುತ್ತಾನೆ. ಇದೆಲ್ಲವನ್ನು ಹೇಳಿ ಕೊಡಬಹುದು ಆದರೆ ಅವನ ಆಂತರ್ಯದಲ್ಲಿ ನಡೆಯುವ ಮನೋವ್ಯಾಪಾರವನ್ನು ಮತ್ತು ಕ್ರಿಯೆಯನ್ನೂ ಹೇಳಿಕೊಡಲು ಸಾಧ್ಯವೇ? ಪ್ರತಿಯೊಬ್ಬರಿಗೂ ಅವರವರದೇ ಆದಂತ ಅನುಭವವಿರುತ್ತದೆ. ಪ್ರತಿಯೊಬ್ಬರಿಗೂ ಅವರವರ ಅನುಭವದ ಪ್ರಕಾರ ಆ ಪರತತ್ವದ ದರ್ಶನವಾಗುತ್ತದೆ. ಗಾಯತ್ರಿಯನ್ನು ಹೇಳಿಕೊಡಬಹುದು. ಆದರೆ ಆ ಮಂತ್ರಕ್ಕೆ ಅಧಿದೇವತೆಯನ್ನು ಮನಸ್ಸಿನಲ್ಲಿ ಅವಾಹಿಸಿಕೊಂಡು ಜಪಮಾಡುವುದು ಅವರವರಿಗೆ ಬಿಟ್ಟದ್ದು. ಇದು ಮತ, ಪಂಥ, ಭೇದವಿಲ್ಲದೆ, ಪ್ರತಿಯೊಬ್ಬರಿಗೂ ಅನ್ವಯವಾಗುತ್ತದೆ.





ಪ್ರತಿಯೊಬ್ಬರ ಅಂತರಂಗವನ್ನು ಹೊಕ್ಕು ನೋಡಲು ಸಾಧ್ಯವಿಲ್ಲ. ಆದರೆ ಅದನ್ನು ಹೊಕ್ಕು ನೋಡಿದರೆ, ಯಾರಿಗೆ ಎಷ್ಟು ಭಾವಿಸಲು ಸಾಧ್ಯವೋ ಅವರಿಗೆ ಆ ಪರಮಾತ್ಮ ಅಷ್ಟು. ನೀವು ದೊಡ್ಡದಾಗಿ ಭಾವಿಸಿದರೆ, ದೊಡ್ಡದು, ಸಣ್ಣದಾಗಿ ಭಾವಿಸಿದರೆ ಸಣ್ಣದು. ಇಡೀ ಬ್ರಹ್ಮಾಂಡವನ್ನೇ ಪರಮಾತ್ಮನೆಂದೂ ಭಾವಿಸಬಹುದು ಅಥವಾ ನಿಮ್ಮ

ಮನೆಯಲ್ಲಿರುವ ಒಂದು ಸಣ್ಣ ಮೂರ್ತಿಯನ್ನೇ ದೇವರೆಂದು ಭಾವಿಸಬಹುದು. ಮೊದಲನೆಯದು ಬೃಹತ್ ನಿರಾಕಾರ ಭಾವ, ಎರಡನೆಯದು ಸಂಕುಚಿತ ಮೂರ್ತಿ ಪೂಜೆ. ಇದೆ ಅಂದರೆ ಇದೆ ; ಇಲ್ಲ ಅಂದರೆ ಇಲ್ಲ. ಹಾಗಾಗಿ ಆ ಪರಮಾತ್ಮ ಎನ್ನುವುದು ಬೃಹತ್ತಾಗಿ, ಮಹತ್ತಾಗಿ ಎಲ್ಲವೂ ತಾನೇ ತಾನಾಗಿ ತನ್ನ ಕಾರ್ಯವನ್ನು ನಿರಂತರವಾಗಿ ಮಾಡಿಕೊಂಡು ಹೋಗುತ್ತಿದ್ದರೂ, ಅದು ನಮ್ಮ ಭಾವನೆಗೆ ಬರುವುದು ನಾವು ಎಷ್ಟು ಭಾವಿಸಿದರೆ ಅಷ್ಟು, ಹೇಗೆ ಭಾವಿಸಿದರೆ ಹಾಗೆ. ನಮ್ಮ ಭಾವನೆ, ನಮ್ಮ ಅನುಭವ, ನಾವು ಕಾಣುವ ರೂಪ, ನಮಗಷ್ಟೇ ಸೀಮಿತ. ಅದನ್ನು ಅನ್ಯರು ನೋಡುವುದಕ್ಕಾಗಲೀ ಅಥವಾ ನೀವು ಪರರಿಗೆ ಅದನ್ನು ತೋರಿಸುವುದಕ್ಕಾಗಲೀ ಸಾಧ್ಯವಿಲ್ಲ. ಹಾಗಾಗಿ ವಾಚಕರೆ, ನಾವು ಭಾವಿಸಬೇಕು, ನಮ್ಮ ಭಾವನೆಗಳಲ್ಲಿ ಆ ಪರತತ್ವ ಬೃಹತ್ತಾಗಬೇಕು ಮತ್ತು ಆ ಭಾವ ಗಟ್ಟಿಯಾಗಿ ದೀರ್ಘಕಾಲ ಇರಬೇಕೆಂಬುವ, ಪ್ರಯತ್ನ ನಮ್ಮದಾಗಬೇಕು.

**ಮುಕ್ತಕ-56**

**ಮೇಲಿಂದ ನಕ್ಷತ್ರ ಜಯಘೋಷ ಸುತ್ತಣಿಂ ।**
**ಭೂಲೋಕದರಚು ಕೆಳಗಿಂ ಮೂಳೆಯಳುವು॥**
**ಕೇಳಬರುತೀ ಮೂರುಕೂಗೆನ್ನ ಹೃದಯದಲಿ ।**
**ಮೇಳಯಿಸುತಿದೆ ಸಂತೆ-ಮಂಕುತಿಮ್ಮ ॥**

ಭೂಲೋಕದರಚು=ಭೂಲೋಕದ+ಅರಚು, ಮೂಳೆಯಳುವು=ಮೂಲೆಯ+ಅಳುವು,
ಕೇಳಬರುತೀ=ಕೇಳಬರುತ+ಈ,
ಸುತ್ತಣಿಂ=ಸುತ್ತಲಿಂದ, ಕೆಳಗಿಂ=ಕೆಳಗಿನಿಂದ, ಮೂಳೆಯಳುವು=ಮೂಳೆಯ+ಅಳುವು,

ಆಕಾಶದಿಂದ ನಕ್ಷತ್ರಗಳ ಮಿಣುಕಾಟ, ಸುತ್ತಲಿಂದ ಈ ಭೂಲೋಕದ ಪಂಚಭೂತಗಳಿಂದಾದ ಎಲ್ಲ ಪ್ರಾಣಿಗಳ ಬದುಕಿನ ಹೊಡೆದಾಟದ ಶಬ್ದ, ಈ ಭೂಮಿಯ ಮೇಲೆ ಅಳಿದುಹೋದ ಎಲ್ಲ ಪ್ರಾಣಿಗಳ ಕೊರಗು, ಕೂಗಾಟ, ಈ ಮೂರೂ ಸ್ತರಗಳಲ್ಲಿನ ಭಾವಗಳು ನನ್ನ ಹೃದಯದಲ್ಲಿ ಸೇರಿ ಸಂತೆ ಮಾಡುತ್ತಿವೆ ಎನ್ನುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಇಡೀ ಸೃಷ್ಟಿಯ ವಿಸ್ಮಯಗಳು, ಕಾಣುವ, ಕಾಣದ, ಕೇವಲ ಊಹಿಸಿ ಅನುಭವಿಸಬಹುದಾದ ಆ ವಿಸ್ಮಯಭರಿತ ಲೋಕದ ಬಗ್ಗೆ ನಮ್ಮ ಆಲೋಚನೆ, ಕಂಡದ್ದು, ಕೇಳಿದ್ದು, ಅನುಭವಿಸಿದ್ದು ಎಲ್ಲದರ ವಿಚಾರ ತಲೆಯಲ್ಲಿ. ಇನ್ನು ನಮಗೆ ಕಾಣುವ ಸೂರ್ಯ ಚಂದ್ರರು, ನಕ್ಷತ್ರ ಪುಂಜಗಳು, ಗಾಳಿ, ಮಳೆ, ಮೋಡ, ಮಿಂಚು, ಗುಡುಗು, ಸಿಡಿಲುಗಳಂತಹ ವಿಷಯಗಳು ಮತ್ತು ಅವುಗಳ ಕಾರ್ಯ ವೈಖರಿಯ ಬಗ್ಗೆ ಮತ್ತು ಕಡೆಯದಾಗಿ

ನಮ್ಮ ಭೂಮಿಯ ಮೇಲಿರುವ ಮತ್ತು ಅಳಿದು ಹೋದ ಸಕಲ ಪ್ರಾಣಿಗಳ ಬಗ್ಗೆ ವಿಚಾರ ವಿಷಯಗಳೆಲ್ಲ ನಮ್ಮ ತಲೆಗಳಲ್ಲಿ ಸೇರಿಕೊಂಡು ಒಂದು ಸಂತೆಯಲ್ಲಿ ಆಗುವಷ್ಟು ಗಲಭೆಯ ಶಬ್ದ ನಮ್ಮ ಅಂತರ್ಯದಲ್ಲಿ ನಡೆಯುತ್ತಿರುತ್ತದೆ ಎನ್ನುವುದೇ ಈ ಮುಕ್ತಕದ ಹೂರಣ.

ಹೌದಲ್ಲವೇ, ನಮಗೆ ಬೇಕೋ ಬೇಡವೋ ಎಲ್ಲ ವಿಚಾರಗಳನ್ನೂ ನಮ್ಮ ಅರಿವಿಗೆ ರವಾನಿಸುವ, ಪಂಚ ಸ್ಪರ್ಶ ಇಂದ್ರಿಯಗಳು ಮತ್ತು ಪಂಚ ಜ್ಞಾನೇಂದ್ರಿಯಗಳು ಸದಾ ಪೈಪೋಟಿ ಮಾಡುತ್ತಿರುತ್ತವೆ. ಏನೆಲ್ಲಾ ತುಂಬಿಕೊಂಡು ನಮ್ಮ ಮನಸ್ಸು ಬುದ್ಧಿಗಳು ಒಂದು ಕಸದ ತೊಟ್ಟಿಯ ತರಹವೇ ಆಗಿರುತ್ತದೆ. ಹಲವು ಬಾರಿ ನಮಗೆ ಆಶ್ಚರ್ಯ ಮತ್ತು ಬೇಸರ ಎರಡೂ ಆಗುತ್ತದೆ. "ಥೂ!! ಇದೇನು ನಮ್ಮ ಮನಸ್ಸಲ್ಲಿ ಇಷ್ಟೊಂದು ಹೊಲಸು ತುಂಬಿದೆಯಲ್ಲ? ಎಂದು. "ಮನಸ್ಸು ನಿರ್ಮಲವಾಗಿರಿಸಿಕೊಳ್ಳಬೇಕು" ಎಂದು ಹೇಳುತ್ತಾರೆ. ಅಂದರೆ ಈಗ "ಮಲ" ಅಂದರೆ ಕಶ್ಮಲಭರಿತವಾಗಿದೆ ಎಂದು ಅರ್ಥ ಅಲ್ಲವೇ? ಆದರೆ ನಮ್ಮ ಸ್ವಭಾವ ಗುಣಕ್ಕೆ ಅನುಗುಣವಾಗಿ ನಮ್ಮ ವಿಚಾರಗಳಿರುತ್ತವೆ.

ಸರಿ ಅದಕ್ಕೆ ಏನು ಮಾಡಬೇಕು? "ಹೀಗೆ ಬೇಡದ ವಿಚಾರಗಳೆಲ್ಲ ನನ್ನ ತಲೆಯಲ್ಲಿ ತುಂಬಿಕೊಳ್ಳಲು ನನ್ನ ಪ್ರಯತ್ನ ಮತ್ತು ಪ್ರಮೇಯವೇನೂ ಇಲ್ಲವಲ್ಲ!!!" ಎಂದು ನೀವು ಕೇಳಬಹುದು. ಹೌದು ಆದರೆ ನಮ್ಮ ಆಂತರಿಕ ಶುದ್ಧತೆಗೆ ಏನು ಬೇಕೋ ಅಂತಹ ಸದ್ವಿಚಾರಗಳನ್ನು ಮಾತ್ರ ಉಳಿಸಿಕೊಳ್ಳಲು, ಬೆಳೆಸಿಕೊಳ್ಳಲು ಸ್ವಾತಂತ್ರ್ಯ ಮತ್ತು ಸಾಮರ್ಥ್ಯ ಎರಡನ್ನೂ ಆ ಪರಮಾತ್ಮ ನಮಗೆ ಕರುಣಿಸಿದ್ದಾನೋ ಇಲ್ಲವೋ? ಪ್ರಯತ್ನ ಪಟ್ಟರೆ, ನಾವು ವೈಚಾರಿಕ ಶುದ್ಧತೆಯನ್ನು ಪಡೆದುಕೊಂಡು ರೂಢಿಸಿಕೊಳ್ಳಬಹುದು. ಅಂತಹ ಪ್ರಯತ್ನವನ್ನು ಮಾಡುವ ನಿಟ್ಟಿನಲ್ಲಿ ನಮ್ಮೆಲ್ಲ ಓದು, ವಿದ್ಯಾಭ್ಯಾಸ, ಆಚಾರ, ವಿಚಾರ, ಸ್ನೇಹ, ಸಂಬಂಧಗಳು, ಪೂಜೆ, ಧ್ಯಾನಗಳು, ಇದ್ದರೆ ನಾವು ಶುದ್ಧರಾಗಲು ಸಾಧ್ಯ. ಮಾನ್ಯ ಗುಂಡಪ್ಪನವರು ಈ ಕಗ್ಗದಲ್ಲಿ ಉಲ್ಲೇಖ ಮಾಡಿದ ಆ ಮಾನಸಿಕ ಸಂತೆಯಿಂದ ಹೊರಬರಲು ಸಾಧ್ಯ.

**ಮುಕ್ತಕ-57** **ಆಗುಂಬೆಯಸ್ತಮಯ ದ್ರೋಣಪರ್ವತದುದಯ ।**
**ತ್ಯಾಗರಾಜನ ಗಾನ ವಲ್ಮೀಕಿ ಕವನ ॥**
**ಆಗಿಸವೆ ತಾವಿವೆಮ್ಮಂತರಂಗದಿ ಸತ್ಯ ।**

**ಯೋಗಪುಲಕಾಂಕುರವ?-ಮಂಕುತಿಮ್ಮ ||**

ಆಗುಂಬೆಯಸ್ತಮಯ=ಆಗುಂಬೆಯ+ಅಸ್ತಮಯ, ದ್ರೋಣಪರ್ವತದುದಯ=ದ್ರೋಣಪರ್ವತದ+ಉದಯ,

ತಾವಿವೆಮ್ಮಂತರಂಗದಿ=ತಾವು+ಇವು+ಎಮ್ಮಯ+ಅಂತರಂಗದಿ,

ಯೋಗಪುಲಕಾಂಕುರವ=ಯೋಗ+ಪುಲಕ+ಅಂಕುರವ.

ದ್ರೋಣ ಪರ್ವತ=ಬಾಬಾ ಬುಡನಗಿರಿ ಬೆಟ್ಟ. ಆಗಿಸಿವೆ=ಉಂಟು ಮಾಡಿವೆ. ಪುಲಕಾಂಕುರ-ರೋಮಾಂಚನ.



ಆಗುಂಬೆಯ ಸೂರ್ಯಾಸ್ತಮಾನ, ದ್ರೋಣಪರ್ವತದ ಸೂರ್ಯೋದಯ, ತ್ಯಾಗರಾಜನ ಗಾನ, ವಾಲ್ಮೀಕಿಯ ಕವನ ಇವೆಲ್ಲವೂ ನಮ್ಮ ಅಂತರಂಗದಲ್ಲಿ ಸತ್ಯದ ದರ್ಶನವನ್ನು ಮಾಡಿಸಿ ರೋಮಾಂಚನಗೊಳಿಸುತ್ತದೆ ಎನ್ನುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ನಮ್ಮಲ್ಲಿ ಬಹಳಷ್ಟು ಜನಕ್ಕೆ ಸೂರ್ಯೋದಯ ಮತ್ತು ಸೂರ್ಯಾಸ್ತಮಾನಗಳನ್ನು ನೋಡಿ ಗೊತ್ತೇ ಇಲ್ಲ. ಹಿಂದೆ ಎಂದೋ ನೋಡಿರುವುದು ಮರೆತೇ ಹೋಗಿದೆ. ಇಡೀ ಸೃಷ್ಟಿಯಲ್ಲಿ ಅತ್ಯದ್ಭುತವಾದದ್ದು ಮಾನವನ ಸೃಷ್ಟಿ. ಏಕೆಂದರೆ ತಾನು ಇರುವುದಷ್ಟೇ ಅಲ್ಲ ತನ್ನೊಡನೆ ಆದಂತಹ ಎಲ್ಲ ಸೃಷ್ಟಿಯನ್ನೂ ನೋಡಿ ಆನಂದಿಸುವ ಕಲೆ ಕೇವಲ ಮಾನವನಿಗೆ ಮಾತ್ರ ಗೊತ್ತು. ಆದರೆ ಆನಂದಪಡುವುದನ್ನು ಮರೆತೆಹೋಗಿದ್ದಾನೆ ಈ ಮನುಷ್ಯ, ವಸ್ತು ವಿಷಯಗಳ, ಯಾಂತ್ರಿಕತೆಯ, ಸ್ವಾರ್ಥದ ಮತ್ತು ಅಹಂಕಾರದ ಕಾಡಿನಲ್ಲಿ ಮನುಷ್ಯ ಕಳೆದು ಹೋಗಿದ್ದಾನೆ. ಅವನಿಗೆ ಇಂದು ಒಂದು ಸೂರ್ಯೋದಯವೋ, ಸೂರ್ಯಾಸ್ತಮಾನವೋ, ಸಂಗೀತವೋ ಅಥವಾ ಕಾವ್ಯ ರಸಧಾರೆಯೋ ಸಂತೋಷವನ್ನು ಕೊಡುವುದಿಲ್ಲ. ಅವುಗಳೆಲ್ಲ ಇಂದಿಗೂ ಸಂತೋಷಕ್ಕೆ ಮತ್ತು ಆನಂದಕ್ಕೆ ಕಾರಣವಾಗಿಯೇ ಉಳಿದಿವೆ. ಆದರೆ ಮನುಷ್ಯನಿಗೆ ಅವೆಲ್ಲವನ್ನು ನೋಡಿ, ಕೇಳಿ ಅಥವಾ ಓದಿ ಆನಂದಪಡುವ ಮನಸ್ಸೇ ಇಲ್ಲವಾಗಿದೆ. ಇದು ದುರಂತ.

ಪಾಪ ಕೆಲವರಿಗೆ ಜೀವನ ಜಂಜಾಟದಲ್ಲಿ, ಅನಿವಾರ್ಯತೆಯಲ್ಲಿ ಮತ್ತು ಒತ್ತಡದಲ್ಲಿ ಈ ವಿಷಯಗಳಿಗೆಲ್ಲಾ ಗಮನ ಕೊಡುವುದಕ್ಕೆ ಸಾಧ್ಯವಿಲ್ಲ. ಅವರು ಕರ್ಮ ಯೋಗಿಗಳು. ಆದರೆ ಎಲ್ಲವೂ ಇದ್ದು ಆದರೂ ಕೊರಗುತ್ತಾ ಇರುವವರಿಗೆ ಆನಂದವಾಗಿರುವುದಕ್ಕೆ ಈ ಸೂರ್ಯೋದಯ, ಸೂರ್ಯಾಸ್ತಮಾನ, ಸಂಗೀತ ಮತ್ತು ಸಾಹಿತ್ಯಗಳು

ಖಂಡಿತ ಸಹಾಯ ಮಾಡುತ್ತವೆ. ಅದರ ಕಡೆಗೆ ಒಲವ ತೋರಿಸಿ ತಮ್ಮನ್ನು ತಾವು ಅದರಲ್ಲಿ ತೊಡಗಿಸಿಕೊಂಡರೆ, ಸಂತೋಷಪಡುವ ಸ್ಥಿತಿಗೆ ಬರಬಹುದು.

ಇಡೀ ಸೃಷ್ಟಿಗೆ ಪೂರಕವಾದ ಈ ಸೂರ್ಯೋದಯ, ಸೂರ್ಯಾಸ್ತಮಾನಗಳು, ಮಾನವನ ಅತ್ಯದ್ಭುತ ಆವಿಷ್ಕಾರವಾದ ಸಂಗೀತ ಜ್ಞಾನ ಮತ್ತು ಜಗತ್ತಿನಲ್ಲೆಲ್ಲೂ ಲಭ್ಯವಾಗದ ನಮ್ಮ ಭಾರತೀಯ ಸಾಹಿತ್ಯದ ಮುಕುಟದಂತಿರುವ ವಾಲ್ಮೀಕಿಯ ರಚನೆ ಇವೆಲ್ಲದರಲ್ಲಿ ಯಾವುದಾದರೊಂದರಲ್ಲಿ ನಮ್ಮನ್ನು ನಾವು ತೊಡಗಿಸಿಕೊಂಡರೆ ಸತ್ಯವಾಗಿಯೂ ಮಾನಸಿಕ ನೆಮ್ಮದಿ ಮತ್ತು ಸಂತೋಷ ದೊರಕುತ್ತದೆಂದು ಹೇಳುತ್ತಾರೆ ಮಾನ್ಯ ಗುಂಡಪ್ಪನವರು. ನನ್ನ ಮಟ್ಟಿಗೆ ಸಾಹಿತ್ಯ ಮತ್ತು ಸಂಗೀತಗಳೆರಡೂ ಸಹ ಏಕಾಗ್ರತೆಯನ್ನು ನೀಡಿ ಧ್ಯಾನಕ್ಕೆ, ಆಧ್ಯಾತ್ಮ ಚಿಂತನೆಗೆ ಬಹಳ ಸಹಾಯ ಮಾಡುತ್ತವೆ ಎಂಬುದನ್ನು ಮನಗಂಡಿದ್ದೇನೆ.

ವಾಚಕರೆ ಈ ಜಗತ್ತಿನಲ್ಲಿ ಆನಂದಪಡುವುದಕ್ಕೆ ಅಸಂಖ್ಯಾತ ಸಾಧನಗಳು ಇವೆ. ಹಾಗೆಯೇ ದುಃಖಪಡುವುದಕ್ಕೆ, ಕೊರಗುವುದಕ್ಕೆ ಮತ್ತು ಗೋಳಾಡುವುದಕ್ಕೂ ಅಸಂಖ್ಯಾತ ಕಾರಣಗಳು ಮತ್ತು ಮಾರ್ಗಗಳಿವೆ. ನಮಗೆ ಏನು ಬೇಕು ಎನ್ನುವುದು ಮುಖ್ಯ. ಈ ಜಗತ್ತಿನ ಅಂಗಡಿಯಲ್ಲಿ ಎಲ್ಲವೂ ಇದೆ. ಆಯ್ಕೆ ನಮ್ಮದು, ಸುಖ ದುಃಖಗಳು ನಮ್ಮ ಕೈಯಲ್ಲೇ ಇದೆ. ಮೊದಲು ನಮಗೆ ಏನು ಬೇಕು ಎನ್ನುವುದನ್ನು ನಿಶ್ಚಯಿಸಿ ನಂತರ ಅದನ್ನು ಪಡೆಯುವ ಪ್ರಯತ್ನವನ್ನು ಪಟ್ಟರೆ ನಮಗೆ ಜಯ ಖಂಡಿತ.





**ಮುಕ್ತಕ-58**

**ಮಲೆಕಣಿವೆಗಳ ಬೆರಗು ಪ್ರಕೃತಿಕೋಪದ ಗುಡುಗು |**
**ಕೆಳೆಯೊಲವು ನಲ್ಲೆಯ ವಿಯೋಗವಿಂತಹವು ||**
**ನಿಲಿಸಿ ಮನದೋಟವನು ಮೂಕಗೊಳಿಸುವುದೆನ್ನ |**
**ನೊಳದನಿಯದೊಂದರಿಂ-ಮಂಕುತಿಮ್ಮ ||**

ಮೂಕಗೊಳಿಸುವುವೆನ್ನ=ಮೂಕ+ಗೊಳಿಸುವುವು+ಎನ್ನ,

ನೊಳದನಿಯದೊಂದರಿಂ=ಒಳದನಿ+ಅದರ+ಒಂದರಿಂ

ಮಲೆ=ಬೆಟ್ಟ, ಕಣಿವೆ=ಕೊರಕುಗಳು, ಕೆಳೆ=ಗೆಳೆತನ, ನಲ್ಲೆ=ಪ್ರೇಯಸಿ, ವಿಯೋಗ=ದೂರ ಸರಿವಾಟ,

ಮನದೋಟವನು=ಮನಸ್ಸಿನ ಚಂಚಲ ಪ್ರಕೃತಿಯನು, ಮೂಕಗೊಳಿಸುವುವು=ಸುಮ್ಮನಾಗಿಸುವುವು.

ಬೆಟ್ಟಗುಡ್ಡಗಳು ಅದರಲ್ಲಿರುವ ಕಣಿವೆಗಳು, ಪ್ರಕೃತಿ ವಿಕೋಪದ ಗುಡುಗು, ಸಿಡಿಲು, ಮಳೆ, ಚಂಡಮಾರುತದಂತಹ ವಿಷಯಗಳು, ಸ್ನೇಹಿತನ ಒಲವು, ಪ್ರೇಯಸಿಯ ವಿಯೋಗದಂತಹ ವಿಷಯಗಳು ನಮ್ಮ ಮನಸ್ಸನ್ನು ಆಳುವಾಗ, ಇವುಗಳನ್ನೆಲ್ಲ ನಿಲ್ಲಿಸಿ, ಮನಸ್ಸನ್ನು, ನಮ್ಮ ಒಳದನಿಯು, ಅಂದರೆ ಅಂತರಂಗದ ದನಿ, ಮಾತ್ರ ಸುಮ್ಮನಾಗಿಸುವುದು ಎಂದು ಈ ಮುಕ್ತಕದಲ್ಲಿ ಮಾನ್ಯ ಗುಂಡಪ್ಪನವರು ಹೇಳುತ್ತಾರೆ.

ಭಗವದ್ಗೀತೆಯಲ್ಲಿ ಒಂದು ಉಲ್ಲೇಖ ಬರುತ್ತದೆ. "ಈ ದೇಹವನ್ನು ಒಂದು ರಥವೆಂದು ತಿಳಿ, ಆತ್ಮನೇ ಯಜಮಾನ, ಬುದ್ಧಿಯೇ ಸಾರಥಿ, ಮನಸ್ಸೇ ಲಗಾಮು ಮತ್ತು ಓಡುವ ಆರು ಕುದುರೆಗಳೇ ಅರಿಷಡ್ವರ್ಗಗಳು" ಎನ್ನುತ್ತಾನೆ ಶ್ರೀ ಕೃಷ್ಣ. ಎಲ್ಲಿಯ ತನಕ ಓಡುವ ಕುದುರೆಗಳು ಲಗಾಮಿನ ಮೂಲಕ ಸಾರಥಿಯ ಹಿಡಿತದಲ್ಲಿರುತ್ತದೆಯೋ ಅಲ್ಲಿಯತನಕ ಆ ಯಜಮಾನನೆನ್ನಿಸಿಕೊಂಡವನು, ಸೇರಬೇಕಾದ ಸ್ಥಳವನ್ನು ಸೇರುತ್ತಾನೆ. ಲಗಾಮಿನ ಮೇಲೆ ಸಾರಥಿಯ ಹಿಡಿತ ಸಡಿಲವಾಗಿ ಕುದುರೆಗಳು ಮನಸೋ ಇಚ್ಛೆ ಓಡಿದರೆ, ಆಗ ಆ ಯಜಮಾನ ಮತ್ತು ಆ ಸಾರಥಿ, ಇಬ್ಬರೂ ಕುದುರೆಗಳು ಅವರನ್ನು ಎಲ್ಲಿ ಕೊಂಡು ಹೋಗುತ್ತದೆಯೋ ಅಲ್ಲಿಗೆ ಹೋಗುತ್ತಾರೆ. ಅಂದರೆ ಎಲ್ಲಿಯ ತನಕ ನಮ್ಮ ಮನಸ್ಸು ಬುದ್ಧಿಯ ಹಿಡಿತದಲ್ಲಿರುತ್ತದೆಯೋ ಅಲ್ಲಿಯತನಕ ನಮಗೆ ಶ್ರೇಯಸ್ಸು ಎಂದು ನಮ್ಮ ಮನಸ್ಸು ವಿಷಯಗಳ ವ್ಯಕ್ತಿಗಳ ಮತ್ತು ವಸ್ತುಗಳ ಆಕರ್ಷಣೆಯ ಹಿಡಿತಕ್ಕೆ ಹೋಗುತ್ತದೆಯೋ, ಆಗ ಆತ್ಮ ಸೊರಗುತ್ತದೆ. ಇದನ್ನೇ ಮಾನ್ಯ ಗುಂಡಪ್ಪನವರು ಸೂಚ್ಯವಾಗಿ "ನಿಲಿಸಿ ಮನದೋಟವನು" ಎನ್ನುತ್ತಾರೆ ಈ ಮುಕ್ತಕದಲ್ಲಿ.

ಮಿತ್ರರೇ, ಆತ್ಮಾವಲೋಕನ ಮಾಡಿಕೊಂಡಾಗ, ನಮಗೆ ತಿಳಿಯುತ್ತದೆ, ಮನಸ್ಸೆಂಬುದು ಕೋತಿ. ಅದು ಕ್ಷಣ ಕ್ಷಣಕ್ಕೂ ಮರದಿಂದ ಮರಕ್ಕೆ ಕೊಂಬೆಯಿಂದ ಕೊಂಬೆಗೆ, ಅಂದರೆ ಒಂದು ವಿಷಯದಿಂದ ಇನ್ನೊಂದು ವಿಷಯಕ್ಕೆ ಹಾರುತ್ತಾ, ವ್ಯರ್ಥವಾಗಿ ತಿರುಗುತ್ತಲೇ ಇರುತ್ತದೆ. ಇದು ಪ್ರತಿಯೊಬ್ಬರ ಸ್ಥಿತಿ, "ಹರಿದಾಡುವಂಥಾ ಮನವ ನಿಲಿಸುವುದು ಬಲು ಕಷ್ಟ" ಎಂದು ದಾಸರು ಹೇಳಿದ್ದಾರೆ. ಅರೆ! ದಾಸರೇ ಹಾಗೆ ಹೇಳಿದ ಮೇಲೆ ನಾವು ಮಾಡುವುದು ಏನು? ಎಂದು ನಾವು ಸುಮ್ಮನಾಗಿಬಿಡಬಹುದು. ಆದರೆ ದಾಸರು "ಕಷ್ಟ" ಎಂದರೆ ಹೊರತು "ಅಸಾಧ್ಯ" ಎಂದು ಹೇಳಲಿಲ್ಲವಲ್ಲ!!!

ಹಾಗಾದರೆ ಏನು ಮಾಡಬೇಕು? "ನಿಲಿಸಿ ಮನದೋಟವನು ಮೂಕಗೊಳಿಸುವುವೆನ್ನನೊಳದನಿಯದೊಂದರಿಂ" ನೋಡಿ, ಇದು ಗುಂಡಪ್ಪನವರ ಸಲಹೆ, ಮನಸ್ಸಿನ ಓಟವನ್ನು ನಿಲ್ಲಿಸಿ ಮೂಕವಾಗಿಸಬೇಕು. ಹೇಗೆ? ಎಂದರೆ ಅಂತರಂಗದ ಅರಿವಿನಿಂದ ಮಾತ್ರ ಸಾಧ್ಯವೆನ್ನುತ್ತಾರೆ ಮಾನ್ಯ ಗುಂಡಪ್ಪನವರು. ಹಾಗಾಗಿ ನಾವು ಅಂತರ್ಮುಖಿಗಳಾಗಬೇಕು. ಗುಹ್ಯರಾಗಬೇಕು. ಒಳದನಿಯನ್ನು ಉತ್ತೇಜಿಸಬೇಕು. ಅದನ್ನು ಕೇಳಬೇಕು ಮತ್ತು ಅದರಂತೆ ನಡೆಯಬೇಕು. ಆಗ ಮನಸ್ಸಿಗೆ ನೆಮ್ಮದಿ, ಸುಖ, ಶಾಂತಿ ಮತ್ತು ಆನಂದದ ಅನುಭವವನ್ನು ನಾವು ಪಡೆಯಬಹುದು. ಇದು ಕೇವಲ ಪ್ರಯತ್ನದಿಂದ ಸಾಧ್ಯ.

ವಾಚಕರೆ, ಇದೊಂದು ಪರೀಕ್ಷೆ. ಪ್ರಶ್ನೆ ಪತ್ರಿಕೆಗಳನ್ನೂ ನಾವೇ ತಯಾರುಮಾಡಿ, ನಾವೇ ಉತ್ತರ ಬರೆದು, ನಮ್ಮನ್ನು ನಾವೇ ಮೌಲ್ಯಮಾಪನಕ್ಕೆ ಒಳಪಡಿಸಿಕೊಳ್ಳುವಂಥಾ ಪರೀಕ್ಷೆ. ಇಲ್ಲಿ ಪ್ರಯತ್ನ ಗಟ್ಟಿ ಮತ್ತು ದೀರ್ಘವಾದರೆ, ಯಶಸ್ಸು ನಿಶ್ಚಯ. ಅಂಥಹ ಪ್ರಯತ್ನವನ್ನು ಮಾಡುವ ದೃಢ ನಿಶ್ಚಯಬೇಕು. ಒಮ್ಮೆ ತೀವ್ರವಾಗಿ ತೊಡಗಿಸಿಕೊಂಡರೆ, ಅದೇ ನಮ್ಮನ್ನು ಮುಂದಕ್ಕೆ ಎಳೆದುಕೊಂಡು ಹೋಗುತ್ತದೆ.

# ಸಾಕ್ಷಿ ದ್ವಯ 59-63

**ಮುಕ್ತಕ-59**

**ಮಣಿಮಂತ್ರತಂತ್ರಸಿದ್ಧಿಗಳ ಸಾಕ್ಷ್ಯಗಳೇಕೆ |**
**ಮನಗಾಣಿಸಲು ನಿಮಗೆ ದೈವದದ್ಭುತವ? ||**
**ಮನುಜರೊಳಗಾಗಾಗ ತೋರ್ವ ಮಹನೀಯಗುಣ |**
**ವನುವಾದ ಬೊಮ್ಮನದು-ಮಂಕುತಿಮ ||**

ಮಣಿಮಂತ್ರತಂತ್ರಸಿದ್ಧಿಗಳ=ಮಣಿ+ಮಂತ್ರ+ತಂತ್ರ+ಸಿದ್ಧಿಗಳ, ಸಾಕ್ಷ್ಯಗಳೇಕೆ=ಸಾಕ್ಷ್ಯಗಳು+ಏಕೆ,

ಮನಗಾಣಿಸಲು=ಮನ+ಕಾಣಿಸಲು,ದೈವದದ್ಭುತವ=ದೈವದ+ಅದ್ಭುತವ,

ಮನುಜರೊಳಗಾಗಾಗ=ಮನುಜರೋಲು+ಆಗಾಗ,

ಮಹನೀಯಗುಣವನುವಾದ=ಮಹನೀಯ+ಗುಣವ+ಅನುವಾದ

ತೋರ್ವ=ತೋರುವ, ಬೊಮ್ಮನದು=ಬ್ರಹ್ಮನದು

ಆ ಪರತತ್ವದ ಅದ್ಭುತ ಕ್ರಿಯೆಗಳನ್ನು ನೋಡಲು, ಮನಗಾಣಲು, ನಾವು ಮಂತ್ರ ತಂತ್ರ ಸಿದ್ಧಿಗಳಿಗೆ ಏಕೆ ಶರಣಾಗಬೇಕು? ಮನುಜರಲ್ಲಿ ಆಗಾಗ ಕಾಣುವ ಮಹನೀಯ ಗುಣಗಳನ್ನು ಸರಿಯಾಗಿ ಅರ್ಥಮಾಡಿಕೊಂಡರೆ, ನಮಗೆ ದೈವದ ಕ್ರಿಯೆ ಅರ್ಥವಾಗುತ್ತದೆ, ಎನ್ನುವುದೇ ಈ ಮುಕ್ತಕದ ಹೂರಣ.

ನಿಜ. ಇದೊಂದು ವೃತ್ತ, ಇದರ ಕ್ರಿಯೆ ಅರ್ಥಮಾಡಿಕೊಳ್ಳುವುದು ಕಷ್ಟ. ಏಕೆಂದರೆ ನಮಗೆ ನೋಡಲು ಬರುವುದಿಲ್ಲ. ಅರ್ಥಮಾಡಿಕೊಳ್ಳಲು ಬರುವುದಿಲ್ಲ. ಈ ಜಗತ್ತನ್ನು ಸೃಷ್ಟಿಸಿ, ನಡೆಸಿಕೊಂಡು ಹೋಗುತ್ತಿರುವ ಆ ಅದ್ಭುತ ಚೇತನದ ಕಾರ್ಯ ವೈಖರಿಗೆ ಒಂದು ಪರಿಭಾಷೆಯನ್ನು ನೀಡುವುದು ಬಹಳ ಕಷ್ಟ. ನಮ್ಮ ಜೀವನದಲ್ಲಿ ನಡೆಯುವುದೆಲ್ಲವನ್ನೂ ಅರ್ಥೈಸುವುದು, ಕಾರಣ ಹುಡುಕುವುದು ಬಹಳ ಕಷ್ಟ. ಹಾಗೆ ನಾವು ಒಂದು ರೀತಿಯಲ್ಲಿ ಅರ್ಥಮಾಡಿಕೊಂಡರೂ, ಅದು ನಿಜವಾದ ಕಾರಣವಾಗಿಲ್ಲದೇ ಇರಬಹುದು.





ನಮ್ಮಲ್ಲಿ ಸಾಧಾರಣವಾಗಿ ಒಂದು ಮಾತನ್ನು ಕೇಳುತ್ತಲಿರುತ್ತೇವೆ. ಯಾರಾದರೂ ನಮಗೆ ಸಂಕಟ ಸಮಯದಲ್ಲಿ ಅನಪೇಕ್ಷಿತವಾಗಿ ಸಹಾಯ ಮಾಡಿದಾಗ “ದೇವರು ಬಂದಂಗೆ ಬಂದ್ಯಪ್ಪ” ಎನ್ನುವ ರೂಢಿ ಇದೆ ಅಲ್ಲವೇ? ಅಂದರೆ ಏನು ಆ ವ್ಯಕ್ತಿಯಲ್ಲಿ ನಾವು ದೇವರನ್ನು ಕಾಣುತ್ತೇವೆ ಮತ್ತು ಅವರಿಂದ ಆದ ಉಪಕಾರವನ್ನು ಆ ದೇವರೇ ಮಾಡಿದ ಎನ್ನುವ ರೀತಿಯಲ್ಲಿ ಅರ್ಥೈಸುತ್ತೇವೆ. ನಮಗೆ ಸಹಾಯಬೇಕು. ಯಾರು ಮಾಡುತ್ತಾರೆಂದು ಗೊತ್ತಿಲ್ಲ. ಹಾಗೆ

ಗೊತ್ತಿಲ್ಲದಿರುವಾಗ ನಮಗೆ ದೇವರ ಮೇಲೆ ನಂಬಿಕೆ. ಆ ಸಮಯದಲ್ಲಿ ಯಾರೇ ಸಹಾಯ ಮಾಡಿದರೂ ಅದನ್ನು ದೇವರೇ ಮಾಡಿದನೆಂದು ವ್ಯಾಖ್ಯಾನ ಮಾಡುತ್ತೇವೆ. ಇದೇ ಜಗತ್ತು.

ಎಂದೋ ಒಂದು ಕಾಲವಿತ್ತು. ಗಜೇಂದ್ರನಿಗೆ, ಪ್ರಹ್ಲಾದನಿಗೆ, ಧ್ರುವನಿಗೆ, ಗೋಕರ್ಣನಿಗೆ, ಅರ್ಜುನ ಮುಂತಾದವರಿಗೆ, ಆ ಪರಮಾತ್ಮ ನೇರ ಸಹಾಯ ಮಾಡಿದ ದೃಷ್ಟಾಂತಗಳು. ಆದರೆ, ಇಂದು ನಾವು ಅಂತಹ ಅನುಭವಗಳನ್ನು ಪಡೆಯಲು ಸಾಧ್ಯವೇ ಇಲ್ಲ.

ಇಂದು ನಾವು ನಮ್ಮ ಸುತ್ತಲಿರುವ ಮನುಷ್ಯರಲ್ಲಿ ಅವರ ಕಲ್ಯಾಣ ಗುಣಗಳಿಂದ ಅವರ ಮೂಲಕವೇ ಆ ದೈವದ ಅನುಭವವನ್ನು ಪಡೆಯಬೇಕು. ಇಂದು ಮಂತ್ರ ತಂತ್ರಗಳಿಂದ ಆ ದೈವವನ್ನು ಸಿದ್ಧಿಸಿಕೊಳ್ಳಲು ಸಾಧ್ಯವಿಲ್ಲ. ಏಕೆಂದರೆ ಟ್ರಾನ್ಸಿಮಿಟರ್ ಸಶಕ್ತವಾಗಿದ್ದರೂ, ರಿಸೀವರ್ ಹಾಳಾಗಿದೆಯಲ್ಲ. ಹಾಗಾಗಿ ನಮ್ಮ ಸುತ್ತಲಿನ ಜನರಲ್ಲಿ ಇರುವ ಆ ಪರಮಾತ್ಮನ ಕಲ್ಯಾಣ ಗುಣಗಳಾದ ಪ್ರೀತಿ, ಸಹನೆ, ದಯೆ, ಕರುಣೆ ಮುಂತಾದವುಗಳನ್ನು ಗುರುತಿಸಿದರೆ ಒಳ್ಳೆಯದು. ಅವುಗಳಲ್ಲೇ ನಾವು ದೈವವನ್ನು ಕಾಣಬೇಕು ಎಂದು ಹೇಳುತ್ತಾರೆ ಮಾನ್ಯ ಗುಂಡಪ್ಪನವರು.

ಇಂದೂ ಸಹ ಸಾಕಷ್ಟು ಜನ ಅಂತಹ ಮಹನೀಯರು ಇದ್ದಾರೆ. ಪ್ರತ್ಯಕ್ಷವಾಗಿ ಸಮಾಜಕ್ಕೆ ನಿಸ್ವಾರ್ಥ ಸೇವೆ ಮಾಡುತ್ತಿರುವ ಜನರು, ಎಲೆಮರೆಕಾಯಿಗಳಂತೆ ಇದ್ದಾರೆ. ಇಡೀ ಕರುನಾಡು ಹೆಮ್ಮೆಪಡುವಂಥಾ, ಮೋಕ್ಷಗುಂಡಂ ವಿಶ್ವೇಶ್ವರಯ್ಯ, ನಾಲ್ವಡಿ ಕೃಷ್ಣರಾಜ ಒಡೆಯರ್‌ರಂಥವರು, (ರಾಜಋಷಿ ಎಂದು ಅವರಿಗೆ ಬಿರುದು) ಸಾಲುಮರದ ತಿಮ್ಮಕ್ಕ, ಮದರ್ ತೆರೇಸಾರಂಥವರು, ಲೋಕ ಕಲ್ಯಾಣವನ್ನು ಮಾತ್ರ ಗುರಿಯಾಗಿರಿಸಿಕೊಂಡು ಸಾಧನೆಯನ್ನು ಮಾಡುವ ಸಾಧುಗಳು ಸಂತರು, ಮಠ ಮಾನ್ಯಗಳು ಏನೂ ಇಲ್ಲದೆ ಕೆಲಸ ಮಾಡುತ್ತಾ ಒಟ್ಟು ಸಮುದಾಯದ ಹಿತವನ್ನೇ ಬಯಸುವ ಮಹನೀಯರು ನಮ್ಮ ಅಕ್ಕಪಕ್ಕದಲ್ಲೇ ಇರುತ್ತಾರೆ.

ಅವರ ನಿಸ್ವಾರ್ಥ ಸೇವೆಯನ್ನು ನಾವು ದೈವ ಕೃಪೆ ಎಂದೇ ಪರಿಗಣಿಸಬೇಕಾಗುತ್ತದೆ. ಆ ಪರಮಾತ್ಮ ಪ್ರತ್ಯಕ್ಷವಾಗಿ ನಮಗೆ ಒದಗದಿದ್ದರೂ ಪರೋಕ್ಷವಾಗಿ ಇಂಥಹ ಮಹನೀಯರ ಮೂಲಕ ನಮಗೆ ಮತ್ತು ಇಡೀ ಸಮಾಜಕ್ಕೆ ಒದಗುತ್ತಲೇ ಇರುತ್ತಾನೆ. ನಾವೂ ಸಹ ಅಂತಹ ಗುಣಗಳನ್ನು ಗುರುತಿಸುತ್ತಾ, ಅಂತಹವರ ಕಾರ್ಯಕ್ಕೆ ಸಾಕಷ್ಟು ಒತ್ತಾಸೆಯನ್ನು ನೀಡುತ್ತಾ, ಅಂತಹ ಗುಣಗಳನ್ನು ಬೆಳೆಸಿಕೊಳ್ಳಲು ಪ್ರಯತ್ನಿಸಬೇಕು.

**ಮುಕ್ತಕ-60**

**ಗ್ರೀಸಿನಾ ಕಬ್ಬಗಳನೋದುವರು ದೆಹಲಿಯಲಿ ।**
**ಕಾಶಿಯಾ ಶಾಸ್ತ್ರಗಳನಾಕ್ಷಘರ್ಡಿನವರು ॥**
**ದೇಶಕಾಲವಿಭಾಗ ಮನದ ರಾಜ್ಯದೊಳಿರದು ।**
**ಶ್ವಾಸವದು ಬೊಮ್ಮನದು-ಮಂಕುತಿಮ್ಮ ॥**

ಕಬ್ಬಗಳನೋದುವರು=ಕಬ್ಬಗಳನು+ಓದುವರು, ರಾಜ್ಯದೊಳಿರದು=ರಾಜ್ಯದೊಳು+ಇರದು
ಶಾಸ್ತ್ರಗಳನಾಕ್ಸಫರ್ಡಿನವರು=ಶಾಸ್ತ್ರಗಳನು+ಆಕ್ಸಫರ್ಡಿನವರು,
ಕಬ್ಬಗಳು=ಕಾವ್ಯಗಳು ಬೊಮ್ಮನದು=ಪರಮಾತ್ಮನದು

ಜಗತ್ತಿನ ವಿಶಾಲತೆಗೆ ಒಂದು ಕನ್ನಡಿ ಈ ಮುಕ್ತಕ. "ಗ್ಲೋಬಲ್ ವಿಲೇಜ್" ಎಂದು ಇತ್ತೀಚೆಗೆ ಒಂದು ಪದ ಪ್ರಯೋಗವನ್ನು ನಾವು ಕೇಳುತ್ತಿದ್ದೇವೆ. ನಾವು ಇಲ್ಲಿ ಕುಳಿತುಕೊಂಡು ಪ್ರಪಂಚದ ಯಾವುದೇ ಮೂಲೆಯಲಿರುವ ಜನರೊಡನೆ ಸಂಪರ್ಕಿಸಲು ನಾನಾ ವಿಧವಾದ ಸಂಪರ್ಕ ಸಾಧನಗಳನ್ನು ಇಂದು ಹೊಂದಿದ್ದೇವೆ. ಎಲ್ಲಿಯೋ ಹುಟ್ಟಿ ಬೆಳೆದ, ಆಲ್ಬರ್ಟ್ ಕಾಮೂವಿನ ನಾಟಕಗಳನ್ನು ಇಲ್ಲಿ ಪ್ರಸ್ತುತ ಪಡಿಸುತ್ತೇವೆ. ಶೇಕ್ಸಪಿಯರನ ನಾಟಕಗಳನ್ನೂ ಆಡುತ್ತೇವೆ. ಅಲ್ಲಿ ಅವರುಗಳು ನಮ್ಮ ಭಾರತೀಯ ಸಂಸ್ಕೃತಿಯ ಕತೆ ನಾಟಕ ಶಾಸ್ತ್ರಗಳನ್ನು ಓದುತ್ತಾರೆ. ಇಂಗ್ಲೆಂಡಿನ ಶಾಲೆಗಳಲ್ಲಿ ಪ್ರಾರ್ಥನೆಯಲ್ಲಿ "ಸಹನಾವವತು" ಹೇಳುತ್ತಾರೆ. ಆದರೆ ದುರಂತವೆಂದರೆ, ಇಲ್ಲಿ ಭಾರತದಲ್ಲಿ ಅದನ್ನು ಶಾಲೆಗಳಲ್ಲಿ ಹೇಳಿದರೆ ಅದಕ್ಕೊಂದು ಬಣ್ಣ ಕಟ್ಟಿ ಗೊಂದಲವೇ ಆಗುತ್ತದೆ.

ಇರಲಿ, ಹೀಗೆ ಬೇರೆ ಬೇರೆ ದೇಶಗಳ ಭಾಷೆ ಮತ್ತು ಸಂಸ್ಕೃತಿಗಳನ್ನು ಬೇರೆ ಬೇರೆ ದೇಶಗಳಲ್ಲಿ ಅನುಕರಿಸಿ, ಅನುಸರಿಸುವಾಗ ಇಡೀ ಜಗತ್ತೇ ಒಂದು ಮನೆಯಾಗುವ ಸಂಭವ ಇದೆ ಎಂದು ಅರ್ಥ ತಾನೇ, "ವಿದ್ವತ್ವಂಚ ನೃಪತ್ವಂಚ ನೈವ ತುಲ್ಯಂ ಕದಾಚನ | ಸ್ವದೇಶ ಪೂಜ್ಯತೆ ರಾಜಾ ವಿದ್ವಾನ್ ಸರ್ವತ್ರ ಪೂಜ್ಯತೆ" ಎನ್ನುತ್ತದೆ ಸುಭಾಷಿತ. ಹಾಗೆ ವಿದ್ಯೆಗೆ ದೇಶ ಕಾಲದ ಎಲ್ಲೆ ಇರುವುದಿಲ್ಲ ಎನ್ನುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ. ಹೌದು ಮನಸ್ಸು ವಿಶಾಲವಾದರೆ, ಮನಸ್ಸಿನ ಚಿಂತನೆ ವಿಶಾಲವಾದರೆ ಅದು ಸಾಧ್ಯ. ಆದರೆ ಜಾತಿ, ಮತ, ದೇಶ, ಭಾಷೆ, ವರ್ಣಗಳ ಸಣ್ಣ ಸಣ್ಣ ವೃತ್ತಗಳ ಗೆರೆಗಳನ್ನು ನಮ್ಮ ಸುತ್ತ ನಾವೇ ಎಳೆದುಕೊಂಡು "ಕೂಪಸ್ಥ ಮಂಡೂಕ" ದ ರೀತಿ ಬಾಳುವ ನಮಗೆ ಜಗದ್ವೈಶಾಲ್ಯದ ಮನೋಭಾವ ಹೇಗೆ ಬರಬೇಕು ಹೇಳಿ? ಇಂದು ಜಗತ್ತು ಇರುವುದೇ ಹಾಗೆ. ಒಬ್ಬರು ಹಾಗಾದರೆ, ಮತ್ತೊಬ್ಬರೂ ತಮ್ಮ ಪ್ರತಿಷ್ಠೆ ತೋರುವುದಕ್ಕೋ ಅಥವಾ ತಮ್ಮನ್ನು ಮತ್ತು ತಮ್ಮತನವನ್ನು ಕಾಪಾಡಿಕೊಳ್ಳುವುದಕ್ಕೋ, ಇವರೂ ಹಾಗಾಗುತ್ತಾರೆ. ಇದಕ್ಕೆ ಕೊನೆ ಎಲ್ಲಿ. ಆ ದೇವರೇ ಬಲ್ಲ.

ಇಷ್ಟೆಲ್ಲಾ ವಿರೋಧ-ವೈವಿಧ್ಯತೆಗಳಲ್ಲಿ ಮನುಷ್ಯ ಒಂದು ವಿಚಾರ ಮರೆತು ಹೋಗಿದ್ದಾನೆ. ಎಲ್ಲ ಮನುಷ್ಯರೂ ಬದುಕಿರುವುದೇ ಉಸಿರಾಟದಿಂದ ಮತ್ತು ಆ ಉಸಿರು ಪರಮಚೇತನದ ಕರುಣೆಯಿಂದ ನಮಗೆ ಸಿಕ್ಕಿದೆ. ವಾಚಕರೆ, ನೋಡಿ ಒಂದು ಉಸಿರು ಒಳಗೆ ಹೋದದ್ದು ಹೊರಗೆ ಬರದಿದ್ದರೆ ಅಥವಾ ಹೊರಗೆ ಬಿಟ್ಟ ಉಸಿರು ಮತ್ತೆ ಒಳಗೆ ಹೋಗದಿದ್ದರೆ ನಮ್ಮ ಬದುಕಿಗೆ ಅಂತ್ಯ. ಇಷ್ಟು ದುರ್ಬಲ, ಸೂಕ್ಷ್ಮ, ನಾಜೂಕಾದದ್ದು





(fragile) ನಮ್ಮ ಬದುಕು. ನಾವು ಎಷ್ಟು ದಿವಸ ಬದುಕಿರಬೇಕು ಎನ್ನುವುದು ಆ ಪರಮ ಶಕ್ತಿಯ ಇಚ್ಛೆಯ ಮೇಲೆ ನಿರ್ಭರವಾಗಿದೆ ಎಂಬುವುದು ಆಸ್ತಿಕರ ನಂಬಿಕೆ. ಇರಲಿ ಯಾವುದೋ ಒಂದು ಶಕ್ತಿಯ ಅಧೀನ ನಾವೆಲ್ಲಾ. ಹಾಗೆ ಅಷ್ಟು ನಾಜೂಕಾದ ಬದುಕನ್ನು ನಡೆಸುವ ನಾವು, ಈ ಕ್ಷಣ ಇದೆ-ಮತ್ತೊಂದು ಕ್ಷಣ ಇಲ್ಲ, ಎನ್ನುವಂಥಾ ಬದುಕಿಟ್ಟುಕೊಂಡು ಅಹಂಕಾರ ಪಡುವುದು ಮೂರ್ಖತನವಲ್ಲದೆ ಮತ್ತೇನು?

ಬನ್ನಿ ನಾವು ಈ ಜಾತಿ, ಮತ, ದೇಶ, ಭಾಷೆ, ವರ್ಣಗಳ ಸಣ್ಣ ಸಣ್ಣ ವೃತ್ತಗಳ ಗೆರೆಗಳನ್ನು ಅಳಿಸಿ ಅಹಂಕಾರವನ್ನು ತೊರೆದು, ಪರಸ್ಪರ ಪ್ರೀತಿ, ಸದ್ಭಾವನೆ, ವಿಶ್ವಾಸಗಳನ್ನು ಬೆಳೆಸಿಕೊಂಡು ವಿಶ್ವಮಾನವರಾಗೋಣ. ಇಡೀ ವಿಶ್ವವನ್ನೇ ಎಲ್ಲ ಪ್ರಾಣಿಗಳೂ ಪ್ರಶಾಂತವಾಗಿ ಜೀವಿಸಲು ಒಂದು ಸುಂದರ ತಾಣವನ್ನಾಗಿ ಪರಿವರ್ತಿಸುವ ಪ್ರಯತ್ನ ಮಾಡೋಣ.

**ಮುಕ್ತಕ-61**

**ನಕ್ಷತ್ರ ಮಂಡಲದಿನಾಚೆಯಿಂದೊಂದು ದನಿ ।**
**ವಕ್ಷೋಗುಹಾಂತರದಿಯೊಂದು ದನಿಯಿಂತಿ ॥**
**ಸಾಕ್ಷಿದ್ವಯವು ನಿನ್ನಳೊಂದುಗೂಡಿದೊಡದೇ ।**
**ಪ್ರೇಕ್ಷೆ ಪರಬೊಮ್ಮನದು-ಮಂಕುತಿಮ್ಮ ॥**

ಮಂಡಲದಿನಾಚೆಯಿಂದೊಂದು=ಮಂಡಲದ+ಆಚೆಯಿಂದ+ಒಂದೊಂದು,
ವಕ್ಷೋಗುಹಾಂತರದಿನೊಂದು=ವಕ್ಷ+ಗುಹಾಂತರದ+ಇನ್ನೊಂದು,
ನಿನ್ನಳೊಂದುಗೂಡಿದೊಡದೇ=ನಿನ್ನೊಳು+ಒಂದುಗೂಡಿದೊಡೆ+ಅದೇ
ವಕ್ಷ=ಹೃದಯ, ಪ್ರೇಕ್ಷೆ=ಸಾಕ್ಷಾತ್ಕಾರ, ದರ್ಶನ, ಪರಬೊಮ್ಮನದು=ಪರಬ್ರಹ್ಮನದು

ನಕ್ಷತ್ರ ಮಂಡಲದ ಆಚೆಯಿಂದ ಒಂದು ದನಿ, ವಕ್ಷ ಗುಹಾಂತರದಿಂದ ಒಂದು ದನಿಯಂತೆ ಈ ಸಾಕ್ಷಿ ದ್ವಯವು ನಿನ್ನೊಳಗೆ ಒಂದುಗೂಡಿದೊಡೆ ಅದೇ ಪರಬ್ರಹ್ಮನ ದರ್ಶನವನ್ನು ನೀಡುತ್ತದೆ ಎಂಬುದೇ ಈ ಮುಕ್ತಕದ ಹೂರಣ.

ಒಂದು ದೈವೀ ದನಿ ಮತ್ತೊಂದು ಅಂತರ್ದನಿ. ಎರಡರ ಸಮ್ಮಿಲನವೇ ಪರಮಾತ್ಮ ದರ್ಶನ, ನಾವು ಯಾವುದಾದರೊಂದು ದನಿಯನ್ನು ಕೇಳಬಹುದಲ್ಲವೆ. ಈ ಎರಡೂ ದನಿಗಳನ್ನು ಕೇಳುವುದು ಹೇಗೆ. ಅವುಗಳನ್ನು ಮೇಳೈಸುವುದು ಹೇಗೆ ಎಂಬುದೇ ಆಧ್ಯಾತ್ಮ ವಿದ್ಯೆಯ ಅಂತಿಮ ಪಾಠ, ಇಡೀ ಸೃಷ್ಟಿಯನ್ನು ಮನಸ್ಸಿನಲ್ಲಿ ಕಲ್ಪಿಸಿಕೊಳ್ಳುವುದು ಕಷ್ಟ. ಆದರೆ ಅಸಾಧ್ಯವಲ್ಲ. ಹಾಗೆ ಕಲ್ಪಿಸಿಕೊಳ್ಳಲಾದರೆ, ಅದನ್ನು ಅಂತಃಚಕ್ಷುವಿನಿಂದ ನೋಡಲು ಸಾಧ್ಯವಾದರೆ ಮತ್ತು ಅದನ್ನು ನಮ್ಮ ಅಂತರಂಗದಲ್ಲಿ ಈ ಪಂಚಭೂತಗಳ, ಪಂಚ ಜ್ಞಾನೇಂದ್ರಿಯಗಳ, ಪಂಚ ಸ್ಪರ್ಶೇಂದ್ರಿಯಗಳ ಪ್ರಭಾವ ಮತ್ತು ಪರಿಧಿಯಿಂದ ಹೊರತುಪಡಿಸಿ ನೋಡಿದಾಗ ಆ ಬೃಹತ್ ಚೇತನದ ಅದ್ಭುತ ಕಾರ್ಯದ ಅರಿವಾಗಿ, ನಾವು ಪರಮಾತ್ಮ ದರ್ಶನ ಮಾಡಿಕೊಳ್ಳಬಹುದು. ಇದನ್ನು ವಿವರಿಸುವುದು ಕಷ್ಟ. ನಾ ಹಿಂದೆ ಹೇಳಿದ ಹಾಗೆ ಇದು ಕೇವಲ ಅನುಭವ ವೇದ್ಯ

ಇದನ್ನು ಇನ್ನೊಂದು ರೀತಿ ನೋಡಬಹುದು. ನಮಗೆ ಬಹಳಷ್ಟು ಜನರ ಬೋಧನೆಗಳು, ನಮ್ಮ ಓದಿನಿಂದ ಬಹಳಷ್ಟು ವಿಚಾರಗಳು, ತಿಳಿದವರಿಂದ, ಪಂಡಿತರಿಂದ, ಸಾಧು ಸಂತರಿಂದ, ಸಾಧನೆ ಮಾಡಿದವರಿಂದ ಕೇಳಿದ ವಿಚಾರಗಳಿಂದ ಸ್ವಲ್ಪಮಟ್ಟಿಗೆ ಹಲವು ವಿಚಾರಗಳು ನಮ್ಮ ಅರಿವಿಗೆ ಬರುತ್ತವೆ. ನಾವು ನಮ್ಮ ಅಂತರಂಗದಲ್ಲಿ ಅಂತರ್ಮುಖಿಗಳಾಗಿ ಅನುಭವಿಸುವ ಕೆಲವು ವಿಚಾರಗಳು ನಮ್ಮ ಅರಿವಿಗೆ ಬರುತ್ತವೆ. ಎರಡೂ ವಿಚಾರಗಳನ್ನು ಮಂಥನ ಮಾಡಿ ಸಾಧ್ಯಾಸಾಧ್ಯತೆಗಳನ್ನು, ಸಾಧಕ ಬಾಧಕಗಳನ್ನು, ವಿಚಾರದ ಒರೆಗೆ ಹಚ್ಚಿ ನಮಗೆ ಸರಿ ಕಂಡದ್ದನ್ನು ನಂಬಿ, ನಮ್ಮ ನಂಬಿಕೆಯನ್ನು ಗಟ್ಟಿ ಮಾಡಿಕೊಂಡು, ನಮ್ಮ ಅನುಭವವನ್ನು ದೀರ್ಘಕಾಲ ಅನುಭವಿಸುವಂತಾದರೆ ಆ ಪರಮಾತ್ಮನ ಸತ್ಯರೂಪದ ದರ್ಶನ ನಮಗೆ ಖಂಡಿತ ಆಗುತ್ತದೆ.

ಇದನ್ನೇ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ "ಸಾಕ್ಷಿ ದ್ವಯವು" ಎಂಬ ಪದ ಪ್ರಯೋಗದಿಂದ ಉಲ್ಲೇಖಿಸಿದ್ದಾರೆ. ಇದನ್ನು ಅನುಭವಿಸಬೇಕು. ಅಂತರಂಗದಲ್ಲಿ ತಂದುಕೊಂಡು ಸಂತೋಷಿಸಬೇಕು, ಕಂಡುಕೊಳ್ಳಬೇಕು ಸ್ಥಿರಮಾಡಿಕೊಳ್ಳಬೇಕು.

**ಮುಕ್ತಕ-62**

**ಭೌತವಿಜ್ಞಾನಿ ರವಿತಾರೆಧರೆಗಳ ಚಲನ ।**
**ರೀತಿ ವೇಗವನಳೆದು ಶಕ್ತಿಗಳ ಗುಣಿಪನ್ ॥**
**ಪ್ರೀತಿರೋಷಗಳನವನಳೆವನೇನ್? ಅವ್ಯಕ್ತ ।**
**ಚೇತನವನರಿವನೇಂ? ಮಂಕುತಿಮ್ಮ ॥**

ಭೌತವಿಜ್ಞಾನಿಯು ಸೂರ್ಯ, ನಕ್ಷತ್ರ, ಭೂಮಿಗಳ ತಿರುಗುವ, ಸುಡುವ, ಪ್ರಭಾವ ಬೀರುವ ಶಕ್ತಿಗಳ ಗುಣಾಕಾರ ಭಾಗಾಕಾರ ಲೆಕ್ಕಾಚಾರವನ್ನು ಮಾಡುತ್ತಾನೆ. ಆದರೆ ಮಾನವ ಮನಸ್ಸುಗಳಲ್ಲಿ ಪರಸ್ಪರ ಪ್ರೀತಿ ದ್ವೇಷ ರೋಷಗಳ ಶಕ್ತಿಯನ್ನು ಅಳೆಯುತ್ತಾನೆಯೇ? ಸಕಲ ಸೃಷ್ಟಿಯನ್ನೂ ಒಂದು ಸೂತ್ರದಲ್ಲಿ ಹೆಣೆದು ಅದರ ಗತಿ ವಿಧಿಗಳನ್ನು ನಿಯಂತ್ರಿಸುವ ಆ ಬೃಹತ್ ಚೇತನವನ್ನು ಅವನಿಂದ ಅರಿಯಲು ಸಾಧ್ಯವೇ ಎಂದು ಕೇಳುತ್ತಾರೆ ಮಾನ್ಯ ಗುಂಡಪ್ಪನವರು.

ವಿಜ್ಞಾನಿಗಳ ಸಂಶೋಧನೆಗಳಿಂದ ಅವರಿಗೆ ಈ ಸೃಷ್ಟಿಯ ರಹಸ್ಯಗಳು ಅರಿವಿಗೆ ಬಂದಿರುವುದು ಕೇವಲ ಅಣುಮಾತ್ರ ಊಹೆಗೂ ನಿಲುಕದ ಈ ಸೃಷ್ಟಿಯನ್ನು ಅವರ ಕೈಲಿ ಅರಿಯಲು ಸಾಧ್ಯವೇ ಇಲ್ಲ. ಅಮಿತವಾದಂತಹ ಈ ಜಗತ್ತನ್ನು ಮಿತ ಬುದ್ಧಿಯಿಂದ ಅರಿಯಲು ಸಾಧ್ಯವೇ? ಏನೋ ಒಂದಿಷ್ಟು ಲೆಕ್ಕಾಚಾರ ಹಾಕಿ "ಇದು ಹೀಗಿರಬಹುದು ಅಥವಾ ಅದು ಹಾಗಿರಬಹುದು" ಎಂದು ಅಂದಾಜು ಮಾಡಬಹುದು. ಸ್ವಲ್ಪಮಟ್ಟಿಗೆ ಅರಿಯಲೂ ಸಾಧ್ಯ. ಆದರೆ ಇಂದು ಇವರುಗಳು ಕಂಡುಕೊಂಡಂತಹ ವಿಚಾರಗಳು, ಎಂದಿಗೂ ಹೀಗೇ ಇರುವುದಿಲ್ಲ. ಬದಲಾಗುತ್ತಾ ಇರುವ ಈ ಜಗತ್ತಿನ ಪರಿಯನ್ನು ನಿಖರವಾಗಿ ಹೇಳಲು ಸಾಧ್ಯವೇ ಇಲ್ಲ, ಕೇವಲ ಊಹಿಸಬಹುದು. "ಹೀಗಿರಬಹುದು ಅಥವಾ ಹಾಗಿರಬಹುದು' ಎಂದು ಕಲ್ಪಿಸಿಕೊಳ್ಳಬಹುದು ಮತ್ತು ಕಲ್ಪಿಸಿದ್ದನ್ನು ಸಿದ್ಧಾಂತವನ್ನಾಗಿ ಪ್ರತಿಪಾದಿಸಬಹುದು. ಆದರೆ ಕೆಲವು ವರ್ಷಗಳ ಬಳಿಕ ಆ ಸಿದ್ಧಾಂತಗಳು ಸತ್ಯಕ್ಕೆ ದೂರವೆನ್ನುವುದನ್ನು





ಮತ್ತಾರೋ ದೃಢಪಡಿಸುತ್ತಾರೆ. ಹಾಗಾಗಿ ವಿಜ್ಞಾನಿಗಳಿಂದ ಸೃಷ್ಟಿಯ ರಹಸ್ಯವನ್ನು, ಅವರ ಗುಣಾಕಾರ, ಭಾಗಾಕಾರಗಳ, ಲೆಕ್ಕಾಚಾರದಿಂದ ಅರಿಯಲು ಸಾಧ್ಯವಿಲ್ಲ ಎನ್ನುವುದು ಮಾನ್ಯ ಗುಂಡಪ್ಪನವರ ಮತ ಮತ್ತು ಸತ್ಯವೂ ಕೂಡ.

ಸೂರ್ಯ, ನಕ್ಷತ್ರ, ಭೂಮಿಗಳ ತಿರುಗುವ, ಸುಡುವ, ಪ್ರಭಾವ ಬೀರುವ ಶಕ್ತಿಗಳನ್ನು ಮತ್ತು ಅದರ ಲೆಕ್ಕಾಚಾರವನ್ನು ಈ ಭೌತ ವಿಜ್ಞಾನಿಗಳು ಅಲ್ಪ ಸ್ವಲ್ಪ ಹಾಕಿಬಿಡಬಹುದು. ಆದರೆ ಮಾನವನ ಮನಸ್ಸಿನಲ್ಲಿ ಇರುವ ಪ್ರೀತಿ ಪ್ರೇಮ ಕೋಪ ದ್ವೇಷದ ಭಾವಗಳ ಸಂವೇದನೆಯ ಒತ್ತಡ, ವೇಗದ ಲೆಕ್ಕಾಚಾರವನ್ನು ಯಾರಿಂದಲೂ ಹಾಕಲು ಸಾಧ್ಯವಿಲ್ಲವೆನ್ನುತ್ತಾರೆ, ಮಾನ್ಯ ಗುಂಡಪ್ಪನವರು.

ಹೌದು ಮಾನವನ ಮನಸ್ಸೂ ಸಹ ಈ ಸೃಷ್ಟಿಯಷ್ಟೇ ಅಗಾಧ ಮತ್ತು ಆಳ, ವೇದಾಂತದಲ್ಲಿ ಅದನ್ನು ಬಹಳ ಆಳವಾದದ್ದು, ನಿಗೂಢವಾದದ್ದು ಊಹೆಗೆ ನಿಲುಕದ್ದು ಎನ್ನುವ ಅರ್ಥದಲ್ಲಿ “ಗುಹ್ಯ” ಎನ್ನುತ್ತಾರೆ. ಒಬ್ಬರ ಮನಸ್ಸಿನ ಆಳವನ್ನು ಅರಿಯುವುದು ಸಾಧ್ಯವಿಲ್ಲ. ಮೇಲಿನ ರೂಪವೇ ಬೇರೆ, ಆಂತರ್ಯದ ಚಿತ್ರವೇ ಬೇರೆ. ಇದನ್ನೂ ಸಹ ವಿಜ್ಞಾನಿಗಳು ಅರಿಯುವಲ್ಲಿ ಅಸಫಲರು ಎಂದು ಹೇಳುತ್ತಾರೆ ಮಾನ್ಯ ಗುಂಡಪ್ಪನವರು.

ಹೀಗೆ ಯಾವುದನ್ನೂ ನಿಖರವಾಗಿ ಸಂಪೂರ್ಣವಾಗಿ ದೃಢಪಡಿಸಲಾಗದ ವೈಜ್ಞಾನಿಕ ಸಿದ್ಧಾಂತಗಳು, ಇನ್ನು ಇವೆಲ್ಲವನ್ನೂ ಸೃಜಿಸಿ, ಅವುಗಳ ಸೂತ್ರವನ್ನು ಕೈಲಿಟ್ಟುಕೊಂಡು, ಆಡಿಸುತ್ತಿರುವ ಆ ಬೃಹತ್ ಚೇತನ ರೂಪವಾದ ಪರಮಾತ್ಮನನ್ನು ಪರಮ ಚೇತನವನ್ನು ವಿಜ್ಞಾನಿಗಳಿಂದ ಅರಿಯಲು ಸಾಧ್ಯವೇ? ವೈಜ್ಞಾನಿಕ ಪ್ರಯೋಗಗಳ ಪರಿಧಿಯೊಳಗೆ ಇವುಗಳನ್ನು ತರುವುದು ಸಾಧ್ಯವೇ ಇಲ್ಲವೆಂದು ಮಾನ್ಯ ಗುಂಡಪ್ಪನವರ ಪ್ರತಿಪಾದನೆ ಈ ಮುಕ್ತಕದಲ್ಲಿ.

ನಾವೂ ಸಹ ಇವುಗಳನ್ನೆಲ್ಲ ಪ್ರಮಾಣಿಸಿ ನೋಡುವ ಅರೆ ವೈಜ್ಞಾನಿಕತೆಯ ಹಂಗಿಗೆ ಬೀಳದೆ, ಕೇವಲ ಅನುಭವಕ್ಕೆ ತಂದುಕೊಳ್ಳಬಹುದು ಅಥವಾ ತಂದುಕೊಳ್ಳುವ ಪ್ರಯತ್ನವನ್ನು ಮಾಡಬಹುದು.

**ಮುಕ್ತಕ-63** **ನರಭಾಷೆ ಬಣ್ಣಿಪುದೆ ಪರತತ್ತ್ವರೂಪವನು? |**
**ಅರಿಯದದು ನಮ್ಮೆದೆಯ ಭಾವಗಳನೊರೆಯೆ ||**
**ಪರಮಾನುಭವಗಳುಲಿಯನುಭವಿಗಳೊಳಕಿವಿಗೆ |**
**ಒರಟುಯಾನವೊ ಭಾಷೆ-ಮಂಕುತಿಮ್ಮ ||**

ಅರಿಯದದು=ಅರಿಯದು+ಅದು, ನಮ್ಮೆದೆಯ=ನಮ್ಮ+ಎದೆಯ, ಭಾವಗಳನೊರೆಯೆ=ಭಾವಗಳನು+ಒರೆಯೆ,
ಪರಮಾನುಭವಗಳುಲಿಯನುಭವಿಗಳೊಳಕಿವಿಗೆ=ಪರಮ+ಅನುಭವಗಳ
ಉಲಿಯನು+ಅನುಭವಿಗಳ+ಒಳಕಿವಿಗೆ,
ನರಭಾಷೆ=ಮಾನವರ ಭಾಷೆ, ಬಣ್ಣಿಪುದೆ=ವರ್ಣಿಸುವುದೆ, ಪರತತ್ವ=ಪರಮಾತ್ಮ ತತ್ವ, ಪರಮಾನುಭವಗಳ ಉಲಿ=ಪರಮಾತ್ಮನ ಅನುಭವದ ಭಾಷೆ, ಅನುಭವಿಗಳ=ಸಾಧಕರ, ಒಳಕಿವಿಗೆ=ಅಂತರಂಗದ ಭಾವಕ್ಕೆ.





ನಾವಾಡುವ ನರಭಾಷೆಗೆ ಒಂದು ಮಿತಿ ಇದೆ. ಈ ಭಾಷೆಯಲ್ಲಿ ಆ ಪರಮಾತ್ಮ ಸ್ವರೂಪವನ್ನು ಬಣ್ಣಿಸಲು ಸಾಧ್ಯವಿಲ್ಲ. ನಮ್ಮ ಅಂತರಂಗದ ಭಾವವನ್ನು ಹೇಳಲು ಈ ಭಾಷೆ ಸಾಲದು. ಪರತತ್ವದ ಅನುಭವದ ಮಾತುಗಳು

ಕೇವಲ ನಮ್ಮ ಒಳಗಿವಿಗೆ ಕೇಳಿಸುತ್ತದೆ. ಮಾನವರ ಭಾಷೆಯಲ್ಲಿ ವಿವರಿಸುವುದು ಒಂದು ನೇರವಲ್ಲದ ಸುಗಮವಲ್ಲದ ಪ್ರಯಾಣದಂತೆ ಎನ್ನುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ನಮ್ಮಲ್ಲಿ ಆಚಾರ್ಯತ್ರಯರಾದ ಶಂಕರರು, ರಾಮಾನುಜರು ಮತ್ತು ಮಧ್ವರು ಭಗವದ್ಗೀತೆಗೆ, ಬ್ರಹ್ಮಸೂತ್ರಗಳಿಗೆ ಮತ್ತು ವೇದಗಳಿಗೆ ಪರಿಭಾಷೆಯನ್ನು ಬರೆದಿದ್ದಾರೆ. ಅವುಗಳನ್ನು "ಭಾಷ್ಯ" ಎನ್ನುತ್ತಾರೆ. ಅಂದರೆ ಭಾಷೆಯಲ್ಲಿ ವಿವರಿಸಿದ ವಿಷಯಗಳು ಎಂದು ಅರ್ಥ. ಅವು ಅವರುಗಳು ತಮ್ಮ ಅನುಭವದಿಂದ ಮನಗಂಡ ವಿಚಾರಗಳು. ಅವರ ಅನುಯಾಯಿಗಳು ಅವುಗಳನ್ನೇ ಅನುಸರಿಸುತ್ತಾರೆ. "ಶಂಕರರು ಹೀಗೆ ಹೇಳಿದ್ದಾರೆ, ರಾಮಾನುಜರು ಹಾಗೆ ಹೇಳಿದ್ದಾರೆ, ನೋಡಿ ಮಧ್ವರು ಭಿನ್ನವಾಗಿ ವ್ಯಾಖ್ಯಾನ ಮಾಡಿದ್ದಾರೆ" ಎಂದು ಅವರೇನು ಹೇಳಿದರೋ ಮತ್ತು ಇವರೇನು ಅರ್ಥಮಾಡಿಕೊಂಡರೋ ಅದು ಅವರವರಿಗೆ ಗೊತ್ತು. ಅವರ ಅನುಭವ ಇವರ ಅನುಭವವಾಗಲು ಸಾಧ್ಯವೇ ಇಲ್ಲ. ಏಕೆಂದರೆ ಕೆಲವು ವಿಷಯಗಳು ಕೇವಲ ಅನುಭವ ವೇದ್ಯ.

"ನನಗೆ ಹೇಳಲು ಶಬ್ದಗಳೇ ಸಿಗುತ್ತಿಲ್ಲ" ಎಂದು ಕೆಲವರು ಹಲವು ಬಾರಿ ಹೇಳಿರುವುದನ್ನು ಕೇಳಿರಬಹುದು. ಹೌದು, ನಮ್ಮ ಪ್ರೀತಿ ಪ್ರೇಮ ಕರುಣೆ, ಕೋಪ ದ್ವೇಷ ಇಂಥಹ ಭಾವನೆಗಳನ್ನು ವಿವರಿಸಲು ನಮ್ಮಲ್ಲಿ ಶಬ್ದಗಳಿರುವುದಿಲ್ಲ. ಏಕೆಂದರೆ ಮನಸ್ಸಿನ ಭಾವ ಕೇವಲ ಭಾವವಾಗಿರುತ್ತೆ. ಹಾಗೆಯೇ ಜಗತ್ತಿನ ಸೂತ್ರವನ್ನೆಲ್ಲ ತನ್ನ ಕೈಯಲ್ಲಿಟ್ಟುಕೊಂಡಿರುವ ಆ ಬೃಹತ್ ಚೇತನವನ್ನು ನಮ್ಮ ಸಾಧಾರಣ ಭಾಷೆಯಿಂದ ವಿವರಿಸಲು ಸಾಧ್ಯವಿಲ್ಲವೆಂಬುದೇ ಈ ಮುಕ್ತಕದ ಹೂರಣ.

ಇದನ್ನೇ "ಅವರವರ ಭಾವಕ್ಕೆ........ ನರರೇನು ಭಾವಿಸುವರದರಂತೆ ಕಾಣುವನು" ಎಂದು ನಿಜಗುಣ ಶಿವಯೋಗಿಗಳು ಹೇಳಿಲ್ಲವೇ. ಆ ಪರಮಾತ್ಮನನ್ನು ಅನುಭವಿಸುವ ಭಾವ ಮತ್ತು ಭಾವನೆಯನ್ನು ನಮ್ಮ ಭಾಷೆಯಲ್ಲಿ ವಿವರಿಸಲು ಸಾಧ್ಯವಿಲ್ಲ. ಭಾಷೆಗೆ ಒಂದು ಮಿತಿ ಇದೆ. ಭಾವಕ್ಕೆ ಒಂದು ಮಿತಿ ಇದೆ. ಆದರೆ ಭಾವದ ಮಿತಿ ಭಾಷೆಯ ಮಿತಿಗಿಂತ ಬಹಳ ವಿಶಾಲ ಮತ್ತು ಅಗಾಧ. ಹಾಗೇನಾದರೂ ಆ ಪರಮಾತ್ಮಾನುಭವವನ್ನು ಭಾಷೆಯಲ್ಲಿ ವಿವರಿಸಲು ಪ್ರಯತ್ನಪಟ್ಟರೆ, ಒಂದು ಹಳ್ಳ ತಿಟ್ಟುಗಳು, ಕಲ್ಲು ಮುಳ್ಳುಗಳಿಂದ ತುಂಬಿದ ಅಂಕುಡೊಂಕಾದ ರಸ್ತೆಯಮೇಲೆ ಗಾಡಿ ಓಡಿಸಿದಂತಾ ಒರಟು ಪ್ರಯಾಣವಾಗುತ್ತದೆ ಎನ್ನುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಹಾಗಾಗಿ ವಾಚಕ ಮಹಾಶಯರೇ ಆ ಪರಮ ಚೇತನವನ್ನು ಮತ್ತು ಅದರ ಲೀಲೆಯನ್ನು ಕೇವಲ ಅನುಭವಿಸಬೇಕು. ನಮ್ಮ ಅನುಭವ ನಮ್ಮದೇ ಆಗಿರಬೇಕು ಮತ್ತು ಎಲ್ಲರ ಅನುಭವವೂ ಅವರವರದೇ ಆಗಿರಬೇಕು.

ನಮ್ಮ ಅನುಭವದ ದನಿ ನಮ್ಮ ಒಳಗಿವಿಗಳಿಗೆ ಕೇಳಿಸಬೇಕು. ಭಾಷೆಯಿಲ್ಲದ, ಶಬ್ದವಿಲ್ಲದ ಒಂದು ಶಾಂತ ಸುಂದರ ಅನುಭೂತಿ ನಮ್ಮಲ್ಲಿ ಆಗಬೇಕು. ಅಂತಹ ಅನುಭವವನ್ನು ಪಡೆಯುವ ವಿಧಾನವನ್ನು ಹಲವು ಸಜ್ಜನರಿಂದ





ಅರಿತುಕೊಳ್ಳುವ, ಆದರೆ ನಮ್ಮ ಅನುಭವವನ್ನು ನಾವೇ ಪಡೆದುಕೊಳ್ಳಬೇಕು. ಪಡೆದುಕೊಳ್ಳುವ ಪ್ರಯತ್ನವನ್ನು ನಿರಂತರ ಮಾಡಿದಾಗ ನಮಗದರ ಅನುಭವ ಆಗಬಹುದು.

# ಅಂತರ್ವೀಕ್ಷೆ 64–68

**ಮುಕ್ತಕ-64**

**ಚಿತ್ತದನುಭವ ಭಾವ ಸಂಭಾವನೆಗಳೆಲ್ಲ ।**
**ಬತ್ತವದನು ವಿಚಾರಯುಕ್ತಿಗಳು ಕುಟ್ಟೆ ॥**
**ತತ್ತ್ವತಂಡುಲ ದೊರೆಗುಮುದು ವಿವೇಚಿತತತ್ತ್ವ ।**
**ನಿತ್ಯ ಭೋಜನ ನಮಗೆ-ಮಂಕುತಿಮ್ಮ ॥**

ಚಿತ್ತದನುಭವ=ಚಿತ್ತದ+ಅನುಭವ, ಸಂಭಾವನೆಗಳೆಲ್ಲ=ಸಂಭಾವನೆಗಳು+ಎಲ್ಲ,
ಬತ್ತವದನು=ಬತ್ತವು+ಅದನು, ವಿಚಾರಯುಕ್ತಿಗಳು=ವಿಚಾರ+ಯುಕ್ತಿಗಳು, ಚಿತ್ತ=ಮನಸ್ಸು,
ಸಂಭಾವನೆ=ಆಲೋಚನೆ, ಕುಟ್ಟೆ=ಕುಟ್ಟಿದರೆ, ತಂಡುಲ ಅಕ್ಕಿ, ದೊರೆಗುಂ=ದೊರೆತರೆ,
ವಿವೇಚಿತ=ವಿವೇಚನೆಯ ಮೂಸೆಯಿಂದ ಹೊರಬಂದ, ನಿತ್ಯ ಭೋಜನ=ಮನಸ್ಸಿಗೆ, ಬುದ್ಧಿಗೆ ನಿತ್ಯದ ಆಹಾರ.

ನಮ್ಮ ಮನಸ್ಸಿನಲ್ಲಿ ಬರುವ ಭಾವ, ಅನುಭವ ಮತ್ತು ಆಲೋಚನೆಗಳೆಲ್ಲ ಭತ್ತದಂತೆ. ಅದನ್ನು ಯುಕ್ತಿ ಮತ್ತು ವಿಚಾರವೆಂಬ ಒನಕೆಗಳಿಂದ ಕುಟ್ಟಿದರೆ ತತ್ವವೆಂಬ ಅಕ್ಕಿ ನಮಗೆ ದೊರೆಯುವುದು. ಹಾಗೆ ದೊರೆತ ಅಕ್ಕಿರೂಪದ

ತತ್ವವೇ ನಮ್ಮ ಬೌದ್ಧಿಕತೆಗೆ ಆಹಾರ ಎಂಬುದೇ ಈ ಮುಕ್ತಕದ ತಾತ್ಪರ್ಯ. ನಮ್ಮ ಮನಸ್ಸಿನಲ್ಲಿ ನಡೆಯುವ ವಿಚಾರ ಮಂಥನಕ್ಕೆ ಒತ್ತು ಕೊಟ್ಟಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ನಮಗೆ ಮನಸ್ಸು ಉಂಟು. ಬುದ್ಧಿಯೂ ಉಂಟು. ವಿಚಾರ ಮಾಡುವ ಶಕ್ತಿಯೂ ಉಂಟು. ಅನ್ಯ ಪ್ರಾಣಿಗಳಿಗೂ ಇವೆಲ್ಲವೂ ಇದೆ. ಆದರೆ ಅವುಗಳ ಆ ಶಕ್ತಿಗಳಿಗೆ ಒಂದು ಮಿತಿ ಇದೆ. ಅಮಿತವಾದ ಬುದ್ದಿ ಮತ್ತು ಅಗಾಧ ವಿಚಾರ ಶಕ್ತಿಯನ್ನು ಹೊಂದಿರುವ ಈ ಮನುಷ್ಯ ಪ್ರಾಣಿ ಹಲ ದಿಕ್ಕಿನಲ್ಲಿ ವಿಚಾರ ಮಾಡುವ ಕ್ಷಮತೆಯನ್ನು ಹೊಂದಿದ್ದಾನೆ. ನಮ್ಮ ಮನಸ್ಸುಗಳಲ್ಲಿ ಬರುವ ಅನುಭವ ಜನ್ಯವಾದ ಭಾವನೆಗಳು ಮತ್ತು ಆ ಭಾವನೆಗಳಿಗನುಗುಣವಾಗಿ ಬರುವ ಆಲೋಚನೆಗಳನ್ನು ವಿಚಾರ ಶಕ್ತಿಯ ಮಂಥನಕ್ಕೆ ಒಳಪಡಿಸಬೇಕು. ಭತ್ತವನ್ನು ಕುಟ್ಟಿದ ಹಾಗೋ, ಮೊಸರನ್ನು ಕಡೆದ ಹಾಗೋ ಮಾಡಿದರೆ ಅದರಿಂದ ನಮಗೆ ಜ್ಞಾನ ಉಂಟಾಗುತ್ತದೆ. ಸಾಧ್ಯಾಸಾಧ್ಯತೆಗಳ, ಯುಕ್ತಾಯುಕ್ತತೆಗಳ, ಮಥನವಾಗಿ ಅನವಶ್ಯಕವಾದ ವಿಷಯಗಳನ್ನು ದೂರ ತಳ್ಳಿ ನಮಗೆ ಏನು ಒಳ್ಳೆಯದೋ ಅಥವಾ ಒಳ್ಳೆಯದನ್ನು ಮಾಡಲು ಯಾವುದು ಅವಶ್ಯವೋ ಅದನ್ನು ಮಾತ್ರ ಉಳಿಸಿಕೊಳ್ಳಬಹುದು. ಹಾಗೆ ಉಳಿಸಿಕೊಂಡರೆ ಅದು ಜ್ಞಾನ.

ಆದರೆ ಇಂದಿನ ಪರಿಸ್ಥಿತಿ ಅದಲ್ಲ, ಸೆಳೆತಗಳು ಬಹಳ. ಮಾನಸಿಕ ವೈಕಲ್ಯಕ್ಕೆ ಹಲವಾರು ದಾರಿಗಳು, ದೂರದರ್ಶನ, ವೃತ್ತಪತ್ರಿಕೆಗಳು, ಅಂತರ್ಜಾಲ, ಅಂತರ್ಜಾಲದಲ್ಲಿ ಈ ಮುಖಪುಸ್ತಕದಂತ ಅಂಗಗಳು, ಇನ್ನು ವಾಹನಗಳು,





ಊಟದ ಮಳಿಗೆಗಳು, ಸುತ್ತಾಟ ಭೋಜನ ಕೂಟಗಳು, ವೃತ್ತಿ, ಇವುಗಳ ಮಧ್ಯೆ ಯೋಚನೆ ಅಥವಾ ಆಲೋಚನೆ ಮಾಡಲು ನಮಗೆ ವ್ಯವಧಾನವೇ ಇಲ್ಲ. ನಾವು ಬಹಳ ವ್ಯಸ್ತರು. ನಮಗೆ ಪುಸ್ತಕ ಓದಲು ವ್ಯವಧಾನವಿಲ್ಲ. ಅರಿತವರೊಡನೆ ವಿಚಾರ ವಿನಿಮಯ ಮಾಡಲು ಆಸೆ ಇಲ್ಲ, ಯಾರಾದರೂ ಹೇಳಿದರೆ ಕೇಳುವ ಮನೋಭಾವವೂ ಇಲ್ಲ, ಹೆಚ್ಚಿನ ವಿಚಾರಗಳನ್ನು ಅರಿತುಕೊಳ್ಳುವ ಮನಸ್ತತ್ವವೂ ಇಲ್ಲ. ಹಾಗಿರಬೇಕಾದರೆ ಇನ್ನು ಭಾವವೂ ಇಲ್ಲ, ಅನುಭವವೂ

ಇಲ್ಲ, ವಿಚಾರವೂ ಇಲ್ಲ. ಎಲ್ಲವೂ ಮೇಲೆ ಮೇಲೆ, ತಳುಕು ಹೆಚ್ಚು. ಗಾಢವಾದ ಬಂಧನಗಳಿಲ್ಲ, ಸಂಬಂಧಗಳಿಲ್ಲ. ಭಾವನೆಗಳಿಲ್ಲ, ಆಳವಾದ ವಿಚಾರಗಳಿಲ್ಲ. ಅನುಭವಗಳನ್ನು ಭಾವಿಸುವುದಕ್ಕಾಗಲೀ, ಅನುಭವಿಸುವುದಕ್ಕಾಗಲೀ ಸಮಯವೇ ಇಲ್ಲದಾಗ, ವಿಚಾರ ಬೆಳೆಯಲು ಹೇಗೆ ಸಾಧ್ಯ ಹೇಳಿ? ವಿಚಾರ ಬೆಳೆಯದೆ ಸತ್ಯ ದರ್ಶನವಾಗುವುದು ಹೇಗೆ ಹೇಳಿ? ವಿಪರ್ಯಾಸವೆಂದರೆ ಇಂದು ನಾವು ಯಾವುದನ್ನು ತೊರೆಯಬೇಕೋ ಅದಕ್ಕೆ ಅಂಟಿಕೊಂಡು ಮತ್ತು ಯಾವುದಕ್ಕೆ ಅಂಟಿಕೊಳ್ಳಬೇಕೋ ಅದರಿಂದ ದೂರವಾಗಿ ವೈಚಾರಿಕತೆಯ ಬಡತನದಿಂದ ಬಳಲುತ್ತಿದ್ದೇವೆ. (poverty of intellectualism).

"ಏನು ನಮಗೆ ವಿಚಾರ ಶಕ್ತಿ ಇಲ್ಲವೇ?" ಎಂದು ನೀವು ಕೇಳಿದರೆ, ಖಂಡಿತ ಇದೆ. ಆದರೆ ಮೇಲೆ ಹೇಳಿದ ಕಾರಣಗಳಿಗೆ ಕೆಲವರು ವಿಚಾರ ಮಾಡುವುದಿಲ್ಲ. ಇನ್ನು ಕೆಲವರು ವಿಚಾರ ಮಾಡುತ್ತಾರೆ ಆದರೆ ತಮ್ಮ ಕುತರ್ಕದಿಂದ ಎಲ್ಲವನ್ನೂ ಪರಿಕಿಸುವ, ವಿಡಂಬನಾತ್ಮಕವಾಗಿ ನೋಡುವ, ಕುಹಕವಾಡುವ ಮತ್ತು ಅವಹೇಳನ ಮಾಡುವ ಕೆಲಸವನ್ನು ಮಾಡುತ್ತಾ, ಶುದ್ಧ ತತ್ವವನ್ನು, ಸತ್ವವನ್ನು ಅರಿಯುವ ದಿಶೆಯಿಂದ ವಿಮುಖರಾಗಿದ್ದಾರೆ. ಇಂತಹವರು ಸತ್ಯವಾಗಿ ಯಾರಾದರೂ ವಿಚಾರವನ್ನು ಮಾಡಬೇಕೆಂದು ನಿಶ್ಚಯಿಸಿದ್ದರೆ, ಅವರನ್ನೂ ವಿಮುಖರನ್ನಾಗಿಸಲು ಪ್ರಯತ್ನಿಸುತ್ತಾರೆ.

ಹಾಗಾಗಿ ವಾಚಕರೆ ನಮಗೆ ಸತ್ಯವಾಗಿಯೂ ಸತ್ಯದ ಮತ್ತು ತತ್ವದ ದರ್ಶನವಾಗಬೇಕಾದರೆ, ನಾವು ವಿಚಾರವಂತರಾಗಬೇಕು. ವಿಚಾರವಾದಿಗಳಾಗಬಾರದು. ನಮ್ಮ ಅನುಭವಗಳನ್ನು ಭಾವಿಸುತ್ತಾ ಅದನ್ನು ವಿಚಾರದ ಒರೆಗೆ ಹಚ್ಚಿ ನಮ್ಮದೇ ಆದಂತಹ, ನಮ್ಮ ಆಂತರ್ಯದಲ್ಲಿ ಸ್ಫುರಿಸಿದಂತಹ ಸತ್ಯವನ್ನು ತತ್ವವನ್ನು ಕಂಡುಕೊಳ್ಳಬೇಕು. ಅದಕ್ಕೆ ಪೂರ್ವಾಗ್ರಹಗಳನ್ನು ಬಿಟ್ಟು, ಅಂತರ್ಮುಖಿಗಳಾದರೆ ನಮಗೆ ಎಲ್ಲವೂ ನಿಚ್ಚಳವಾಗಿ ತೋರುವುದು. ಅಂತಹ ಪ್ರಯತ್ನವನ್ನು ನಾವೂ ಮಾಡೋಣವೆ?

**ಮುಕ್ತಕ-65**

**ಪುಸ್ತಕದಿ ದೊರೆತರಿವು ಮಸ್ತಕದಿ ತಳೆದ ಮಣಿ।**
**ಚಿತ್ತದೊಳು ಬೆಳೆದರಿವು ತರು ತಳೆದ ಪುಷ್ಪ॥**
**ವಸ್ತು ಸಾಕ್ಷಾತ್ಕಾರವಂತರೀಕ್ಷಣೆಯಿಂದ।**
**ಶಾಸ್ತ್ರತನದಿಂದಲ್ಲ-ಮಂಕುತಿಮ್ಮ॥**

ದೊರೆತರಿವು=ದೊರೆತ+ಅರಿವು, ಬೆಳೆದರಿವು=ಬೆಳೆದಅರಿವು,
ಸಾಕ್ಷಾತ್ಕಾರವಂತರೀಕ್ಷಣೆಯಿಂದ=ಸಾಕ್ಷಾತ್ಕಾರ+ಅಂತರ+ವೀಕ್ಷಣೆಯಿಂದ,
ಶಾಸ್ತ್ರತನದಿಂದಲ್ಲ=ಶಾಸ್ತತನದಿಂದ+ಅಲ್ಲ,

ಮಸ್ತಕದಿ=ತಲೆಯಲ್ಲಿ, ಚಿತ್ತದೊಳು=ಅಂತರಂಗದಲ್ಲಿ,ತರು=ಗಿಡ.





ಪುಸ್ತಕಗಳನ್ನು ಓದಿ ಪಡೆದುಕೊಂಡ ಪಾಂಡಿತ್ಯ ತಲೆಯ ಮೇಲೆ ತಂದಿಟ್ಟುಕೊಂಡಂತ ಕಿರೀಟದಲ್ಲಿನ ಮಣಿಯಂತೆ. ಆದರೆ ನಮ್ಮ ಅನುಭವಗಳನ್ನು ವಿಚಾರದ ಒರೆಗೆ ಹಚ್ಚಿ ನಮ್ಮ ಚಿತ್ತದಲ್ಲಿ ಸ್ಪುರಿಸಿದ ಜ್ಞಾನ, ತನ್ನ ಸ್ವಾಭಾವಿಕ ಗುಣಕ್ಕೆ, ಮಣ್ಣಿನ ಸಾರ, ಪರಿಸರದ ಪ್ರಭಾವದಿಂದ ತನ್ನೊಳಗಿಂದಲೇ ವಿಕಸಿತವಾಗುವ ಒಂದು ಗಿಡದ "ಪುಷ್ಪದಂತೆ" ಎನ್ನುತ್ತಾರೆ, ಮಾನ್ಯ ಗುಂಡಪ್ಪನವರು.

ಪುಸ್ತಕಗಳನ್ನು ಓದಿ, ಬಾಯಿಪಾಠ ಮಾಡಿ ಅಥವಾ ನೆನಪಿನಲ್ಲಿಟ್ಟುಕೊಂಡು, ಸಮಯ ಸಂದರ್ಭ ಬಂದಾಗ ಅದನ್ನು ಉಪಯೋಗಿಸುವುದು ಜಾಣತನ. ಆದರೆ ಅದು ಜ್ಞಾನವಲ್ಲ. ಅದು ಕೇವಲ ತೋರಿಕೆಗೆ ಅಥವಾ ಹೊಟ್ಟೆಪಾಡಿಗೆ ಹೇಗೆ ರಾಜ ತನ್ನ ರಾಜತನವನ್ನು ಬಿಂಬಿಸಲು ಒಂದು ಕಿರೀಟವನ್ನು ತಂದು ಇಟ್ಟುಕೊಳ್ಳುತ್ತಾನೆಯೋ ಹಾಗೆ. ಅದು ಅವಿದ್ಯೆ. ಕೇವಲ ಕಲಿತ ವಿದ್ಯೆ. ನಮ್ಮಲ್ಲಿ ಒಂದು ಗಾದೆ ಇದೆ. "ಕಟ್ಟಿ ಕೊಟ್ಟ ಬುತ್ತಿ, ಹೇಳ್ ಕೊಟ್ಟ ಬುದ್ಧಿ ಎಷ್ಟು ದಿವಸಾ" ಅಂತ. ಹಾಗಾಗಿ ತಂದಿಟ್ಟುಕೊಂಡ ಅರಿವು ನಮ್ಮದಾಗಲು ಸಾಧ್ಯವಿಲ್ಲ ಅಥವಾ ಸದಾ ನಮ್ಮೊಡನಿರಲು ಸಾಧ್ಯವಿಲ್ಲ. ಶಾಸ್ತ್ರಗಳನ್ನು ಓದಿ ಪಾಂಡಿತ್ಯವನ್ನು ಪಡೆದು ಕೇವಲ ಪಾಂಡಿತ್ಯವನ್ನು ಪ್ರದರ್ಶಿಸುವುದಕ್ಕೂ, ಅನುಭವಿಸಿ ಮಥಿಸಿ ಅಂತರಂಗದಲ್ಲಿ ಪಡೆದುಕೊಂಡ ಜ್ಞಾನಕ್ಕೂ ಬಹಳ ಅಂತರವುಂಟು ಎನ್ನುವುದು ಈ ಮುಕ್ತಕದ ಹೂರಣ.

ಆದರೆ ವಸ್ತು ವಿಷಯವನ್ನು ಕುರಿತು ನಮ್ಮ ಮನಸ್ಸು ಬುದ್ಧಿಗಳ ಆಂತರ್ಯದಲ್ಲಿ ವಿಚಾರ ಮಂಥನದಿಂದ ಉಂಟಾಗುವ ಜ್ಞಾನ ನಮ್ಮಲ್ಲಿ ಸ್ಥಿರವಾಗಿ ನಮ್ಮ ಸ್ವಭಾವವೇ ಆಗಿ ನಿಲ್ಲುತ್ತದೆ. ಅದು ಒಂದು ಗಿಡ ತನ್ನ ಒಡಲಿನಿಂದ ತನ್ನ ಗುಣಗಳನ್ನು, ತಾ ನಿಂತ ಭೂಮಿಯ ಸಹಾಯದಿಂದ ಆ ಭೂಮಿಯೊಳಗಿನ ರಸಗಳ ಸಹಾಯದಿಂದ ವಿಕಸಿತಗೊಳಿಸಿ ತಾನೇ ಮೊಗ್ಗಾಗಿ ಅರಳಿ ಹೂವಾಗಿ ಸೊಗಸನೀಯುವಂತೆ ನೋಡಿ ಎರಡು ಭಿನ್ನವಾದ ಗಿಡಗಳನ್ನು ಪಕ್ಕಪಕ್ಕದಲ್ಲಿ ಹಾಕಿದರೂ, ಅವು ಒಂದೇ ನೆಲ, ಒಂದೇ ಗಾಳಿ, ಒಂದೇ ನೀರು, ಒಂದೇ ಪರಿಸರವನ್ನು ಹಂಚಿಕೊಂಡರೂ ಅರಳಿಸುವ

ಹೂವು ಬೇರೆ ಬೇರೆ. ಅದರ ರೂಪ ಬಣ್ಣ ಸುವಾಸನೆಯೇ ಬೇರೆ ಬೇರೆ. ಏಕೆಂದರೆ ಅದು ಅಂತರಂಗದಲ್ಲಿ ಮಥಿಸಿ ತನ್ನದಾಗಿಸಿಕೊಂಡು ಅರಳಿಸಿದ ಹೂವಾದ್ದರಿಂದ.

ವಾಚಕರೆ ತಂದೆ ತಾಯಿಯರ ಮಮತೆಯ ಪರಿಯಲ್ಲಿ, ದತ್ತು ತೆಗೆದುಕೊಂಡ ಮಕ್ಕಳಿಗೂ ತಾವೇ ಹೆತ್ತ ಮಗುವಿಗೂ ಎಷ್ಟು ವ್ಯತ್ಯಾಸವಿರುತ್ತದೆ ಅಲ್ಲವೇ? ಇಲ್ಲ ಹಾಗಿರುವುದಿಲ್ಲ ನಾವು ಅದನ್ನು ನಮ್ಮ ಮಗುವಿನಂತೆಯೇ ನೋಡಿಕೊಳ್ಳುತ್ತೇವೆ ಎಂದು ಎಷ್ಟು ವಾದಿಸಿದರೂ ಅಂತರಂಗದ ಭಾವನೆಯಲ್ಲಿ ಖಂಡಿತ ವ್ಯತ್ಯಾಸವಿರುತ್ತದಲ್ಲವೇ?

ಹಾಗೆಯೇ ಪುಸ್ತಕದ ವಿದ್ಯೆಗೂ ಆಂತರ್ಯದಲ್ಲಿ ನಮ್ಮದೇ ಅದ ಅನುಭವಜನ್ಯವಾದ ಜ್ಞಾನಕ್ಕೂ ಬಹಳ ವ್ಯತ್ಯಾಸವುಂಟು. ಇದನ್ನು ಹೆಚ್ಚು ವಿವರಿಸುವುದಕ್ಕಿಂತ ಅನುಭವಕ್ಕೆ ತಂದುಕೊಳ್ಳುವುದು ಉಚಿತ!!!!





**ಮುಕ್ತಕ-66**

**ವ್ಯರ್ಥವೆಂದೆನಿಪುದಲ ಸೃಷ್ಟಿಯಲಿ ಬಹುಭಾಗ ।**
**ಅರ್ಥವೇಂ ಕ್ರಿಮಿಕೀಟಕೋಟಿ ರಚನೆಯಲಿ ॥**
**ಕರ್ತನಾಲೋಚಿಸಿದ ದುಂದಿನವನೆಂಬ ನುಡಿ ।**
**ಯರ್ಥದೃಷ್ಟಿಯ ವಿವರ-ಮಂಕುತಿಮ್ಮ ॥**

ಕರ್ತನಾಲೋಚಿಸಿದ=ಕರ್ತನು ಆಲೋಚಿಸಿದ, ದುಂದಿನವನೆಂಬ=ದುಂದಿನವ+ಎಂಬ,
ನುಡಿಯರ್ಥದೃಷ್ಟಿಯ=ನುಡಿಯ+ಅರ್ಥ+ದೃಷ್ಟಿಯ+ವಿವರ,
ವ್ಯರ್ಥವೆಂದೆನಿಪುದಲ=ವ್ಯರ್ಥವು+ಎಂದು+ಎನಿಪುದು+ಅಲ, ಯರ್ಥದೃಷ್ಟಿಯ=ಅರ್ಥ+ದೃಷ್ಟಿಯ

ವ್ಯರ್ಥವೆಂದೆನಿಸುತ್ತದೆ ಸೃಷ್ಟಿಯಲಿ ಬಹುಭಾಗ, ಈ ಕ್ರಿಮಿ ಕೀಟ ಕೋಟಿಗಳ ಸೃಷ್ಟಿಯಲ್ಲಿ ಅರ್ಥವೇನು? ಆ ಸೃಷ್ಟಿಕರ್ತನು ಈ ಸೃಷ್ಟಿಯನ್ನು ರಚಿಸುವಾಗ ತನ್ನ ಶಕ್ತಿಯ ದುಂದುಪಯೋಗ ಮಾಡಿರಬಹುದೆಂದು ಯಾರಾದರೂ ಆಲೋಚಿಸಿದರೆ ಅದು ಅವರ ಅಪರಿಪೂರ್ಣ ಜ್ಞಾನದ, ಯೋಚನಾ ದಾರಿದ್ರದ ಸೂಚಕವೆಂದು ಈ ಮುಕ್ತಕದ ಹೂರಣ.

ಕೆಲವರಿಗೆ "ಛೇ ಈ ಪರಮಾತ್ಮ ಅದೇನನ್ನೆಲ್ಲಾ ಸೃಷ್ಟಿಸಿ ಬಿಟ್ಟಿದ್ದಾನೆ, ತನ್ನ ಸೃಷ್ಟಿಯ ಶಕ್ತಿಯನ್ನು ಅನಾವಶ್ಯಕವಾಗಿ ದುಂದು ಮಾಡಿಕೊಂಡುಬಿಟ್ಟಿದ್ದಾನೆ" ಎಂದು ಅನ್ನಿಸಬಹುದು. ಅದು ಸಂಕುಚಿತ ಭಾವ. ಆ ಪರಮಾತ್ಮನ ಈ ಸೃಷ್ಟಿಗೆ ಕಾರಣವನ್ನು ನಾವು ಅರ್ಥಮಾಡಿಕೊಳ್ಳಲು ಸಾಧ್ಯವೇ? ಇಲ್ಲಿ ಒಂದಕ್ಕೊಂದು ಪೂರಕವಾಗಿದೆ. ಒಂದು ಅಣುವಿಗೆ ಮತ್ತೊಂದು ಅಣು ಪೂರಕ. ಆದರೆ ಯಾವುದಕ್ಕೂ ಪ್ರಯೋಜನಕ್ಕೆ ಬಾರದ ಮನುಷ್ಯ ಈ ಎಲ್ಲ ಸೃಷ್ಟಿಯೂ ತನಗಾಗಿ ಆಗಿದೆ ಎಂದು ಅಂದುಕೊಳ್ಳುತ್ತಾನೆ ಮೂರ್ಖತನದಿಂದ, ಪರಮಾತ್ಮನ ಸೃಷ್ಟಿಗೆಲ್ಲವೂ ಒಂದು ಕಾರಣವಿದೆ. ಅದನ್ನು ನೋಡಲುಬಾರದೆ, ಅರೆಜ್ಞಾನದಿಂದ ವ್ಯಾಖ್ಯಾನಮಾಡುವ ಈ ಮನುಷ್ಯನ ಅಜ್ಞಾನಕ್ಕೆ ಏನು ಹೇಳಬೇಕೋ ಗೊತ್ತಿಲ್ಲ.

ಪಶು ಪಕ್ಷಿಗಳು, ಪ್ರಾಣಿಗಳು, ಅನಂತ ಪ್ರಭೇದಗಳಿರುವ ಜಲಚರಗಳು, ಕೋಟಿ ಕೋಟಿ ವಿಧದ ಕ್ರಿಮಿ, ಕೀಟಗಳು, ಮರಗಳು, ಗಿಡ, ಬಳ್ಳಿಗಳು, ಸಸಿ, ಪೊದೆಗಳು, ಬೃಹತ್ ಹೆಮ್ಮರಗಳು, ಎಷ್ಟೊಂದು ತರಹೆ ಹೂಗಳು ಹಣ್ಣುಗಳು, ಬೆಟ್ಟ ಗುಡ್ಡಗಳು, ನದಿ ತೊರೆಗಳು, ಒಂದೊಂದಕ್ಕೆ ಒಂದೊಂದು ಬಣ್ಣ. ಬೇರೆ ಬೇರೆ ಆಕಾರ ರುಚಿ ವಾಸನೆ, ಅಬ್ಬಬ್ಬಾ ಒಂದು ಶತಾಂಶವನ್ನು ವಿವರಿಸಲು ಸಹಸ್ರ ಪುಟಗಳ ಹೊತ್ತಿಗೆಯೂ ಸಾಲದು, ಈ ಎಲ್ಲವನ್ನೂ ಆ ಪರಮಾತ್ಮ ಸೃಜಿಸಿ ತಾನೂ ಅದರಲ್ಲಿ ಇರುತ್ತಾ ಆನಂದ ಪಡುತ್ತಿದ್ದಾನೆ. ಅವೆಲ್ಲವನ್ನೂ ಅವನು ತನ್ನ ಆನಂದಕ್ಕೆ ಸೃಷ್ಟಿಸಿಕೊಂಡಿದ್ದಾನೆ. ಮನುಷ್ಯನನ್ನೂ ಸಹ. ಆದರೆ ಮನುಷ್ಯ ಹೆಡ್ಡತನದಿಂದ, "ಪರಮಾತ್ಮ ನಮಗಾಗಿ ಎಲ್ಲವನ್ನೂ ಸೃಷ್ಟಿಸಿದ್ದಾನೆ" ಎಂದು ತಿಳಿದಿದ್ದಾನೆ.

ಈ ಗಿಡಮರಗಳು ನನಗಾಗಿ. ಅದರಲ್ಲಿ ಬಿಡುವ ಹಣ್ಣು ಹೂಗಳು ನನಗಾಗಿ. ಕೆಲವು ಪ್ರಾಣಿಗಳು ನನಗೆ ತಿನ್ನಲು ಬೇಕು, ಅದರ ನಾಶ. ಕೆಲವು ಪ್ರಾಣಿಗಳು ನನಗೆ ಔಷಧಿಯನ್ನು ಕೊಡುತ್ತವೆ, ಅದರ ನಾಶ. ಕೆಲವು ಪ್ರಾಣಿಗಳಿಂದ ನನಗೆ ಪ್ರಾಣ ಭಯ, ಅದರ ನಾಶ. ಕೆಲವು ಪ್ರಾಣಿಗಳು ನನಗೆ ಊಳಿಗ ಮಾಡಬೇಕು. ಅದರ





ಸ್ವಾತಂತ್ರ್ಯದ ನಾಶ. ಹಾರುವ ಹಕ್ಕಿಯನ್ನೂ ಬಿಟ್ಟಿಲ್ಲ, ನೀರಿನ ಮೀನನ್ನೂ ಬಿಟ್ಟಿಲ್ಲ. ಮನೆ ಕಟ್ಟಲು ನಾಟಾ ಬೇಕು. ಕಡಿ ಮರ, ಜಲ್ಲಿ ಬೇಕು ಕಡಿ ಬೆಟ್ಟ. ಹೀಗೆ ಆತನ ಕಣ್ಣು, ಕಲ್ಲು, ಮಣ್ಣು, ಮರ, ಲೋಹ, ಅದಿರು, ನೀರು, ಎಲ್ಲದರ

ಮೇಲೆ ವಕ್ರ ದೃಷ್ಟಿ, ಮನುಷ್ಯನೂ ಸಹ ಸೃಷ್ಟಿಯ ಎಲ್ಲರಂತೆ ಆದರೂ ಅವನು ಯಾವುದನ್ನೂ ಇರಗೊಡಲಾರ, ಆಸೆ. ಅದಕ್ಕೆ ಪೂರಕವಾಗಿ ಅವನಿಗೆ ಅನ್ಯ ಪ್ರಾಣಿಗಳಿಗಿಂತ ಹೆಚ್ಚು ಬುದ್ಧಿ ಶಕ್ತಿ. ಅನ್ಯ ಪ್ರಾಣಿಗಳಿಗಿಂತ ಹೆಚ್ಚು ಸಾಮರ್ಥ್ಯ. ಅದನ್ನು ಕೊಟ್ಟವನೂ ಆ ಪರಮಾತ್ಮನೇ ಆದರೂ ಮನುಷ್ಯ "ನಾನು" ಎಂದು ಬೀಗುತ್ತಾನೆ. ನಾನೂ ಸಹ ಈ ಪರಮಾತ್ಮನ ಸೃಷ್ಟಿಯಲ್ಲಿ ಎಲ್ಲದರಂತೆ ಒಂದು. ಇದನ್ನು ನಾಶಮಾಡುವ ಹಕ್ಕು ನನಗಿಲ್ಲ, ಹಾಗಾಗಿ ನಾನು ಇದನ್ನು ನಾಶಮಾಡಬಾರದು ಎಂಬುದನ್ನು ಮನುಷ್ಯ ಎಂದು ಅರಿತುಕೊಳ್ಳುತ್ತಾನೋ ಅಂದು ಅವನು ಈ ಜಗತ್ತಿನಲ್ಲಿ ನೆಮ್ಮದಿಯಿಂದ ಇರಬಹುದು.

**ಮುಕ್ತಕ-67**

**ಸೃಷ್ಟಿಸಂಕಲ್ಪ ಲಿಪಿಯೆಲ್ಲ ನಮ್ಮೆದುರಿಲ್ಲ |**
**ದೃಷ್ಟಿಗೋಚರವದರಳೊಂದು ಗೆರೆ ಮಾತ್ರ ||**
**ಅಷ್ಟರಿಂದಿದು ನಷ್ಟವದು ಶಿಷ್ಟವೆನ್ನುವುದೆ? |**
**ಕ್ಲಿಷ್ಟದ ಸಮಸ್ಯೆಯದು-ಮಂಕುತಿಮ್ಮ ||**

ಲಿಪಿಯೆಲ್ಲ=ಲಿಪಿಯು+ಎಲ್ಲ, ನಮ್ಮೆದುರಿಲ್ಲ=ನಮ್ಮೆದುರು+ಇಲ್ಲ.
ದೃಷ್ಟಿಗೋಚರವದರಳೊಂದು=ದೃಷ್ಟಿಗೋಚರವು+ಅದರೊಳು+ಒಂದು, ಅಷ್ಟರಿಂದಿದು=ಅಷ್ಟರಿಂದ+ಅದು,
ಶಿಷ್ಟವೆನ್ನುವುದೆ=ಶಿಷ್ಟವು+ಎನ್ನುವುದು. ಸೃಷ್ಟಿಸಂಕಲ್ಪ=ಜಗತ್ತಿನ ಸೃಷ್ಟಿಯ ಸಂಕಲ್ಪ (ನಕಾಶೆ),
ನಮ್ಮೆದುರಿಲ್ಲ=ನಮ್ಮೆದುರು+ಇಲ್ಲ, ದೃಷ್ಟಿಗೋಚರವದರಳೊಂದು=ದೃಷ್ಟಿಗೋಚರವು+ಅದರೊಳು+ಒಂದು,
ಅಷ್ಟರಿಂದಿದು=ಅಷ್ಟರಿಂದ+ಇದು, ಶಿಷ್ಟವೆನ್ನುವುದೆ=ಶಿಷ್ಟವು+ಎನ್ನುವುದೇ?
ಲಿಪಿ=ಲೇಖಾ ದಾಖಲೆ,

"ಜಗತ್ತು ಸೃಷ್ಟಿಯಾಗುವ ಮುಂಚಿನ ಲೇಖಾ ಅಥವಾ ರೇಖಾ ಚಿತ್ರ ನಮ್ಮ ಬಳಿ ಇಲ್ಲ. ನಾವು ಕಾಣಲಾಗಿರುವುದು ಒಂದು ಬೃಹತ್ ಚಿತ್ರದಲ್ಲಿ ಒಂದೇ ಗೆರೆ ಮಾತ್ರ ಅಷ್ಟು ಸಣ್ಣ ಗೆರೆಯನ್ನು ಕಂಡು ನಾವು ಈ ಸೃಷ್ಟಿಯನ್ನು ಕುರಿತು ವ್ಯಾಖ್ಯಾನ ಮಾಡುತ್ತಾ, ಇದು ಸರಿ ಇದು ತಪ್ಪು ಎನ್ನುವುದು ಸರಿಯೇ?" ಎಂದು ಕೇಳುತ್ತ, ಇದು ಬಹಳ ಕ್ಲಿಷ್ಟದ ಸಮಸ್ಯೆ ಎಂದು ಪ್ರಸ್ತಾಪಿಸುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ನಾವು ಒಂದು ಮನೆ ಕಟ್ಟಬೇಕಾದರೆ ಅದಕ್ಕೊಂದು ನಕಾಶೆ ಬೇಕು. ನೀವು ಯಾರಾದರೂ ಸಿವಿಲ್ ಎಂಜಿನಿಯರ್‌ನ್ನು ಸಂಪರ್ಕಿಸಿದರೆ, ಅವರು ಮೊದಲು ನಿವೇಶನದ ಅಳತೆ ಹಾಕಿ, ನಿಮ್ಮೊಡನೆ ಮಾತುಕತೆ ಮಾಡಿ,

ನಿಮ್ಮ ಬೇಕು ಬೇಡಗಳನ್ನೆಲ್ಲ ವಿಚಾರಿಸಿ, ಒಂದಲ್ಲ ನಾಲ್ಕು ಬಾರಿ ಗೆರೆ ಎಳೆದು, ನಿಮಗೆ ತೋರಿಸಿ, ನೀವು ಹೇಳಿದ ಮತ್ತು ಅವರಿಗೆ ತೋಚಿದ ಮಾರ್ಪಾಡುಗಳನ್ನು ಮಾಡಿಕೊಂಡು ನಂತರ ಒಂದು ರೇಖಾ ನಕಾಶೆಯನ್ನು ತಯಾರುಮಾಡುತ್ತಾರೆ. ನಂತರ ಅದರ "ಮುನ್ನೋಟದ" ನಕಾಶೆ ತಯಾರುಮಾಡಿ, "ನೋಡಿ ನಿಮ್ಮ ಮನೆ ಅಥವಾ ಕಟ್ಟಡ ಸಂಪೂರ್ಣವಾದಾಗ ಹೀಗೆ ಕಾಣುತ್ತದೆ" ಎಂದು ನಿಮಗೆ ತೋರಿಸುತ್ತಾರೆ.





ತದನಂತರ, ಈ ಎರಡರ ನೀಲಿ ನಕಾಶೆ ತಯಾರುಮಾಡಿ, ಕಟ್ಟಡ ಕೆಲಸ ನಡೆಯುವಷ್ಟು ದಿನವೂ ಆ ನಕಾಶೆಯನ್ನು ಬಳಿಯಲ್ಲಿ ಇಟ್ಟುಕೊಂಡು, ಕಟ್ಟಡವು ಅದರ ಪ್ರಕಾರ ಬರುತ್ತಿದೆಯೇ ಇಲ್ಲವೇ ಎಂದು ನೋಡುತ್ತಾ ಇರುತ್ತಾರೆ. ಅಷ್ಟು ಮಾಡಿದರೂ ಎಲ್ಲೋ ಒಂದು ಕೊರತೆ ನಿಮಗೆ ಕಾಣುತ್ತದೆ.

ಈ ಜಗತ್ತು ಎಷ್ಟು ದೊಡ್ಡದೆಂದರೆ ನಾವದನ್ನು ಊಹಿಸಿಕೊಳ್ಳಲೂ ಸಾಧ್ಯವಿಲ್ಲವೆಂದು ನಾ ಈ ಹಿಂದೆ ಹೇಳಿದ್ದೇನೆ. ಶತ ಶತ ಕೋಟಿ ಕೋಟಿ ಕಿಲೊಮೀಟರ್ (ಇದು ಬರೀ ಊಹೆ ಅಷ್ಟೇ-ಕಂಡವರಾರು) ವಿಸ್ತೀರ್ಣವಿರುವ ಈ ಜಗತ್ತನ್ನು ನಿರ್ಮಾಣ ಮಾಡುವಾಗ, ಇನ್ನೆಂತಹ ರೇಖಾಚಿತ್ರವನ್ನು ಆ ಪರಮಾತ್ಮ ತಯಾರು ಮಾಡಿರಬೇಕು. ಅದನ್ನು ನಾವು ನೋಡಿಲ್ಲ. ಆದರೆ ಆ ರೇಖಾ ಚಿತ್ರದ ಯಾವುದೋ ಒಂದು ಗೆರೆಯನ್ನು ನೋಡಿ ನಾವು, "ಇದು ಸರಿ ಅದು ತಪ್ಪು" ಎಂದು ವ್ಯಾಖ್ಯಾನ ಮಾಡುವುದು ಎಷ್ಟು ಸರಿ! ಹಾಗೆ ಹೇಳುವುದು ಸರಿಯೇ. ಅಂದರೆ ಈ ಸೃಷ್ಟಿಯ ಆಯ ಅಳತೆಗಳನ್ನು ಅರ್ಥಮಾಡಿಕೊಳ್ಳಲು ಸಾಧ್ಯವೇ ಇಲ್ಲ. ವಿವರಿಸಲೂ ಸಾಧ್ಯವಿಲ್ಲ. ಊಹೆ ಮಾಡಿಕೊಳ್ಳಲೂ ಸಾಧ್ಯವಿಲ್ಲದಂತಹ ಆ ಸೃಷ್ಟಿಯಲ್ಲಿ ಕೊರತೆಗಳನ್ನು ಕಾಣುವುದು ಅವಿವೇಕತನವಲ್ಲದೆ ಮತ್ತೇನು. ನಮಗೆ ಗೊತ್ತಿಲ್ಲದ ವಿಷಯದ ಬಗ್ಗೆ ವ್ಯಾಖ್ಯಾನ ಮಾಡುವುದು ಎಷ್ಟೊಂದು ಮೂರ್ಖತನವಲ್ಲವೇ?

ಮತ್ತೊಂದು ವಿಷಯವೇನೆಂದರೆ, ಒಂದು ರೇಖಾಚಿತ್ರವನ್ನು ತಯಾರು ಮಾಡಿದರೆ, ಅದನ್ನು ಬದಲಾಯಿಸಲು ಸಾಧ್ಯವಿಲ್ಲ. ಆದರೆ ಈ ಜಗತ್ತಿನ ರೂಪ ನಿರಂತರ ಬದಲಾಗುತ್ತಾ ಇರುತ್ತದೆ. ಏಕೆಂದರೆ ಇದರ ಹಿಂದಿರುವುದು ಆ ಬೃಹತ್ ಚೇತನ, ಹಾಗಾಗಿ ಚೈತನ್ಯಮಯವಾದ ಈ ಜಗತ್ತು ನಿರಂತರ ಬದಲಾಗುತ್ತಾ ಹಲವಾರು ವಿಸ್ಮಯಗಳನ್ನು

ಪ್ರಕಟಿಸುತ್ತಾ, ಪ್ರದರ್ಶಿಸುತ್ತಾ ಇರುತ್ತದೆ. ಆ ಪರಮಾತ್ಮನ ಸೃಷ್ಟಿಯಲ್ಲೂ ಕೊರತೆಗಳನ್ನು ಹುಡುಕದೆ, ಅವನ ಸೃಷ್ಟಿಗೆ ಅವನಿಗೆ ಮಾತ್ರ ಗೊತ್ತಿರುವ ಒಂದು ಕಾರಣವಿದೆ. ಅದನ್ನರಿಯಲು ನಮಗೆ ಸಾಧ್ಯವಿಲ್ಲ.

ನಮ್ಮಲ್ಲಿ ಬಹಳಷ್ಟು ಜನ ನಿಮಗೆ ಸಿಗುತ್ತಾರೆ. ಯಾವುದಾದರೂ ವಿಷಯವನ್ನು ಕೊಡಿ. ಅವರಿಗೆ ಗೊತ್ತಿದೆಯೋ ಇಲ್ಲವೋ ಗಂಟೆಗಟ್ಟಲೆ ಭಾಷಣವನ್ನೇ ಮಾಡಿಬಿಡುತ್ತಾರೆ. ನೋಡುವವರಿಗೆ "ಆಹಾ ಓಹೋ" ಎನ್ನಿಸಬೇಕು ಹಾಗೆ ಇರುತ್ತೆ ಅವರ ಬುರುಡೆ, ಅವರಿಗೆ ಎಲ್ಲವನ್ನು ತಮ್ಮ ಶೈಲಿಯಲ್ಲಿ ಟೀಕೆ ಮಾಡಲು ಬರುತ್ತದೆ, ಸರಿ ತಪ್ಪುಗಳ ಅರಿವಿಲ್ಲದೆಯೇ? ಅದರಿಂದ ಯಾವ ಪ್ರಯೋಜನವೂ ಇಲ್ಲ. ಕೇವಲ ನಮ್ಮ ಅಹಂಕಾರದ ತೃಷೆಯನ್ನು ತಣಿಸಲಷ್ಟೇ ಉಪಯೋಗ.

ವಾಚಕರೆ ನಾವು ನಮಗೆ ಅರಿಯದ ವಿಷಯದ ವ್ಯಾಖ್ಯಾನ ಮಾಡುವಂತಹ ಸಾಹಸವನ್ನು ಮಾಡದೆ, ನಮ್ಮ ನಮ್ಮ ಅರಿವಿನ ಪರಿಧಿ ಮತ್ತು ಮಿತಿಗಳಲ್ಲಿ ಈ ಜಗತ್ತನ್ನು ಮತ್ತು ಅದನ್ನು ಸೃಷ್ಟಿಮಾಡಿದ ಪರಮಾತ್ಮನ ಮಹತ್ತು ಮಹಿಮೆಯನ್ನು ಅನುಭವಿಸುತ್ತಾ, ಆನಂದದಿಂದ ಜೀವನವನ್ನು ಕಳೆಯುವ ಪ್ರವೃತ್ತಿ ನಮ್ಮದಾಗಬೇಕು. ಆಗಲೇ ನಿಜವಾದ ಸುಖ ಮತ್ತು ಆನಂದ.





**ಮುಕ್ತಕ-68**

**ಎಲ್ಲ ಅರೆಬೆಳಕು ಅರೆಸುಳಿವು ಅರೆತಿಳಿವುಗಳಲ್ಲಿ |**
**ಎಲ್ಲಿ ಪರಿಪೂರಣವೋ ಅದನರಿಯುವನಕ ||**
**ಸೊಲ್ಲಿಸುವರಾರು ಸೃಷ್ಟಿಯ ಪೇಟೆಯೊಳಗುಟ್ಟ? |**
**ಎಲ್ಲ ಬಾಳು ರಹಸ್ಯ-ಮಂಕುತಿಮ್ಮ ||**

ಸೊಲ್ಲಿಸುವರಾರು=ಸೊಲ್ಲಿಸುವರು+ಯಾರು, ಪೇಟೆಯೊಳಗುಟ್ಟ=ಪೇಟೆಯ+ಒಳಗುಟ್ಟ

ಅರೆಬೆಳಕು ಸ್ಪಷ್ಟವಿಲ್ಲದ ಜ್ಞಾನ.

ಅರೆಸುಳಿವು=ಆ ಜ್ಞಾನದ ಮಾರ್ಗಗಳೂ ನಿಚ್ಚಳವಲ್ಲ, ಪರಿಪೂರಣವೊ=ಪರಿ ಪೂರ್ಣವೋ,
ಅದನರಿರುವನಕ=ಅದನ್ನು ಅರಿಯುವ ತನಕ, ಸೊಲ್ಲಿಸುವರಾರು-ಹೇಳುವವರಾರು,
ಪೇಟೆಯೊಳಗುಟ್ಟ=ಪೆಟ್ಟಿಗೆಯೊಳಗಿನ ಗುಟ್ಟ

ಎಲ್ಲ ವಿಷಯಗಳಲ್ಲೂ ಅರೆ ಬರೆ ಜ್ಞಾನ ಮತ್ತು ತಿಳುವಳಿಕೆ. ಆ ತಿಳುವಳಿಕೆಯನ್ನು ಪಡೆವ ಮಾರ್ಗಗಳೂ ಸಹ ಅರ್ಥಂಬರ್ಥ ಮತ್ತು ಯಾವುದೂ ನಿಚ್ಚಳವಲ್ಲ. ಅದು ನಮಗೆ ಸಂಪೂರ್ಣ ಜ್ಞಾನ ಬರುವ ತನಕ ಹಾಗೆಯೇ ಇರುತ್ತದೆ. ಆದರೆ ನಮಗೆ ಆ ಪರಿಪೂರ್ಣ ಜ್ಞಾನವನ್ನು ಹೇಳಿಕೊಡುವವರಾರು. ಈ ಜೀವನವೆಲ್ಲ ಒಂದು ನಿಗೂಢ ಅಥವಾ ರಹಸ್ಯ ಎನ್ನುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ವಾಚಕರೆ, ನಮಗೇನು ಗೊತ್ತು ಹೇಳಿ? ನಮಗೇನು ಗೊತ್ತು ಎನ್ನುವುದೇ ಗೊತ್ತಿಲ್ಲ!!! ನಮ್ಮ ಜನ್ಮದಿಂದ ಹಿಡಿದು ನಮ್ಮೊಡನೆ ನಡೆಯುವ ಎಲ್ಲ ವಿದ್ಯಮಾನಗಳನ್ನು ನಾವು ಎಂದೂ ಸರಿಯಾಗಿ ಅರ್ಥಮಾಡಿಕೊಳ್ಳಲಾಗಿಲ್ಲ. ಸಾಧ್ಯವೂ ಇಲ್ಲ. ಏಕೆಂದರೆ ಮೊದಲನೆಯದಾಗಿ ವಸ್ತು ವಿಷಯ ಅಥವಾ ವ್ಯಕ್ತಿಯನ್ನು ಸಂಪೂರ್ಣ ಅರ್ಥಮಾಡಿಕೊಳ್ಳಬೇಕಾದರೆ, ನಾವು ಆ ವಸ್ತು ವಿಷಯ ಮತ್ತು ವ್ಯಕ್ತಿಗಳನ್ನು ಎಲ್ಲಾ ಆಯಾಮಗಳಿಂದಲೂ ಪರಿಕಿಸಿ ನೋಡಬೇಕು. ಎರಡನೆಯದಾಗಿ, ಯಾವುದೇ ಪೂರ್ವಾಗ್ರಹವಿಲ್ಲದೆ ಶುದ್ಧಮನಸ್ಕರಾಗಿ ಅದನ್ನು ಅರ್ಥಮಾಡಿಕೊಳ್ಳಲು ನಮಗೆ ಇಚ್ಛೆ ಇರಬೇಕು. ಆಗ ಅದು ಅರ್ಥವಾಗುತ್ತದೆ. ನಾವು ಹಾಗೆ ಇರಲು ಸಾಧ್ಯವಿಲ್ಲ. ನಮಗೆ "ಅರೆಬೆಳಕು ಅರೆಸುಳಿವು" ಹಾಗಾಗಿ ನಮಗೆ ಅರ್ಥವಾಗುವುದಿಲ್ಲ.

ಈ ಜಗತ್ತಿನಲ್ಲಿ ಲಕ್ಷಾಂತರ ವರ್ಷಗಳಿಂದ ಇರುವ ಮನುಷ್ಯನಿಗೆ ಯೋಚನೆ ಮಾಡುವ ಶಕ್ತಿ ಬಂದಾಗಿನಿಂದಲೂ ಇದರ ಬಗ್ಗೆ ಯೋಚನೆ ಮಾಡುತ್ತಲೇ ಇದ್ದಾನೆ. ಕೆಲವರು ಅಲ್ಪಸ್ವಲ್ಪ ತಿಳಿದಿದ್ದಾರೆ. ಆದರೆ ಎಲ್ಲವನ್ನೂ ಅಲ್ಲ. ಇಡೀ ಜಗತ್ತಿನಲ್ಲಿ ಬಹಳಷ್ಟು ದಾರ್ಶನಿಕರು ಆಗಿಹೋಗಿದ್ದಾರೆ. ವೇದಕಾಲದ ಋಷಿಗಳು, ಭಾರತೀಯ ಉಪನಿಷತ್ತಿನ ಕಾಲದ ದಾರ್ಶನಿಕರು, ಗ್ರೀಕ್ ದೇಶದ ತತ್ವಶಾಸ್ತ್ರಜ್ಞರು ಹಲವಾರು ವಿಚಾರದಲ್ಲಿ ಈ ಜಗತ್ತಿನ ಸೃಷ್ಟಿಗೆ ಒಂದು ಸೂಕ್ತ ವ್ಯಾಖ್ಯಾನ ಮಾಡಲು ಪ್ರಯತ್ನಪಟ್ಟಿದ್ದಾರೆ. ವೇದಗಳು, ಉಪನಿಷತ್ತುಗಳು, ಭಗವದ್ಗೀತೆ, ಭಾಗವತ, ಪುರಾಣಗಳು, ಅವಕ್ಕೆ ಬೇರೆ ಬೇರೆ ಆಚಾರ್ಯರುಗಳು ಬರೆದ ಭಾಷ್ಯಗಳು ಮತ್ತು ಹೊರ ದೇಶಗಳ ದಾರ್ಶನಿಕರ 'ಜಂಡವೆಸ್ತಾ, ಬೈಬಲ್, ಕುರಾನ್' ಗಳೆಲ್ಲವೂ ತಮ್ಮದೇ ಆದ ರೀತಿಯಲ್ಲಿ ಜಗತ್ತಿನ ಕರ್ತನ ಕ್ರಿಯೆಗೆ ಒಂದು ಸೂಕ್ತ ಪರಿಭಾಷೆಯನ್ನು ಕೊಡಲು ಪ್ರಾಮಾಣಿಕ ಪ್ರಯತ್ನ ಮಾಡಿದ್ದಾರೆ. ಸ್ವಲ್ಪಮಟ್ಟಿಗೆ ಯಶಸ್ಸನ್ನೂ ಕಂಡಿದ್ದಾರೆ. ಆದರೆ ಸಂಪೂರ್ಣ ಸತ್ಯವನ್ನು ಕಂಡುಕೊಳ್ಳಲು ವಿಫಲರಾಗಿದ್ದಾರೆ. ಎಲ್ಲರದೂ

ಅವರವರು ಕಂಡುಕೊಂಡ ಅಂತರಂಗದ ಸತ್ಯವಷ್ಟೇ. ನಮ್ಮ ಅರಿವಿನ ಪರಿಧಿಯೊಳಕ್ಕೆ ಬಾರದು. ಹಾಗಾಗಿ ರಹಸ್ಯ.

ಹಾಗಾಗಿ ಜಗತ್ತಿನ ಸತ್ಯವನ್ನು ಯಾರು ಹೇಳುವವರು ಎಂದು ಮಾನ್ಯ ಗುಂಡಪ್ಪನವರು ಪ್ರಶ್ನಿಸುತ್ತಾರೆ. ಹಾಗೆ ನಾವೂ ಯೋಚಿಸಿದಾಗ, ನಮಗೂ ಯಾರೂ ಹೇಳಲು ಸಾಧ್ಯವಿಲ್ಲ. ನಾವು ನಮ್ಮ ನಮ್ಮ ರೀತಿಯಲ್ಲೇ ಅನುಭವಿಸಬೇಕು. ಈ ಜಗತ್ತನ್ನು ಸೃಷ್ಟಿಸಿದ ಆ ಪರಮಾತ್ಮನ ಕ್ರಿಯೆಯ ಬಗ್ಗೆ ನಮಗೆ ಸಂಪೂರ್ಣ ಜ್ಞಾನ ಉಂಟಾಗುವವರೆಗೂ, ನಮಗೆ ಈ ಅರೆಬರೆ ಜ್ಞಾನ ಮತ್ತು ಅರೆಬರೆ ದೃಷ್ಟಾಂತಗಳೇ ಇರುತ್ತವೆ. ಈ ಜಗತ್ತಿನ ಸೃಷ್ಟಿಯ ಪೆಟ್ಟಿಗೆಯೊಳಗೆ ಏನಿದೆ ಎಂಬುದನ್ನು ಅರಿಯಲು ಸಾಧ್ಯವೇ ಇಲ್ಲ. ಇದು ರಹಸ್ಯ. ಏಕೆಂದರೆ ಒಂದು ಅದ್ಭುತ ಮತ್ತು ಬೃಹತ್ತಾದ ವಿಷಯದ ಸಮಗ್ರ ಅವಲೋಕನ ಮಾಡಿ ಅರಿವಿಗೆ ತಂದುಕೊಳ್ಳುವುದಕ್ಕೆ ಅಷ್ಟೇ ದೊಡ್ಡ ಜ್ಞಾನ ಮತ್ತು ದೃಷ್ಟಿ ಬೇಕು. ಅದನ್ನು ತಂದುಕೊಳ್ಳುವ ಪ್ರಯತ್ನವನ್ನು ನಾವು ಮಾಡಬಹುದು. ಅದನ್ನು ಮಾಡುತ್ತಾ ನಾವು ನಮ್ಮದೇ ಆದ ಸತ್ಯವನ್ನು ಅರಿಯಲು ಪ್ರಯತ್ನಪಡೋಣವೇ?

# ಪ್ರಕೃತಿ ರಸತಂತ್ರ 69-73

**ಮುಕ್ತಕ-69** **ಹೆಸರನರಿಯದ ಸಸಿಯೊಳಿರದೆ ರಸಗಂಧಗಳು? ।**
**ಬಿಸಿಲದನು ಪಕ್ವಗೊಳಿಸುತೆ ಬಿಡಿಸದಿಹುದೆ? ॥**
**ಪಸರಿಸದೆ ಗಾಳಿಯದನೊಯ್ದು ದಿಸೆದಿಸೆಗಳೊಳು ।**
**ಉಸಿರುತಿಹೆವದ ನಾವು ಮಂಕುತಿಮ್ಮ ॥**

ಹೆಸರನರಿಯದ=ಹೆಸರನು+ಅರಿಯದ, ಸಸಿಯೊಳಿರದೆ=ಸಸಿಯೊಳು+ಇರದೆ,
ಬಿಸಿಲದನು=ಬಿಸಿಲು+ಅದನು, ಬಿಡಿಸದಿಹುದೆ=ಬಿಡಿಸದೆ+ಇಹುದೆ,
ಗಾಳಿಯದನೊಯ್ದು=ಗಾಳಿಯು+ಅದನು+ಒಯ್ದು, ಉಸಿರುತಿಹೆವದ=ಉಸಿರುತಿಹೆವು+ಅದ,

ಹೆಸರನರಿಯದ=ಹೆಸರೇ ಗೊತ್ತಿಲ್ಲದ, ರಸಗಂಧಗಳು=ಮಕರಂದ ಮತ್ತು ಪರಿಮಳ, ದಿಸೆದಿಸೆಗಳೊಳು=ದಿಕ್ಕು ದಿಕ್ಕುಗಳಲ್ಲಿ, ಉಸಿರುತಿಹವದ=ಆ ಗಾಳಿಯನ್ನು ಸೇವಿಸುತ್ತಿದ್ದೇವೆ.

ನಮಗೆ ಹೆಸರೇ ಗೊತ್ತಿಲ್ಲದ ಸಸಿಯಲ್ಲಿ ಮಕರಂದ ಮತ್ತು ಸುಗಂಧಗಳಿರುವುದಿಲ್ಲವೇ? ಆ ಸೂರ್ಯನ ಬೆಳಕಿನಿಂದ ಅವು ಬೆಳೆಯುವುದಿಲ್ಲವೇ? ಆ ಗಿಡಗಳಲ್ಲಿರುವ ಸುಗಂಧವನ್ನು ಗಾಳಿಯು ದಿಕ್ಕು ದಿಕ್ಕುಗಳಿಗೆ ಪಸರಿಸದೆ? ಅಂತಹ ಗಾಳಿಯನ್ನು ನಾವು ಉಸಿರಾಡುತ್ತಿಲ್ಲವೇ? ಎಂದು ಒಂದು ಗಹನವಾದ ವಿಚಾರವನ್ನು ಈ ಮುಕ್ತಕದ ಮೂಲಕ ಪ್ರಸ್ತಾಪಿಸುತ್ತಾರೆ ಮಾನ್ಯ ಗುಂಡಪ್ಪನವರು.

ನಾವು ಉಸಿರಾಡುವ ಗಾಳಿಯಲ್ಲಿ ಯಾವ ಯಾವ ತೋಟದ ಯಾವ ಯಾವ ಗಿಡದ ಹೂ ಪುಷ್ಪಗಳ ಸುಗಂಧ ಮಿಳಿತವಾಗಿದೆಯೋ ನಮಗರಿವಿರುವುದಿಲ್ಲ. ಎರಡನೆಯದಾಗಿ ಹೆಸರೇ ಇಲ್ಲದ ಅಥವಾ ನಮಗೆ ಗೊತ್ತಿರದ ಗಿಡವಾದರೂ, ಅದರ ಹೂಗಳಿಗೂ ಒಂದು ಸುಗಂಧವಿರುತ್ತದೆ. ಆ ಗಿಡದ ಬೆಳವಣಿಗೆಗೂ ಆ





ನಭೋಮಂಡಲದಲ್ಲಿರುವ ಸೂರ್ಯನೇ ಕಾರಣ ಮತ್ತು ಬೀಸುವ ಗಾಳಿಯೂ ಭೇದಭಾವವಿಲ್ಲದೆ ಎಲ್ಲ ಗಿಡಗಳ ಸುಗಂಧವನ್ನೂ ತನ್ನೊಡಲಲ್ಲಿ ಸೇರಿಸಿಕೊಂಡು ಬೀಸುತ್ತದೆ ಮತ್ತು ಆ ಹಲ ಸುಗಂಧಭರಿತ ವಾಯುವನ್ನು ನಾವು ಸೇವಿಸುತ್ತೇವೆ.

ಇಲ್ಲಿ ನಾವು ಅರಿಯಬೇಕಾದದ್ದು ಏನೆಂದರೆ ಹೇಗೆ ಆ ಸೂರ್ಯ, ಗಾಳಿ ಮತ್ತು ನಾವು ಉಸಿರಾಡುವ ಪ್ರಕ್ರಿಯೆ ಎಲ್ಲವೂ ಭೇದವಿಲ್ಲದೆ ತಮ್ಮ ತಮ್ಮ ಕೆಲಸವನ್ನು ಮಾಡುತ್ತವೆಯೋ, ಹಾಗೆಯೇ ಈ ಜಗತ್ತಿನಲ್ಲಿ ಆ ಪರಮಚೇತನವೂ ಸಹ ಭೇದಭಾವವಿಲ್ಲದೆ ಎಲ್ಲವನ್ನೂ ಸಮನಾದ ಭಾವದಿಂದ ನೋಡಿಕೊಳ್ಳುತ್ತದೆ. ಸೃಷ್ಟಿಸಿದ ಪ್ರತಿ ಜೀವಿಗೂ ಅದರ ಅವಶ್ಯಕತೆಗಳನ್ನು ಪೂರೈಸುವ ಸಲುವಾಗಿ ಏನೇನು ಬೇಕೋ ಅದನ್ನೆಲ್ಲ ಮೊದಲೇ ಸಿದ್ಧಪಡಿಸಿದೆ. ಭೇದವೇನಿದ್ದರೂ ನಮ್ಮ ಮನಸ್ಸುಗಳಲ್ಲಿ ಮಾತ್ರ ನಾವುಗಳು ಅದರ ಉದ್ದೇಶ, ಅದರ ಕಾರ್ಯವೈಖರಿಯ ಬಗ್ಗೆ ಚಿಂತಿಸದೆ ಅನುಭವಿಸುತ್ತಾ ಇರುತ್ತೇವೆ.

ಹಾಗೆಯೇ ಅಜ್ಞಾತರಾದ ಹಲವಾರು ಜನ ಈ ಜಗತ್ತಿನ ಒಳಿತಿಗಾಗಿ ಯಾವ ಫಲಾಪೇಕ್ಷೆಯೂ ಇಲ್ಲದೆ, ಅಹರ್ನಿಶಿ ದುಡಿಯುತ್ತಾರೆ ಮತ್ತು ನಿರಂತರ ದುಡಿಯುತ್ತಲೇ ಇರುತ್ತಾರೆ. ಅವರ ಹೆಸರು ಯಾವ ಮಾಧ್ಯಮದಲ್ಲೂ ಪ್ರಚಾರವಾಗುವುದಿಲ್ಲ. ಅವರು ನಮ್ಮ ಸುತ್ತಮುತ್ತಲೇ ಇದ್ದರೂ ನಮಗೆ ತಿಳಿದಿರುವುದಿಲ್ಲ. ಆದರೆ ಅವರ ಕಾರ್ಯದ ಫಲ ಮಾತ್ರ ಇಡೀ ಸಮಾಜಕ್ಕೆ ದೊರೆಯುತ್ತದೆ. ತಮ್ಮ ಕಾರ್ಯದ ಫಲವನ್ನು ಯಾರು ಪಡೆದುಕೊಂಡಿದ್ದಾರೆ ಎಂದು ಅವರೂ ತಲೆಕೆಡಿಸಿಕೊಳ್ಳುವುದಿಲ್ಲ. ಏಕೆಂದರೆ ಅವರು ನಿಸ್ವಾರ್ಥಿಗಳು.

ಸಹಸ್ರಾರು ವರ್ಷಗಳ ಪುರಾತನವಾದ ವೇದಗಳ ಕರ್ತೃಗಳು ಯಾರೆಂದು ಯಾರೂ ಅರಿಯರು. ಆದರೆ ಅದರಲ್ಲಿನ ಅರಿವು, ಕ್ರಮ ಮತ್ತು ಜ್ಞಾನವು ಎಲ್ಲ ಜನರ ಮೇಲೆ ಹೇಗೆ ಪ್ರಭಾವ ಬೀರಿದೆ ಮತ್ತು ಒಂದು ಸುಸಂಸ್ಕೃತ ಸಮಾಜದ ನಿರ್ಮಾಣಕ್ಕೆ ಕಾರಣವಾಗಲಿಲ್ಲವೇ? ಮತ್ತು ಇಂದಿಗೂ ಬೀರುತ್ತಾ ಇದೆ ಅಲ್ಲವೆ? ವಿಡಂಬನೆ, ಏನೆಂದರೆ ನಾವು ಎಷ್ಟೊಂದು ವಸ್ತುಗಳನ್ನು ನಮ್ಮ ಸೌಕರ್ಯಕ್ಕಾಗಿ ಉಪಯೋಗಿಸುತ್ತೇವೆ. ಆದರೆ ಎಂದಿಗೂ ಅದರ ಹಿಂದೆ ಇರುವ ಹಲವರ ಅರಿವಿನ ಮತ್ತು ಶ್ರಮದ ಬಗ್ಗೆ ಯೋಚಿಸುವುದೇ ಇಲ್ಲ ಮತ್ತು ಅದನ್ನು ತಿಳಿದುಕೊಳ್ಳುವ ಪ್ರಯತ್ನವನ್ನೂ ಸಹ ಮಾಡುವುದಿಲ್ಲ. ಇದುವೇ ಪ್ರಪಂಚ!!!! ಹಾಗೆಂದು ಅದರ ಬಗ್ಗೆಯೇ ಯೋಚಿಸುತ್ತಾ ಇರಬೇಕೆಂದೂ ಅರ್ಥವಲ್ಲ.

ವಾಚಕರೆ, ನಮ್ಮ ಕರ್ತವ್ಯವೇನೆಂದು ಯೋಚಿಸಿದರೆ, ಪ್ರಕೃತಿಯಲ್ಲಿ ಸಹಜವಾಗಿ ನಡೆಯುವ ಕ್ರಿಯೆಗೆ ನಾವು ಬಾಧಕರಾಗದೆ, ಕೇವಲ ಸ್ವಾರ್ಥ ರಹಿತವಾಗಿ ಪರೋಪಕಾರಕ್ಕಾಗಿ ದುಡಿಯುವ, ಈ ಸೃಷ್ಟಿಯಲ್ಲಿರುವ ಎಲ್ಲವನ್ನೂ ಗೌರವಿಸೋಣ, ಸಾಧ್ಯವಾದರೆ ಅವುಗಳಿಗೆ ನಮ್ಮ ಅಲ್ಪ ಶಕ್ತಿಯಿಂದ ಇಂಬು ಕೊಡೋಣ. ನಮ್ಮ ಕೃತಜ್ಞತೆಯನ್ನು ತೋರೋಣ.





**ಮುಕ್ತಕ-70**

**ಭೂವಿಷಯದಲ್ಲಿ ಪುದಿದ ರಸವಾಸನೆಗಳೆಲ್ಲ ।**
**ಆವಿಯಾಗೇಳ್ದು ಮುಗಿಲಾಗಿ ಮಳೆಗರೆದು ॥**
**ಬಾವಿಗೂಟೆಯನಿತ್ತು ನರರೊಡಲ ಸೇರುವುದು ।**

**ದೈವ ರಸತಂತ್ರವಿದು-ಮಂಕುತಿಮ್ಮ ||**

ಆವಿಯಾಗೇಳ್ದು=ಆವಿಯಾಗಿ+ಏಳು, ಬಾವಿಗೂಟೆಯನಿತ್ತು=ಬಾವಿಗೆ+ಊಟೆಯನು+ಇತ್ತು,

ನರರೊಡಲ=ನರರ+ಒಡಲ

ಭೂವಿಷಯದಲಿ=ಈ ಭುವಿಗೆ ಸಂಬಂಧಿಸಿದ ವಿಷಯದಲ್ಲಿ, ಪುದಿದ=ಅಡಗಿದ, ರಸವಾಸನೆಗಳೆಲ್ಲ=ಗುಣ ಮತ್ತು ಸ್ವಭಾವಗಳೆಲ್ಲ, ಆವಿಯಾಗೇಳು=ಆವಿಯಾಗಿ ಎದ್ದು, ಮುಗಿಲಾಗಿ=ಮೋಡವಾಗಿ, ಬಾವಿಗೂಟೆಯನಿತ್ತು=ಬಾವಿಗಳಿಗೆ ಒರತೆಯಾಗಿ, ನರರೊಡಲ=ಮನುಷ್ಯರ ದೇಹವನ್ನು.

ಈ ಭೂಮಿಗೆ ಸಂಬಂಧಿಸಿದ ಮತ್ತು ಈ ಭೂಮಿಯಲ್ಲಿ ಅಡಗಿದ ರಸಗಳು ಸೂರ್ಯನ ಶಾಖದಿಂದ ಆವಿಯಾಗಿ, ಅದು ಮೋಡವಾಗಿ ಮತ್ತೆ ಮಳೆಯಾಗಿ ಧರೆಗಿಳಿದು ಆ ಮಳೆಯ ನೀರು ಭೂಮಿಯಲ್ಲಿ ಇಂಗಿ ಬಾವಿಗಳಿಗೆ ಒರತೆಯಾಗಿ ಆ ನೀರನ್ನು ಕುಡಿದ ನರರ ದೇಹವನ್ನು ಸೇರುವುವು. ಇದೆ ದೈವ ನಿರ್ಮಿಸಿದ ರಸತಂತ್ರ ಎನ್ನುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಈ ಭೂಮಿಯ ಒಳಗೆ ಮತ್ತು ಮೇಲೆ ಹಲವಾರು ರಾಸಾಯನಿಕ ವಸ್ತುಗಳು ಇವೆ. ಇಂಗಾಲ, ಜಲಜನಕ ಅಲ್ಯೂಮಿನಿಯಂ, ಉಕ್ಕು, ಹಿತ್ತಾಳೆ, ಚಿನ್ನ, ಸತು, ಪಾದರಸದಂತಹ ಮೂಲ ಧಾತುಗಳು ಒಟ್ಟು 118 ಇವೆ. ಲೆಡ್ ಆನನ್ ಸೆಪ್ಟಿಯಂ ಎನ್ನುವುದು ಈ ಧಾತುಗಳಲ್ಲೇ ಇತ್ತೀಚೆಗೆ ಕಂಡು ಹಿಡಿದ ಧಾತುವೆಂದು ಹೇಳಲ್ಪಡುತ್ತದೆ. ಜಲಜನಕ ಮತ್ತು ಹೀಲಿಯಂ ಈ ಜಗತ್ತಿನಲ್ಲಿ ಹೇರಳವಾಗಿದೆ. ಇವೆಲ್ಲವೂ ಮತ್ತೂ ಇನ್ನೂ ಏನೇನೋ ಸೇರಿ ಆ ಜಗತ್ತಾಗಿದೆ. ಪ್ರೋಟಾನ್ಸ್, ನ್ಯುಟ್ರಾನ್ಸ್ ಅಥವಾ ಎಲೆಕ್ಟ್ರಾನ್ಸ್ ಇಲ್ಲದ ಕಪ್ಪು ವಸ್ತುಗಳೂ ಇವೆ. ಇದರ ಸಂಪೂರ್ಣ ಜ್ಞಾನವನ್ನು ಯಾರಾದರೂ ರಸಾಯನ ಶಾಸ್ತ್ರಜ್ಞರನ್ನು ಕೇಳಿದರೆ ಹೇಳುತ್ತಾರೆ. ಅಂದರೆ ಈ ಜಗತ್ತಿನ ಸೃಷ್ಟಿಯ ಸಮಯದಲ್ಲಿ ಉಂಟಾದ ಮಹಾಸ್ಫೋಟವಾದ ಮೊದಲ ಇಪ್ಪತ್ತು ನಿಮಿಷಗಳಲ್ಲಿ ಇವೆಲ್ಲವೂ ಆದವು ಎಂದು ಹೇಳುತ್ತಾರೆ, ತಿಳಿದವರು ಇದನ್ನು ಇನ್ನೂ ಹೆಚ್ಚಾಗಿ ವಿವರಿಸಬಲ್ಲರು.

ಆ ಸೂರ್ಯನ ಶಾಖದಿಂದ ಉಂಟಾಗುವ ಆವಿಯಲ್ಲಿ ಈ ಎಲ್ಲ ವಸ್ತುಗಳ ಗುಣಗಳೂ ಬೇರೆ ಬೇರೆ ಪ್ರಮಾಣದಲ್ಲಿ ಸೇರಿ ಅವೆಲ್ಲವೂ ನಭೋಮಂಡಲದಲ್ಲಿ ಸೇರಿ, ಮೋಡವಾಗುತ್ತದೆ. ಆ ಮೋಡದಲ್ಲಿ ಈ ಎಲ್ಲ ಗುಣಗಳೂ

ಅಡಕವಾಗಿರುತ್ತದೆ. ಆ ಮೋಡ ತನ್ನ ತೂಕ ಹೆಚ್ಚಿಸಿಕೊಂಡಂತೆ ಭಾರ ತಾಳಲಾರದೆ ಮಳೆಯ ರೂಪದಲ್ಲಿ ಧರೆಗಿಳಿಯುತ್ತದೆ. ಮಳೆಯಾಗಿ ಹರಿವ ನೀರಿನಲ್ಲಿ ಈ ಎಲ್ಲ ಗುಣಗಳೂ ಸೇರಿ ಅದನ್ನು ಸೇವಿಸುವ ಎಲ್ಲ ಮಾನವರ ಒಡಲು ಸೇರುತ್ತದೆ. ಅದು ಅವರವರ ದೇಹದಲ್ಲಿರುವ ರಾಸಾಯನಿಕಗಳ ಜೊತೆಗೆ ಮಿಶ್ರಣಗೊಂಡು ಮನೋ ವ್ಯಾಪಾರದ ಮೇಲೂ ಸಹ ತನ್ನ ಪ್ರಭಾವ ಬೀರುತ್ತದೆ. ಇದು ಪರಮಾತ್ಮ ಸೃಷ್ಟಿಸಿದ ಒಂದು ರಸ ತಂತ್ರ ಇದು ಏರುಪೇರಾಗುತ್ತಿರುತ್ತದೆ. ನನ್ನ ಸ್ನೇಹಿತನಿಗೊಬ್ಬನಿಗೆ, ಅವನ ದೇಹದಲ್ಲಿ ಸೋಡಿಯಂ ಕಡಿಮೆಯಾಯಿತು ಎಂದು 3 ದಿನದಲ್ಲಿ ತಲೆ ಕೂದಲೆಲ್ಲಾ ಬೆಳ್ಳಗೆ ಆಗಿ ಹೋಯಿತು. ಮತ್ತೆ





ಅವನ ದೇಹದ ರಾಸಾಯನಿಕ ಸಮತೋಲನವನ್ನು ಸರಿಪಡಿಸಿದಾಗ ಅವ ಮೊದಲಿನಂತಾದ. ಪಿತ್ತ ಅಂದರೆ ಅಸಿಡಿಟಿ ಹೆಚ್ಚಾದರೆ ಮನುಷ್ಯ ಹುಚ್ಚು ಹುಚ್ಚಾಗಿ ಆಡುತ್ತಾನೆ. ಹಾಗಾಗಿ ಈ ದೇಹದ ರಾಸಾಯನಿಕ ಸಮತೋಲನವನ್ನು ಕಾಪಾಡಿಕೊಳ್ಳುವುದು ನಮ್ಮ ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳಲು ತೀರ ಅಗತ್ಯ. ಪಂಡಿತರು, ಜ್ಞಾನಿಗಳು ಮತ್ತು ವೈದ್ಯರು ಇದನ್ನು ನಮಗೆ ತಿಳಿಸಬಹುದು.

**ಮುಕ್ತಕ-71**

**ತರಣಿ ಕಿರಣದ ನಂಟು ಗಗನ ಸಲಿಲದ ನಂಟು |**
**ಧರಣಿ ಚಲನೆಯ ನಂಟು ಮರುತನೊಳ್ ನಂಟು ||**
**ಪರಿಪರಿಯ ನಂಟುಗಳಿನೊಂದು ಗಂಟೀ ವಿಶ್ವ |**
**ಕಿರಿದು ಪಿರಿದೊಂದಂಟು ಮಂಕುತಿಮ್ಮ ||**

ನಂಟುಗಳಿನೊಂದು=ನಂಟುಗಳಿನ+ಒಂದು, ಪಿರಿದೊಂದಂಟು-ಪಿರಿದು+ಒಂದು+ಉಂಟು.
ತರಣಿ=ಸೂರ್ಯ, ಸಲಿಲ=ನೀರು, ಕಿರಿದು=ಸಣ್ಣದು, ಪಿರಿದು=ದೊಡ್ಡದು.

ಸೂರ್ಯನ ಮತ್ತು ಕಿರಣದ ಸಂಬಂಧ, ಆಕಾಶದ ಮತ್ತು ಮಳೆ ನೀರಿನ ಸಂಬಂಧ, ಭೂಮಿಯ ಸುತ್ತುವಿಕೆಯ ಸಂಬಂಧ ಮತ್ತು ಅದಕ್ಕನುಗುಣವಾಗಿ ಬೀಸುವ ಗಾಳಿಯ ಸಂಬಂಧ, ಹೀಗೆ ಒಂದಕ್ಕೊಂದು ನಂಟು ಹಾಕಿಕೊಂಡು

ಹಲವಾರು ಬಗೆಯ ಸಂಬಂಧಗಳ ಒಂದು ಗಂಟೆ ಈ ಜಗತ್ತು. ಇದರಲ್ಲಿ ಕೆಲವು ಸಣ್ಣ ಸಣ್ಣ ನಂಟುಗಳು ಮತ್ತೆ ಕೆಲವು ದೊಡ್ಡದಾದ ಗಂಟುಗಳು ಎಂದು ಜಗತ್ತಿನ ಎಲ್ಲ ವಸ್ತುಗಳ ಪರಸ್ಪರ ಸಂಬಂಧಗಳನ್ನು ಪ್ರಸ್ತಾಪಿಸುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ತೈತ್ತರೀಯ ಉಪನಿಷತ್ತಿನ ಬ್ರಹ್ಮಾನಂದವಲ್ಲಿಯಲ್ಲಿನ ಮೊದಲನೇ ಅನುವಾಕದಲ್ಲಿ "ತಸ್ಮಾದ್ವಾ ಏತಸ್ಮಾದಾತ್ಮನ ಅಕಾಶಃ ಸಂಭೂತಃ ಆಕಾಶಾತ್ವಾಯುಃ ವಾಯೋರಗ್ನಿ ಅಗ್ನಿರಾಪಃ ಅದ್ಧಃ ಪೃಥಿವೀ । ಪ್ರಥಿವ್ಯಾ ಓಷದಯಃ ಓಷಧೀಭೋನ್ನಂ ಅನ್ನಾತ್ ಪುರುಷಃ ಸವಾ ಏಷ ಪುರುಷೋ ರಸಮಯಃ" ಎಂದು ಜಗತ್ತಿನ ವಸ್ತುಗಳಲ್ಲಿರುವ ಪರಸ್ಪರ ಸಂಬಂಧವು ವಿವರಿಸಲ್ಪಟ್ಟಿದೆ. ಆ ಪರಮಾತ್ಮನ ಸೃಷ್ಟಿಯಾದ ಆಕಾಶ, ಆ ಆಕಾಶದಲ್ಲಿರುವ ಕೋಟಿ ಕೋಟಿ ಆಕಾಶಕಾಯಗಳು, ಗಾಳಿ, ಸೂರ್ಯಕಿರಣಗಳಿಂದ ಉಂಟಾಗುವ ಶಾಖ, ಶಾಖದಿಂದ ಆವಿ, ಆವಿಯಿಂದ ಮೋಡ, ಮೋಡದಿಂದ ಗುಡುಗು ಮಿಂಚುಗಳು, ಸುರಿಯುವ ಮಳೆ, ಮಳೆಯಿಂದ ತಣ್ಣಗಾಗುವ ಇಳೆ, ತಣ್ಣಗಿನ ಇಳೆಯಲ್ಲಿ ಬೆಳೆಯುವ ಬೆಳೆ, ಬೆಳೆಯಿಂದ ಅನ್ನ ಅಂದರೆ ಆಹಾರ, ಆಹಾರದಿಂದ ಶಕ್ತಿ. ಶಕ್ತಿಯಿಂದ ನಡೆಯುವ ಜಗದ್ವಾಪಾರ. ಒಂದಕ್ಕೊಂದು ಕೊಂಡಿ ತಗುಲಿಸಿಕೊಂಡು, ನಂಟು ಹಾಕಿಕೊಂಡು ಇವೆ. ಹೀಗೆ ಆಕಾಶ, ಗಾಳಿ, ಮಳೆ, ಬೆಳೆ, ಎಲ್ಲವೂ ಎಲ್ಲ ಜೀವಿಗಳಿಗೂ ಉಪಯೋಗವಾಗುವಂತೆ ಮತ್ತು ಜಗತ್ತಿನ ಎಲ್ಲ ಪ್ರಾಣಿಗಳೂ ಬದುಕುವಂತೆ ಒಂದು ನಂಟು ಹಾಕಿ ಪರಮಾತ್ಮ ಸೃಷ್ಟಿಸಿದ್ದಾನೆ. ಒಂದನ್ನು ಅಗಲಿ ಇನ್ನೊಂದು ಇರಲು ಸಾಧ್ಯವೇ ಇಲ್ಲ. ಭುವಿಯ ಮೇಲೆ ಇರುವ ಸಕಲ ವಸ್ತುಗಳೂ ಒಂದಕ್ಕೊಂದು ನಂಟನ್ನು ಬೆಳೆಸಿ ಗಂಟನ್ನು ಹಾಕಿಕೊಂಡು ಸಕಲ ಜೀವರಾಶಿಗಳ ಅಸ್ತಿತ್ವಕ್ಕೆ ಪೂರಕವಾಗಿದೆ. ಇಲ್ಲಿನ ಯಾವುದಾದರೂ ಒಂದು ನಂಟು ಕಡಿದು ಗಂಟು ಬಿಚ್ಚಿ ಹೋದರೆ, ಎಲ್ಲವೂ ಏರುಪೇರಾಗುತ್ತದೆ.





ನಾವು ಉಸಿರಾಡುತ್ತೇವೆ, ಆದರೆ ಆ ಗಾಳಿಯ ಬಗ್ಗೆ ಎಂದಾದರೂ ಯೋಚಿಸಿದ್ದೇವೆಯೇ? ಅದನ್ನು ಎಷ್ಟು ಬೇಕಾದರೂ ಕಲುಷಿತಗೊಳಿಸಲು ನಾವು ಹೇಸುವುದಿಲ್ಲ. ಹಾಗೆ ನೀರು, ಭೂಮಿ, ಗಿಡ, ಮರ, ಕಾಡು, ಗುಡ್ಡ, ಬೆಟ್ಟ, ಕಲ್ಲು, ಮಣ್ಣು, ಲೋಹ, ಅದಿರು, ಪ್ರಾಣಿ, ಪಕ್ಷಿ ಯಾವುದನ್ನೂ ನಾವು ಬಿಟ್ಟಿಲ್ಲ. ಬೇರೆ ಪ್ರಾಣಿಗಳು ಅವುಗಳನ್ನು ಕೇವಲ ಉಪಯೋಗಿಸಿಕೊಂಡು ಮಾತ್ರ ಜೀವಿಸುತ್ತವೆ. ಆದರೆ ಮನುಷ್ಯ ಮಾತ್ರ ತನ್ನ ಕಣ್ಣಿಗೆ ಬೀಳುವ ಸರ್ವವನ್ನೂ "ತನ್ನ"

ಉಪಯೋಗಕ್ಕೆ ಆ ಪರಮಾತ್ಮ ಸೃಷ್ಟಿಸಿದ್ದಾನೆ ಎಂಬ ದುರ್ಭಾವದಿಂದ, ಸ್ವಾರ್ಥದಿಂದ, ಲೋಭದಿಂದ, ದುರಾಸೆಯಿಂದ, ಹೆಚ್ಚು ಹೆಚ್ಚು ಹಣ ಸಂಪಾದಿಸಲು ದುರ್ಮಾರ್ಗಕ್ಕೆ ಇಳಿದು ಎಲ್ಲವನ್ನೂ ನಾಶಮಾಡುತ್ತಿದ್ದಾನೆ.

ಒಂದು ಇಂಚನ್ನೂ ಸೃಷ್ಟಿಮಾಡಲು ಯೋಗ್ಯತೆ ಇಲ್ಲದ ಮಾನವ ಕುನ್ನಿ ಎಲ್ಲವನ್ನೂ ನಾಶಮಾಡಲು ಉದ್ಯುಕ್ತನಾಗಿದ್ದಾನೆ. ಆಹಾರಕ್ಕೆ ಬರ, ನೀರಿಗೆ ಬರ, ಶುದ್ಧ ಗಾಳಿಗೆ ಬರ. ಇವೆಲ್ಲ ಮಾನವನ ಲೋಭದಿಂದ ಉಂಟಾದ ಪರಿಸ್ಥಿತಿ ಇದರಿಂದ ಪ್ರೀತಿಗೆ ಬರ, ವಿಶ್ವಾಸಕ್ಕೆ ಬರ, ಸೌಹಾರ್ದಯುತವಾದ ಜೀವನಕ್ಕೆ ಬರ. ಈಗ್ಗೆ 50-60 ವರ್ಷಗಳಿಂದ, ಇಡೀ ಜಗತ್ತಿನ ವಾತಾವರಣವೇ ತೀವ್ರವಾಗಿ ಕಲುಷಿತವಾಗಿದೆ, ಈ ಮನುಷ್ಯನ ಲೋಭದಿಂದ. “ತಾನು ಬದುಕಿದರೆ ಸಾಕು ಮತ್ತೆಲ್ಲರೂ ನಾಶವಾದರೂ ನನಗೆ ಚಿಂತೆಯಿಲ್ಲ” ಎನ್ನುವ ಪರಿ.

ಮುಂದಿನ ಪೀಳಿಗೆಗೆ ಎಂತಹ ಸ್ಥಿತಿಯನ್ನು ನಿರ್ಮಾಣ ಮಾಡಿ ಹೋಗುತ್ತಿದ್ದಾನೆ ಎನ್ನುವ ಪರಿಜ್ಞಾನವೇ ಇಲ್ಲದ ಮನುಷ್ಯ. ಆ ಪರಮಾತ್ಮನಿಗಾಗಿ ದೇವಸ್ಥಾನ, ಇಗರ್ಜಿ, ಮಸೀದಿಗಳನ್ನು ಕಟ್ಟಿ ಪೂಜೆಮಾಡುತ್ತೇನೆ ಎನ್ನುವ ಮನುಷ್ಯ, ಆ ಪರಮಾತ್ಮ ಸೃಷ್ಟಿಸಿದ ಎಲ್ಲವನ್ನೂ ನಾಶಮಾಡುತ್ತಿರುವಾಗ, ಎಂತಹ ಪೂಜೆ ಎಂತಹ ಭಕ್ತಿ, ಧಿಕ್ಕಾರವಿರಲಿ ಇಂತಹ ಪ್ರಗತಿಗೆ, ವಾಚಕರೆ, ಕಟುವಾದರೂ ಇದು ಸತ್ಯ. ಇಂದು ನಾವು ಸರಿಯಾಗದೆ ಇದ್ದರೆ, ನಮ್ಮ ಮುಂದಿನ ಪೀಳಿಗೆಯವರು ನಮ್ಮನ್ನು ಕ್ಷಮಿಸುವುದಿಲ್ಲ, ಜೋಕೆ !!!

**ಮುಕ್ತಕ-72**

**ಈ ವಿಶ್ವದಲ್ಲಿ ನೋಡಲೆಲ್ಲರೆಲ್ಲರ ನಂಟು |**
**ಆವನಾ ಬಂಧುತೆಯ ಜಡೆಯ ಬಿಡಿಸುವನು? ||**
**ಜೀವ ಜೀವಕೆ ನಂಟು ಜಡ ಚೇತನಕೆ ನಂಟು |**
**ಆವುದದಕಂಟಿರದು?-ಮಂಕುತಿಮ್ಮ ||**

ನೋಡಲೆಲ್ಲರೆಲ್ಲರ=ನೋಡಲಿ+ಎಲ್ಲರ+ಎಲ್ಲರ, ಆವುದದಕಂಟಿರದು=ಆವುದು+ಅದಕೆ+ಅಂಟಿರದು, ವಿಶ್ವದಲಿ=ಜಗತ್ತಿನಲಿ, ನಂಟು=ಬಾಂಧವ್ಯ, ಆವನಾ=ಯಾರು, ಬಂಧುತೆಯ=ಈ ಬಂಧನದ.

ಈ ಜಗತ್ತಿನ ಎಲ್ಲವೂ, ಒಂದು ರೀತಿಯ ಪರಸ್ಪರ ಕೊಂಡಿಹಾಕಿಕೊಂಡು ಅಂಟಿಕೊಂಡಿವೆ. ಜಡೆಯ ತರಹ ಹೆಣೆದು ಕೊಂಡಿರುವ ಈ ಅಂಟಿನ ನಂಟನ್ನು ಮತ್ತು ಗಂಟನ್ನು ಯಾರು ಬಿಡಿಸುವವರು. ಜೀವ ಜೀವಕೆ ನಂಟು, ಚೇತನ

ಮತ್ತು ಜಡಕ್ಕೆ ನಂಟು, "ಯಾವುದದಕಂಟಿರದು" ಅಂದರೆ ಯಾವುದಕ್ಕೆ ಅಂಟಿರದು ಹೇಳಿ ನೋಡುವಾ ಎಂಬಂತೆ ಜಗತ್ತಿನ ಬಾಂಧವ್ಯಗಳನ್ನು ಈ ಮುಕ್ತಕದಲ್ಲೂ, ಮಾನ್ಯ ಗುಂಡಪ್ಪನವರು ಪ್ರಸ್ತಾಪಿಸುತ್ತಾರೆ.

| 110 |
|---|

| ಕಗ್ಗರಸಧಾರೆ | ಪ್ರಕೃತಿ ರಸತಂತ್ರ 69-73 |
|---|---|

ವಾಚಕರೆ, ಹೌದಲ್ಲವೇ, ಈ ಜಗತ್ತಿನಲ್ಲಿ ಪರಸ್ಪರ ಸಂಬಂಧವಿಲ್ಲದ ವಸ್ತುಗಳೇ ಇಲ್ಲ ಅಲ್ಲವೇ! ಆ ಪರಮ ಶಕ್ತಿಗೆ, ಅದೇ ಸೃಷ್ಟಿಸಿದ ಜಗತ್ತಿನೊಂದಿಗೆ ನಂಟು, ಈ ಸೃಷ್ಟಿಯಲ್ಲಿರುವ ಎಲ್ಲವೂ ಆ ಬೃಹತ್ ಚೇತನದ ಮೂಲಕ ಪರಸ್ಪರ ಸಂಬಂಧವನ್ನು ಹೊಂದಿದೆ. ಯೋಚನೆ ಮಾಡಿದರೆ, ನಮಗೆ ತಿಳಿಯುವುದು ಏನೆಂದರೆ, ಸಂಬಂಧ ಇದೆ ಅಥವಾ ಇರಬೇಕು. ಆದರೆ ಆ ಸಂಬಂಧಗಳ ಸೂಕ್ಷ್ಮ ರೂಪಗಳು ನಮಗೆ ಅರಿವಿಲ್ಲ. ನಕ್ಷತ್ರಗಳು, ಗ್ರಹಗಳು, ಉಪಗ್ರಹಗಳು ಮತ್ತು ಅವುಗಳ ಶೀತೋಷ್ಣಗಳು, ಸುತ್ತುವಿಕೆ ಇವೆಲ್ಲವೂ ಪ್ರಕೃತಿಯೊಂದಿಗೆ ನಂಟು. ಆ ಪ್ರಕೃತಿಯ ಎಲ್ಲವೂ ಪರಸ್ಪರ ಸಂಬಂಧವನ್ನು ಹೊಂದಿದೆ. ಒಂದು ಇನ್ನೊಂದಕ್ಕೆ ಪೂರಕ, ಒಂದು ಇನ್ನೊಂದಕ್ಕೆ ಆಹಾರ. ಭೂಮಿಯ ಗುಣಗಳು ಆಕಾಶಕ್ಕೆ ಒಂದು ಸೂತ್ರದಲ್ಲಿ ಹೋಗುತ್ತವೆ. ಮತ್ತೆ ರೂಪ ಪರಿವರ್ತಿತವಾಗಿ ಭುವಿಗೆ ಇಳಿಯುತ್ತವೆ. ಹಾಗೆ ಇಳಿದ ಗುಣಗಳು ಮತ್ತೆ ಗಿಡ ಮರಗಳ, ಹೂ ಹಣ್ಣುಗಳ, ಗೆಡ್ಡೆ ಗೆಣಸುಗಳ ಮೂಲಕ ಪ್ರಕಟವಾಗಿ ಅವನ್ನು ಸೇವಿಸಿದ ಪ್ರಾಣಿಗಳಲ್ಲಿ ಸೇರಿ ಆ ಗುಣಗಳು ಮತ್ತೆ ಆ ಪ್ರಾಣಿಗಳಲ್ಲಿ ರೂಪಾಂತರಗೊಂಡು ಪ್ರಕಟವಾಗುತ್ತದೆ. ಇದು ಜಡ ಮತ್ತು ಜಡಕ್ಕೆ ಇರುವ ಸಂಬಂಧ.

ಇನ್ನು ಚೇತನಕ್ಕೆ ಮತ್ತು ಜಡಕ್ಕೆ ಇರುವ ಸಂಬಂಧವನ್ನು ನೋಡಿದರೆ, ಅದು ಬಹಳ ಸೂಕ್ಷ್ಮ. ಜಡದ ಗುಣಗಳು ಜೀವಕ್ಕೆ ಸೂಕ್ಷ್ಮರೂಪದಿ ಹೋಗುವುದು ಮತ್ತು ಜೀವಿಗಳ ಮೇಲೆ ಅವುಗಳ ಪ್ರಭಾವ, ಗುಣ ಪರಿವರ್ತನೆ, ಗುಣ ಅಭಿವೃದ್ಧಿ ಇವೆಲ್ಲವನ್ನೂ ಆಲೋಚನೆ ಮಾಡಿ ಒಂದು ಗ್ರಂಥವನ್ನು ಬರೆದರೆ ಹತ್ತು ಸಾವಿರ ಪುಟಗಳೂ ಸಾಲದೇನೋ. ಇರಲಿ ಇಂದು ಆ ಬಂಧ ಸಂಬಂಧಗಳು ಇವೆ ಆದರೂ ರೂಪ ಬದಲಾವಣೆಯಾಗುತ್ತಿದೆ. ಕಲುಷಿತಗೊಳ್ಳುತ್ತಿದೆ. ಭೌತಿಕ ಮತ್ತು ರಾಸಾಯನಿಕ ಸಂಕರವಾಗುತ್ತಿದೆ. ಆ ಸಂಕರದಿಂದ ಪ್ರಕೃತಿಯ ಗುಣಗಳೂ ಬದಲಾಗುತ್ತಿವೆ. ಬದಲಾವಣೆಯು

ಪ್ರಕೃತಿ ನಿಯಮದಂತೆ ನಡೆಯುತ್ತದಾದರೂ ಇಂದು ಪ್ರಕೃತಿಯಲ್ಲಿ ಆ ಭಗವದ್ ಸೃಷ್ಟಿಯಲ್ಲಿ ಮಾನವನ ಅತಿಯಾದ ಹಸ್ತಕ್ಷೇಪದಿಂದ ಎಲ್ಲವೂ ಕಲುಷಿತವಾಗುತ್ತಿದೆ.

ನಾವು ಏನು ಮಾಡಬಹುದು ಎಂದರೆ ಸಾಧ್ಯವಾದಷ್ಟು ಹೀಗೆ ಕಲುಷಿತವಾಗುವುದನ್ನು ತಡೆಯಲು ಪ್ರಯತ್ನಿಸಬೇಕು.

**ಮುಕ್ತಕ-73**

**ನಂಟು ತಂಟೆಗಳ ಗಂಟೀ ಬ್ರಹ್ಮಭಂಡಾರ |**
**ಅಂಟಿಲ್ಲವೆನಗಿದರೊಳೆನ್ನದಿರದೆಂದುಂ ||**
**ಒಂಟಿ ನೀನೊಳಜಗಕೆ ಭಂಟ ಹೊರಜಗಕಾಗಿ |**
**ಒಂಟಿಸಿಕೊ ಜೀವನವ-ಮಂಕುತಿಮ್ಮ ||**

ಅಂಟಿಲ್ಲವೆನಗಿದರೊಳೆನ್ನದಿರದೆಂದುಂ=ಅಂಟಿಲ್ಲ+ಎನಗೆ+ಇದರೊಳು+ಎನ್ನದಿರು+ಎಂದೆಂದೂ,
ನೀನೊಳಜಗಕೆ=ನೀನು+ಒಳಜಗಕೆ
ಅಂಟು=ಸಂಬಂಧ, ಭಂಟ=ಸೇವಕ, ಒಂಟಿಸಿಕೊ ಅಂಟಿಸಿಕೊ

ಈ ಜಗತ್ತಿನಲ್ಲಿ ಆ ಪರಮಾತ್ಮನ ಸೃಷ್ಟಿಯಲ್ಲಿ, ನಂಟುಗಳು ಮತ್ತು ಅಂಟುಗಳು ಮತ್ತು ಗಂಟುಗಳು ಬಹಳಷ್ಟಿವೆ. "ಇದಕ್ಕೆಲ್ಲ ನನಗೆ ಸಂಬಂಧವಿಲ್ಲ" ಎಂದು ಹೇಳಬೇಡ ಎಂದೆಂದೂ, ಅಂತರ್ಯದಲ್ಲಿ ನೀನು ಒಬ್ಬಂಟಿಯಾಗಿರು,





ಆದರೆ ಹೊರ ಜಗತ್ತಿಗೆ ನಿನ್ನ ನಂಟು ಒಬ್ಬ ಆಳಿನಂತೆ ಇದ್ದು ಈ ಜೀವನಕ್ಕೆ ನೀ ಅಂಟಿಸಿಕೊ ಎಂದು ಪ್ರಸ್ತಾಪಿಸುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಈ ಜಗತ್ತಿನ ಸೃಷ್ಟಿಯಲ್ಲಿ ಎಲ್ಲವೂ ಒಂದಕ್ಕೊಂದು ನಂಟು ಹಾಕಿಕೊಂಡೇ ಇವೆ. ಯಾವೂದೂ ಸಹ ಅಂಟಿಲ್ಲದೆ ಸ್ವತಂತ್ರವಾಗಿ ಇಲ್ಲವೇ ಇಲ್ಲ ನಾವು ನಮ್ಮ ಇಚ್ಛೆ ಮತ್ತು ಪ್ರಮೇಯಗಳಿಲ್ಲದೆಯೇ ಎಲ್ಲಕ್ಕೂ ನಂಟು ಹಾಕಿಕೊಂಡಿರುತ್ತೇವೆ. ಎಷ್ಟೋ ನಂಟುಗಳು ನಮ್ಮ ಅರಿವಿಗೇ ಬಂದಿರುವುದಿಲ್ಲ. ಕೆಲವರು "ಇದಕ್ಕೆ ನನಗೆ ಸಂಬಂಧವಿಲ್ಲ" ಎನ್ನುವ ಮಾತನ್ನು ಹೇಳುವುದು ನಾವು ಕೇಳಿರಬಹುದು. ಆದರೆ ಇರುವ ಸಂಬಂಧ ಅವರನ್ನು ಮುಟ್ಟುವ ತನಕ ಅದು ಅವರಿಗೆ ಅರಿವಾಗಿರುವುದಿಲ್ಲ, ಅಷ್ಟೇ. ಸಂಬಂಧಗಳಲ್ಲಿ ಕೆಲವು ವೈಯಕ್ತಿಕ, ಕೆಲವು ಸಾಮೂಹಿಕ, ಕೆಲವು ಸಾಮಾಜಿಕ ಮತ್ತು ಕೆಲವು ರಾಷ್ಟ್ರೀಯ. ಆದರೆ ಯಾವುದೂ ಸಂಬಂಧವಿಲ್ಲವೆನ್ನಲಾಗದು.

ನಮ್ಮ ಸಂಬಂಧಗಳು ಎಷ್ಟು ಗಟ್ಟಿ ಅಥವಾ ಎಷ್ಟು ಟೊಳ್ಳು ಎನ್ನುವುದು ಆ ವಸ್ತು, ವ್ಯಕ್ತಿ ಅಥವಾ ವಿಷಯದೊಂದಿಗೆ ನಮ್ಮ ಸಂಬಂಧದ ತೀವ್ರತೆ ಮತ್ತು ಆಳದ ಮೇಲೆ ಆಧಾರಪಟ್ಟಿರುತ್ತದೆ. ನಾವು ಬಹಳಷ್ಟು ಜನ ಸಂಸಾರದಲ್ಲಿ ಇದ್ದರೂ ಸನ್ಯಾಸಿಗಳ ತರಹ ಇರುವವರನ್ನು ಕಂಡಿದ್ದೇವೆ ಮತ್ತು ಹಲವರು ಬೇರೆ ಯಾವ ವಿಷಯದ ಬಗ್ಗೆಯೂ ಯೋಚನೆ ಮಾಡದೆ, ಕೇವಲ ಜಗತ್ತಿನಲ್ಲೇ ಮುಳುಗಿರುವವರೂ ಇದ್ದಾರೆ. ಇದು ಬಿಟ್ಟರೆ ಬೇರೆ ಇಲ್ಲವೇ ಇಲ್ಲ ಎಂದು ಭಾವಿಸಿ ಈ ಜಗತ್ತಿಗೆ ಮತ್ತು ಈ ಜಗತ್ತಿನ ಎಲ್ಲಕ್ಕೂ ಅಂಟಿಕೊಂಡಿರುವವರು ಬೇಕಾದಷ್ಟು ಜನ ಸಿಗುತ್ತಾರೆ. ಇಲ್ಲೇ ಇದ್ದು ಎಲ್ಲ ಕೆಲಸಗಳಲ್ಲೂ ತಮ್ಮನ್ನು ತೊಡಗಿಸಿಕೊಂಡರೂ ಯಾವುದಕ್ಕೂ ಅಂಟದವರೂ ಇದ್ದಾರೆ. ಇದ್ದೂ ಇಲ್ಲದಂತಿರುವುದು ಒಂದು ಯೋಗ. ಅದು ಅಭ್ಯಾಸದಿಂದ ಮತ್ತು ಸಂಸ್ಕಾರದಿಂದ ಬರುತ್ತದೆ.

ಅದಕ್ಕೆ ಈ ಮುಕ್ತಕದಲ್ಲಿ ಮಾನ್ಯ ಗುಂಡಪ್ಪನವರು ಹೇಳುವುದನ್ನು ಮತ್ತೊಮ್ಮೆ ನೋಡಿ. ಹೊರಜಗತ್ತಿಗೆ ಎಲ್ಲವನ್ನೂ ತಲೆಯ ಮೇಲೆ ಹೊತ್ತುಕೊಂಡು, ತನ್ನ ಜವಾಬ್ದಾರಿ ಎಂಬಂತೆ, ಕೊಟ್ಟ ಕೆಲಸವನ್ನು ನಿಷ್ಠೆಯಿಂದ ಮಾಡುವ ಒಬ್ಬ ಸೇವಕನಂತೆ(ಭಂಟ) ಎಲ್ಲಕ್ಕೂ ಅಂಟಿಕೊಂಡು ಕೆಲಸಮಾಡು. ಆದರೆ ಅಂತರಂಗದಲ್ಲಿ ಯಾವುದನ್ನೂ ಒಂದು ಅಭ್ಯಾಸವನ್ನಾಗಿಸಿಕೊಳ್ಳುವುದೋ ಅಥವಾ ಸ್ವಭಾವವಾಗಿಸಿಕೊಳ್ಳುವುದೋ ಮಾಡದೆ ಮನಸ್ಸು ಬುದ್ಧಿ ದೇಹಾತ್ಮಗಳಿಗೆ ಇದರ ಯಾವುದರ "ಅಂಟೂ" ಅಂಟದ ರೀತಿ ಇದ್ದರೆ ಒಳ್ಳೆಯದು ಎನ್ನುತ್ತಾರೆ ಮಾನ್ಯ ಗುಂಡಪ್ಪನವರು.

ಭಗವಂತನನ್ನೇ ನಂಬಿ, "ಪದ್ಮಪತ್ರಮಿವಾಂಭಸಿ-ನೀರಿನಲ್ಲಿರುವ ಕಮಲದೆಲೆಯಂತೆ ಅಂಟಿಯೂ ಅಂಟದಂತಿರುವ ನಿರ್ಲಿಪ್ತ" ಜೀವನವನ್ನು ನಡೆಸಿದರೆ, ಸುಖ-ದುಃಖಗಳ ವರ್ತುಲದಿಂದ ಹೊರಗೆ ನಿಂತು ಕೇವಲ ಸಾಕ್ಷೀಭಾವದಿಂದ ನೋಡುತ್ತಾ ಆನಂದವಾಗಿರಬಹುದು. ನಮ್ಮ ಸುಖ, ದುಃಖ, ನೋವು, ನಲಿವು, ಆನಂದ, ಪ್ರೀತಿ ಪ್ರೇಮ ಮುಂತಾದ ಎಲ್ಲ ಭಾವಗಳಿಗೂ ಈ ಜಗತ್ತಿನೊಂದಿಗೆ ನಮಗೆ ಇರುವ ಅಂಟಿನ ತೀವ್ರತೆಯ ಮೇಲೆ

ಆಧಾರಪಟ್ಟಿದೆ. ನಮಗೇನು ಬೇಕು ಎಂದು ನಿರ್ಧರಿಸಲು ನಮಗೆ ಸಂಪೂರ್ಣ ಸ್ವಾತಂತ್ರ್ಯವನ್ನಿತ್ತಿದ್ದಾನೆ ಪರಮಾತ್ಮ, ಆಯ್ಕೆ ನಮ್ಮದು ಅದರಿಂದ ಬರುವ ಎಲ್ಲ ಫಲಗಳೂ ನಮ್ಮದು.





# ಪಾಲ್ ಬ್ರಹ್ಮ-ನೊರೆ ಸೃಷ್ಟಿ 74-78

**ಮುಕ್ತಕ-74**

**ಸುಮ್ಮನೊಬ್ಬಂಟಿಯೆಂತಿಹುದು? ಬೇಸರವಹುದು |**
**ಹೊಮ್ಮುವನು ಕೋಟಿರೂಪದಲಿ ನಾನೆಂದು ||**
**ಬೊಮ್ಮನೆಳಸಿದನಂತೆ. ಆಯೆಳಸಿಕೆಯೆ ಮಾಯೆ |**
**ನಮ್ಮಿರವು ಮಾಯೆಯಲಿ-ಮಂಕುತಿಮ್ಮ ||**

ಸುಮ್ಮನೊಬ್ಬಂಟಿಯೆಂತಿಹುದು=ಸುಮ್ಮನೆ+ಒಬ್ಬಂಟಿ+ಎಂತೆ+ಇಹುದು,
ಬೇಸರವಹುದು=ಬೇಸರವು+ಅಹುದು, ಬೊಮ್ಮನೆಳಸಿದನಂತೆ=ಬೊಮ್ಮನು+ಎಳಸಿದನಂತ,
ಆಯೆಳಸಿಕೆಯೆ=ಆ+ಎಳಸಿಕೆಯೆ, ನಮ್ಮಿರವು=ನಮ್ಮ+ಇರವು
ಹೊಮ್ಮುವೆನು=ಉಕ್ಕುವೆನು, ಬೊಮ್ಮ=ಪರಬ್ರಹ್ಮ, ಯೆಳಸಿಕೆ=ಅನಿಸಿಕೆ, ನಮ್ಮಿರವು=ನಮ್ಮ ಈ ಜಗತ್ತಿನ ಅಸ್ತಿತ್ವ.

ಆ ಪರಮಾತ್ಮನಿಗೆ ಒಬ್ಬನೇ ಇರುವುದು ಹೇಗೆ ಎಂದು ಅನಿಸಿ ಬೇಸರ ಬಂದು, ನಾನು ಕೋಟಿ ಕೋಟಿ ರೂಪದಲಿ ಹೊರ ಹೊಮ್ಮುವನು ಎಂದುಕೊಂಡು ಆ ಮಾಯಾ ರೂಪದ ಜಗತ್ತನ್ನು ತನ್ನೊಳಗಿಂದಲೇ ಸೃಷ್ಟಿ ಮಾಡಿದನಂತೆ. ಆ ಮಾಯೆಯೇ ಈ ಜಗತ್ತು. ನಾವಿರುವುದು ಈ ಮಾಯೆಯೊಳಗೆ ಎನ್ನುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ. ಹಾಗಾಗಿ ಪರಬ್ರಹ್ಮ ಹಾಲು. ಉಕ್ಕಿ ಹರಿಯುವ ನೊರೆಯೇ ಸೃಷ್ಟಿ

ಕಣ್ಣಿಗೆ ಕಂಡೂ ನಮಗೆ ಅರ್ಥವಾಗದ್ದು ಮಾಯೆ. ಆದರೆ ಈ ಮಾಯೆಯ ವಿಸ್ತಾರವನ್ನು ನೋಡಿದರೆ ಅಬ್ಬಬ್ಬಾ ಎನ್ನುವಂತಾಗುತ್ತದೆ. ನಭೋ ಮಂಡಲದಲ್ಲಿ ಒಂದು ಮಹಾಸ್ಫೋಟ. ಒಂದೇ ಅಗ್ನಿಗೋಳವಾಗಿದ್ದ ಈ ಜಗತ್ತು ಆಂತರ್ಯದಲ್ಲಿ ಅತ್ಯಧಿಕವಾದ ಶಾಖದಿಂದ ಉಂಟಾದ ಆಂತರಿಕ ಗುರುತ್ವ ಮತ್ತು ಬಾಹ್ಯ ವಿಕಿರಣದಿಂದ ಒಂದೇ ಬಾರಿಗೆ ಸ್ಫೋಟಗೊಂಡು ದೂರ ದೂರಕ್ಕೆಸೆಯಲ್ಪಟ್ಟದ್ದು ಕೇವಲ ಅನಿಲಗಳು. ಆಗ ಅದರ ಶಾಖವೇ 100 ಬಿಲಿಯನ್ ಡಿಗ್ರಿಗಳಿತ್ತಂತೆ. ಹಾಗೆ ಎಸೆಯಲ್ಪಟ್ಟ ಅನಿಲಗಳಲ್ಲಿನ ಅಯಾನಿಕ್ ಕಣಗಳು ಒಂದಕ್ಕೊಂದು ಘರ್ಷಣೆಗೊಂಡು ಅತೀ ಹೆಚ್ಚಾದ ಶಾಖ ಉಂಟಾಗಿ ಆ ಶಾಖದ ಕಾರಣದಿಂದ ಒಂದಕ್ಕೊಂದು ಸೇರಿ ನಕ್ಷತ್ರವಾಗಿ ಆವಿರ್ಭಾವವಾಯಿತಂತೆ. ಅಂತಹ ಸಮಯದಲ್ಲಿ ಕಡಿಮೆ ಶಾಖವಿದ್ದ ಆಕಾಶಕಾಯಗಳು ಗ್ರಹಗಳಾಗಿ ರೂಪಿತಗೊಂಡಿತಂತೆ. ಹಾಗೆ ರೂಪಿತಗೊಂಡ ಗ್ರಹಗಳು ಕೋಟಿ ಕೋಟಿ ವರ್ಷಗಳಲ್ಲಿ ತಣ್ಣಗಾಗಿ ಜೀವಿಯ ಅವಿರ್ಭಾವಕ್ಕೆ ಸೂಕ್ತ ವಾತಾವರಣ ನಿರ್ಮಾಣವಾದಾಗ ಇಲ್ಲಿ ನೀರು, ಸಸ್ಯ, ಆಹಾರ ಹೀಗೆ ಎಲ್ಲವೂ ಉತ್ಪತ್ತಿಯಾಯಿತಂತೆ. ಇದು ವಿಜ್ಞಾನದ ವಿವರಣೆ.

ಆದರೆ ನಮ್ಮಂತಹ ಸಾಮಾನ್ಯರಿಗೆ ಅರ್ಥವಾಗುವುದೇನೆಂದರೆ ಇಡೀ ಸೃಷ್ಟಿಗೆ ಕಾರಣ ಒಂದು ಬೃಹತ್ ಚೇತನ, ಆ ಚೇತನ ತನ್ನ ಶಕ್ತಿಯಿಂದಲೇ ತಾನೇ ಈ ಜಗತ್ತಾಗಿ ಪ್ರಕಟಗೊಂಡಿದೆ. ಅದನ್ನೇ ತೆಲುಗಿನ ಭಕ್ತ ಕವಿ ತಾಳ್ಳಪಾಕ ಅನ್ನಮಾಚಾರ್ಯರು "ಅಂದರಿಲೋ ಪುಟ್ಟಿ ಅಂದರಿಲೋ ಚೇರಿ ಅಂದರಿ ರೂಪಮುಲು ಅಟು ತಾನೆ" ಎಂದು, ಅಂದರೆ 'ಎಲ್ಲರಲ್ಲೂ ಹುಟ್ಟಿ ಎಲ್ಲರಲ್ಲೂ ಸೇರಿ ಎಲ್ಲರ ರೂಪವೂ ತಾನೇ ಆಗಿ





ಎಂದು ಹೇಳುತ್ತಾರೆ. ಅದಕ್ಕೆ ನಮಗೆ ಎಲ್ಲವೂ ಆ ಪರಮಾತ್ಮನೇ. ಆಕಾಶ, ಸೂರ್ಯ, ಭೂಮಿ, ಗಾಳಿ, ಗುಡ್ಡ, ಬೆಟ್ಟ, ನದಿ, ಮರ, ಗಿಡ ಹೀಗೆ ಎಲ್ಲವೂ ನಮಗೆ ಪರಮಾತ್ಮ ಸ್ವರೂಪವಲ್ಲವೇ?

ಆದರೆ ನಮಗೆ ಯಾವುದೂ ಸ್ಪಷ್ಟ ಅಲ್ಲವಲ್ಲ. ಯಾವುದೂ ಸ್ಪಷ್ಟವಾಗಿ ಅರ್ಥವಾಗುವುದಿಲ್ಲ. ನಮ್ಮ ಪರಿಮಿತ ಜ್ಞಾನಕ್ಕೆ ಅದನ್ನು ಭಾವಿಸುವುದೂ ಕಷ್ಟ. ಹಾಗಾಗಿ ಅದು ಮಾಯೆ. ನಮಗೆ ಗೊತ್ತಿರುವುದು ಅಥವಾ ನಾವು ನಂಬಿರುವುದು ಒಂದೇ. ಎಲ್ಲವೂ ಪರಮಾತ್ಮನಿಂದ ಆಗಿದೆ ಎಲ್ಲವೂ ಪರಮಾತ್ಮನಿಂದಲೇ ನಡೆಯುತ್ತದೆ. ಪರಮಾತ್ಮ ಎನ್ನುವುದು ಒಂದು ಶಕ್ತಿ. ಆ ಶಕ್ತಿಯಿಂದಲೇ ಸಕಲವೂ. ಎಲ್ಲದಕ್ಕೂ ಅದೇ ಮೂಲ ಮತ್ತು ಎಲ್ಲದಕ್ಕೂ ಅದೇ ಗಮ್ಯ.

ನಾವು ಅದಕ್ಕೆ ಶರಣಾಗಿ ನಿಯಮಿತ ಕಾರ್ಯಗಳನ್ನು ಮಾಡುತ್ತಾ ಅಹಂಕಾರ ತೊರೆದು ಅವನ ಸೃಷ್ಟಿಯಲ್ಲಿಯ ಎಲ್ಲದರಲ್ಲೂ ಆ ಪರಮ ಶಕ್ತಿಯ ರೂಪವನ್ನೇ ನೋಡುತ್ತಾ ಬಾಳಿದರೆ ಸುಖ. ಅದನ್ನು ಬಿಟ್ಟು ಬೇರೆ ಯಾವುದೇ ಭಾವನೆ ಇದ್ದರೆ ನಿರಂತರ ಸಂಕಟ, ನೋವು ಮತ್ತು ದುಃಖ. ನಂಬುವುದೂ ಬಿಡುವುದೂ ಅವರವರ ನಂಬಿಕೆಗೆ ಬಿಟ್ಟದ್ದು. ವಾಚಕರೆ, ನಾವು ಸ್ವತಂತ್ರರು. ನಂಬುವುದೂ ಬಿಡುವುದೂ ನಮ್ಮ ಆಯ್ಕೆಗೆ ಸೇರಿದ್ದು.

**ಮುಕ್ತಕ-75**

**ಮರ ತನ್ನ ಹೆತ್ತ ಬೀಜವನಿಲ್ಲವೆನಿಸಿ ।**
**ವಿಸ್ತರಿಸುವಂದದಿ ಸೃಷ್ಟಿ ತನ್ನ ಮೂಲವನು ॥**
**ಮರೆಮಾಚಿ ತಾನೇ ಮೆರೆಯುತ್ತಿಹುದು ಕಣ್ಣಳಿಗೆ ।**
**ನೊರೆಸೃಷ್ಟಿ ಪಾಲ್ ಬ್ರಹ್ಮ-ಮಂಕುತಿಮ್ಮ ॥**

ಬೀಜವನಿಲ್ಲವೆನಿಸಿ=ಬೀಜವನ್ನು+ಇಲ್ಲ+ಎನಿಸಿ, ವಿಸ್ತರಿಸುವಂದದಿ=ವಿಸ್ತರಿಸುವ+ಅಂದದಿ

ಒಂದು ಮರ ತನ್ನ ಮೂಲವಾದ ಬೀಜವನ್ನು ಇಲ್ಲವಾಗಿಸಿ ತಾನು ಬೆಳೆದು ರೆಂಬೆ ಕೊಂಬೆಗಳಿಂದ ವಿಸ್ತಾರವಾಗಿ ಬೆಳೆವಂತೆ ಈ ಜಗತ್ತೂ ಸಹ ತನ್ನ ಮೂಲವಾದ ಆ ಅಗ್ನಿಗೋಳವನ್ನು ಇಲ್ಲವಾಗಿಸಿ ಮೆರೆಯುತ್ತಿದೆ ಮತ್ತು ನಮಗೆ ಕಾಣುತ್ತಿದೆ. ಇದು ಹೇಗಿದೆ ಎಂದರೆ ಆ ಪರಬ್ರಹ್ಮ ಹಾಲಾದರೆ ಅತೀ ಉಷ್ಣತೆಯಿಂದ ಕಾದು ಕಾದು ಉಕ್ಕುವ ಹಾಲಿನ ನೊರೆಯಂತೆ ಈ ಸೃಷ್ಟಿ ಎನ್ನುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಒಂದು ಬೀಜದೊಳಗೆ ಒಂದು ಜೀವಕಣ. ಅದಕ್ಕೆ ಒಂದು ಹೊದಿಕೆ. ಹೊದಿಕೆಗೆ ಪೂರಕವಾದ ಮತ್ತು ಸರಿಯಾದ ಪಾತ್ರ ದೊರಕಿದರೆ ಆ ಬೀಜ ಮೊಳೆತು ಸಸಿಯಾಗಿ, ಗಿಡವಾಗಿ, ಮರವಾಗಿ ತನ್ನ ಸ್ಥಾನದಲ್ಲೇ ಹರಡಿಕೊಳ್ಳುತ್ತದೆ. ಆದರೆ

ಆ ಮರಕ್ಕೆ ಮೂಲವಾದ ಬೀಜ ತನ್ನನ್ನು ತಾನು ಇಲ್ಲವಾಗಿಸಿಕೊಂಡು, ತನ್ನ ಶಕ್ತಿಯಿಂದಲೇ ಆ ಮರದಲ್ಲಿ ಕೋಟ್ಯಾಂತರ ಬೀಜಗಳಿಗೆ ಕಾರಣವಾಗುತ್ತದೆ. ಈ ಜಗತ್ತಿನ ಸೃಷ್ಟಿಯೂ ಹಾಗೆ ಎನ್ನುತ್ತಾರೆ ಮಾನ್ಯ ಗುಂಡಪ್ಪನವರು.

114

| ಕಗ್ಗರಸಧಾರೆ | ಪಾಲ್ ಬ್ರಹ್ಮ-ನೊರೆ ಸೃಷ್ಟಿ 74-78 |
| --- | --- |

ಒಂದು ಗೋಳ, ಒಳಗೆ ಭಯಂಕರ ಶಾಖ, ಬೀಜ ತನ್ನೊಳಗಿನ ಶಕ್ತಿ ಮತ್ತು ಹೊರಗಿನ ಶಕ್ತಿಯ ಕ್ರಿಯೆಯಿಂದ ಸಿಡಿದು ಸಸಿಯಾದಂತೆ, ಆ ಗೋಳವೂ ಸಿಡಿದು ಈ ಜಗತ್ತೆಂಬ ಮಹಾವೃಕ್ಷವಾಗಿದೆ ಎನ್ನುವುದು ವಿಜ್ಞಾನ. ಕಾದ ಹಾಲು ಉಕ್ಕುವಂತೆ ಉಕ್ಕಿ ನೊರೆಯಲ್ಲ ಹರಡುವಂತೆ ಈ ಜಗತ್ತು ಊಹಾತೀತವಾದ ವಿಸ್ತಾರಕ್ಕೆ ಹರಡಿದೆ. ಹೇಗೆ ಬೆಳೆದ ಮರವೂ ಸಹ ತನ್ನ ಅಸ್ತಿತ್ವಕ್ಕೆ ಒಳಗಿನಿಂದ ಮತ್ತು ಹೊರಗಿನಿಂದ ಸಾರ ಹೀರುತ್ತದೆಯೋ ಹಾಗೆಯೇ ಈ ಜಗತ್ತಿನ ಎಲ್ಲವೂ ತನ್ನ ಮೂಲವಾದ ಆ ಪರಮ ಚೇತನದ ಆಧಾರದ ಮೇಲೆ ನಿಂತಿದೆ. ಒಳಗೂ ಅದೇ ಚೇತನ ಹೊರಗೂ ಅದೇ ಚೇತನ. "ಯತಃ ಸರ್ವಾಣಿ ಭೂತಾನಿ ಭವಂತ್ಯಾದಿ ಯುಗಾಗಮೆ" ಎಂದರೆ ಯಾವುದರಿಂದ ಯುಗದ ಆದಿಯಲ್ಲಿ ಎಲ್ಲವೂ ಪ್ರಕಟಗೊಂಡವೋ ಅದೇ ಆ ಬೃಹತ್ ಚೇತನ. ಈ ಜಗತ್ತಿನ ಎಲ್ಲವನ್ನೂ ಒಂದು ಸೂತ್ರದಲ್ಲಿ ಹಿಡಿದಿಟ್ಟಿರುವ ಆ ಬೃಹತ್ ಚೇತನವೇ ಆ ಪರಮ ಶಕ್ತಿ. ಅದನ್ನೇ ಪರಬ್ರಹ್ಮ, ದೇವರು ಪರಮಾತ್ಮ ಎನ್ನುವ ಬೇರೆ ಬೇರೆ ಹೆಸರುಗಳಿಂದ ಕರೆಯುತ್ತೇವೆ.

ಹಾಗಾದರೆ ನಮಗೆಲ್ಲ ಒಂದು ಪ್ರಶ್ನೆ ಇದೆ ಅಲ್ಲವೇ? ಅದು “ನಾವು ಯಾರು” ? ಎಂಬುದು. ನಾವೆಲ್ಲಾ ಒಂದು ರೂಪದಿಂದ ಇನ್ನೊಂದು ರೂಪಕ್ಕೆ ಹೋಗುವ ಆ ಬೃಹತ್ ಚೇತನದ ಒಂದು ಸೂಕ್ಷ್ಮ ಕಣವಷ್ಟೇ!!! ಹಾಲ ಮೇಲಿನ ನೊರೆಯಂತೆ. ಮನಸ್ಸು ಬುದ್ಧಿ ದೇಹಾತ್ಮಗಳ ಒಂದು ಗೂಡು. ಈ ನಾಲ್ಕೂ ಒಂದು ಕಡೆ ಬಂದು ಸೇರಿರುವ ಒಂದು ಮನೆ. ಸೃಷ್ಟಿಯ ಎಲ್ಲಕ್ಕೂ ಇದು ಅನ್ವಯ. ಪ್ರಮಾಣ ಮತ್ತು ಪರಿಮಾಣ ಬೇರೆ ಬೇರೆ ಅಷ್ಟೇ. ಮೇಲೆ ಕೊಂಚ ಅಹಂಕಾರ. ಅದು ನಮ್ಮನ್ನು ಈ ಜಗತ್ತಿನಲ್ಲಿ ಆಡಿಸುತ್ತದೆ. ನಮ್ಮ ಭಾಗಗಳಾದ ದೇಹ ಮನಸ್ಸು ಬುದ್ಧಿ ಮತ್ತು ಆತ್ಮಗಳ ಮೂಲವನ್ನು ಅರಿಯುವುದೇ ಆಧ್ಯಾತ್ಮ. ಆ ಪರಮಾತ್ಮನ ಲೀಲಾ ವಿನೋದವನ್ನು ಅರ್ಥ ಮಾಡಿಕೊಳ್ಳುವುದೇ ಆಧ್ಯಾತ್ಮದ ಗುರಿ.

ವಾಚಕರೆ, ಈ ಜಗತ್ತಿನಲ್ಲಿ ನಡೆಯುವ ಪ್ರತಿಯೊಂದು ವಿದ್ಯಮಾನವೂ ಆ ಬೃಹತ್ ಚೇತನದ ಕಾರಣದಿಂದಲೇ ನಡೆಯುತ್ತದೆ. ಅದು ಹಾಲಾದರೆ ಈ ಜಗತ್ತು ನೊರೆ. ಇದು ಚಿಂತನೆ ಮತ್ತು ಮನನಕ್ಕೆ ಒಂದು ಸೂಕ್ತ ವಿಚಾರ.

**ಮುಕ್ತಕ-76**

**ಬಹುವಾಗಲೆಳಸಿ ತಾನೊಬ್ಬಂಟಿ ಬೊಮ್ಮ ನಿಜ |**
**ಮಹಿಮೆಯಿಂ ಸೃಜಿಸಿ ವಿಶ್ವವನಲ್ಲಿ ನೆಲೆಸಿ ||**
**ವಹಿಸಿ ಜೀವತೆಯ ಮಾಯೆಯ ಸರಸವಿರಸದಲಿ |**
**ವಿಹರಿಪನು ನಿರ್ಲಿಪ್ತ-ಮಂಕುತಿಮ್ಮ ||**

ಬಹುವಾಗಲೆಳಸಿ=ಬಹು+ಆಗಲು+ಎಳಸಿ, ತಾನೊಬ್ಬಂಟಿ=ತಾನು+ಒಬ್ಬಂಟಿ, ವಿಶ್ವವನಲ್ಲಿ ವಿಶ್ವವನು+ಅಲ್ಲಿ, ತಾನೊಬ್ಬಂಟಿ=ಒಬ್ಬನೇ ಇದ್ದವನು, ಬಹುವಾಗಲೆಳಸಿ=ಬಹಳವಾಗಬೇಕೆಂದೆಣಿಸಿ, ಬೊಮ್ಮ=ಪರಬ್ರಹ್ಮ, ನಿಜಮಹಿಮೆಯಿಂ=ತನ್ನ ನಿಜ ಮಹಿಮೆಯಿಂದ, ಸೃಜಿಸಿ=ಸೃಷ್ಟಿಸಿ, ಜೀವತೆಯ=ಜೀವನವ, ಸರಸವಿರಸದಲಿ=ಸರಸ ಮತ್ತು ವಿರಸದಲ್ಲಿ, ವಿಹರಿಪನು ನಿರ್ಲಿಪ್ತ=ತಾನು ನಿರ್ಲಿಪ್ತನಾಗಿ ವಿಹರಿಸುತ್ತಿದ್ದಾನೆ.





ಆ ಮಹಾ ಶಕ್ತಿ ಒಂದೇ ಇತ್ತು. ಅದು ತಾನೇ ಹಲವಾಗಿ ಪ್ರಕಟಗೊಳ್ಳಬೇಕೆಂದು, ತನ್ನ ಸಂಕಲ್ಪದಿಂದ, ತನ್ನದೇ ಆದ ಪರಮ ಶಕ್ತಿಯಿಂದ ಈ ವಿಶ್ವವನ್ನು ಸೃಷ್ಟಿಸಿ, ತನ್ನ ಶಕ್ತಿಯನ್ನು ಪ್ರತಿಯೊಂದರಲ್ಲೂ ಇರಿಸಿ ತನ್ನ ಇರವನ್ನು ನಿಗೂಢವಾಗಿರಿಸಿಕೊಂಡು, ತಾನು ಮಾತ್ರ ನಿರ್ಲಿಪ್ತತೆಯಿಂದ ಈ ಜಗವನ್ನು ನಡೆಸಿಕೊಂಡು ಹೋಗುತ್ತಿದ್ದಾನೆ ಎನ್ನುತ್ತಾರೆ ಈ ಮುಕ್ತಕದಲ್ಲಿ ಮಾನ್ಯ ಗುಂಡಪ್ಪನವರು.

ಒಂದೇ ಇದ್ದ ಆ ಬೃಹತ್ ಚೇತನ ಹಲವಾಗಿ, ಆ ಹಲವು ಬಹಳವಾಗಿ ಪ್ರಕಟಗೊಂಡು, ಬೇರೆ ಬೇರೆ ರೂಪಗಳನ್ನು ಪಡೆದುಕೊಂಡು ಬೇರೆ ಬೇರೆ ಕಾರ್ಯಗಳನ್ನು ವಹಿಸಿಕೊಂಡು ಜಗತ್ತಿನ ಎಲ್ಲ ಚಿತ್ರ ವಿಚಿತ್ರಗಳಲ್ಲೂ ತಾನೇ

ಇದ್ದುಕೊಂಡು ಒಂದು ರೂಪವಿಲ್ಲದೆ ಹಲವಾರು ರೂಪಗಳಿಂದ ಈ ಜಗತ್ತಿನಲ್ಲಿ ಪ್ರಕಟವಾಗಿದೆ ಎಂಬುವುದು ವಿಜ್ಞಾನವೂ ಹೌದು, ವೇದಾಂತವೂ ಹೌದು. ವೇದಾಂತ ಮತ್ತು ವಿಜ್ಞಾನ ಬೇರೆ ಅಲ್ಲ. ಆಧುನಿಕ ವಿಜ್ಞಾನ ಮಾತ್ರ ವೇದಾಂತದ ಜ್ಞಾನಕ್ಕಿಂತ ಬಹಳ ಹಿಂದಿದೆ, ಅಷ್ಟೇ.

ಈ ಪರಮಾತ್ಮನ ಸೃಷ್ಟಿ ಎಷ್ಟು ಅಗಾಧವೆಂದರೆ, ಎಲ್ಲ ಆಯಾಮಗಳನ್ನೂ ನೋಡಲಾಗದೆ, ನಾವು ನೋಡಿದ್ದೇ ಸತ್ಯವೆಂಬ ಭ್ರಮೆಯಲ್ಲಿರುತ್ತೇವೆ, ಅದೇ ಮಾಯೆ, ನಮ್ಮ ದೈನಂದಿನ ಕೆಲಸಗಳಲ್ಲಿ ನಾವು ತೋರುವ ಪ್ರೀತಿ, ಪ್ರೇಮ, ಸ್ನೇಹ, ವೈರ, ದಯೆ, ಕರುಣೆ, ಕೋಪ, ತಾಪ, ಜಾಣೆ ಮುಂತಾದ ಎಲ್ಲ ಭಾವಗಳೂ ಭ್ರಮೆಯಷ್ಟೇ!! ಇಂಥ ಭ್ರಮೆಗೆ ಕಾರಣ ಸತ್ಯದ ಅರಿವಿನ ಅಭಾವ. ಮನುಷ್ಯರಷ್ಟೇ ಅಲ್ಲ ಸಕಲ ಜಗತ್ತು ಈ ಮಾಯೆಯಲ್ಲಿ ನಿಂತಿದೆ. ಅದಕ್ಕೆ ದಾಸರೆಂದರು "ನೀ ಮಾಯೆಯೋ? ನಿನ್ನೊಳು ಮಾಯೆಯೋ?" ಎಂದು. ಆ ಪರಮ ಪುರುಷನನ್ನು ಅರಿಯಲು ಮಾಯೆಯ ಪರದೆ ಅಡ್ಡ. ಈ ಮಾಯೆಯನ್ನು ಅರಿಯಲು ಅಹಂಕಾರದ ಪರದೆ ಅಡ್ಡ, ಪರದೆ ಸುಲಭವಾಗಿ ಸರಿಸಲು ಆಗುವುದಿಲ್ಲ. ಅದಕ್ಕೆ ಸಾಧನೆ ಬೇಕು, ಕಷ್ಟಪಟ್ಟು ಸರಿಸಬೇಕು. ಮತ್ತೆ ಮತ್ತೆ ಹಿಂದಕ್ಕೆ ಬರುವ ಈ ಪರದೆ ಬಹಳ ಗಟ್ಟಿ. ನಾವು ಅದಕ್ಕಿಂತ ಗಟ್ಟಿಯಾದರೆ, ಪರದೆ ಸರಿಯುತ್ತದೆ. ಪರದೆ ಸರಿದರೆ ಸತ್ಯದರ್ಶನ.

ಹಾಗಾದರೆ, "ಈ ಪರಮಾತ್ಮ ಇದನ್ನೆಲ್ಲ ಏಕೆ ಸೃಷ್ಟಿ ಮಾಡಿದ? ಅವನಿಗೇನು ಮಾಡೋಕೆ ಬೇರೆ ಕೆಲಸ ಇರಲಿಲ್ಲವೇ? ಸೃಷ್ಟಿ ಮಾಡಿ ನಮಗೆಲ್ಲ ಈ ಕೆಲಸಕ್ಕೆ ಬಾರದ ಭಾವನೆಗಳನ್ನು ಕೊಟ್ಟು, ಮಾಯೆ ಎಂಬ ಪರದೆಯನ್ನೂ ಇಟ್ಟು, "ಸಾಧ್ಯವಾದರೆ ಸರಿಸಿಕೊಂಡು ಬನ್ನಿ" ಅಂತ ನಮ್ಮನ್ನೆಲ್ಲ ನಮ್ಮ ಪಾಡಿಗೆ ಬಿಟ್ಟು ನಿರ್ಲಿಪ್ತನಾಗಿ ಏಕೆ ಕುಳಿತಿದ್ದಾನೆ?" ಎಂದರೆ, ಇದು ಅವನ "ಲೀಲಾ ವಿನೋದ ಹಾಗೆ ನಮ್ಮ ಮನಸ್ಸಿಗೆ ಬರುವುದಕ್ಕೆ ಕಾರಣ ಇಲ್ಲಿ "ನಾವು" ಇದ್ದೇವೆ ಎಂದುಕೊಂಡರೆ ಮಾತ್ರ ಎಲ್ಲವೂ ಅವನೇ ಎಂದಾಗ ಆ ಪ್ರಶ್ನೆ ಉದ್ಭವವಾಗುವುದಿಲ್ಲ. "ಈಶಾವಾಸ್ಯಮಿದಂ ಸರ್ವಂ ಯಂಚಿತ್ ಜಗತ್ಯಾಂ ಜಗತ್" ಎಂದು ಈಶಾವಾಸ್ಯ ಉಪನಿಷತ್ತು ಹೇಳುವಂತೆ ಎಲ್ಲವೂ ಆ ಪರಮಾತ್ಮನೇ. ಚಿಕ್ಕದು, ದೊಡ್ಡದು, ಕಾಣುವುದು, ಕಾಣದ್ದು, ಗಿಡ, ಮರ, ಬೆಟ್ಟ ಗುಡ್ಡ, ಆಕಾಶ, ನದಿ, ಗ್ರಹಗಳು, ನಕ್ಷತ್ರಗಳು, ಪ್ರಾಣಿಗಳು, ಪಕ್ಷಿಗಳು ಹೀಗೆ ನಾವೇನೇನು ಕಾಣುತ್ತೇವೆಯೋ, ಊಹಿಸಿಕೊಳ್ಳುತ್ತೇವೆಯೋ, ನಾವು ಏನು ಕಾಣಲಾರೆವೋ, ಯಾವುದನ್ನು ಊಹಿಸಿಕೊಳ್ಳಲೂ ಸಾಧ್ಯವಿಲ್ಲವೋ, ಅದೆಲ್ಲವೂ ಆ ಬೃಹತ್ ಚೇತನವೇ ಆಗಿದೆ.

ಹಾಗಾಗಿ ವಾಚಕರೆ, ನೋಡಿ, ಯೋಚಿಸಿ, ಊಹಿಸಿ, ಅನುಭವಿಸಿ ಈ ಜಗತ್ತು ಸತ್ಯವೋ, ನಮ್ಮ ಇರವು ಸತ್ಯವೋ ಎಂದು ಅರಿತು, ಸತ್ಯವಾವುದು ಎಂದು ಅರಿಯಲು ನಾವು ಪ್ರಯತ್ನ ಪಡೋಣ. ನಿರಂತರ ಪ್ರಯತ್ನದಿಂದ ನಮಗೆ ಅದರ ಅರಿವು ಮೂಡಬಹುದು.

**ಮುಕ್ತಕ-77**

**ತನ್ನ ಹೊಳಹೊಳಪುಗಳ ನೆನೆನೆನೆದು ಮೈಮರೆತ |**
**ರನ್ನವೋ ಬ್ರಹ್ಮ; ನೋಡವನು-ನಿಜಪಿಂಛ ||**
**ವರ್ಣದೆಣಿಕೆಯಲ್ಲಿ ತನ್ನನೆ ಮರೆತ ನವಿಲಿನೊಲು |**
**ತನ್ಮಯನೋ ಸೃಷ್ಟಿಯಲಿ-ಮಂಕುತಿಮ್ಮ ||**

ವರ್ಣದೆಣಿಕೆಯಲಿ=ವರ್ಣದ+ಎಣಿಕೆಯಲಿ, ನವಿಲಿನೊಲು=ನವಿಲಿನ+ಒಲು.

ನಿಜಪಿಂಛ=ನೈಜ ಬಣ್ಣಗಳ ನವಿಲುಗರಿ, ವರ್ಣದೆಣಿಕೆಯಲಿ=ಬಣ್ಣಗಳ ಎಣಿಕೆಯಲಿ, ನವಿಲಿನೊಲು=ನವಿಲಿನಂತೆ.

ತನ್ನ ಹೊಳಹೊಳಪುಗಳ ತಾನೇ ನೆನೆನೆನೆದು ಮೈ ಮರೆತಂತ ರತ್ನವೋ ಆ ಬ್ರಹ್ಮ. ಅಲ್ಲಿ ನೋಡು ಅವನು ಒಂದು ನವಿಲು. ತನ್ನ ಗರಿಗಳನ್ನೆಲ್ಲ ಕೆದರಿ ನೃತ್ಯ ಮಾಡುವಾಗ ತನ್ನ ಗರಿಗಳ ಬಣ್ಣಗಳನ್ನು ಕಂಡು ತಾನೇ ತನ್ಮಯವಾಗುವಂತೆ, ಪರಮಾತ್ಮ ಇಡೀ ಜಗತ್ತನ್ನು ಸೃಷ್ಟಿಸಿ ಅದಕ್ಕೆ ಜಡವೆಂಬ ರೂಪ ಕೊಟ್ಟು, ಆ ಜಡದೊಳಗೆ ಚೇತನವಾಗಿ ತಾನೇ ಪ್ರವೇಶಿಸಿ ಆಯಾಯ ಜಡಗಳ ಗುಣಗಳನ್ನು ತಾನೂ ಅನುಭವಿಸುತ್ತಾ ಇರುವ ಆ ಪರಮಾತ್ಮನು ತಾನೇ ಮಗ್ನನೋ? ಎನ್ನುವ ಪ್ರಶ್ನೆ ಕೇಳುತ್ತಾರೆ ಮಾನ್ಯ ಗುಂಡಪ್ಪನವರು.

ವಾಚಕರೆ ನೋಡಿ ನಾವು ನಮ್ಮ ದೇಹದ ಭಾಗಗಳನ್ನು ಹೇಗೆ ಹೇಳುತ್ತೇವೆ ಎಂದು. “ನನ್ನ ಕೈ” ನನ್ನ ಕಾಲು “ನನ್ನ ತಲೆ” ನನ್ನ ಮನಸ್ಸು” ನನ್ನ ಬುದ್ಧಿ ಹೀಗೆ ಎಲ್ಲಕ್ಕೂ “ನನ್ನ” ಎಂದು ಸೇರಿಸುತ್ತೇವೆ. ನಮ್ಮಲಿರುವ ಒಂದು ಪುಸ್ತಕಕ್ಕೂ “ನನ್ನ ಪುಸ್ತಕ” ಎನ್ನುತ್ತೇವೆ. ನಾನು ಪುಸ್ತಕವನ್ನು ಹೊಂದಿದ್ದೇನೆ ಆದ್ದರಿಂದ “ನನ್ನ ಪುಸ್ತಕ” ಹಾಗೆಯೇ “ಕೈ, ಕಾಲು, ಮೈ, ತಲೆ, ಮನಸ್ಸು, ಬುದ್ಧಿಗಳನ್ನು ನಾನು ಹೊಂದಿದ್ದೇನೆ ಆದ್ದರಿಂದ “ನನ್ನ” ಎನ್ನುತ್ತೇವೆ. ಹಾಗಾದರೆ ಇವನ್ನೆಲ್ಲ ಹೊಂದಿರುವ ಆ “ನಾನು” ಯಾರು ಎಂದರೆ, ಅದೇ ಬೃಹತ್ ಚೇತನದ ಒಂದು ಅಂಶ. ಅಂದರೆ ಆ ಬೃಹತ್ ಚೇತನವೇ ಇವನ್ನೆಲ್ಲ ಹೊಂದಿ “ನನ್ನದು ನನ್ನದು” ಎಂದು ಹೇಳುತ್ತಾ ಅದರಿಂದ ಉಂಟಾಗಬಹುದಾದ ನೋವು ನಲಿವು ಆನಂದ ದುಃಖಗಳಂಥಾ ಅನುಭವಗಳನ್ನು ಅನುಭವಿಸುತ್ತಾ ಈ ಸೃಷ್ಟಿಯಲ್ಲೇ ಮಗ್ನವಾಗಿದೆ.

ಆ ಬೃಹತ್ ಚೇತನವನ್ನು ನಮ್ಮ ಶಿವನಸಮುದ್ರದಲ್ಲಿ ಉಂಟಾಗುವ ವಿದ್ಯುತ್ತಿಗೆ ಹೋಲಿಸಿದರೆ, ನಮ್ಮನ್ನು ನಾವು ನಮ್ಮ ಮನೆಗಳಲ್ಲಿ ಬೆಳಗುವ ಒಂದು ಸಣ್ಣ ಬಟ್ಟಿಗೆ ಹೋಲಿಸಿಕೊಳ್ಳಬಹುದು. ಇಲ್ಲಿ ಬೆಳಗುವುದು ಯಾವುದೆಂದರೆ ಅಲ್ಲಿನ ವಿದ್ಯುತ್, ಆದರೆ ಅದು ಬೆಳಗಲು ಸಾಧನ ಈ ಸಣ್ಣ ಬಲ್ಬ. ಇಡೀ ದೇಶದಲ್ಲಿ ಬೆಳಗುವ ಮತ್ತು ಕೆಲಸ ಮಾಡುವ ಎಲ್ಲ ವಿದ್ಯುತ್ ಉಪಕರಣಗಳಿಗೂ ಆ ವಿದ್ಯುತ್ತಿನ ಮೂಲ ಒಂದೇ.





ಹಾಗೆಯೇ ಈ ಸೃಷ್ಟಿಯಲ್ಲಿ ನಾವೆಲ್ಲಾ ಒಂದೊಂದು ಬಲ್ಬುಗಳು. ನಮ್ಮಲ್ಲಿ ಬೆಳಗುವ ಚೇತನವೂ ಸಹ ಆ ಪರಮ ಚೇತನದ ಒಂದಂಶ.

ಇಲ್ಲಿ "ನಾನು" ಎನ್ನುವ ಭಾವ ಇದೆ. ಹಾಗಾಗಿ ನಾನು ನೋಡುತ್ತೇನೆ, ಮಾಡುತ್ತೇನೆ, ಓದುತ್ತೇನೆ, ಓಡುತ್ತೇನೆ. ಇತ್ಯಾದಿಗಳ ಪ್ರಯೋಗ ಮಾಡುತ್ತೇವೆ. ಎಂದು "ನಾನು" ಎನ್ನುವ ಭಾವವಿಲ್ಲವೋ ಅಂದು ನಾವೂ ಸಹ ಆ ಬೃಹತ್ ಚೇತನದ ರೀತಿಯೇ ಇಲ್ಲಿ ಆನಂದದಿಂದ ಮಗ್ನರಾಗಿರಬಹುದು. ಎರಡೆಂದುಕೊಂಡರೆ ಭೇದ ಮತ್ತು ಅದಕ್ಕೆ ಅನ್ವಯಿಸುವ ಭಾವ. ಒಂದೇ ಆದರೆ ಭೇದವಿಲ್ಲ. ನವಿಲು ತನ್ನ ಮೈಮೇಲಿನ ಗರಿಗಳ ವಿವಿಧ ಬಣ್ಣಗಳನ್ನು ಕಂಡು ಆನಂದದಿಂದ ಮಗ್ನವಾಗಿ ಹೇಗೆ ನಾಟ್ಯ ಮಾಡುತ್ತದೋ ಹಾಗೆಯೇ ಆ ಪರಮಾತ್ಮ ತನ್ನಿಂದ ಆದ, ತಾನೇ ಇರುವ ಈ ಜಗತ್ತಿನ ಎಲ್ಲದರೊಳಗೂ ಇದ್ದು ಆ ಎಲ್ಲ ವಸ್ತುಗಳಲ್ಲಿ ಉಂಟಾಗುವ ಎಲ್ಲ ಭಾವಗಳನ್ನೂ ತಾನೇ ಅನುಭವಿಸುತ್ತಾ ಮತ್ತನಾಗಿ, ತನ್ಮಯನಾಗಿ ಆನಂದದಿಂದ ಇದ್ದಾನೆ ಎನ್ನುವುದೇ ಈ ಮುಕ್ತಕದ ಹೂರಣ.

ನಾನು, ನಾನು ಅನುಭವಿಸುತ್ತಿದ್ದೇನೆ ಎಂದು ಭಾವಿಸದೆ, ಎಲ್ಲವೂ ಆ ಪರಮಾತ್ಮನಿಗೆ ಸೇರಿದ್ದು ಎನ್ನುವ ಭಾವ ತಳೆದಾಗ, ನಮ್ಮಲ್ಲಿರುವ ಅಹಂಕಾರವೂ ಕಡಿಮೆಯಾಗಬಹುದು ಅಲ್ಲವೇ ವಾಚಕರೆ?

**ಮುಕ್ತಕ-78**

**ತರುಣಿ ತನ್ನೊಡವೆಗಳ ತಳೆಯುತ್ತ ತೆಗೆಯುತ್ತ |**
**ಪರಿಕಿಸುತೆ ಮುಕುರದಲ್ಲಿ ಸೊಗಸುಗಳ ಪರಿಯ ||**
**ಮರೆತೆಲ್ಲವನು ವಿಲಸಿಪಂತೆ ತಾಂ ವಿಶ್ವದಲಿ |**
**ಮೆರೆಯುವನು ಪರಬೊಮ್ಮ-ಮಂಕುತಿಮ್ಮ ||**

ತನ್ನೊಡವೆಗಳ=ತನ್ನ+ಒಡವೆಗಳ, ಮರೆತೆಲ್ಲವನು=ಮರೆತು+ಎಲ್ಲವನು, ವಿಲಸಿಪಂತೆ=ವಿಲಸಿಪ+ಅಂತೆ. ತಳೆಯುತ್ತ=ಧರಿಸುತ್ತ, ಪರಿಕಿಸುತೆ-ಪರೀಕ್ಷಿಸುತ್ತಾ, ಮುಕುರದಲಿ=ಕನ್ನಡಿಯಲಿ, ಸೊಗಸುಗಳ=ಅಂದ ಚೆಂದಗಳ, ಪರಿಯ=ವಿಧಗಳನ್ನು, ವಿಲಸಿಪಂತೆ=ವಿಲಾಸದಿಂದ

ಒಂದು ಹೆಣ್ಣು ಹೇಗೆ ತೊಟ್ಟ ಒಡವೆಗಳನ್ನು ತೆಗೆದು ಮತ್ತೆ ತೊಟ್ಟು ಕನ್ನಡಿಯಲಿ ತನ್ನ ಅಂದ ಚೆಂದವನ್ನು ನೋಡಿಕೊಳ್ಳುತ್ತಾ ಮೈ ಮರೆಯುತ್ತಾಳೋ, ಹಾಗೆ ತಾನೆ ಸೃಜಿಸಿದ ಈ ಜಗತ್ತಿನಲ್ಲಿ ಬೇರೆ ಬೇರೆ ದೇಹಗಳನ್ನು ಧರಿಸಿ ಅದರಲ್ಲಿ ಸಿಗುವ ಹತ್ತು ಹಲವಾರು ಭಾವನೆಗಳನ್ನು ಆನಂದದಿಂದ ಅನುಭವಿಸುತ್ತಾ ಮೈ ಮರೆತಿದ್ದಾನೋ ಏನೋ ಎನ್ನುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಸಾಮಾನ್ಯ ತಿಳುವಳಿಕೆ ಏನೆಂದರೆ ಎಲ್ಲ ಪ್ರಾಣಿಗಳೂ ಹುಟ್ಟುತ್ತವೆ. ಕೆಲಕಾಲ ಬದುಕಿ ಸಾಯುತ್ತವೆ ಎಂದು. ಆದರೆ ವಾಸ್ತವಿಕತೆಯೇ ಬೇರೆ ಅಲ್ಲವೇ? ಹುಟ್ಟು ಸಾವುಗಳೆಂಬುದು ಕೇವಲ ನಮ್ಮ ಪರಿಭಾಷೆಗಳಷ್ಟೇ ಎಂದು ಅನಿಸುತ್ತದೆ. ಇದನ್ನು ರೂಪಾಂತರವೆಂದರೆ ಹೆಚ್ಚು ಸೂಕ್ತವೆಂದು ಅನಿಸುತ್ತದೆ. ಬೇರೆ ಬೇರೆ ಮೂಲಗಳಿಂದ ಬಂದ ದೇಹ ಮನಸ್ಸು ಬುದ್ಧಿ ಆತ್ಮಗಳು ಒಂದಾದಾಗ ಒಂದು ಪ್ರಾಣಿಯ ಆವಿರ್ಭಾವ ಗಿಡ ಮರಗಳಿಗೂ ಇದು ಅನ್ವಯಿಸುತ್ತದೆ. ಆ ಎಲ್ಲ ರೂಪಗಳಿಗೂ ಮೂಲ ಒಂದೇ.





ಹಾಗಾಗಿ ಒಂದೇ ಬೃಹತ್ ಚೇತನ ತನ್ನ ಮೂಲದಲ್ಲಿ ಇದ್ದುಕೊಂಡು ತಾನು ಬೇರೆ ಬೇರೆ ರೂಪಗಳಿಗೆ ಹೊಂದುವಂತೆ ತನ್ನನ್ನು ತಾನು ತನ್ನ ಮೂಲ ಗುಣವನ್ನು ಬಿಡದೆ, ಬದಲಾಯಿಸಿಕೊಳ್ಳುತ್ತಾ, ರೂಪಾಂತರಗೊಳ್ಳುತ್ತಾ, ಎಲ್ಲ ರೂಪಗಳಲ್ಲೂ ತಾನಿದ್ದುಕೊಂಡು ಎಲ್ಲ ರೂಪಗಳಲ್ಲಿ ಆಗಬಹುದಾದ ಅನುಭವ, ಆನಂದ ಮುಂತಾದ ಎಲ್ಲ ಭಾವಗಳನ್ನೂ ಅನುಭವಿಸುತ್ತಾ ಆನಂದದಿಂದ ತನ್ಮಯವಾಗಿದೆ. ಇದನ್ನು ಅರಿಯದೆ ನಾವು “ನಾನು

ಸುಖವಾಗಿದ್ದೇನೆ" "ನನಗೆ ದುಃಖವಾಗಿದೆ" "ನನಗೆ ನೋವಾಗುತ್ತದೆ" ಎಂದು ಹೇಳುತ್ತಾ ಅಪ್ರಬುದ್ಧ ಭಾವದಿಂದ ಮಾತನಾಡುತ್ತೇವೆ.

"ಸ ಏಕಾಕೀ ನ ರಮತ" ಅವನು ಒಬ್ಬನೇ ಇದ್ದ. ಬೇಜಾರಾಯಿತೋ ಏನೋ ಈ ಜಗತ್ತನ್ನು ಸೃಷ್ಟಿಸಿದ. ತನ್ನ ಶಕ್ತಿಯಿಂದಲೇ ಇದನ್ನು ಸೃಷ್ಟಿಸಿದ. ಈ ಜಗತ್ತಿನಲ್ಲಿರುವ ಎಲ್ಲದರಲ್ಲೂ ಚೇತನಾ ಸ್ವರೂಪದಲ್ಲಿ ಸೇರಿ ಆಯಾಯ ವಸ್ತುಗಳನ್ನು ಅನುಭವಿಸುತ್ತಾ ಆನಂದದಿಂದ ಇದ್ದಾನೆ. ಎಲ್ಲವೂ ಅವನಿಂದಲೇ. ಎಲ್ಲವೂ ಅವನೇ. ಎಲ್ಲವೂ ಅವನಿಗಾಗಿಯೇ ಎಂದು ನಾವು ಯೋಚಿಸಿದಾಗ, ನಾವೂ ಸಹ ಆ ಬೃಹತ್ ರೂಪದ ಒಂದು ಅಂಶವೆಂದುಕೊಂಡಾಗ, ವಸ್ತು, ವ್ಯಕ್ತಿ ವಿಷಯ ಸಂಬಂಧವಾದ ಭಾವನೆಗಳು ನಶಿಸಿ ಅವುಗಳ ಬಗ್ಗೆ ಒಂದು ನಿರ್ಲಿಪ್ತತೆ ಬೆಳೆದಾಗ, ಮನಸ್ಸು ನಿರ್ಮಲವಾಗಿ, ಆನಂದವಾಗಿರಬಹುದು.

# ವಿಶ್ವಲೀಲೆ 79-83

**ಮುಕ್ತಕ-79**

**ಬರೆವ ಹಲಗೆಯನೊಡೆದು ಬಾಲಕನು ತಾನದನು |**
**ಮರಳಿ ಜೋಡಿಪೆವೆನ್ನುತಾಯಾಸಗೊಳುತ ||**
**ಸರಿ ಚೌಕಗೈವಾಟದಲಿ ಜಗವ ಮರೆವಂತೆ |**
**ಪರಬೊಮ್ಮ ಸೃಷ್ಟಿಯಲಿ-ಮಂಕುತಿಮ್ಮ ||**

ಹಲಗೆಯನೊಡೆದು=ಹಲಗೆಯನು+ಒಡೆದು, ಚೌಕಗೈವಾಟದಲಿ=ಚೌಕ+ಗೈವ+ಆಟದಲಿ,
ಜೋಡಿಪೆವೆನ್ನುತಾಯಾಸಗೊಳುತ=ಜೋಡಿಸುವೆ+ಎನ್ನುತ+ಆಯಾಸಗೊಳುತ,
ಬರೆವ ಹಲಗೆ-ಹಿಂದಿನ ಕಾಲದಲ್ಲಿ ಬರೆಯಲು ಉಪಯೋಗಿಸುತ್ತಿದ್ದ ಸ್ಲೇಟು.

ಹಿಂದಿನ ಕಾಲದಲ್ಲಿ ಮಕ್ಕಳು ಬಳಪದಿಂದ ಬರೆಯಲು ಉಪಯೋಗಿಸುತ್ತಿದ್ದ ಸ್ಲೇಟು ಒಂದು ರೀತಿಯ ಮೃದು ಕಲ್ಲಿನ ಹಲಗೆಯಾಗಿರುತ್ತಿತ್ತು. ಅದಕ್ಕೆ ಮೃದು ಮರದ ಚೌಕಟ್ಟಿರುತ್ತಿತ್ತು. ಅಕಸ್ಮಾತ್ ಅದು ಕೆಳಗೆ ಬಿದ್ದು ಒಡೆದು ಹೋದರೆ ಮತ್ತೆ ಅಂಟಿಸಲಾಗುತ್ತಿರಲಿಲ್ಲ. ಹಾಗೆ ಒಡೆದ ಹಲಗೆಯನ್ನು ಅಂಟಿಸಲು ಪ್ರಯತ್ನಪಟ್ಟು ಆಯಾಸಪಡುವ ಮಗುವಿನಂತೆ, ಆ ಪರಮಾತ್ಮನೂ ಸಹ ಒಂದೇ ಆಗಿದ್ದ ತಾನು ಹಲವಾಗಿ, ಅದನ್ನೆಲ್ಲ ಮತ್ತೆ ಒಟ್ಟಿಗೆ ಅಂಟಿಸಲು

ಮಾಡುವ ಪ್ರಯತ್ನದಲ್ಲಿ ತಲ್ಲೀನನಾಗಿದ್ದಾನೋ ಎಂದು ಒಂದು ವಿಚಾರವನ್ನು ಪ್ರಸ್ತಾಪ ಮಾಡುತ್ತಾರೆ ಈ ಮುಕ್ತಕದಲ್ಲಿ ಮಾನ್ಯ ಗುಂಡಪ್ಪನವರು.

| 119 |
|---|

| ವಿಶ್ವಲೀಲೆ 79-83 | ಕಗ್ಗರಸಧಾರೆ |
|---|---|

ಒಂದೇ ಆಗಿದ್ದ ಆ ಪರಮ ವಸ್ತುವು ತನ್ನ ಸಂಕಲ್ಪದಿಂದಲೇ ಸಿಡಿದು ಬಹಳವಾಗಿ, ಆಕಾಶ ಗಂಗೆಗಳು, ನಕ್ಷತ್ರ ಪುಂಜಗಳು, ಸೌರವ್ಯೂಹಗಳು ಗಾಳಿ, ನೀರು, ಭೂಮಿ, ಇತರೆ ಗ್ರಹಗಳು, ಈ ಗ್ರಹಗಳ ಮೇಲಿನ ಕೋಟ್ಯಾಂತರ ವೈವಿಧ್ಯತೆಗಳು, ಹೀಗೆ ನಮಗೆ ಕಾಣುವ, ನಾವು ಅನುಭವಿಸಬಹುದಾದ, ಊಹಿಸಬಹುದಾದ ಮತ್ತು ಊಹಿಸಲೂ ಅಸಾಧ್ಯವಾದ ಇಡೀ ಜಗತ್ತಾಗಿ ಮಾಡಿ, ತಾನೇ ಅದರೊಳಗೆ ಚೈತನ್ಯ ರೂಪದಲ್ಲಿ ಪ್ರಕಟಗೊಂಡು ಕ್ಷಣ ಕ್ಷಣಕ್ಕೂ ಸೃಷ್ಟಿ ಸ್ಥಿತಿ ಲಯಗಳೆಂಬ ಪ್ರಕ್ರಿಯೆಯನ್ನಿಟ್ಟು ಎಲ್ಲಕ್ಕೂ ಒಂದು ನಿಗದಿತ ಸಮಯವನ್ನಿಟ್ಟು, ಇಡೀ ಜಗತ್ತೇ ನಮಗೆ ಬೇರೆ ಬೇರೆಯಾಗಿ ಕಾಣುವಂತೆ ಮಾಡಿದ್ದಾನೆ. ಬಾಲಕನು ಒಡೆದ ಬರೆಯುವ ಹಲಗೆಯನ್ನು ಜೋಡಿಸಲು ಪ್ರಯತ್ನಪಡುವುದರಲ್ಲಿ ತಲ್ಲೀನನಾದಂತೆ, ಬೇರೆ ಬೇರೆಯಾಗಿರುವ ಅಥವಾ ಬೇರೆ ಬೇರೆಯಾಗಿ ಕಾಣುವ, ಒಡೆದ ಹಲಗೆಯಂತೆ ಇರುವ ಈ ಜಗತ್ತಿನ ಹಲಗೆಯನ್ನು, ತಾನೂ ಜೋಡಿಸಲು ಪ್ರಯತ್ನಪಡುತ್ತಾ ತನ್ಮಯನಾಗಿದ್ದಾನೋ ಈ ಪರಮಾತ್ಮ ಎಂದು ಒಂದು ಸಂದೇಹವನ್ನು ವ್ಯಕ್ತಪಡಿಸುತ್ತಾರೆ ಶ್ರೀ ಡಿ.ವಿ.ಜಿ. ಯವರು.

ಅವನ ಸೃಷ್ಟಿಯಲ್ಲಿ ಒಡಕಿಲ್ಲ. ಎಲ್ಲವೂ ಸಮರ್ಪಕವಾಗಿಯೇ ಇದೆ. "ಪೂರ್ಣಮದಃ ಪೂರ್ಣಮಿದಂ ಪೂರ್ಣಾತ್ ಪೂರ್ಣಮುದಚ್ಯತೇ, ಪೂರ್ಣಸ್ಯ ಪೂರ್ಣಮಾದಾಯ ಪೂರ್ಣಮೇವಾವಶಿಷ್ಯತೆ" ಎನ್ನುತ್ತದೆ ಈಶಾವಾಸ್ಕೋಪನಿಷತ್ತಿನ ಶಾಂತಿ ಮಂತ್ರ, ಪರಮಾತ್ಮ ಸೃಷ್ಟಿಯ ಪರಿಪೂರ್ಣತ್ವವನ್ನು ಸಾರಿ ಸಾರಿ ಹೇಳುತ್ತದೆ. ಆದರೆ ಒಡೆದಿರುವುದು ಏನು! ನಾವುಗಳು ಅದನ್ನು ನೋಡುವ ಪರಿ ಅಥವಾ ಬಗೆ, ಮಾನವನ ಅಲ್ಪ ಬುದ್ಧಿಯಿಂದ ಅತೀ ಸುಂದರವಾದ ಈ ಪ್ರಪಂಚವನ್ನು ಪ್ರಗತಿಯ ಹೆಸರಿನಲ್ಲಿ ಜಾತಿ, ಮತ, ಭಾಷೆ, ಧರ್ಮಗಳ ಹೆಸರಿನಲ್ಲಿ ಒಡೆದೊಡೆದು ಚೂರು ಚೂರು ಮಾಡಿದ್ದಾನೆ. ಎಲ್ಲಿ ನೋಡಿದರೂ ಜಗಳ, ಕಿತ್ತಾಟ, ದುರ್ಮಾರ್ಗ ಇವೆಲ್ಲವುಗಳಿಂದ ಚೂರಾಗಿದೆ ಈ ಜಗತ್ತು.

ಇನ್ನು ಮನುಷ್ಯನ ಆಂತರ್ಯವನ್ನು ನೋಡಿದರೆ, ಅದೂ ಸಹ, ಸಂಶಯಗಳಿಂದ, ಪಕ್ಷಪಾತದಿಂದ, ದ್ವೇಷದಿಂದ, ಅಹಂಕಾರದಿಂದ, ದುರಾಸೆಯಿಂದ ಇಂದು ಚೂರು ಚೂರಾಗಿದೆ. ಮನುಷ್ಯನ ಮನಸ್ಸಿನಲ್ಲಿ ಒಂದು ಸುಮುಖವಾದ, ಸರ್ವಹಿತ ಹೇತುವಾದ ಆಲೋಚನೆ ಇಲ್ಲವೇ ಇಲ್ಲ. "ಕ್ಷಣಂ ಚಿತ್ತಂ, ಕ್ಷಣಂ ಪಿತ್ತಂ" ಎನ್ನುವಂತೆ ಸ್ಥಿಮಿತವೆ ಇಲ್ಲದೆ, ಅವನ ಶಾಂತಿಯೂ ಭಗ್ನವಾಗಿದೆ. ಇಂತಹ ಅಶಾಂತ ಮನಸ್ಸು ಪರರ ಶಾಂತಿಯನ್ನೂ ನಿರಂತರ ಕದಡುತ್ತಲೇ ಇರುತ್ತದೆ.

ಆ ಪರಮ ಚೇತನ ಹಲವಾರು ಬಾರಿ ತನ್ನ ಇರವನ್ನು ಸೂಕ್ಷ್ಮ ರೂಪದಲ್ಲಿ ತೋರಿ, ಅರಿತುಕೊಳ್ಳುವ ಸಂದರ್ಭಗಳನ್ನು ತಂದೊಡ್ಡಿ, ಮಾನವನಿಗೆ ಅರಿತುಕೊಳ್ಳಲು ಯೋಗ್ಯ ಅವಕಾಶವನ್ನು ನೀಡಿದೆ, ನೀಡುತ್ತಿದೆ ಮತ್ತು ನೀಡುತ್ತಲೇ ಇರುತ್ತದೆ. ಕೇವಲ ಮೂರ್ಖತನದಿಂದ ಮಾನವ ಕಲಿಯುವುದಿಲ್ಲ. ಒಡೆದ ಈ ಜಗತ್ತಿನ ಜಾತಿ ಮತ ಧರ್ಮ ಭಾಷೆಗಳೆಂಬ ಚೂರುಗಳನ್ನೆಲ್ಲ ಒಂದಾಗಿಸಿ ಈ ಜಗತ್ತು ನಮಗೆ ಪರಮಾತ್ಮ ಕೊಟ್ಟ ಒಂದು ಪರಿಪೂರ್ಣ ತಾಣ, ಇದನ್ನು ಭಗ್ನಮಾಡಿದರೆ ನಮಗೆ ಉಳಿಗಾಲವಿಲ್ಲ ಎಂದು ಅರಿತು ಬಾಳಿದರೆ ಸುಖ ಇಲ್ಲದಿದ್ದರೆ ನಾಶ.





**ಮುಕ್ತಕ-80**

**ಚೇಟಿಯಾಟದ ಬಿನದಿ ತಾನೋರ್ವನಿರ್ವರವೋಲ್ ।**
**ಆಟವಾಡುತಲಿ ತನ್ನೊರ್ತನವ ಮರೆವಾ ॥**
**ಮಾಟದಲಿ ಬೊಮ್ಮನುಂ ತನ್ನೇಕತೆಯ ಜೀವ ।**
**ಪಾಟಿಯಲಿ ಮರೆತಿಹನು-ಮಂಕುತಿಮ್ಮ ॥**

ತಾನೋರ್ವನಿರ್ವರವೊಲ್=ತಾನು+ಓರ್ವನು+ಇರ್ವರ+ಒಲ್, ತನ್ನೊರ್ತನವ=ತನ್ನೊರ್+ತನವ, ತನ್ನೇಕತೆಯ=ತನ್ನ+ಏಕತೆಯ.

ಚೇಟಿಯಾಟ=ಇಸ್ಪೀಟಾಟ, ಬಿನದಿ=ತರಹೆ, ತಾನೋರ್ವ=ತಾನು ಒಬ್ಬನೇ, ಇರ್ವರೋಲ್=ಇಬ್ಬರಂತೆ, ತನ್ನೊರ್ತನವ ತನ್ನ ಒಂಟಿತನವ, ಮರೆವಾ ಮಾಟದಲಿ=ಮರೆವ ರೀತಿಯಲಿ, ಬೊಮ್ಮನುಂ=ಬ್ರಹ್ಮನು, ತನ್ನೇಕತೆಯ=ಒಂಟಿಯಾಗಿ, ಜೀವ ಪಾಟಿಯಲಿ=ಜೀವರಾಶಿಗಳ ಮಧ್ಯೆ.

ನಮ್ಮ ಅಪ್ಪನ ಕಾಲಕ್ಕೆ ಹಲ ದೊಡ್ಡವರು ಇಸ್ಪೀಟಿನ ಒಂದು ಬಗೆಯ ಆಟವಾಡುತ್ತಿದ್ದರು. ಅದಕ್ಕೆ ಪೇಶೆನ್ಸ್ ಅಥವಾ ಸಾಲಿಟೇರ್ ಎಂದು ಕರೆಯುತ್ತಿದ್ದರು. ಒಬ್ಬರೇ ಕುಳಿತು ಆಡುವಾಟ, ಇನ್ನೊಂದು ರಮ್ಮಿ. ಅದರಲ್ಲಿ ಒಬ್ಬರಿಗಿಂತ ಹೆಚ್ಚು ಜನ ಆಡುವುದು. ಆದರೆ ಕೆಲವರು ವಯಸ್ಸಾದವರು, ಕಾಲಯಾಪನೆಗೆ ಎರಡೂ ಕಡೆಯ ಆಟವನ್ನು ಒಬ್ಬರೇ ಆಡುತ್ತಿದ್ದರು. ಹಾಗೆ ಆಡುವಾಗ ಒಬ್ಬರೇ ಮೈ ಮರೆಯುತ್ತಿದ್ದರು. ಆ ರೀತಿ "ತಾನೇ ಸೃಷ್ಟಿಸಿದ ಈ ಜಗತ್ತಿನಲ್ಲಿ ತಾನು ಮತ್ತೆಲ್ಲದರೊಳಗೆ ಸೇರಿ ತಾನೂ ಈ ಜಗತ್ತನ್ನು ಅನುಭವಿಸುತ್ತ ಮೈ ಮರೆತಿದ್ದಾನೋ ಆ ಪರಮಾತ್ಮ" ಎಂದು ಪ್ರಸ್ತಾಪಿಸುತ್ತಾರೆ ಮಾನ್ಯ ಗುಂಡಪ್ಪನವರು.

ಹಾಗೆ, ತಾನೇ ಜಗವೆಲ್ಲ ಸೃಷ್ಟಿಸಿ, ಕೋಟ್ಯಾಂತರ ತುಣಕುಗಳನ್ನು ಇಸ್ಪೀಟಿನ ಎಲೆಗಳಂತೆ ಇಡೀ ನಭೋ ಮಂಡಲಕ್ಕೆ ಹರಡಿ ತಾನೂ ಇದರೊಳಗೆ ಚೈತನ್ಯವಾಗಿ ಸೇರಿ ಒಂದು ಲೀಲಾ ವಿನೋದವನ್ನು ಆಡುತ್ತಾ ತನ್ಮಯನಾಗಿ ಮರೆತು ಮೆರೆಯುತ್ತಿದ್ದಾನೆ ಎಂದು ಅಣಕವಾಡುತ್ತಾರೆ ಮಾನ್ಯ ಗುಂಡಪ್ಪನವರು, ಒಳಗೂ ಹೊರಗೂ ಅವನೇ, ಆ ಚೈತನ್ಯವೇ ಇದೇ. “ಭಾವಮುಲೋನ ಬಾಹ್ಯಮುನಂದುನು”  ಬಾಹ್ಯದಲ್ಲೂ ಭಾವದಲ್ಲೂ ಆ ಪರಮಶಕ್ತಿ ಸ್ವರೂಪನಾದ ಪರಮಾತ್ಮನೇ ಎನ್ನುತ್ತಾರೆ ತಿರುಮಲೆಯ ಭಕ್ತ-ಕವಿ, ಮಾನ್ಯ ತಾಳಪಾಕ ಅನ್ನಮಾಚಾರ್ಯರು.

ನಾರಾಯಣೋಪನಿಷತ್ತಿನಲ್ಲಿ, “ಅಂತರ್ಬಹಿಶ್ಚ  ತತ್ ಸರ್ವಂ ವ್ಯಾಪ್ಯ ನಾರಾಯಣಃ ಸ್ಥಿತಃ”  ಎಂದು ಒಳಗೂ ಹೊರಗೂ ಇರುವ ಆ ಪರಮಾತ್ಮನ ಸ್ವರೂಪದ ಉಲ್ಲೇಖ ಇದೆ. ಆ ಪರಮಾತ್ಮನಿಗೆ ಒಂದು ದೇಹವಿಲ್ಲ. ಎಲ್ಲ ದೇಹಗಳೂ ಅವನೇ ಮತ್ತು ಅವನದೇ. ಅವನಿಲ್ಲದೆ ಈ ದೇಹಗಳೆಲ್ಲ ಇಲ್ಲವೇ ಇಲ್ಲ. ಏಕೆಂದರೆ ಅವನೇ ದೇಹ, ಅವನೇ ಮನಸ್ಸು, ಅವನೇ ಬುದ್ಧಿ ಮತ್ತು ಅವನೇ ಆತ್ಮ. ನಮಗಾಗುವ ನೋವು, ನಲಿವು, ದುಃಖ, ಸಂತೋಷ, ಪ್ರೀತಿ, ಪ್ರೇಮ ಎಲ್ಲವನ್ನೂ ಅನುಭವಿಸುವುದು ನಮ್ಮೊಳಗಿನ ಆ ಪರಮ ಚೇತನವೇ ಅಲ್ಲವೇ.

"ಅಯ್ಯೋ ಎಲ್ಲವೂ ಅವನೇ ಆದರೆ ನಾವು ಯಾರು?" ಎಂದರೆ “ನಾವು ಕೇವಲ”  “ನಾವು ಅಥವಾ ನಾನು” ಎನ್ನುವ ಭಾವ ಮಾತ್ರ ನಾವಷ್ಟೇ. ಇದನ್ನು “ಅಹಂಕಾರವೆನ್ನುತ್ತಾರೆ. ಅದು ಇರುವ ತನಕ ನಮಗೂ

ಎಲ್ಲವೂ ಬೇರೆ ಬೇರೆಯಾಗಿ ಕಾಣುತ್ತದೆ. ಎಲ್ಲವೂ ಬೇರೆ ಬೇರೆ ರೂಪಗಳು ಕಾಣುತ್ತವೆ. ಅದು ನಶಿಸಿದರೆ ಎಲ್ಲವೂ, ಎಲ್ಲರಲ್ಲೂ, ಎಲ್ಲದರಲ್ಲೂ ಆ ಪರಮಾತ್ಮನೇ ಕಾಣುತ್ತಾನೆ. "ಹಾಗಾದರೆ ನಾವು ಮಾಡುವುದನ್ನು "ಸರಿ-ತಪ್ಪು" "ಧರ್ಮ-ಅಧರ್ಮ" ಎಂದು ಏಕೆ ಹೇಳಬೇಕು? ಎಲ್ಲವೂ ಆ ಪರಮಾತ್ಮನೇ ಆಗಿ ಮತ್ತು ಎಲ್ಲವನ್ನೂ ಅವನೇ ಮಾಡುತ್ತಾ, ಅನುಭವಿಸುತ್ತಾ ತನ್ಮಯನಾಗಿದ್ದರೆ ನಾವು ಮಾಡುವುದು ಏನು ಇಲ್ಲವಲ್ಲ" ಎಂದರೆ ನಾವು ಲೌಕಿಕವಾಗಿ ಕಟ್ಟಿಕೊಂಡ ಸಮಾಜದ ಒಳಿತಿಗೆ ಒಂದು ಸುವ್ಯವಸ್ಥಿತ ಬದುಕಿಗೆ ಈ ಕಟ್ಟುಪಾಡುಗಳು ಅವಶ್ಯಕ. ಲೌಕಿಕವನ್ನು ಬಿಟ್ಟು ಅಹಂಕಾರವನ್ನು ಬಿಟ್ಟರೆ, ಯಾವ ಕಟ್ಟುಪಾಡಿಗೂ ಒಳಪಡದೆ ಮುಕ್ತರಾಗಿಬಿಡಬಹುದು.

ಆಧ್ಯಾತ್ಮಿಕ ಬೆಳವಣಿಗೆಯ ಅಂತಿಮ ಹಂತದಲ್ಲಿ ಬರುವ ಭಾವವೇ ಇದು. ಇಂತಹ ಭಾವನೆ ಬಂದರೆ ಅವರನ್ನು ದೇವಮಾನವರೆನ್ನುತ್ತಾರೆ. ವಾಚಕರೆ ಬನ್ನಿ ನಾವೂ ಅಹಂಕಾರವನ್ನು ಬಿಟ್ಟು ಎಲ್ಲೆಡೆಯಲ್ಲೂ ಆ ಪರಮಾತ್ಮನ ಲೀಲೆಯನ್ನು ನೋಡಿ ಆನಂದಿಸುವ.

**ಮುಕ್ತಕ-81** **ಮರೆತಿಹನೆ ಬೊಮ್ಮ? ಮರೆತಿಲ್ಲ; ಮರೆತವೊಲಿಹನು |**
**ಧರಿಸಿ ಜೀವಾಕೃತಿಯ ಜಗದಿ ತನ್ನನೆ ತಾನ್ ||**
**ಅರಸಿಕೊಳುವವೊಲಿಹುದು; ದೊರೆತವೋಲ್ ತೋರೆ ಸುಖ |**
**ದೊರೆವರೆಗಾಯಸವೊ-ಮಂಕುತಿಮ್ಮ ||**

ಮರೆತವೊಲಿಹನು=ಮರೆತ+ಒಲು+ಇಹನು, ಅರಸಿಕೊಳುವವೊಲಿಹುದು=ಅರಸಿಕೊಳು+ಒಲು+ಇಹುದು,
ದೊರೆವರೆಗಾಯಸವೊ=ದೊರೆ+ವರೆಗೆ+ಆಯಸವೋ, ಮರೆತಿಹನೆ=ಮರೆತಿದ್ದಾನೇನು?
ಮರೆತವೊಲಿಹನು=ಮರೆತಂತಿದ್ದಾನೆ. ಜೀವಾಕೃತಿಯ=ಎಲ್ಲ ಜೀವಿಗಳ ರೂಪವನು
ಅರಸಿಕೊಳುವವೊಲಿಹುದು=ಹುಡುಕುವಂತೆ ಇದೆ. ದೊರೆತವೋಲ್ತೋರೆ=ದೊರೆತಂತೆ ಆದರೆ,
ದೊರೆವರೆಗಾಯಸವೊ ದೊರೆಯುವರೆಗೆ ಆಯಾಸ.

ಈ ಜಗತ್ತಿನ ಎಲ್ಲದರೊಳಗೆ ಆ ಪರಬ್ರಹ್ಮ ತನ್ನನ್ನು ತಾನೇ ಮರೆತಿದ್ದಾನೇನು? ಎಂದು ಪ್ರಶ್ನಿಸಿ, ಇಲ್ಲ ಅವ ಮರೆತಂತೆ ಇದ್ದಾನೆ ಎಂದು ಉತ್ತರಿಸುತ್ತಾರೆ ಮಾನ್ಯ ಗುಂಡಪ್ಪನವರು. ಎಲ್ಲ ಜೀವಾತ್ಮಗಳ ಸೃಷ್ಟಿಯ ಎಲ್ಲದರ ರೂಪವನ್ನೂ ಧರಿಸಿ ತನ್ನನ್ನು ತಾನೇ ಹುಡುಕುತ್ತಿದ್ದಾನೆ. ಅವನಿಗೆ ದೊರೆತರೆ ಸುಖ ದೊರೆಯದಿದ್ದರೆ

ಆಯಾಸ.

ಎಂಥಹ ಅದ್ಭುತ ವಿಚಾರ. ವಾಚಕರೆ, ನೋಡಿ ನಾವು ಹಿಂದಿನ ಮುಕ್ತಕಗಳಲ್ಲಿ “ಎಲ್ಲವೂ ಅವನೇ. ಎಲ್ಲವೂ ಅವನಿಂದಲೇ ಮತ್ತು ಎಲ್ಲವೂ ಅವನಿಗಾಗಿಯೇ” ಎಂದು ಹೇಳುತ್ತಾ ಬಂದಿದ್ದೇವೆ. ನಮ್ಮ ಮನಸ್ಸು ಬುದ್ಧಿ, ದೇಹ, ಆತ್ಮಗಳೂ ಅವನೇ ಎಂದಮೇಲೆ ಅವನನ್ನು ಹುಡುಕುವುದು ಎಂದರೆ ಏನು? ಯಾರು ಯಾರನ್ನು ಹುಡುಕುವುದು? ಅವನೇ ಇದ್ದಮೇಲೆ, ಅವನೇ ಎಲ್ಲವೂ ಆಗಿದ್ದ ಮೇಲೆ ಇಲ್ಲಿ ಹುಡುಕುವುದು ಎಂದರೇನು?





ಯಾವುದಾದರೂ ವಸ್ತು ಕಳೆದು ಹೋದರೆ ಹುಡುಕ ಬೇಕು. ಎಲ್ಲ ಕಡೆಯಲ್ಲೂ ಅವನೇ ಆವರಿಸಿ ತನ್ಮಯನಾಗಿ ಇರಬೇಕಾದರೆ ಹುಡುಕುವುದು ಅಂದರೆ ಎಂತಹ ವಿಪರ್ಯಾಸ ಅಲ್ಲವೇ?

ಈ ಜಗತ್ತನ್ನು ಸೃಜಿಸಿ, ತಾನೂ ಎಲ್ಲರೊಳಗೆ ಇದ್ದು, ಆ ಇರುವಿಕೆಯ ಜ್ಞಾನವನ್ನು ನಮ್ಮಿಂದ ಮರೆಮಾಚಲು ಒಂದು ಮಾಯೆಯಂಬ ಪರದೆಯನ್ನು ನಮ್ಮ ಜ್ಞಾನದ ಮೇಲೆ ಕವಿಸಿ, ನಮ್ಮ ಮನಸ್ಸು ಬುದ್ಧಿಗಳು ಆ ಪರಮ ವಸ್ತುವಿನಿಂದ ಅನ್ಯ ವಸ್ತುಗಳ ಮೇಲೆ ಮೋಹಗೊಳ್ಳುವಂತೆ ಆ ವಸ್ತುಗಳನ್ನೂ ಮಾಡಿ ಒಂದು ವಿಚಿತ್ರ ಪರಿಸ್ಥಿತಿ ನಿರ್ಮಿಸಿದ್ದಾನೆ ಆ ಪರಮಾತ್ಮ. ಆ ಪರದೆಯು ತೆಳುವಾಗಿದ್ದರೂ ಕಬ್ಬಿಣದಷ್ಟು ಗಟ್ಟಿ, ಆ ಕಡೆ ಆ ಪರಮಾತ್ಮನ ಇರವು ಕಾಣುತ್ತಿದ್ದರೂ ಆ ಪರದೆಯನ್ನು ಸೀಳಿ ಆ ಬದಿಗೆ ಹೋಗಲಾರದಂತೆ ಈ ಜಗತ್ತಿನ ಮೋಹದ ಮಾಯೆಯ ಸೆಳೆತದಲ್ಲಿ ಸಿಕ್ಕಿಬಿಟ್ಟಿದ್ದಾನೆ ಈ ಮನುಷ್ಯ ಪ್ರಾಣಿ. ಜ್ಞಾನವಿರುವ ಇವನ ಗತಿಯೇ ಹೀಗಿದ್ದರೆ, ಜ್ಞಾನವಿಲ್ಲದ ಪ್ರಾಣಿಗಳು, ಪಶು ಪಕ್ಷಿ ಮತ್ತು ಕೀಟ ಇತ್ಯಾದಿಗಳ ಗತಿಯೇನು?

ಆದರೆ ಮಾನವನು, ಈ ಮಾಯೆಯ ಪರದೆಯನ್ನು ದಾಟಿ ಆ ಪರಮಾತ್ಮನೊಂದಿಗೆ ಸಾಮೀಪ್ಯ, ಸಾಯುಜ್ಯ ಮತ್ತು ಸಾರೂಪವನ್ನು ಪಡೆಯಲು ಹತ್ತು ಹಲವಾರು ವಿಧಾನಗಳ ಮೊರೆ ಹೋಗಿದ್ದಾನೆ. ಪೂಜೆ, ಮಂತ್ರ, ತಂತ್ರ, ಧ್ಯಾನ, ತಪಸ್ಸು, ಹೋಮ, ಹವನ, ಭಜನೆ, ಯೋಗ, ಸತ್ಸಂಗ ಮುಂತಾದ ವಿಧಾನಗಳನ್ನು ಕಂಡು ಕೊಂಡಿದ್ದಾನೆ. ಸರಿಯಾದ ಗುರುವಿನ ಮಾರ್ಗದರ್ಶನದಲ್ಲಿ ಅವುಗಳಲ್ಲಿ ಯಾವುದಾದರೂ ಒಂದನ್ನು ಪಾಲಿಸಿದ್ದಲ್ಲಿ, ಆ ಪರಮ ಶಕ್ತಿಯ

ಸರ್ವ ವ್ಯಾಪಕತೆಯ, ಸರ್ವಶಕ್ತಿಯ ಪ್ರಭಾವದ ಅನುಭವವಾಗಬಹುದು. ಅಂತಹ ಅನುಭವವಾಗುವ ತನಕ ಸುಖ ದೂರ. ಸಿಕ್ಕರೆ ಆ ಸುಖದ ಅನುಭವವೇ ಒಂದು ಶಾಶ್ವತ ಸುಖ.

**ಮುಕ್ತಕ-82**

**ಬನ್ನಿರಾಡುವ ಕಣ್ಣಮುಚ್ಚಾಲೆಯಾಟವನು |**
**ಎನ್ನನರಸಿ ಬನ್ನಿ ಮಕ್ಕಳಿರ ಬೇಗ ||**
**ಬನ್ನಿರಾಟವ ಬೇಡವೆಂಬುವರ ನಾಂ ಬಿಡೆನು |**
**ಎನ್ನುವಜ್ಜಿಯೋ ಬೊಮ್ಮ-ಮಂಕುತಿಮ್ಮ ||**

ಎನ್ನನರಸಿ=ಎನನ್ನು +ಅರಸಿ, ಬೇಡವೆಂಬುವರ=ಬೇಡ+ಎಂಬುವರ, ಎನ್ನುವಜ್ಜಿಯೋ=ಎನ್ನುವ+ಅಜ್ಜಿಯೋ?

ಹಿಂದಿನ ಕಾಲದ ಅವಿಭಕ್ತ ಕುಟುಂಬಗಳಲ್ಲಿ ಯುವಕ, ಯುವತಿಯರು ಮತ್ತು ವಯಸ್ಕರು ಕೆಲಸಗಳಲ್ಲಿ ಮಗ್ನರಾಗಿದ್ದರೆ ವಯಸ್ಸಾದ ಅಜ್ಜಿಯರು ಮಕ್ಕಳನ್ನು ಆಡಿಸಿಕೊಳ್ಳಲು, ಕಣ್ಣಾ ಮುಚ್ಚಾಲೆ ಆಟವಾಡಿಸುತ್ತಿದ್ದರು. ಅದು ಅವರಿಗೂ ಕಾಲಯಾಪನೆಗೆ ಒಂದು ದಾರಿಯಾಗುತ್ತಿತ್ತು. ಅಜ್ಜಿಯರು ಎಲ್ಲರನ್ನೂ ಸೇರಿಸಿಕೊಂಡು ಆಡುತ್ತಿದ್ದರು. ಯಾರನ್ನೂ ಬಿಡುತ್ತಿರಲಿಲ್ಲ. ಅದರಂತೆ "ಕಂಡೂ ಕಾಣದಂತೆ ಎದುರಿಗಿದ್ದರೂ ಬಚ್ಚಿಟ್ಟುಕೊಂಡಂತೆ ಇರುವ ಆ ಪರಮಾತ್ಮನನ್ನು ಹುಡುಕುವಂತೆ ನಮ್ಮನ್ನು ಕರೆಯುತ್ತಿದ್ದಾನೇನು ಆ ಪರಬ್ರಹ್ಮ?" ಎಂದು ಕೇಳುತ್ತಾರೆ ಮಾನ್ಯ ಗುಂಡಪ್ಪನವರು.





ವಾಚಕರೆ, ಹೌದು ನೋಡಿ ಇದೊಂದು ಕಣ್ಣಾ ಮುಚ್ಚಾಲೆಯೇ. ಆಟದಲ್ಲಿ ನಮ್ಮ ಕಣ್ಣನ್ನು ಮುಚ್ಚಲಾಗುತ್ತದೆ. ಹಾಗೆಯೇ ಈ ಜೀವನದಾಟದಲ್ಲೂ ನಮ್ಮ ಕಣ್ಣು ಮುಚ್ಚಲಾಗಿದೆ, ಅಜ್ಞಾನದಿಂದ, ಮಾಯೆಯೆಂಬ ಪರದೆಯಿಂದ, ಅಹಂಕಾರವೆಂಬ ಮುಚ್ಚಳದಿಂದ. ಎಲ್ಲ ವೇದಗಳೂ, ಶಾಸ್ತ್ರಗಳೂ, ಪುರಾಣಗಳೂ, ಗ್ರಂಥಗಳೂ ಎಲ್ಲವೂ ಆ ಪರಮಾತ್ಮನ ಸರ್ವವ್ಯಾಪಕತ್ವವನ್ನು ಸಾರಿ ಸಾರಿ ಹೇಳುತ್ತಿದ್ದರೂ, ನಾವು ಸಾವಿರಾರು ವರ್ಷಗಳಿಂದ ಹುಡುಕುತ್ತಿದ್ದೇವೆ. ನಮಗೆ ಅವನ ಇರವಿನ ಭಾಸವಾಗುತ್ತಿದ್ದರೂ, ಭಾವಕ್ಕೆ ಬರುತ್ತಿಲ್ಲ. ಇಲ್ಲಿ ನನಗೆ ಕನಕದಾಸರ ಆ ಬಾಳೆಹಣ್ಣಿನ ಪ್ರಸಂಗ

ಮನಸ್ಸಿಗೆ ಬರುತ್ತದೆ. ಗುರುಗಳೇನೋ ಹೇಳಿಬಿಟ್ಟರು "ಯಾರೂ ನೋಡದ, ಕಾಣದ, ಇಲ್ಲದ ಸ್ಥಳದಲ್ಲಿ ತಿಂದು ಬನ್ನಿ" ಎಂದು. ಪಾಪ ಕನಕದಾಸರಿಗೆ ಆ ದೇವರಿಲ್ಲದ ಸ್ಥಳವೇ ಕಾಣಲಿಲ್ಲವಂತೆ. ಹಣ್ಣು ತಿನ್ನಲಾಗಲೇ ಇಲ್ಲವಂತೆ. ಅದು ಮಹಾನುಭಾವರ ಅನುಭೂತಿ, ಸ್ವಾಮೀ ರಾಮತೀರ್ಥರು ಹೇಳಿದರಂತೆ ಒಬ್ಬನಿಗೆ "ನೀ ಯಾರೆಂದು ಅರಿತುಕೋ, ಅದರ ಅರಿವು ನಿನಗಾದರೆ ಆ ಪರಮಾತ್ಮ ನಿನಗೇ ಗೋಚರವಾಗುವನು. ನಾ ತೋರಿಸಬೇಕೆಂದಿಲ್ಲ" ಎಂದು. ಹಾಗೆ ಎಲ್ಲ ಕಡೆಯೂ ಇರುವ ಆ ಪರಮ ಚೇತನವು ನಮ್ಮ ಅರಿವಿಗೆ ನಿಚ್ಚಳವಾಗಿ ಬರದೆ, ನಾವು ಕಣ್ಣಾಮುಚ್ಚಾಲೆಯಂತಾ ಆಟವಾಡುತ್ತಿದ್ದೇವೆ ಎಂಬುದು ಈ ಮುಕ್ತಕದ ಹೂರಣ.

ಆ ಪರಮಾತ್ಮ ವಸ್ತು ಸದ್ವಸ್ತು. ಅಂದರೆ ನಿತ್ಯವಾಗಿ ನಿರಂತರವಾಗಿ ಎಲ್ಲೆಡೆಯಲ್ಲೂ ಎಲ್ಲ ಕಾಲಕ್ಕೂ ಇರುವ ವಸ್ತುವೇ ಸದ್ವಸ್ತು. "ಸತ್ಸಂಗತ್ವೆ ನಿಸ್ಸಂಗತ್ವಂ, ನಿಸ್ಸಂಗಸ್ತ್ವೆ ನಿರ್ಮೋಹತ್ವಂ, ನಿರ್ಮೋಹತ್ವೆ ನಿಶ್ಚಲ ತತ್ವಂ ನಿಶ್ಚಲ ತತ್ವೆ ಜೀವನ್ಮುಕ್ತಿ" ಎಂದರು ಶಂಕರಭಗವತ್ಪಾದರು. ಒಂದೇ ಸಮಯದಲ್ಲಿ ಒಂದೇ ಸ್ಥಳದಲ್ಲಿ ಎರಡು ವಸ್ತುಗಳು ಇರಲಾಗದು ಎನ್ನುವುದು ಭೌತಶಾಸ್ತ್ರದ ಸಿದ್ಧಾಂತ. ಹಾಗೆ ನಾವು 'ಸತ್'ನ ಸಂಗ ಮಾಡಿದಾಗ 'ಅಸತ್'ನ ಸಂಗ ಬಿಟ್ಟು ಹೋಗುತ್ತದೆ. 'ಅಸತ್'ನ ಸಂಗಬಿಟ್ಟಾಗ, ವಸ್ತು, ವಿಷಯ, ವ್ಯಕ್ತಿಗಳ ಮೇಲಿನ ಮೋಹ ಅಥವಾ ಮಮಕಾರ ಹೋಗಿಬಿಡುತ್ತದೆ, ಮೋಹ ಹೋದರೆ ಆ ಪರಮಾತ್ವ ತತ್ವ ನಿಶ್ಚಲವಾಗಿ, ಅಂದರೆ ಸ್ಥಿರವಾಗುತ್ತದೆ. ಆ ಸ್ಥಿತಿಯಲ್ಲಿ ಜೀವನು ಬಂಧನಗಳಿಂದ ಮುಕ್ತನಾಗಿ ಪರಮಾತ್ಮನಲ್ಲಿ ಸಾಯುಜ್ಯವನ್ನು ಪಡೆಯುತ್ತಾನೆ. ಇದು ಸತ್ಯ ಸತ್ಯ ಸತ್ಯ. ಅಂತಹ ಸ್ಥಿತಿಗೆ ನಾವು ಹೋದಾಗ, ನಮ್ಮ ಒಳಗಣ್ಣುಗಳು ತೆರೆದುಕೊಂಡು ಆ ಪರಮ ಶಕ್ತಿಯ, ಆ ಪರಮ ಚೇತನದ ಸರ್ವ ವ್ಯಾಪಕತ್ವದ ದರ್ಶನವಾಗಿ ನಮಗೆ ಎಲ್ಲೆಲ್ಲೂ ಆ ಪರಮಾತ್ಮನೇ ಕಾಣುತ್ತಾನೆ.

**ಮುಕ್ತಕ-83**

**ಮಾನಸವ ಚಿಂತೆವಿಡಿದಂದೊರ್ವನೆರಡಾಗಿ |**
**ತಾನದಾರೊ ವಾದಿಸುವನಂತೆ ಬಾಯಿಂ ||**
**ದೇನನೋ ನುಡಿಯುತ್ತ ಕೈಸನ್ನೆಗೈಯುವನು |**
**ಭಾನವೊಂದರೊಳೆರಡು-ಮಂಕುತಿಮ್ಮ ||**

ಚಿಂತೆವಿಡಿದಂದೊರ್ವನೆರಡಾಗಿ=ಚಿಂತೆ+ವಿಡಿದಂದು+ಓರ್ವನು+ಎರಡಾಗಿ,

ತಾನದಾರೊಳೋ=ತಾನು+ಅದರಾರೊಳೋ, ವಾದಿಸುವನಂತೆ=ವಾದಿಸುವನ+ಅಂತೆ,

ಬಾಯಿಂದೇನನೋ=ಬಾಯಿಂದ+ಅದೇನೋ, ಭಾನವೊಂದರೊಳೆರಡು=ಭಾನ+ಒಂದರೊಳು+ಎರಡು

ಮಾನಸವ=ಮನಸ್ಸನ್ನು, ಒರ್ವನೆ=ಒಬ್ಬನೇ, ಬಾನು=ಆಕಾಶ

ಮನಸ್ಸಿಗೆ ಚಿಂತೆ ಹಿಡಿದಾಗ ಕೆಲವರು ತಾವು ಅದ್ಯಾರಲ್ಲೋ ಮಾತನಾಡುವಂತೆ ಏನೇನೋ ಮಾತನಾಡುತ್ತಾ, ಕೈಸನ್ನೆ ಮಾಡುತ್ತಾ ಹೋಗುತ್ತಿರುತ್ತಾರೆ. ವ್ಯಕ್ತಿ ಒಬ್ಬರೇ ಆದರೂ ಇಬ್ಬರಂತೆ ಮಾತನಾಡುತ್ತಿರುತ್ತಾರೆ. ಹಾಗೆಯೇ ಒಬ್ಬನೇ ಇರುವ ಬ್ರಹ್ಮನನ್ನು, ಚಿಂತೆಗೀಡಾದ ಮನುಷ್ಯನಂತೆ ಎರಡೆಂದು ಭಾವಿಸುತ್ತಾರೆಂದು ಈ ಮುಕ್ತಕದಲ್ಲಿ ಪ್ರಸ್ತಾಪಿಸುತ್ತಾರೆ ಮಾನ್ಯ ಗುಂಡಪ್ಪನವರು.

ವಾಚಕರೆ, ನಾವು ಹಲವಾರು ಬಾರಿ ನೋಡಿರುತ್ತೇವೆ, ಬಹಳ ಚಿಂತಾಕ್ರಾಂತರಾದ ವ್ಯಕ್ತಿಗಳು ತಮ್ಮತಮ್ಮಲ್ಲೇ ಮಾತನಾಡಿಕೊಳ್ಳುತ್ತಾರೆ. ಕೈಸನ್ನೆಗಳನ್ನೂ ಮಾಡುತ್ತಿರುತ್ತಾರೆ. ತಾವೊಬ್ಬರೇ ಆದರೂ ಬೇರೆ ಯಾರೊಡನೆಯೋ ಮಾತನಾಡುತ್ತಿದ್ದಂತೆ ಭಾಸವಾಗುತ್ತದೆ. ಪಾಪ ಅವರವರ ಒತ್ತಡಗಳೇನೋ ಯಾರಿಗೆ ಗೊತ್ತು. ಹಾಗೆಯೇ ಈ ಇಡೀ ಜಗತ್ತು ಆ ಪರಮ ಚೇತನದ ಒಂದೇ ರೂಪವಾದರೂ ನಾವು ಅದು ಬೇರೆ ನಾವು ಬೇರೆ ಎನ್ನುವ ಭಾವದಲ್ಲಿ ಅರ್ಥೈಸುವುದು. ಆ ಪರಮ ವಸ್ತುವನ್ನೇ ಭಾಗಗಳಾಗಿಸಿ ಒಂದರಿಂದ ಇನ್ನೊಂದು ಭಿನ್ನವೆಂದು ಅರ್ಥೈಸುತ್ತಾ ಚಿತ್ರ ವಿಚಿತ್ರ ವ್ಯಾಖ್ಯಾನಗಳನ್ನು ಮಾಡುತ್ತಾ ನಾನು ಮಾಡುವ ವ್ಯಾಖ್ಯಾನವೇ ಸರಿ ಎಂದು ಪ್ರತಿಪಾದಿಸುತ್ತಾ ಮತಿಭ್ರಾಂತರಂತೆ ಇದ್ದಾರೆ, ಈ ಲೋಕದಲ್ಲಿ ಜನ ಎಂದು ಪ್ರಸ್ತಾಪಿಸುತ್ತಾರೆ, ಮಾನ್ಯ ಗುಂಡಪ್ಪನವರು.

ನಾವೂ ಸಹ ಹಾಗೆ, ಸ್ವಲ್ಪ ಮತಿ ಭ್ರಮಣೆಯಾದವರಂತೆ ಎಲ್ಲವೂ ಆ ಪರಮಶಕ್ತಿಯೇ ಆಗಿರುವಾಗ, ಅದು ಬೇರೆ ಇದು ಬೇರೆ ಎನ್ನುವ ಭಾವನೆಯಿಂದ, ಇದೆಯೋ-ಇಲ್ಲವೋ, ಇದೋ ಅದೋ, ಒಂದೋ-ಎರಡೋ, ಹೆಣ್ಣೋ-ಗಂಡೋ ಎಂಬ ದ್ವಂದ್ವಗಳಲ್ಲಿ ಸಿಕ್ಕು ತೊಳಲಾಡುತ್ತಿದ್ದೇವಲ್ಲವೇ?.

ಆ ಪರಮಾತ್ಮನ ಕಲ್ಪನೆಯಲ್ಲಿ ಇದರಿಂದಲೇ ಹುಟ್ಟಿಕೊಂಡ ಸಾವಿರಾರು ಭೇದಗಳು, ಮತಗಳು ಸಿದ್ಧಾಂತಗಳು. ದ್ವೈತ, ಅದ್ವೈತ, ವಿಶಿಷ್ಟಾದ್ವೈತ, ಮತಭೇದಗಳು, "ಶಿವಶ್ಚ ನಾರಾಯಣಃ" ಎಂದು ವೇದ ಹೇಳಿದರೂ,

ಶಿವ ಮತ್ತು ವಿಷ್ಣುವಿನಲ್ಲಿ ನಮಗೆ ಭೇದ, "ನ ದ್ವಿತೀಯೋ ಕಶ್ಚಿತ್" ಎಂದು ಪ್ರತಿಪಾದಿಸಿದರೂ "ಏಕದ ಕಲ್ಪನೆ ನಮ್ಮಲ್ಲಿ ಇನ್ನೂ ಸ್ಥಿರವಾಗಿ ಬೇರೂರದೆ ದ್ವಂದ್ವಗಳಲ್ಲಿ ನಾವು ಇನ್ನೂ ಪರದಾಡುತ್ತಿದ್ದೇವೆ.

"ಹಲ" ವಾಗಿ ಕಾಣುವುದನ್ನು "ಒಂದು" ಎಂದು ಅರಿತರೂ ಕಾಣಲು ನಮಗೆ ಜ್ಞಾನದ ಪಕ್ವತೆ ಇಲ್ಲ. ಇಂತಹ ಪಕ್ವತೆಯನ್ನು ಬೆಳೆಸಿಕೊಳ್ಳಲು ಸತ್ಯದ ಅರಿವಾಗಬೇಕು, ಅರಿವಾದ ಸತ್ಯವನ್ನು ಒಪ್ಪಿಕೊಳ್ಳಬೇಕು, ಒಪ್ಪಿಕೊಂಡ ಸತ್ಯವನ್ನು ಮನಸ್ಸು ಬುದ್ಧಿಗಳಲ್ಲಿ ಸ್ಥಿರವಾಗಿಸಿಕೊಳ್ಳಬೇಕು. ಹಾಗಾದಾಗ ನಮಗೆ ನಿಸ್ಸಂಶಯವಾಗಿ ಆ ಪರಮಾತ್ಮನ ಸಮಗ್ರ ಚಿತ್ರ ಕಾಣುತ್ತದೆ.



# ಜೀವ ತಾಂಡವ 84-88

**ಮುಕ್ತಕ-84**

**ಅಣು ಭೂತ ಭೂಗೋಳ ತಾರಾಂಬರಾದಿಗಳ |**
**ನಣಿಮಾಡಿ ಬಿಗಿದು ನಸು ಸಡಿಲವನುಮಿರಿಸಿ ||**
**ಕುಣಿಸುತಿರುವನು ತನ್ನ ಕೃತಿಕಂತುಕವನದರೋ**
**ಳಣಗಿರ್ದು ಪರಬೊಮ್ಮ-ಮಂಕುತಿಮ್ಮ ||**

ತಾರಾಂಬರಾದಿಗಳನಣಿಮಾಡಿ=ತಾರಾ+ಅಂಬರ+ಆದಿಗಳನು+ಅಣಿಮಾಡಿ,

ಸಡಿಲವನುಮಿರಿಸಿ=ಸಡಿಲವನುಂ+ಇರಿಸಿ,

ಕೃತಿಕಂತುಕವನದರೊಳಣಗಿರ್ದು=ಕೃತಿ+ಕಂತುಕವನು+ಅದರೊಳ್+ಅಣಗಿರ್ದು.

ಅಣು=ಅತ್ಯಂತ ಸಣ್ಣದಾದದ್ದು, ಭೂತ=(ಇಲ್ಲಿ) ಬೃಹತ್ತಾದದ್ದು, ತಾರಾಂಬರಾದಿಗಳ=ನಕ್ಷತ್ರ ಗಗನಗಳು, ಅಣಿಮಾಡಿ=ಸಿದ್ಧಪಡಿಸಿ, ಬಿಗಿದು=ಒಂದು ಸೂತ್ರದಲ್ಲಿ ಬಂಧಿಸಿ, ನಸು=ಸ್ವಲ್ಪ, ಸಡಿಲವನುಮಿರಿಸಿ=ಸಡಿಲವನು ಇರಿಸಿ, ಕೃತಿಕಂತುಕವನದರೊಳಣಗಿರ್ದು=ಅವನು ಮಾಡಿದ ಈ ಸೃಷ್ಟಿಯೆಂಬ ಚೆಂಡಿನೊಳಗೆ ತಾನೂ ಸೇರಿಕೊಂಡು.

ಆ ಪರಬ್ರಹ್ಮ ಈ ಜಗತ್ತನ್ನು ಒಂದು ಸೂತ್ರದಲ್ಲಿ ಬಂಧಿಸಿ ಸ್ವಲ್ಪ ಸಡಿಲ ಬಿಟ್ಟು, ತನ್ನ ಕೃತಿಯಾದ ಈ ಜಗತ್ತನ್ನು ಒಂದು ಚೆಂಡು ಎಂದು ಭಾವಿಸಿ, ತಾನೂ ಅದರೊಳಗೆ ಸೇರಿ ಒಂದು ಸೂತ್ರದಾಟವ ಆಡುತ್ತಿದ್ದಾನೆ ಎಂಬುದು ಈ ಮುಕ್ತಕದ ತಾತ್ಪರ್ಯ.

ಒಂದು ಬೃಹತ್ ಜಗತ್ತನ್ನು ತನ್ನ ಸಂಕಲ್ಪದಿಂದಲೇ ಸೃಷ್ಟಿಮಾಡಿ, ಎಲ್ಲದರೊಳಗೂ, ಚೇತನಾ ಸ್ವರೂಪವಾಗಿ ತಾನೇ ಸೇರಿಕೊಂಡು ಎಲ್ಲವನ್ನೂ ಒಂದು ಸೂತ್ರದಲ್ಲಿ ಬಂಧಿಸಿದ್ದಾನೆ, ಆ ಪರಮಾತ್ಮ ಎನ್ನುವುದೇ ಈ ಮುಕ್ತಕದ ಒಟ್ಟಾರೆ ಅರ್ಥ. ನೋಡಿ ನಮ್ಮಲ್ಲಿ ಒಂದು ಆಟಿಗೆ ಸಿಗುತ್ತದೆ. ಒಂದು ರಬ್ಬರ್ ಚೆಂಡು, ಆ ಚೆಂಡಿನ ತುದಿಗೆ ಒಂದು ರಬ್ಬರ್ ದಾರ. ಆ ದಾರವನ್ನು ಕೈಗೆ ಸಿಕ್ಕಿಸಿಕೊಂಡು ಆ ಚೆಂಡನ್ನು ದೂರ ಎಸೆದರೆ, ಅದು ಆ ದಾರ ಎಷ್ಟು ದೂರ ಸಾಗಿ ಹೋಗಬಹುದೋ ಅಷ್ಟು ದೂರ ಹೋಗಿ ಮತ್ತೆ ತನ್ನ ಸ್ವಸ್ಥಾನವನ್ನು ಸೇರುತ್ತದೆ. ಆ ಮಕ್ಕಳ ಆಟ ಹಾಗೆ ಸಾಗಿರುತ್ತದೆ. ಹಾಗೆಯೇ ಈ ಜಗತ್ತನ್ನು ಒಂದು ಕಂದುಕ ಅಂದರೆ ಚೆಂಡಿನಂತೆ ಸೃಷ್ಟಿಮಾಡಿ ಅದಕ್ಕೆ ಚೇತನವೆಂಬ ಸೂತ್ರದಿಂದ ಎಲ್ಲವನ್ನೂ ಬಂಧಿಸಿ ತನ್ನ ಲೀಲಾವಿನೋದದಲ್ಲಿ, ಮಕ್ಕಳು ಚೆಂಡಾಡುವಂತೆ ಆಡುತ್ತಿದ್ದಾನೆ ಆ ಪರಮಾತ್ಮ

ನಿಜವಿರಬಹುದು. ಏಕೆಂದರೆ ನಮಗೆ ನಮ್ಮ ಬದುಕಿನಲ್ಲಿ ನಡೆಯುವ ಮತ್ತು ಆಗುವ ವಿದ್ಯಮಾನಗಳಿಗೆ ತಾರ್ಕಿಕ ವಿವರಣೆಯನ್ನು ನೀಡಲು "ನಾವು ಎಷ್ಟು ಸಮರ್ಥರು" ಎಂದು ಯೋಚಿಸಿದಾಗ ಯಾವುದೋ ಒಂದು ಶಕ್ತಿ ನಮ್ಮ ಎಲ್ಲ ಗತಿ ವಿಧಿಯನ್ನು ನಿಯಂತ್ರಿಸುತ್ತಿದೆ ಎಂದು ಸಾಮಾನ್ಯವಾಗಿ ಅನ್ನಿಸುತ್ತದೆ. ಆದರೆ "ಸ್ವಲ್ಪ ಸಡಿಲ" ವನ್ನೂ ಬಿಟ್ಟಿದ್ದಾನೆ, ಎಂದರೆ ಎಲ್ಲ ಪ್ರಾಣಿಗಳಿಗೂ ಸ್ವಲ್ಪ ಸ್ವಾತಂತ್ರ್ಯವನ್ನೂ ನೀಡಿದ್ದಾನೆ ಎಂದು ಅರ್ಥೈಸಬಹುದು.





ಆ ಸ್ವಲ್ಪ ಸ್ವಾತಂತ್ರ್ಯವನ್ನು ತನ್ನ ಬುದ್ಧಿಶಕ್ತಿಯಿಂದ ನಾವು ನಮ್ಮನ್ನು ಸನ್ಮಾರ್ಗದಲ್ಲಿ, ಸತ್ಸಂಗದಲ್ಲಿ ಇಟ್ಟುಕೊಳ್ಳಲು ಪ್ರಯತ್ನ ಪಟ್ಟರೆ, ಅವನ ಸದ್ ನಿಯಂತ್ರಣ ಮತ್ತು ನಮ್ಮ ಸತ್ ಪ್ರಯತ್ನ ಎರಡರಿಂದ ನಮ್ಮ ಬಾಳೂ ಸ್ವಲ್ಪ ಹಸನಾಗಬಹುದು. ನಮ್ಮನ್ನು ನಾವು ಆ ಪರಮಾತ್ಮನ ಸೂತ್ರದ ಅಂಕೆಯೊಳಕ್ಕೆ ತೊಡಗಿಸಿಕೊಂಡು ಬಿಟ್ಟರೆ ನಮಗೆ ನಿಶ್ಚಿಂತೆ.

ಅದು ಬಿಟ್ಟು ನಾವು ಸ್ವತಂತ್ರರು, ಅವನು ನಮ್ಮನ್ನು ಸೃಷ್ಟಿಮಾಡಿದ ಮೇಲೆ, ನಮ್ಮ ಬದುಕನ್ನು ನಾವು ಬದುಕುತ್ತೇವೆ, ಅದರಲ್ಲಿ ಅವನ ಪ್ರಮೇಯವೇನೂ ಇಲ್ಲವೆನ್ನುವವರೂ ಇದ್ದಾರೆ. ಇರಲಿ ಅವರಿಗದು ಪ್ರಿಯ. ನಮಗೇನು ಬೇಕೋ ಅದನ್ನು ಆಯ್ದು ಸ್ವಾತಂತ್ರ್ಯ ನಮಗಿದೆ. ನಮಗಾಗುವ ಪರಿಣಾಮ ನಮ್ಮ ಆಯ್ಕೆಯ ಮೇಲೆ ಆಧಾರಪಟ್ಟಿರುತ್ತದೆ. ವಾಚಕರೆ, ನಮಗೇನು ಬೇಕೋ ಅದನ್ನು ಆಯ್ದು ಅದರಿಂದ ಬರುವ ಸಾಧಕ ಬಾಧಕಗಳನ್ನು ನಾವು ಅನುಭವಿಸುತ್ತಾ ಅಥವಾ ಆನಂದಿಸುತ್ತಾ ಇರಬಹುದು.

**ಮುಕ್ತಕ-85**

**ನಭದ ಬಯಲೊಳನಂತ, ಮನದ ಗುಹೆಯೊಳನಂತ |**
**ಉಭಯದಾ ನಡುವೆ ಸಾದ್ಯಂತ ಜೀವ ಕಥೆ ||**
**ವಿಭುವೊಬ್ಬನೀ ಗಾಳಿಬುಡ್ಡೆಗಳನೂದುವನು ||**
**ಹಬೆಗುಳ್ಳೆಯೋ ಸೃಷ್ಟಿ-ಮಂಕುತಿಮ್ಮ ||**

ಬಯಲೊಳನಂತ=ಬಯಲೊಳು+ಅನಂತ, ಗುಹೆಯೊಳನಂತ=ಗುಹೆಯೊಳು+ಅನಂತ,
ಸಾದ್ಯಂತ=ಸ+ಆದಿ+ಅಂತ, ವಿಭುವೊಬ್ಬನೀ=ವಿಭುವು+ಒಬ್ಬನು+ಈ,
ಗಾಳಿಬುಡ್ಡೆಗಳನೂದುವನು=ಗಾಳಿ+ಬುಡ್ಡೆಗಳನ್ನು+ಊದುವನು, ಬಯಲೊಳನಂತ=ಬಯಲೊಳು+ಅನಂತ
ನಭದ=ಆಕಾಶದ, ಮನದ=ಮನಸ್ಸಿನ, ಗುಹೆಯೊಳನಂತ=ಅಂತರಂಗದಲ್ಲೂ ಅಂತ್ಯವಿಲ್ಲದ ವಿಸ್ತಾರ, ಉಭಯದಾ=ಎರಡರ, ಸಾದ್ಯಂತ=ಆದಿಯಿಂದ ಅಂತ್ಯದವರೆಗೆ, ಜೀವ ಕಥೆ=ಜೀವನದ ಕಥೆ. ವಿಭುವೊಬ್ಬನೀ=ಆ ಪರಮಾತ್ಮನೊಬ್ಬನು, ಹಬೆಗುಳ್ಳೆಯೋ=ಆವಿಯ ಬುಡ್ಡೆ.

ಆಕಾಶದ ವಿಸ್ತಾರ ಅನೂಹ್ಯ ಮತ್ತು ಅನಂತ. ಹಾಗೆಯೇ ಜೀವಿಗಳ ಮನಸ್ಸಿನ ಆಳ ಮತ್ತು ವಿಸ್ತಾರಗಳೂ ಸಹ. ಈ ಸೃಷ್ಟಿಯಲ್ಲಿ ಆ ಪರಮಾತ್ಮನಿಂದ ಸೃಷ್ಟಿಸಲ್ಪಟ್ಟ ನಾವುಗಳು ಕೇವಲ ಗಾಳಿಯ ಗುಳ್ಳೆಗಳಂತೆ. ಒಂದು ಆದಿ ಮತ್ತು ಒಂದು ಅಂತ್ಯ ಇವುಗಳ ನಡುವೆ ನಮ್ಮ ಜೀವನದ ಕಥೆ. ಇಡೀ ಸೃಷ್ಟಿಯೇ ಒಂದು ದೊಡ್ಡ ಗಾಳಿಯ ಗುಳ್ಳೆಯಂತೆ ಎಂದು ಒಂದು ಗಹನವಾದ ವಿಚಾರವನ್ನು ಪ್ರಸ್ತಾಪ ಮಾಡುತ್ತಾರೆ ಮಾನ್ಯ ಗುಂಡಪ್ಪನವರು.

ವಾಚಕರೆ, ಈ ಹಿಂದೆಯೂ ಜಗತ್ ಸೃಷ್ಟಿಯ ವಿಸ್ತಾರದ ಬಗ್ಗೆ ಸೂಕ್ಷ್ಮವಾಗಿ ಹೇಳಲ್ಪಟ್ಟಿದೆ. ಇಡೀ ಸೃಷ್ಟಿಯೇ ಎಷ್ಟು ಅಗಾಧವೆಂದರೆ, ನಮಗೆ ಅದನ್ನು ನೋಡುವುದಿರಲಿ ಊಹಿಸಿಕೊಳ್ಳಲೂ ಸಾಧ್ಯವಿಲ್ಲ ಅಲ್ಲವೇ, ಹಾಗೆಯೇ ಜೀವಿಗಳ ಮನಸ್ಸೂ ಸಹ, ಎಂದು ವಿಚಾರ ಪ್ರಸ್ತುತಪಡಿಸುತ್ತಾರೆ ಮಾನ್ಯ ಗುಂಡಪ್ಪನವರು.

ಇಲ್ಲಿ ಮಾನವನ ಮನಸ್ಸು ಚಿತ್ರ ವಿಚಿತ್ರವಾದ ಆಲೋಚನೆಗಳನ್ನು ಮಾಡುತ್ತದೆ. ಹಿಂದೆ ನಡೆದ ಎಲ್ಲ ಘಟನೆಗಳನ್ನೂ ಮೆಲುಕು ಹಾಕುತ್ತದೆ. ಮರೆತದ್ದನ್ನು ಜ್ಞಾಪಿಸಿಕೊಳ್ಳಲು ಪ್ರಯತ್ನಿಸುತ್ತದೆ. ಒಂದು ಕ್ಷಣದಲ್ಲಿ





ಎಲ್ಲಿಂದ ಎಲ್ಲಿಗೋ ಹೋಗುತ್ತದೆ. "ಹರಿದಾಡುವಂಥಾ ಮನವ ನಿಲಿಸುವುದು ಬಲು ಕಷ್ಟ" ಎಂದು ದಾಸರು ಹೇಳಿದ್ದಾರೆ. ಈ ಮನಸ್ಸಿನಲ್ಲಿ, ಆಕಾಶದಂತೆಯೇ ಅಂತ್ಯವಿಲ್ಲದ ವಿಸ್ತಾರ ಮತ್ತು ವಿಚಾರ ಮಂಥನ ನಡೆದೇ ಇರುತ್ತದೆ.

ಬೃಹದಾರಣ್ಯಕ ಉಪನಿಷತ್ತಿನಲ್ಲಿ ಬ್ರಹ್ಮವಾದಿನಿ "ಗಾರ್ಗಿ" ಯಾಜ್ಞವಲ್ಕ್ಯನಿಗೆ ಒಂದು ಪ್ರಶ್ನೆ ಕೇಳುತ್ತಾಳೆ. ಅವ್ಯಕ್ತವಾದ "ಆಕಾಶ" ಯಾವುದರಿಂದ ವ್ಯಾಪ್ತವಾಗಿದೆ? ಎಂದು. ಆ ಪ್ರಶ್ನೆಗೆ ಉತ್ತರವಾಗಿ ಯಾಜ್ಞವಲ್ಕ್ಯನು ನೀಡುವ ಉತ್ತರದ ಒಂದೊಂದು ಪದವನ್ನೂ ನಾವು ಗ್ರಹಿಸಿ, ಯೋಚಿಸಿ, ಚಿಂತಿಸಿ, ಮನನ ಮಾಡಿಕೊಳ್ಳಬೇಕಾದರೆ ಒಂದು ದೀರ್ಘ ತಪಸ್ಸೇ ಬೇಕಾಗುತ್ತದೆ. ಅಂದರೆ ಆ ನಭೋಮಂಡಲದ ವಿಸ್ತಾರ ಮತ್ತು ಗೂಢತೆಗಳು ಅಗಾಧ. ಅಷ್ಟೇ ಅಗಾಧ ನಮ್ಮ ಮನಸ್ಸುಗಳೂ ಸಹ ಎನ್ನುತ್ತಾರೆ, ಮಾನ್ಯ ಗುಂಡಪ್ಪನವರು. ಆದರೆ ಎಷ್ಟೇ ಅಗಾಧವಾದರೂ ಒಂದು ಆದಿ ಮತ್ತು ಒಂದು ಅಂತ್ಯವಿರಬೇಕು. ಹಾಗೆ ಒಂದು ಆದಿ ಮತ್ತು ಒಂದು ಅಂತ್ಯದ ನಡುವೆ ನಡೆಯುವುದೇ ನಮ್ಮ ಜೀವನ.

ಆದರೆ ಈ ಜೀವನದ ಎಲ್ಲವೂ ಅನಿಶ್ಚಿತ. ಎಂದು ಮತ್ತು ಹೇಗೆ ಏನಾಗುವುದೋ, ಏನು ನಡೆಯುವುದೋ, ಹೇಗೆ ಅಂತ್ಯಗೊಳ್ಳುವುದೋ ಎಂದು ನಾವು ಊಹಿಸಲೂ ಸಾಧ್ಯವಿಲ್ಲ. ಇದನ್ನೇ ಗಾಳಿಯ ಗುಳ್ಳೆ ಎನ್ನುತ್ತಾರೆ. ಇದನ್ನೇ "ನೀರ ಮೇಲಣ ಗುಳ್ಳೆ ನಿಜವಲ್ಲ ಹರಿಯೇ, ಯಾರಿಗೆ ಯಾರುಂಟು ಎರವಿನ ಸಂಸಾರ" ಎಂದು ಪುರಂದರದಾಸರೂ ಸಹ ಹಾಡಿದ್ದಾರಲ್ಲವೇ. ಹಾಗೆ ನೀರಗುಳ್ಳೆಯಾದ ನಮ್ಮ ನಮ್ಮ ಬದುಕುಗಳನ್ನು ನಾವೇ ಕೈಲಾದಷ್ಟೂ ಸಂತಸದಿಂದ,

ಸುಂದರವನ್ನಾಗಿಸಿಕೊಳ್ಳಬೇಕು. ಬೇರೆ ದಾರಿಯಿಲ್ಲ. ಈ ಅಂತ್ಯವಿಲ್ಲದ ಆಗಸ ಮತ್ತು ಅದನ್ನೇ ಹೋಲುವ ಅಂತ್ಯವಿಲ್ಲದ ಮನಸ್ಸಿನ ಭಾವದ ಬಗ್ಗೆ ಯೋಚಿಸೋಣ.

**ಮುಕ್ತಕ-86**

**ಗಗನ ತಲೆನವಿರಾಗಪೆರೆ ತಾರೆಹೂವಾಗ |**
**ಜಗವೆಲ್ಲ ವಪುವಾಗೆ ಮಾಯೆ ಸತಿಯಾಗೆ ||**
**ನಗುನಗುವ ಬೊಬ್ಬಿಡುವ ಜೀವತಾಂಡವರಸಿಕ |**
**ಭಗವಂತ ಶಿವರುದ್ರ-ಮಂಕುತಿಮ್ಮ ||**

ತಲೆನವಿರಾಗೆಪೆರೆ=ತಲೆ+ನವಿರ್+ಆಗೆ.

ಗಗನ=ಆಕಾಶ, ತಲೆನವಿರಾಗೆ=ತಲೆ ಕೂದಲಾಗಲು, ಪೆರೆ=ಚಂದ್ರ, ತಾರೆ=ನಕ್ಷತ್ರಗಳು, ಹೂವಾಗೆ=(ಆ ತಲೆಗೂದಲಿಗೆ ಮೂಡಿವ) ಹೂವುಗಳಾಗಿ, ಜಗವೆಲ್ಲ ವಪುವಾಗೆ=ಈ ಜಗತ್ತೇ ಆ ಪರಮಾತ್ಮನ ದೇಹವಾಗಿ, ಮಾಯೆ ಸತಿಯಾಗಿ=ಮಾಯೆಯೇ ಅವನ ಪತ್ನಿಯಾಗಿ, ನಗುನಗುವ=ಸಂತಸದಿಂದಿರುವ, ಬೊಬ್ಬಿಡುವ=ಗೋಳಾಡುವ, ಜೀವತಾಂಡವ=ಬಾಳ ಜಂಜಾಟ, ರಸಿಕ ಭಗವಂತ=ಇದನ್ನೆಲ್ಲಾ ನೋಡಿ ಆನಂದಿಸುವ ಪರಮಾತ್ಮ, ಶಿವರುದ್ರ=ಮಂಗಳಕರವಾದ ಶಿವನರೂಪ ಮತ್ತು ಭಯಂಕರವಾದ ರುದ್ರ ರೂಪವೂ ಹೌದು.





ಈ ಜಗತ್ತನ್ನೇ ದೇಹವನ್ನಾಗಿಸಿಕೊಂಡಿರುವ ಆ ಪರಮಾತ್ಮನು ಆಕಾಶವನ್ನು ತನ್ನ ತಲೆ ಕೂದಲಾಗಿಸಿಕೊಂಡು ಚಂದ್ರ ಮತ್ತು ನಕ್ಷತ್ರಗಳನ್ನು ಹೂವಂತೆ ಆ ಕೂದಲಲ್ಲಿ ಮುಡಿದು, ಮಾಯೆಯನ್ನು ತನ್ನ ಸತಿಯಾಗಿಸಿಕೊಂಡು ಈ ಜಗತ್ತಿನಲ್ಲಿ ಸಂತೋಷ ಮತ್ತು ದುಃಖವನ್ನು ಸಮವಾಗಿ ಅನುಭವಿಸಿ ಆನಂದಿಸುತ್ತಿದ್ದಾನೆ. ಹಾಗೆ ಅವನು ಶಾಂತ ಶಿವ

ಸ್ವರೂಪನೂ ಹೌದು ಮತ್ತು ಭಯಂಕರವಾದ ರುದ್ರ ಸ್ವರೂಪನೂ ಹೌದು ಎನ್ನುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಈ ಜಗತ್ತೇ ಅವನು. ಇಲ್ಲಿರುವುದೆಲ್ಲವೂ ಅವನ ಆಭರಣಗಳು. ಆ ಪರಮಾತ್ಮ ನಕ್ಷತ್ರ, ಚಂದ್ರ, ಸೂರ್ಯ ಇತ್ಯಾದಿ ಎಲ್ಲವನ್ನೂ ಸೃಷ್ಟಿಮಾಡಿ ಎಲ್ಲವನ್ನೂ ತನ್ನ ಆಭರಣಗಳಂತೆ ತೊಟ್ಟಿದ್ದಾನೆ. ಸಕಲ ಜೀವರಾಶಿಗಳನ್ನು, ಗಿಡ ಮರಗಳನ್ನು, ಗಿರಿ ಬೆಟ್ಟಗಳನ್ನು, ನದಿ ಸಮುದ್ರಗಳನ್ನು, ಎಲ್ಲವನ್ನೂ ಸೃಷ್ಟಿಮಾಡಿ ಅದರೊಳಗೆ ತಾನೇ ಇದ್ದು, ಅವುಗಳನ್ನೆಲ್ಲ ಧರಿಸಿ ತಾನು ಸಿಂಗರಿಸಿಕೊಂಡು ನಲಿಯುತ್ತಾ, ಆನಂದವಾಗಿ, ಸಂತೋಷವಾಗಿ "ಶಿವ" ರೂಪದಲ್ಲಿಯೂ, ಬರ, ಭೂಕಂಪ, ಅತೀವೃಷ್ಟಿ, ಅನಾವೃಷ್ಟಿಗಳಂತ ಉತ್ಪಾತಗಳನ್ನು ಸೃಷ್ಟಿಸಿ ತನ್ನ ರುದ್ರ ರೂಪದಲ್ಲಿಯೂ ಇದ್ದು ಎಲ್ಲವನ್ನೂ ಮಹಾ ರಸಿಕನಂತೆ ಆನಂದಿಸುತಿದ್ದಾನೆ ಎನ್ನುವುದೇ ಈ ಮುಕ್ತಕದ ಹೂರಣ.

ಒಟ್ಟಾರೆ ನಮಗೊಂದು ಸಂದೇಶ. ಈ ಜಗತ್ತಿನ ಎಲ್ಲದರಲ್ಲಿಯೂ ಆ ಪರಮಾತ್ಮನನ್ನು ಕಾಣಬೇಕು ಮತ್ತು ಈ ಜಗತ್ತಿನಲ್ಲಿ ನಡೆಯುವ ಎಲ್ಲ ವಿದ್ಯಮಾನಗಳೂ ಆ ಪರಮಾತ್ಮನ ಲೀಲಾವಿನೋದವೆಂದೇ ತಿಳಿಯಬೇಕು.

**ಮುಕ್ತಕ-87**

**ಬೆಳೆ ಹೊಳಪು ವಿಕಸನ ವಿಕಾರ ಸಂಭ್ರಮಗಳಲಿ |**
**ಬೆಳಕು ವೇಗಗಳೆನಿಪ ಕಾಲ ದಿಕ್ಕುಗಳ ||**
**ಚಲನೆಯಲಿ ವಿಶ್ವಸಂಮೋಹನಗಳೆಲ್ಲವಾ |**
**ವಿಲಸಿತವು ಬೊಮ್ಮನದು-ಮಂಕುತಿಮ್ಮ ||**

ವೇಗಗಳೆನಿಪ=ವೇಗಗಳು+ಎನಿಪ, ವಿಶ್ವಸಂಮೋಹನಗಳೆಲ್ಲವಾ=ವಿಶ್ವ+ಸಮೋಹನಗಳು+ಎಲ್ಲವಾ.
ವಿಲಸಿತವು=ಪರಮಾತ್ಮನ ಲೀಲೆ. ವಿಶ್ವಸಂಮೋಹನಗಳೆಲ್ಲವಾ=ವಿಶ್ವದಾಕರ್ಷಣೆಗಳು

ವಿಶ್ವದ ಎಲ್ಲಕ್ಕೂ ಒಂದು ನಿಗದಿತ ಚಲನೆ ಉಂಟು. ಆ ಚಲನೆಗೆ ಕಾರಣ ಚೇತನ. ಆ ಬೃಹತ್ ಚೇತನದ ಒಂದು ಅಂಶವೇ ಎಲ್ಲಕ್ಕೂ ಚೇತನದ ಮೂಲ. ಒಂದು ಸಣ್ಣ ಬತ್ತದ ಕಾಳು ಭೂಮಿಗೆ ಬಿದ್ದಾಗ, ನೆಲ, ನೀರು, ಬೆಳಕು, ಸೂರ್ಯನ ಶಾಖಗಳ ಸಂಪರ್ಕಕ್ಕೆ ಬಂದಾಗ ಮೊಳಕೆಯೊಡೆದು ಸಸಿಯಾಗಿ ತೆನೆಯೊಡೆದು ಒಂದು ಇದ್ದದ್ದು ಹಲವಾಗಿ, ಮತ್ತೆ ಮತ್ತೊಂದು ಸೃಷ್ಟಿ ಚಕ್ರಕ್ಕೆ ನಾಂದಿ ಹಾಡುತ್ತದೆ. ಅದಾವ ಶಕ್ತಿ ಆ ಒಂದು ಕಾಳನ್ನು ಮೊಳೆಸಿ ಭೂಮಿಯಿಂದ

ಸತ್ವವನ್ನು ಹೀರಿ, ಆ ಸಣ್ಣ ಸಸಿಯ ನರ ನಾಡಿಗಳಿಂದ ಶಿಖರಕ್ಕೆ ತಂದು ಕಿರೀಟದಂತೆ ಆ ತೆನೆಯನ್ನು ತೊಯ್ದಾಡಿಸುತ್ತದೆ. ಎಂತಹ ಅದ್ಭುತ. ಜಗತ್ತಿನ ಸೃಷ್ಟಿಯೆಲ್ಲವೂ ಅಂತಹ ಅದ್ಭುತಗಳಿಂದಲೇ ತುಂಬಿದೆ.





ಭೂಮಿಯ ಚಲನೆ, ಅದರಿಂದಾಗುವ ಹಗಲು ರಾತ್ರಿಗಳು, ಕಾಲದ ಗಣನೆ, ಸೂರ್ಯ, ಸೂರ್ಯನ ಬೆಳಕು ಮತ್ತು ಶಾಖ, ಪ್ರಾಣಿಗಳ ಮತ್ತು ಗಿಡಮರಗಳ ಮೇಲೆ ಅದರಿಂದಾಗುವ ಪರಿಣಾಮ, ಆ ಪರಿಣಾಮದಿಂದಾಗುವ ಬದಲಾವಣೆಗಳು, ಹೀಗೆ ಒಂದುಬಾರಿ ಎಲ್ಲವನ್ನು ಸಮಗ್ರವಾಗಿ ಪರಿಕಿಸಿ ಮತ್ತು ಪರೀಕ್ಷಿಸಿ ನೋಡಿದರೆ, ಎಲ್ಲೆಲ್ಲೂ ನಮಗೆ ಆ ಪರಮಾತ್ಮನ ಲೀಲಾವಿನೋದದ ಪರಿಚಯವಾಗುತ್ತದೆ. ಆದರೆ ಅದನ್ನು ನೋಡುವ ಸಂಸ್ಕಾರ ಮತ್ತು ಮನಸ್ಸಿರಬೇಕಷ್ಟೆ.

ಇಷ್ಟೊಂದು ವೈವಿಧ್ಯವಾದ ಈ ಸೃಷ್ಟಿಯಲ್ಲಿ ಇಲ್ಲದೆ ಇರುವುದೇ ಇಲ್ಲ. ಎಲ್ಲವೂ ಸಮಗ್ರವಾಗಿ ಒಂದಕ್ಕೊಂದು ಹೊಂದಿಕೊಂಡು, ಯಾವುದೂ ನಿರರ್ಥಕವೆನಿಸದೇ ಸಮರ್ಪಕವಾಗಿದೆ. ಇದರ ಗಾಢತೆ ಮತ್ತು ಗೂಢತೆಯನ್ನು ನೋಡಿದರೆ, ಇಂತಹ ಸಂಕೀರ್ಣ ಸೃಷ್ಟಿಯಿಂದ ನಾವು ಸಂಮೋಹಿತರಾಗದೆ ಇರಲು ಸಾಧ್ಯವೇ ಇಲ್ಲ. ತನ್ನಿಂದಲೇ ಎಲ್ಲವನ್ನೂ ಸೃಜಿಸಿ, ತಾನೂ ಇದರಲ್ಲಿ ಇದ್ದು ಎಲ್ಲವೂ ಬೇರೆ ಬೇರೆಯಾಗಿ ಕಂಡರೂ, ಒಂದೇ ಆಗಿರುವ ಪರಮಾತ್ಮನ ಈ ಜಗತ್ಸೃಷ್ಟಿಕಾರ್ಯದ ಕುಶಲತೆಯನ್ನು ಕಂಡು ಆನಂದಿಸದೇ ಇರಲು ಸಾಧ್ಯವೇ ಇಲ್ಲ. ಆ ಕುಶಲತೆಯನ್ನು ಎಷ್ಟು ಹೊಗಳಿದರೂ ಅತಿಶಯೋಕ್ತಿಯಾಗಲಾರದು. ವಾಚಕರೆ ನಾವೂ ಸಹ ಈ ಸೃಷ್ಟಿಯ ಎಲ್ಲವನ್ನೂ ನೋಡುವ, ಅನುಭವಿಸುವ ಆನಂದಿಸುವ ಮತ್ತು ಆ ಪರಮಾತ್ಮನಿಗೆ ಕೃತಜ್ಞತೆಯನ್ನು ಸಲ್ಲಿಸುವ.

**ಮುಕ್ತಕ-88** **ಚಲನೆ ವಿಶ್ವಾಸ್ತರಣೆಯದುವೆ ಮಾಯಾಭ್ರಮಣೆ |**
**ಸಲೆ ಬಗೆಯಲದು ಪರಬ್ರಹ್ಮವಿಸ್ಫುರಣೆ ||**
**ಥಳಥಳಿಕೆ ವಜ್ರದಲ್ಲಿ ನೈಜವಿರುವಂತೆಯು |**
**ಜ್ವಲತೆ ಬೊಮ್ಮಗೆ ನೈಜ-ಮಂಕುತಿಮ್ಮ ||**

ವಿಶ್ವಾಸ್ತರಣೆಯದುವೆ=ವಿಶ್ವ+ಆಸ್ತರಣೆ+ಅದುವೆ, ಬಗೆಯಲದು=ಬಗೆಯಲು+ಅದು. ಆಸ್ತರಣೆ=ವಿಸ್ತಾರ, ಮಾಯಾಭ್ರಮಣೆ=ವಿಶ್ವ ಮಾಯೆಯ ತಿರುಗಾಟ, ಸಲೆ=ಸರಿಯಾಗಿ, ಬಗೆಯಲದು=ವಿಚಾರಮಾಡಿದರೆ, ಥಳಥಳಿಕೆ=ಹೊಳಹೊಳಪು, ಜ್ವಲತೆ-ಹೊಳಪು, ಬೊಮ್ಮಗೆ=ಬ್ರಹ್ಮನಿಗೆ, ನೈಜ=ಸಹಜ.

ನಿರಂತರ ಚಲನೆಯಲ್ಲಿರುವ ಈ ಜಗತ್ತು ಮತ್ತು ಅದರ ವಿಸ್ತಾರದ ವಿಚಾರ ನಮ್ಮನ್ನು ಭ್ರಮಾಲೋಕಕ್ಕೆ ತಳ್ಳುತ್ತದೆ. ಅದನ್ನು ಕೂಲಂಕುಷವಾಗಿ ವಿಚಾರಮಾಡಿ ನೋಡಿದರೆ ಎಲ್ಲೆಲ್ಲೂ ಸಹಜ ಪ್ರಕಾಶದಿಂದ ಪ್ರಾಜ್ವಲ್ಯಮಾನವಾಗಿರುವ ಆ ಪರಮಾತ್ಮ ದರ್ಶನವಾಗುತ್ತದೆ. ಏಕೆಂದರೆ ವಜ್ರಕ್ಕೆ ಹೇಗೆ ಪ್ರಕಾಶವು ಸಹಜ ಗುಣವೋ ಹಾಗೆಯೇ ಆ ಪರಮಾತ್ಮನೂ ತನ್ನದೇ ಪ್ರಕಾಶದಿಂದ ಹೊಳೆಯುತ್ತಿದ್ದಾನೆ ಎಂದು ಪ್ರಸ್ತಾಪಿಸುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಜಗತ್ತನ್ನೇ ಬೆಳಗುವ ಆ ಜಗದೀಶನು 'ಸ್ವಯಂಪ್ರಕಾಶಿ". ನಮ್ಮನ್ನೂ ಸೇರಿ ಈ ಜಗತ್ತಿನ ಎಲ್ಲ ವಸ್ತುಗಳೂ ಬೆಳಗಲು ಎರವಲು ಪಡೆದ ಬೆಳಕು ಬೇಕು. ಆದರೆ ಅವನೇ ಆದಿಪುರುಷ ಎಲ್ಲವನ್ನೂ ಬೆಳಗುವವನಾಗಿದ್ದರಿಂದ





ಅವನಿಗೆ "ಜಗತ್ಪ್ರಭು" ಎಂದು ಹೆಸರು. "ಜಗತ್ಪ್ರಭು" ಎಂದರೆ ಜಗತ್ತಿಗೆ ಪ್ರಭೆಯನ್ನು ನೀಡುವವನೂ ಎಂದು ಅರ್ಥೈಸಬಹುದೇನೋ!! ಸೂರ್ಯನ ಬೆಳಕಿನಿಂದ ಭೂಮಿ ಬೆಳಗುತ್ತದೆ. ಭೂಮಿಯ ಬೆಳಕಿನಿಂದ ಚಂದ್ರನು ಬೆಳಗುತ್ತಾನೆ. ಆದರೆ ಆ ಸೂರ್ಯ ಚಂದ್ರರಿಗೂ ಬೆಳಕನ್ನು ನೀಡುವ ಅಥವಾ ಬೆಳಗುವ ಶಕ್ತಿಯನ್ನು ನೀಡುವವನೇ ಸ್ವಯಂಪ್ರಕಾಶ. ಅವನೇ ಪರಮಾತ್ಮ.

ಹಾಗೆ ಅವನ ಪ್ರಕಾಶದಿಂದಲೇ ಇಡೀ ಸೃಷ್ಟಿಯೂ ಬೆಳಗುತ್ತಿದೆ. ದೂರದಲ್ಲಿ ಕಾಣುವ ನಕ್ಷತ್ರಗಳು, ಗ್ರಹಗಳು, ಕಾಣದ ಎಲ್ಲ ಆಕಾಶಕಾಯಗಳೂ ಮತ್ತು ಬಹು ವಿಸ್ತಾರವಾದ ಈ ಜಗದ್ಪ್ರವಾಹವೂ ಸಹ ಆ ಪರಮ ಶಕ್ತಿಯ ಬೆಳಕಿನಿಂದಲೇ ಬೆಳಗುತ್ತದೆ. ಎಲ್ಲಕ್ಕೂ ಬೆಳಕು ನೀಡುವವನಿಗೆ ಆ ಬೆಳಕು ಎಲ್ಲಿಂದ ಬರುತ್ತದೆ? ಎಂದರೆ, ಎಲ್ಲಿಂದಲೂ

ಬರುವುದಿಲ್ಲ. ಏಕೆಂದರೆ ಅವನೇ ಬೆಳಕು ಮತ್ತು ಬೆಳಕೇ ಅವನು. ಇದನ್ನು ಮಾನ್ಯ ಗುಂಡಪ್ಪನವರು ಒಂದು ಸೂಕ್ತ ಉಪಮೆಯಿಂದ ವಿವರಿಸುತ್ತಾರೆ. ವಜ್ರಕ್ಕೆ ಹೊಳಪನ್ನು ನೀಡಲಾಗುವುದೇ? ಸಾಧ್ಯವಿಲ್ಲ ಏಕೆಂದರೆ ವಜ್ರವೇ ಹೊಳೆಯುತ್ತದೆ. ಹಾಗೆ ಹೊಳೆ ಹೊಳೆಯುವ ವಜ್ರದಂತೆ ಪರಮಾತ್ಮನೂ ಹೊಳೆಯುತ್ತಾನೆ.

ವಾಚಕರೆ, ಈ ಜಗತ್ತಿನ ವಿಸ್ತಾರ ಮತ್ತು ತಿರುಗಾಟವೆಲ್ಲ ಒಂದು ಮಾಯಾಭ್ರಮಣೆಯನ್ನುತ್ತಾರೆ ಶ್ರೀ ಗುಂಡಪ್ಪನವರು. ಈ ಜಗತ್ತಿನ ವಿಸ್ತಾರವನ್ನು ಮತ್ತು ಭ್ರಮಣೆಯನ್ನು ಪರೀಕ್ಷಿಸಿ ನೋಡಿದರೆ ಆ ಪರಮಾತ್ಮನ ಬೆಳಕು ನಮಗೆ ಗೋಚರವಾಗುತ್ತದೆ. ಆದರೆ ಇಲ್ಲಿ ಬೆಳಕು ಅಂದಾಕ್ಷಣ, ಕೇವಲ ಬೆಳಕಲ್ಲ. ಅದನ್ನು ಜ್ಞಾನವೆಂದೂ ಸಹ ಅರ್ಥೈಸಿಕೊಳ್ಳಬೇಕು. ಅದನ್ನೇ "ಜ್ಞಾನಾನಂದಮಯಂ ದೇವಂ ನಿರ್ಮಲಃ ಸ್ಪಟಿಕಾಕೃತಿಂ ಆಧಾರಂ ಸರ್ವ ವಿದ್ಯಾನಾಂ ಹಯಗ್ರೀವಮುಪಾಸ್ಮಹೆ" ಎಂದು ಹಯಗ್ರೀವ ಸ್ತೋತ್ರದಲ್ಲಿ ಉಲ್ಲೇಖವಾಗಿದೆ. ಹಾಗಾಗಿ ಬೆಳಕೆಂದರೆ ಜ್ಞಾನ, ಪರಮಾತ್ಮನೆಂದರೆ ಜ್ಞಾನ. ಅಂತಹ ಜ್ಞಾನಸ್ವರೂಪನಾದ ಪರಮಾತ್ಮನನ್ನು ನಾವು ಆರಾಧಿಸೋಣ.

# ಪ್ರಪಂಚನ-ಆಕುಂಚನ 89-93

**ಮುಕ್ತಕ-89**

**ಆದಿದಿವಸವಾವುದೆಂದುಮಿಹ ಜಗಕೆ? |**
**ಭೋಧನೆಯ ಸುಲಭತೆಗೆ ಸೃಷ್ಟಿಲಯಕಥನ ||**
**ಪಾದಶಿರಗಳ ಕೂರ್ಮ ಚಾಚಿಕೊಂಡಿರೆ ಸೃಷ್ಟಿ |**
**ಸೇದಿಕೊಂಡಿರೆ ಲಯವೊ-ಮಂಕುತಿಮ್ಮ ||**

ಆದಿದಿವಸವಾವುದೆಂದುಮಿಹ=ಆದಿದಿವಸವು+ಆವುದು+ಎಂದೆಂದೂ+ಇಹ,
ಆದಿದಿವಸ=ಮೊದಲ ದಿವಸ, ಸೃಷ್ಟಿಲಯಕಥನ=ಆದಿ ಮತ್ತೆ ಅಂತ್ಯದ ವಿವರಣೆ.
ಪಾದಶಿರಗಳ=ಕಾಲು ಮತ್ತು ಕೈಗಳು, ಸೇದಿಕೊಂಡಿರೆ=ಎಳೆದುಕೊಂಡರೆ,

ಎಂದೆಂದೂ ಇರುವ ಈ ಜಗತ್ತಿಗೆ ಮೊದಲ ದಿನವು ಯಾವುದು ಮತ್ತು ಕೊನೆಯ ದಿನವು ಯಾವುದು? ಅದು ಹಾಗಾಯಿತು, ಇದು ಹೀಗಾಯಿತು ಎಂದು ಸುಲಭವಾಗಿ ವಿವರಿಸಲು ಒಂದು ರೀತಿಯ ವಿವರಣೆಯನ್ನು

ಪಂಡಿತರು ನೀಡುತ್ತಾರೆ. ಆಮೆ ತನ್ನ ಕಾಲುಗಳನ್ನು ಹೊರಗೆ ತೆಗೆದರೆ ಸೃಷ್ಟಿ, ಒಳಗೆಳೆದುಕೊಂಡರೆ ಲಯವೆನ್ನುವ ರೀತಿ ಎಂದು ಒಂದು ಗಹನವಾದ ವಿಚಾರವನ್ನು ಪ್ರಸ್ತಾಪಿಸುತ್ತಾರೆ ಮಾನ್ಯ ಗುಂಡಪ್ಪನವರು.

ಈ ಜಗತ್ತು ಅನಾದಿ ಮತ್ತು ಅನಂತ. ಅಂದರೆ ಇದಕ್ಕೆ ಒಂದು ತೊಡಗುವ ಬಿಂದುವೂ (starting point) ಇಲ್ಲ ಅಥವಾ ಕೊನೆಯ ಬಿಂದುವೂ ಇಲ್ಲ. ಮೊದಲೂ ಇತ್ತು ಈಗಲೂ ಇದೆ ಮತ್ತು ಮುಂದೆಯೂ ಇರುತ್ತದೆ. ಆದರೆ ಮೊದಲಿದ್ದ ಹಾಗೆ ಇಲ್ಲವಲ್ಲ ಎಂದರೆ, ಹೌದು ಒಂದೇ ರೀತಿಯಿರುವುದಿಲ್ಲ, ಬದಲಾಗುತ್ತಲೇ ಇರುತ್ತದೆ. ಒಂದರಿಂದ ಮತ್ತೊಂದು ರೂಪ. ಇಡೀ ಜಗತ್ತೇ ಒಂದು ರೂಪಾಂತರ ಪ್ರಕ್ರಿಯೆ ಎಂದರೆ ಸರಿಯಾಗುವುದೇನೋ. ಪ್ರಕಟವಾಗಿ ನಮಗೆ ಕಂಡರೆ ಸೃಷ್ಟಿ, ನಮಗೆ ಕಾಣದೆ ಹೋದರೆ ಲಯ.

ಅದಕ್ಕೊಂದು ಉಪಮೆಯನ್ನು ಕೊಡುತ್ತಾರೆ ಮಾನ್ಯ ಗುಂಡಪ್ಪನವರು. ಆಮೆ ಮುಂದಕ್ಕೆ ಸರಿಯಬೇಕಾದರೆ ತನ್ನ ಕಾಲುಗಳನ್ನು ತನ್ನ ಚಿಪ್ಪಿನಿಂದ ಹೊರತೆಗೆದು ನಡೆಯುತ್ತದೆ. ಹೊರತೆಗೆದು ಎಂದರೆ, ಅದು ಅಲ್ಲಿ ಇತ್ತು ಎಂದರ್ಥವಲ್ಲವೇ? ಆಗ ಸೃಷ್ಟಿಯಾಗಲಿಲ್ಲ ಅಲ್ಲವೇ? ಹಾಗೆಯೇ ಅದು ನಿಲ್ಲಬೇಕಾದರೆ ಅಥವಾ ವಿಶ್ರಮಿಸಬೇಕಾದರೆ, ತನ್ನ ಕಾಲುಗಳನ್ನು ಚಿಪ್ಪಿನೊಳಕ್ಕೆ ಎಳೆದುಕೊಳ್ಳುತ್ತದೆ. ನಮಗೆ ಕಾಣದಿದ್ದರೂ ಇದೆ. ಅಂದರೆ ಲಯವಲ್ಲ ಅಲ್ಲವೇ?

ವಾಚಕರೆ, ಗಮನಿಸಿ ಶ್ರೀ ಕೃಷ್ಣ ಭಗವದ್ಗೀತೆಯಲ್ಲಿ ಅರ್ಜುನ ವಿಷಾದಯೋಗದಲ್ಲಿ "ನೀನು ಯಾರನ್ನೂ ಕೊಲ್ಲುವುದಿಲ್ಲ, ಇಲ್ಲಿ ಯಾರೂ ಸಾಯುವುದಿಲ್ಲ, ಇವರು ಹಿಂದೆಯೂ ಇದ್ದರು ಮುಂದೆಯೂ ಇರುತ್ತಾರೆ, ನೀನು ಯೋಚಿಸತಕ್ಕುದ್ದಲ್ಲ" ಎನ್ನುತ್ತಾನೆ. ಒಂದೇ ಗೋಳವಾಗಿದ್ದ ಪರಮಾತ್ಮ ವಸ್ತು ಹಲವಾಗಿ ಪ್ರಕಟಗೊಂಡಾಗ ಈ ಜಗತ್ತಿನ ಸೃಷ್ಟಿಯಾಯಿತು ಎಂದು ನಾವು ಕಥನ ಮಾಡುತ್ತೇವೆ. ಅಂದರೆ ಅದು ರೂಪಾಂತರವಷ್ಟೇ. ಒಂದು ರೀತಿಯಲ್ಲಿ ಇದ್ದದ್ದು ನಮಗೆ ಬೇರೆ ರೂಪದಲ್ಲಿ ಕಂಡಿದೆ ಅಷ್ಟೇ. ನಮ್ಮದೂ ಸಹ ಇದೊಂದು ರೂಪ. ನಂತರ ಮತ್ತೆ ಇನ್ನೊಂದು ರೂಪ. ಆ ಅರ್ಥದಲ್ಲಿ ಹುಟ್ಟು ಸಾವುಗಳೂ ಸಹ ಒಂದು ರೂಪಾಂತರ ಪ್ರಕ್ರಿಯೆಯಷ್ಟೇ. ಅಂದರೆ ಯಾವುದಕ್ಕೂ ಒಂದು ಆದಿ ಇಲ್ಲ ಒಂದು ಅಂತ್ಯವೂ ಇಲ್ಲ.

ಇಷ್ಟೊಂದು ಗಹನವಾದ ವಿಷಯವನ್ನು ಸಾಮಾನ್ಯರು ಕೇಳಿದರೂ ಈ ವಿಷಯದ ಸತ್ವವನ್ನು ಅರಿತು ಅರಗಿಸಿಕೊಳ್ಳಲು ಸಾಧ್ಯವಿಲ್ಲವೆಂದು ನಮ್ಮ ಋಷಿಮುನಿಗಳು ಸೃಷ್ಟಿ ಮತ್ತು ಲಯದ ವಿವರಣೆಯನ್ನು ನೀಡಿ ನಮ್ಮ ಪರಿಮಿತ ಅರಿವಿಗೆ ತಿಳಿಸಲು ಪ್ರಯತ್ನಿಸಿದ್ದಾರೆ. ಆದರೆ ಪರಮಾತ್ಮ ಸ್ವರೂಪವಾದ ಈ ಜಗತ್ತು ಅವನಂತೆಯೇ ಅನಾದಿ ಮತ್ತು ಅನಂತ, ನಾವೆಲ್ಲರೂ ಈ ಜಗತ್ತಿನ ಒಂದು ಬದಲಾಗುತ್ತಾ ಇರುವ ಅಣುಗಳು ಮಾತ್ರ ವಾಚಕರೆ ನಾವೂ ಸಹ ಆ ಪರಮಾತ್ಮನ ಅನಂತ ಬೃಹದ್ರೂಪವನ್ನು ಕಾಣುವ, ಅನುಭವಿಸುವ ಮತ್ತು ಆನಂದಿಸುವ.





**ಮುಕ್ತಕ-90**

**ಆವುದಿರುವಿಕೆಗಾದಿ? ಎಂದು ಸೃಷ್ಟಿಯ ಮೊದಲು? |**
**ಆವುದಬ್ಧಿಯ ತೆರೆಗಳಲಿ ಮೊಟ್ಟಮೊದಲು? ||**
**ಆವುದೆಲರಿನ ನಿಲ್ಲದಲೆತಕ್ಕೆ ಗಡುಸೀಮೆ? |**
**ಈ ವಿಶ್ವಕಥೆಯಂತು?-ಮಂಕುತಿಮ್ಮ ||**

ಆವುದಿರುವಿಕೆಗಾದಿ=ಆವುದು+ಇರುವಿಕೆಗೆ+ಆದಿ, ಆವುದಬ್ಧಿಯ-ಆವುದು+ಅಬ್ಧಿಯ, ಆವುದೆಲರಿನ-ಆವುದು+ಎಲರಿನ, ನಿಲ್ಲದಲೆತಕ್ಕೆ ನಿಲ್ಲದ+ಅಲೆತಕ್ಕೆ,
ಇರುವಿಕೆ=ಜೀವನ, ಅಭಿ=ಸಮುದ್ರ, ಕಡಲು, ಎಲರು=ಗಾಳಿ, ಪವನ, ಅಲೆತಕ್ಕೆ=ಬೀಸುವಿಕೆಗೆ.

ಈ ಜಗತ್ತಿನ ಇರುವಿಕೆಗೆ ಯಾವುದು ಮೊದಲು? ಈ ಸೃಷ್ಟಿಯ ಆರಂಭ ಎಂದು ಆಯ್ತು? ಸಮುದ್ರದ ಅಲೆಗಳಲ್ಲಿ ಮೊದಲ ಅಲೆ ಯಾವುದು? ನಿರಂತರ ನಿಲ್ಲದೆ ಬೀಸುವ ಗಾಳಿ, ಬೀಸಲು ಎಂದು ಮೊದಲಾಯ್ತು ಮತ್ತು ಅದರ ಎಲ್ಲೆಗಳು ಎಲ್ಲಿವೆ. ಈ ವಿಶ್ವ ಕಥೆ ಎಂತು ಎಂದು ಹಲವು ಪ್ರಶ್ನೆಗಳನ್ನು ಪ್ರಸ್ತಾಪ ಮಾಡುತ್ತಾರೆ, ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಈ ಜಗತ್ತಿಗೊಂದು ಆದಿ ಉಂಟೆ? ಖಂಡಿತ ಇಲ್ಲ. ಇದು ಅನಾದಿ. ಕೋಟಿ ಕೋಟಿ ವರ್ಷಗಳ ಹಿಂದೆ ರೂಪಾಂತರಗೊಂಡು ನಿರಂತರ ಬದಲಾಗುತ್ತಾ ಇರುವ ಈ ವಿಶ್ವಕ್ಕೆ ಆದಿಯೆಲ್ಲಿದೆ, ಅಂತ್ಯವೆಲ್ಲಿದೆ. ಇದು ಬದಲಾಗುತ್ತಾ ಇದೆ. ಇಷ್ಟೊಂದು ಬೃಹತ್ ವಿಶ್ವದಲ್ಲಿ ಆಗುವ ಬದಲಾವಣೆಗಳು ನಮಗೆ ಎಷ್ಟು ನಿಧಾನವಾಗಿ ಗೋಚರವಾಗುತ್ತದೆ ಎಂದರೆ, ನಮಗೆ ಈ ಬದಲಾವಣೆಗಳು ಅರಿವಿಗೆ ಬರುವುದಿಲ್ಲ. ಸಮುದ್ರದ ನೀರಿನಲ್ಲಿ ಅಲೆಗಳೇಳುತ್ತವೆ. ಆದರೆ ಯಾವ ಅಲೆ ಯಾವ ಸಮಯಕ್ಕೆ ಏಳುತ್ತದೆ ಎಂದು ಹೇಳಲು ಸಾಧ್ಯವೇ ಇಲ್ಲ. ಹಾಗಿರುವಾಗ ಅದರೊಳಗೆ ಮೊದಲ ಅಲೆ ಎಂದು ಎದ್ದಿತು ಎಂದು ಹೇಳಲು ಆಗುತ್ತದೆಯೇ? ಇನ್ನು ಅದೇ ರೀತಿ ಈ ಭೂಮಿ ಗಾಳಿ ಮತ್ತು ಆಕಾಶದಲ್ಲಿ ನಡೆಯುವ ಬದಲಾವಣೆಯ ಮೂಲವನ್ನು ಹುಡುಕಲು ಸಾಧ್ಯವೇ ಇಲ್ಲ.

ಒಂದು ವಿಚಾರ ಗಮನಿಸಬೇಕಾದದ್ದು ಏನೆಂದರೆ, ಎಲ್ಲ ಚಲನೆ ಅಥವಾ ಬದಲಾವಣೆಗೆ ಹೇತುವಾದ ಆ ಬೃಹತ್ ಚೇತನ ಸ್ವರೂಪನಾದ ಪರಮಾತ್ಮನೇ ಎಲ್ಲಕ್ಕೂ ಕಾರಣನು. ಆ ಚೇತನವಿಲ್ಲದೆ ಇದ್ದರೆ ಏನೂ ನಡೆಯುವುದಿಲ್ಲ. “ತೇನ ವಿನಾ ತೃಣಮಪಿ ನ ಚಲತಿ” ಎಂದು ಇದನ್ನೇ ಆದಿ ಶಂಕರರು ಹೇಳಿದ್ದು, ಅವನ ಸಂಕಲ್ಪ ಎಂದಾಯಿತೋ, ಜಗತ್ಸೃಷ್ಟಿಯ ಪ್ರಕ್ರಿಯೆ ಎಂದು ಶುರು ಮಾಡಿದನೋ ಯಾರಿಗೆ ಗೊತ್ತು. ಇಲ್ಲಿ ಬದಲಾಗುವುದು ಕೇವಲ ಜಗತ್ತಲ್ಲ. ಜಗತ್ತಿನಲ್ಲಿರುವ ಎಲ್ಲವೂ ಬದಲಾಗುತ್ತಾ ಹೋಗುತ್ತದೆ.

ವಾಚಕರೆ, ನೋಡಿ ಹಿಂದಿನದಾವುದೂ ಇಂದು ಅದೇ ರೂಪದಲ್ಲಿ ಇಲ್ಲ. ಕಲ್ಲು ಬೆಟ್ಟ ಗುಡ್ಡ ಮರಗಳು ಇಂದು ರಸ್ತೆ, ಮನೆ, ಕಿಟಕಿ, ಬಾಗಿಲುಗಳಾಗಿವೆ. ಶುದ್ಧ ವಾಯು ಮತ್ತು ನೀರುಗಳು ಕಲುಷಿತವಾಗಿವೆ. ಕಾಡು ಕರಗಿ ನಾಡಾಗಿದೆ. ಕಡಿಮೆ ಇದ್ದ ಜನ ಹೆಚ್ಚಾಗಿದ್ದಾರೆ. ಸಹೃದಯತೆಗೆ ಬದಲಾಗಿ ಅಹಂಕಾರ ಸ್ವಾರ್ಥಗಳು ತುಂಬಿಕೊಂಡಿವೆ. ಹೀಗೆ ಬದಲಾಗುವ ಈ ಜಗತ್ತು ಮತ್ತು ಅದರ ಒಳಗುಟ್ಟುಗಳನ್ನು ಅರಿಯಲು ಸಾಧ್ಯವಿಲ್ಲ.





ನಾವು ಏನು ಮಾಡಬಹುದೆಂದರೆ, ನಮ್ಮಲ್ಲಿರುವ ವಿವೇಕವನ್ನು ಉಪಯೋಗಿಸಿ, ಸಾಧ್ಯವಾದಷ್ಟು ನಮ್ಮ ಮತ್ತು ನಮ್ಮ ಸುತ್ತಲಿನವರ ಬದುಕು ಹಸನಾಗಿಸಲು ಪ್ರಯತ್ನಿಸಬಹುದು.

**ಮುಕ್ತಕ-91** ಕಮಲವುದಯದೋಳರಳಿ ಸಂಜೆಯಲಿ ಮುಗುಳಾಗಿ |
ಸುಮವಪ್ಪುವುದಂತೆ ಮರುವಗಲು ಮಗುಳ್ದಂತು ||
ಅಮಿತ ಪ್ರಪಂಚನಾಕುಂಚನಾವರ್ತನ |
ಕ್ರಮವೇ ವಿಶ್ವಚರಿತ್ರೆ-ಮಂಕುತಿಮ್ಮ ||

ಕಮಲವುದಯದೊಳರಳಿ=ಕಮಲವು+ಉದಯದೊಳು+ಅರಳಿ, ಸುಮವಪ್ಪುವುದಂತೆ=ಸುಮವು+ಅಪ್ಪುವುದಂತೆ, ಪ್ರಪಂಚನಾಕುಂಚನಾವರ್ತನ=ಪ್ರಪಂಚನ+ಆಕುಂಚನ+ಆವರ್ತನ,

ಮುಗುಳಾಗಿ=ಮೊಗ್ಗಾಗಿ, ಸುಮವಪ್ಪುವುದಂತೆ=ಹೂವಾಗುವುದಂತೆ, ಮರುವಗಲು=ಮತ್ತೆ ಹಗಲು, ಅಮಿತ=ಮಿತವಿಲ್ಲದ, ಪ್ರಪಂಚನಾಕುಂಚನಾವರ್ತನ=ಪ್ರಪಂಚದ ಹರಡುವುದು ಸೇರಿಕೊಳ್ಳುವುದು

ಕಮಲದ ಹೂ ಸೂರ್ಯನ ರಶ್ಮಿಗಳು ಸೋಂಕಿದೊಡನೆ ಅರಳಿ, ಸಂಜೆಗೆ ಮೊಗ್ಗಾಗಿ ಆ ಮೊಗ್ಗು ಮತ್ತೆ ಸೂರ್ಯನ ರಶ್ಮಿಯ ಸ್ಪರ್ಶದಿಂದ ಅರಳುವಂತೆ ಈ ಅನಂತ ಮತ್ತು ಅಮಿತವಾದ ಪ್ರಪಂಚವೂ ಸಹ ನಿರಂತರವಾಗಿ ಹರಡಿಕೊಳ್ಳುತ್ತಾ ಮತ್ತೆ ಸಂಕುಚಿತಗೊಳ್ಳುತ್ತಾ ಮತ್ತೆ ಮತ್ತೆ ಬಿರಿದುಕೊಳ್ಳುತ್ತಾ ಇದೆ ಎಂದು ಈ ಜಗತ್ತಿನ ವಿಸ್ತಾರತೆಯನ್ನು ಪ್ರಸ್ತಾಪಿಸುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಒಂದು ಹುಣಸೆ ಬೀಜ ಸೂಕ್ತ ಪರಿಸರ ಸಿಕ್ಕಾಗ ಒಂದು ಮರವಾಗಿ ವಿಕಸನಗೊಳ್ಳುತ್ತದೆ. ಮೊದಲು ಸಸಿಯಾಗಿ, ಗಿಡವಾಗಿ, ಮರವಾಗಿ ತನ್ನ ಕೊಂಬೆಗಳನ್ನು ನಾಲ್ಕೂ ದಿಕ್ಕುಗಳಲ್ಲಿ ಚಾಚಿಕೊಳ್ಳುತ್ತಾ, ಎಲೆ ಹೂ, ಕಾಯಿ ಮತ್ತು ಹಣ್ಣಾಗಿ ಮತ್ತೆ ತನ್ನ ಮೂಲವಾದ ಬೀಜದ ರೂಪದ ಹಲವಾರು ಬೀಜಗಳಿಗೆ ಮೂಲವಾಗುತ್ತದೆ. ಮತ್ತೆ ಆ ಬೀಜವೂ ಮತ್ತೊಂದು ಮರಕ್ಕೆ ಮೂಲವಾಗುತ್ತದೆ. ಇದನ್ನೇ "ಪ್ರಪಂಚನ" ಎಂದರೆ ಹರಡುವಿಕೆ ಮತ್ತು "ಆಕುಂಚನ" , ಅಂದರೆ ಮುದುರಿಕೊಳ್ಳುವಿಕೆ ಎನ್ನುತ್ತಾರೆ ಶ್ರೀ ಡಿ.ವಿ.ಜಿ.

ಇನ್ನೊಂದು ಉದಾಹರಣೆ. ರೇಷ್ಮೆ ಹುಳದ ಜೀವನ ಚಕ್ರವನ್ನು ನೋಡಿ. ಬಹಳ ಸೂಕ್ತ ಉದಾಹರಣೆಯಾಗುತ್ತದೆ. ಸಣ್ಣ ಮೊಟ್ಟೆ ಆಗಿದ್ದು, ಹುಳುವಾಗಿ ಪರಿವರ್ತಿತಗೊಂಡು, ಆ ಹುಳುವು ದೊಡ್ಡದಾಗಿ, ಮಾಗಿ ಹಣ್ಣಾಗಿ, ತನ್ನ ಸುತ್ತ ತನ್ನ ಜೊಲ್ಲಿನಿಂದಲೇ ಒಂದು ಗೂಡನ್ನು ಕಟ್ಟಿ ಅದರೊಳಗೆ ಇರುವಾಗಲೇ ರೂಪ ಪರಿವರ್ತನೆಯಾಗಿ ಒಂದು ಚಿಟ್ಟೆಯಾಗಿ, ಗಟ್ಟಿಯಾದ ಆ ರೇಷ್ಮೆಯ ಗೂಡಿನ ಗೋಡೆಯನ್ನು ಸೀಳಿ ಹೊರಬಂದು ಎರಡು ದಿನ ಹಾರಾಡಿ ಮತ್ತೆ ಮೊಟ್ಟೆಗಳನ್ನು ಇಟ್ಟು ತನ್ನ ಜೀವನವನ್ನು ಮುಗಿಸುವ ಮುಂಚೆ ಮತ್ತೊಂದು ಪೀಳಿಗೆಗೆ ನಾಂದಿ ಹಾಡುತ್ತದೆ.

ಈ ಉದಾಹರಣೆಯನ್ನು ನಾವು ಈ ಜಗತ್ತಿನ ಎಲ್ಲಕ್ಕೂ ಅನ್ವಯಿಸಿಕೊಳ್ಳಬಹುದು. ಮನುಷ್ಯನನ್ನೇ ತೆಗೆದುಕೊಳ್ಳಿ. ಒಂದು ಚಿಕ್ಕ ಮಗುವಾಗಿ ಹುಡುಗನಾಗಿ ಬೆಳೆದು, ಪ್ರೌಢನಾಗಿ, ವಯಸ್ಕನಾಗಿ, ವೃದ್ಧನಾಗಿ, ಕೃಶನಾಗಿ, ಕುಗ್ಗಿ





ಮಗುವಿನಂತೆಯೇ ತನ್ನ ಕೆಲಸಗಳನ್ನು ತಾನೇ ಮಾಡಿಕೊಳ್ಳಲಾಗದ ಸ್ಥಿತಿಗೆ ಹೋಗಿಬಿಡುತ್ತಾನೆ ಅಲ್ಲವೇ? ಕೆಲವರಂತೂ ಮಕ್ಕಳಂತೆಯೇ ಆಗಿಬಿಡುತ್ತಾರಲ್ಲವೇ? ಇದು ಎಲ್ಲ ಪ್ರಾಣಿ ಪಕ್ಷಿಗಳಿಗೂ ಅನ್ವಯಿಸುತ್ತದೆ.

ವಾಚಕರೆ ಈ ಜಗತ್ತು, ಜಗತ್ತಿನ ಎಲ್ಲವೂ ಅಂದರೆ ಎಲ್ಲವೂ ಈ ರೀತಿಯ ಬಿರಿಯುವಿಕೆ ಮತ್ತ ಮುದುಡುವಿಕೆಯ ಚಕ್ರದನ್ವಯವೇ ನಡೆಯುತ್ತದೆ. ನಾವು ಕೂಲಂಕುಶವಾಗಿ ನೋಡಿದರೆ ಅದರ ಸೂಕ್ಷ್ಮ ಪರಿಚಯ ನಮಗೆ ಆಗುತ್ತದೆ.

**ಮುಕ್ತಕ-92**

**ಎತ್ತಣಿನೋ ದೃಕ್ಷರಿಧಿಯಾಚೆಯಿಂದಲನಂತ |**
**ಸತ್ವ ತೆರೆತೆರೆಯಾಗಿ ಬೀಸಿ ಗೂಢದಲಿ ||**
**ಬಿತ್ತರಿಸಿತಿಹುದು ಹೊಸತನವನೆಡೆಬಿಡದೆ |**
**ನಿತ್ಯ ನಿತ್ಯವು ಜಗದಿ-ಮಂಕುತಿಮ್ಮ ||**

ದೃಕ್ಷರಿಧಿಯಾಚೆಯಿಂದಲನಂತ=ದೃಕ್+ಪರಿಧಿಯಾಚೆಯಿಂದಲಿ+ಅನಂತ,
ಹೊಸತನವನೆಡೆಬಿಡದೆ=ಹೊಸತನವನ್ನು+ಎಡೆಬಿಡದೆ
ಎತ್ತಣಿನೋ=ಎಲ್ಲಿಂದಲೋ, ದೃಕ್ಷರಿಧಿಯಾಚೆಯಿಂದ=ದೃಷ್ಟಿಯ ಪರಿಧಿಯಾಚೆಯಿಂದ, ಸತ್ವ=ಈ ಜಗತ್ತನ್ನು

ನಡೆಸುತ್ತಿರುವ ಶಕ್ತಿ. ಗೂಢದಲಿ=ಗುಪ್ತವಾಗಿ, ಬಿತ್ತರಿಸಿಹುದು=ತೋರುತ್ತಿದೆ,
ಹೊಸತನವನೆಡಬಿಡದೆ=ಹೊಸತನವನ್ನು ನಿರಂತರವಾಗಿ,

ನಮ್ಮ ದೃಷ್ಟಿಯ ಪರಿಧಿಯ ಆಚೆಗಿರುವ ಅನಂತ ವಿಶ್ವದಲ್ಲಿಯ ಯಾವುದೋ ಒಂದು ನಿಗೂಢ ಸತ್ವ ಅಂದರೆ ಒಂದು ಚೇತನ ಅಲೆ ಅಲೆಯಾಗಿ ಹರಿದು, ಹಳತನ್ನು ಮರೆಸಿ ಹೊಸತನ್ನು ಮತ್ತೆ ಮತ್ತೆ ನಿರಂತರವಾಗಿ ತರುತ್ತಿದೆ ಎಂದು ಈ ಜಗತ್ತಿನ ಪ್ರಪಂಚನ ಮತ್ತು ಆಕುಂಚನ"ದ ತತ್ವವನ್ನು ಪ್ರಸ್ತಾಪಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಈ ಜಗತ್ತನ್ನು ನಡೆಸುವ ಆ ಚೇತನದ ಮೂಲವೆಲ್ಲೋ, ಅದಿರುವ ಸ್ಥಳವಾವುದೋ, ಅದು ತನ್ನ ಕ್ರಿಯೆಯನ್ನು ಹೇಗೆ ನಡೆಸುತ್ತದೆಯೋ, ಅದು ನಮ್ಮ ಕಣ್ಣಿಗೆ ಕಾಣದಿದ್ದರೂ ನಾವೆಲ್ಲರೂ ಅದರ ಪ್ರಭಾವಕ್ಕೆ ಒಳಗಾಗಿದ್ದೇವೆ ಅಲ್ಲವೇ? ಅಂತಹ ಚೇತನವು ತಾನಿರುವ ನಿಗೂಢತೆಯನ್ನು ಬಿಟ್ಟುಕೊಡದೆ, ತನ್ನ ಪ್ರಭಾವವನ್ನು ಇಡೀ ಜಗತ್ತಿಗೆ ಹರಡಿ, ತಾನದರಿಂದ ಬೇರೆಯಾಗಿರದೆ ಎಲ್ಲದರಲ್ಲೂ ತಾನೂ ಇದ್ದು, ಎಲ್ಲ ವಸ್ತುಗಳ ರೂಪಾಂತರಕ್ಕೂ ಕಾರಣವಾಗಿರುವುದನ್ನು, ನಾವು ಸ್ಪಷ್ಟವಾಗಿ ಕಾಣುತ್ತೇವೆ. ಆದರೆ ನಮ್ಮ ದೈನಂದಿನ ಜೀವನದಲ್ಲಿ ಅದನ್ನು ಗಮನಿಸುವುದಿಲ್ಲ ಮತ್ತು ಅದನ್ನು ನಿಖರತೆಯಿಂದ ಅರ್ಥಮಾಡಿಕೊಳ್ಳಲು ಪ್ರಯತ್ನಿಸುವುದೂ ಇಲ್ಲ. ಋತುಮಾನಗಳು, ಚಳಿ, ಮಳೆ, ಬಿಸಿಲು, ಹೊಸ ಚಿಗುರು, ಹೂ, ಹಣ್ಣು, ಹೊಸ ಹೊಸ ಜೀವ ಸೃಷ್ಟಿ ಎಲ್ಲವೂ ನಿರಂತರವಾಗಿ ನಡೆಯುವ ಜಗದ್ವ್ಯಾಪಾರವಲ್ಲವೇ?

"ಬಿತ್ತರಿಸಿತಿಹುದು ಹೊಸತನವನೆಡೆಬಿಡದೆ" , ಎಡೆಬಿಡದೆ ಎಂದರೆ ನಿರಂತರವಾಗಿ ಎಂದರ್ಥ. ಈ ಕ್ಷಣವನ್ನು ಮುಂದಿನ ಕ್ಷಣ ನುಂಗಿಬಿಡುತ್ತದೆ. ನಮಗೂ ಸಹ ಒಂದು ಕ್ಷಣ ವಯಸ್ಸು ಅಧಿಕವಾಗಿಬಿಡುತ್ತದೆ. ಅಂದರೆ

ಬದಲಾವಣೆ. ಈ ರೀತಿಯ ಬದಲಾವಣೆ ಈ ಜಗತ್ತಿನಲ್ಲಿರುವ ಎಲ್ಲ ವಸ್ತುಗಳಲ್ಲೂ ನಿರಂತರವಾಗಿ ನಡೆದೇ ಇರುತ್ತದೆ. ಪ್ರತಿ ನಿತ್ಯ, ಪ್ರತಿ ಘಳಿಗೆ ನಾವು ನಮ್ಮ ಸುತ್ತಲಿನ ವಸ್ತುಗಳನ್ನು ಯಾಂತ್ರಿಕವಾಗಿ ನೋಡುತ್ತಿರುತ್ತೇವೆ. ಹಾಗಾಗಿ ನಮಗೆ ಅದರಲ್ಲಿ ಆಗುವ ಬದಲಾವಣೆಗಳು ಕಾಣುವುದಿಲ್ಲ. ಒಂದು ಚಿಕ್ಕ ಬೀಜವನ್ನು ನೆಟ್ಟಾಗ ಅದು ಧರೆಯ ಹೊಟ್ಟೆ ಸೀಳಿ ತಲೆ ಎತ್ತಿ ಮೊಳಕೆಯೊಡೆದು ಸಸಿಯಾಗುವುದನ್ನು ನಾವು ನೋಡುತ್ತೇವೆ. ಅದೂ ಸಹ ಪ್ರತಿನಿತ್ಯ ಕ್ರಮೇಣ ನಿಧಾನವಾಗಿ ಆಗುತ್ತದೆ. ಆದರೆ ಅದನ್ನು ನೆಟ್ಟು ಒಂದು ತಿಂಗಳು ನೋಡದೆ ಇದ್ದರೆ, ತಿಂಗಳ ನಂತರ ಒಂದು ಗಿಡವನ್ನೇ ನೋಡಬಹುದು. ಒಂದು ತಿಂಗಳ ಕಾಲದಲ್ಲಿ ಆ ಬೀಜ ಗಿಡವಾಗುವುದಕ್ಕೆ ಆ ಚೇತನ ಕಾರಣವಲ್ಲವೇ ವಾಚಕರೆ,

ಹೀಗೆ ಆ ಚೇತನವು ತನ್ನ ಕಾರ್ಯ ವೈಖರಿಯಲ್ಲಿ ಹಳತನ್ನು ಕ್ರಮೇಣ ಅಳಿಸಿ ಹೊಸತನ್ನು ತರುತ್ತಲೇ ಇರುತ್ತದೆ. ಕೆಲವಲ್ಲಿ ಬೇಗ ಬೇಗ, ಕೆಲವಲ್ಲಿ ನಿಧಾನವಾದ ಪ್ರಕ್ರಿಯೆ. ಆದರೆ ಕ್ರಿಯೆ ಸತ್ಯ. ಆ ಕ್ರಿಯೆ ನಡೆಸುವುದೇ ಆ ಪರಮಾತ್ಮ ಶಕ್ತಿ. ಅಂತಹ ಶಕ್ತಿಗೆ ನಾವು ನಮಿಸುವ, ಕೃತಜ್ಞತೆಯನ್ನು ತೋರುವ ಅದನ್ನು ನೋಡುತ್ತಾ, ಆನಂದ ಪಡುವ.

**ಮುಕ್ತಕ-93**

**ಜ್ವಾಲಮಾಲಾಕುಲ ಜಗದ್ರೂಪ ತಾಂಡವದಿ |**
**ಲೀಲೆಯಿಂ ಜೀವತೆಯನಾಂತು ಪರಬೊಮ್ಮಂ ||**
**ತಾಳಲಯಮೇಳನದಿನೊಮ್ಮೆ ರಭಸದಿನೊಮ್ಮೆ |**
**ಲೋಲನಾಗಿರ್ಪನೆಲೋ-ಮಂಕುತಿಮ್ಮ ||**

ಜ್ವಾಲಮಾಲಾಕುಲ=ಜ್ವಾಲ+ +ಮಾಲಾ+ಆಕುಲ, ಜಗದ್ರೂಪ=ಜಗತ್+ರೂಪ,
ತಾಳಲಯಮೇಳನದಿನೊಮ್ಮೆ=ತಾಳ+ಲಯ+ಮೇಳನದಿ+ಒಮ್ಮೆ ರಭಸದಿನೊಮ್ಮೆ=ರಭಸದಿ+ಒಮ್ಮೆ,
ಲೋಲನಾಗಿರ್ಪನೆಲೋ=ಲೋಲನಾಗಿ+ಇರ್ಪನು+ಎಲೋ.
ಜ್ವಾಲಮಾಲಾ-ಬೆಂಕಿಯ ಹಾರ, ಲೋಲನಾಗಿ=ತನ್ಮಯನಾಗಿ, ಇರ್ಪನು=ಇರುವನು

ಜ್ವಾಲೆಗಳ ಮಾಲೆಯಲ್ಲಿ ನಡೆಯುತ್ತಿರುವ ಈ ಜಗತ್ತಿನ ತಾಂಡವ ನೃತ್ಯ. ಇದು ಪರಬ್ರಹ್ಮನಿಗೆ ಒಂದು ಲೀಲಾ ವಿನೋದ. ಕೆಲವೊಮ್ಮೆ ತಾಳ ಲಯ ಮತ್ತು ಮೇಳಗಳೊಂದಿಗೆ, ಶಾಂತವಾಗಿ ಮತ್ತು ಕೆಲವೊಮ್ಮೆ ರಭಸದಿಂದ ತನ್ನ ಭೀಕರ ರುದ್ರ ತಾಂಡವವನ್ನು ಮೆರೆಯುತ್ತಾ ಇರುವವನೇ ಆ ಪರಬ್ರಹ್ಮ ಎಂದು ಪ್ರಸ್ತಾಪಿಸುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ವಾಚಕರೆ, ಹಿಂದೆಯೂ ಒಂದು ವಿಚಾರ ಪ್ರಸ್ತಾಪಿಸಿದ್ದೇನೆ. ಇಡೀ ಸೃಷ್ಟಿಯೇ ನಾನಾ ಅಗ್ನಿ ಗೋಳಗಳ ಒಂದು ಸುಂದರ ಮಾಲೆ. ಆ ಪರಮಾತ್ಮ ತಾನೇ ಸೃಷ್ಟಿಸಿದ ಈ ಜ್ವಾಲೆಗಳ ಗೋಳಗಳ ಮಾಲೆಗಳನ್ನು ತೊಟ್ಟು ಎಲ್ಲೆಲ್ಲೂ ಪ್ರಾಜ್ವಲ್ಯಮಾನವಾಗಿ, ವಿರಾಜಿಸುತ್ತಾ ಬೆಳಕಿನಾಟ ಆಡುತ್ತಿದ್ದಾನೆ. ಕೋಟ್ಯಾಂತರ ಅಂತಹ ಅಗ್ನಿ ಅಥವಾ ಜ್ವಾಲಾ ಗೋಳಗಳನ್ನು ಸೃಜಿಸಿ ಅವುಗಳ ಪ್ರಜ್ವಲತೆಗೆ ತಾನೇ ಕಾರಣನಾಗಿ, ಅವುಗಳಲ್ಲಿ ನಾನಾ





ವಿಚಿತ್ರಗಳನ್ನು ಸೃಷ್ಟಿಸಿ ಮೆರೆಯುತ್ತಿದ್ದಾನೆ. ಕೆಲವಲ್ಲಿ ಶಾಂತನಾಗಿ, ಕೆಲವಲ್ಲಿ ಭೀಕರ ರುದ್ರ ರೂಪದಲ್ಲಿ ತನ್ನ ಲೀಲೆಯನ್ನು ತೋರುತ್ತಿದ್ದಾನೆ. ನಮಗೆ ಗೋಚರವಾಗುವುದು ಮತ್ತು ನಮ್ಮ ಅರಿವಿಗೆ ಬರುವುದು ಅಣು ಮಾತ್ರ ನಮ್ಮ ಅರಿವಿಗೆ ಬಾರದ, ನಾವು ಊಹಿಸಲೂ ಸಾಧ್ಯವಾಗದ ಅವನ ಲೀಲಾವಿನೋದವೆಷ್ಟೋ?

ನಮಗೆ ಗೊತ್ತಿರುವ ಈ ಭೂಮಿಯನ್ನೇ ನೋಡೋಣ. ಇಲ್ಲಿ ಭೂಮಿಯ ಮೇಲ್ಮೈಯಲ್ಲಿ ಬೆಟ್ಟಗಳು, ಕಾಡುಗಳು, ಸಮುದ್ರಗಳು, ತಟಾಕಗಳು, ಕೋಟಿ ಕೋಟಿ ವೈವಿಧ್ಯಮಯ ಜೀವಿಗಳು, ಭೂಮಿಯ ಆಂತರ್ಯದಲ್ಲಿ ಭೂ ಪದರಗಳು, ಅತಿ ತಾಪದ ಲೋಹಗಳ ನದಿಗಳು, ರಾಸಾಯನಿಕ ವಸ್ತುಗಳು, ಕುದಿಯುವ ನೀರು, ಹೀಗೆ ಏನೇನೋ ಇದೆ. ಇವೆಲ್ಲವೂ ಕೆಲಬಾರಿ ಶಾಂತವಾಗಿ ಮತ್ತೆ ಕೆಲಬಾರಿ ರುದ್ರವಾಗಿ ಪ್ರಕಟವಾಗುತ್ತದೆ.

ಇದಕ್ಕೆ ಉದಾಹರಣೆಗಳು ಕಾಳ್ಗಿಚ್ಚು, ಚಂಡಮಾರುತಗಳು, ಅಗ್ನಿಪರ್ವತಗಳು, ಅತೀವೃಷ್ಟಿಗಳು, ಅನಾವೃಷ್ಟಿಗಳು, ದುಷ್ಟ ಜನರು, ಪ್ರಾಣಿಗಳು, ಪರಾಧಾರಿ (parasites) ಕ್ರಿಮಿ ಕೀಟಗಳು ರುದ್ರರೂಪದಲ್ಲೂ, ಪ್ರಶಾಂತ ಸಾಗರ, ಆಹಾರಕ್ಕೆ ಮೂಲವಾದ ಫಲವತ್ತಾದ ಭೂಮಿ, ನದಿಗಳು, ಝರಿಗಳು, ಋತುಮಾನಗಳು, ಸುಗಂಧ ಭರಿತ ಹೂಗಳು, ರಸಭರಿತವಾದ ಹಣ್ಣುಗಳು, ಸಾಧು ಪ್ರಾಣಿಗಳು, ಸಾಧು ಜನರು, ಸಂಸ್ಕಾರಗಳು, ಸಾಹಿತ್ಯ ಮತ್ತು

ಕಲೆಗಳು, ಪರಸ್ಪರ ಪ್ರೀತಿ ಪ್ರೇಮಗಳು, ಹೀಗೇ ಹೇಳುತ್ತಾ ಹೋದರೆ ಇನ್ನೂ ಎಷ್ಟೋ ಎಲ್ಲವೂ ಪರಮಾತ್ಮನ ಶಾಂತ ರೂಪದಲ್ಲಿ ಪ್ರಕಟವಾಗಿದೆಯಲ್ಲವೇ?

ವಾಚಕರೆ, ಎಲ್ಲವೂ ಆ ಪರಮಾತ್ಮನೇ. ರೂಪಗಳು ಹಲವು ನಮಗೆ ಹೇಗೆ ಬೇಕೋ ಹಾಗೆ ಕಾಣುವನು. ನಾವು ನೋಡಬೇಕು ಅಷ್ಟೇ. ನಾವು ಹೇಗೆ ನೆನೆದರೆ ಹಾಗೆ ಕಂಡನು. ಅದೇ ಅವನ ಲೀಲಾ ವಿನೋದ. ಅವನಿಗೆ ಇದೆಲ್ಲವೂ ಒಂದು ಆಟ. ಅವನಾಟದಲ್ಲಿ ಎಲ್ಲವೂ ಅದರದರ ಪಾತ್ರ ನಿರ್ವಹಿಸುತ್ತಿದೆ. ಇದನ್ನು ನಾವು ಶುದ್ಧ ರೂಪದಲ್ಲಿ, ಯಥಾವತ್ತಾಗಿ ಅರ್ಥಮಾಡಿಕೊಂಡರೆ ನಮಗೆ ಆ ಪರಮಾತ್ಮ ಸ್ವರೂಪ ಸ್ಪಷ್ಟವಾಗುತ್ತದೆ.

# ಬ್ರಹ್ಮವೇ ಜೀವನವೋ 94-98

**ಮುಕ್ತಕ-94**

**ಕೇಳಿಯುಂ ಮಾಯೆಯದು ನೃತ್ಯಗತಿ ಬರಿತೋರ್ಕೆ ।**
**ಮೂಲಮಂ ಕಂಡಂಗೆ ಸಂಭ್ರಾಂತಿಯೇನು ॥**
**ಆಳದಲಿ ನಿರ್ಲಿಪ್ತ ಮೇಲೆ ನಿಯತಿಕ್ಲುಪ್ತ ।**
**ಲೀಲಾಪ್ರಿಯಂ ಬ್ರಹ್ಮ-ಮಂಕುತಿಮ್ಮ ॥**

ಕೇಳಿಯಂ=ಆಟವದು, ಮಾಯೆಯದು=ಭ್ರಮೆ, ನೃತ್ಯಗತಿ=ನಾಟ್ಯದ ರೀತಿ, ಬರಿತೋರ್ಕೆ=ಕೇವಲ ತೋರಿಕೆ, ಮೂಲಮಂ=ಮೂಲವನ್ನು, ಕಂಡಂಗೆ ಸಂಭ್ರಾಂತಿಯೇನು=ಕಂಡವನಿಗೆ ಭ್ರಮೆ ಉಂಟೇನು?, ಆಳದಲಿ ನಿರ್ಲಿಪ್ತ=ಆಂತರ್ಯದಲಿ ಯಾವುದಕ್ಕೂ ಅಂಟದ, ಮೇಲೆ ನಿಯತಿಕ್ಲುಪ್ತ=ಹೊರನೋಟಕ್ಕೆ ಒಂದು ನಿಯಮಕ್ಕೆ ಬದ್ಧ.

ಪರಮಾತ್ಮನ ಜಗನ್ನಾಟಕ ಕೇವಲ ಮಾಯೆಯಿಂದ ಕೂಡಿದೆ. ಅದರ ನೃತ್ಯ ಬರೀ ತೋರಿಕೆಯಷ್ಟೇ! ಯಾರಿಗಾದರೂ ಪರಮ ಚೇತನದ ಮೂಲ ರೂಪದ ಅರಿವಾದರೆ ದ್ವಂದ್ವಗಳಾಗಲೀ, ಸಂದೇಹಗಳಾಗಲೀ ಇರುವುದಿಲ್ಲ. ಏಕೆಂದರೆ, ತನ್ನ ನಿಜರೂಪದಲ್ಲಿ ಪರಮಾತ್ಮ ತನ್ನ ಸೃಷ್ಟಿಯಿಂದ ದೂರ ಮತ್ತು ನಿರ್ಲಿಪ್ತ. ಆದರೆ ಈ ಜಗನ್ನಾಟಕದ ಚಿತ್ರ ವಿಚಿತ್ರ ನಾಟ್ಯ ಮತ್ತು ನಡಿಗೆಯನ್ನು ತನ್ನ ವಿನೋದಕ್ಕಾಗಿ, ಲೀಲೆಯಂತೆ ನಡೆಸುತ್ತಿದ್ದಾನೆ ಎಂದು ಈ ಮುಕ್ತಕದಲ್ಲಿ ಮಾನ್ಯ ಗುಂಡಪ್ಪನವರು ವ್ಯಾಖ್ಯಾನ ಮಾಡಿದ್ದಾರೆ.

ನೋಡಿ ಈ ಜಗತ್ತು ನೋಡುವವರಿಗೆ ಎಷ್ಟೊಂದು ಸುಂದರ. ಎಷ್ಟೊಂದು ರೂಪಗಳು ಎಷ್ಟೊಂದು ಬಣ್ಣಗಳು ಎಷ್ಟೊಂದು ಭಾವಗಳು ಎಷ್ಟೊಂದು ರಾಗಗಳು. ಎಲ್ಲವೂ ಅವನೇ ಆದರೂ ತಾನು ಯಾವುದೂ ಅಲ್ಲ. ನಿಖರವಾಗಿ ಯಾವುದನ್ನೂ "ಇದೇ ದೇವರು" ಎಂದು ಹೇಳಲಾಗದಂತೆ ಎಲ್ಲವೂ ತಾನೇ ಆಗಿದ್ದರೂ, ಅದರಿಂದ ಭಿನ್ನ ಎಂಬಂತೆ ಇದ್ದು, ಪರಮಾತ್ಮ ತನ್ನ ಲೀಲೆಯನ್ನು ಮೆರೆಯುತ್ತಿದ್ದಾನೆ.

ನಾವು ಕಾಣುವ ಜಗತ್ತು, ನಾ ಹಿಂದೆ ಹೇಳಿದಂತೆ ಜಡ ಮತ್ತು ಜೀವ(ಚೇತನ)ದಿಂದಾಗಿದೆ, ಎರಡಕ್ಕೂ ಮೂಲ ಆ ಪರಮ ಚೇತನವೇ! ಆದರೆ ನಾವು ಎಲ್ಲವನ್ನೂ ಬೇರೆ ಬೇರೆಯಾಗಿ ಗುರುತಿಸುತ್ತೇವೆ. ಆಕಾಶ, ಬೆಟ್ಟ, ನದಿ, ಸಮುದ್ರ, ಕಾಡು, ಮರ, ಗಿಡ, ಬಳ್ಳಿ, ಹೂ, ಬಣ್ಣ, ರುಚಿ, ಗುಣ ಸ್ವಭಾವ, ಹಾವು, ಚೇಳು ಆನೆ, ಇರುವೆ, ಹಲ್ಲಿ, ಪಕ್ಷಿ, ಪ್ರಾಣಿ, ಮನುಷ್ಯ, ಕ್ರಿಮಿ, ಕೀಟ, ಹೆಣ್ಣು, ಗಂಡು ಮುಂತಾದವುಗಳಾಗಿ ಎಲ್ಲವನ್ನೂ ಅದರ ಬಾಹ್ಯ ಸ್ವರೂಪದಿಂದ ಗುರುತಿಸುತ್ತೇವೆ. ಏಕೆಂದರೆ ನಮ್ಮ ಇಂದ್ರಿಯಗಳಿಗೆ ಗೋಚರವಾಗುವುದು ಕೇವಲ ಬಾಹ್ಯ ರೂಪವಷ್ಟೇ. ಆದರೆ ಈ ಬಾಹ್ಯ ರೂಪಗಳೆಲ್ಲವೂ ಕೇವಲ ತಾತ್ಕಾಲಿಕ ರೂಪಗಳಷ್ಟೇ. ಅಂದರೆ ಅವು ನಿತ್ಯವಲ್ಲ. ನಿತ್ಯವಲ್ಲದಾದ್ದರಿಂದ ಸತ್ಯವಲ್ಲ. ಅಂದರೆ ಅಸತ್ಯ. ಅಸತ್ಯವನ್ನು ಸತ್ಯವೆಂದು ನಂಬುವುದೇ ಮಾಯೆ ಅಥವಾ ಭ್ರಮೆ. ಈ ಭ್ರಮೆಗೆ ಕಾರಣನಾದ ಪರಮಾತ್ಮ, ತಾನೂ ಈ ಭ್ರಮೆಯಲ್ಲಿ, ಚೇತನನಾಗಿ ಇದ್ದೂ ಕಾಣದಂತೆ, ತೋರದಂತೆ, ಗುರುತಿಸಲ್ಪಡದಂತೆ ಇದ್ದು ತನ್ನ ಲೀಲಾವಿನೋದವನ್ನು ಮೆರೆದಿದ್ದಾನೆ.

ತೋರಿಕೆಗೆ ಎಲ್ಲದರಲ್ಲಿ ಇದ್ದೇನೆ ಎನ್ನುವ ಭಾವ ಬಿತ್ತಿ, ಯಾವುದರಲ್ಲಿ ಇದ್ದಾನೋ ಅದನ್ನು ನಾಶಪಡಿಸಿ ಕಾಣದಂತೆ ಮಾಯವಾಗುವುದು ಅವನ ಲೀಲಾವಿನೋದವಲ್ಲದೆ ಮತ್ತೇನು ವಾಚಕರೆ? ಆದರೆ ಅವನು “ಆಳದಲಿ ನಿರ್ಲಿಪ್ತ ಮೇಲೆ ನಿಯತಿಕ್ಲುಪ್ತ” ಎಂದಿದ್ದಾರೆ ಗುಂಡಪ್ಪನವರು. ಅಂದರೆ ಮೂಲದಲ್ಲಿ ಅವನು ಯಾವುದಕ್ಕೂ ಅಂಟದೆ

ಇದ್ದೂ ಇಲ್ಲದಂತೆ ಇದ್ದು, ಈ ಜಗನ್ನಾಟಕವನ್ನು ತಾನೇ ರಚಿಸಿದ ಒಂದು ನಿಯಮಕ್ಕೆ ಅನುಸಾರವಾಗಿ ನಡೆಸಿಕೊಂಡು ಹೋಗುತ್ತಿದ್ದಾನೆ. ಅದನ್ನು ನಾವು ಸತ್ಯವೆಂದು ನಂಬಿ ಈ ಪ್ರಪಂಚಕ್ಕೆ ಮತ್ತು ಇದರೊಳಗಿನ ಎಲ್ಲಕ್ಕೂ ಅಂಟಿಕೊಂಡು ತೊಳಲುತ್ತಿದ್ದೇವೆ. ಅದೂ ಸಹ ಅವನ ನಾಟಕದ ನಿರ್ದೇಶನದ ಒಂದು ಭಾಗ, ಮಹಾ ಮಾಯಾವಿ ಅವನು.

ಆದರೆ ಆ ಬೃಹತ್ ಚೇತನದ ಮೂಲರೂಪವನ್ನು ಅರಿತವರಿಗೆ ಸಂದೇಹವಿಲ್ಲದೆ, ಅವನ ಅಂದರೆ ಆ ಪರಮ ಚೇತನದ ನಿಜ ಸ್ವರೂಪ ಅರಿವಿಗೆ ಬಂದರೆ ಭ್ರಾಂತಿ ಭ್ರಮೆಗಳಿಂದ ಹೊರಬರಬಹುದು. ಇಡೀ ಸೃಷ್ಟಿಯ ಸಮಗ್ರತೆಯನ್ನೂ ಮತ್ತು ಏಕತ್ವವನ್ನೂ ನಾವು ಕಾಣಲು ಪ್ರಯತ್ನಿಸಬೇಕು. ನಾವೂ ಈ ರೀತಿಯ ಪ್ರಯತ್ನ ಮಾಡಬಹುದು. ಇಂದಲ್ಲ, ಎಂದೋ ಒಂದು ದಿನ ನಮಗೂ ಅರಿವುಂಟಾಗಬಹುದು.



**ಮುಕ್ತಕ-95**

**ಶ್ಯಾಮಸುಂದರನವನೆ ಚಕ್ರಿ ನರಹರಿಯಂತೆ ।**
**ಸೋಮ ಶಂಕರನೆ ಭೈರವ ರುದ್ರನಂತೆ ॥**
**ಹೈಮವತಿ ಶಿವೆ ತಾನೇ ಕಾಳಿ ಚಂಡಿಕೆಯಂತೆ ।**
**ಪ್ರೇಮ ಘೋರಗಳೊಂದೆ-ಮಂಕುತಿಮ್ಮ ॥**

ಶ್ಯಾಮಸುಂದರನವನೆ=ಶ್ಯಾಮಸುಂದರನು+ಅವನೆ, ನರಹರಿಯಂತೆ=ನರ+ಹರಿ+ಅಂತೆ,
ಘೋರಗಳೊಂದೆ=ಘೋರಗಳು+ಒಂದೆ,
ಶ್ಯಾಮಸುಂದರನ=ಕೃಷ್ಣ, ವಿಷ್ಣು, ಚಕ್ರಿ=ಚಕ್ರಧಾರಿಯಾದ ವಿಷ್ಣು, ನರಹರಿ=ನರಸಿಂಹ,
ಸೋಮಶಂಕರ=ಚಂದ್ರನನ್ನು ಧರಿಸಿದ ಶಿವ, ಹೈಮವತಿ=ಹಿಮವಂತನ ಪುತ್ರಿ, ಪಾರ್ವತಿ, ಪ್ರೇಮ=ಒಲವು

ಶ್ಯಾಮಸುಂದರನೂ ಅವನೇ, ಚಕ್ರಹಿಡಿದು, ಶಿಶುಪಾಲನನ್ನು ಅಂತ್ಯಗೊಳಿಸಿದ ಶ್ರೀ ಕೃಷ್ಣನೂ ಅವನೇ, ತನ್ನ ಉಗುರುಗಳಿಂದ ಹಿರಣ್ಯಕಶಿಪುವನ್ನು ಕೊಂದ ನರಹರಿ ರೂಪದ ನರಸಿಂಹನೂ ಅವನೇ. ಸೌಮ್ಯ ರೂಪದ ಚಂದ್ರಶೇಖರನೂ ಅವನೇ, ಉಗ್ರರೂಪದ ಭೈರವನೂ, ರುದ್ರನೂ ಅವನೇ. ಸ್ತ್ರೀ ರೂಪಧರಿಸಿ ಹಿಮವಂತನ ಮಗಳಾದ ಪಾರ್ವತಿಯೂ ಅವನೇ, ಉಗ್ರರೂಪದ ಕಾಳಿ ಚಂಡಿಕೆಯೂ ಅವನೇ. ಹೀಗೆ ಪರಮಾತ್ಮ, ಪುರುಷ, ನರಸಿಂಹ, ಸೌಮ್ಯ

ಶ್ಯಾಮನ ರೂಪ ಮತ್ತು ಸ್ತ್ರೀ ರೂಪದಲ್ಲಿಯೂ, ಶಾಂತ ಮತ್ತು ಪ್ರೇಮ ರೂಪಗಳಲ್ಲಿಯೂ, ಘೋರ ಮತ್ತು ರುದ್ರ ರೂಪದಲ್ಲಿಯೂ ಪ್ರಕಟಗೊಂಡಿದ್ದಾನೆ ಎಂಬುದು ಈ ಮುಕ್ತಕದ ಹೂರಣ.

ಹಾಗಾದರೆ ಅವರು ಬೇರೆ ಇವರು ಬೇರೆ ಅಲ್ಲವೇ ಎಂದರೆ, ಖಂಡಿತ ಅಲ್ಲ. ಒಂದು ಪರಮ ಶಕ್ತಿ ಹಲವಾರು ರೂಪಗಳನ್ನು ಸಮಯಕ್ಕೆ ಸರಿಯಾಗಿ ಸಂದರ್ಭಕ್ಕೆ ಸರಿಯಾಗಿ ಧರಿಸಿ ತನ್ನ ಲೀಲೆಯನ್ನು ಮೆರೆಯುತ್ತದೆ. ಈ ರೀತಿಯ ಲೀಲಾ ವಿನೋದವನ್ನು ನಾ ಹಿಂದಿನ ಮುಕ್ತಕದ ವಿವರಣೆಯಲ್ಲೂ ನೀಡಿದ್ದೇನೆ. ಇದಕ್ಕೆ ಪೂರಕವಾಗಿ ವೇದ ಮತ್ತು ಉಪನಿಷತ್ತಿನಲ್ಲೂ ಉಲ್ಲೇಖವುಂಟು. ನಾರಾಯಣ ಸೂಕ್ತದಲ್ಲಿ "ಶಿವಶ್ಚ ನಾರಾಯಣಃ, ಶಕ್ರತ್ವ ನಾರಾಯಣಃ" ಎಂದು ಹೇಳಲ್ಪಟ್ಟಿದೆ. ಅಂದರೆ ಆ ಪರಮ ಶಕ್ತಿಯೇ ಎಲ್ಲ ರೂಪಗಳೂ ಎಂದು ಸಿದ್ಧವಾಗುತ್ತದೆ. ವೇದಗಳಲ್ಲಿ ಅತೀ ಪುರಾತನವಾದ ಋಗ್ವೇದದ "ಪುರುಷ ಸೂಕ್ತದಲ್ಲಿ" "ಸ ಬ್ರಹ್ಮಃ, ಸ ಶಿವಃ, ಸ ಹರಿಃ, ಸೇದ್ರಃ, ಸೋಕ್ಷರಃ ಪರಮಸ್ವರಾಟ್" ಎಂದು ಹೇಳಲ್ಪಟ್ಟಿದೆ. ಆದರೆ ಎಲ್ಲ ರೂಪಗಳೂ ಆ ಪರಮ ಪುರುಷನೇ ಧರಿಸಿ ನಮಗೆ ತನ್ನ ಭಿನ್ನತೆಯನ್ನೂ, ಸಾರ್ವಭೌಮತ್ವವನ್ನೂ, ಏಕತೆಯನ್ನೂ ತೋರಿದ್ದಾನೆಂದು ಅರ್ಥವಲ್ಲವೇ?

ಶ್ರೇಷ್ಠ ಭಗವದ್ಭಕ್ತರ ಲಕ್ಷಣವನ್ನು ಹೇಳುವಾಗ "ಶಿವೇ ಚ, ಪರಮೇಶೇ ಚ, ವಿಷ್ಣೌ ಚ ಪರಮಾತ್ಮನಿ ಸಮಬುದ್ಧಾ ಪ್ರವರ್ತಂತೆ ತೇವೈ ಭಾಗವತೋತ್ತಮಾಃ" ಎಂದು ಹೇಳಲ್ಪಟ್ಟಿದೆ. ಅಂದರೆ ಯಾರು ಶಿವ ಮತ್ತು ವಿಷ್ಣು ಎಂದು ಭೇದ ಮಾಡದೆ ಎರಡು ರೂಪದಲ್ಲೂ ಸಮಬುದ್ಧಿಯನ್ನು ಮತ್ತು ಸಮಭಾವವನ್ನು ಪ್ರದರ್ಶಿಸುತ್ತಾರೋ ಅವರೇ ಶ್ರೇಷ್ಠ ಭಾಗವತರು ಎಂದು ಹೇಳಿದೆ.

(139)

ಬ್ರಹ್ಮವೇ ಜೀವನವೋ 94-98 ಕಗ್ಗರಸಧಾರೆ

ವೇದವೇ ಪ್ರಮಾಣ ಎಂದು ಎಲ್ಲರೂ ಒಪ್ಪಿಕೊಳ್ಳುತ್ತಾರೆ, ವೇದವು ಸತ್ಯವೆಂದೂ ಒಪ್ಪಿಕೊಳ್ಳುತ್ತಾರೆ. ಆದರೂ ನಾವು ವೈಷ್ಣವರು ನಾವು ಶೈವರು, ಇವರು ನಮ್ಮ ದೇವರು ಅವರು ನಿಮ್ಮ ದೇವರು, ನಾವು ನಾಮ ಹಾಕಿಕೊಳ್ಳುತ್ತೇವೆ, ನೀವು ವಿಭೂತಿ ಹಚ್ಚಿಕೊಳ್ಳಿ, ಅವರು ಮುದ್ರೆ ಹಾಕಿಕೊಳ್ಳಲಿ ಎಂದು ಪರಮಾತ್ಮನಲ್ಲಿ ಇಲ್ಲದ

ಭೇದವನ್ನು ಸೃಷ್ಟಿಮಾಡಿ ನಮ್ಮ ನಮ್ಮೊಳಗೇ ಕಿತ್ತಾಡುವುದು ಕೇವಲ ಅಜ್ಞಾನವಲ್ಲವೇ? ನಾವು ಇಂಥಹ ಅಜ್ಞಾನಕ್ಕೆ ಬಲಿಯಾಗದೆ ಏಕರೂಪದ ಆ ಪರಮ ಚೇತನವನ್ನು ಆರಾಧಿಸುತ್ತಾ ನಮ್ಮಲ್ಲಿರುವ ಭೇದಗಳನ್ನು ಅಳಿಸುವ ಪ್ರಯತ್ನವನ್ನು ಮಾಡುವ,

**ಮುಕ್ತಕ-96**

**ಸತ್ಯವೆಂಬುದದೇನು ಬ್ರಹ್ಮಾಂಡ ತಾಂಡವದಿ ।**
**ನೃತ್ಯವೇ ಸತ್ಯವಲ ಕಡಲಲೆಯಬಾಳೊಳ್ ॥**
**ಮಿಥ್ಯೆಯಂಬುದೆ ಮಿಥ್ಯ ಜೀವನಾಟಕ ಸತ್ಯ ।**
**ಕೃತ್ಯವಿದು ಬೊಮ್ಮನದು-ಮಂಕುತಿಮ್ಮ ॥**

ಸತ್ಯವೆಂಬುದದೇನು=ಸತ್ಯವೆಂಬುದು+ಅದೇನು, ಕಡಲಲೆಯಬಾಳೊಳ್=ಕಡಲ+ಅಲೆಯ+ಬಾಳ+ಒಳ್, ಮಿಥ್ಯೆ=ಸುಳ್ಳು

ಇಡೀ ಬ್ರಹ್ಮಾಂಡದ ಶಾಂತ ಮತ್ತು ರುದ್ರ ತಾಂಡವದಿ, ಸತ್ಯ ಎಂಬುದು ಯಾವುದು. ನಮಗೆ ನಾವು ನಡೆಸುವ ಕಡಲ ಅಲೆಯಂತಹ ಜೀವನವೇ ಸತ್ಯವಲ್ಲವೇ? ಮಿಥ್ಯೆ ಎಂಬುದು ಇಲ್ಲವೇ ಇಲ್ಲ ಈ ಜೀವನದ ನಾಟಕದಲ್ಲಿ. ಇದೆಲ್ಲವೂ ಆ ಪರಬ್ರಹ್ಮನಾಡುವ ಜಗನ್ನಾಟಕವೆನ್ನುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಕಡಲ ಅಲೆಯಂತಹ ಜೀವನವೆನ್ನುತ್ತಾರೆ, ಹೌದು ಕಡಲ ಅಲೆಯಂತೆ ನಮ್ಮ ಜೀವನ ಎಂದು ಮೊದಲಾಯಿತು ಎಂದು ಹೇಳುವುದು, ಕಷ್ಟವಷ್ಟೇ ಅಲ್ಲ ಅಸಾಧ್ಯವೂ ಹೌದು. ಆ ಕ್ಷಣಕ್ಕೆ ನಮಗೆ ಕಾಣುವ ಆ ಕಡಲ ಅಲೆ ಸತ್ಯ. ಹಾಗೆಯೇ ಇಂದು ನಾವು ನಡೆಸುತ್ತಿರುವ ಜೀವನ ಸತ್ಯ. ಮಿಥ್ಯಾವಾದವೆನ್ನುವುದು ಒಂದು ಉಂಟು. ಜಗತ್ ಮಿಥ್ಯಾ ಎನ್ನುವ ಸಿದ್ಧಾಂತವನ್ನು ಪ್ರತಿಪಾದಿಸುವವರು ಇದ್ದಾರೆ. ಇದು ನಿತ್ಯವಲ್ಲವಾದ್ದರಿಂದ ಸತ್ಯವಲ್ಲ ಎನ್ನುವವರು ಹಲವರು. ಆದರೆ ಒಂದು ವಿಚಾರವನ್ನು ಗಮನಿಸಬೇಕಾಗಿದೆ. ನಾವು ಇರುವುದು ಇಂದಿಗೆ ಸತ್ಯ. ಹೌದಲ್ಲವೇ! ಎಂದೋ ಇಲ್ಲವಾಗಬಹುದು. ಆದರೆ ಇಂದಿನ ಜೀವನ ಸತ್ಯ. ಇದಕ್ಕೆ ಕಾರಣವೂ ಸತ್ಯ. ಹಾಗಿದ್ದ ಮೇಲೆ ಮಿಥ್ಯೆ ಹೇಗಾಗುತ್ತದೆ?

ಸಮುದ್ರದ ಅಲೆಗಳು ವಾಸ್ತವವಾಗಿ ಕೆಲಕ್ಷಣಗಳೇ ಇದ್ದು ಮಾಯವಾಗಿಬಿಡುತ್ತದೆ. ಅದನ್ನು ಮಿಥ್ಯ ಎನ್ನಲಾದೀತೇ. ಅದು ಸಮುದ್ರ ಮಟ್ಟದಿಂದ ಎದ್ದ ಆ ಕ್ಷಣಕ್ಕೆ ಸತ್ಯವಲ್ಲವೇ? ಹಾಗೆಯೇ ಕ್ಷಣ ಬಂಗುರವಾದ (ಕ್ಷಣದಲ್ಲೇ

ಭಂಗವಾಗುವಂತಹ) ನಮ್ಮ ಜೀವನವೂ ಸಹ ಕೆಲಕಾಲ ಇದ್ದು ನಂತರ ಇಲ್ಲದೆ ಹೋಗುವುದಾದರೂ ಇರುವಷ್ಟು ದಿನ ಇದು ಸತ್ಯ ತಾನೇ?





ಯಾರಿಗೋ ಬಿದ್ದು ಪೆಟ್ಟಾಗಿದೆ, ರಕ್ತ ಸುರಿಯುತ್ತಿದೆ. ಆಗ ಅವನಿಗೆ ನಾವು ವೇದಾಂತವನ್ನು ಹೇಳಿ "ಏ ಚಿಂತೆ ಮಾಡಬೇಡ ಈ ಪೆಟ್ಟು ಸತ್ಯವಾಗಿ ನಿನಗಾಗಿಲ್ಲ. ಏಕೆಂದರೆ ನೀನು ಎನ್ನುವುದೇ ಮಿಥ್ಯೆ. ಹಾಗಾಗಿ ನಿನಗಾಗಿರುವ ಪೆಟ್ಟೂ ಸಹ, ಇಲ್ಲಿ ಹರಿಯುತ್ತಿರುವ ನೆತ್ತರೂ ಸಹ ಮಿಥ್ಯೆ" ಎಂದರೆ ನಿಮ್ಮನ್ನು ಹುಚ್ಚನೆಂದು ಕರೆಯುತ್ತಾರೆ. ಲೌಕಿಕ ಬೇರೆ ಪಾರಮಾರ್ಥ ಬೇರೆ. ಲೌಕಿಕದಲ್ಲಿ ಎಲ್ಲವೂ ಸತ್ಯ. ಪಾರಮಾರ್ಥ್ಯದಲ್ಲಿ ಪರಮಾತ್ಮ ಮಾತ್ರ ಸತ್ಯ.

ಲೌಕಿಕ ಎನ್ನುವುದು ಸಕಲ ಜೀವರಾಶಿಗಳ ಇಲ್ಲಿನ ಜೀವನ, ಪಾರಮಾರ್ಥಿಕ ಎನ್ನುವುದು ಇಲ್ಲಿನ ಈ ಜೀವನವನ್ನು ಶಾಂತವಾಗಿಸುವ, ಆನಂದವಾಗಿಸುವ ಒಂದು ಸಾಧನ. ಇವೆರಡರ ಸಮನ್ವಯವೇ ನಮ್ಮ ಜೀವನಗಳ ತಳಹದಿಯಾಗಬೇಕು. ಹಾಗಾದಲ್ಲಿ ನಮ್ಮ ಜೀವನ ಸುಂದರವಾಗುವುದು. ವಾಚಕರೆ ನಮ್ಮ ಲೌಕಿಕ ಬದುಕೂ ಪರಮಾರ್ಥದ ತಳಹದಿಯಲ್ಲೇ ನಡೆದರೆ ನಾವು ಈ ಬದುಕಿಗೆ ನೀಡುವ ಮಹತ್ವ ಮತ್ತು ನಮ್ಮ ಈ ಬದುಕಿನೊಂದಿಗೆ ಇರುವ ಗಟ್ಟಿ ಅಂಟಿನಂತಹ ನಂಟು ಕಡಿಮೆಯಾಗಿ ನಮಗೆ ನೋವು ಕಡಿಮೆಯಾಗಬಹುದು. ಇಂತಹ ಪ್ರಯತ್ನವನ್ನು ನಾವೂ ಮಾಡಬೇಕು.

**ಮುಕ್ತಕ-97** **ಬ್ರಹ್ಮವೆಂಬುದುದದೇನು? ಕರ್ಮವೆಂಬುದದೇನು? |**

**ಬ್ರಹ್ಮಾಂಡಕಥೆಯೇನು? ಜೀವಿತವಿದೇನು? |**

**ಬ್ರಹ್ಮವೆಲ್ಲಕು ಮೂಲ ಮಾಯೆ ತತ್ಕೃತಿಜಾಲ |**

**ಬ್ರಹ್ಮವೇ ಜೀವನವೋ? ಮಂಕುತಿಮ್ಮ ||**

ಬ್ರಹ್ಮವೆಂಬುದುದದೇನು=ಬ್ರಹ್ಮ+ಎಂಬುದು+ಅದು+ಏನು,
ಕರ್ಮವೆಂಬುದದೇನು=ಕರ್ಮ+ಎಂಬುದು+ಅದು+ಏನು, ಜೀವಿತವಿದೇನು=ಜೀವಿತವು+ಅದು+ಏನು,
ಬ್ರಹ್ಮವೆಲ್ಲಕು=ಬ್ರಹ್ಮವು+ಎಲ್ಲಕು, ತತ್ಕುತಿಜಾಲ=ತತ್+ಕೃತಿ+ಜಾಲ,

ಈ ಮುಕ್ತಕದಲ್ಲಿ ಮಾನ್ಯ ಗುಂಡಪ್ಪನವರು ಈ ಬ್ರಹ್ಮ ಎಂಬುದು ಏನು? ಕರ್ಮ ಎಂಬುದು ಏನು? ಈ ಬ್ರಹ್ಮಾಂಡದ ಕಥೆ ಏನು? ನಮ್ಮ ಜೀವನವು ಏನು? ಈ ಜೀವನವು ಜಗತ್ತಿಗೆಲ್ಲಕ್ಕೂ ಮೂಲವಾದ ಆ ಬ್ರಹ್ಮನ

ಕ್ರಿಯೆಯಾದಂತ ಒಂದು ಮಾಯಾಜಾಲವೋ? ಬ್ರಹ್ಮನೇ ಜೀವನವೋ? ಎಂದು ಒಂದು ಮಹತ್ತರ ವಿಷಯವನ್ನು ಪ್ರಸ್ತಾಪಿಸುತ್ತಾರೆ.

ಬ್ರಹ್ಮ ಎಂದರೆ ಯಾರು ಅಥವಾ ಏನು? ಎಂದರೆ, ಸಕಲ ಚರಾಚರ ಸೃಷ್ಟಿಗೆ ಕಾರಣನಾದ ಆ ಪರಮ ಚೇತನಕ್ಕೆ ಬ್ರಹ್ಮನೆಂದು ಹೆಸರು. ಭಾರತೀಯ ಪುರಾಣಗಳಲ್ಲಿ ತ್ರಿಮೂರ್ತಿಗಳ ಪ್ರಸ್ತಾಪ ಬರುತ್ತದೆ. ಬ್ರಹ್ಮ ವಿಷ್ಣು ಮಹೇಶ್ವರ ಎಂದು. ಸೃಷ್ಟಿ ಸ್ಥಿತಿ ಲಯಗಳೆಂಬ ಕಾರ್ಯಗಳನ್ನು ಹಂಚಿಕೊಂಡಿದ್ದಾರೆ ಎಂದು ಹೇಳಲ್ಪಟ್ಟಿದೆ. ಹೇಗೆ ಒಬ್ಬನೇ ವ್ಯಕ್ತಿ ತಂದೆ, ಪತಿ, ಅಣ್ಣ, ತಮ್ಮ, ಮಗ ಮುಂತಾದ ಹೆಸರುಗಳಿಂದ ಮನೆಯಲ್ಲಿ ಗುರುತಿಸಲ್ಪಡುತ್ತಾನೋ ಮತ್ತೆ ಹೊರಗೆ ಸ್ನೇಹಿತ, ಅಧಿಕಾರಿ ನೌಕರ, ಮುಂತಾದ ಹೆಸರುಗಳಿಂದ ಕರೆಯಲ್ಪಡುತ್ತಾನೋ, ಹಾಗೆಯೇ ಒಂದೇ ಬೃಹತ್ ಚೇತನವು ಹಲವಾರು ಬಗೆಯ ಕಾರ್ಯನಿರ್ವಹಣೆಯನ್ನು ಮಾಡುತ್ತಾ ಹಲವಾರು ಹೆಸರುಗಳಿಂದ ಕರೆಯಲ್ಪಡುತ್ತದೆ.

ಯಾರು ಯಾವುದೇ ಹೆಸರಿನಿಂದ ಕರೆದರೂ ಆ ಮಹಾ ಚೇತನವೇ ಪರಬ್ರಹ್ಮ, ಅದರ ಕಾರ್ಯವೈಖರಿಯೇ ಕರ್ಮ, ಕರ್ಮವೆಂದರೆ ಕ್ರಿಯೆ. ಲೌಕಿಕ ಪ್ರಪಂಚದಲ್ಲಿ ನಾವು ಹೇಳುವ ಕರ್ಮವೇ ಬೇರೆ. ಇಲ್ಲಿ ಹೇಳಿರುವ ಕರ್ಮವೇ ಬೇರೆಯಾಗಿ ಕಂಡರೂ ಎರಡನ್ನೂ ಕೂಲಂಕುಷವಾಗಿ ಅವಲೋಕಿಸಿದರೆ ಇವೆರಡರ ಏಕತ್ವವನ್ನು ನಾವು ಮನಗಾಣಬಹುದು.

ಇಡೀ ಬ್ರಹ್ಮಾಂಡವೆ ಅವನ ಸೃಷ್ಟಿ. ಆದರೆ ಅದರ ಆದಿಯೂ, ಅಂತ್ಯವೂ ಯಾರಿಗೂ ತಿಳಿದಿಲ್ಲ. ಎಷ್ಟೆಷ್ಟೋ ವ್ಯಾಖ್ಯಾನಗಳಿದ್ದರೂ "ಇದಮಿತ್ಥಂ" ಎಂದು ಹೇಳುವ ಯಾವುದೇ ಒಂದು ನಿಖರವಾದ ತೀರ್ಮಾನಕ್ಕೆ ಬಂದಿಲ್ಲ. ಇನ್ನು ಜೀವನವೆಂದರೇನು? ಎಂದರೆ, ಈ ಸೃಷ್ಟಿಯ ಎಲ್ಲಕ್ಕೂ ಒಂದು ಕಾಲಮಾನ ಉಂಟು ಆ ಕಾಲಮಾನದಲ್ಲಿ ಆಯಾ ಕಾಯಗಳ ಸಂಪರ್ಕದಿಂದ ನಡೆಯುವ ವಿದ್ಯಮಾನಗಳೇ ಜೀವನವು.

ಆ ಪರಬ್ರಹ್ಮವೇ ಇಡೀ ಸೃಷ್ಟಿಗೆ ಮೂಲ ಮತ್ತು ಆ ಪರಬ್ರಹ್ಮನ ಕೃತಿಯೇ ಈ ಜಗತ್ತಿನ ಮಾಯಾ ಜಾಲ ಎಂದಿದ್ದಾರೆ ಶ್ರೀ ಡಿ.ವಿ.ಜಿಯವರು. ಅಂದರೆ ಇಡೀ ಬ್ರಹ್ಮಾಂಡವೇ ಆ ಪರಮ ಪುರುಷನ ಕ್ರಿಯೆಯೆಂದಾದ ಮೇಲೆ ಇಲ್ಲಿ ನಡೆಯುವ ಎಲ್ಲ ವಿದ್ಯಮಾನಗಳೂ ಅವನ ಕ್ರಿಯೆ ಅಂದರೆ ಕರ್ಮ ಎಂದು ಅರ್ಥ. ಹಾಗಾಗಿ ಇಲ್ಲಿ ನಡೆಯುವುದೆಲ್ಲವೂ ಆ ಪರಬ್ರಹ್ಮನು ತಾನೇ ಸೃಜಿಸಿದ ಈ ಜಗತ್ತಿನಲ್ಲಿ, ತಾನೇ ಎಲ್ಲವೂ ಆಗಿ, ತಾನೇ ಎಲ್ಲದರೊಳಗೂ ಸೇರಿ, ಎಲ್ಲ ಭಾವಗಳನ್ನೂ ತಾನೇ ಅನುಭವಿಸುತ್ತಿದ್ದಾನೆ ಎನ್ನುವುದು ಒಂದು ವಾದ. ಹಾಗಾಗಿ ನಾವು ನೀವು ಮತ್ತು ಈ ಜಗತ್ತಿನ ಎಲ್ಲವೂ ಆ ಪರ ಬ್ರಹ್ಮನೇ ಆಗಿ ಇಡೀ ಜೀವನವೇ ಬ್ರಹ್ಮನಾಟವೆಂದರೆ ಸಮರ್ಪಕವಾಗುವುದು. ಹಾಗಾಗಿ ಬ್ರಹ್ಮನೇ ಜೀವನ ಮತ್ತು ಜೀವನವೇ ಬ್ರಹ್ಮ.

ವಾಚಕರೆ, ಈ ಸೃಷ್ಟಿಯ ಮೂಲವನ್ನು ತಿಳಿಯುವುದು ಕಷ್ಟ ಮತ್ತು ಈ ಜಗತ್ತಿನಲ್ಲಿ ನಡೆಯುವ ವಿದ್ಯಮಾನಗಳ ಕಾರಣ ಮತ್ತು ಕರ್ತೃವನ್ನು ಅರಿಯುವುದೂ ಬಹುಶಃ ಅಸಾಧ್ಯ. ಅರಿತವರು ಭಾಗ್ಯವಂತರು. ನಾವೂ ಸಹ ಇದರ ಗೂಢತೆಯನ್ನು ಅರಿಯುವ ಪ್ರಯತ್ನವನ್ನು ಮಾಡಬಹುದು.

**ಮುಕ್ತಕ-98**

**ವಕ್ರಋಜುಮಿಶ್ರ ಜಗವದರ ಶೋಧನೆ ಧರ್ಮ |**
**ಪ್ರಾಕೃತಧ್ವನಿಮಿಶ್ರವದರಡುಗೆ ರಾಗ ||**
**ವ್ಯಾಕೃತದಿನವ್ಯಾಕೃತಾದಿಸತ್ವಕೆ ನಿನ್ನ |**
**ಜಾಗೃತಿಪ ಮತಿ ಧರ್ಮ-ಮಂಕುತಿಮ್ಮ ||**

ಜಗವದರ=ಜಗವು+ಅದರ, ಪ್ರಾಕೃತಧ್ವನಿಮಿಶ್ರವದರಡುಗೆ=ಪ್ರಾಕೃತ+ಧ್ವನಿ+ಮಿಶ್ರವು+ಅದರ+ಅಡುಗೆ, ವ್ಯಾಕೃತದಿನವ್ಯಾಕೃತಾದಿಸತ್ವಕೆ=ವ್ಯಾಕೃತದಿಂ+ಅವ್ಯಾಕೃತ+ಆದಿ+ಸತ್ವಕ್ಕೆ.

ವಕ್ರ=ಸೊಟ್ಟ, ಋಜು=ನೇರ, ಮಿಶ್ರ=ಸಮ್ಮಿಳಿತ, ಶೋಧನೆ=ಹುಡುಕಾಟ, ಪ್ರಾಕೃತ=ಸುಸಂಸ್ಕೃತವಲ್ಲದ, ವ್ಯಾಕೃತ=ವ್ಯವಸ್ತಿತ, ಜಾಗೃತಿಪ=ಜಾಗೃತಗೊಳಿಸುವ

(142)

ಕಗ್ಗರಸಧಾರೆ ಬ್ರಹ್ಮವೇ ಜೀವನವೋ 94-98

ಅಂಕು ಡೊಂಕುಗಳ, ನೇರ ಸೊಟ್ಟಗಳ, ಸುಳ್ಳು ಸತ್ಯಗಳ, ಕೇಡು ಲೇಸುಗಳ, ಬೆರಕೆಯೇ ನಮ್ಮ ಈ ಲೋಕ. ಇವುಗಳನ್ನು ಪರೀಕ್ಷಿಸಿ, ಶೋಧಿಸಿ ನೋಡಿದಾಗ ನಮಗೆ ಅರಿವಾಗುವುದು ಲೋಕ ಧರ್ಮ, ಸಂಸ್ಕಾರವಿಲ್ಲದ ಒರಟು ಯೋಚನೆ, ರಾಗಾದಿಗಳನ್ನು ಸುಸಂಸ್ಕೃತಗೊಳಿಸಿ ಒಂದು ವ್ಯವಸ್ಥೆಯನ್ನು ನಿರ್ಮಾಣಮಾಡಿ, ಶುದ್ಧವಾದ ಸತ್ಯದ ಅರಿವನ್ನು ಮೂಡಿಸುವುದೇ, ಎಚ್ಚರಗೊಳಿಸುವುದೇ ಧರ್ಮ ಎಂದು ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ ಪ್ರಸ್ತಾಪಮಾಡುತ್ತಾರೆ.

ಇಡೀ ಪ್ರಪಂಚ ಅಂಕು ಡೊಂಕಾಗಿ ಇದೆ. ಯಾವುದೂ ಸಮವಿಲ್ಲ. ಹೀಗಿರುವುದೇ ಧರ್ಮ. ಅದನ್ನು ಹೇಗೆ ಇದೆಯೋ ಹಾಗೆಯೇ ಅರಿತುಕೊಳ್ಳುವುದು ಧರ್ಮ. ಸತ್ಯವನ್ನರಿತಾಗ ಅರಿವು ಮೂಡುತ್ತದೆ. ಅರಿವು ಮೂಡಿದಾಗ ಸಂಶಯ ಮತ್ತು ಸಂದೇಹಗಳಿರುವುದಿಲ್ಲ. ನಮ್ಮ ಎಲ್ಲ ಓದು ವಿದ್ಯಾಭ್ಯಾಸ ಆಚಾರ ವಿಚಾರ ವಿಜ್ಞಾನ ಎಲ್ಲವೂ ನಮ್ಮನ್ನು ಅಸತ್ಯದಿಂದ ಸತ್ಯದೆಡೆಗೆ ಕೊಂಡು ಹೋಗಬೇಕು. ಆಗಲೇ ಅವುಗಳೆಲ್ಲಕ್ಕೂ ಒಂದು ಸಾರ್ಥಕತೆ. "ಅಸತೋಮಾ ಸದ್ಗಮಯ, ತಮಸೋಮಾ ಜ್ಯೋತಿರ್ಗಮಯ" ಎನ್ನುವ ಉಕ್ತಿಗಳಿಗೆ ಇದೇ ಅರ್ಥ.

ಮನುಷ್ಯ ಮೊದಲಿಗೆ ಪ್ರಾಕೃತನಾಗಿದ್ದ. ಎಲ್ಲ ಪ್ರಾಣಿಗಳಂತೆ ಅವನೂ(ಅವಳೂ, ಸೇರಿ) ಅಲೆಮಾರಿಯಾಗಿ ಸಿಕ್ಕ ಸಿಕ್ಕ ಆಹಾರಗಳನ್ನು ತಿನ್ನುತ್ತಾ, "ನಿದ್ರಾಹಾರಮೈಥುನ" ಈ ಮೂರು ಕೆಲಸದಲ್ಲಿ ನಿರತನಾಗಿದ್ದ, ಆದರೆ ಮನುಷ್ಯನಿಗೆ

ಯೋಚನಾ ಶಕ್ತಿ ಇದೆ. ಅವನಿಗೆ ಮನದಲ್ಲಿ ಪ್ರಶ್ನೆಗಳು ಉದ್ಭವವಾಗುತಿತ್ತು. ಆ ಪ್ರಶ್ನೆಗಳಿಗೆ ಉತ್ತರಗಳನ್ನು ಕಂಡುಕೊಳ್ಳುವ ಪ್ರಯತ್ನದಲ್ಲಿ ಮತ್ತಷ್ಟು ಪ್ರಶ್ನೆಗಳು ಉದ್ಭವವಾದವು. ತನ್ನ ವಿಚಾರ ಶಕ್ತಿಯನ್ನು ಉಪಯೋಗಿಸಿ ಅವನು ತನ್ನ ಸುತ್ತಲಿನ ಜಗತ್ತನ್ನು ಅರ್ಥೈಸುವುದಕ್ಕೆ ಪ್ರಯತ್ನಿಸಿದ. ಬೇರೆ ಬೇರೆ ಪ್ರದೇಶಗಳಲ್ಲಿನ ಪರಿಸರಕ್ಕೆ ತಕ್ಕಂತೆ ಅವನ ಸಂದೇಹಗಳಿರುತ್ತಿದ್ದವು. ಅದಕ್ಕೆ ತಕ್ಕಂತೆಯೇ ಅವನಿಗೂ ಉತ್ತರಗಳು ಹೊಳೆಯುತ್ತಿದ್ದವು. ಇದೇ ಪ್ರಕ್ರಿಯೆಯಲ್ಲಿ ಬೆಳೆದದ್ದೇ ನಾಗರೀಕತೆ. ಇಡೀ ಪ್ರಪಂಚದಲ್ಲಿ ಹತ್ತು ಹಲವಾರು ರೀತಿಯ ವೈವಿಧ್ಯಮಯ ನಾಗರೀಕತೆಯ ಬೆಳವಣಿಗೆ.

ಆದರೆ ಸತ್ಯವು ಯಾವಾಗಲೂ ಒಂದೇ ಆಗಿರುತ್ತದೆ. ಯಾವುದೇ ವಿಷಯದಲ್ಲಿ ಎರಡು ಸತ್ಯಗಳು ಇರಲು ಸಾಧ್ಯವಿಲ್ಲ. ಶುದ್ಧ ಸತ್ಯವನ್ನು ಅರಿಯಬೇಕು. ಸತ್ಯವನ್ನು ಕಂಡು ಮನಗಾಣಬೇಕು. ಅರಿವಿನಲ್ಲಿ ಗಟ್ಟಿಮಾಡಿಕೊಳ್ಳಬೇಕು ಮತ್ತು ವಿಚಲಿತರಾಗಬಾರದು. ಧರ್ಮವೆಂದರೆ ಸ್ವಭಾವವೆಂದು ಅರ್ಥ. ಗಾಳಿಗೆ ಬೀಸುವುದು, ನೀರಿಗೆ ಹರಿಯುವುದು, ಬೆಂಕಿಗೆ ಸುಡುವುದು, ಮೆಣಸಿನಕಾಯಿ ಖಾರವಾಗಿರುವುದು, ಬೆಲ್ಲ ಸಿಹಿಯಾಗಿರುವುದು, ಮನುಷ್ಯ ಮಾನವತೆಯಿಂದ ಇರುವುದು ಧರ್ಮ. ಇದರಲ್ಲಿ ಏರುಪೇರಾದರೆ ಎಂತಹ ಅನಾಹುತವಾಗುತ್ತದೆಂದು ಸ್ವಲ್ಪ ಯೋಚಿಸಿ ವಾಚಕರೆ. ಆದರೆ ಇಂದಿನ ಪರಿಸ್ಥಿತಿಯನ್ನು ನೋಡಿದರೆ ತೀವ್ರ ದುಃಖವಾಗುತ್ತದೆ.

ಏಕೆಂದರೆ, ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಎಲ್ಲವನ್ನೂ ಸತ್ಯವಾಗಿ ಕಂಡುಕೊಂಡು ಪ್ರಮಾಣಿಸಿ, ಧರ್ಮದ ಪರಿಭಾಷೆಯನ್ನು ಜಗತ್ತಿಗೆ, ವೇದ, ಉಪನಿಷತ್ತು, ಭಗವದ್ಗೀತೆ, ಭಾಗವತ, ಪುರಾಣಗಳು, ನೀತಿಕತೆಗಳು





ಮುಂತಾದವುಗಳ ಮೂಲಕ ಜನರನ್ನು ಸುಸಂಸ್ಕೃತರನ್ನಾಗಿಸಲು, ಹೇರಳ ಪ್ರಯತ್ನ ನಡೆದಿದೆ. ಆದರೆ ವಿತಂಡವಾದಿಗಳ ಪ್ರಭಾವ, ಪಾಶ್ಚಾತ್ಯ ಜೀವನದ ಪರಿಣಾಮ, ವಿಜ್ಞಾನದ ದುರುಪಯೋಗ ಮತ್ತು ಜನರಲ್ಲಿ ಮೌಲ್ಯಗಳ ಕುಸಿತದಿಂದ ಇಂದು "ಸತ್ಯೋರ್ಮಾ ಅಸತ್ಯಂಗಮಯ" ಅಂದರೆ ಸತ್ಯದಿಂದ ಅಸತ್ಯದೆಡೆಗೆ ಎಂದು ಆಗಿಬಿಟ್ಟಿದೆ. ಇದು ಎಲ್ಲ ಸಜ್ಜನರಿಗೂ ಗೊತ್ತಿರುವ ವಿಷಯವೇ. ಈ ಖಾಯಿಲೆಗೆ ಮದ್ದು ಒಂದು ಸಾಂಸ್ಕೃತಿಕ ಆಂದೋಲನವೇ ಆಗಬೇಕು. ನಮ್ಮ ನಿಮ್ಮಿಂದ ಆಗಬೇಕು. ಬನ್ನಿ ನಾವೂ ಸಹ ಅದಕ್ಕಾಗಿ ಪ್ರಯತ್ನ ಪಡೋಣ.

# ಮೇಯ-ಅಮೇಯ 99-103

**ಮುಕ್ತಕ-99**

**ಜಲಧಿತೀರದಿ ನಿಂತು ವೀಕ್ಷಿಸಿಕ್ಕೆಲಗಳಲಿ |**
**ಚಲವೊಂದಚಲವೊಂದು ಸಮವದಸಮವಿದು ||**
**ಕಲೆತಿರ್ಪುವಂತು ಮೇಯಾಮೇಯಗಳು ಜಗದಿ |**
**ಮಿಲಿತತೆಯಿನೇ ರುಚಿಯೋ-ಮಂಕುತಿಮ್ಮ ||**

ವೀಕ್ಷಿಸಿಕ್ಕೆಲಗಳಲಿ=ವೀಕ್ಷಿಸಿ+ಇಕ್ಕೆಳಗಳಲಿ, ಚಲವೊಂದಚಲವೊಂದು=ಚಲವೊಂದು+ಅಚಲವೊಂದು,
ಸಮವದಸಮವಿದು=ಸಮವದು+ಅಸಮವಿದು, ಕಲೆತಿರ್ಪುವಂತು=ಕಲೆತು+ಇರ್ಪುವಂತು,
ಮೇಯಾಮೇಯಗಳು=ಮೇಯ+ಅಮೇಯಗಳು
ಮೇಯ=ಅರಿವಿಗೆ ಬರುವಂಥಾದ್ದು, ಅಮೇಯ ಅರಿವಿಗೆ ಬಾರದ್ದು, ಚಲ-ಚಲಿಸುವುದು, ಅಚಲ-ಚಲನೆ ಇಲ್ಲದ್ದು.

ಸಮುದ್ರದ ತೀರದಲ್ಲಿ ನಿಂತು ಎರಡೂ ಬದಿಯಲ್ಲಿ ನೋಡಿದರೆ ಒಂದು ಕಡೆ ಸಮವಾಗಿರುವ ಕಡಲೂ ಇನ್ನೊಂದು ಬದಿಯಲ್ಲಿ ಅಸಮವಾಗಿರುವ ಭೂಮಿ, ಬೆಟ್ಟ ಗುಡ್ಡಗಳೂ ಕಾಣುತ್ತದೆ. ಇದರಂತೆ ಈ ಜಗತ್ತಿನಲ್ಲಿ ಹಲವು ಸಮವಾಗಿ ಮತ್ತೆ ಹಲವು ಅಸಮವಾಗಿಯೂ ಇವೆ. ಹೀಗೆ ಸಮತೆ ಮತ್ತು ಅಸಮತೆಯಿಂದ ಕೂಡಿ ಇರುವುದೇ ಜಗತ್ತು. ಕೆಲವು ನಮಗೆ ಅರ್ಥವಾಗುತ್ತದೆ. ಕೆಲವು ನಮ್ಮ ಅರಿವಿನ ಪರಿಧಿಯಿಂದಾಚೆಗೆ ಇದೆ. ಹೀಗಿರುವ ಸಮಾಸಮಗಳೇ ಜಗತ್ತಿಗೆ ಸೊಬಗನ್ನು ನೀಡಿದೆಯೋ? ಎಂದು ಕೇಳುತ್ತಾ ಒಂದು ಗಹನವಾದ ವಿಚಾರವನ್ನು ಪ್ರಸ್ತಾಪಿಸುತ್ತಾರೆ ಮಾನ್ಯ ಗುಂಡಪ್ಪನವರು.

ಈ ಜಗತ್ತು ವೈವಿಧ್ಯತೆಯಿಂದ ಕೂಡಿದೆ. ನೈಸರ್ಗಿಕ ಏರುಪೇರುಗಳು. ಕೆಲವು ಸಮ, ಕೆಲವು ಅಸಮ. ಕೆಲವು ನುಣುಪು, ಕೆಲವು ಒರಟು. ಕೆಲವಕ್ಕೆ ಬೃಹತ್ತಾದ ಗಾತ್ರ ಕೆಲವು ತೀರ ಸಣ್ಣವು. ಕೆಲವು ಒಂದೇ ಬಣ್ಣ ಮತ್ತೆ ಕೆಲವು, ಹಲವು ವರ್ಣ ರಂಜಿತ, ಕೆಲವು ಸಾಧು, ಕೆಲವು ದುಷ್ಟ, ಕೆಲವು ಅಲ್ಪಾಯುಷಿ ಮತ್ತೆ ಕೆಲವು ದೀರ್ಘಾಯುಷಿ. ಕೆಲವು ಅರ್ಥವಾಗುವುದು ಮತ್ತೆ ಕೆಲವು ಅರ್ಥವೇ ಆಗದು, ಹೀಗೆ ಹತ್ತು ಹಲವಾರು ಸಾವಿರಾರು, ವೈವಿಧ್ಯತೆಯಿಂದ ಕೂಡಿರುವುದೇ ಈ ಜಗತ್ತು.

ನಮಗೆ ಚೆನ್ನಾಗಿ ಪರಿಚಯವಿರುವ ಮಾನವ ಪ್ರಪಂಚದಲ್ಲಿಯೇ ಎಷ್ಟೊಂದು ಭೇದಗಳಿವೆಯಲ್ಲ. ಹೀಗೆ ಸಮ ಮತ್ತು ಅಸಮತೆ, ಮೇಯ ಮತ್ತು ಅಮೇಯಗಳಿಂದ ಕೂಡಿರುವ ಜಗತ್ತನ್ನು ಸೃಜಿಸಿ ಪರಮಾತ್ಮ, ಇವುಗಳಲ್ಲಿ ಇದ್ದುಕೊಂಡು ಅಥವಾ ಇಷ್ಟೊಂದು ವೈವಿಧ್ಯಮಯ ರೂಪಗಳನ್ನು ಹೊದ್ದುಕೊಂಡು ಪ್ರತಿಯೊಂದು ಭೇದವನ್ನೂ ಸಂತೋಷದಿಂದ ಅನುಭವಿಸುತ್ತಿದ್ದಾನೆ. ಅದು ಅವನದೇ ಸೃಷ್ಟಿ, ತನಗೆ ಹೇಗೆ ಬೇಕೋ ಹಾಗೆ ಮಾಡಿದ ಸೃಷ್ಟಿ, ಮಾಡಿದವನೂ ಅವನೇ, ಇರುವುದೂ ಅವನೇ ಮತ್ತು ಅನುಭವಿಸುವವನೂ ಅವನೇ. ಹಾಗೆ ಅವನಿಂದ ಸೃಷ್ಟಿಸಲ್ಪಟ್ಟ ಈ ಜಗತ್ತಿನಲ್ಲಿರುವ ಸಮ-ಅಸಮತೆಯನ್ನು, ವೈವಿಧ್ಯತೆಯನ್ನು ಪ್ರಶ್ನಿಸಿದರೆ, ಆ ಸೃಷ್ಟಿಕರ್ತನ ಕ್ರಿಯೆಯನ್ನೇ ಪ್ರಶ್ನಿಸಿದಂತೆ ಆಗುತ್ತದೆ ಅಲ್ಲವೇ?

ನಾವೂ ಸಹ ಆ ಜಗನ್ನಾಟಕ ಸೂತ್ರಧಾರಿಯಾದ ಪರಮಾತ್ಮನಿಂದ ಸೃಷ್ಟಿಸಲ್ಪಟ್ಟಿರುವ ಈ ಜಗತ್ತಿನ ಒಂದು ಅಂಶವಷ್ಟೇ. ಇಂತಹ ಸುಂದರ, ಬಣ್ಣ ಬಣ್ಣದ, ವೈವಿಧ್ಯಮಯ ಸೃಷ್ಟಿಯನ್ನು ನೋಡುತ್ತಾ, ಪರಮಾತ್ಮನ ಸೃಷ್ಟಿಯನ್ನು ಅಭಿನಂದಿಸುತ್ತಾ, ಅನುಭವಿಸುತ್ತಾ, ಕಾಪಾಡಲಾಗದಿದ್ದರೂ, ನಮ್ಮನ್ನು ಇಂತಹ ಒಂದು ಅದ್ಭುತ ಸೃಷ್ಟಿಯ ಭಾಗವನ್ನಾಗಿಸಿದ್ದಕ್ಕೆ ಆ ಪರಮಾತ್ಮನಿಗೆ ಕೃತಜ್ಞತೆ ತೋರುತ್ತಾ, ಇದನ್ನು ಹಾಳುಗೆಡವದೆ, ಟೀಕಿಸದೆ, "ಎಲ್ಲವೂ ಆ ಪರಮಾತ್ಮನ ಸೃಷ್ಟಿ, ನಾನೂ ಇದರ ಒಂದು ಭಾಗ, ಇದನ್ನು ಹಾಳುಮಾಡಲು ನನಗೇನೂ ಅಧಿಕಾರವಿಲ್ಲ, ಇದನ್ನು ಅನುಭವಿಸುವ ಮತ್ತು ಆನಂದಿಸುವ ಅರ್ಹತೆ ಮಾತ್ರ ನನಗುಂಟು, ಇದನ್ನು ಗೌರವಿಸಬೇಕು, ಇದನ್ನು ಕಾಪಾಡಬೇಕು, ಮುಂದಿನ ಪೀಳಿಗೆಗೆ ಇದನ್ನು ಕೊಡಲು ಇದು ನಾವು ನಮ್ಮ ಹಿಂದಿನವರಿಂದ ಪಡೆದ ಎರವಲು ಮಾತ್ರ" ಎಂಬ ಅರಿವಿನಿಂದ ಇದ್ದರೆ ಒಳಿತು, ಇಲ್ಲದಿದ್ದರೆ ಕೆಡುಕು.

ವಾಚಕರೆ ನಾವೇನು ಮಾಡಬೇಕು ಎನ್ನುವುದು ಎಲ್ಲರಿಗೂ ಗೊತ್ತಿರುವ ವಿಚಾರವೇ. ಹಾಗಾಗಿ ನಮ್ಮ ಪರಿಮಿತ ಮತಿಯೊಳಗೆ ಈ ಜಗತ್ತಿನ ವೈವಿಧ್ಯತೆಯನ್ನು ನೋಡಿ ಕೇವಲ ಅನುಭವಿಸಿ, ಅಭಿನಂದಿಸಿ, ಕಾಪಾಡುವ, ಆನಂದಿಸುವ ನಿರ್ಧಾರವನ್ನು ಇಂದೇ ಮಾಡೋಣವೆ?

**ಮುಕ್ತಕ-100** **ಅವಿದಿತಾಖಂಡಸತ್ವದಪಾರ ಜಲಧಿಯಲಿ |**

**ಭುವನದದ್ವೀಪ ಕಿಂಚೆನ್ಮಾತ್ರವಿದಿತ ||**

**ಪವಿತಾಂತರಕ್ಷಿ ಗಾಯೇರಡುವೊಂದೇ ವಸ್ತು |**

**ನವಗುಂಠಿತ ಬ್ರಹ್ಮ-ಮಂಕುತಿಮ್ಮ ||**

ಅವಿದಿತಾಖಂಡಸತ್ವದಪಾರ=ಅವಿದಿತ+ಅಖಂಡ+ಸತ್ವದ+ಅಪಾರ, ಕಿಂಚೆನ್ಮಾತ್ರವಿದಿತ=ಕಿಂಚಿತ್+ಮಾತ್ರ+ವಿದಿತ, ಪವಿತಾಂತರಕ್ಷಿ ಗಾಯೇರಡುವೊಂದೇ=ಪವಿತ+ಅಂತರ+ಅಕ್ಷಿಗೆ+ಎರಡು+ಒಂದೇ ವಸ್ತುವವಗುಂಠಿತ=ವಸ್ತುವು+ಅವಗುಂಠಿತ,

ಅವಿದಿತ=ನಮಗರಿವಿಲ್ಲದ, ಅಖಂಡ=ಸಂಪೂರ್ಣವಾದ, ತುಂಡರಿಸಲಾಗದ, ಸತ್ವದ=ಜ್ಞಾನದ, ಅಪಾರ ಜಲಧಿಯಲಿ=ವಿಶಾಲವಾದ ಜಲದಿಯಲಿ=ಸಮುದ್ರದಲಿ, ಭುವನದ=ಈ ಭೂಮಿಯ,





ಕಿಂಚೆನ್ಮಾತ್ರವಿದಿತ=ತಿಳಿದಿರುವುದು ಅಲ್ಪಮಾತ್ರ. ಪವಿತಾಂತರಕ್ಷಿಗೆ=ಪವಿತ್ರವಾದ, ಶುದ್ಧವಾದ ಒಳಗಣ್ಣಿಗೆ ಎರಡುವೊಂದೇವಸ್ತು=ಎರಡೂ ವಸ್ತುವನ್ನು ಒಂದೇ ಎನ್ನುವ ರೀತಿ, ಅವಗುಂಠಿತ=ಈ ಎರಡನ್ನೂ ಆವರಿಸಿರುವುದು ಒಂದೇ ವಸ್ತು. ಅದೇ ಬ್ರಹ್ಮ.

ಇಡೀ ಬ್ರಹ್ಮಾಂಡದಲ್ಲಿ ನಮ್ಮ ಭೂಮಿ ಬಹಳ ಸಣ್ಣದು. ನಮಗೆ ಕಾಣುವ ಸೂರ್ಯನ ಗಾತ್ರ ಭೂಮಿಯ ಗಾತ್ರಕ್ಕಿಂತ 13 ಲಕ್ಷ ಪಟ್ಟು ದೊಡ್ಡದು. ಅಬ್ಬಾ!!! ನಮ್ಮ ಅರಿವಿಗೆ ನಿಲುಕದ್ದು, ಹಾಗಾದರೆ ಇಡೀ ಬ್ರಹ್ಮಾಂಡಕ್ಕೆ ಹೋಲಿಸಿದರೆ ನಮ್ಮ ಭೂಮಿಯೆಷ್ಟರದ್ದು? ಈ ಭೂಮಿಯ ಮೇಲೂ, ಒಂದು ಪಾಲು ನೆಲ ಮತ್ತು ಮೂರು ಪಾಲು ನೀರು. ಹಾಗಾಗಿ ನಾವು ನಿಂತಿರುವ ನೆಲ ಈ ಜಗತ್ತಿನ ವ್ಯಾಪಕತ್ವಕ್ಕೆ ಹೋಲಿಸಿದರೆ ಒಂದು ಸೂಜಿ ಮೊನೆಯಷ್ಟೂ ಅಲ್ಲ.

ಇದನ್ನೇ ನಮಗರಿವಿಲ್ಲದ ಮತ್ತು ಅಖಂಡವಾದ ಇಡೀ ಜಗತ್ತಿನಲ್ಲಿ ಭೂಮಿಯ ಪಾಲು ಕಿಂಚಿನ್ಮಾತ್ರವೆಂದರು ಮಾನ್ಯ ಗುಂಡಪ್ಪನವರು.

ಹಾಗೆಯೇ "ಅವಿದಿತಾಖಂಡಸತ್ತ್ವದಪಾರ ಜಲಧಿಯಲಿ" ಎನ್ನುವಾಗ ವಿಶಾಲಜಲಧಿಯಲ್ಲಿ ಎಂದರೆ ಅಪಾರವಾದ ಜ್ಞಾನ ಸಮುದ್ರದಲ್ಲಿ ನಮಗೆ ತಿಳಿಯದಿರುವುದೇ ಅಧಿಕ. ಹಾಗೆ ತಿಳಿದಿರುವುದೂ ಸಹ ಕಿಂಚಿನ್ಮಾತ್ರವೇ ಎಂಬುದೂ ಸಹ ಮಾನ್ಯ ಗುಂಡಪ್ಪನವರ ಈ ಮುಕ್ತಕದ ಹೂರಣ. ಈ ಜಗತ್ತಿನಲ್ಲಿರುವ ಎಲ್ಲ ಜ್ಞಾನದ ವಿಶಾಲತೆ ಮತ್ತು ವ್ಯಾಪಕತೆಯನ್ನು ನೋಡಿದರೆ, ನಮಗೆ ತಿಳಿದಿರುವುದು ಎಷ್ಟು ಎಂದರೆ ಒಂದು ಸೂಜಿ ಮೊನೆಯನ್ನು ಲಕ್ಷಪಾಲು ಮಾಡಿದರೆ, ಆ ಲಕ್ಷದಲ್ಲಿ ಒಂದೂ ಅಲ್ಲ, ಅಲ್ಲವೇ?

ಬ್ರಹ್ಮವೆಂದರೆ ಜ್ಞಾನ ಸ್ವರೂಪ. ಆ ಜ್ಞಾನವನ್ನು ಅರಿಯಬೇಕಾದರೆ ನಾವು ನಮ್ಮ ಅಂತಃಚಕ್ಷುವಿನಿಂದ ನೋಡಬೇಕು. ನೋಡುವ ಚಕ್ಷು ಯಾವುದೇ ರೀತಿಯ ಪೂರ್ವಾಗ್ರಹವಿಲ್ಲದೆ ಶುದ್ಧವಾಗಿರಬೇಕು. ಅಂತಹ ಪವಿತ್ರ ಮತ್ತು ಶುದ್ಧವಾದ ಅಂತಃಕರಣದಿಂದ ನೋಡಿದರೆ ಅರಿವಾಗಬಹುದು. ಆದರೆ ನಮಗೆ ಮಿತಿಗಳುಂಟು. ಭಾಷೆಯ, ಜಾತಿಯ, ಧರ್ಮದ, ಪಂಗಡದ ಹೀಗೆ ಹತ್ತು ಹಲವಾರು ಗೋಡೆಗಳನ್ನು ನಾವು ನಮ್ಮ ಸುತ್ತ ನಿರ್ಮಿಸಿಕೊಂಡಿರುವಾಗ ಆ ಶುದ್ಧ ಮನಸೂ ಇರಲು ಸಾಧ್ಯವಿಲ್ಲ. ಪರಿಶುದ್ಧಮನಸ್ಸಿಲ್ಲದೆ ಜ್ಞಾನವೂ ದೂರ. ಅದನ್ನು ಪಡೆಯಬೇಕಾದರೆ, ಶುದ್ಧವಾದ ಪ್ರಯತ್ನ ಬೇಕು. ಪ್ರಯತ್ನಕ್ಕೆ ಪೂರಕವಾಗಿ ಗುರುವಿನ ಮಾರ್ಗದರ್ಶನ ಬೇಕು. ಅಹಂಕಾರ ಬಿಡಬೇಕು.

ಇದನ್ನೇ ಸತ್ಸಂಗತ್ವೆ ನಿಸ್ಸಂಗತ್ವಂ, ನಿಸ್ಸಂಗತ್ವೆ ನಿರ್ಮೋಹತ್ವಂ, ನಿರ್ಮೋಹತ್ವಂ ನಿಶ್ಚಲ ತತ್ವಂ, ನಿಶ್ಚಲ ತತ್ವ ಜೀವನ್ಮುಕ್ತಿ" ಎಂದಿದ್ದಾರೆ. ಸತ್ಸಂಗದಲ್ಲಿದ್ದರೆ, ಅಸತ್ತಿನ ನಿಸ್ಸಂಗವಾಗುತ್ತದೆ, ಅಸತ್ತಿನ ಸಂಗ ಬಿಟ್ಟರೆ ಮೋಹ ನಶಿಸಿಹೋಗುತ್ತದೆ, ಮೋಹ ಹೋದರೆ ಪರಮಾತ್ಮ ತತ್ವ, ಸಂದೇಹ, ಸಂಶಯಗಳಿಲ್ಲದೆ ಗಟ್ಟಿಯಾಗುತ್ತದೆ, ನಿಶ್ಚಲವಾಗುತ್ತದೆ, ನಿಶ್ಚಲವಾದ ತತ್ವಜ್ಞಾನದಿಂದ ಜೀವ, ಬಂಧನಗಳಿಂದ ಮುಕ್ತನಾಗುತ್ತಾನೆ. ಈ ವಿಧದಲ್ಲಿ ಜ್ಞಾನ ಪ್ರಾಪ್ತಿಯಾದರೆ, ಆಗ ಜಡ ಜೀವದಲ್ಲಿ ಅಂದರೆ ವಸ್ತು ಮತ್ತು ಚೇತನದ ನಡುವಿನ ಭೇದವೂ ಅಳಿಸಿಹೋಗುತ್ತದೆ. ಏಕೆಂದರೆ ಬ್ರಹ್ಮವೇ ಎಲ್ಲವೂ. ಅಖಂಡ ಜ್ಞಾನವೇ ಬ್ರಹ್ಮ. ಎಲ್ಲವೂ ಬ್ರಹ್ಮವೆಂದಾದ ಮೇಲೆ, ಜಡ ಜೀವಗಳ ಭೇದ ಅಳಿಸಿಹೋಗಿ ಶುದ್ಧಜ್ಞಾನ ನಮಗೆ ಲಭ್ಯವಾಗುತ್ತದೆ.

ವಾಚಕರೆ, ಈ ಜಗತ್ತಿನಲ್ಲಿ ಯಾರಿಗೆ ಏನು ಬೇಕೋ ಅದೆಲ್ಲವೂ ಇದೆ. ನಮ್ಮ ಆಯ್ಕೆ ಸರಿಯಾಗಿದ್ದರೆ, ನಮಗೆ ಎಲ್ಲವೂ ಸರಿಯಾದದ್ದೇ ಲಭ್ಯವಾಗುತ್ತದೆ. ಆಯ್ಕೆ ಸರಿಯಿಲ್ಲದಿದ್ದರೆ ಯಾವುದೂ ಸಮರ್ಪಕವಾಗಿರುವುದಿಲ್ಲ. ನಾವು ಒಳ್ಳೆಯ ಆಯ್ಕೆಯಿಂದ ಒಳ್ಳೆಯದನ್ನೇ ಪಡೆಯುವ ಪ್ರಯತ್ನವನ್ನು ಮಾಡೋಣವೆ?

**ಮುಕ್ತಕ-101** **ಹಾಲಿನೊಳು ಬೆಣ್ಣೆ ಕಡಲೊಳಗೆ ನೀರ್ಗಲ್ಲವೊಲು |**
**ತೇಲುವುದಮೇಯಸತ್ವದಲಿ ಮೇಯ ಜಗ ||**
**ಮೂಲದಶೆಯೊಳಗೊಂದು, ಮಾಪನದ ಬಗೆಗೆರಡು |**
**ಗಾಳಿಯುಸುರುಗಳಂತೆ-ಮಂಕುತಿಮ್ಮ ||**

ನೀರ್ಗಲ್ಲವೊಲು=ನೀರ್ಗಲ್ಲ+ವೊಲು, ತೇಲುವುದಮೇಯಸತ್ವದಲಿ=ತೇಲುವುದು+ಅಮೇಯ+ಸತ್ವದಲಿ, ಮೂಲದಶೆಯೊಳಗೊಂದು=ಮೂಲ+ದಶೆಯೊಳಗೆ+ಒಂದು, ಬಗೆಗೆರಡು=ಬಗೆಗೆ+ಎರಡು, ಗಾಳಿಯುಸುರುಗಳಂತೆ=ಗಾಳಿ+ಉಸುರುಗಳಂತೆ.

ನೀರ್ಗಲ್ಲವೊಲು=ನೀರಮೇಲೆ ತೇಲುವ ಮಂಜಿನ ಗಡ್ಡೆಯಂತೆ, ತೇಲುವುದಮೇಯಸತ್ವದಲಿ=ಅರಿವಿಲ್ಲದ್ದು, ಅರಿವಿನ ಅಗಾಧ ಕಡಲಲ್ಲಿ ತೇಲುತ್ತಿದೆ, ಮೂಲದಶೆಯೊಳಗೊಂದು=ಮೂಲ ರೂಪದಲ್ಲಿ ಒಂದು, ಮಾಪನದ ಬಗೆಗೆರಡು=ಅರಿವಿನ ಅಳತೆಗೆ ಬರುವುದು ಎರಡು, ಗಾಳಿಯುಸುರುಗಳಂತೆ=ಗಾಳಿ ಮತ್ತು ಉಸುರುಗಳಂತೆ.

ಹಾಲಿನಲ್ಲಿ ಬೆಣ್ಣೆ ತೇಲುವಂತೆ, ಕಡಲಿನಲ್ಲಿ ಮಂಜಿನಗಡ್ಡೆ ತೇಲುವಂತೆ, ಅಗಾಧ ಅಜ್ಞಾನದ ಕಡಲಲ್ಲಿ ಜ್ಞಾನ ತೇಲುತ್ತಿದೆ. ಹೀಗೆ ಮೂಲ ರೂಪದಲ್ಲಿ ಒಂದರಂತೆ ಕಂಡರೂ ಅರ್ಥೈಸಿದರೆ, ಸತ್ಯರೂಪದ ಅರಿವಾಗುತ್ತದೆ. ಹೇಗೆ ಹೊರಗಿರುವುದು ಗಾಳಿಯಾದರೆ ನಮ್ಮ ಜೀವನಕ್ಕೆ ಹೇತುವಾದದ್ದನ್ನು "ಉಸಿರು' ಎಂದು ಕರೆಯುತ್ತೇವೆ ಎಂದು ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ ವ್ಯಾಖ್ಯಾನಮಾಡಿದ್ದಾರೆ.

ಇಡೀ ಜಗತ್ತು ಬ್ರಹ್ಮನಿಂದ ಆವೃತವಾಗಿದೆ. 'ವಿಶ್ವಂ ವ್ಯಾಪ್ನೋತಿ, ವಹತಿ, ಪ್ರವಹತಿ ಚ ವಿಷ್ಣು:" ಎಂದು ಒಂದು ವ್ಯಾಖ್ಯಾನವಿದೆ. ಅರ್ಥಾತ್, ಇಡೀ ವಿಶ್ವವನ್ನು ವ್ಯಾಪಿಸಿಕೊಂಡು, ಎಲ್ಲೆಡೆಯಲ್ಲೂ ಹರಿಯುತ್ತಾ, ಎಲ್ಲದರಲ್ಲೂ ಸೇರಿಕೊಂಡಿರುವುದೇ, ವಿಷ್ಣು ಎಲ್ಲೆಡೆಯಲ್ಲಿ ಇದ್ದರೂ ನಮ್ಮ ಅರಿವಿಗೆ ಬಾರದಾಗಿ ಅಮೇಯವಾಗಿದೆ. ಅಮೇಯವೆಂದರೆ ಅರಿವಿಗೆ ಬಾರದಿರುವುದು. ಅದನ್ನು "ಮೇಯ"ವಾಗಿಸಬೇಕಾದರೆ ಚಿಂತನೆ, ಮಂಥನ, ಧ್ಯಾನ, ಅಧ್ಯಯನ ಮುಂತಾದವು ಬೇಕು. ಹಾಗೆ ಎಲ್ಲೆಡೆಯಲ್ಲಿರುವ ಜ್ಞಾನವನ್ನು ಸಮಗ್ರವಾಗಿ ಒಂದು ರೂಪದಲ್ಲಿ ನಮ್ಮ ಅರಿವಿಗೆ ತಂದುಕೊಳ್ಳುವುದೇ ಸಾಧನೆ.

ಜ್ಞಾನ ಸಾಗರ ತನ್ನ ಸ್ಥಾನದಲ್ಲಿ ತಾನು ಇದೆ. ಪ್ರಾಣಿಗಳು ಈ ಜಗತ್ತಿನಲ್ಲಿ ಉದ್ಭವವಾಗುವ ಮೊದಲಿಂದಲೂ ಹೇಗೆ, ಗಾಳಿ ಎಲ್ಲೆಡೆಯಲ್ಲೂ ವ್ಯಾಪಿಸಿಕೊಂಡಿರುವಂತೆ, ನಮ್ಮ ಅರಿವಿಗೆ ಬರುವ ಮುಂಚೆಯೂ ಜ್ಞಾನವಲ್ಲಿತ್ತು, ಹಾಲಿನಲ್ಲಿ ಬೆಣ್ಣೆ ಹೇಗೆ ವ್ಯಾಪಿಸಿಕೊಂಡಿದೆಯೋ, ಹಾಗೆ. ಅದನ್ನು ಕಡೆದು ಮಥಿಸಿ ನಮ್ಮ ಅರಿವಿಗೆ ತಂದುಕೊಂಡಾಗ ಅದು ನಮ್ಮ "ಅರಿವು" ಅಥವಾ "ಜ್ಞಾನ"ವಾಗುತ್ತದೆ. ನಮಗರಿವಿಲ್ಲದಿದ್ದರೂ ಈ ಅಗಾಧ ವಿಶ್ವವಿಲ್ಲವೇ? ಹಾಗೆಯೇ ನಮಗೆ ಗೊತ್ತಿಲ್ಲದ ಅಗಾಧ ಜ್ಞಾನ ಎಲ್ಲೆಲ್ಲೂ ಉಂಟು.





ನಾವು ನಮ್ಮ ಯೋಗ್ಯತೆ ಮತ್ತು ಶಕ್ತಿಗೆ ಅನುಸಾರವಾಗಿ ಅದನ್ನು ಪಡೆದುಕೊಳ್ಳಬಹುದು. ಎಲ್ಲೆಲ್ಲೂ ಯಥೇಚ್ಛವಾಗಿ ಗಾಳಿಯಿದ್ದರೂ ನಮ್ಮ ಶ್ವಾಸಕೋಶಗಳಲ್ಲಿ ಎಷ್ಟು ತುಂಬಿಕೊಳ್ಳಬಹುದೋ ಅಷ್ಟು ನಮ್ಮ ಮತ್ತು ಅದು ನಮ್ಮ ಉಸಿರು. ಪ್ರಾಣಾಯಾಮ ಮುಂತಾದ ಕ್ರಿಯೆಗಳಿಂದ ಸ್ವಲ್ಪ ಹೆಚ್ಚು ಗಾಳಿ ಎಳೆದುಕೊಳ್ಳಬಹುದು. ಹಾಗೆ ನಮ್ಮ ಬುದ್ಧಿ ಶಕ್ತಿಯನ್ನೂ ಪ್ರಯತ್ನಪೂರ್ವಕವಾಗಿ ಹೆಚ್ಚಿಸಿಕೊಳ್ಳಬಹುದು. ಆಗ ಅದು ನಮ್ಮ ಜ್ಞಾನವಾಗುತ್ತದೆ. ಒಂದೇ "ಜ್ಞಾನ" ನಮಗೆ ಹೀಗೆ ಎರಡಾಗಿ ಕಾಣುತ್ತದೆ ಎನ್ನುತ್ತಾರೆ ಶ್ರೀ ಡಿ.ವಿ.ಜಿ.ಯವರು.

**ಮುಕ್ತಕ-102** **ಬ್ರಹ್ಮ, ಕಾಯ ನಿರ್ಣೇಯವದರೊಳು ಮನವನಿರ್ಣೇಯ |**

ಸ್ನಾಯು ಸಂಖ್ಯೆಯ ಜೀವಳಮಸಂಖ್ಯೆಯ ||
ಮೇಯಾಪ್ರಮೇಯಮಿಶ್ರಣವಿಂತು ನರಜಂತು |
ನೇಯವದು ವಿಶ್ವಕಂ-ಮಂಕುತಿಮ್ಮ ||

ನಿರ್ಣೇಯವದರೊಳು=ನಿರ್ಣೇಯವು+ಅದರೊಳು, ಮನವನಿರ್ಣೇಯ=ಮನವು+ಅನಿನಿರ್ಣೇಯ,
ಜೀವಳಮಸಂಖ್ಯೆಯ=ಜೀವಳಂ+ಅಸಂಖ್ಯೆಯ.
ಮೇಯಾಪ್ರಮೇಯಮಿಶ್ರಣವಿಂತು=ಮೇಯ+ಅಪ್ರಮೇಯ+ಮಿಶ್ರಣವು+ಇಂತು,
ಸ್ನಾಯು=ಮಾಂಸಖಂಡಗಳು, ಮೇಯ=ಅರಿವಿಗೆ ಬರುವುದು, ಅಪ್ರಮೇಯ=ಅರಿವಿಗೆ ನಿಲುಕ್ಕದ್ದು,
ನರಜಂತು=ಮನುಷ್ಯ ಪ್ರಾಣಿ, ನೇಯವದು=ಅನ್ವಯವು.

ನಮ್ಮ ಶರೀರದ ರಚನೆಯನ್ನು ಇದು ಹೀಗೇ ಇದೆ' ಎಂದು ನಿರ್ಣಯಿಸಬಹುದು. ಆದರೆ ಮನದ ರಚನೆ ಮತ್ತು ಮನದ ಇಂಗಿತವನ್ನು ನಿರ್ಣಯಿಸುವುದು ಸಾಧ್ಯವೇ ಇಲ್ಲ. ಶರೀರದಲ್ಲಿ ಎಷ್ಟು ಮಾಂಸಖಂಡಗಳಿವೆ ಎಂದು ಲೆಕ್ಕ ಹಾಕಿಬಿಡಬಹುದು, ಆದರೆ ಜೀವನವನ್ನು ಅಳೆಯುವುದು ಮತ್ತು ಲೆಕ್ಕಹಾಕುವುದು ಸಾಧ್ಯವಿಲ್ಲ. ಹೀಗೆ ಮನುಷ್ಯ ಪ್ರಾಣಿ ಮೇಯ, ಅಂದರೆ ನಿಖರವಾಗಿ ನೋಡಿ ಹೇಳಬಹುದಾದ ಮತ್ತು ಅಪ್ರಮೇಯ, ಎಂದರೆ ಹೇಳಲು, ಊಹಿಸಲು, ಅಳೆಯಲು ಅಸಾಧ್ಯವಾದದವುಗಳಿಂದ ಕೂಡಿದ್ದಾನೆ ಎಂದು ಹೇಳುತ್ತಾ, ಈ ರೀತಿಯ ವರ್ಣನೆ ಇಡೀ ಜಗತ್ತಿಗೂ ಅನ್ವಯಿಸುತ್ತದೆ ಎಂದು ಹೇಳುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಅಲ್ಲವೇ ವಾಚಕರೆ !!! ಒಂದು ತಲೆ ಎರಡು ಕೈ, ಎರಡು ಕಾಲು, ಒಂದು ಹೃದಯ, ಒಂದು ಜಠರ, ಮುಂತಾದ ಎಲ್ಲವನ್ನೂ ಎಣಿಸಿಬಿಡಬಹುದು, ಮೂಳೆಗಳು, ನರಗಳು, ರಕ್ತ ಕಣಗಳು ಮತ್ತು ರಕ್ತ ಕಣಗಳಲ್ಲಿನ ಬೇರೆ ಬೇರೆ ಅಂಶಗಳು, ದೇಹದಲ್ಲಿನ ರಾಸಾಯನಿಕಗಳು, ಎಲ್ಲವನ್ನೂ ಇಂದು ಇಷ್ಟಿತ್ತು, ಈ ಹಿಂದಿನ ಮೂರು ತಿಂಗಳಲ್ಲಿ ಸರಾಸರಿ ಇಷ್ಟಿತ್ತು ಎಂದು ಒಂದು ರಕ್ತ ಪರೀಕ್ಷೆ ಮತ್ತು ಒಂದು ಮೂತ್ರ ಪರೀಕ್ಷೆ ಮಾಡಿ ಹೇಳಿಬಿಡುತ್ತಾರೆ. ಏಕೆಂದರೆ ಇದು ಮೇಯ, ಅರಿಯಬಹುದಾದಂಥಾದ್ದು.

ಆದರೆ ಎಷ್ಟು ಬುದ್ದಿ ಇದೆ, ಎಷ್ಟು ಮನಸ್ಸಿದೆ, ಆತ್ಮ ಹೇಗಿದೆ, ಮನಸ್ಸು ಎಲ್ಲೆಲ್ಲಿ ಹೋಗಿತ್ತು. ಒಂದು ವಾರದಲ್ಲಿ ಬುದ್ಧಿ ಏನೇನು ಗ್ರಹಿಸಿತು, ಎಷ್ಟನ್ನು ಶೇಖರಿಸಿ ಇಟ್ಟುಕೊಂಡಿದೆ, ಎಷ್ಟನ್ನು ಮರೆತುಹೋಗಿದೆ, ಆತ್ಮ ಎಂದರೇನು.

ಅದರ ರೂಪ ಹೇಗಿದೆ, ಅದಕ್ಕೆ ವಯಸ್ಸೆಷ್ಟು ಎಂದು ಅಂದಾಜು ಮಾಡಲು ಸಾಧ್ಯವಿಲ್ಲ. ಇದು ಅಪ್ರಮೇಯ, ಅರಿವಿಗೆ ನಿಲುಕದ್ದು.

ಹಾಗೆಯೆ, ಈ ಜಗತ್ತಿನಲ್ಲಿ ಇರುವ ಮೂರ್ತರೂಪದ ವಸ್ತುಗಳನ್ನು ಲೆಕ್ಕ ಹಾಕಿಬಿಡಬಹುದು. ಸೂರ್ಯ, ಸೂರ್ಯನ ಗಾತ್ರ, ಅವನ ತಾಪಮಾನ, ಭೂಮಿಗೂ ಸೂರ್ಯನಿಗೂ ಇರುವ ಅಂತರ, ಸೂರ್ಯನ ಈ ಸೌರಮಂಡಲದಲ್ಲಿ ಇರುವ ಗ್ರಹಗಳು, ಅವುಗಳ ಪರಸ್ಪರ ಅಂತರ, ತಾಪಮಾನ, ಹವಾಮಾನ, ಹಾಗೆಯೇ ಅನ್ಯ ಸೌರ ಮಂಡಲಗಳು, ಹೀಗೆ ಎಲ್ಲವನ್ನೂ ಹೆಚ್ಚ ಕಮ್ಮಿ ಲೆಕ್ಕ ಹಾಕಿಬಿಡಬಹುದು. ಇಲ್ಲಿ ಅಂದರೆ ಭೂಮಿಯಮೇಲೆ ಆಗುವ ಬದಲಾವಣೆಗಳು ಮತ್ತು ಅದಕ್ಕೆ ಕಾರಣಗಳನ್ನೂ ಹೆಚ್ಚ ಕಮ್ಮಿ ಹೇಳಿಬಿಡಬಹುದು. ಇದು ಮೇಯ. ಅರಿಯಲು ಸಾಧ್ಯವಾದದ್ದು.

ಆದರೆ ಅದು ಏಕೆ ಆಗುತ್ತದೆ? ಹಾಗೆಲ್ಲಾ ಆಗುವುದರ ಹಿಂದೆ ಇರುವ ಶಕ್ತಿ ಯಾವುದು? ಆ ಶಕ್ತಿಯ ಸ್ವರೂಪವೇನು? ಆ ಶಕ್ತಿ ಹಾಗೆ ವರ್ತಿಸುವುದಕ್ಕೆ ಕಾರಣವೇನು? ಅದರ ಆದಿ ಯಾವುದು ಮತ್ತು ಅದಕ್ಕೆ ಅಂತ್ಯ ಉಂಟೆ? ಹೀಗೆ ಯಾವುದನ್ನೂ ಊಹಿಸಲೂ ಸಾಧ್ಯವಿಲ್ಲ. ಇದು "ಅಪ್ರಮೇಯ", ಎಣಿಕೆಗೆ ಬಾರದ್ದು. ಪ್ರಶ್ನೆಗಳು ಪ್ರಶ್ನೆಗಳಾಗಿಯೇ ಉಳಿಯುತ್ತವೆ.

ಈ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಳ್ಳಲು, ನಾನಾ ಪ್ರಯತ್ನಗಳೇ ಇಂದಿನ ಧರ್ಮಗಳು (ಸಾಮಾನ್ಯ ಅರ್ಥದಲ್ಲಿ), ಮತಗಳು, ಜಾತಿಗಳು, ಪುರಾಣಗಳು, ಸಿದ್ಧಾಂತಗಳು. ಇವು ಎಲ್ಲ ಧರ್ಮಗಳಲ್ಲೂ ಇವೆ. ಎಲ್ಲರೂ ಅವರವರದೇ ವ್ಯಾಖ್ಯಾನವನ್ನು ಕೊಡುತ್ತಾರೆ. ಅದು ಅವರ ಅನುಭವದ ಆಧಾರದ ಮೇಲೆ ನಿಂತಿರುತ್ತದೆ. ಹಾಗಾಗಿ ಮೇಯವು, ಕಾಣುವಂಥಾದ್ದು, ಇಂದ್ರಿಯ ಗ್ರಾಹ್ಯ. ಆದರೆ ಅಪ್ರಮೇಯವು ಇಂದ್ರಿಯ ಗ್ರಾಹ್ಯವಲ್ಲ ಅದು ಅನುಭವ ವೇದ್ಯ. ಅಂತಹ ಅನುಭವವನ್ನು ಎಲ್ಲರೂ ಪಡೆಯಬಹುದು. ಅದಕ್ಕೆ ಗುರುವಿನ ಮಾರ್ಗದರ್ಶನ, ಧ್ಯಾನ, ಅಧ್ಯಯನ ಮುಂತಾದವು ಬೇಕು. ಅಪ್ರಮೇಯವಾದ ಈ ಜಗತ್ತಿನ ಸೃಷ್ಟಿ ಸ್ಥಿತಿ ಲಯಗಳಿಗೆ ಕಾರಣವಾದ ಆ ಪರಮಾತ್ಮ ವಸ್ತುವಿನ ಪರಿಮಾಣ ಅಥವಾ ಅಳತೆಯನ್ನು ನಿರೂಪಿಸಲು ಸಾಧ್ಯವೇ ಇಲ್ಲ. ಅದನ್ನು ಕೇವಲ ಅನುಭವದಲ್ಲಿ ಕಾಣಬಹುದು, ಅನುಭವಿಸಬಹುದು ಮತ್ತು ಆನಂದಿಸಬಹುದು. ಆ ರೀತಿಯ ಅನುಭವ ಮತ್ತು ಆನಂದವನ್ನು ಪಡೆಯಲು ನಾವೂ ಸಹ ಪ್ರಯತ್ನ ಮಾಡೋಣವೆ?

**ಮುಕ್ತಕ-103** **ಜ್ಞೇಯದದ್ವೀಪಕಜ್ಞೇಯಾಬ್ಧಿಯಾವರಣ ।**
**ಕಾಯಕದ ಗಿರಿಗೆ ಮಾನಸದಭ್ರಪಟಲ ॥**
**ಮೇಯವನು ಬಗೆದೇನಮೇಯ ಸುತ್ತಮಿರಲು ।**
**ಮಾಯೆಯೇ ಮಿಶ್ರಣವೋ-ಮಂಕುತಿಮ್ಮ ॥**

ದ್ವೀಪಕಜ್ಞೇಯಾಬ್ಧಿಯಾವರಣ ದ್ವೀಪಕ್ಕೆ+ಜ್ಞೇಯ+ಅಬ್ಧಿಯ+ಆವರಣ,

ಮಾನಸದಭ್ರಪಟಲ=ಮಾನಸದ+ಅಭ್ರ+ಪಟಲ ಬಗೆದೇನಮೇಯ್=ಬಗೆದೇನ+ಅಮೇಯ,

ಸುತ್ತಮಿರಲು=ಸುತ್ತಮ+ಇರಲು.

ಅಭ್ರಪಟಲ=ಮೋಡದ ಮುಸುಕು.

ಜ್ಞಾನಕ್ಕೆ ಅಜ್ಞಾನದ ಆವರಣ ಸುತ್ತಿಕೊಂಡಿದೆ. ಮಹತ್ತರ ಕಾರ್ಯಗಳನ್ನು ಸಾಧಿಸಹೊರಟಾಗ, ಅಜ್ಞಾನ ನಮ್ಮ ಮನಸ್ಸನ್ನು ಮೋಡದಂತೆ ಮುಸುಕಿ ಬಿಡುತ್ತದೆ. ಅಜ್ಞಾನ ನಮ್ಮನ್ನು ಸುತ್ತಿಕೊಂಡಿರುವಾಗ, ಜ್ಞಾನವನ್ನು ಬೆದಕಿ, ಕೆದಕಿ ತೆಗೆಯುವುದು ಬಲು ಕಷ್ಟ. ಇಡೀ ಜಗತ್ತೇ ಜ್ಞಾನಾಜ್ಞಾನಗಳ ಮಿಶ್ರಣವೆಂಬುದೇ ಗುಂಡಪ್ಪನವರ ಈ ಮುಕ್ತಕದ ಹೂರಣ.

ಜ್ಞಾನವೆಂದರೆ ಏನು? ಎಂಬುದು ಪ್ರಶ್ನೆ, ಯಾವ ವಿಷಯಗಳು ನಮ್ಮನ್ನು ಅಸತ್ಯದಿಂದ ಸತ್ಯದೆಡೆಗೆ ಕೊಂಡುಹೋಗುತ್ತದೋ, ಯಾವ ವಿಷಯಗಳು ನಮ್ಮನ್ನು ಅಂಧಕಾರದಿಂದ ಬೆಳಕಿಗೆ ಕೊಂಡುಹೋಗುತ್ತದೋ ಅದೇ ಜ್ಞಾನ. ನಮ್ಮ ಅರಿವಿಗೆ ಬಂದದ್ದೆಲ್ಲ ಜ್ಞಾನವಾಗುವುದಿಲ್ಲ. ಅಂತಹ ಶುದ್ಧ ಜ್ಞಾನವು ಎಲ್ಲೆಡೆಯಲ್ಲೂ ಇದೆ. ಆದರೆ ಅದನ್ನು ಅಜ್ಞಾನದ ಆವರಣ ಸುತ್ತಿಕೊಂಡಿದೆ, ಎಂದರೆ, ನಮಗೆ ಒಂದು ವಿಷಯದ ಅರಿವಿದ್ದರೂ ಅದು ನಮ್ಮ ಆಂತರ್ಯದಲ್ಲಿ ನೆಲೆಯಾಗಿ ಗಟ್ಟಿಯಾಗುವುದಿಲ್ಲ. ಕಾರಣವೇನೆಂದರೆ ಅದನ್ನು ಸಂಪೂರ್ಣವಾಗಿ ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಲು. ನಮ್ಮ ಪೂರ್ವಾಗ್ರಹಗಳೆಂಬ, ಅಹಂಕಾರವೆಂಬ, ಮಮತೆ ಮೋಹಗಳೆಂಬ, ಅಜ್ಞಾನದ ತುಣುಕುಗಳು, ನಮ್ಮ ಅರಿವನ್ನು ಸುತ್ತುವರಿದು, ಮಾಯೆಯೆಂಬ ಮುಸುಕಿನಿಂದ ಕವಿದು ಬಿಟ್ಟಿರುತ್ತದೆ. ಅದನ್ನು ತೊಲಗಿಸುವವರೆಗೂ ನಮಗೆ ಸತ್ಯದ ದರ್ಶನವಾಗುವುದಿಲ್ಲ.

ಅಸತ್ಯವೆಂದರೆ, ಅಜ್ಞಾನವೆಂದರೆ ಏನು? ಇಲ್ಲದ್ದನ್ನು ಇದೆಯೆಂದೂ, ಅಲ್ಲದನ್ನು ಹೌದೆಂದೂ ಭಾವಿಸುವುದೇ ಅಜ್ಞಾನ, ವಾಚಕರೆ, ನೋಡಿ ನಮ್ಮ ಬದುಕಿನಲ್ಲಿ ಇಂತಹ ಅಜ್ಞಾನ ಹೇರಳವಾಗಿ ತುಂಬಿಕೊಂಡಿದೆ. ನಮ್ಮ ಆಚಾರ, ವಿಚಾರ, ವ್ಯವಹಾರದಲ್ಲೆಲ್ಲ, ಇಂತಹ ಅಜ್ಞಾನವೇ ಪ್ರಧಾನವಾಗಿರುತ್ತದೆ. ನಮಗಿರುವುದು ಅಜ್ಞಾನವೆಂದೂ ನಮಗೆ ಬಹುಪಾಲು ಗೊತ್ತು. ಆದರೆ ಅದರಿಂದ ಹೊರಗೆ ಬರಲು ನಮ್ಮನ್ನು ನಮ್ಮ ಮೋಹ, ವ್ಯಾಮೋಹಗಳು ಬಿಡುವುದಿಲ್ಲ. ನಾವೂ ಸಹ ಅಂತಹ ಮೋಹ ವ್ಯಾಮೋಹಗಳ ಬಂಧನದಿಂದ ಸುಲಭವಾಗಿ ಹೊರಬರಲು ಇಷ್ಟಪಡುವುದಿಲ್ಲ. ಏಕೆಂದರೆ ಅದು ನಮಗೆ ಪ್ರಪಂಚದಲ್ಲಿ ಇಂದ್ರಿಯ ಸುಖವನ್ನು ಕೊಡುತ್ತದೆ.

ಅದನ್ನು ಬಿಡಲು ಮತ್ತು ಅದರಿಂದ ಮುಕ್ತರಾಗಲು ನಮಗೆ ಇಷ್ಟವಿಲ್ಲದಾಗ ಇನ್ನು ಅದು ನಮ್ಮನ್ನು ಬಿಡುವುದೆಂತು, ನಮಗೆ ಜ್ಞಾನ ಬರುವುದೆಂತು, ಇದು "ಹುಚ್ಚು ಬಿಡದೆ ಮದುವೆಯಾಗದು, ಮದುವೆಯಾಗದೆ ಹುಚ್ಚು ಬಿಡದು" ಎನ್ನುವ ಗಾದೆಯಂತೆ, ಅಲ್ಲವೇ? ನಾವು ಮೊದಲು ಜ್ಞಾನ ಪಡೆಯಲು ಗಟ್ಟಿಯಾದ ಆಸೆ ಪಡಬೇಕು, ಪ್ರಯತ್ನಪಡಬೇಕು, ಅಂತಹ ಜ್ಞಾನ ಪಡೆಯಲು ಯಾವುದು ನಮಗೆ ಅಡ್ಡವಾಗಿ ಸುತ್ತುವರೆದು ಇರುತ್ತದೋ ಅದನ್ನು ನಿರ್ದಾಕ್ಷಿಣ್ಯವಾಗಿ ಪ್ರಯತ್ನಪೂರ್ವಕವಾಗಿ ತೊಲಗಿಸಬೇಕು. ಆಗ ನಮಗೆ ಜ್ಞಾನ ಬರಬಹುದು.

ಈ ಜಗತ್ತು ಜ್ಞಾನ ಅಜ್ಞಾನಗಳಿಂದ ಕೂಡಿದೆ. ನಮಗೆ ಏನು ಬೇಕೋ ಅದನ್ನು ಪಡೆದುಕೊಳ್ಳಬೇಕು. ಅದು ವಿವೇಕವಂತರ ಕೆಲಸ, ಆಯ್ಕೆ ನಮ್ಮದು. ನಮ್ಮ ಆಯ್ಕೆಯಂತೆ ನಮಗೆ ಫಲ ಲಭಿಸುವುದು.





# ಅನಂತ ಚೌಕಟ್ಟು-ಸಾಂತ ಚಿತ್ರ 104-108

**ಮುಕ್ತಕ-104**

**ಕಾಲವಕ್ಷಯದೀಪವದರ ಪಾತ್ರೆಯಪಾರ ।**
**ಬಾಳ್ ಅದರಿನಾದೊಂದು ಕಿರುಹಣತೆ ಮಿಣುಕು ॥**
**ಗಾಳಿಯಾರಿದುದೊಂದನಿನ್ನೊಂದ ಹೊತ್ತಿಪುದು ।**
**ತೈಲಧಾರೆಯಖಂಡ-ಮಂಕುತಿಮ್ಮ ॥**

ಕಾಲವಕ್ಷಯದೀಪವದರ=ಕಾಲವು+ಅಕ್ಷಯದೀಪ+ಅದರ, ಪಾತ್ರೆಯಪಾರ=ಪಾತ್ರೆಯು+ಅಪಾರ,

ಅದರಿನಾದೊಂದು=ಅದರಿನ+ಒಂದು,

ಗಾಳಿಯಾರಿಪುದೊಂದನಿನ್ನೊಂದ=ಗಾಳಿ+ಆರಿಪುದು+ಒಂದ+ಇನ್ನೊಂದ

ತೈಲಧಾರೆಯಖಂಡ ತೈಲಧಾರೆಯು+ಅಖಂಡ

ಅಕ್ಷಯ=ಕ್ಷೀಣಿಸದೆ ಇರುವಂಥ, ಅಪಾರ=ವಿಶಾಲವಾದದ್ದು, ಕಿರುಹಣತೆ=ಚಿಕ್ಕ ದೀಪ,

ಹೊತ್ತಿಪುದು=ಹೊತ್ತಿಸುತ್ತದೆ, ಅಖಂಡ=ನಿರಂತರ

ಕಾಲವೆಂಬುದು ಅವ್ಯಾಹತವಾಗಿ, ನಿರಂತರ ಉರಿಯುವ ದೀಪ. ಅದರ ಪಾತ್ರ ಬಹಳ ದೊಡ್ಡದು. ಒಂದು ಕ್ಷಣ ಮುಗಿದರೆ ಮತ್ತೊಂದು ಕ್ಷಣ. ನಮ್ಮ ಬಾಳು ಕಾಲದ ಈ ಅವ್ಯಾಹತ ಪ್ರವಾಹದಲ್ಲಿ ಉರಿಯುವ ಒಂದು ಸಣ್ಣ ಹಣತೆಯಂತೆ. ಗಾಳಿಯು ಒಂದು ಹಣತೆಯನ್ನು ಆರಿಸಿದರೆ ಇನ್ನೊಂದು ಹಣತೆ ಹೊತ್ತಿಕೊಳ್ಳುವುದು. ಜೀವನದ ತೈಲಧಾರೆಗೆ ಅಂತ್ಯವೇ ಇಲ್ಲವೆಂಬುದು ಈ ಮುಕ್ತಕದ ಹೂರಣ.

ಈ ಜಗತ್ತಿನಲ್ಲಿರುವ ಎಲ್ಲ ಪ್ರಾಣಿಗಳ ಜೀವನ ಎಂದು ಆರಂಭವಾಯಿತೋ ಗೊತ್ತಿಲ್ಲ. ಅದರ ಕಾಲವನ್ನು ಕೇವಲ ಅಂದಾಜು ಮಾಡುತ್ತಾರೆ, ಮಾನವ ಶಾಸ್ತ್ರಜ್ಞರು. ಇಲ್ಲಿ ಜೀವನ ಎಂದೂ ಮುಗಿಯುವುದೇ ಇಲ್ಲ. ನಿರಂತರವಾಗಿ ನಡೆದೇ ಇದೆ. ಸಮಯ ಕಳೆಯುತ್ತೆ ಹೊರತು ಎಂದೂ ಮುಗಿಯುವುದೇ ಇಲ್ಲ. ನಮ್ಮ ಬಾಳು ಈ ಕಾಲಪ್ರವಾಹದಲ್ಲಿ ಒಂದು ಹನಿ ನೀರಷ್ಟೇ. ಆದರೆ ಈ ಅವ್ಯಾಹತ ಕಾಲದ ಹರವಿನಲ್ಲಿ, ನಮ್ಮ  ಉಸಿರು ಆಡುತ್ತಿದ್ದರೆ ಬಾಳು ಅಥವಾ ಜೀವನ, ಅದು ನಿಂತರೆ ಮರಣ, ಸಾವು. ನಾವು ತಾಯಿಯ ಗರ್ಭದಲ್ಲಿ ಬಿದ್ದೊಡನೆಯೇ, ನಮ್ಮ ಗಣತಿ ಶುರುವಾಗುತ್ತದೆ. 3 ತಿಂಗಳು 6 ತಿಂಗಳು 9 ತಿಂಗಳ 9 ದಿನ" ಎಂದು. ಅದು ಗರ್ಭಸ್ಥ ಜೀವನದ ಗಣತಿ. ನಮ್ಮ ಭೂ ಪತನವಾದೊಡನೆ, ಮತ್ತೆ ಗಣತಿ ಶುರು, 3 ತಿಂಗಳು, ಒಂದು ವರ್ಷ ಹೀಗೆ.

ಆದರೆ ಸಾವು ನಿಜ ಸ್ವರೂಪದಲ್ಲಿ ಅಂತ್ಯವೇ ಎಂದು ನೋಡಿದರೆ, ಅಲ್ಲ. ಇದು ಕೇವಲ ರೂಪಾಂತರ ಅಷ್ಟೇ. ಏಕೆಂದರೆ ಪಂಚಭೂತಗಳಿಂದಾದ ಮನಸ್ಸು ಬುದ್ಧಿ ದೇಹಗಳು ಮತ್ತು ದೈವಾಂಶವಾದ ಆತ್ಮ ಒಂದೆಡೆ ಸೇರಿದಾಗ ಒಂದು ಜೀವಿಯ ಆವಿರ್ಭಾವ. ಇವೆಲ್ಲವೂ ಒಂದಿಷ್ಟು ಕಾಲ ಇದ್ದು ಜೀವಿಸಿ, ಮತ್ತೆ ಬೇರೆ ಬೇರೆಯಾಗಿ ತಮ್ಮ ಸ್ವಸ್ಥಾನ ಸೇರಲು ಹೊರಟಾಗ, ಆ ಜೀವಿಯ ಅಂತ್ಯ. ಅದನ್ನು ನಾವು, ಮರಣ, ಸಾವು ಎಂದು ಕರೆಯುತ್ತೇವೆ. ಆದರೆ ಇಲ್ಲಿ ಯಾವುದರ ಅಂತ್ಯವೂ ಆಗುವುದಿಲ್ಲ, ಎಲ್ಲವೂ ರೂಪಾಂತರವಷ್ಟೇ.





ವಾಚಕರೆ, ಕಾಲದ ಅವ್ಯಾಹತ ಮತ್ತು ನಿರಂತರ ಪ್ರವಾಹಕ್ಕೆ ಅಣೆಕಟ್ಟುಗಳನ್ನು ಕಟ್ಟಲು ಸಾಧ್ಯವೇ? ನಾವು ನಮ್ಮ ಜೀವನದ ಅನುಕೂಲಕ್ಕೆ ಇದನ್ನು ಕ್ಷಣ, ನಿಮಿಷ, ಗಂಟೆ, ದಿನ, ವಾರ, ತಿಂಗಳು, ವರ್ಷಗಳೆಂದು ವಿಭಾಗಿಸಿ,

ಲೌಕಿಕ ಜೀವನಕ್ಕೆ ಅನುಗುಣವಾಗಿ ಕಾಲವನ್ನು ಎಣಿಸುತ್ತೇವೆ. ಆದರೆ ವಾಸ್ತವವಾಗಿ ಕಾಲವನ್ನು, ವಿಭಾಗಿಸಲು ಸಾಧ್ಯವೇ ಇಲ್ಲ. ಈ ವಿಭಾಗಗಳೆಲ್ಲ ಕೇವಲ ಕಾಲ್ಪನಿಕ ಮಾತ್ರ ಈ ಕಾಲದ ಪ್ರವಾಹದಲ್ಲಿ ಎಷ್ಟೋ ಜೀವಿಗಳು ಬರುತ್ತವೆ ಹೋಗುತ್ತವೆ ಮತ್ತು ಈ ಬಂದು ಹೋಗುವ ಪ್ರಕ್ರಿಯೆ ನಿರಂತರ ನಡೆಯುತ್ತಲೇ ಇರುತ್ತದೆ. ಕಾಲಾನುಕಾಲಕ್ಕೆ ಸಣ್ಣವರು ಬೆಳೆದು ದೊಡ್ಡವರಾಗಿ, ದೊಡ್ಡವರು ಮುದುಕರಾಗಿ, ಜೀವ ಧಾರಣೆ ಮಾಡಿದ ದೇಹ ಜರ್ಜರಿತವಾಗಿ, ಮರದಿಂದ ತರಗೆಲೆಗಳು ಉದುರುವಂತೆ ಉದುರಿ ಹೋಗುತ್ತಾರೆ. ಮರದಿಂದ ಹಾಗೆ ಉದುರಿದ ಎಲೆಗಳ ಹಿಂಬದಿಯಿಂದ ಹೇಗೆ ಹೊಸ ಚಿಗುರು ಬರುತ್ತದೋ ಹಾಗೆಯೇ ಭುವಿಯಲ್ಲಿ ಹೊಸ ಹೊಸ ಜೀವಿಗಳ ಆವಿರ್ಭಾವವಾಗುತ್ತದೆ. ಇದು ನಿರಂತರ ನಮ್ಮ ಭುವಿಯಲ್ಲಿ ಕೋಟ್ಯಾಂತರ ವರ್ಷಗಳಿಂದ ನಡೆದು ಬರುತ್ತಲೇ ಇದೆ, ಎನ್ನುವುದೇ ಈ ಮುಕ್ತಕದ ಹೂರಣ.

ಆ ಪರಮಾತ್ಮನ ಲೀಲಾವಿನೋದದಲ್ಲಿ ಇದೂ ಸಹ ಒಂದು ಅದ್ಭುತ ಭಾಗ, ನಮಗೂ ಈ ಲೀಲಾವಿನೋದದ ಒಂದು ಪಾತ್ರ ಸಿಕ್ಕ ಸಂತೋಷವನ್ನು ಅನುಭವಿಸೋಣ.

**ಮುಕ್ತಕ-105**

**ಭಿತ್ತಿಯೊಂದಿಲ್ಲದಿರೆ ಚಿತ್ರವೆಂತಿರಬಹುದು |**
**ಚಿತ್ರವಿಲ್ಲದ ಭಿತ್ತಿ ಸೊಗಸಹುದೆಂತು ||**
**ನಿತ್ಯಸತ್ತ್ವವೆ ಭಿತ್ತಿ, ಜೀವಿತ ಕ್ಷಣಚಿತ್ರ |**
**ತತ್ತ್ವವೀ ಸಂಬಂಧ-ಮಂಕುತಿಮ್ಮ ||**

ಭಿತ್ತಿಯೊಂದಿಲ್ಲದಿರೆ=ಭಿತ್ತಿ+ಒಂದು+ಇಲ್ಲದಿರೆ, ಚಿತ್ರವೆಂತಿರಬಹುದು=ಚಿತ್ರವೂ+ಎಂತೆ+ಇರಲು+ಅಹುದು, ಚಿತ್ರವಿಲ್ಲದ=ಚಿತ್ರವೂ+ಇಲ್ಲದ, ಸೊಗಸಹುದೆಂತು=ಸೊಗಸು+ಅಹುದು+ಎಂತು. ಭಿತ್ತಿ=ಗೋಡೆ.

ಒಂದು ಚಿತ್ರ ಬರೆಯಲು ಗೋಡೆಯೊಂದು ಬೇಕು. ಗೋಡೆಯಿಲ್ಲದೆ ಚಿತ್ರವಿರಲು ಸಾಧ್ಯವಿಲ್ಲ. ಹಾಗೆಯೇ ಚಿತ್ರವಿಲ್ಲದ ಗೋಡೆಗೆ ಸೊಗಸೂ ಇರುವುದಿಲ್ಲ. ಈ ಜಗತ್ತಿನ ಗೋಡೆಯಾದ ಆ ಪರಮಾತ್ಮ ಸತ್ವವು ನಿತ್ಯ ಮತ್ತು ಸತ್ಯವಾದ ಗೋಡೆಯಾಗಿರಲು, ನಮ್ಮ ಜೀವನವು ಆ ಗೋಡೆಯ ಮೇಲೆ ಬರೆದ ಒಂದು ಚಿತ್ರವಷ್ಟೇ. ಈ ತತ್ವದಿಂದಲೇ ನಮ್ಮ ಮತ್ತು ಪರಮಾತ್ಮನ ಸಂಬಂಧವಿರುತ್ತದೆ ಎನ್ನುವುದೇ ಗುಂಡಪ್ಪನವರ, ಈ ಮುಕ್ತಕದ
ಹೂರಣ.

ಒಂದು ಚಿತ್ರ ಬರೆಯಲು ಒಂದು ಆಧಾರಬೇಕು. ಅದು ಒಂದು ಗೋಡೆಯಾಗಿರಬಹುದು, ಒಂದು ಫಲಕವಾಗಿರಬಹುದು, ಒಂದು ಬಟ್ಟೆಯಾಗಿರಬಹುದು. ಹೀಗೆ ಯಾವುದಾದರೊಂದು ಆಧಾರವಿಲ್ಲದೆ ಚಿತ್ರ ಬರೆಯಲು ಸಾಧ್ಯವಿಲ್ಲ. ಹಾಗಲ್ಲದೆ ನಮ್ಮ ಊಹೆಯಲ್ಲಿ ಬರೆದ ಚಿತ್ರ ಕೇವಲ ನಮ್ಮ ಮನಸ್ಸಿನಲ್ಲಿ ಅಲ್ಪ ಕಾಲ ಇದ್ದು ಮಾಯವಾಗುತ್ತದೆ. ಹಾಗಾಗಿ ಚಿತ್ರಕ್ಕೆ ಒಂದು ಆಧಾರ ಬೇಕು.

(152)

| ಕಗ್ಗರಸಧಾರೆ | ಅನಂತ ಚೌಕಟ್ಟು-ಸಾಂತ ಚಿತ್ರ 104-108 |
|---|---|

ಇಡೀ ಜಗತ್ತೇ ಒಂದು ಚಿತ್ರ. ಈ ಚಿತ್ರಕ್ಕೆ ಆಧಾರವೇ ಪರಮಾತ್ಮ ತತ್ವ, ನಿರಂತರವಾದ ನಿತ್ಯವಾದ ಆ ಪರಮಾತ್ಮ ತತ್ವವೇ ಭಿತ್ತಿ ಎಂದು ಹೇಳುತ್ತಾರೆ ಮಾನ್ಯ ಗುಂಡಪ್ಪನವರು, ಅಂದರೆ ಇಡೀ ಜಗತ್ತು ಚಿತ್ರವಾದರೆ ಅದಕ್ಕೆ ಆಧಾರವೇ ಪರಮಾತ್ಮ, ನಮ್ಮ ಭುವಿಯ ಯಾವುದೇ ಒಂದು ಭಾಗವನ್ನು ಒಂದು ಚೌಕಟ್ಟಿನಲ್ಲಿ ನಿಲ್ಲಿಸಿದರೆ ಅದೇ ಒಂದು ಸುಂದರ ಚಿತ್ರದಂತೆ ಕಾಣುತ್ತದೆ.

ಇಡೀ ಭುವಿಯನ್ನೇ ನೋಡಿದರೆ ಆ ಪರಮಾತ್ಮ ತತ್ವದಿಂದ ಸೃಷ್ಟಿಯಾದ ಈ ಜಗತ್ತಿನಲ್ಲಿ ಈ ಭುವಿಯೂ ಒಂದು ಚಿತ್ರ ಹಾಗೆಯೇ ಎಲ್ಲವೂ, ಅಂದರೆ ಸೌರ ಮಂಡಲಗಳು, ಕ್ಷೀರಪಥಗಳು, ಆಕಾಶಗಂಗೆಗಳು ಎಲ್ಲವೂ ಒಂದೊಂದು ಚಿತ್ರದಂತೆ ಕಾಣುವುದಲ್ಲವೇ? ಹಾಗೆಯೇ ಒಂದೊಂದನ್ನಲ್ಲದೆ ಇಡೀ ವಿಶ್ವವನ್ನೇ ನೋಡಿದರೆ ಸಮಗ್ರವಾಗಿ ಒಂದೇ ಚಿತ್ರವನ್ನು ಕಾಣಬಹುದಲ್ಲವೇ! ವಿಶ್ವದ ಚಿತ್ರ ನಿಂತಿರುವುದೇ ಆ ಪರಮ ಚೇತನದ ಆಧಾರದ ಮೇಲೆ. ಹಾಗಾಗಿ ಪರಮಾತ್ಮ ಒಂದು ಭಿತ್ತಿ ಮಿಕ್ಕೆಲ್ಲವೂ ಒಂದು ಚಿತ್ರ

ಹಾಗೆಯೇ ನಮ್ಮ ಜೀವನವನ್ನು ನಾವು ಅವಲೋಕಿಸಿದರೆ, ಹುಟ್ಟಿನಂದಿನಿಂದ ನಮ್ಮ ಈ ರೂಪದ ಅಂತ್ಯದವರೆಗೆ, ನಾವೂ ಒಂದು ಚಿತ್ರವಲ್ಲವೇ? ನಮ್ಮ ಜೀವನವೂ ಆ ಪರಮಾತ್ಮ ತತ್ವವನ್ನು ಆಧರಿಸಿ ನಡೆಯುವ

ಒಂದು ಚಲನಚಿತ್ರವೆಂದರೆ ಅತಿಶಯೋಕ್ತಿಯಾಗಲಾರದು. ಒಬ್ಬೊಬ್ಬರದು ಒಂದೊಂದು ಚಿತ್ರ ಚಿತ್ರಗಳ ವ್ಯತ್ಯಾಸಗಳಿಗೆ ಸಾವಿರಾರು ಕಾರಣಗಳು. ಒಂದಕ್ಕಿಂತ ಒಂದು ಭಿನ್ನವಾಗಿದ್ದರೂ ಎಲ್ಲವೂ ಆ ಪರಮ ಚೇತನದ ಆಧಾರದ ಮೇಲೆ ನಿಂತ ಚಿತ್ರಗಳಲ್ಲವೇ?

ನಮಗೆ ಆಧಾರವಾಗಿರುವ ಆ ಪರಮ ಚೇತನಕ್ಕೂ, ನಮಗೂ ಅವಿನಾಭಾವ ಸಂಬಂಧ. ಚಿತ್ರ ಬದಲಾಗುತ್ತಿರುತ್ತದೆ. ಪ್ರಕೃತಿಯಲ್ಲಿ ಋತುಮಾನಗಳಿಗೆ ತಕ್ಕಂತೆ ಬದಲಾವಣೆ ಬಂದು ಪ್ರತಿಬಾರಿಯೂ ನಮಗೆ ಹೊಸ ಹೊಸ ಚಿತ್ರಗಳು ಕಾಣುವುದಿಲ್ಲವೇ? ಹಾಗೆ ನಮ್ಮ ಜೀವನದ ಚಿತ್ರಗಳೂ ಕ್ಷಣದಿಂದ ಕ್ಷಣಕ್ಕೆ, ದಿನದಿಂದ ದಿನಕ್ಕೆ ಜನ್ಮದಿಂದ ಜನ್ಮಕ್ಕೆ ಬದಲಾಗುತ್ತಿರುತ್ತದೆ. ನೋಡುವವರಿಗೆ ಹೊಸ ಹೊಸ ಚಿತ್ರಗಳು ಮೂಡುತ್ತವೆ. ಈ ಜೀವನಕ್ಕೂ ಮತ್ತು ಈ ಜೀವನಕ್ಕೆ ಆಧಾರವಾದ ಪರಮ ಚೇತನಕ್ಕೂ ಇರುವ ಗಾಢ ಸಂಬಂಧವೇ ಈ ಮುಕ್ತಕದ ಆಂತರ್ಯ, ನಾವೂ ಸಹ ಒಂದು ಚಿತ್ರವಾಗಿ ಅನ್ಯ ಚಿತ್ರಗಳನ್ನು ನೋಡುವ ಭಾಗ್ಯಶಾಲಿಗಳು ಅಲ್ಲವೇ?

**ಮುಕ್ತಕ-106**

**ಚೌಕಟ್ಟನಂತವದರೊಳು ಚಿತ್ರಪಟ ಸಾಂತ ।**
**ಸಾಕಾರ ಘನತತಿ ನಿರಾಕಾರ ನಭದಿ ॥**
**ಲೌಕಿಕದ ಮೌಲ್ಯ ನಿರ್ಲೌಕಿಕದ ನಾಣ್ಯದಲಿ ।**
**ಲೆಕ್ಕ ತಾತ್ತ್ವಿಕನಿಗಿದು-ಮಂಕುತಿಮ್ಮ ॥**

ಚೌಕಟ್ಟನಂತವದರೊಳು=ಚೌಕಟ್ಟು+ಅನಂತವು+ಅದರೊಳು, ತಾತ್ತ್ವಿಕನಿಗಿದು=ತಾತ್ತ್ವಿಕನಿಗೆ+ಅದು.

ಚೌಕಟ್ಟು=ಗೋಡೆ, ಆಧಾರ, ನಿರ್ಲೌಕಿಕದ ಪಾರಮಾರ್ಥಿಕ, ಸಾಂತ=ಅಂತ್ಯವಿರುವ, ತಾತ್ತ್ವಿಕ=ತತ್ವ ಶಾಸ್ತ್ರಜ್ಞ

ಹಿಂದಿನ ಮುಕ್ತಕದ ವಿವರಣೆಯನ್ನೇ ಮುಂದುವರೆಸಿ ನೋಡಿದರೆ, ಈ ಪರಮ ಚೇತನದ ಚೌಕಟ್ಟು, ಅನಂತ, ಅಂದರೆ ಅಂತ್ಯವೇ ಇಲ್ಲದ್ದು, ಹಾಗೆ ಅನಂತವಾಗಿರುವ ಚೌಕಟ್ಟಿನಲ್ಲಿ ಅಂತ್ಯಗೊಳ್ಳುವುದೇ ಚಿತ್ರ. ಅನಂತ ಆಕಾಶದಲ್ಲಿ ಘಳಿಗೆ ಘಳಿಗೆಗೆ ಬದಲಾಯಿಸಿಕೊಳ್ಳುವ ಮೋಡಗಳಂತೆ, ನಮ್ಮ ಲೌಕಿಕ ಜೀವನವೂ ಈ ಅನಂತ ವಿಶ್ವದ ಭಿತ್ತಿಯಲ್ಲಿ ಸಾಂತ, ಅಂದರೆ ಬದಲಾಗುವ ಜೀವನದ ಚಿತ್ರ, ಆದರೆ ಈ ಲೌಕಿಕದ ಜೀವನದ ಮೌಲ್ಯಗಳನ್ನು, ಪಾರಮಾರ್ಥದ ಒರೆಗೆ ಹಚ್ಚಿ ನೋಡುವವನೆ ತತ್ವಜ್ಞಾನಿ, ಎಂದು ಈ ಮುಕ್ತಕದಲ್ಲಿ ಪ್ರಸ್ತಾಪಿಸುತ್ತಾರೆ ಮಾನ್ಯ ಗುಂಡಪ್ಪನವರು.

ವಿಶಾಲವಾದ, ಈ ಜಗತ್ತು ಒಂದು ಅಂತ್ಯವೇ ಇಲ್ಲದ ಚೌಕಟ್ಟು. ಈ ಚೌಕಟ್ಟಿನಲ್ಲಿರುವುದು ಅಂತ್ಯಗೊಳ್ಳುವ ರೂಪಾಂತರಗೊಳ್ಳುವ ಚಿತ್ರ ನಾವು ಆಕಾಶವನ್ನು ನೋಡಿದರೆ, ಅದರ ಅಂತ್ಯ ನಮಗೆ ಗೋಚರವಾಗುವುದಿಲ್ಲ. ಆದರೆ ಆ ನಭೋ ಮಂಡಲದಲ್ಲಿ ಮೂಡುವ ಮೋಡಗಳು ಚಿತ್ತಾರ ಚಿತ್ತಾರವಾಗಿರುತ್ತವೆ. ಆದರೆ ಆ ಮೋಡಗಳ ಆಕಾರ ಕ್ಷಣಕ್ಷಣಕ್ಕೂ ಬದಲಾಗುತ್ತಾ ಇರುತ್ತದೆ. ಹಾಗೆಯೇ ಈ ಜಗತ್ತಿನ ಭಿತ್ತಿಯಲ್ಲಿ ಮೂಡುವ ಚಿತ್ರ ಮತ್ತು ಚಿತ್ತಾರಗಳೂ ಸಹ ಆ ಮೋಡಗಳಂತೆಯೇ, ಬದಲಾಗುತ್ತಾ ಇರುತ್ತದೆ.

ಇಲ್ಲಿರುವ ಅಂತ್ಯವಾಗುವ ಚಿತ್ರ ಲೌಕಿಕದ ಚಿತ್ತಾರ. ಆದರೆ ಆ ಚಿತ್ರ ಮೂಡಿರುವುದು ಅನಂತ ಪಾರಮಾರ್ಥದಲಿ. ಲೌಕಿಕಕ್ಕೆ ಒಂದು ಮೌಲ್ಯ ಮತ್ತು ಪಾರಮಾರ್ಥಕ್ಕೆ ಒಂದು ಮೌಲ್ಯ. ಲೌಕಿಕದ ಮೌಲ್ಯಗಳು ಪರಮಾರ್ಥಕ್ಕೆ ಅನ್ವಯವಾಗದಿದ್ದರೂ ತತ್ವಜ್ಞಾನಿಯಾದವನು ಈ ಲೌಕಿಕದ ಮೌಲ್ಯಗಳನ್ನು ಪರಮಾರ್ಥ ಸಾಧನೆಗೆ ಮೆಟ್ಟಿಲಾಗಿಸಿಕೊಳ್ಳುತ್ತಾನೆ. ಲೌಕಿಕದ ಚಿತ್ರ ಮತ್ತು ಪರಮಾರ್ಥ ಎರಡೂ ಒಂದಕ್ಕೊಂದು ಪೂರಕ. ಒಂದು ಇನ್ನೊಂದಕ್ಕೆ ಆಧಾರ. ಮತ್ತೊಂದು ಮೊದಲಿನದಕ್ಕೆ ಅಲಂಕಾರ. ನೋಡಿ, ನಮ್ಮ ಮನಸೂ ಸಹ ಅನಂತ. ಅಂದರೆ ನಮ್ಮ ಮನಸ್ಸಿನಲ್ಲೂ ಅನಂತವಾದ ಆಲೋಚನೆಗಳು ಬರುತ್ತವೆ. ಆ ಪರಮಾರ್ಥದಂತೆಯೇ ಅರ್ಥವಾಗದ ಆಲೋಚನೆಗಳು ಬರುತ್ತವೆ. ಆದರೆ ಆಲೋಚನೆಗೆ ಬಂದದ್ದೆಲ್ಲ ಸಾಕಾರಗೊಳ್ಳುವುದಿಲ್ಲ. ಸಾಕಾರಗೊಂಡರೆ ಒಂದು ಆಕಾರ ಅಥವಾ ಚಿತ್ರ ಮೂಡುತ್ತದೆ. ಆ ಚಿತ್ರವೂ ಸಹ ನಮ್ಮ ಮನಸ್ಸಿನ ಅನಂತ ಆಲೋಚನಾ ಲಹರಿಯ ಭಿತ್ತಿಯಲ್ಲಿ ಮೂಡಿದ್ದೇ ಅಲ್ಲವೇ? ಹಾಗಾಗಿ ನಾವು ಒಂದು ಚಿತ್ರವಾದರೆ, ನಾವು ಇರುವುದೂ ಸಹ ಅನಂತ ಪರಮಾತ್ಮ ತತ್ವದ ಆಧಾರದ ಮೇಲೆ ಅಲ್ಲವೇ? ನಮ್ಮೊಳಗೇ ಒಂದು ಅನಂತ (ಮನಸ್ಸು) ಅದರೊಳಗೆ ಹಲವಾರು ಕ್ಷಣಕ್ಷಣಕ್ಕೂ ಬದಲಾಗುವ ಚಿತ್ರಗಳು.

ಬೇರೆ ಬೇರೆ ರೂಪಗಳನ್ನು ಹೊಂದಿದ ಈ ಚಿತ್ರಗಳು ಲೌಕಿಕವಾದದು. ಆತ್ಮಜ್ಞಾನವನ್ನು ಪಡೆಯಲು, ತತ್ವಜ್ಞಾನಿಯಾದವನು ಈ ಚಿತ್ರದ ಭಾವದಿಂದ ಹೊರಬಂದು ಅನಂತ ವಿಶ್ವದ ಭಾವವನ್ನು ತುಂಬಿಕೊಂಡು, ಲೌಕಿಕದಿಂದ ಪರಮಾರ್ಥದೆಡೆಗೆ ಹೋಗಲು ಪ್ರಯತ್ನ ಮಾಡುತ್ತಾನೆ. ಅಂದರೆ ಆಕಾರದಿಂದ ನಿರಾಕಾರದೆಡೆಗೆ

ಹೋಗುವುದೇ ಆಧ್ಯಾತ್ಮಿಕ ಪ್ರಯಾಣ. ಅಂತಹ ಪ್ರಯಾಣದ ಪ್ರಯತ್ನವನ್ನು ತತ್ವಜ್ಞಾನಿ ಮಾಡುತ್ತಾನೆ. ವಾಚಕರ ಚಿತ್ರ ಅಂದರೆ ಲೌಕಿಕ, ಬಲುಸೊಗಸು, ಇಂದ್ರಿಯಾನಂದವನ್ನು ಕೊಡುತ್ತದೆ. ಆದರೆ ಅದು ಕ್ಷಣಿಕಾನಂದ. ಇದರಲ್ಲಿ ರಕ್ತಿಯಿರುವರಿಗೆ ಆಧ್ಯಾತ್ಮ ಅಥವಾ ಪರಮಾರ್ಥ ನೀರಸ. ಆದರೆ ಆಧ್ಯಾತ್ಮ ನಿತ್ಯಾನಂದ ಅಥವಾ ಶಾಶ್ವತಾನಂದ. ಇಲ್ಲಿ ಎರಡೂ ಉಂಟು. ನಮಗೇನು ಬೇಕೋ ಅದನ್ನು ಆಯ್ದುಕೊಳ್ಳಬಹುದು.





**ಮುಕ್ತಕ-107**

**ಅಜ್ಞಾತವಾದುದನುಭಾವವೆನೆ ನಾಸ್ತಿಕನು |**
**ಜ್ಞೇಯವೆಂದದಕೆ ಕೈ ಮುಗಿಯೆ ಭಕ್ತ**
**ಜಿಜ್ಞಾಸ್ಯವೆಂದು ಪರಿಕಿಸತೊಡಗೆ ವಿಜ್ಞಾನಿ |**
**ಸ್ವಜ್ಞಪ್ತಿ ಶೋಧಿ ಮುನಿ-ಮಂಕುತಿಮ್ಮ ||**

ಅಜ್ಞಾತವಾದುದನುಭಾವವೆನೆ=ಅಜ್ಞಾತವಾದುದನು+ಅಭಾವವೆನೆ,
ಜ್ಞೇಯವೆಂದದಕೆ=ಜ್ಞೇಯ+ಎಂದು+ಅದಕೆ, ಜಿಜ್ಞಾಸವೆಂದು ಜಿಜ್ಞಾಸ್ಯವು+ಎಂದು,
ಪರಿಕಿಸತೊಡಗೆ=ಪರಿಕಿಸ+ತೊಡಗೆ.

ಅಜ್ಞಾತವಾದುದು=ಅರಿವಿಗಿಲ್ಲದ್ದು, ಅಭಾವ ಇಲ್ಲದ್ದು, ಜ್ಞೇಯವೆಂದು ಅರಿಯಲಾಗದ್ದು, ಜಿಜ್ಞಾಸ್ಯ-ಜಿಜ್ಞಾಸೆಗೆ ಒಳಪಡಿಸಬಹುದಾದ್ದು. ಸ್ವಜ್ಞಪ್ತಿ ಶೋಧಿ=ತನ್ನ ಸ್ವಂತ ಆಲೋಚನೆ ಮತ್ತು ಅನುಭವದಿಂದ ಅರಿಯಲು ಪ್ರಯತ್ನಪಡುವವನು.

ನಮ್ಮ ಅರಿವಿಗಿಲ್ಲದ್ದು, ಗೊತ್ತಿಲ್ಲದ್ದು ಮತ್ತು ತಿಳಿಯದಿರುವುದು ಎಂದು ನಾಸ್ತಿಕ ದೇವರನ್ನು ನಂಬುವುದಿಲ್ಲ. ಅವನಿಗೆ ದೇವರಲ್ಲಿ ನಂಬಿಕೆ ಇಲ್ಲ. ಏಕೆಂದರೆ ಅವನಿಗೆ ಗೋಚರವಾಗುವುದಿಲ್ಲ ಮತ್ತು ಅನುಭವಕ್ಕೂ ಬರುವುದಿಲ್ಲ. ಆದರೆ, ಅದರ ಅರಿವಿಲ್ಲದಿದ್ದರೂ ಅದರಲ್ಲಿ ನಂಬಿಕೆ ಇಟ್ಟಿರುವವನು ಭಕ್ತ. ಇರಲಿ ನಾನು ಇದನ್ನು ವಿಚಾರಕ್ಕೆ ಒರೆ ಹಚ್ಚಿ ನಿರ್ಣಯಿಸಬೇಕು, ಪರಿಕಿಸಿ ನೋಡಬೇಕು ಎಂದು ಹೇಳುವವನೇ ವಿಜ್ಞಾನಿ. ನಂಬಿದ್ದನ್ನು ಆಂತರ್ಯದಲ್ಲಿ ಚಿಂತನ, ಮನನ, ಧ್ಯಾನ, ತಪಸ್ಸು ಮಾಡಿ ಆ ಪರಮಾತ್ಮ ವಸ್ತುವನ್ನು ಅರಿತುಕೊಳ್ಳಲು ಪ್ರಯತ್ನಪಡುವವನೆ ಮುನಿ ಅಥವಾ ಋಷಿ ಎಂದು ಪ್ರಸ್ತಾಪಿಸುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ನಾನೊಮ್ಮೆ ಒಂದು ಟ್ರೈನ್‌ನಲ್ಲಿ ಪ್ರಯಾಣ ಮಾಡುತ್ತಿದ್ದೆ. ನಾ ಕುಳಿತ ಬೋಗಿಯಲ್ಲಿ ಕೆಲ ಯುವಕರ ಚರ್ಚೆ ತೀವ್ರವಾಗಿ ಸಾಗಿತ್ತು. "ದೇವರಿದ್ದಾನೆ. ಇಲ್ಲ, ನನಗೆ ನಂಬಿಕೆ ಇಲ್ಲ. ಹೀಗೆ ಸಾಗಿತ್ತು ಅವರ ವಾಗ್ವಾದ. ಸುಮಾರು ಹೊತ್ತು ಇದನ್ನು ಆಲಿಸುತ್ತಿದ್ದ, ಒಬ್ಬ ಮುಸಲ್ಮಾನ ಸಜ್ಜನರು, ಶುದ್ಧ ನಾಸ್ತಿಕನಂತೆ ಕಾಣುತ್ತಿದ್ದವನನ್ನು ಕುರಿತು ಅಯ್ಯ ಕಡೆ ಪಕ್ಷ ನೀನು ನಿಮ್ಮ ಅಪ್ಪನ ಮಗನೆ ಎಂದು ನಂಬುತ್ತೀಯಾ" ಎಂದಾಗ ಅಲ್ಲಿ ಸ್ತಬ್ಧತೆ ಅಥವಾ ನೀರವತೆ ಆವರಿಸಿತು.

ಹೌದು ವಾಚಕರೆ ನಂಬಿಕೆ ಬೇಕು, ಇಲ್ಲದಿದ್ದರೆ ಜೀವನ ನರಕವಾಗಿಬಿಡುತ್ತದೆ. ಆಲೋಚಿಸಿ, "ನಮ್ಮ ಅಪ್ಪ ಯಾರು" ಎಂದು ಸಂದೇಹ ಮನಸ್ಸಿಗೆ ಬಂದರೆ, ಆ ವ್ಯಕ್ತಿಯ ಮನಸ್ಸಿನ ಸ್ಥಿತಿ ಹೇಗಿರಬಹುದೆಂದು ಊಹಿಸಿದ್ದೀರಾ? ನಾವಿದ್ದೇವೆ ಎಂದರೆ ನಮ್ಮ ಅಸ್ತಿತ್ವಕ್ಕೆ ಕಾರಣ ಇರಲೇಬೇಕಲ್ಲವೇ? ನಾಸ್ತಿಕರು "ನಾವು ದೇವರನ್ನು ನಂಬುವುದಿಲ್ಲ" ಎನ್ನುತ್ತಾರೆ. ಅಂದರೆ "ದೇವರು" ಎನ್ನುವ ವಸ್ತುವೊಂದು ಇದೆ ಅದನ್ನು ನಾನು ನಂಬುವುದಿಲ್ಲ" ಎಂದು ಅರ್ಥವಾಗಬಹುದಲ್ಲವೇ? ಹಾಗಾಗಿ ನಂಬಬೇಕು ನಂಬಿಕೆಯೇ ಜೀವನದ ಆಧಾರ, ವಿಚಾರಗಳನ್ನು, ವಿಷಯಗಳನ್ನು ವ್ಯಕ್ತಿಗಳನ್ನು ನಂಬಬೇಕು. ಅಂದರೆ ಅಂಧವಾಗಿ ನಂಬಬೇಕು ಎಂದಿಲ್ಲ. ವಿಚಾರದ ಒರೆಗೆಹಚ್ಚಿ ನಂಬಬೇಕು. ನಂಬಲರ್ಹವಲ್ಲದೆ ಇದ್ದರೆ ಅದನ್ನು ನಿರಾಕರಿಸಬೇಕು. ಆದರೆ ಅಪನಂಬಿಕೆ ಇರಬಾರದು.

ವಿಜ್ಞಾನದ ಮಾರ್ಗ ಬಹಳ ನಿಧಾನ. ಏಕೆಂದರೆ ಈ ಪರಮಾತ್ಮ ಚೇತನದ ಕಾರ್ಯ ವೈಖರಿ ವಿಜ್ಞಾನದ ಪರೀಕ್ಷಾ ಕೊರಡಿಗಳ ಪರಿಧಿಯಲ್ಲಿ ಸಿಲುಕುವಂಥಾದ್ದಲ್ಲ. ಭಾರತೀಯ ವೇದ, ಉಪನಿಷತ್ತು, ಪುರಾಣ, ಭಾಗವತ ಮುಂತಾದವುಗಳಲ್ಲಿ ನಿಖರವಾಗಿ "ಸಹಸ್ರ ಶೀರ್ಷಾ ಪುರುಷಃ, ಸಹಸ್ರಾಕ್ಷಃ ಸಹಸ್ರಪಾತ್, ಸ ಭೂಮಿಂ ವಿಶ್ವತೋ ವೃತ್ವಾ ಅತ್ಯತ್ತಿಷ್ಟತ್ ದಶಾಂಗುಲಂ". ಎಂದು ಎಂದೋ ಹೇಳಿದ್ದನ್ನು "ಹೌದು, ಇರಬಹುದು' ಅದೇ ಸತ್ಯ" ಎಂದು ವಿಜ್ಞಾನಿಗಳು ಈಗೀಗ ತೊದಲು ನುಡಿಗಳನ್ನು ನುಡಿಯುತ್ತಿದ್ದಾರೆ. ಅವರಿಗೆ ಒಟ್ಟಾರೆ ಅರಿವಿಗೆ ಬಂದಿರುವುದೆಷ್ಟು, ಕೋಟಿಯಲ್ಲಿ ಒಂದು ಭಾಗವೂ ಅಲ್ಲ. ಇರಲಿ ಅವರ ವೈಖರಿ ಅವರಿಗೆ ಇನ್ನು ಋಷಿ ಮುನಿಗಳ ಮಾರ್ಗವೂ ನಮಗೆ ಬಹಳ ಕಠಿಣ. ಏಕೆಂದರೆ "ಯಮ ನಿಯಮಗಳ ತೀವ್ರತೆಗೆ ವಿಷಯಾಸಕ್ತರಾಗಿ ಇಂದ್ರಿಯಲೋಲರಾದ ಸಾಮಾನ್ಯರಾದ ನಾವುಗಳು ಒಳಪಡುವುದು ಬಹಳ ಕಷ್ಟ. ಹಾಗಾಗಿ ನಾವು ನಿರ್ಮಲ ಮನಸ್ಸಿನಿಂದ, ಶುದ್ಧವಾಗಿ ನಿಸ್ಸಂಶಯವಾಗಿ ನಂಬಬೇಕು. "ಸಂಶಯಾತ್ಮಾ ವಿನಶ್ಯತಿ" ಎಂದು ಹೇಳಿದೆ ಭಗವದ್ಗೀತೆ.

"ನಂಬಿ ಕೆಟ್ಟವರಿಲ್ಲವೋ" ಇದು ದಾಸರ ಉಕ್ತಿ. ನಾವು ನಂಬಿದರೆ ಸುಖ, ಶಾಂತಿ, ನೆಮ್ಮದಿ. ಇಲ್ಲದಿದ್ದರೆ ಅಶಾಂತಿ, ತೊಳಲಾಟ, ಇತ್ಯಾದಿ. ನಮಗೆ ಏನು ಬೇಕೋ ಅದನ್ನು ಆರಿಸಿಕೊಳ್ಳಬೇಕು, ನಮ್ಮ ಆಯ್ಕೆಯಿಂದ ಏನು ಲಭಿಸುವುದೋ ಅದನ್ನು ಅನುಭವಿಸಬೇಕು.

**ಮುಕ್ತಕ-108**

**ಜಡವೇನು? ಜೀವವೇಂ? ಚೈತನ್ಯ ನಿದ್ರಿಸಿರು ।**
**ವೆಡೆಯಲ್ಲ ಜಡಲೋಕ ಕಲ್ಲು ಕಡ್ಡಿ ಕಸ ॥**
**ಅಡಗಿರ್ಪ ಚೈತನ್ಯವೆಚ್ಚರಲು ಜಂತು ಜಗ ।**
**ಜಡವೆ ಜೀವದ ವಸತಿ-ಮಂಕುತಿಮ್ಮ ॥**

ಜಡ=ನಿರ್ಜೀವ ವಸ್ತು, ಜಂತು=ಜೀವವಿರುವ ವಸ್ತು, ಅಡಗಿರ್ಪ=ಅಡಗಿರುವ, ಚೈತನ್ಯವೆಚ್ಚರಲು=ಚೈತನ್ಯವು ಎಚ್ಚರವಾಗಲು.

ಜಡವೇನು? ಜೀವವೇನು? ಚೈತನ್ಯ ಎಲ್ಲೆಲ್ಲಿ ನಿದ್ರಿಸಿದೆಯೋ ಅದೆಲ್ಲ ಜಡ, ಕಲ್ಲು ಕಡ್ಡಿ ಕಸ ಹೀಗೆ, ಹಾಗೆ ಅಡಗಿರುವ ಅಥವಾ ಸುಪ್ತವಾಗಿರುವ ಚೈತನ್ಯ ಎಚ್ಚರವಾದರೆ ಆ ವಸ್ತು ಜೀವಂತವಾಗುತ್ತದೆ. ಹಾಗಾಗಿ ಜಡವೆ ಜೀವಕ್ಕೆ ಮನೆ ಎಂದು ಪ್ರಸ್ತಾಪಿಸುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

"ಜಂತು" ಎನ್ನುವ ಪದಕ್ಕೆ "ಜೀವಂತಿ ಇತಿ ಜಂತುಃ" ಎನ್ನುವ ಅರ್ಥ ಉಂಟು. ಅಂದರೆ ಯಾವುದು ಜೀವಂತವಾಗಿದೆಯೋ ಅದು ಜಂತು ಎಂದು ಅರ್ಥ. ಜೀವವೆಂದರೆ ಚೇತನ. ಚೇತನವೆಂದರೆ ಚೈತನ್ಯ, ಶಕ್ತಿ. ಆ ಶಕ್ತಿಯಿದ್ದರೆ ಎಲ್ಲಾ ಪ್ರಾಣಿಗಳೂ ಎದ್ದು ಓಡಾಡಬಹುದು. ಅದಿಲ್ಲದಿದ್ದರೆ, ಅದು ಜಡ ಎಂದು ಪರಿಗಣಿಸಲಾಗುತ್ತದೆ. ಜಡವೆಂದರೆ ಜೀವವಿಲ್ಲದ್ದು. ಜಡದೊಳಕ್ಕೆ ಜೀವ ತುಂಬಿದರೆ ಅದು ಜಂತುವಾಗುತ್ತದೆ.

ಈ ಜಗತ್ತಿನಲ್ಲಿರುವ ಎಲ್ಲಾ ವಸ್ತುಗಳನ್ನೂ ಜಡ ಮತ್ತು ಜೀವ ಎಂದು ವಿಭಾಗಿಸಲಾಗಿದೆ. ಮೇಲೆ ಹೇಳಿದಂತೆ ಜೀವವಿರುವುದು ಜಂತು ಮತ್ತು ಜೀವವಿಲ್ಲದ್ದು ಜಡ. ಜಡವು ಎಲ್ಲ ಕಡೆಯೂ ಇದೆ. ಜೀವವೂ ಎಲ್ಲಕಡೆಯೂ





ಇದೆ. ಇವರೆಡೂ ಬೇರೆ ಬೇರೆಯಾಗಿ ಇರುವ ತನಕ ಜಡ ಜೀವಗಳೆಂಬ ಭೇದ, ಒಂದಾದರೆ ಕೇವಲ ಜಂತು. ಆದರೆ ಜಡ ಜೀವಗಳ ಅವಿನಾಭಾವ ಸಂಬಂಧವನ್ನು ನಾವು ಈ ಜಗತ್ತಿನಲ್ಲಿ ನೋಡಬಹುದು. ಒಂದನ್ನು ಬಿಟ್ಟು ಇನ್ನೊಂದಕ್ಕೆ ಅಸ್ತಿತ್ವವಿಲ್ಲ ಏಕೆಂದರೆ ಇಡೀ ಜಗತ್ತಿನಲ್ಲಿರುವ ಎಲ್ಲ ಪ್ರಾಣಿಗಳೂ ಒಂದು ಜಡ ಮತ್ತೊಂದು ಜೀವದ ಸಮ್ಮಿಲನದಿಂದಲೇ ಆಗಿರುವುದು. ಸಮ್ಮಿಲನವಾದರೆ, ಒಂದು ಜೀವಿಯ ಆವಿರ್ಭಾವ. ಇಲ್ಲದಿದ್ದರೆ ಜಡ ಜಡವಾಗಿ ಮತ್ತು ಜೀವ ಜೀವವಾಗಿಯೇ ಇರುತ್ತದೆ.

ಇಲ್ಲಿ ಒಂದು ದೃಷ್ಟಾಂತವನ್ನು ನೋಡೋಣ. ಹತ್ತು ಹಿಡಿ ಅಕ್ಕಿ, ಅದಕ್ಕೆ ಚಲನೆಯಿಲ್ಲ. ಹಾಗಾಗಿ ಅದನ್ನು ಜಡವೆಂದೇ ಪರಿಗಣಿಸಿದರೂ, ಅದನ್ನು ಬೇಯಿಸಿ ಅನ್ನವಾಗಿಸಿ ದೇಹಕ್ಕೆ ಉಣಬಡಿಸಿದರೆ, ಅದರಿಂದ ಜೀವಿಗೆ ಚೈತನ್ಯ ಉಂಟಾಗುತ್ತದೆ. ಅಂದರೆ ಆ ಚೈತನ್ಯ ಆ ಹತ್ತು ಹಿಡಿ ಅಕ್ಕಿಯಲ್ಲಿ ಇತ್ತು ಎಂದು ಅರ್ಥವಲ್ಲವೇ? ಏಕೆಂದರೆ ಒಂದು

ವಸ್ತುವಿನಲ್ಲಿ ಇಲ್ಲದ್ದು ಪ್ರಕಟವಾಗುವುದು ಹೇಗೆ?

ಜೀವಕ್ಕೆ, ಚೈತನ್ಯಕ್ಕೆ ಹೇತುವಾದ ಅನ್ನ ಜಡವೆಂದು ಹೇಗೆ ಒಪ್ಪಿಕೊಳ್ಳುವುದು? ಈ ದೃಷ್ಟಾಂತವನ್ನು ಎಲ್ಲ ಚೈತನ್ಯದಾಯಕ ವಸ್ತುಗಳಿಗೂ ಹೋಲಿಸಬಹುದು. ಜಡವಾಗಿ ಒಂದೇ ಕಡೆ ನಿಂತಿರುವ ಮರಕ್ಕೆ ಜೀವವಿಲ್ಲವೇ. ಹಾಗಾಗಿ ಇದನ್ನು ನಾವು ಜೀವ ಮತ್ತು ನಿರ್ಜೀವ ವಸ್ತುಗಳೆಂದು ಪರಿಗಣಿಸಿದರೆ, ನಿರ್ಜೀವ ವಸ್ತುಗಳಿಗೆ ಜೀವ ಬಂದರೆ ಅದು ಜೀವಿಯಾಗುತ್ತದೆ. ತೈತ್ತರೀಯ ಉಪನಿಷತ್ತು 'ಅನ್ನಂ ಬ್ರಹ್ಮೇತಿವ್ಯ ಜಾನಾತ್" ಎನ್ನುತ್ತದೆ. ಹಾಗಾಗಿ ಅನ್ನವು ಜೀವ. ಅಲ್ಲಿ ಚೈತನ್ಯ ಸುಪ್ತವಾಗಿದೆ. ಹಾಗೆ ಸುಪ್ತವಾಗಿರುವ ಚೈತನ್ಯವು ಪ್ರಕಟಗೊಂಡರೆ, ಜಡವು, ಜೀವಂತವಾಗುತ್ತದೆ.

ಜೀವಕ್ಕೆ ಎಂದರೆ ಚೈತನ್ಯಕ್ಕೆ ಜಡವೇ ಆಧಾರ. ಒಂದು ಚಿತ್ರಕ್ಕೆ ಭಿತ್ತಿಯು ಹೇಗೆ ಆಧಾರವೋ ಹಾಗೆ ಜೀವ ಜಡದ ಮಾಧ್ಯಮದಿಂದಲೇ ಈ ಜಗತ್ತಿನಲ್ಲಿ ಪ್ರಕಟವಾಗಬಹುದು. ತನ್ನ ಇರುವಿಕೆಗೆ ಮತ್ತು ತನ್ನ ಕಾರ್ಯ ಸಾಧನೆಗೆ ಜೀವಕ್ಕೆ ಜಡವೆ ಕರಣ. ಜೀವವು ಕಾರಣ ದೇಹ ಕರಣ ಮತ್ತು ಇಲ್ಲಿ ಇವರಿಬ್ಬರ ಸಮಾಗಮದಿಂದ ನಡೆಯುವ ಜಗದ್ವ್ಯಾಪಾರವೇ ಕಾರ್ಯ. ಆದರೆ ಎಲ್ಲವೂ ಪರಮಾತ್ಮನಿಂದ ಸಿಡಿದು ಹೊರಬಂದು ಬೇರೆ ಬೇರೆ ರೂಪಗಳನ್ನು ತಳೆದು ಬೇರೆ ಬೇರೆ ಹೆಸರುಗಳನ್ನೂ ಪಡೆದು ಇದು ಜೀವ, ಇದು ಜಡ ಎಂದು ಕರೆಸಿಕೊಳ್ಳಲ್ಪಡುವ ಎಲ್ಲ ವಸ್ತುಗಳಿಗೂ ಮೂಲ ಆ ಪರಮಾತ್ಮ ಚೇತನವೇ ಅಲ್ಲವೇ? ಆ ಪರಮಾತ್ಮನನ್ನು 'ಕರಣಂ ಕಾರಣಂ ಕರ್ತಾ" ಎಂದೂ ಹೇಳಲಾಗಿದೆ. ಹಾಗಾಗಿ ಜಡವು ಕಾರ್ಯಪ್ರವೃತ್ತವಾಗಬೇಕಾದರೆ ಜೀವದೊಂದಿಗೆ ಸಂಗಮವಾಗಬೇಕು. ಹಾಗೆಯೇ ಜೀವ ತನ್ನ ಕಾರ್ಯ ನಿರ್ವಹಣೆ ಮಾಡಬೇಕಾದರೆ ಜಡವೆಂಬ ಮಾಧ್ಯಮ ಬೇಕು. ಅದನ್ನೇ ಮಾನ್ಯ ಗುಂಡಪ್ಪನವರು "ಜಡವೆ ಜೀವದ ವಸತಿ" ಎಂದರು.

ಇಂತಹ ಉತ್ತಮ ಮತ್ತು ಉನ್ನತ ವಿಚಾರಗಳು ಮನುಷ್ಯ ತನ್ನನ್ನು ತಾನು ಅರಿತುಕೊಳ್ಳಲು ಸಹಾಯವಾಗುತ್ತದೆ. ತನ್ನನ್ನು ತಾನು ಜಡವೆಂದುಕೊಂಡಾಗ ಒಂದು ರೀತಿಯಾಗಿಯೂ ತಾನು ಜೀವ ಅಥವಾ ಚೇತನ ಮಾತ್ರ ಎಂದು ಅರಿತುಕೊಂಡಾಗ ಮತ್ತೊಂದು ರೀತಿಯಾಗಿಯೂ ಆನಂದವನ್ನು ಅನುಭವಿಸುತ್ತಾನೆ. ಹಾಗಾಗಿ ವಾಚಕರೆ, ನಾವೂ ಸಹ ಯೋಚನೆ ಮಾಡೋಣ, ನಮ್ಮ ನೆಲೆಯನ್ನು ಅರಿತುಕೊಳ್ಳೋಣ.

# ಜಡಜೀವ 109-113

**ಮುಕ್ತಕ-109**

**ಶಿಲೆಯಾಗಿ ನಿದ್ರಿಸುತ್ತಿರ್ದಾಕೆ ರಾಮಪದ |**
**ತಳದ ಸಂಸ್ಪರ್ಷದಿಂದೆದ್ದು ನಿಂತಂತೆ ||**
**ಚಲಿಸದೆನಿಸಿದ ಜಡವನಾವ ಗಾಳಿಯೋ ಸೋಕೆ ||**
**ಬಲ ತೀವಿ ಚಲಿಪುದದು-ಮಂಕುತಿಮ್ಮ ||**

ನಿದ್ರಿಸುತ್ತಿರ್ದಾಕೆ=ನಿದ್ರಿಸುತ್ತಿದ್ದ+ಆಕೆ, ಸಂಸ್ಪರ್ಷದಿಂದೆದ್ದು=ಸಂಸ್ಪರ್ಶದಿಂದ+ಎದ್ದು, ಚಲಿಸದೆನಿಸಿದ=ಚಲಿಸದು+ಎನಿಸಿದ, ಜಡವನಾವ=ಜಡವನು+ಆವ, ಶಿಲೆಯಾಗಿ-ಕಲ್ಲಾಗಿ, ತಳದ=ಅಡಿಯ, ಸಂಸ್ಪರ್ಶದಿಂದ=ಸೋಕಿದ್ದರಿಂದ, ಚಲಿಸದೆನಿಸಿದ=ಚಲಿಸದು ಎಂದು ಅನಿಸಿದ, ಜಡವ=ಆಚರವಾದದ್ದನ್ನು, ಬಲ ತೀವಿ=ಶಕ್ತಿವಂತವಾಗಿ, ಚಲಿಪುದದು=ಚಲಿಸುವುದದು.

ಶಾಪಗ್ರಸ್ತಳಾಗಿ, ಕಲ್ಲಾಗಿ ನಿದ್ರಿಸುತ್ತಿದ್ದ ಋಷಿಯ ಪತ್ನಿ ಅಹಲ್ಯೆ , ರಾಮನ ಪದ ಸೋಕಿ ಜೀವಂತವಾದಂತೆ, ಇದು ಚಲಿಸದು, ಇದು ಜಡ ಎಂದು ಯಾವುದು ಕರೆಯಲ್ಪಡುತ್ತದೋ ಅದು ಸತ್ವದ, ಚೈತನ್ಯದ, ಜೀವ ಶಕ್ತಿಯ ಸಂಸರ್ಗದಿಂದ ಶಕ್ತಿಯನ್ನು ಪಡೆದು ಜೀವಂತವಾಗುತ್ತದೆ ಎಂದು ಪ್ರಸ್ತಾಪ ಮಾಡುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಈ ಜಗತ್ತು ಒಂದೇ ಮೂಲದಿಂದ ಪ್ರಕಟಗೊಂಡಿದೆ. 'ವಾಗರ್ಥಾವಿವ ಸಂಪೃಕ್ತೌ' ಎಂದು ಕಾಳಿದಾಸ "ರಘುವಂಶ" ಕಾವ್ಯವನ್ನು ಶುರುಮಾಡುತ್ತಾನೆ. ವಾಕ್ ಎಂದರೆ ಶಬ್ದ. ಅರ್ಥವೆಂದರೆ ಆ ಶಬ್ದಕ್ಕಿರುವ ಭಾವ. ಹೇಗೆ ಅವೆರಡೂ ಒಂದನ್ನಗಲಿ ಮತ್ತೊಂದಿರಲಾರದೋ, ಹಾಗೆಯೇ ಈ ಜಡ ಜೀವಗಳ ಸಂಬಂಧವೂ ಸಹ. "ಕಲ್ಲಾಗಿದ್ದ ಅಹಲ್ಯ ರಾಮನ ಪಾದ ಸೋಕಿ" ಎಂದಾಗ ಕಲ್ಲು ಎನ್ನುವುದು ಜಡವನ್ನೂ, ರಾಮ ಎನ್ನುವ ಪದವನ್ನು ಆ ಪರಮ ಚೈತನ್ಯವನ್ನೂ ಪ್ರತಿನಿಧಿಸುತ್ತದೆ. ಇವೆರಡರ ಸಂಸರ್ಗದಿಂದ ಅಹಲ್ಯ ಜೀವಂತವಾದಳು ಎಂದು ಉಲ್ಲೇಖವಿದೆ. ಇದು ಕೇವಲ ಒಂದು ದೃಷ್ಟಾಂತವಷ್ಟೇ!!.

ನಮಗೆ ಕಾಣುವ, ಜಡ ಪದಾರ್ಥಗಳೆಂದು ಪರಿಗಣಿಸಲ್ಪಟ್ಟ ಕಲ್ಲು, ಬೆಟ್ಟ, ಭೂಮಿ, ಎಲ್ಲದರಲ್ಲೂ ಆ ಚೈತನ್ಯ ಸುಪ್ತವಾಗಿದೆ. ಆ ಗಾಳಿಯೋ ಸೋಕೆ ಬಲ ತೀವಿ ಚಲಿಪುದದು" ಎಂದಾಗ, ಆ ಜಡವಸ್ತುವಿಗೆ ಚೈತನ್ಯದ ಗಾಳಿ ಸೋಕಿದರೆ "ಬಲ ತೀವಿ" ಎಂದರೆ ಶಕ್ತಿಯನ್ನು ಪಡೆದುಕೊಂಡು ಚಲಿಸುತ್ತದೆ ಅಲ್ಲವೇ? ಮನೆಯಲ್ಲಿ ವಿದ್ಯುತ್ ಉಂಟು, ಅದರ ಮೂಲದಿಂದ ಪ್ರಕಾಶಿಸಬೇಕಾದ "ಬಲ್ಬ್ ತನಕ ವಿದ್ಯುತ್ ಪ್ರವಾಹವೂ ಉಂಟು. ಆದರೆ, ಆ ಬಗ್ಗೆ ಬೆಳಗಬೇಕಾದರೆ, ಸ್ವಿಚ್ ಒತ್ತಬೇಕು. "ಗಾಳಿಯೋ ಸೋಕೆ!! ಸ್ವಿಚ್ ಒತ್ತಿದಾಗ, ಆ ಬಲ್ಬ್ ಬೆಳಕು ಚೆಲ್ಲುತ್ತದೆ. ಪ್ರಕಾಶಿಸುವ ಸಾಮರ್ಥ್ಯವಿದ್ದಾಗಿಯೂ ಮೂಲ ಚೈತನ್ಯದೊಡನೆ ಸಂಪರ್ಕ ಕಲ್ಪಿಸಬೇಕು ಆಗಲೇ ಅದು ಪ್ರಕಾಶಿಸುವುದು.

ಆದರೆ ಆ ಜಡ, ಪೂರ್ಣ ರೂಪದಲ್ಲಿ ಸಮರ್ಥವಾಗಿರಬೇಕು. ತನ್ನ ಸ್ವಗುಣ ಸಾಮರ್ಥ್ಯವನ್ನು ಕಳೆದುಕೊಂಡಿದ್ದರೆ ಚೈತನ್ಯದ ಸಂಸರ್ಗ ಸಿಕ್ಕರೂ ಜೀವಂತವಾಗಲು, ಬೆಳಗಲು ಸಾಧ್ಯವೇ ಇಲ್ಲ. ನೋಡಿ ಒಂದು ಕಡಲೆ





ಬೀಜವನ್ನು ನೆಲದಲ್ಲಿ ನೆಟ್ಟು ನೀರು ಹನಿಸಿದರೆ, ತನ್ನ ಸಾಮರ್ಥ್ಯದಿಂದಲೇ ಪ್ರಕೃತಿಯಲ್ಲಿನ ಜೀವ ಸತ್ವವನ್ನು ಹೀರಿ ತಾನು ಒಂದು ಜೀವಂತ ಸಸಿಯಾಗುತ್ತದೆ, ಫಲ ನೀಡುತ್ತದೆ. ಅದೇ ಬೀಜವನ್ನು ಹುರಿದುಬಿಟ್ಟರೆ ಅದು ತನ್ನ ಸಾಮರ್ಥ್ಯವನ್ನು ಕಳೆದುಕೊಂಡು ನೆಲದಲ್ಲಿ ನೆಟ್ಟರೂ ನೀರು ಹನಿಸಿದರೂ ಮೊಳಕೆಯೊಡೆದು ಸಸಿಯಾಗಲು ಸಾಧ್ಯವೇ ಇಲ್ಲ. ಹಾಗಾಗಿ ಜಡಕ್ಕೂ ಚೈತನ್ಯವನ್ನು ಸ್ವೀಕರಿಸುವ ಗುಣವಿದ್ದರೆ ಅದು ಜೀವಂತವಾಗಲು ಸಾಧ್ಯ.

ನಾವೂ ಸಹ ಚೈತನ್ಯ ಸದೃಶವಾದ ಜ್ಞಾನವನ್ನು ಪಡೆಯಲು, ಸ್ವೀಕರಿಸುವ ಯೋಗ್ಯತೆಯನ್ನು ಉಳಿಸಿಕೊಂಡಿದ್ದರೆ, ಅಗಾಧ ಜ್ಞಾನ ಭಂಡಾರದಿಂದ ಏನನ್ನಾದರೂ ಸ್ವೀಕರಿಸಿ ನಮ್ಮ ಬುದ್ಧಿಶಕ್ತಿಯನ್ನು ಚಿಗುರಿಸಿ ಪಲ್ಲವಿಸಬಹುದು. ಅಂತಹ ಸ್ವೀಕಾರ ಗುಣಗಳನ್ನೆಲ್ಲ, ನಮ್ಮ ಸ್ವಾರ್ಥ, ಅಹಂಕಾರ ಮುಂತಾದ ದುರ್ಗುಣಗಳ ಬೆಂಕಿಯಲ್ಲಿ ಸುಟ್ಟುಬಿಟ್ಟರೆ, ಜ್ಞಾನ ಬರುವುದು ಸಾಧ್ಯವೇ ಇಲ್ಲ. ಜಡವೂ ಜೀವವೂ ಸೇರಿದ್ದರೂ ಪ್ರಕಾಶಿಸುವುದೇ ಇಲ್ಲ.

ಪಲ್ಲವಿಸುವುದೇ ಇಲ್ಲ. ಹಾಗಾಗಿ ನಾವು ಜಡ ಸ್ವರೂಪವನ್ನು (ಅಜ್ಞಾನವನ್ನು) ಶುದ್ದಿ ಮಾಡಿಕೊಳ್ಳಬೇಕು. ಚೈತನ್ಯವನ್ನು ಬರಮಾಡಿಕೊಳ್ಳಲು ಅಣಿಯಾಗಿಸಿಟ್ಟುಕೊಂಡಿರಬೇಕು. ನಮ್ಮ ಸ್ವಾರ್ಥ ಅಹಂಕಾರ ಮುಂತಾದ ದುರ್ಗುಣಗಳನ್ನು ಧ್ಯಾನದ, ಅಧ್ಯಯನದ, ಜ್ಞಾನದ, ತಪಸ್ಸಿನ ಬೆಂಕಿಯಲ್ಲಿ ಸುಟ್ಟಾಗ, ಜ್ಞಾನ ಸ್ವೀಕಾರ ಗುಣಗಳು ಚುರುಕಾಗಿ, ನಮ್ಮ ರಿಸೀವರ್ ಶುದ್ಧವಾಗಿ, ಯೋಗ್ಯವಾಗಿ, ನಮ್ಮಲ್ಲೂ ಜಡ ಚೈತನ್ಯಗಳ ಸಮಾಗಮವಾಗಿ, ನಾವೂ ಸಹ ಪ್ರಕಾಶಿಸಬಹುದು, ಪಲ್ಲವಿಸಬಹುದು. ನಾವೂ ಸಹ ಅಂತಹ ಪ್ರಯತ್ನವನ್ನು ಮಾಡೋಣ.

**ಮುಕ್ತಕ-110**

**ಹಿಮಗಿರಿಯ ಕಂಡಂಗೆ ಕ್ರಿಮಿಯ ಹಿರಿಮೆಯದೇನು? |**
**ಕ್ರಿಮಿಗೆ ಹಸಿವುಂಟೆನಿತು ಬೆದಕಾಟಮುಂಟು ||**
**ಅಮಿತ ಸಂತತಿಯುಂಟು ಹಿಮಗಿರಿಯ ಸಮಯುಗದ |**
**ಕ್ರಿಮಿಪಂಕ್ತಿ ಕಿರಿದಹುದೆ-ಮಂಕುತಿಮ್ಮ ||**

ಹಿರಿಮೆಯದೇನು=ಹಿರಿಮೆಯು+ಅದೇನು?, ಹಸಿವುಂಟೆನಿತು=ಹಸಿವು+ಉಂಟು+ಇನಿತು, ಬೆದಕಾಟಮುಂಟು=ಬೆದಕಾಟಂ+ಉಂಟು.
ಹಿಮಗಿರಿಯ=ಹಿಮಾಲಯ ಪರ್ವತವನ್ನು, ಕಂಡಂಗೆ=ಕಂಡವನಿಗೆ, ಅಮಿತ=ಮಿತಿಯಿಲ್ಲದ, ಕಿರಿದಹುದೆ=ಕಿರಿದಾಗುವುದೇ?

ಹಿಮಾಲಯ ಪರ್ವತವನ್ನು ಕಂಡವನಿಗೆ ಒಂದು ಸಣ್ಣ ಕ್ರಿಮಿ ಯಾವ ಲೆಕ್ಕ? ಆದರೆ ಕ್ರಿಮಿಗೆ ಸಂತತಿ ಉಂಟು, ಹಸಿವುಂಟು, ಬೆದಕಾಟವುಂಟು. ಹಿಮಾಲಯವು ಎಂದಿನಿಂದ ಇದೆಯೋ ಅಂದಿನಿಂದ ಕ್ರಿಮಿಯ ಅನಂತ ಸಂತತಿಯು ಉಂಟು. ಕ್ರಿಮಿಗಳು ಎಷ್ಟಿವೆಯೆಂದರೆ ಕ್ರಿಮಿ ಸಂತತಿಯನ್ನು ಒಟ್ಟು ಮಾಡಿದರೆ, ಅದು ಹಿಮಾಲಯಕ್ಕಿಂತ ದೊಡ್ಡದಾಗಬಹುದು. ಹಾಗಾಗಿ ಕ್ರಿಮಿ ಪಂಕ್ತಿ ಕಿರಿಯದಲ್ಲವೆಂದು ಪ್ರಸ್ತಾಪ ಮಾಡುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ವಾಚಕರೆ ಜ್ಞಾನ, ಧನ, ಅಧಿಕಾರದಲ್ಲಿ ಉನ್ನತ ಸ್ಥಾನದಲ್ಲಿರುವವರಿಗೆ, ಕೆಳಗಿರುವವರು ಕ್ರಿಮಿಗಳಂತೆಯೇ ಕಾಣುತ್ತಾರೆ ಅಲ್ಲವೇ? ಹಾಗೆಯೇ, ಹಿಮಾಲಯ ಕಂಡವನಿಗೆ ಸಣ್ಣ ಕ್ರಿಮಿ, ಬಹಳ ಚಿಕ್ಕದಾಗಿ ಕಾಣಬಹುದು. ಆದರೆ ಹಿಮಾಲಯಕ್ಕೆ ಅದರ ಸ್ಥಾನ ಅದಕ್ಕಿದ್ದರೆ, ಸಣ್ಣ ಕ್ರಿಮಿಗೂ ಅದರದೇ ಒಂದು ಸ್ಥಾನವುಂಟು. ಮೊದಲಿಂದಲೂ ಇವೆರಡೂ ರೀತಿಯ ಜನ, ಯುಗಯುಗಾಂತರದಲ್ಲೂ ಇದ್ದರು ಮತ್ತು ಇರುತ್ತಾರೆ.

ಇಲ್ಲಿ ನಾವು ಜ್ಞಾನದಲ್ಲಿ ಆಧಿಕ್ಯವನ್ನು ಪಡೆದವರನ್ನು, ಹಿಮಾಲಯಕ್ಕೆ ಹೋಲಿಸಿದ್ದಾರೆ ಎಂದು ನೋಡಿದರೆ, ಸಾಮಾನ್ಯ ಜ್ಞಾನದ ಪ್ರಾಪ್ತಿಯಾಗದವರನ್ನು ಕ್ರಿಮಿಗಳಿಗೆ ಹೋಲಿಸಿದ್ದಾರೆ ಎಂದು ತಿಳಿಯಬಹುದು. ಹಾಗೆ ಯೋಚಿಸಿದರೆ ಜ್ಞಾನಿಗಳಿಗೆ ಸ್ಥಿರ ಚಿಂತನೆ ಇದ್ದರೆ ಸಾಮಾನ್ಯ ಮಾನವರ ಮನಸ್ಸಿನಲ್ಲಿ ಇನ್ನೂ ಜ್ಞಾನದ ಹಸಿವೆ ಇರುತ್ತದೆ. ಜೀವನದಲ್ಲಿ ತೊಳಲಾಟವಿರುತ್ತದೆ, ಬೆದಕಾಟವಿರುತ್ತದೆ.

ಈ ಜಗತ್ತಿನಲ್ಲಿ ಆ ಪರಮಾತ್ಮನ ಸೃಷ್ಟಿಯಲ್ಲಿ ಎಲ್ಲವೂ ಇದೆ. ಅವನ ಪ್ರತಿ ಸೃಷ್ಟಿಗೂ ಅವನದೇ ಆದ ಕಾರಣವುಂಟು. ನಮಗದು ಅರ್ಥವಾಗದೆ ನಮ್ಮದೇ ಆದ ವ್ಯಾಖ್ಯಾನವನ್ನು ಕೊಡುತ್ತಾ, ನಮ್ಮ ವ್ಯಾಖ್ಯಾನದ ಬಗ್ಗೆ ನಮಗೆ ನಾವೇ ತೃಪ್ತಿಪಟ್ಟುಕೊಳ್ಳುತ್ತಿರುತ್ತೇವೆ. ಈ ಜಗತ್ತಿನಲ್ಲಿ ಮಾನವನ ಸೃಷ್ಟಿಗೆ ಎಷ್ಟು ಮಹತ್ವವಿದೆಯೋ, ಒಂದು ಆನೆಯ ಸೃಷ್ಟಿಗೆ ಎಷ್ಟು ಮಹತ್ವವಿದೆಯೋ ಅಷ್ಟೇ ಮಹತ್ವ ಒಂದು ಸಣ್ಣ ಕ್ರಿಮಿಯ ಸೃಷ್ಟಿಗೂ ಇದೆ.

ಅದನ್ನು ಅರಿಯುವುದೇ ಶುದ್ಧ ಜ್ಞಾನ. ಯಾವುದನ್ನೂ ಇದು ಮೇಲು, ಇದು ಕೀಳು ಎಂದು ಪರಿಗಣಿಸುವ ಮತ್ತು ಭೇದ ಭಾವ ಮಾಡುವುದು ಅಜ್ಞಾನ. ಅಜ್ಞಾನವಷ್ಟೇ ಅಲ್ಲ, ಅದು ಅಪಚಾರ", ಭಗವಂತನ ಸೃಷ್ಟಿಯ ಕಾರಣವನ್ನು ಮತ್ತು ಅವನ ಇಚ್ಛೆಯನ್ನೇ ಪ್ರಶ್ನಿಸಿದಂತೆ, ವಿಮರ್ಶೆ ಮಾಡಿದಂತೆ ಆಗುತ್ತದಲ್ಲವೇ? ಇದು ಅಪಚಾರ. ಅಂತಹ ಅಪಚಾರವನ್ನು ನಾವು ಮಾಡದೆ, ಆ ಪರಮಾತ್ಮನ ಸೃಷ್ಟಿಯ ಎಲ್ಲವನ್ನೂ ಗೌರವಿಸುವ ಗುಣವನ್ನು ಬೆಳೆಸಿಕೊಳ್ಳಬೇಕು.

**ಮುಕ್ತಕ-111**

**ಜಡವೆಂಬುದೇನು?ಸೃಷ್ಟಿಯಲ್ಲಿ ಚೇತನ |**
**ಅಡಗಿ ನಿದ್ರಿಪುದಲ್ಲಿ ಚೈತನ್ಯದಗ್ನಿ ||**
**ಮಿಡಿಯೆ ಪರಸತ್ವವಿದುದ್ದೀಪ್ತಿಯದನಾಗ |**
**ನಡೆವುದದು ಜೀವಿವೊಲು-ಮಂಕುತಿಮ್ಮ ||**

ಜಡವೆಂಬುದೇನು=ಜಡವು+ಎಂಬುದು+ಅದು+ಏನು, ನಿದ್ರಿಪುದಲ್ಲಿ=ನಿದ್ರಿಪುದು+ಅಲ್ಲಿ

ಚೈತನ್ಯದಗ್ನಿ=ಚೈತನ್ಯದ+ಅಗ್ನಿ, ಪರಸತ್ವವಿದುದ್ದೀಪ್ತಿಯದನಾಗ=ಪರಸತ್ವ+ವಿದು+ದೀಪ್ತಿ+ಅದನು+ಆಗ,

ನಡೆವುದದು=ನಡೆವುದು+ಅದು,

ಸುಪ್ತಿ=ಸುಪ್ತವಾಗಿರುವುದು, ಚೈತನ್ಯದಗ್ನಿ=ಜೀವ ತೇಜಸ್ಸು, ಮಿಡಿಯೆ=ಓಡಾಡಿದರೆ, ಪರಸತ್ವ-ಪರಮಾತ್ಮ ಸತ್ವ, ಜೀವಿವೊಲು=ಜೀವಿಯಂತೆ.

ಒಂದೇ ಮೂಲದಿಂದ ಹೊರಟ ಎರಡು ವಸ್ತುಗಳು. ಒಂದು ಜಡ ಇನ್ನೊಂದು ಚೇತನ. ಅದರ ಅಸ್ತಿತ್ವಕ್ಕೆ ಕಾರಣವೇ ಬೃಹತ್ ಚೇತನ, ಸೃಷ್ಟಿಯ ಆದಿಯಲ್ಲಿ ಆ ಚೇತನದ ವ್ಯಾಪಕತೆಯ ಸ್ವರೂಪವೇ ಬೇರೆ.





ಕೋಟ್ಯಾಂತರ ವರ್ಷಗಳಿಂದ ಬದಲಾಗುತ್ತಾ ಬರುತ್ತಿದೆ. ಮೊದಲು ಪಂಚಭೂತಗಳಲ್ಲಿ ಮಾತ್ರ ಇದ್ದದ್ದು ಕಾಲಾನುಕಾಲಕ್ಕೆ ಗಿಡಮರಗಳಲ್ಲಿ ತದನಂತರ ಕ್ರಿಮಿ ಕೀಟಗಳಲ್ಲಿ, ನಂತರ ಪ್ರಾಣಿಗಳಲ್ಲಿ ಹೀಗೆ ಎಲ್ಲದರ ಅಸ್ತಿತ್ವಕ್ಕೆ ಕಾರಣವಾದ ಚೇತನವು ತನ್ನ ಶರೀರವನ್ನು ರೂಪಾಂತರಗೊಳಿಸುತ್ತಾ ಹೋಯಿತು. "ಆಕಾಶಾದ್ವಾಯುಃ ವಾಯೋರಗ್ನಿಃ ಅಗ್ನಿರಾಪಃ ಅದ್ಭ್ಯಃ ಪೃಥಿವೀ ಪೃತಿವ್ಯಾ ಓಷದಯಃ ಓಷದೀಭ್ಯೋನ್ನಂ ಅನ್ನಾತ್ ಪುರುಷಃ" ಹೀಗೆ ಚೇತನವು ತನ್ನ ಇರುವಿಕೆಯನ್ನು ಎಲ್ಲೆಡೆ ತೋರಿಸುತ್ತಾ ಜೀವಿಗಳಲ್ಲಿ ಚೇತನ ಸ್ವರೂಪದಿಂದ "ಪುರುಷ"ನೆಂದು ಕರೆಯಲ್ಪಡುತ್ತಾ ಪೌರುಷದಿಂದ ಮೆರೆದಿದೆ. ಈ ಹಿಂದಿನ ಮುಕ್ತಕದಲ್ಲಿ ಉಲ್ಲೇಖಿಸಿದಂತೆ "ಜಡ" ವೆಂದರೆ ಚಲನೆ ಇಲ್ಲದ ವಸ್ತು. ಅದರಲ್ಲಿಯೂ ಚೈತನ್ಯವಿದೆ. ಆದರೆ ಆ ಚೈತನ್ಯಾಗಿ ನಿದ್ರಿಸುತ್ತಿದೆ ಎಂದರೆ ಸುಪ್ತವಾಗಿದೆ. ನಿದ್ರಿಸುತ್ತಿರುವ ಆ ಅಗ್ನಿಯ ಕಿಡಿ ಸಿಡಿದು ಮಿಡುಕಿದರೆ ಅದು ಜೀವಿಯಾಗುತ್ತದೆ ಎನ್ನುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಹಾಗೆಯೇ ಪ್ರತಿಜೀವಿಯೂ ಜ್ಞಾನಸ್ವರೂಪನೆ. ಆದರೆ ಆ ಜ್ಞಾನವು ಸುಪ್ತವಾಗಿದೆ. ಜ್ಞಾನದ ಕನ್ನಡಿಯ ಮೇಲೆ ಧೂಳಿನ ಪೊರೆ ಕವಿದಿದೆ ಅದನ್ನು ಒರೆಸಿ ಶುದ್ಧಿಮಾಡಿದರೆ, ಕನ್ನಡಿಯು ಫಳ ಫಳನೆ ಹೊಳೆದು ಜ್ಞಾನ ಅಂದರೆ ಬೆಳಕನ್ನು ಹೊರಸೂಸುತ್ತದೆ. ಜ್ಞಾನ ಕವಿದಿರುವ ತನಕ ಜಡವಾಗಿದ್ದು, ಶುದ್ಧವಾದೊಡನೆ, ಚೈತನ್ಯದಿಂದ ಕೂಡಿದಂತಾಗುತ್ತದೆ. ಇದನ್ನೇ ಮಾನ್ಯ ಗುಂಡಪ್ಪನವರು "ಪರಸತ್ವವಿದುದ್ದೀಪ್ತಿಯದನಾಗ" "ನಡೆವುದದು ಜೀವಿವೊಲು" ಎಂದಿದ್ದಾರೆ. ಜ್ಞಾನದ ಸಂಸರ್ಗದಿಂದ ಜಡವಾಗಿರುವ ನಮ್ಮ ಜೀವನವು ಚೈತನ್ಯದಾಯಕವಾಗುತ್ತದೆ ಎನ್ನುವುದೇ ಈ ಮುಕ್ತಕದ ಹೂರಣ.

ವಾಚಕರೆ, ನಾವೂ ಸಹ ನಮ್ಮ ಕನ್ನಡಿಗಳನ್ನು ಒರೆಸಿ ಶುದ್ಧಿಮಾಡಿಕೊಳ್ಳಬೇಕು. ಚೈತನ್ಯಪೂರಿತರಾಗಿ ಪ್ರಜ್ವಲಿಸಬೇಕು. ಅಂತಹ ಪ್ರಯತ್ನವನ್ನು ಮಾಡೋಣವೆ?

**ಮುಕ್ತಕ-112** **ಹಿಮಗಿರಿಯೊಳವಿತಿಹುದು ಚೈತನ್ಯದಗ್ನಿ ಕಣ |**
**ಸ್ಥಿಮಿತದಿಂ ನಿಂತಿರ್ಪುದದು ಧರೆಯ ಹಿತಕೆ ||**
**ಶಮದ ಸುಂದರದ, ಸಾತ್ವಿಕದ ಗಾಂಭೀರ್ಯವದು |**
**ನಮಗೊಂದು ವೇದ ನಿಧಿ-ಮಂಕುತಿಮ್ಮ||**

ಹಿಮಗಿರಿಯೊಳವಿತಿಹುದು=ಹಿಮಗಿರಿಯೊಳು+ಅವಿತಿಹುದು, ನಿಂತಿರ್ಪುದದು=ನಿಂತು+ಇರ್ಪುದು+ಅದು, ಗಾಂಭೀರ್ಯವದು=ಗಾಂಭೀರ್ಯವು+ಅದು, ಚೈತನ್ಯದಗ್ನಿ=ಚೈತನ್ಯದ ಅಗ್ನಿ,

ಬೃಹತ್ತಾದ ಹಿಮಾಲಯ ಪರ್ವತದ ಗರ್ಭದಲ್ಲೂ ಸಹ ಒಂದು ಚೈತನ್ಯದ ಅಗ್ನಿ ಅಡಗಿದೆ. ಅದು ಸ್ಥಿರವಾಗಿ, ಸ್ಥಿಮಿತದಿಂದ, ನಿಂತಿದೆ, ಈ ಭೂಮಿಯನ್ನು ಕಾಪಾಡುವುದಕ್ಕಾಗಿಯೇ!! ಶಾಂತ, ಸುಂದರ ಮತ್ತು ಸಾತ್ವಿಕ ಗಾಂಭೀರ್ಯದ ನಿಲುವಿನಲ್ಲಿ ನಿಂತಿರುವ ಆ ಹಿಮಾಲಯವು ನಮಗೆ ಜ್ಞಾನದ ಪ್ರತೀಕವಾಗಿದೆ ಎನ್ನುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಆದರೆ ಆ ಚೈತನ್ಯದ ಅಗ್ನಿ ಸುಪ್ತವಾಗಿದೆ. ಟಿಬೆಟ್ಟಿನ ಆ ಭಾಗದಲ್ಲಿ ಒಂದೆರಡು ಅಗ್ನಿಪರ್ವತಗಳಿರಬಹುದು. ಆದರೆ ಒಂದು ನೂರು ವರ್ಷಗಳಿಂದ ಅದು ಸಿಡಿದ ದಾಖಲೆಯಿಲ್ಲ. ಅಂದರೆ ಸುಪ್ತವಾಗಿದೆ. ಅದು ಸುಪ್ತವಾಗಿರುವುದರಿಂದ, ಭೂಮಿಯ ಈ ಭೂ ಭಾಗ ಸ್ವಸ್ಥವಾಗಿದೆ, ಎನ್ನುವುದೂ ಸತ್ಯ.

ಹಿಮಾಲಯ ಒಬ್ಬ ಸ್ಥಿತಪ್ರಜ್ಞನಂತೆ, ಜ್ಞಾನಿಯಂತೆ, ಧೀಮಂತನಂತೆ ನಿಂತಿದೆ. ಅದು ಶಾಂತವಾಗಿದೆ. ಅದನ್ನು ಕಂಡವರಿಗೂ ಮನಸ್ಸಿನಲ್ಲಿ ಶಾಂತಿಯಡರಿ ಮನಸ್ಸು ಪ್ರಶಾಂತವಾಗುತ್ತದೆ. ಅದರ ಸೌಂದರ್ಯವನ್ನು ಬಣ್ಣಿಸಲಸಾಧ್ಯ. ಗಾಂಭೀರ್ಯವೇ ಮೂರ್ತಿವೆತ್ತಂತೆ ನಿಂತಿದೆ. ಅದು ದೇವತೆಗಳ ವಾಸಸ್ಥಾನ. ಹಿಮಾಲಯವನ್ನು ವರ್ಣಿಸಿದ ಕಾವ್ಯಗಳು, ಪುರಾಣಗಳು, ನಮ್ಮಲ್ಲಿ ವಿಪುಲ. ಪರಶಿವನ ಆವಾಸ ಸ್ಥಾನ. ಎಲ್ಲ ದೇವತೆಗಳ, ಯಕ್ಷರ, ಕಿನ್ನರರ, ಕಿಂಪುರುಷರ ವಾಸದ ಮನೆ. ನಮ್ಮ ಭಾರತೀಯ ಸಂಸ್ಕೃತಿಯಲ್ಲಿರುವ ಎಲ್ಲ ಋಷಿ ಮುನಿಗಳ ತಪೋಧ್ಯಾನ. ಎಲ್ಲ ಋಷಿ ಮುನಿಗಳಿಗೂ ತಪಸ್ಸಿಗೆ ಸೂಕ್ತ ತಾಣ ಹಿಮಾಲಯ. ಅವರಲ್ಲಿ ವಸಿಷ್ಠ, ಗೌತಮ, ವಿಶ್ವಾಮಿತ್ರ, ಮುಂತಾದವರು ಪ್ರಮುಖರು. ಹಿಮಾಲಯ ಭಾರತೀಯ ವೇದ ಸಂಸ್ಕೃತಿಯ ಉಗಮಸ್ಥಾನ. ಭಾರತೀಯ ಸಂಸ್ಕೃತಿಯ ಜ್ಞಾನದ ಅಗ್ನಿಗೆ ನಮ್ಮ ಹಿಮಾಲಯವೇ ಮೂಲವೆಂದರೆ ತಪ್ಪಾಗಲಾರದು. ಹಿಮಾಲಯವನ್ನು ಬಣ್ಣಿಸಲು ಹೋದರೆ ನಮ್ಮ ಪದಗಳು ಪೇಲವಗೊಂಡಾವು.

ನಮ್ಮಲ್ಲೂ ಅಂತಹ ಹಿಮಾಲಯ ಸದೃಶರಾದ ಜ್ಞಾನಿಗಳು ಇದ್ದಾರೆ. ಸತ್ಯ ಸ್ವರೂಪದ ಜ್ಞಾನಿಗಳು. ಜ್ಞಾನಾಗ್ನಿ ಕುಂಡಗಳಂತೆ, ಜ್ಞಾನದ ಬೆಳಕು ಅವರಲ್ಲಿ ತುಂಬಿದ್ದರೂ ತುಳುಕದೆ, "ಸ್ಥಿಮಿತದಿಂ ನಿಂತಿರ್ಪುದದು ಧರೆಯ ಹಿತಕೆ' ಎಂಬಂತೆ, ಸ್ಥಿಮಿತದಿಂದ, ಶಾಂತವಾಗಿ, ಗಂಭೀರವಾಗಿ, ಜ್ಞಾನ ಸ್ವರೂಪರಾಗಿ ನಮ್ಮ ಸುತ್ತು ಮುತ್ತಲಿನ ಸಮಾಜದಲ್ಲಿ ಇದ್ದಾರೆ. ಶುದ್ಧ ಕುತೂಹಲದಿಂದ, ಜ್ಞಾನ ಪಿಪಾಸುಗಳಿಗೆ, ಅವರು ಸತ್ಯವಾಗಲೂ "ವೇದ ನಿಧಿಗಳಂತೆ ಇದ್ದಾರೆ. ಅಂತಹವರು ಸಿಕ್ಕರೆ ಅವರಿಂದ ಜ್ಞಾನ ಪಡೆಯುವ ಪ್ರಯತ್ನ ಮಾಡಬೇಕು. ಹಿಮಾಲಯ ಸದೃಶರಾದ ಅವರ ಕಾಲಿಗೆರಗಿ, ನಮಸ್ಕರಿಸಿ, ಜಿಜ್ಞಾಸೆಯಿಂದ, ಅವರಿಂದ ಜ್ಞಾನ ಪಡೆಯುವ ಪ್ರಯತ್ನ ಮಾಡಬೇಕು. ಅವರಿಂದ ಸಿಡಿಯುವ ಜ್ಞಾನಾಗ್ನಿ ಕಿಡಿಗಳನ್ನು ಗ್ರಹಿಸಿ, ನಮ್ಮ ಮನಸ್ಸು, ಬುದ್ಧಿಗಳನ್ನು ಪ್ರಜ್ವಲಿಸಿಕೊಳ್ಳಬೇಕು. ಅಂತಹ ಜ್ಞಾನಿಗಳು ಹಿಮಾಲಯ ಸದೃಶರಾಗಿರುವುದರಿಂದಲೇ, ಇಂದಿಗೂ ಸಮಾಜದಲ್ಲಿ ಹಲ ಕೆಲವರಾದರೂ ಸಜ್ಜನರಾಗಿ ರೂಪುಗೊಳ್ಳುತ್ತಿದ್ದಾರೆ.

ಇಂತಹ ಜ್ಞಾನಿಗಳು, ಹಿಮಾಲಯವು ಈ ಭೂ ಭಾಗಕ್ಕೆ ಎಷ್ಟು ಹಿತವನ್ನುಂಟುಮಾಡುತ್ತಿದೆಯೋ, ಅಷ್ಟೇ ಹಿತವನ್ನು ಈ ಸಮಾಜಕ್ಕೆ ಮಾಡುತ್ತಿದ್ದಾರೆ. ಆದರೆ ವಿಪರ್ಯಾಸವೆಂದರೆ, ಇವತ್ತಿನ ಸಾಮಾಜಿಕ ಪರಿಸ್ಥಿತಿಯಲ್ಲಿ ಅಂತಹವರ ಅಭಿಪ್ರಾಯಗಳಿಗೆ ಬೆಲೆಯಿಲ್ಲದೆ, ನಮ್ಮ ಸಮಾಜ ಅಧೋಗತಿಯ ಮಾರ್ಗವನ್ನು ತುಳಿಯುತ್ತಿದೆ. ಮನುಕುಲ ಎಂದು ಅಂತಹ ಜ್ಞಾನಿಗಳ, ಧರ್ಮಾಧಾರಿತ ವಿವೇಕವನ್ನು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳುತ್ತದೋ, ಅಂದು ನಮಗೆಲ್ಲಾ ಒಳಿತು. ಅಂತಹಾ ಸುದಿನ ಬರಲೆಂದು ಆಶಿಸೋಣ.





**ಮುಕ್ತಕ-113**

**ಅಣುಸಂಖ್ಯೆಯೆಣಿಸುವನು ವಿಶ್ವದಲ್ಲಿ ವಿಜ್ಞಾನಿ |**
**ಗುಣಿಸುವನು ಭೂತಶಕ್ತಿಗಳನದರಿಂದೇಂ ||**
**ಗಣಿತಸಾಧ್ಯದ ಹಿಂದಗಣ್ಯದ ಮಹತತ್ತ್ವ |**
**ವಣಗಿಹುದು ಮೂಲವದು-ಮಂಕುತಿಮ್ಮ ||**

ಅಣುಸಂಖ್ಯೆಯೆಣಿಸುವನು=ಅಣುಸಂಖ್ಯೆಯನು+ಎಣಿಸುವನು,
ಭೂತಶಕ್ತಿಗಳನದರಿಂದೇಂ=ಭೂತ+ಶಕ್ತಿಗಳನು+ಅದರಿಂದ+ಏನು, ಗಣಿತಸಾಧ್ಯದ=ಗಣಿತ+ಸಾಧ್ಯದ,
ಹಿಂದಗಣ್ಯದ=ಹಿಂದೆ+ಅಗಣ್ಯದ, ಮಹತತ್ತ್ವವಣಗಿಹುದು=ಮಹತ್+ತತ್ತ್ವವವು+ಅಣಗಿಹುದು,
ಮೂಲವದು=ಮೂಲವು+ಅದು.

ಅಗಣ್ಯದ=ಎಣಿಸಲಾಗದ, ಮಹತತ್ವ=ಪರಮ ಚೇತನದ ತತ್ವ, ಮೂಲವದು=ಜಗತ್ತಿಗೆ ಮೂಲ ವಸ್ತು.

ಈ ಜಗತ್ತಿನ ಅತಿ ಸೂಕ್ಷ್ಮ ಜೀವಿ ಅಣುಗಳನ್ನು ವಿಜ್ಞಾನಿ ಲೆಕ್ಕ ಹಾಕಿಬಿಡಬಹುದು. ಭೌತಿಕ ಶಕ್ತಿಯನ್ನು "ಗುಣಿಸಿ ಭಾಗಿಸಿ ಕೂಡಿ ಕಳೆದು" ಬಿಡಬಹುದು. ಆದರೆ ಅದರಿಂದ ಏನು ಪ್ರಯೋಜನ, ಕೇವಲ ಭೌತಿಕ ರೂಪವಷ್ಟೇ ತಿಳಿಯುವುದು. ಈ ಗಣಿತ ಶಾಸ್ತ್ರಕ್ಕೂ ಮೀರಿ ಒಂದು ಮಹತತ್ವವು ಭೌತಿಕ ಶರೀರದೊಳಗೆ ಚೈತನ್ಯ ರೂಪದಲಿ ಅಡಗಿದೆ. ಅದೇ ಮೂಲ ಎಂದು ಪ್ರಸ್ತಾಪ ಮಾಡುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ವಿಜ್ಞಾನಿಗಳ ವೈಜ್ಞಾನಿಕ ಪ್ರಯೋಗಗಳ, ಅವುಗಳ ಫಲಿತಾಂಶಗಳ ಮತ್ತು ಅವುಗಳ ತಾತ್ಕಾಲಿಕತೆಯ ಬಗ್ಗೆ ನಾವು ಬಹಳಷ್ಟು ಓದಿದ್ದೇವೆ ಮತ್ತು ಬರೆದಿದ್ದೇವೆ. ವಿಜ್ಞಾನಗಳು ಕೇವಲ ಭೌತಿಕ ವಿಷಯಗಳನ್ನಷ್ಟೇ ಲೆಕ್ಕಹಾಕಬಲ್ಲರು. ಆದರೆ ಈ ಭೌತಿಕವನ್ನು ಉಂಟುಮಾಡಿದ, ಸಲುಹುತ್ತಿರುವ ಆ ಮಹಾ ಶಕ್ತಿಯು ಅವರ ಲೆಕ್ಕಗಳ ಹಿಡಿತಕ್ಕೆ ಇನ್ನೂ ಸಿಕ್ಕಿಲ್ಲ ಅಲ್ಲವೇ? ಅದು ಸಿಗುವುದೂ ಇಲ್ಲ. ಪ್ರತಿ ನಿತ್ಯ ತನ್ನ ಸ್ವರೂಪವನ್ನು ಬದಲಾಯಿಸಿಕೊಳ್ಳುತ್ತಾ, ನಮಗೆಲ್ಲ ಒಂದು ವಿಸ್ಮಯವನ್ನು ತೋರುವ ಆ ಶಕ್ತಿ ಲೆಕ್ಕಾಚಾರದ ಹಿಡಿತಕ್ಕೆ ಸಿಕ್ಕಲು ಸಾಧ್ಯವೇ ಇಲ್ಲ.

ಅದು ಪರತತ್ವ, ಪರಮಾತ್ಮ ತತ್ವ ಮತ್ತು ಸತ್ವ ಭೌತಿಕ ಶರೀರಗಳ ಚಲನೆಗೆ ಇಂಬುಕೊಡುವ ಸತ್ವ, ಅದು ಎಲ್ಲಿದೆ, ಎಲ್ಲಿಂದ ಬರುತ್ತದೆ, ಹೇಗೆ ಕಾರ್ಯಮಾಡುತ್ತದೆ ಎನ್ನುವುದೇ ಒಂದು ವಿಸ್ಮಯ. ನೋಡಿ ಒಂದು ಬತ್ತದ ಬೀಜ ನೆಟ್ಟರೆ, ಮೊಳೆತು, ಸಸಿಯಾಗಿ, ತೆನೆಯೊಡೆಯುತ್ತದೆ. ಆದರೆ ಆ ತೆನೆಯಾಗಲು ಆ ಬೀಜ ಮತ್ತು ಆ ಸಸಿ, ಸತ್ವವನ್ನು, ಪ್ರಕೃತಿಯಿಂದ ಹೇಗೆ ಸೆಳೆದುಕೊಂಡಿತು ಎನ್ನುವುದು ಒಂದು ವಿಸ್ಮಯ. ಅದೇ ಪರಮಾತ್ವ ತತ್ವ ಆ ಸಸಿಯ ತೆನೆಯಲ್ಲಿನ ಕಾಳುಗಳನ್ನು ಎಣಿಸಿಬಿಡಬಹುದು. ಆದರೆ ಆ ತೆನೆಯಲ್ಲಿ ಅಷ್ಟೇ ಕಾಳುಗಳು ಹೇಗೆ ಮತ್ತು ಏಕೆ ಆದವು ಎಂದು ವಿಜ್ಞಾನಿಗಳು ಹೇಳಬಲ್ಲರೆ ಅಥವಾ ಒಂದು ಸಸಿಯನ್ನು ನೋಡಿ ಅದರಲ್ಲಿ, ಇಷ್ಟೇ ಕಾಳುಗಳಾಗುವುವು ಎಂದು ವಿಜ್ಞಾನಿಗಳು ಹೇಳಬಲ್ಲರೆ? ಹಾಗೆ ಹೇಳಲಾಗದಂತಹ ಶಕ್ತಿಯೇ ಪರಮಾತ್ಮ ಶಕ್ತಿ. ಹೀಗೆಯೇ 'ಭವತಿ ಇತಿ ಭೂತಃ" ಎಂಬ ಅರ್ಥದಲ್ಲಿ ಈ ಜಗತ್ತಿನಲ್ಲಿರುವ ಎಲ್ಲ ಭೂತಗಳಲ್ಲೂ ಇರುವುದೇ ಆ ಪರಮಾತ್ಮ ಶಕ್ತಿ. ಮಾನವನ ಲೆಕ್ಕಾಚಾರಕ್ಕೆ ಎಟುಕದ್ದು. ಇದು ಕೇವಲ ಅನುಭವವೇದ್ಯ.

ಅಂತಹ ಅನುಭವಕ್ಕೆ ಮಾತ್ರ ಸಿಗಬಹುದಾದ ಮತ್ತು ಸಕಲ ಜೀವರಾಶಿಗಳ ಸೃಷ್ಟಿ, ಸ್ಥಿತಿ ಮತ್ತು ಲಯಗಳಿಗೆ ಕಾರಣವಾದ, ಚೈತನ್ಯ ಸ್ವರೂಪವಾದ ಆ ಪರಮಾತ್ಮ ಶಕ್ತಿಯೇ ಎಲ್ಲಾ ಜೀವರಾಶಿಗಳಲ್ಲೂ ಇದೆ ಎಂಬುದೇ ಈ ಮುಕ್ತಕದ ಹೂರಣ.

# ಭೌತ ವಿಜ್ಞಾನಿ 114-118

**ಮುಕ್ತಕ-114**

**ಸೃಷ್ಟಿರೂಪಂಗಳವತಾರದೋಳ್ ಕ್ರಮ ಲಕ್ಷ್ಯ ।**
**ಪುಷ್ಟವಾಗಿರ್ದೊಡೇನಿಲ್ಲ ದೊಡದೇನು ॥**
**ಶಿಷ್ಟಮಾದುದು ಸತ್ತ್ವವದನು ಸೋಕದು ರೂಪ ।**
**ದೃಷ್ಟಿ ಸತ್ತ್ವದೊಳಿರಲಿ-ಮಂಕುತಿಮ್ಮ ॥**

ಸೃಷ್ಟಿರೂಪಂಗಳವತಾರದೋಳ್ =ಸೃಷ್ಟಿ+ರೂಪಂಗಳ+ಅವತಾರದೋಳ್, ಪುಷ್ಟವಾಗಿರ್ದೊಡೇನಿಲ್ಲ ದೊಡದೇನು=ಪುಷ್ಟವಾಗಿ+ಇರ್ದೊಡೇನು+ಇಲ್ಲದೊಡೆ+ಅದೇನು, ಶಿಷ್ಟಮಾದುದು=ಶಿಷ್ಟಂ+ಆದುದು, ಸತ್ತ್ವವದನು=ಸತ್ತ್ವವು ಅದನು, ಸತ್ತ್ವದೊಳಿರಲಿ=ಸತ್ತ್ವದೊಳು ಇರಲಿ, ಸೃಷ್ಟಿರೂಪಂಗಳ=ಸೃಷ್ಟಿಯ ವಿವಿಧ ರೂಪಗಳ, ಪುಷ್ಟವಾಗಿ=ಕ್ರಮಬದ್ಧವಾಗಿ, ಶಿಷ್ಟಂ=ಸಮರ್ಪಕವಾದ, ಸೋಕದು=ಮುಟ್ಟುವುದಿಲ್ಲ.

ಈ ಜಗತ್ತಿನ ಸೃಷ್ಟಿಯಲ್ಲಿ ಎಲ್ಲವೂ ಆ ಪರಮಾತ್ಮನ ಅವತಾರವೆಂದು ನಾವು ನಂಬಿದ್ದೇವೆ. ಆದರೆ ಇಡೀ ಸೃಷ್ಟಿಯಲ್ಲಿ ಒಂದು ಕ್ರಮವಿದ್ದರೆಷ್ಟು ಅಥವಾ ಇಲ್ಲದಿದ್ದರೆಷ್ಟು, ಹೊರ ರೂಪ ಶಿಷ್ಟವೋ ಅಲ್ಲವೋ, ಆದರೆ ಆಂತರ್ಯದಲ್ಲಿರುವ ಆ ಪರಮಾತ್ಮ ತತ್ವವು ಹೊರ ರೂಪಗಳಿಗೆ ಅತೀತವಾಗಿ ವಿಕಾರಗೊಳ್ಳುವುದಿಲ್ಲ. ಹಾಗಾಗಿ ನಾವು ನಮ್ಮ ದೃಷ್ಟಿಯನ್ನು ಆ ಪರತತ್ವದಲ್ಲಿ ಕೇಂದ್ರೀಕರಿಸಬೇಕು ಎನ್ನುವುದೇ ಈ ಮುಕ್ತಕದ ಹೂರಣ.

ಒಂದು ಮಹಾ ಶಕ್ತಿ ಕೋಟಿ ಕೋಟಿ ವರ್ಷಗಳ ಹಿಂದೆ ತನ್ನಿಚ್ಛೆಯಂತೆ ತನ್ನಿಂದಲೇ ಎಲ್ಲವನ್ನೂ ಆಗ ಮಾಡಿತು. ಅದನ್ನೇ ನಾವು ಪರಮಾತ್ಮ ಶಕ್ತಿಯಂದು ಕರೆಯುತ್ತೇವೆ. ಎರಡಾಗಿ ಪ್ರಕಟವಾಯ್ತು. ಒಂದು ಬಾಹ್ಯ ರೂಪ, ಎರಡು ಆಂತರ್ಯದ ಚೇತನ. ಬಾಹ್ಯರೂಪಗಳು ಕೋಟಿ ವಿಧ, ಆದರೆ ಆಂತರ್ಯದ ಚೇತನ ಒಂದೇ, ಪ್ರಾಣಿಗಳು, ಪಕ್ಷಿಗಳು,

ಕೀಟಗಳು, ಗಿಡಮರಗಳು, ಜಲಚರಗಳು ಹೀಗೆ ಎಷ್ಟೊಂದು ವಿಧ. ಆದರೆ ಅವೆಲ್ಲರ ಅಸ್ತಿತ್ವಕ್ಕೆ ಮತ್ತು ಜೀವನಕ್ಕೆ ಪೂರಕವಾದ ಶಕ್ತಿ ಒಂದೇ. ಅದಕ್ಕೆ ರೂಪವೇ ಇಲ್ಲ ಅಥವಾ ಎಲ್ಲ ರೂಪಗಳೂ ಅದೇ ಎಂದರೂ ಸರಿಯಾಗಬಹುದು.

"ಅಂದರಿಲೋ ಪುಟ್ಟಿ ಅಂದರಿಲೋ ಚೇರಿ ಅಂದರಿ ರೂಪಮುಲು ಅಟು ತಾನೈ" ಎಂದು ಅನ್ನಮಾಚಾರ್ಯರ ಹಾಡು. "ಎಲ್ಲರಲ್ಲೂ ಹುಟ್ಟಿ, ಎಲ್ಲರಲ್ಲೂ ಸೇರಿ, ಎಲ್ಲಾರ ರೂಪವೂ ತಾನೇ ಆಗಿ" ಎಂದು. ಎಲ್ಲಕ್ಕೂ ಬಲ ನೀಡುವವನು ಎಲ್ಲದರಲ್ಲೂ ವ್ಯಾಪಕವಾಗಿರುವವನೆ ಆ ಪರಮಾತ್ಮ ಎಂದು ಕನ್ನಡದ ಆದಿಕವಿ ಪುರಂದರದಾಸರು "ಸಕಲ ಬಲ ನೀನೆ ಸರಸಿಜಾಕ್ಷ' ಎಂದು ಹೇಳುತ್ತಾರೆ. ಹೊರ ರೂಪಗಳು ಒಂದೇ ಸಮನಾಗಿಲ್ಲದೆ, ಕೆಲವು





ಸುಂದರವಾಗಿ, ಕೆಲವು ಕುರೂಪವಾಗಿ, ಕೆಲವು ಅತೀ ಸೂಕ್ಷ್ಮವಾಗಿ, ಕೆಲವು ಬೃಹತ್ತಾಗಿ, ಹೀಗೆ ಸಾವಿರಾರು ವೈವಿಧ್ಯತೆಗಳನ್ನು ಹೊಂದಿದ್ದರೂ, ಶಿಷ್ಟವಲ್ಲದೆ ಇದ್ದರೂ ಆಂತರ್ಯದಲ್ಲಿರುವ ಚೇತನ ಶಿಷ್ಟವಾಗಿದೆ. ಅದು ಬಾಹ್ಯ ರೂಪದಂತೆ ಭೇದ ಹೊಂದುವುದಿಲ್ಲ.

ಈ ಜಗತ್ತಿನ ಎಲ್ಲ ಜೀವ ರಾಶಿಗಳ ರೂಪಗಳು ಬೇರೆ ಬೇರೆಯಾದರೂ, ಅವುಗಳು ಜನ್ಮ ತಳೆಯಲು, ಬೆಳೆಯಲು, ಜೀವಿಸಲು ಪೂರಕವಾದ ಶಕ್ತಿಯೇ ಆ ಪರಮಾತ್ಮ ಶಕ್ತಿ, ಅದಿಲ್ಲದಿದ್ದರೆ ಬೇರೆ ಯಾವುದೂ ಇಲ್ಲ. ನಾವು ನಮ್ಮ ಭೌತಿಕ ಕಣ್ಣುಗಳಿಗೆ ಕಾಣುವ ರೂಪಗಳಿಂದ ವಸ್ತುಗಳ ವೈವಿಧ್ಯತೆಯನ್ನು ನೋಡುತ್ತಿದ್ದೇವೆ, ಭೇದ ಮಾಡುತ್ತೇವೆ, ಪ್ರೀತಿಸುತ್ತೇವೆ, ದ್ವೇಷಿಸುತ್ತೇವೆ. ಅಂದರೆ ಈ ಪರಮಾತ್ಮನ ಸೃಷ್ಟಿಯಲ್ಲಿನ ಎಲ್ಲ ವಸ್ತುಗಳ ಪ್ರತಿ, ನಮಗಿರುವ ಭಾವಗಳೆಲ್ಲ, ಬಾಹ್ಯ ರೂಪ ಸಂಬಂಧಿಸಿದ್ದು, ಎಲ್ಲದರಲ್ಲೂ ಇರುವುದು ಒಂದೇ ಅಂತಃಶಕ್ತಿಯೆಂದು ನಾವು ಗುರುತಿಸುವುದೇ ಇಲ್ಲ.

ಹೇಗೆ ವಿದ್ಯುತ್ ಬಲ್ಬಗಳು, ಬೇರೆ ಬೇರೆ ಆಕಾರ, ಬಣ್ಣದಲ್ಲಿದ್ದರೂ ಪ್ರಕಾಶಿಸಲು ಒಂದೇ ವಿದ್ಯುತ್ತನ್ನು ಉಪಯೋಗಿಸಿಕೊಳ್ಳುತ್ತದೋ, ಹಾಗೆಯೇ ಎಲ್ಲ ಜೀವಿಗಳ ಜೀವನಕ್ಕೆ ಹೇತುವಾದ ಚೇತನವು ಒಂದೇ, ರೂಪಗಳು ಬೇರೆ ಬೇರೆಯಾದರೂ ಅವು ಶಾಶ್ವತವಲ್ಲ, ನಿತ್ಯವಲ್ಲ. ಈ ಜಗತ್ತಿನಲ್ಲಿ ಶಾಶ್ವತವಾಗಿರುವುದು ಕೇವಲ ಆ ಪರಮಾತ್ಮ

ಚೇತನ. ಅದನ್ನು ನಾವು ಗುರುತಿಸಬೇಕು ಎಂಬ ಭಾವವನ್ನು ನಮಗೆ ಬೋಧಿಸುವಂತೆ "ದೃಷ್ಟಿ ಸತ್ತ್ವದೊಳಿರಲಿ" ಎಂದು ಮಾನ್ಯ ಗುಂಡಪ್ಪನವರು ಅಪ್ಪಣೆ ಕೊಡಿಸಿದ್ದಾರೆ ಈ ಮುಕ್ತಕದಲ್ಲಿ, ಸತ್ಯವಾಗಿ ಒಳಗಿರುವುದೇ ಸತ್ತ್ವ ಅದೇ ಅಂತಸತ್ತ್ವ, ಅದನ್ನು ಭಾವಿಸಬೇಕು, ಕಾಣಬೇಕು ಮತ್ತು ಅನುಭವಿಸಬೇಕು. ಅದೇ ನಿಜವಾದ ಪೂಜೆ.

**ಮುಕ್ತಕ-115**

**ಕ್ರಮದ ನಭವಿಕೃತಿ ವಾಗ್ವಾದಿ ರೂಪಗಳಂತೆ |**
**ಕ್ರಿಮಿ ಬೀಜದಿಂ ಮತ್ಸ್ಯ ಮೃಗ ಮನುಜರಂತೆ ||**
**ಕ್ರಮ ವಿವರವೇನಿರಲಿ ಸೃಷ್ಟಿಯ ವಿಧಾನದಲಿ |**
**ಸಮಸದದು ಸತ್ತ್ವವನ್ನು ಮಂಕುತಿಮ್ಮ ||**

ವಾಲ್ವಾದಿ=ವಾಯು+ಆದಿ, ಸಮಸದದು=ಸಮಸದು+ಅದು.
ನಭ=ಆಕಾಶ, ಮತ್ಸ್ಯ=ಮೀನು, ಸಮಸದದು=ಸವೆಯುವುದಿಲ್ಲ.

ಪಂಚಭೂತಗಳಿಗೆ ಒಂದು ಕ್ರಮವಿದೆ. ಸೃಷ್ಟಿಗೆ ಒಂದು ಕ್ರಮವಿದೆ. ಅದು ಬದಲಾಗುವ ಕ್ರಮ. ಹೊಸ ಹೊಸ ಆವಿಷ್ಕೃತ ರೂಪಗಳಲ್ಲಿ ಅದು ಕಾಣುತ್ತಲೇ ಇರುತ್ತದೆ. ಆಕಾಶ, ಭೂಮಿ, ಗಾಳಿ, ನೀರು ಇವೆಲ್ಲವೂ ಅವುಗಳದೇ ಆದ ಕ್ರಮದಲ್ಲಿ ಇದ್ದರೂ, ಒಂದೇ ಕ್ರಮವಿಲ್ಲದಂತೆ ಕಾಣುವುದು. ಈ ಜಗತ್ತಿನಲ್ಲಿ ಹುಟ್ಟುವ ಕ್ರಿಮಿಗಳು, ಪ್ರಾಣಿ, ಪಕ್ಷಿ, ಜಲಚರಗಳಿಗೂ ಒಂದೊಂದು ಕ್ರಮವಿದೆ. ಆಕಾರವಿದೆ, ರೂಪಗಳಿವೆ. ಆ ರೂಪಗಳು ಕಾಲಾನುಕಾಲಕ್ಕೆ ಬದಲಾಗುತ್ತಲೇ ಇರುತ್ತವೆ. ಆದರೆ ಈ ಬದಲಾವಣೆಗಳಿಗೆ ಅತೀತವಾಗಿ ಇರುವುದೇ ಆ ಪರಮ ಚೇತನ, ಪರಮಾತ್ಮ ಶಕ್ತಿ ಅಥವಾ ಆತ್ಮವೆನ್ನುತ್ತಾರೆ ಮಾನ್ಯ ಗುಂಡಪ್ಪನವರು.





ಒಂದು ಪ್ರಾಣಿ ಒಂದು ತಾಯಿಯ ಗರ್ಭದಲ್ಲಿರುವಾಗ, ಸುಮಾರು 5ನೇ ತಿಂಗಳಿಗೆ ಆ ಭ್ರೂಣದೊಳಕ್ಕೆ ಪ್ರಾಣ ಪ್ರವೇಶವಾಗುತ್ತದೆ ಎಂದು ಹೇಳುತ್ತಾರೆ. ಆದರೆ ಜೀವಕಣಗಳಿಂದ ಆದ ಆ ಭ್ರೂಣದ ಪ್ರತಿ ಕಣ ಕಣಗಳಲ್ಲೂ ಕೇಂದ್ರ

ಬಿಂದುವೇ ಜೀವ, ಪ್ರತಿಕಣದಲ್ಲೂ ಜೀವ ವ್ಯಾಪಕವಾಗಿದೆ. ಹಾಗಾಗಿ ಜೀವಕ್ಕೆಲ್ಲಿ ವಾಸವೆಂದರೆ ಇಡೀ ದೇಹದಲ್ಲಿ. ಇದು ಸಕಲ ಪ್ರಾಣಿಗಳಿಗೂ ಅನ್ವಯ, ಪ್ರಾಣಿ, ಪಕ್ಷಿ, ಉರಗ, ಕೀಟ ಕ್ರಿಮಿ, ಜಲಚರ ಹೀಗೆ ಎಲ್ಲವೂ ಅನ್ವಯ. ದೇಹ ಚಿಕ್ಕದಾಗಿದ್ದರೂ ಅದೇ ಜೀವ, ಬೆಳೆದು ದೇಹ ದೊಡ್ಡದಾದ ಮೇಲೂ ಅದೇ ಜೀವ. ಏಕೆಂದರೆ ಜೀವಕ್ಕೆ ಆಕಾರವಿಲ್ಲ. ಅದು ನಿರಾಕಾರ, ದೇಹ ಬೆಳೆಯುತ್ತದ, ದೊಡ್ಡದಾಗುತ್ತದೆ, ಕುಗ್ಗುತ್ತದೆ, ಆದರೆ ಜೀವದ ಚೇತನದ ಸ್ವರೂಪ ಮಾತ್ರ ನಿಶ್ಚಲ.

ಎಂದು ಆ ರೂಪ ಅಥವಾ ದೇಹ, ಆ ಜೀವ ಅಥವಾ ಪ್ರಾಣ ಅಥವಾ ಚೇತನದ ವಾಸಕ್ಕೆ ಸೂಕ್ತವಲ್ಲವೋ ಅಂದು ಜೀವ ದೇಹದಿಂದ ದೂರಾಗುತ್ತದೆ, ತನ್ನ ರೂಪ ಬದಲಾಯಿಸಿಕೊಳ್ಳುತ್ತದೆ. ಹೀಗೆ ಎಷ್ಟೇ ರೂಪ ಬದಲಾವಣೆಯಾದರೂ, ಜೀವ ಬೇರೆ ಬೇರೆ ದೇಹಗಳನ್ನು ಬದಲಾಯಿಸಿಕೊಂಡು ತನ್ನನ್ನು ತಾನು ರೂಪಾಂತರಿಸಿಕೊಂಡರೂ ಜೀವದಲ್ಲಿ ಯಾವ ಬದಲಾವಣೆಯೂ ಇರುವುದಿಲ್ಲ. ಇದನ್ನೇ ಮಾನ್ಯ ಗುಂಡಪ್ಪನವರು "ಸಮಸದದು ಸತ್ವವನು" ಎಂದರೆ "ಸವೆಯದು ಆ ಸತ್ಯವಾದ ಸತ್ವ' ಎನ್ನುತ್ತಾರೆ ಶ್ರೀ ಡಿ.ವಿ.ಜಿ.

ಹಾಗಾಗಿ ವಾಚಕರೆ ನಮ್ಮಲ್ಲಿರುವ ಚೇತನವೆ ಸತ್ಯ ಮತ್ತು ನಿತ್ಯ. ಅದು ಬದಲಾಗುವುದಿಲ್ಲ. ಅದೇ ನಾವು. ರೂಪಾಂತರಗೊಳ್ಳುವ ಈ ದೇಹವು ನಾವಲ್ಲ. ಇದನ್ನು ಅರಿತುಕೊಂಡರೆ ನಮಗೆ ನಮ್ಮ ಪರಿಚಯವಾಗುತ್ತದೆ. ಅದಾಗಿ ಬಿಟ್ಟರೆ ನಾವು ನಮ್ಮ ಎಲ್ಲ ಮಾನಸಿಕ, ಬೌದ್ಧಿಕ ವಿಕಾರಗಳಿಂದ ಮುಕ್ತರಾಗಬಹುದು. ಆತ್ಮನನ್ನು ಅರಿಯುವ ಪ್ರಯತ್ನವನ್ನು ನಾವೂ ಸಹ ಮಾಡೋಣ.

**ಮುಕ್ತಕ-116** **ಪರಮಾಣುವಿಂ ಪ್ರಪಂಚಗಳ ಸಂಯೋಜಿಪುದು |**
**ಮರೆಯಿಂದ ಸೃಷ್ಟಿಯಂತ್ರವ ಚಾಲಿಪುದು ||**
**ಚರಲೀಲೆಯಲಿ ಜೀವವೆನಿಪ ಚೈತನ್ಯವದು |**
**ಪರಸತ್ವಶಕ್ತಿಯೆಲೊ-ಮಂಕುತಿಮ್ಮ ||**

ಪರಮಾಣುವಿಂ=ಪರಮ ಅಣುವಿನಿಂದ, ಸಂಯೋಜಿಪುದು=ಒಂದು ಸೂತ್ರದಲ್ಲಿ ಪೋಣಿಸುವುದು, ಚಾಲಿಪುದು=ಚಲನೆ ಕೊಡುತ್ತದೆ, ಚರಲೀಲೆಯಲಿ=ನಿರಂತರ ಬದಲಾಗುವ ಜಗತ್ತಿನ ಲೀಲೆಯಲಿ, ಜೀವವೆನಿಪ ಚೈತನ್ಯವದು=ಜಗತ್ತಿನಲ್ಲಿ ಜೀವವೆಂದು ಕರೆಯಲ್ಪಡುವ ಚೈತನ್ಯವದು. ಪರಸತ್ವಶಕ್ತಿಯೆಲೊ=ಆ ಶಕ್ತಿಯೇ ಪರಸತ್ವ ಎಲೋ!

ಇಡೀ ಜಗತ್ತಿನ ಪರಮಾಣುಗಳನ್ನು ಪೋಣಿಸುವ ಕ್ರಿಯೆಯಿಂದ ಈ ಜಗತ್ತಿನ ಎಲ್ಲವನ್ನೂ ಒಂದು ಸೂತ್ರದಲ್ಲಿ ಇರುವಂತೆ ಸೃಷ್ಟಿಸಿ, ಇದನ್ನು ನಡೆಸಲು ಒಂದು ಕ್ರಮವನ್ನು ಉಂಟುಮಾಡಿ, ಅದರ ಚಲನೆಗೆ ತಾನೇ ಕಾರಣವಾಗಿ, ಈ ಜಗತ್ತಿನ ಲೀಲಾವಿನೋದವನ್ನು ನಡೆಸುವ ಜೀವವೆಂದು ಹೆಸರು ಪಡೆದ ಅದೇ "ಚೈತನ್ಯ". ಆ ಚೈತನ್ಯವೇ, ಪರಮಾತ್ಮ, ಪರಮ ಶಕ್ತಿ ಮತ್ತು ಪರ ಸತ್ವ ಎನ್ನುತ್ತಾರೆ ಮಾನ್ಯ ಡಿ ವಿ.ಜಿ.ಯವರು ಈ ಮುಕ್ತಕದಲ್ಲಿ.





ಒಂದು ಪ್ರಾಣಿಯ (ಮನುಷ್ಯನನ್ನೂ ಸೇರಿದಂತೆ) ದೇಹವನ್ನು ಉದಾಹರಣೆಗೆ ತೆಗೆದುಕೊಳ್ಳೋಣ. ನಮ್ಮ ದೇಹದ ಎಲ್ಲ ಭಾಗಗಳೂ ಜೀವಕಣಗಳಿಂದ ಆಗಮಾಡಲ್ಪಟ್ಟಿದೆ. ಅದು ಚರ್ಮ, ಮಾಂಸ ಖಂಡ, ನರ, ರಕ್ತ, ಮೂಳೆ ಯಾವುದೇ ಆಗಿರಬಹುದು. ಅವೆಲ್ಲವೂ ಜೀವಕಣಗಳಿಂದಲೇ ಆಗಿವೆ ಅಲ್ಲವೇ? ಜೋಡಣೆಯಲ್ಲಿ ವ್ಯತ್ಯಾಸವಾದಾಗ ಅದು ಬೇರೆ ಬೇರೆ ಅಂಗಗಳಾಗುತ್ತವೆ ಮತ್ತು ಅವುಗಳ ಜೋಡಣೆಗೆ ಅನುಗುಣವಾಗಿ ಬೇರೆ ಬೇರೆ ಕೆಲಸವನ್ನು ಮಾಡುತ್ತವೆ. ಈ ಕಣವನ್ನು "ಸೆಲ್" ಎನ್ನುತ್ತಾರೆ. ಈ "ಸೆಲ್" ನಲ್ಲಿ ಒಂದು ಜೀವಸೆಲೆ ವ್ಯಾಪಿಸಿಕೊಂಡು ಅದನ್ನು ಜೀವಕಣವೆನ್ನಿಸುತ್ತದೆ. ನಮ್ಮ ಶರೀರದಲ್ಲಿ ನಾವು ಸೇವಿಸುವ ಆಹಾರದಿಂದ ಲಕ್ಷಾಂತರ ಜೀವಕಣಗಳು ಉತ್ಪತ್ತಿಯಾಗುತ್ತದಂತೆ ಮತ್ತು ನಾವು ಮಾಡುವ ಕೆಲಸದಿಂದ ಲಕ್ಷಾಂತರ ಜೀವಕಣಗಳು ನಾಶವಾಗುತ್ತವಂತೆ. ಒಂದೊಂದು ಅಣುವಿನ ನಾಶಕ್ಕೂ ಮತ್ತೆ ಸೃಷ್ಟಿಗೂ ಕಾರಣವಾದ 'ಇಂಧನ 'ಆ ಜೀವ ಸೆಲೆ. ಅದನ್ನೇ ಜೀವವೆನ್ನುತ್ತಾರೆ. ಆ ಜೀವ ಸೆಲೆಯೇ ಪರಮಾತ್ಮ ಶಕ್ತಿಯ ಅಥವಾ ಪರಮ ಚೇತನದ ಒಂದು ಅಂಶ. ಅದರ ಕೆಲಸದಿಂದಲೇ ಈ ಜೀವನದ, ಜಗತ್ತಿನ ಲೀಲಾವಿನೋದ ನಡೆಯುತ್ತದೆ. ಇದನ್ನೇ ಆ ಪರಮಾತ್ಮನ ಲೀಲಾವಿನೋದವೆನ್ನುಬಹುದು.

ಜಗತ್ತಿನ ಎಲ್ಲವೂ ಕಣಗಳಿಂದಲೇ ಆಗಿದೆ. ಗಾಳಿ, ನೀರು, ಆಕಾಶ, ಭೂಮಿ, ಗಿಡ, ಮರ, ಪ್ರಾಣಿ, ಪಕ್ಷಿ, ಕೀಟ ಎಲ್ಲವೂ, ಆ ಕಣದಲ್ಲಿ ಜೀವ ಅಥವಾ ಚೇತನ ಸಂಚಾರವಾದಾಗ ಅದು ಜೀವ ಕಣವಾಗುತ್ತದೆ. ಜೀವಿಗಳ ಕೋಟ್ಯಾಂತರ ರೂಪಗಳಿಗೆ ಕಾರಣವಾಗುತ್ತದೆ. ಕಣ್ಣಿಗೆ ಕಾಣದಿದ್ದರೂ ಎಲ್ಲಕ್ಕೂ ಚಾಲನೆಯನ್ನು ನೀಡುವ ಆ ಚೇತನವೇ ಜೀವ. ಇದನ್ನೇ ನಮ್ಮ ಗುಂಡಪ್ಪನವರು "ಮರೆಯಿಂದ ಸೃಷ್ಟಿಯಂತ್ರವ ಚಾಲಿಪುದು" ಎಂದರು.

ವಾಚಕರೆ, ಎಲ್ಲ ಜೀವಿಗಳಿಗೂ ಒಂದು ರೂಪ. ಪ್ರತೀರೂಪಕ್ಕೂ ಆ ಜೀವಕಣಗಳ ಜೋಡಣೆಯ ವಿನ್ಯಾಸ ಬೇರೆ ಬೇರೆ. ವಿನ್ಯಾಸ ಬೇರೆಯಾದಾಗ ಅದಕ್ಕೆ ಬೇರೆಯೇ ಹೆಸರು. ಮನುಷ್ಯ, ಕೋತಿ, ಆನೆ, ಹಾವು, ಹದ್ದು ಇತ್ಯಾದಿ. ಮೂಲದಲ್ಲಿ ಎಲ್ಲವೂ ಚೈತನ್ಯದಿಂದ ಕಾರ್ಯ ಪ್ರವೃತ್ತವಾದ ಜೀವಕಣಗಳ ಸಮಷ್ಟಿ ರೂಪ. ಆನೆಯಾದರೂ ಅಷ್ಟೇ, ಇರುವೆಯಾದರೂ ಅಷ್ಟೇ. ಹಾಗಾಗಿ ನಾವು ನೋಡುವುದೇನು ಆ ಜೀವಕಣಗಳ ಜೋಡಣೆಯನ್ನು, ಕಾಣಲಾಗದ್ದು ಏನೆಂದರೆ, ಹೀಗೆ ಜೋಡಿಸಲ್ಪಟ್ಟ ಕಣಗಳ ಗುಂಪಿಗೆ ಚಾಲನೆಯನ್ನು ನೀಡುವ ಚೈತನ್ಯವನ್ನು, ಈ ಕಣಗಳ ಜೋಡಣೆ ಮತ್ತು ಅವುಗಳನ್ನು ಚಾಲಿಸುವ ಚೈತನ್ಯದ ನಡುವಿನಲ್ಲಿ "ನಾನು" ಎಂಬುದು ಎಲ್ಲಿದೆ ಎಂದು ಹುಡುಕಿದರೆ ನಮಗೆ ನಿರಾಸೆ ಕಟ್ಟಿಟ್ಟ ಬುತ್ತಿ.

ನಾವು ರೂಪ ಭೇದವನ್ನು ಕಾಣದೆ, ರೂಪವೇ ಇಲ್ಲದ, ಆಕಾರವೇ ಇಲ್ಲದ, ಆ ರೂಪಕ್ಕೆ ಚೈತನ್ಯದ ಹೇತುವಾದ ಎಲ್ಲ ಪ್ರಾಣಿಗಳಲ್ಲೂ ಸಮಾನವಾಗಿರುವ ಆ ಚೈತನ್ಯದ ಬೃಹತ್ ರೂಪವನ್ನು ಕಾಣಲಾದರೆ, ನಾವು ಆಂತರಿಕವಾಗಿ ಬೆಳೆದಂತೆ ಅಲ್ಲವೇ? ಅಂತಹ ಬೆಳವಣಿಗೆಯ ಪ್ರಯತ್ನವನ್ನು ನಾವೂ ಮಾಡೋಣವೆ?





**ಮುಕ್ತಕ-117**

**ಸ್ಥಾಪಿತವೆ ಜೀವ ನಿನ್ನೊಡಲಿನೊಂದಂಗದಲಿ? ।**
**ಆಪಾದಶಿರವುಮದು ತುಂಬಿರುವುದಲ್ತೆ ॥**
**ವ್ಯಾಪಿಸಿಹುದಂತೊಂದು ಚೈತನ್ಯ ವಿಶ್ವದಲಿ ।**
**ಲೇಪಗೊಳ್ಳದ ಸತ್ವ-ಮಂಕುತಿಮ್ಮ ॥**

ನಿನ್ನೊಡಲಿನೊಂದಂಗದಲಿ=ನಿನ್ನ+ಒಡಲಿನ+ಒಂದು+ಅಂಗದಲ್ಲಿ,
ಆಪಾದಶಿರವುಮದು=ಆಪಾದ+ಶಿರವುಂ+ಅದು, ತುಂಬಿರುವುದಲ್ತೆ=ತುಂಬಿರುವುದು+ಅಳತೆ,
ವ್ಯಾಪಿಸಿಹುದಂತೊಂದು=ವ್ಯಾಪಿಸಿಹುದು+ಅಂತಹ+ಒಂದು.

ಆಪಾದಶಿರವುಮದು=ಕಾಲ ತುದಿಯಿಂದ ನೆತ್ತಿಯವರೆಗೆ, ಲೇಪಗೊಳ್ಳದ ಅಂಟಿಕೊಳ್ಳದ

ವ್ಯಾಪಿಸಿಹುದು=ಹರಡಿಕೊಂಡಿದೆ.

ಆ ಜೀವವೆನ್ನುವ ಚೈತನ್ಯ ಕೇವಲ ನಿನ್ನ ಯಾವುದೋ ಒಂದು ಅಂಗದಲ್ಲಿ ತುಂಬಿದೆ ಎಂದು ಕೊಂಡಿದ್ದೀಯಾ? ಅದು ನಿನ್ನ ಅಡಿಯಿಂದ ಮುಡಿಯವರೆಗೆ ಅಂದರೆ ಪಾದದಿಂದ ಶಿರದವರೆಗೆ, ಇಡೀ ದೇಹವನ್ನು ವ್ಯಾಪಿಸಿಕೊಂಡಿದೆ. ಹೇಗೆ ಅದು ನಮ್ಮ ದೇಹದಲ್ಲಿ ವ್ಯಾಪಕವಾಗಿದೆಯೋ ಹಾಗೆಯೇ, ಇಡೀ ವಿಶ್ವದಲ್ಲಿ ಒಂದು ಅಂಗುಲವೂ ಬಿಡದೆ ಎಲ್ಲೆಡೆ ವ್ಯಾಪಿಸಿಕೊಂಡಿದೆ. ಹಾಗೆ ವ್ಯಾಪಿಸಿಕೊಂಡಿದ್ದರೂ, ಎಲ್ಲೂ ಯಾವುದಕ್ಕೂ ಅಂಟದೆ ಇರುವುದೇ ಆ ಚೈತನ್ಯದ ಗುಣ ಎಂದು ಪ್ರಸ್ತಾಪಿಸುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಆ ಬೃಹಚ್ಚೇತನದ ಒಂದು ಅಂಶವಾದ ನಮ್ಮೊಳಗಿರುವ ಚೇತನ ಯಾವುದೋ ಒಂದು ಅಂಗದಲ್ಲಿರದೆ, ಎಲ್ಲ ಅಂಗಗಳಿಗೂ ಏನು, ಇಡೀ ದೇಹಕ್ಕೆ ಇಂಬು ಕೊಡುವ ಅದು ದೇಹದಲ್ಲೆಲ್ಲ ಒಂದು ಅಂಗುಲವೂ ಬಿಡದೆ, ಸಮಾನವಾಗಿ ವ್ಯಾಪಿಸಿಕೊಂಡಿದೆ. ಅಷ್ಟೇ ಅಲ್ಲ ಒಳಗಿರುವ ಆ ಚೈತನ್ಯವೇ ಜಗತ್ತೆಲ್ಲ ವ್ಯಾಪಿಸಿಕೊಂಡಿದೆ ಎನ್ನುವುದು ಪರಮ ಸತ್ಯ. ಜಗತ್ತಿನ ಜಡ ಚರ ಎಲ್ಲ ವಸ್ತುಗಳಲ್ಲೂ, ಕೆಲವು ಕಡೆ ಸುಪ್ತವಾಗಿ ಕೆಲವು ಕಡೆ ಸಕ್ರಿಯವಾಗಿ ಇರುವ ಚೈತನ್ಯವೇ ಆ ಪರಮ ಪುರುಷನ ಶಕ್ತಿ. ಏಕೆಂದರೆ ಆ ಪರಮ ಚೈತನ್ಯವೇ ತನ್ನದೇ ಶಕ್ತಿಯಿಂದ ತಾನೇ ಬೇರೆ ರೂಪದಲ್ಲಿ ಪ್ರಕಟಗೊಂಡು ಆ ರೂಪಗಳ ಸಕ್ರಿಯತೆಗೆ ತಾನೇ ಕಾರಣವಾಗಿರುವಾಗ, ಅದು ಇಲ್ಲದ ಸ್ಥಳವಿರಲು ಸಾಧ್ಯವೇ? ಇದನ್ನೇ ಮಾನ್ಯ ಡಿ.ವಿ.ಜಿ.ಯವರು "ವ್ಯಾಪಿಸಿಹುದಂತೊಂದು ಚೈತನ್ಯ ವಿಶ್ವದಲಿ" ಎನ್ನುತ್ತಾರೆ.

ಆದರೆ ಆ ಚೈತನ್ಯದ ಸ್ವರೂಪವೇನೆಂದು ಯಾರೂ ಅರಿಯರು. ಎಲ್ಲ ರೂಪಗಳೂ ಅದೇ ಆಗಿರುವಾಗ, ಯಾವುದೇ ಒಂದು ರೂಪಕ್ಕೆ ಅದನ್ನು ಸೀಮಿತಗೊಳಿಸಲಾಗುವುದಿಲ್ಲ, ಅಲ್ಲವೇ? ಎಲ್ಲವನ್ನೂ ಮಾಡಿ ಎಲ್ಲದರೊಳಗೂ ಇದ್ದು ಎಲ್ಲವನ್ನೂ ಸಕ್ರಿಯವಾಗಿ ಇಡಲು ಪೂರಕವಾದ ಈ ಚೈತನ್ಯ ಯಾವುದಕ್ಕೂ ಅಂಟದೆ, ಇದ್ದೂ ಇಲ್ಲದ ಹಾಗೆ, ಅಂಟಿಯೂ ಅಂಟದ ಹಾಗೆ, ಕಂಡೂ ಕಾಣದ ಹಾಗೆ ಇದೆ. ನಾವು ಎಲ್ಲದರಲ್ಲೂ ಇರುವ ಆ ಮಹಾ ಚೈತನ್ಯಕ್ಕೆ ನಮಿಸೋಣ, ಅದನ್ನು ಭಾವಿಸೋಣ. ಈ ಸೃಷ್ಟಿಯ ಎಲ್ಲದರಲ್ಲೂ ಆ ಚೈತನ್ಯವೇ ಇದೆಯೆಂಬ ಭಾವವನ್ನು ನಮ್ಮ ನಮ್ಮ ಮನಗಳಲ್ಲಿ ಗಟ್ಟಿಯಾದ ನಂಬಿಕೆಯಿಂದ, ಎಲ್ಲವನ್ನೂ ಆ ಪರಮಾತ್ಮನ ಪ್ರತಿರೂಪವೆಂದು ಗೌರವಿಸುವ ಮನಸ್ಸು ನಮಗೆ ಆ ಪರಮಾತ್ಮ ಕರುಣಿಸಲಿ ಅಲ್ಲವೇ?

**ಮುಕ್ತಕ-118** **ರವಿಮಾತ್ರದಿಂದಲ್ಲ ಭುವಿಮಾತ್ರದಿಂದಲ್ಲ ।**
**ಭುವನಪೋಷಣೆಯುಭಯ ಸಹಕಾರದಿಂದ ॥**
**ವಿವಿಧಶಕ್ತಿರಸಂಗಳೇಕೀಭವಿಸೆ ಜೀವ ।**
**ಅವಿತರ್ಕ್ಯ ಸೂಕ್ಷ್ಮವದು-ಮಂಕುತಿಮ್ಮ ॥**

ರವಿಮಾತ್ರದಿಂದಲ್ಲ=ರವಿ+ಮಾತ್ರದಿಂದ+ಅಲ್ಲ, ಭುವಿಮಾತ್ರದಿಂದಲ್ಲ=ಭುವಿ+ಮಾತ್ರದಿಂದ+ಅಲ್ಲ, ಭುವನಪೋಷಣೆಯುಭಯ-ಭುವನ+ಪೋಷಣೆಯು+ಉಭಯ, ವಿವಿಧಶಕ್ತಿರಸಂಗಳೇಕೀಭವಿಸೆ=ವಿವಿಧ+ಶಕ್ತಿ+ರಸಂಗಳು+ಏಕೀಭವಿಸೆ. ಅವಿತರ್ಕ್ಯ=ಅ+ವಿತರ್ಕ್ಯ, ಸೂಕ್ಷ್ಮವದು=ಸೂಕ್ಷ್ಮವು ಅದು, ಭುವನಪೋಷಣೆ=ಈ ಭುವಿಯ ಪೋಷಣೆ, ಉಭಯ=ಎರಡು, ಏಕೀಭವಿಸೆ=ಸೇರಿದರೆ, ಅವಿತರ್ಕ್ಯ=ತರ್ಕಮಾಡಲಾಗದ್ದು.

ಕೇವಲ ಸೂರ್ಯನಿಂದಾಗಲೀ ಅಥವಾ ಪೃಥ್ವಿಯಿಂದಾಗಲೀ ಈ ಭೂಮಿಯು ಅಸ್ತಿತ್ವದಲ್ಲಿಲ್ಲ. ಈ ಭೂಮಿಯ ಅಸ್ತಿತ್ವಕ್ಕೆ ಎರಡರ ಸಹಕಾರವೂ ಬೇಕು. ಅಷ್ಟೇ ಅಲ್ಲ ಇವೆರಡರ ಸಹಕಾರದಿಂದ ಈ ಭೂಮಿಯ ಮೇಲ್ಮೈಯಲ್ಲಿ ಮತ್ತು ಆಂತರ್ಯದಲ್ಲಿ ಉತ್ಪತ್ತಿಯಾಗುವ ಹಲವಾರು ಜೀವರಸಗಳ ಸಮ್ಮಿಲನದಿಂದ ಇಲ್ಲಿ ಜೀವಿಗಳ ಜೀವಿಕೆ ಸಾಧ್ಯ. ಆದರೆ ಇದು ಏಕೆ ಹೀಗೆ? ಹಾಗೆ ಯಾಕಿರಬಾರದು? ಇದು ಹೀಗೇ ಏಕಾಗುತ್ತದೆ ಎನ್ನುವಂತಾ ತರ್ಕ ಕುತರ್ಕಗಳಿಗೆ ಸಿಗದ ಸೂಕ್ಷ್ಮ ವಿಚಾರವಿದು ಎನ್ನುತ್ತಾರೆ ಮಾನ್ಯ ಗುಂಡಪ್ಪನವರು.

ಪರಮಾತ್ಮನಿಂದಾದ ಈ ಜಗತ್ತಿನಲ್ಲಿ ಸೃಷ್ಟಿಸಲ್ಪಟ್ಟ ಕೋಟಿ ಕೋಟಿ ಕಾಯಗಳಲ್ಲಿ ಈ ಭೂಮಿ ಒಂದು ಸಣ್ಣ ಕಾಯ. ನಾವು ಇದರ ಮೇಲೆ ಜೀವಿಸಿದ್ದೇವೆ. ಹಾಗಾಗಿ ನಮಗಿದು ಪರಿಚಿತ. ಅನ್ಯ ಆಕಾಶ ಕಾಯಗಳ ವಿಚಾರ ನಮ್ಮ ಅರಿವಿನ ಪರಿಧಿಯಿಂದ ದೂರ ಅಲ್ಲವೇ? ಹಾಗಾಗಿ ನಾವು ಕೇವಲ ಈ ಭೂಮಿಗೆ ಸಂಬಂಧಿಸಿದ ವಿಚಾರಗಳನ್ನು ನೋಡುವ. ಮೂರು ಭಾಗ ನೀರು ಒಂದು ಭಾಗ ಭೂಮಿ, ಮೇಲೆ ಆಕಾಶ ಬೀಸುವ ಗಾಳಿ ನೆತ್ತಿಯ ಮೇಲೆ ಸೂರ್ಯ ಮತ್ತು ಅನ್ಯ ಗ್ರಹಗಳು, ಚಂದ್ರ, ಇವೆಲ್ಲ ನಮಗೆ ಕಾಣುತ್ತದೆ. ಸೂರ್ಯನಿಂದ ಬೆಳಕು ಮತ್ತು ಶಾಖ, ಬೆಳಕು ಕಾಣುತ್ತದೆ, ಶಾಖವನ್ನು ಅನುಭವಿಸಬಹುದು. ಆದರೆ ಆ ಸೂರ್ಯನಿಂದ ಭೂಮಿಗೆ ಈ ಬಿಸಿಲು ಮತ್ತು ಶಾಖದ ಜೊತೆಗೆ ಹರಿದು

ಬರುವ ಜೀವರಸಗಳ ಪ್ರವಾಹವನ್ನು ನಾವು ಕಾಣಲೂ ಆಗುವುದಿಲ್ಲ, ಅನುಭವಿಸಲೂ ಆಗುವುದಿಲ್ಲ. ಆದರೂ ನಾವೆಲ್ಲಾ ಅದರ ಪ್ರಭಾವಕ್ಕೊಳಗಾಗುತ್ತೇವೆ ಅಲ್ಲವೇ?

ಹಾಗೆಯೇ ಈ ಭೂಮಿಯು ಆ ಸೂರ್ಯನಿಂದ ಬೆಳಕು ಮತ್ತು ಶಾಖದೊಂದಿಗೆ ಹರಿದುಬರುವ ಹಲವಾರು ಜೀವರಸಗಳನ್ನು ತನ್ನ ಗರ್ಭದೊಳಕ್ಕೆ ಭಟ್ಟಿ ಇಳಿಸಿಕೊಂಡು ತನ್ನ ಸತ್ವವನ್ನೂ ಅದಕ್ಕೆ ಮಿಶ್ರಣ ಮಾಡಿ ಜೀವಿಗಳಿಗೆ, ಗಿಡ ಮರಗಳಿಗೆ ಅವುಗಳ ಬೇರುಗಳ ಮೂಲಕ ತುಂಬಿ ಇಡೀ ಭೂಮಿಯ ಮೇಲಿನ ಸಕಲ ಚರಾಚರ ಜೀವಿಗಳಿಗೆ ಆಹಾರವನ್ನು ಒದಗಿಸಿ, "ಅನ್ನಪೂರ್ಣೆ" ಎನ್ನುವ ಹೆಸರನ್ನು ಪಡೆದಿದೆ. ಅದನ್ನೇ ಮಾನ್ಯ ಗುಂಡಪ್ಪನವರು "ಉಭಯರ ಸಹಕಾರದಿಂದ" ಎನ್ನುತ್ತಾರೆ.

ಅಷ್ಟೇ ಅಲ್ಲ.ಬೀಸುವ ಗಾಳಿ, ಸುರಿಯುವ ಮಳೆ, ಇವೆಲ್ಲವನ್ನೂ ಒಂದಕ್ಕೊಂದು ಸಹಕರಿಸುವಂತೆ ಮಾಡುವ ಆ ಪರಮ ಚೇತನ, ಎಲ್ಲವೂ ಈ ಇಳೆಯ ಜೀವರಾಶಿಗಳ ಅಸ್ತಿತ್ವಕ್ಕೆ ಸಹಕಾರಿಗಳಾಗಿಯೇ ಇವೆ. ಆದರೆ ಆ





ಸೂರ್ಯ, ಈ ಭೂಮಿ, ಆ ಗಾಳಿ, ಸೂರ್ಯನ ಬೆಳಕು ಮತ್ತು ಶಾಖ ಮತ್ತು ಆ ಪರತತ್ವ, ಯಾವ ಕ್ರಮದಲ್ಲಿ ಕೆಲಸ ಮಾಡುತ್ತವೆ, ಅವುಗಳ ಕಾರ್ಯದಿಂದ ಪರಿಣಾಮಗಳು ಹೇಗೆ ಆಗುತ್ತವೆ ಎನ್ನುವುದು ಬಹಳ ಸೂಕ್ಷ್ಮ ವಿಚಾರ ಮತ್ತು ನಮ್ಮಂತಹ ಸಾಮಾನ್ಯರಿಗೆ ಅರ್ಥವಾಗುವುದೇ ಇಲ್ಲ. ಈ ಜಗತ್ತಿನಲ್ಲಿ ನಾವು ಜನಿಸಿದ್ದೇವಾದ್ದರಿಂದ ಕೇವಲ ಇವೆಲ್ಲವನ್ನೂ ನೋಡುತ್ತಾ, ಆನಂದಿಸುತ್ತಾ, ಅನುಭವಿಸಬೇಕಷ್ಟೇ. ಇವುಗಳನ್ನು ವಿಶ್ಲೇಷಣೆ ಮಾಡಿ ತರ್ಕ-ಕುತರ್ಕಗಳಿಂದ ಅತಿ ಬುದ್ಧಿವಂತಿಕೆಯನ್ನು ತೋರುವುದು ಸರಿಯಲ್ಲ.

ಆ ಪರಮಾತ್ಮನ ಕೃಪೆಯಿಂದ, ಇವೆಲ್ಲವೂ ಆಗಿವೆ. ಆ ಪರಮ ಶಕ್ತಿಯ ನಿರ್ದೇಶನದಂತೆ ಅವೆಲ್ಲವೂ ತಮ್ಮ ತಮ್ಮ ಕಾರ್ಯಗಳನ್ನು ಮಾಡುತ್ತಿವೆ. ವಾಚಕರೆ, ಅವುಗಳು ಸಮರ್ಪಕವಾಗಿ ಕೆಲಸ ಮಾಡುತ್ತಿರುವುದರಿಂದ, ನಮ್ಮ ಜೀವನ ಸುಗಮವಾಗಿ ಸಾಗುತ್ತಿದೆ ಎಂದು ಅರ್ಥಮಾಡಿಕೊಂಡು, ಸುಭಾವದಿಂದ ಒಪ್ಪಿಕೊಂಡು, ಅದಕ್ಕೆ ಕೃತಜ್ಞತೆಯನ್ನು

ಸಲ್ಲಿಸುತ್ತಾ, ಈ ಭುವಿಯಲ್ಲಿ ಕುತರ್ಕ-ಕುಭಾವಗಳಿಲ್ಲದೆ ಸಂತೋಷ ಮತ್ತು ಆನಂದದಿಂದ ಬಾಳಬೇಕು ಅಲ್ಲವೇ? ಅಂತಹ ಪ್ರಯತ್ನವನ್ನು ನಾವೂ ಸಹ ಮಾಡೋಣವೆ?

## ಭೂವ್ಯೋಮ್ ಯಂತ್ರ 119-121

**ಮುಕ್ತಕ-119**

**ನಾವುಣ್ಣುವನ್ನಗಳು ನಾವು ಕುಡಿವುದಕಗಳು |**
**ನಾವುಸಿರುವೆಲರುಗಳು ನಾವುಡುವ ವಸ್ತ್ರ ||**
**ಭೂವ್ಯೋಮಗಳ ಯಂತ್ರಸಂಘದುತ್ಪನ್ನಗಳು |**
**ಜೀವವಿವೆರಡರ ಶಿಶುವು-ಮಂಕುತಿಮ್ಮ ||**

ನಾವುಣ್ಣುವನ್ನಗಳು=ನಾವು+ಉಣ್ಣುವ+ಅನ್ನಗಳು, ಕುಡಿವುದಕಗಳು=ಕುಡಿವ+ಉದಕಗಳು,
ನಾವುಸಿರುವೆಲರುಗಳು=ನಾವು+ಉಸಿರುವ+ಎಲರುಗಳು, ನಾವುಡುವ=ನಾವು+ಉಡುವ,
ಭೂವ್ಯೋಮಗಳ=ಭೂ+ವ್ಯೋಮಗಳು, ಯಂತ್ರಸಂಘದುತ್ಪನ್ನಗಳು=ಯಂತ್ರ+ಸಂಘದ+ಉತ್ಪನ್ನಗಳು,
ಜೀವವಿವೆರಡರ=ಜೀವವು+ಇವೆರಡರ.
ಉದಕ=ನೀರು, ಎಲರು=ಗಾಳಿ

ನಾವು ತಿನ್ನುವ ಅನ್ನ, ಕುಡಿಯುವ ನೀರು, ಉಸಿರಾಡುವ ಗಾಳಿ, ಉಡುವ ಬಟ್ಟೆ ಎಲ್ಲವೂ ಆಕಾಶ ಮತ್ತು ಭೂಮಿಯ ಪರಸ್ಪರ ಸಮ್ಮಿಲನದಿಂದ ತಯಾರಿಸಲ್ಪಡುವ ಉತ್ಪನ್ನಗಳು. ನಮ್ಮಲ್ಲಿ ಇರುವ ಚೇತನವೂ ಸಹ ಈ ಭೂಮಿ ಮತ್ತು ಆಕಾಶಗಳ ಶಿಶುವೇ ಎನ್ನುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಭೂಮಿಯ ಮೇಲಿನ ಸಮುದ್ರದ ನೀರು ಸೂರ್ಯನ ಶಾಖಕ್ಕೆ ಆವಿಯಾಗಿ, ಮೋಡವಾಗಿ, ಈ ಭೂಮಿಯ ಮೇಲಿನ ಅನೇಕ ಜೀವರಸಗಳನ್ನೂ ಹೀರಿ ಅದನ್ನು ಮತ್ತೆ ಮಳೆಯ ಜೊತೆಗೆ ಈ ಭೂಮಿಗೆ ಸುರಿಸಿ, ಇಲ್ಲಿ ಜೀವಿಗಳಿಗೆ ಎಲ್ಲ ಅವಶ್ಯಕ ವಸ್ತುಗಳನ್ನೂ ಒದಗಿಸಿದೆ. ಈ ಭೂಮಿ ಮತ್ತು ಸೂರ್ಯನ ಪರಸ್ಪರ ಸಂಬಂಧ ಅತೀ ಅಮೋಘವಲ್ಲವೇ ವಾಚಕರೆ. ಅತೀ ಸೂಕ್ಷ್ಮವಾದ ಪ್ರಕ್ರಿಯೆ ಇದು.

ನಾವು ತಿನ್ನುವ ಆಹಾರದ ವೈವಿಧ್ಯತೆಯನ್ನು ನೋಡಿ. ಎಷ್ಟೊಂದು ವಿಧದ ಕಾಳುಗಳು, ಧಾನ್ಯಗಳು, ಸೊಪ್ಪುಗಳು, ಕಾಯಿಪಲ್ಲೆಗಳು, ಹಣ್ಣುಗಳು, ಗೆಡ್ಡೆ ಗೆಣಸುಗಳು, ಪ್ರಾಣಿಗಳಿಗೆ ಮೀಸಲಾದ ಹಲವಾರು ಆಹಾರಗಳು, ಮನುಷ್ಯರು ತಿನ್ನುವಂಥ ಆಹಾರಗಳೇ ಬೇರೆ ಬೇರೆ. ಈ ಎಲ್ಲ ಆಹಾರಗಳೂ ಬಿಸಿಲು, ಶಾಖ, ಮಳೆ, ಭೂಮಿ, ಗಿಡ, ಮರಗಳು ಇವುಗಳ ಪರಸ್ಪರ ಸಂಬಂಧದಿಂದಲೇ ಸಾಧ್ಯ. ತೈತ್ತರೀಯ ಉಪನಿಷತ್ತು ಈ ವಿಷಯವನ್ನು "ಆಕಾಶಾದ್ವಾಯುಃ ವಾಯೋರಗ್ನಿ ಅಗ್ನಿರಾಪಃ ಅದ್ಭ್ಯಃ ಪೃಥಿವೀ ಪೃಥಿವ್ಯಾ ಓಷದಯಃ ಓಷಧೀಭ್ಯೋನ್ನಂ ಅನ್ನಾತ್ ಪುರುಷಃ" ಎನ್ನುತ್ತದೆ, ಈ ಮುಕ್ತಕದಲ್ಲಿ, ಈ ಉಪನಿಷತ್ತಿನ ವಿಷಯವನ್ನು ಸುಲಲಿತವಾಗಿ ಗುಂಡಪ್ಪನವರು ಪ್ರತಿಪಾದಿಸಿದ್ದಾರೆ.

ಪ್ರಕೃತಿಯಲ್ಲಿ ಪಂಚಭೂತಗಳ ಪರಸ್ಪರ ಒಡಂಬಡಿಕೆಯಿಂದಲೇ ನಮ್ಮ ನಿಮ್ಮ ಮತ್ತು ಸಕಲ ಜೀವರಾಶಿಗಳ ಅಸ್ತಿತ್ವ, ಆಕಾಶದಲ್ಲಿರುವ ವಾಯು ಸೂರ್ಯನ ಶಾಖದಿಂದ ಉಂಟಾದ ಆವಿಯನ್ನು ಹೂವನ್ನೆತ್ತುವಂತೆ ಎತ್ತಿ ನಭಕ್ಕೆ ಒಯ್ದು, ಮೋಡವಾಗಿಸಿ, ತನ್ನ ಶಕ್ತಿಯಿಂದಲೇ ಆ ಮೋಡಗಳನ್ನು ಒಗ್ಗೂಡಿಸಿ, ಹಾಗೆ ಸತ್ವಯುತವಾದ ಮೋಡಗಳಿಂದ ಧರೆಗೆ ಮಳೆಯನ್ನೂ ಸುರಿಸುತ್ತದೆ. ಹಾಗೆ ಸುರಿಸಿದ ಮಳೆಯನ್ನು ಈ ಧರೆ ಹೀರಿ ಅದರ ಸತ್ವವನ್ನು ಕರಗಿಸಿಕೊಂಡು ತನ್ನೊಳಗಿನ ಸತ್ವಗಳನ್ನೂ ಸೇರಿಸಿ, ಗಿಡಮರಗಳ ಬೆಳವಣಿಗೆಗೆ ಕಾರಣವಾಗಿ ಆಹಾರ ಉತ್ಪತ್ತಿಗೆ ಕಾರಣವಾಗಿ, ಆ ಆಹಾರ ರೂಪದಲ್ಲಿ ಶಕ್ತಿಯನ್ನು ಜಗತ್ತಿನ ಎಲ್ಲ ಜೀವಿಗಳಿಗೆ ಒದಗಿಸುತ್ತದೆ. ಹಾಗೆ ಸಿಕ್ಕ ಶಕ್ತಿಯಿಂದ ಮತ್ತು ಸತ್ವದಿಂದಲೇ ಇಲ್ಲಿ ಜೀವಿಗಳಿಗೆ ಜೀವನ.

ನಾವು ಇದನ್ನೆಲ್ಲಾ ಅನುಭವಿಸುತ್ತಾ, ಒಂದಿಷ್ಟೂ ಕೃತಜ್ಞತೆ ಇಲ್ಲದೆ ಇಡೀ ಭೂಮಿಯ ನಾಶಕ್ಕೆ ಎಷ್ಟು, ಏನೇನು ಅವಶ್ಯವೋ ಅದನ್ನೆಲ್ಲ ಸಿದ್ಧಪಡಿಸಿಕೊಂಡು ಸರ್ವನಾಶಕ್ಕೆ ತಯಾರಿ ನಡೆಸಿ ಸತ್ಯವಾಗಲೂ ಸಂಸ್ಕಾರವಿಲ್ಲದವರಂತೆ ವರ್ತಿಸುವುದು ಬಹಳ ಖೇದನೀಯ. ನಾವೆಲ್ಲ ಈ ಪ್ರಕೃತಿಗೆ ನಮ್ಮ ಮೇಲಿನ ಪ್ರೀತಿಗೆ ಕೃತಜ್ಞತೆಯನ್ನು ಮಾತ್ರ ತೋರಬೇಕು. ನಮಿಸಬೇಕು, ಸಂತೋಷದಿಂದ ಅನುಭವಿಸುತ್ತಾ ಇದನ್ನೆಲ್ಲಾ ಕಾಪಾಡುವ ಪ್ರಯತ್ನ ಮಾಡಬೇಕು.

**ಮುಕ್ತಕ-120** **ಪಾಕ ನಿನ್ನೊಳದೊಂದು ಸಾಗುತಿಹುದೆಡೆಬಿಡದೆ ।**

**ಲೋಕದೆಲ್ಲವು ಸೂಕ್ಷ್ಮಗತಿಯಿನೊಳವೊಕ್ಕು ॥**

**ಸಾಕುಬೇಕುಗಳೆಲ್ಲವದರಿನಾ ಯಂತ್ರವನು ।**

**ಏಕೆ ರಚಿಸಿದನೋ ವಿಧಿ-ಮಂಕುತಿಮ್ಮ ॥**

ನಿನ್ನೊಳದೊಂದು=ನಿನ್ನೊಳು+ಅದು+ಒಂದು, ಸಾಗುತಿಹುದೆಡೆಬಿಡದೆ=ಸಾಗುತಿಹುದು+ಎಡೆಬಿಡದೆ, ಲೋಕದೆಲ್ಲವು=ಲೋಕದ+ಎಲ್ಲವು, ಸೂಕ್ಷ್ಮಗತಿಯಿನೊಳವೊಕ್ಕು=ಸೂಕ್ಷ್ಮ+ಗತಿಯಿನ+ಒಳ+ಹೊಕ್ಕು. ಸಾಕುಬೇಕುಗಳೆಲ್ಲವದರಿನಾ=ಸಾಕು+ಬೇಕುಗಳ+ಎಲ್ಲವ,

ಒಂದು ಪಾಕ ಸಿದ್ಧವಾಗುವ ರೀತಿಯಲ್ಲಿ ಮನಸ್ಸು ಬುದ್ಧಿಗಳು ದೇಹದೊಡನೆ ಸೇರಿ ನಿನ್ನೊಳು ಸೂಕ್ಷ್ಮಗತಿಯಲ್ಲಿ ಈ ಜಗದ್ವ್ಯಾಪಾರವೇ ನಡೆಯುತ್ತಿದೆ. ಕೆಲವನ್ನು ಬೇಕೆನ್ನುವ, ಕೆಲವನ್ನು ಸಾಕೆನ್ನುವ, ಇಂದು ಬೇಡವೆಂದದ್ದನ್ನು ನಾಳೆ ಬೇಕೆನ್ನುವ ಎಂದೋ ಇಷ್ಟಪಟ್ಟದ್ದನ್ನು ಇಂದು ಅಸಹ್ಯಿಸಿಕೊಳ್ಳುವ, ಈ ಮನುಷ್ಯ ದೇಹದ ಯಂತ್ರವನ್ನು





ಹೀಗೇಕೆ ರಚಿಸಿದನೋ ವಿಧಿ ಎಂದು ಒಂದು ಪ್ರಶ್ನೆಯನ್ನು ಹಾಕುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ನಮ್ಮ ದೇಹದ ಯಂತ್ರ ಬಹಳ ವಿಚಿತ್ರವಾದದ್ದು. ಇದರೊಳಗೆ ನಿರಂತರ ಕೆಲಸ ನಡೆಯುತ್ತಿರುತ್ತದೆ. ಈ ಲೋಕದ ಎಲ್ಲ ವಸ್ತುಗಳೂ ನಮ್ಮ ಪರಿಚಯಕ್ಕೆ ಬರುತ್ತದೆ. ಬಂದ ಕೆಲವನ್ನು ನಾವು ಅರ್ಥಮಾಡಿಕೊಳ್ಳುತ್ತೇವೆ. ಕೆಲವನ್ನು ಇಷ್ಟಪಡುತ್ತೇವೆ, ಕೆಲವನ್ನು ಇಷ್ಟಪಡುವುದಿಲ್ಲ, ಕೆಲವನ್ನು ಕಂಡು ನಾವು ನಿರ್ಲಿಪ್ತರಾಗಿರುತ್ತೇವೆ. ಇಂದು ಇಷ್ಟವಾದ ವಸ್ತು ವಿಷಯ ಮತ್ತು ವ್ಯಕ್ತಿಗಳು ಕೆಲಕಾಲದ ಮೇಲೆ ಇಷ್ಟವಾಗವುದಿಲ್ಲ. ನಮ್ಮ ಗಮನಕ್ಕೆ ಬರುವುದೆಲ್ಲವೂ ಅರ್ಥವಾಗುವುದಿಲ್ಲ. ಅರ್ಥವಾದದ್ದೆಲ್ಲವೂ ಇಷ್ಟವಾಗುವುದಿಲ್ಲ. ಇಷ್ಟವಾದದ್ದೆಲ್ಲವೂ ನಮ್ಮದಾಗುವುದಿಲ್ಲ. ನಮ್ಮದಾದದ್ದೆಲ್ಲವೂ ನಮ್ಮದಾಗೇ ಉಳಿಯುವುದಿಲ್ಲ. ನಾವು ಇಷ್ಟಪಡುವುದಕ್ಕೆ ಅಥವಾ ಇಷ್ಟಪಡದೆ ಇರುವುದಕ್ಕೆ ನಮ್ಮದೇ ಆದ ಕಾರಣಗಳಿರಬಹುದು ಅಥವಾ ಕಾರಣವೇ ಇಲ್ಲದಿರಬಹುದು.

ಮನಸ್ಸಿನಲ್ಲಿ ನಡೆಯುವ ಪ್ರತಿ ಪ್ರಕ್ರಿಯೆಯೂ ಬಹಳ ವಿಚಿತ್ರವಾಗಿರುತ್ತದೆ. ಇದರೊಳಗೆ ಬೇಕಾದದ್ದು ಬೇಡದ್ದು ಎಲ್ಲಾ ವಿಚಾರಗಳ ಅಡುಗೆಯ ಪಾಕ ನಡೆಯುತ್ತಲೇ ಇರುತ್ತದೆ. ಇನ್ನು ಹೀಗೆ ಬರುವ, ಮನದಲ್ಲೇ ಉಳಿಯುವ, ಬಂದು ಹೋಗುವ ವಿಚಾರಗಳಿಂದ ದೇಹದ ಮೇಲೆ ಆಗುವ ಪ್ರಭಾವವೂ ಸಹ ಬಹಳ ವಿಚಿತ್ರ, ಅದು ಏಕೆ ಹಾಗೆ ನಡೆಯುತ್ತದೆ ಎನ್ನುವ ಪ್ರಶ್ನೆಗೆ ಉತ್ತರವೇ ಇಲ್ಲ. ನಮ್ಮ ಮನದಿಂಗಿತ ಪರರಾರಿಗೂ ಅರ್ಥವಾಗುವುದೇ ಇಲ್ಲ. ಪರರ ಮನದಲ್ಲಿ ಏನು ನಡೆಯುತ್ತಿದೆ ಎಂಬುದು ನಮಗೆ ತಿಳಿಯುವುದಿಲ್ಲ. ಇಂತಹ ಒಂದು ಯಂತ್ರವನ್ನು ಏಕೆ ರಚಿಸಿದನೋ ಆ ಬ್ರಹ್ಮ ಎನ್ನುತ್ತಾರೆ ಶ್ರೀ ಗುಂಡಪ್ಪನವರು.

ವಾಚಕರೆ ಇಲ್ಲಿ ನಾವು ವಿಚಾರ ಮಾಡಬೇಕಾಗಿರುವುದೇನೆಂದರೆ, ಮನಸ್ಸು ಸ್ಥಿಮಿತದಲ್ಲಿ ಇದ್ದರೆ, ನಿರುಮ್ಮಳವಾಗಿದ್ದರೆ ದೈಹಿಕ ಆರೋಗ್ಯ ಚೆನ್ನಾಗಿರುತ್ತದೆ ಎಂಬುದು ಸಂಸಿದ್ಧವಾಗಿದೆ. ಹಾಗಾಗಿ ನಮ್ಮ ಮನಸ್ಸುಗಳನ್ನು ಆದಷ್ಟು ನೆಮ್ಮದಿಯಿಂದ ಇಟ್ಟುಕೊಳ್ಳಲು ಪ್ರಯತ್ನಪಡುವ

**ಮುಕ್ತಕ-121**

**ತನುವೇನು? ಮನವೇನು? ಪರಮಾಣು ಸಂಧಾನ |**
**ಕುಣಿಸುತಿಹುದುಭಯವನು ಮೂರನೆಯದೊಂದು ||**
**ತೃಣದ ಹಸುರಿನ ಹುಟ್ಟು ತಾರೆಯಸಕದ ಗುಟ್ಟು |**
**ದಣಿಯದದನರಸು ನೀಂ-ಮಂಕುತಿಮ್ಮ ||**

ಕುಣಿಸುತಿಹುದುಭಯವನು=ಕುಣಿಸುತಿಹುದು+ಉಭಯವನು,
ಮೂರನೆಯದೊಂದು=ಮೂರನೆಯದು+ಅದೊಂದು, ತಾರೆಯಸಕದ=ತಾರೆಯ+ಎಸಕದ,
ದಣಿಯದದನರಸು=ದಣಿಯದೆ+ಅದನು+ಅರಸು, ಪರಮಾಣು=ಸೂಕ್ಷ್ಮಾತಿ ಸೂಕ್ಷ್ಮ ಅಣುಗಳು,
ಉಭಯವನು=ಎರಡನ್ನೂ, ಎಸಕದ=ಮಿನುಗುವಿಕೆಯ, ಅರಸು=ಹುಡುಕು.

ದೇಹವೇನು, ಮನಸ್ಸೇನು! ಎರಡೂ ಸಹ ಪರಮಾಣುಗಳ ಅನುಸಂಧಾನದಿಂದ ಕಾರ್ಯಪ್ರವೃತ್ತವಾಗಿವೆ. ಆದರೆ ಇವರೆಡನ್ನೂ ಸೇರಿಸಿ ಆಡಿಸುತ್ತಿರುವುದು ಆ ಮೂರನೆಯ ಪರಮ ಶಕ್ತಿ, ಹುಲ್ಲಿನ ಹಸಿರಿಗೂ,

ತಾರೆಯ ಮಿನುಗುವಿಕೆಗೂ ಕಾರಣವೇನೆಂಬುದನ್ನು ನೀ ಹುಡುಕು ಎಂದು ಒಂದು ಆದೇಶವನ್ನು ಮಾನ್ಯ ಗುಂಡಪ್ಪನವರು ನಮಗೆ ಈ ಮುಕ್ತಕದಲ್ಲಿ ಕೊಟ್ಟಿದ್ದಾರೆ.

ವಾಚಕರೆ, ಮನುಷ್ಯನಷ್ಟೇ ಅಲ್ಲ. ಎಲ್ಲಾ ಚರಾಚರ ಪ್ರಾಣಿಗಳ ದೇಹದ ರಚನೆಯಾಗಿರುವುದೇ, ಸೂಕ್ಷ್ಮ ಜೀವಾಣುಗಳ ಸಮರ್ಪಕ ಜೋಡಣೆಯಿಂದ ಜೋಡಣಾಕ್ರಮದ ಅನುಸಾರ ಅದನ್ನು ಮನುಷ್ಯನೆಂದೋ ನಾಯಿಯೆಂದೋ, ಕೋತಿಯೆಂದೋ, ಸೊಳ್ಳೆಯೆಂದೋ, ಪರಿಗಣಿಸಲ್ಪಡುತ್ತದೆ. ಈ ಜೀವಕಣಗಳು ಎಷ್ಟು ಸೂಕ್ಷ್ಮವೆಂದರೆ, ದುರ್ಬೀನಿನ ಕಣ್ಣಿಗೂ ಕಾಣಿಸಲಸದಳ. ಆದರೆ ಅವುಗಳ ಕಾರ್ಯವೋ ಮೇರುಸಮಾನ, ಉಸಿರಾಟ, ರಕ್ತ ಸಂಚಲನೆ, ಆಹಾರ ಸೇವನೆ, ಪಚನ, ಶಕ್ತಿ ಉತ್ಪನ್ನ, ಸಮಾನ ವಿತರಣ ಮತ್ತು ತ್ಯಜನ ಹೀಗೆ ಎಲ್ಲ ಕೆಲಸಗಳಲ್ಲೂ ನಿರಂತರ ಮಗ್ನವಾಗಿರುತ್ತವೆ ಈ ಜೀವ ಕಣಗಳು, ಹತ್ತು ಹಲವಾರು ರಸಗಳ ಉತ್ಪತ್ತಿ. ಆ ರಸಗಳಿಂದ ದೇಹ ಕಾರ್ಯ ಪ್ರವೃತ್ತಿ. ಒಂದಕ್ಕೊಂದಕ್ಕೆ ನಿಕಟ ಸಂಪರ್ಕ, ಕಾಲಲ್ಲಿ ಸೊಳ್ಳೆ ಕಡಿದರೆ ತಲೆಯಲ್ಲಿ ಕಂಪನ, ಕೈಗಳು ರಕ್ಷಣೆಗೆ ಧಾವಿಸುತ್ತವೆ. ಎಂದೋ ಕಂಡ ವ್ಯಕ್ತಿಯ ಮತ್ತೆ ಕಂಡರೆ, ಕೂಡಲೇ ಬುದ್ಧಿಯಲ್ಲಿನ ನೆನಪು ಮನದ ಅಂಗಳಕ್ಕೆ, ರೂಪ, ಬಣ್ಣ, ನಡಿಗೆ, ಹಾವ, ಭಾವ ಹೆಸರು ಎಲ್ಲದರ ಜ್ಞಾಪಕ ಮರುಕಳಿಸುತ್ತದೆ.

ಹೀಗೆ ಈ ದೇಹ ಮತ್ತು ಮನಸ್ಸಿನ ನಿಕಟ ಮತ್ತು ಸೂಕ್ಷ್ಮ ಸಂಬಂಧವನ್ನು ಕಾರ್ಯೋನ್ಮುಖಗೊಳಿಸುವುದಕ್ಕೆ ಕಾರಣ ಆ ಪರಮಾತ್ಮ ಶಕ್ತಿ. ಆ ಶಕ್ತಿಯೂ ಸಹ ಅಣುಗಳಲ್ಲಿ ತಾನೇ ಹರಡಿಕೊಂಡು, ಎಲ್ಲಕ್ಕೂ ಇಂಬುಕೊಡುತ್ತಾ ಪ್ರತಿ ಪ್ರಾಣಿಯನ್ನೂ ಎಲ್ಲ ಕಾರ್ಯಗಳಿಗೂ ಪ್ರೇರೇಪಿಸುತ್ತದೆ. ತನು ಮನ ಮತ್ತು ಆ ಪರಮ ಚೇತನದ ಅವಿನಾಭಾವ ಸಂಬಂಧವೇ ಈ ಜಗದ್ವ್ಯಾಪಾರ. ಜಗತ್ತಿನ ಎಲ್ಲ ಚರಾಚರ ಪ್ರಾಣಿಗಳು ಈ ಸಂಬಂಧದ ಚಕ್ರದಲ್ಲೇ ಸುತ್ತುತ್ತಿರುತ್ತವೆ. ಇದು, ಎಲ್ಲೋ ಅಡಗಿದ್ದು ಮಳೆಯಾದೊಡನೆ, ಚಂಗನೆ ಚಿಗುರಿ ಧರೆಗೆ ಹಸಿರ ಹೊದಿಸುವ ಹುಲ್ಲಿಗೂ, ಎಲ್ಲೋ ಭೂಮಿಯಿಂದ ಕೋಟಿ ಕೋಟಿ ಮೈಲಿ ದೂರದಲ್ಲಿ ಮಿನುಗುತ್ತಿರುವ ಆ ನಕ್ಷತ್ರಕ್ಕೂ ಅನ್ವಯಿಸುತ್ತದೆ.

ಈ ತನುವೂ ನಾವಲ್ಲ. ಈ ಮನವೂ ನಾವಲ್ಲ. ಏಕೆಂದರೆ ನಾವು ಉಪಯೋಗಿಸುವ ಪದಗಳನ್ನು ಸ್ವಲ್ಪ ನೋಡಿ. "ನನ್ನ" ಮೈಯೆಲ್ಲಾ ನೋಯುತ್ತಿದೆ. 'ನನ್ನ ಮನಸ್ಸೇಕೋ ಸರಿಯಿಲ್ಲ. 'ನನ್ನ ಹೆಸರು ರಾಮ. ಹಾಗಾಗಿ ಎಲ್ಲವನ್ನೂ ನಾನು ಹೊಂದಿದ್ದೇನೆ ಮಾತ್ರ. ಆದರೆ ಅದು ನಾನಲ್ಲ. ಈ ಅಣುಗಳಿಂದಾದ ತನು (ದೇಹ) ರೂಪವಿಲ್ಲದ

ಮನಸ್ಸು ಮತ್ತು ಇವೆರಡನ್ನೂ ಕಾರ್ಯಪ್ರವೃತ್ತಿಗೆ ತೊಡಗಿಸುವ ಆ ಪರಮ ಚೇತನಗಳ ಮಧ್ಯೆ "ನಾನು" ಯಾರು ಎಂಬುದನ್ನು ಅರಿಯಬೇಕು. ಆ ಪರಮ ಚೇತನವನ್ನು ಅರಿಯಬೇಕು. ಆಗಲೇ ನಮ್ಮ ಬದುಕಿನ ಸೂಕ್ಷ್ಮತೆಗಳು ನಮಗೆ ಅರಿವಾಗಿ ಸತ್ಯವಾದ ಜ್ಞಾನ ಪ್ರಾಪ್ತಿಯಾಗುತ್ತದೆ. ಇದುವೇ ಆಧ್ಯಾತ್ಮ





# ಸಚ್ಚಿದಾನಂದ ತತ್ವ 122-128

**ಮುಕ್ತಕ-122**

**ಜನಿಸಿದುದು ಮೃತಿಯನೆಳಸದೆ ಕುಲವ ಬೆಳೆಸುವುದು ।**
**ಒಣಗಿದಂತಿರುವ ತೃಣಮೂಲ ಮೊಳೆಯುವುದು ॥**
**ಮನುಜರಳಿವರು ಮರುಸಂತಾನ ನಿಂತಿಹುದು ।**
**ಅಣಗದಾತ್ಮದ ಸತ್ವ-ಮಂಕುತಿಮ್ಮ ॥**

ಮೃತಿಯನೆಳಸದೆ=ಮೃತಿಯ+ಎಳಸದೆ, ಮನುಜರಳಿವರು=ಮನುಜರು+ಅಳಿವರು,
ಅಣಗದಾತ್ಮದ=ಅಣಗದು+ಆತ್ಮದ
ಮೃತಿಯನೆಳಸದೆ=ಮೃತ್ಯುವನ್ನು ಬಯಸದೆ, ತೃಣಮೂಲ=ಹುಲ್ಲಿನ ಬೇರು, ಅಳಿವರು=ಸಾಯುವರು,
ಮರುಸಂತಾನ=ಮುಂದಿನ ಪೀಳಿಗೆ, ಅಣಗದು=ಕಡಿಮೆಯಾಗದು

ಹುಟ್ಟಿದವರು ಯಾರೂ ಕೂಡಲೇ ಸಾಯಲು ಇಚ್ಚಿಸುವುದಿಲ್ಲ. ತಮ್ಮ ಕುಲವನ್ನು ಬೆಳೆಸಲು ಇಚ್ಚಿಸುತ್ತಾರೆ. ನೋಡಲು ಒಣಗಿದಂತೆ ಇದ್ದರೂ ಮಳೆಯಾದಾಗ, ಜೀವಂತವಾಗಿ ಚಿಗುರಿ ಹಸಿರೊಡೆದು ನಲಿಯುವ ಹಸಿರು ಹುಲ್ಲಂತೆ, ಮನುಷ್ಯರು ಸತ್ತರೂ ಅವರ ಸಂತಾನ ಈ ಭೂಮಿಯಲ್ಲಿ ನಿಂತಿಹುದು. ಆತ್ಮದ ಸತ್ವ ಈ ಜಗತ್ತಿನಲ್ಲಿ ಎಂದಿಗೂ ಕಡಿಮೆಯಾಗದು ಎಂದು ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ ಪ್ರಸ್ತಾಪ ಮಾಡುತ್ತಾರೆ.

ಈ ಭೂಮಿಗೆ ಎಷ್ಟು ವಯಸ್ಸಾಗಿದೆಯೋ ನಮಗೆ ಗೊತ್ತಿಲ್ಲ. ಈ ಭೂಮಿಯ ಮೇಲೆ ಮೊದಲ ಮಾನವ ಎಂದು ಬಂದನೋ, ನಮಗೆ ಗೊತ್ತಿಲ್ಲ. ಆದರೂ ಅಂದಿನಿಂದ ಇಂದಿನತನಕ ಮಾನವನ ಸಂತತಿ ಇದೆ. ಮಾನವನ ಸಂತತಿ ಬರುವ ಮುನ್ನ ಇದ್ದ ಪ್ರಾಣಿಪಕ್ಷಿಗಳ ಹಲವಾರು ಪ್ರಭೇದಗಳು ಇಂದು ಸಂಪೂರ್ಣವಾಗಿ ನಾಶವಾಗಿ ಇಲ್ಲವಾಗಿವೆ. ಆದರೆ ಬೇರೆ ಬೇರೆ ಪ್ರಾಣಿ ಪಕ್ಷಿಗಳು ಉದ್ಭವವಾಗಿವೆ!! ಈ ರೀತಿ ನಿರಂತರ ಸೃಷ್ಟಿಯ ಚಕ್ರ ನಡೆದು ಬಂದಿದೆ ಈ ಭುವಿಯಲ್ಲಿ. ಇಲ್ಲಿ ಮಾನವ, ತಾನು ನಿರಂತರವಾಗಿ ಇರಲಾಗದಿದ್ದರೂ ತನ್ನ ಸಂತತಿಯಿಂದ ಕುಲವನ್ನು ಬೆಳೆಸುತ್ತಿದ್ದಾನೆ. ಭೂಮಿಯಲ್ಲಿ ಒಂದು ಒಣ ಹುಲ್ಲಿನ ಬೇರು ಹೇಗೆ ಒಂದು ಮಳೆಯಾದರೆ ಚಿಗುರೊಡೆದು ಧರೆಗೆಲ್ಲ ಹಸಿರ ಹೊದಿಕೆಯನ್ನು ಹೊದಿಸುವಂತೆ ಪರಮಾತ್ಮ ತತ್ವ ಈ ಜಗತ್ತಿನಲ್ಲಿ ನಿರಂತರ, ನಿತ್ಯ ಮತ್ತು ಅನಂತವಾಗಿರುವ ಸತ್ಯ.

ಈ ಜಗತ್ತಿನ ಸಕಲ ಚರಾಚರ ಪ್ರಾಣಿಗಳ ಅಸ್ತಿತ್ವಕ್ಕೆ ಮತ್ತು ಕಾರ್ಯ ಪ್ರವೃತ್ತಿಗೆ ಕಾರಣವಾದ ಚೇತನ ಮಾತ್ರ ಹಾಗೆ ಇದೆ. ಬೇರೆ ಬೇರೆ ರೂಪಗಳಲ್ಲಿ ಪ್ರಕಟಗೊಳ್ಳುತ್ತಾ ಈ ಜಗತ್ತಿನ ಚಿತ್ರ ವಿಚಿತ್ರ ರೂಪಗಳಲ್ಲಿ ತನ್ನ ಪ್ರಭಾವವನ್ನು ತೋರುತ್ತಾ ಆನಂದಪಡುತ್ತಿದೆ. ಎಲ್ಲ ಚರಾಚರಗಳಲ್ಲೂ ತನ್ನ ಅಸ್ತಿತ್ವವನ್ನು ಪ್ರಕಾಶಿಸಿ ಎಲ್ಲ ರೂಪಗಳಲ್ಲೂ "ಈಶಾವಾಸ್ಯಮಿದಂ ಸರ್ವಂ ಯತ್ಕಿಂಚಿತ್ ಜಗತ್ಯಾಂ ಜಗತ್" ಎಂದು ಹೇಳುವ ಈಶಾವಾಸ್ಯೋಪನಿಷತ್ತಿನ ಉಕ್ತಿಯಂತೆ. ರೂಪಗಳು ಬೇರೆಯಾದರೂ, ಕಾಲಮಾನ ಬೇರೆಯಾದರೂ ಸದಾಕಾಲ ತನ್ನ ಪ್ರಭಾವವನ್ನು ಒಂದೇ ರೀತಿ ಅನಾದಿ ಕಾಲದಿಂದಲೂ ತೋರುತ್ತಾ, ಹಾಗೆಯೇ ನಿರಂತರವಾಗಿ





ನಡೆಯುತ್ತಾ, ಅನಂತ ಕಾಲದವರೆಗೂ ಇರುವುದೇ ಆ ಪರಮಾತ್ಮ ತತ್ವ, ಅದಕ್ಕೆ ಅಂತವೇ ಇಲ್ಲ. ಅದು ಅನಂತ ಎನ್ನುವುದೇ ಈ ಮುಕ್ತಕದ ಹೂರಣ.

ವಾಚಕರೆ ನಾವು ಇಲ್ಲಿ ಕಾಣಬೇಕಾದದ್ದು ಏನೆಂದರೆ, ಒಂದೇ ಪರಮ ಸತ್ವ, ತಾನೇ ಎಲ್ಲವೂ ಆಗಿ, ಎಲ್ಲವನ್ನೂ ಕಾರ್ಯೋನ್ಮುಖವಾಗಿಸುವ ಚೇತನವೂ ಆಗಿ, ಎಲ್ಲ ವಿಚಿತ್ರಗಳನ್ನೂ ತೋರುತ್ತಾ, ಎಲ್ಲವನ್ನು ತಾನೇ ಅನುಭವಿಸುತ್ತಾ ನಿರಂತರವಾಗಿ ಅನಂತ ಕಾಲ, ಸ್ವಲ್ಪವೂ ಅಣಗದೆ ಇರುವುದೇ ಆ ಪರಮ ಚೇತನ. ಅದಕ್ಕೆ ನಮ್ಮ ನಮನವನ್ನು ಸಲ್ಲಿಸಬೇಕಷ್ಟೇ.

**ಮುಕ್ತಕ-123** **ಬನ್ನಬವಣೆಗಳ ತಾನೆನಿಪೆನಿತು ಪಟ್ಟಿರೆಯು |**
**ಮಿನ್ನೊಮ್ಮೆ ಮತ್ತೊಮ್ಮೆ ಹೊಸ ಸಾಹಸಗಳಿಂ ||**
**ಸನ್ನಿಹಿಸುವಂ ಸುಮ್ಮನಿರಲೊಲ್ಲದೆ ಮಾನವನು |**
**ಚಿನ್ಮಯತೆಯಾತ್ಮಗುಣ-ಮಂಕುತಿಮ್ಮ ||**

ಬನ್ನಬವಣೆಗಳ=ಬನ್ನ+ಬವಣೆಗಳ, ತಾನೆನಿತೆನಿತು=ತಾನು+ಎನಿತೆನಿತು,
ಪಟ್ಟಿರೆಯುಮಿನ್ನೊಮ್ಮೆ=ಪಟ್ಟರೆಯುಂ+ಇನ್ನೊಮ್ಮೆ, ಸಾಹಸಗಳಿಂಸನ್ನಿಹಿಸುವಂ=ಸಾಹಸಗಳಿಂ+ಸನ್ನಿಹಿಸುವ,
ಚಿನ್ಮಯತೆಯಾತ್ಮಗುಣ=ಚಿನ್ಮಯತೆ+ಆತ್ಮಗುಣ
ತಾನೆನಿತೆನಿತು=ತಾನು ಎಷ್ಟೆಷ್ಟು, ಬನ್ನಬವಣೆಗಳ=ಕಷ್ಟ ತೊಂದರೆ ಸೋಲುಗಳನ್ನ, ಪಟ್ಟರೆಯುಂ=ಪಟ್ಟರೂ,
ಸನ್ನಿಹಿಸುವ=ತೊಡಗುವ, ಸುಮ್ಮನಿರಲೊಲದೆ=ಸುಮ್ಮನಿರಲಾರದೆ,
ಚಿನ್ಮಯತೆಯಾತ್ಮಗುಣ=ಜ್ಞಾನಸ್ವಾರೂಪವು ಆತ್ಮದ ಗುಣ.

ಮನುಷ್ಯ ಎಷ್ಟೊಂದು ಕಷ್ಟ ಅನುಭವಿಸಿದರೂ, ಸೋಲನ್ನು ಅನುಭವಿಸಿದರೂ, ತೊಂದರೆಗಳನ್ನು ಎದುರಿಸಿದರೂ, ಮತ್ತೆ ಮತ್ತೆ ಪ್ರಯತ್ನವನ್ನು ಮಾಡುತ್ತಲೇ ಇರುತ್ತಾನೆ. ಹೊಸ ಹೊಸ ಸಾಹಸಗಳನ್ನು ಮಾಡುತ್ತಲೇ ಇರುತ್ತಾನೆ. ಸುಮ್ಮನಿರಲಾಗದಿರುವುದು ಮನುಷ್ಯನಲ್ಲಿರುವ ಜ್ಞಾನಸ್ವರೂಪವಾದ ಆತ್ಮದ ಗುಣವೆಂದು ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ ಪ್ರಸ್ತಾಪ ಮಾಡುತ್ತಾರೆ.

ಮನುಷ್ಯನೇ ಆಗಲಿ ಬೇರೆ ಯಾವ ಪ್ರಾಣಿಯೇ ಆಗಲಿ ತನ್ನ ಮನಸ್ಸಿನ ಆಸೆಯನ್ನು ಪೂರೈಸಿಕೊಳ್ಳುವ ಹಾದಿಯಲ್ಲಿ ಎಷ್ಟೇ ಎಡರು ತೊಡರುಗಳು ಬಂದರೂ ಮರಳಿ ಮರಳಿ ಯತ್ನವನ್ನು ಮಾಡುವುದೇ ಸಹಜ ಗುಣ, ಅವನ ಗುಣ ಎಂದರೆ, ಈ ಎಲ್ಲ ಚರಾಚರಗಳಲ್ಲಿ ಪ್ರವಹಿಸುವ ಜ್ಞಾನಸ್ವರೂಪವಾದ, ಪರಮ ಚೇತನದ ಅಂಶವಾದ ಆತ್ಮನ ಗುಣ ಎಂದು ಅರ್ಥೈಸಿಕೊಳ್ಳಬಹುದು. ನಾನು ಕೆಲವೊಮ್ಮೆ, ಮನೆಯಲ್ಲಿ ನೆಲದಮೇಲೆ ಹರಿದಾಡುವ ಇರುವೆಗಳ ಹಾದಿಯಲ್ಲಿ ಒಂದು ಕಡ್ಡಿಯನ್ನೂ ಅಥವಾ ನನ್ನ ಬೆರಳನ್ನೋ ಅಡ್ಡವಾಗಿ ಇಟ್ಟಾಗ, ಅದು ಧೃತಿಗೆಡದೆ, ಪಕ್ಕದಿಂದ ಹರಿದು ಹೋಗುತ್ತದೆ. ಅದರ ಹಾದಿಯಲ್ಲಿ ಪ್ರತೀ ಬಾರಿ ಅಡ್ಡ ಬಂದಾಗ ಪ್ರತಿ ಬಾರಿಯೂ ಅದು ಪ್ರಯತ್ನವನ್ನು ಬಿಡುವುದೇ ಇಲ್ಲ. ಒಂದು ಗಿಡದ ರೆಂಬೆಯನ್ನು ಕಡಿದರೆ ಅಕ್ಕಪಕ್ಕಗಳಲ್ಲಿ ಹೊಸ ಚಿಗುರೊಡೆದು, ಒಂದರೆಡೆ ನಾಲ್ಕಾರು ಕೊಂಬೆಗಳು ಹುಟ್ಟಿಕೊಳ್ಳುತ್ತವೆ. ಅಲ್ಲಿ ಚೇತನ(ಜೀವ)ವಿರುವ ತನಕ ಈ ಪ್ರಯತ್ನ ನಡೆದೇ ಇರುತ್ತದೆ.

ಹಾಗೆಯೇ ಸಕಲ ಚರಾಚರಗಳಲ್ಲಿ ಉತ್ಕೃಷ್ಟ ದೇಹವನ್ನು ಹೊಂದಿದ ಮನುಷ್ಯನೂ ಸಹ ಉಸಿರಾಡುವ ತನಕ ಹೆಣಗಾಡುತ್ತಲೇ ಇರುತ್ತಾನೆ, ಹೋರಾಡುತ್ತಲೇ ಇರುತ್ತಾನೆ. ತನ್ನ ಪ್ರಯತ್ನವನ್ನು ಮಾಡುತ್ತಲೇ ಇರುತ್ತಾನೆ. ಎಷ್ಟು ಕಷ್ಟ ಬಂದರೂ, ಎಷ್ಟು ತೊಂದರೆಗಳು ಎದುರಾದರೂ, ಎಷ್ಟು ಸೋಲನ್ನುಂಡರೂ ಸಹ ಅವನ ಪ್ರಯತ್ನ ನಡೆದೇ ಇರುತ್ತದೆ. ಜೀವವಿರುವ ತನಕ ಮನಸ್ಸು ನೆನೆದದ್ದನ್ನು ನಡೆಸುವ ಅಥವಾ ಪಡೆಯುವ ಪ್ರಯತ್ನ ನಡೆದೇ ಇರುತ್ತದೆ. ಆದರೆ ಆ ಪ್ರಯತ್ನಪಡುವರು ಯಾರು. ಸಚ್ಚಿದಾನಂದಸ್ವರೂಪವಾದ, ಜ್ಞಾನಸ್ವರೂಪವಾದ ಆ ಚೇತನ ಸಕ್ರಿಯವಾಗಿರುವ ತನಕ ಪ್ರಯತ್ನ ನಡೆಯುತ್ತದೆ. ಇಲ್ಲದಿದ್ದರೆ ಇಲ್ಲ. ಹಾಗಂದರೆ ಪ್ರಯತ್ನ ನಡೆಯುವುದು ನಮ್ಮಿಂದಲೋ ಅಥವಾ ನಮ್ಮನ್ನು ಧಾರಣೆಮಾಡಿ ಸಕ್ರಿಯವಾಗಿರುವ ಆ ಚೇತನದಿಂದಲೋ? ಇದು ಪ್ರಶ್ನೆ.

ಒಂದು ಸ್ವಿಚ್ ಒತ್ತಿದರೆ ಬಲ್ಬನಿಂದ ಬೆಳಕು ಹರಿಯುತ್ತದೆ. ಆ ಬೆಳಕು ಎಲ್ಲಕಡೆ ಹರಡುತ್ತದೆ. ಸ್ವಿಚ್ ಆಫ್ ಮಾಡಿದರೆ ಬೆಳಕು ಇಲ್ಲ. ಅಂದರೆ ಬೆಳಗುವುದು ಬಲ್ಬಿನ ಮೂಲಕ ಹರಿಯುವ ವಿದ್ಯುತ್ ಅಲ್ಲವೇ! ಹಾಗೆಯೇ ನಮ್ಮಲ್ಲೂ ಸಕ್ರಿಯವಾದದ್ದು ಕೇವಲ ನಮ್ಮಲ್ಲಿ ಪ್ರವಹಿಸುವ ಆ ವಿದ್ಯುತ್ರೂಪದ ಚೇತನವೇ ಹೊರತು ನಾವಲ್ಲ. ಹಾಗಾಗಿ ನಮ್ಮ ಎಲ್ಲ ಕಾರ್ಯಗಳೂ ಪ್ರಯತ್ನಗಳೂ ಸಹಾ ಆ ಪರಮ ಚೇತನದಿಂದಲೇ ನಡೆಯುತ್ತದೆ. ಹಾಗೆ ಕಾರ್ಯೋನ್ಮುಖವಾಗುವುದೇ, ಸಕ್ರಿಯವಾಗುವುದೇ ಆ ಚೇತನದ ಅಥವಾ ಆತ್ಮದ ಗುಣ ಎನ್ನುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

"ನಾನು ಇದನ್ನು ಮಾಡುತ್ತೇನೆ, ನಾನು ಅದನ್ನು ಮಾಡುತ್ತೇನೆ. ನಾನು ಸಾಧಿಸಿಬಿಡುತ್ತೇನೆ ಅಥವಾ ಸಫಲನಾಗುತ್ತೇನೆ" ಎಂದು ನಾವು ಕೊಚ್ಚಿಕೊಳ್ಳುವುದು ಕೇವಲ ನಮ್ಮ "ಅಹಂಕಾರದಿಂದಲ್ಲವೇ? ಇದನ್ನು ತೊರೆದರೆ, ನಮಗೆ ಇಡೀ ಪ್ರಪಂಚದಲ್ಲಿ ಆ ಪರಮ ಚೇತನದ ಸಕ್ರಿಯ ರೂಪ ಕಾಣುವುದು ಅಥವಾ ಅನುಭವಕ್ಕೆ ಬರುವುದು.

**ಮುಕ್ತಕ-124 ಮೌನದೊಳೋ ಮಾತಿನೊಳೋ ಹಾಸ್ಯದೊಳೋ ಹಾಡಿನೊಳೋ।**

**ಮಾನವಂ ಪ್ರಣಯದೊಳೊ ವೀರ ವಿಜಯದೊಳೋ ||**

**ಏನೋ ಎಂತೋ ಸಮಾಧಾನಗಳನರಸುತಿಹ |**

**ನಾನಂದವಾತ್ಮ ಗುಣ-ಮಂಕುತಿಮ್ಮ ||**

ಸಮಾಧಾನಗಳನರಸುತಿಹನಾನಂದವಾತ್ಮ=ಸಮಾಧಾನಗಳನು+ಅರಸುತಿಹನು+ಆನಂದವ+ಆತ್ಮ,

ಮಾನವಂ=ಕೋಪವನ್ನು

ನಾವು ಸದಾ ಕಾಲ ಮೌನವಾಗಿಯೋ, ಮಾತನಾಡುತ್ತಲೋ, ಹಾಸ್ಯವಾಡುತ್ತಲೋ, ಹಾಡುತ್ತಲೋ, ಕೋಪಗೊಳ್ಳುತ್ತಲೋ, ಪ್ರಣಯದಲ್ಲೋ, ವೀರತ್ವದಲ್ಲೋ ಅಥವಾ ಗೆಲುವಿನ ಸಂಭ್ರಮದಲ್ಲೋ ಯಾವುದಾದರೂ ವಿಧದಿಂದ ಸಮಾಧಾನ ಸಂತೋಷಗಳನ್ನು ಕಂಡುಕೊಳ್ಳಲು ಪ್ರಯತ್ನಿಸುತ್ತಿರುತ್ತೇವೆ. ನಮ್ಮನ್ನು ಸದಾ ಕಾಲ ಸಕ್ರಿಯವಾಗಿಸಿರುವ ಆ ಪರಮ ಚೇತನವು ನಮ್ಮ ಮೂಲಕ ಈ ಎಲ್ಲ ಭಾವಗಳನ್ನೂ ಅನುಭವಿಸುತ್ತಾ ಇರುವುದೇ ಆತ್ಮನ ನಿಜವಾದ ಗುಣ ಎಂದು ಪ್ರಸ್ತಾಪಿಸುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

(176)



ನಾವು ಒಂದಲ್ಲ ಒಂದು ಕೆಲಸದಲ್ಲಿ ಸದಾ ನಿರತರು. ನಮ್ಮ ಎಲ್ಲಾ ಕೆಲಸಗಳ ಮೂಲ ಉದ್ದೇಶ ಕೇವಲ ಸಮಾಧಾನ ಮತ್ತು ಆನಂದವನ್ನು ಪಡೆಯುವುದಷ್ಟೇ. ಇದರಲ್ಲಿ ನಮಗೆ ತಿಳಿಯದ ವಿಷಯವೇನೆಂದರೆ, ಒಂದು, ನಿಜವಾದ ಆನಂದ ಎಂದರೆ ಏನು? ಎರಡು, ಆ ಆನಂದವನ್ನು ಪಡೆಯುವುದು ಹೇಗೆ? ಮತ್ತು ಆ ಆನಂದವನ್ನು ಅನುಭವಿಸುತ್ತಿರುವವರಾರು? ನಾವು "ನಾನು ಆನಂದವನ್ನು ಪಡೆಯುತ್ತಿದ್ದೇನೆ' 'ನಾನು ಸಂತೋಷವನ್ನು ಅನುಭವಿಸುತ್ತಿದ್ದೇನೆ" ಇಂತಿಂತಹ ವಸ್ತು, ವಿಷಯ, ವ್ಯಕ್ತಿಗಳು ಹೀಗೆ ಹೀಗೆ ಇದ್ದರೆ ನನಗೆ ಸಂತೋಷವಾಗುತ್ತದೆ' ಎಂದು ಯೋಚಿಸುತ್ತೇವೆ. ನೋಡಿ ಇಲ್ಲಿ ಎಲ್ಲ ಕಡೆಯೂ "ನಾನು" "ನನಗೆ" "ನಮ್ಮ" ಎಂಬ ಪದಗಳನ್ನು ಲೀಲಾಜಾಲವಾಗಿ ಉಪಯೋಗಿಸುತ್ತೇವೆ. ಇಲ್ಲಿ ಹಾಗೆ ಆಡಿಸುವುದು ಕೇವಲ ನಮ್ಮ "ಅಹಂಕಾರವಷ್ಟೇ" ಇದು ಅಜ್ಞಾನ ಜನ್ಯ. ಒಂದು ಕ್ಷಣ

ನಾವು 'ಇಡೀ ಜಗತ್ತನ್ನು ಸೃಜಿಸಿ, ಎಲ್ಲವೂ ತಾನೇ ಆಗಿ, ಎಲ್ಲ ರೂಪಗಳ ಅಸ್ತಿತ್ವಕ್ಕೆ ಕಾರಣವಾದ ಆ ಪರಮ ಚೇತನವೇ ಈ ಎಲ್ಲ ಭಾವಗಳನ್ನೂ ಅನುಭವಿಸುತ್ತಿದೆ. "ನಾವಲ್ಲ' ಎಂದು ಯೋಚಿಸಿದರೆ, ನಮ್ಮ ಅನುಭವದ ಲಹರಿಯೇ ಬದಲಾಗುತ್ತದೆ.

ದೇಹ ಮನಸ್ಸು ಬುದ್ಧಿ ಆತ್ಮಗಳ ಸಮ್ಮಿಲನದಿಂದಾದ ನಮ್ಮ ಈ ಜೀವನ ಕೇವಲ ಆ ಪರಮ ಚೇತನದ ಕ್ರಿಯೆಯಷ್ಟೇ. ಇವುಗಳ ಮಧ್ಯೆ "ನಾನು" ಎಂಬುದು ನಮ್ಮ ಇಂದ್ರಿಯ ಸಂಬಂಧವಾದ ಭಾವವಷ್ಟೇ. ಈ ಭಾವದಿಂದ ಮೇಲೆದ್ದು "ನಾನು" ಎಂಬುದನ್ನು ಬಿಟ್ಟು, ಇಡೀ ಸೃಷ್ಟಿಯೇ ಆ ಪರಮಾತ್ಮ, ಎಲ್ಲ ಭಾವಗಳೂ ಆ ಚೇತನದ ಹಲವಾರು ವ್ಯಕ್ತ ರೂಪಗಳಷ್ಟೇ, ಸಚ್ಚಿದಾನಂದ ರೂಪನಾದ ಆ ಚೇತನವೇ ಎಲ್ಲವನ್ನೂ ಅನುಭವಿಸುತ್ತಿದ್ದಾನೆ ಎಂದು ನಾವು ಅರಿತುಕೊಂಡಾಗ ನಿಜವಾದ ಆನಂದ ಉಂಟಾಗುತ್ತದೆ.

ವಾಚಕರೆ, ದೇಹ ಮನಸ್ಸು ಬುದ್ಧಿಗಳನ್ನು ಒಂದೆಡೆ ಸೇರಿಸಿ, ಅದರೊಳಕ್ಕೆ ಆತ್ಮ ರೂಪದಲ್ಲಿ ಸೇರಿ, ಆ ಪರಮ ಚೇತನವು ಆನಂದಿಸುತ್ತಿದೆ. ಏಕೆಂದರೆ ಸಚ್ಚಿದಾನಂದ ಸ್ವರೂಪವಾದ ಅದರ ಮೂಲ ಗುಣವೇ ಆನಂದ. ಅದನ್ನು ಅರಿತರೆ ನಾವೂ ಸಹ ಆನಂದವಾಗಿರಬಹುದು. ಅದನ್ನು ಬಿಟ್ಟು ನಾವೇ ಎಲ್ಲ ಅನುಭವಿಸುತ್ತೇವೆ ಎಂದರೆ ನಮಗೆ ಸತ್ಯವಾದ ಆನಂದದ ಅರಿವೇ ಆಗುವುದಿಲ್ಲ. ನಮ್ಮ ಹುಡುಕಾಟಕ್ಕೆ ಅಂತ್ಯವೇ ಇರುವುದಿಲ್ಲ. ನಮಗೆ "ನಿತ್ಯವಾದ ಮತ್ತು ಸತ್ಯವಾದ ಆನಂದ" ಬೇಕಾದರೆ ಈ ಭಾವ ಬೆಳೆಸಿಕೊಳ್ಳಬೇಕು ಅಲ್ಲವೇ? ಇದನ್ನು ಎಲ್ಲ ವಾಚಕರೂ ತಮ್ಮ ತಮ್ಮಲ್ಲೇ ವಿಚಾರ ಮಾಡಿಕೊಳ್ಳಬೇಕೆಂದು ನನ್ನ ವಿಚಾರ.

**ಮುಕ್ತಕ-125**

**ಸಚ್ಚಿದಾನಂದಂಗಳಾತ್ಮ ಸ್ವಭಾವ ರಸ |**
**ಬಚ್ಚಿಡುವುದದನು ಜೀವಿತೆಯ ಮಾಯಕತೆ ||**
**ಇಕ್ಷುವೊಲ್ ಜೀವ, ಗಾಣದವೊಲ್ ಜಗನ್ಮಾಯೆ |**
**ನಿಚ್ಚವಿಳೆಯಾಲೆಮನೆ-ಮಂಕುತಿಮ್ಮ ||**

ಸಚ್ಚಿದಾನಂದಂಗಳಾತ್ಮ=ಸತ್+ಚಿತ್+ಆನಂದಗಳು+ಆತ್ಮ, ಬಚ್ಚಿಡುವುದದನು=ಬಚ್ಚಿಡುವುದು+ಅದನು,
ನಿಚ್ಚವಿಳೆಯಾಲೆಮನೆ=ನಿಚ್ಚವು+ಇಳೆ+ಆಲೆ+ಮನೆ.
ಸ್ವಭಾವ=ಗುಣ, ಜೀವಿತೆಯ=ಬದುಕಿನ, ಮಾಯಕತೆ=ಮಾಯೆ, ಇಕ್ಷುವೊಲ್=ಕಬ್ಬಿನಂತೆ,
ಗಾಣದವೊಲ್=ಗಾಣದಂತೆ, ಜಗನ್ಮಾಯೆ=ಜಗತ್ತಿನ ಮಾಹೆ, ನಿಚ್ಚವಿಳೆಯಾಲೆಮನೆ=ಈ ಜಗತ್ತು ನಿತ್ಯದ

ಆಲೆಮನೆ.

ಆತ್ಮದ ಗುಣ ಸಚ್ಚಿದಾನಂದ. ಆದರೆ ಈ ಇಂದ್ರಿಯ ಸಂಪರ್ಕದಿಂದ ಉಂಟಾದ ನಮ್ಮ ಬದುಕಿನ ಮಾಯೆ





ಅದನ್ನು ಮುಚ್ಚಿಡುವುದು. ಜೀವ, ರಸ ತುಂಬಿದ ಕಬ್ಬಿನ ಜಲ್ಲೆ ಇದ್ದಂತೆ. ಈ ಜಗತ್ತಿನ ಮಾಯೆಗಾಣದ ರೀತಿ, ಹೀಗೆ ಶುದ್ಧರಸ ತುಂಬಿದ ಆತ್ಮವನ್ನು ಮಾಯೆಯೆಂಬ ಗಾಣದಲ್ಲಿ ಸಿಲುಕಿಸಿ ಹಿಂಡಿ ಹಿಂಡಿ ನಿತ್ಯ ನಡೆಯುವ ಈ ಜಗತ್ತಿನ ಆಲೆಮನೆಯಲ್ಲಿ ಪಾಕ ತೆಗೆಯುವುದೇ ಜೀವನ ಎನ್ನುತ್ತಾರೆ, ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಆ ಪರಮ ಚೇತನದ ಒಂದು ಅಂಶವಾದ, ಈ ಚರಾಚರ ಜೀವಿಗಳ ರೂಪಧರಿಸಿದ ಆತ್ಮವು ಶುದ್ಧ, ಆನಂದ ಸ್ವರೂಪ. ಅದರ ಗುಣವೇ ಆನಂದದಿಂದಿರುವುದು. ಆದರೆ ಪೃಥ್ವಿ ಮತ್ತು ಪಂಚಭೂತ ತತ್ವದಿಂದಾದ ಮನಸ್ಸು ಬುದ್ಧಿ ದೇಹಗಳ ಸಂಪರ್ಕದಿಂದ ಅದರ ನಿಜಸ್ವರೂಪ ಮಾಯೆಯಿಂದ ಕವಿಯಲ್ಪಟ್ಟಿದೆ. ಕಬ್ಬಿನ ಜಲ್ಲೆಯಲ್ಲಿ ಆಪಾದಮಸ್ತಕ ಸಿಹಿ ರಸ ತುಂಬಿರುತ್ತದೆ. ಅದನ್ನು ಹೊರತೆಗೆಯಬೇಕಾದರೆ, ಅದನ್ನು ಗಾಣಕ್ಕೆ ಸಿಕ್ಕಿಸಿ ಅರೆದಾಗ ರಸ ಹೊರಬರುತ್ತದೆ.

ನಮ್ಮ ಜೀವನಗಳೂ ಅಷ್ಟೇ, ಎಲ್ಲರಲ್ಲೂ ಶುದ್ಧ ಆತ್ಮವೇ ಇದೆ. ಆದರೆ ಮಾಯೆಯಿಂದ ಕವಿದು ಈ ಪ್ರಪಂಚದಲ್ಲಿ ಮುಳುಗಿದೆ. ಈ ಮನಸ್ಸು ಬುದ್ಧಿ ದೇಹಗಳು ಆತ್ಮದ ತತ್ವವನ್ನು ಅರಿಯಲು ಗಾಣದಂತಿರುವ ನಮ್ಮ ನಿತ್ಯ ಜೀವನದ ಗಾಣದಲ್ಲಿ ಸಿಕ್ಕು ಅರೆಯಬೇಕು. ಆಸೆಗಳು, ಪಾಶಗಳು, ಪ್ರೀತಿ, ದ್ವೇಷಗಳು ಎಲ್ಲ ಭಾವಗಳೊಳಕ್ಕೆ ಹೊಕ್ಕು ಕಷ್ಟ ಸುಖಗಳನ್ನು ಅನುಭವಿಸಿ, ಅನುಭವವನ್ನು ಪಡೆದು ಸತ್ಯವನ್ನು ಅರಿತು ಸತ್ವದ ದರ್ಶನವಾದಾಗ ನಮಗೆ ಸಕ್ಕರೆಯಂಥಾ ಸವಿಯಾದ ಅನುಭವ ಸಿಗುತ್ತದೆ. ಅದನ್ನೇ ಗುಂಡಪ್ಪನವರು "ನಿಚ್ಚವಿಳೆಯಾಲೆಮನೆ" ಎಂದರು. ಈ ಜಗತ್ತು ನಿತ್ಯದ ಆಲೆಮನೆ ಎಂಬ ಅರ್ಥದಲ್ಲಿ.

ಆದರೆ ಇಂದಿನ ಜಗತ್ತಿನಲ್ಲಿ ಎಷ್ಟು ಜನ ಗಾಣದಲ್ಲಿ ಸಿಕ್ಕರೂ, ಸಕ್ಕರೆ ಹೊರಬರುವುದೇ ಇಲ್ಲ. ಏಕೆಂದರೆ ಜನ ಹೊಕ್ಕಿರುವ ಈ ಮಾಯೆಯ ಗೋಡೆ ದಿನೇ ದಿನೇ ದಪ್ಪವಾಗುತ್ತಿದೆ. ತಾನು, ತನ್ನದೆಂಬ ಮಾಯಾ ಪ್ರೇರಿತವಾದ

ಮೋಹದ ಗೋಡೆಯನ್ನು ಒಡೆದು ಹಾಕಿದರೆ ನಮಗೆ ಸವಿಯಾದ ನಿತ್ಯವಾದ ಸತ್ಯವಾದ ಆನಂದ ಸಿಗುತ್ತದೆ. ಅಂದರೆ, ಸಚ್ಚಿದಾನಂದ ಸ್ವರೂಪನಾದ ಪರಮ ಚೇತನದ ದರ್ಶನವಾಗುತ್ತದೆ. ಅದನ್ನು ಪಡೆಯಲು ನಿರಂತರ ಪ್ರಯತ್ನವನ್ನು ಎಲ್ಲರೂ ಮಾಡಬೇಕು. ಗುರುಕೃಪೆ ಮತ್ತು ದೈವ ಕೃಪೆಯಿಂದ, ಸಾಧನೆಯ ಮಾರ್ಗದಲ್ಲಿ ನಡೆದಾಗ ಅದನ್ನು ಪಡೆಯಬಹುದು. ನಿಜವಾದ ಆನಂದದ ಸಕ್ಕರೆಯ ಸವಿ ಬೇಕೆಂದರೆ ನಮ್ಮ ಬದುಕುಗಳೂ ಸಹ ನಿತ್ಯ ಆಲೆಮನೆಗಳಾಗಬೇಕು.

**ಮುಕ್ತಕ-126**

**ಒಳಿತೆಂದು ಸೊಗಸೆಂದು ಜಗವು ಮೆಚ್ಚುವುದೆಲ್ಲ |**
**ಕಲೆ ಕಣಂಗಳು ಮಾತ್ರ ಪೂರ್ಣಂಗಳಲ್ಲಿ ||**
**ನಲಿವು ಚೆಲುವುಗಳ ಪರಿಪೂರ್ಣ ಮೂಲಾಕೃತಿಯೆ |**
**ಪರಬೊಮ್ಮನೆನ್ನುವರು-ಮಂಕುತಿಮ್ಮ ||**

ಒಳಿತೆಂದು=ಒಳಿತು+ಎಂದು, ಸೊಗಸೆಂದು=ಸೊಗಸು+ಎಂದು, ಮೂಲಾಕೃತಿಯೆ=ಮೂಲ+ಆಕೃತಿಯೆ
ಪರಬೊಮ್ಮನೆನ್ನುವರು=ಪರಬೊಮ್ಮ+ಎನ್ನುವರು,
ಕಲೆ ಕಣಂಗಳು=ಬಾಗಶಃ, ಪೂರ್ಣಂಗಳಲ್ಲ=ಅಪರಿಪೂರ್ಣಗಳು





ಈ ಜಗತ್ತಿನಲ್ಲಿ ನಾವು "ಇದು ಒಳ್ಳೆಯದು" "ಇದು ಸೊಗಸು' ಎಂದು ಮೆಚ್ಚುವುದೆಲ್ಲ ಆ ಪರಮಾತ್ಮನ ಸಂಪೂರ್ಣ ರೂಪವಲ್ಲ, ಕೇವಲ ಪಾರ್ಶ್ವರೂಪ. ನಲಿವು ಚೆಲುವುಗಳ ಪರಿಪೂರ್ಣ ರೂಪವೇ ಆ ಪರಮಾತ್ಮ ಎನ್ನುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಜಗದಲ್ಲಿ ಜನರು ಯಾವುದೇ ವಸ್ತುವನ್ನು, ವಿಷಯವನ್ನು ಅಥವಾ ವ್ಯಕ್ತಿಯನ್ನು ಪೂರ್ಣವಾಗಿ ಅರಿತು ನೋಡುವುದೇ ಇಲ್ಲ. ನಮಗೆ ಯಾವುದನ್ನೂ ಸಂಪೂರ್ಣವಾಗಿ ಅರಿಯುವ ಇಚ್ಛೆಯೂ ಇಲ್ಲ, ಯೋಗ್ಯತೆಯೂ ಇಲ್ಲ. ನಾವು ಮೆಚ್ಚುವುದು, ಇಷ್ಟಪಡುವುದು, ಇಷ್ಟಪಡದೆ ಇರುವುದು, ಅಸಹ್ಯಪಟ್ಟುಕೊಳ್ಳುವುದು, ಅತಿಯಾಗಿ ಇಷ್ಟಪಡುವುದು

ಎಲ್ಲವೂ ನಮ್ಮ ಭಾವಕ್ಕೆ ಸಂಬಂಧಿಸಿದ್ದು, ನಮ್ಮ ಭಾವ ನಮ್ಮ ಸ್ವಭಾವ ಜನ್ಯ. ನಮ್ಮ ಸ್ವಭಾವ ಹೇಗಿದೆ ಎಂದರೆ, ಒಂದು ವಸ್ತು ವಿಷಯ ಅಥವಾ ವ್ಯಕ್ತಿಯನ್ನು ನಾವು ಇಷ್ಟಪಡುವುದೋ ಅಥವಾ ಪಡದೆ ಇರುವುದಕ್ಕೂ ನಮ್ಮದೇ ಕಾರಣಗಳಿರುತ್ತೆ. ಒಬ್ಬ ವ್ಯಕ್ತಿ "ನನಗೆ ಸಹಾಯಮಾಡುತ್ತಾನೆ, ನನ್ನನ್ನು ಹೊಗಳುತ್ತಾನೆ, ನಾ ಹೇಳಿದ ಹಾಗೆ ಕೇಳುತ್ತಾನೆ" "ನಮ್ಮ ಭಾಷೆಯವನು" ನಮ್ಮ ಜಾತಿಯವನು" ಎಂಬ ಹಲವಾರು ಕಾರಣಗಳಿಗೆ ನಾವು ಅವನನ್ನು ಇಷ್ಟಪಡುತ್ತೇವೆ, ಅಲ್ಲವೇ? ಒಬ್ಬ ವ್ಯಕ್ತಿಯನ್ನು ಆ ವ್ಯಕ್ತಿ ಹೇಗಿದ್ದಾನೋ ಹಾಗೆಯೇ ಇಷ್ಟಪಡುವುದು ಸಾಧ್ಯವೇ ಇಲ್ಲವೆ? ಅಂದರೆ ನಾವು ಒಂದು ವ್ಯಕ್ತಿಯ ಅಥವಾ ವಿಷಯದ ಅಥವಾ ವಸ್ತುವಿನ ಸತ್ಯರೂಪವನ್ನು ನೋಡುವುದಿಲ್ಲ. ಹಾಗಾಗಿ ನಾವು ನೋಡುವ ವಸ್ತು ಅಪೂರ್ಣ!!! ನಮ್ಮ ದೃಷ್ಟಿಗೆ, ಆದರೆ ಅದು ಸತ್ಯವಾಗಿ ಅಪೂರ್ಣವೇ?

ಖಂಡಿತ ಅಲ್ಲ!! ಏಕೆಂದರೆ ವೇದವು "ಪೂರ್ಣಮದಃ ಪೂರ್ಣಮಿದಂ ಪೂರ್ಣಾತ್ ಪೂರ್ಣಮುದಚ್ಯತೆ ಪೂರ್ಣಸ್ಯ ಪೂರ್ಣಮಾದಾಯ ಪೂರ್ಣವೇವಾವಶಿಷ್ಯತೆ" ಎನ್ನುತ್ತದೆ. ಪರಮಾತ್ಮನಿಂದ ಸೃಷ್ಟಿಸಲ್ಪಟ್ಟ ಪ್ರತಿಯೊಂದು ವಸ್ತುವೂ ಪೂರ್ಣವಾಗೇ ಇದೆ. ಈ ಜಗತ್ತಿನಲ್ಲಿ ಹಲವು ಪೂರ್ಣಗಳು ಸೇರಿ ಒಂದು ಪೂರ್ಣವಾಗಿದೆ. ಒಂದು ಪೂರ್ಣವನ್ನು ಎರಡಾಗಿಸಿದರೂ, ಎರಡು ಪರಿಪೂರ್ಣ ವಸ್ತುಗಳೇ ಉಳಿಯುತ್ತವೆ ಎನ್ನುತ್ತದೆ ವೇದ, ನಾವು ನೋಡುವ ಪರಿಯಲ್ಲಿ ದೋಷವಿಟ್ಟುಕೊಂಡು ವಸ್ತು ವಿಷಯ ಮತ್ತು ವ್ಯಕ್ತಿಗಳಲ್ಲಿ ದೋಷ ಕಾಣುವುದು ನಮ್ಮ ಕೊರತೆಯಷ್ಟೇ!!

ಆದರೆ ಇದನ್ನೆಲ್ಲ ಸೃಷ್ಟಿಮಾಡಿದ ಆ ಪರಮಾತ್ಮನು ಪರಿಪೂರ್ಣ. ಅವನಲ್ಲಾಗಲೀ, ಅವನ ಸೃಷ್ಟಿಯಲ್ಲಾಗಲೀ ಒಂದು ಚೂರೂ ದೋಷವಾಗಲೀ, ಕೊರತೆಯಾಗಲೀ ಇಲ್ಲ. ಎಲ್ಲವೂ ಸುಂದರ, ಎಲ್ಲವೂ ಪರಿಪೂರ್ಣ. ಈ ಜಗತ್ತಿನ ಎಲ್ಲರೂ ಅಂದರೆ ಸಕಲ ಚರಾಚರಗಳೂ ಆನಂದವಾಗಿ ಸುಖವಾಗಿ ಇರಲು, ಆ ಪರಮಾತ್ಮ ಎಲ್ಲವನ್ನೂ ಸೃಷ್ಟಿಸಿದ್ದಾನೆ. ನೀರು ಗಾಳಿ, ಆಕಾಶ, ಸೂರ್ಯ, ಚಂದ್ರರು, ಗಿಡ ಮರಗಳು, ಎಲ್ಲರಿಗೂ ಆಹಾರ, ಎಲ್ಲವನ್ನೂ ಕೊಟ್ಟಿದ್ದಾನೆ. ಮನುಷ್ಯನಿಗೆ ಒಂದು ಸೃಜನಾತ್ಮಕವಾದ ಜ್ಞಾನವನ್ನೂ ಕೊಟ್ಟು ಈ ಭುವಿಗೆ ಇನ್ನಷ್ಟು ಸೌಂದರ್ಯವನ್ನು ತುಂಬಲು ಅನುವು ಮಾಡಿಕೊಟ್ಟಿದ್ದಾನೆ.

ಆದರೆ ಮನುಷ್ಯನ ಸ್ವಾರ್ಥದಿಂದ, ಎಲ್ಲವೂ ತನಗಾಗಿ ಮಾಡಲ್ಪಟ್ಟಿದೆ, ಸೃಷ್ಟಿಸಲ್ಪಟ್ಟಿದೆ ಎಂದು ಆ ಪರಮಾತ್ಮನ ಮೂಲ ಉದ್ದೇಶವನ್ನೇ ಅಲ್ಲಗೆಳೆದು ಎಲ್ಲವನ್ನೂ ಹಾಳುಮಾಡುತ್ತಿದ್ದಾನೆ. ನಶ್ವರ ಬಾಳನ್ನು ಪಡೆದು, ತನ್ನ "ಕಡೆ" ನಿಶ್ಚಯ ಮತ್ತು ಸತ್ಯವೆಂದು ಅರಿತರೂ, ಅದನ್ನು ಮರೆಸಿ ಕೇವಲ ಹಣ ಸಂಪಾದನೆಯಲ್ಲಿ ಮತ್ತೆಲ್ಲವನ್ನೂ

ಹಾಳುಗೆಡವುತ್ತಿದ್ದಾನೆ. ಮತ್ತೆಲ್ಲವೂ ನಾಶವಾಗಿ, ಕೇವಲ ಹಣವಿದ್ದರೆ ಏನು ಪ್ರಯೋಜನವೆಂಬ ಜ್ಞಾನ ಇಲ್ಲವೇ ಇಲ್ಲ, ಈ ದುಷ್ಟನಿಗೆ. ವಾಚಕರೆ ನಾವಿಂದು ಒಂದು ಭಯಂಕರ ಪರ್ವದಲ್ಲಿ ಇದ್ದೇವೆ. ನಾವೆಲ್ಲಾ ಎಚ್ಚೆತ್ತುಕೊಳ್ಳಬೇಕು. ಇಡೀ ಸಮಾಜವನ್ನು ಎಚ್ಚರಿಸಬೇಕು. ಅಂಥಹ ಪ್ರಯತ್ನವನ್ನು ನಾವು ಮಾಡುವ ಪಣವನ್ನು ಇಂದೇ ತೊಡಬೇಕು.

**ಮುಕ್ತಕ-127**

**ಶಿವಸೌಖ್ಯಸೌಂದರ್ಯಗಳ ಪೂರ್ಣರವಿ ಬೊಮ್ಮ ।**
**ಭುವನಜೀವನಜಲಧಿಯೂರ್ಮಿಕೋಟಿಯಲಿ ॥**
**ಛವಿಕೋಟಿಯರಚಲ್ ಪ್ರತಿಚ್ಛಾಯೆ ವಿಲಸಿಹುದು ।**
**ಸವಿ ನಮ್ಮದದರ ಕಣ-ಮಂಕುತಿಮ್ಮ ॥**

ಶಿವ=ಶುಭವಾದ, ಛವಿಕೋಟಿಯರಚಲ್=ಕಾಂತಿಯನ್ನು ಕೋಟಿಕಣಗಳಲ್ಲಿ ಎರಚಲು. ವಿಲಸಿಪುದು=ವಾಸಿಸುವುದು.

ಶುಭ ಸಂತೋಷ ಸೌಂದರ್ಯಗಳ ಪೂರ್ಣರೂಪವೇ ಆ ಪರಮಾತ್ಮ ಈ ಜಗತ್ತಿನ ಜೀವನವೆಂಬ ಸಮುದ್ರದಲ್ಲಿರುವ ಕೋಟ್ಯಾನುಕೋಟಿ ಜೀವಬಿಂದುಗಳಲ್ಲಿ, ಆ ಪರಮ ಕಾಂತಿಯ ಛಾಯೆ ಕಾಣುವುದು ಅಥವಾ ವಿಲಾಸಿಸುವುದು. ನಾವೂ ಸಹ ಆ ಛಾಯೆಯ ಒಂದು ಕಣ ಮಾತ್ರವೆಂದು ಈ ಮುಕ್ತಕದಲ್ಲಿ ಮಾನ್ಯ ಗುಂಡಪ್ಪನವರು ಪ್ರಸ್ತಾಪಿಸುತ್ತಾರೆ.

ಹೌದಲ್ಲವೇ? ಈ ಜಗತ್ತಿನಲ್ಲಿ ಕೋಟ್ಯಾನುಕೋಟಿ, ಎಣಿಸಲು ಆಗದಷ್ಟು ವಸ್ತು ಪ್ರಭೇದಗಳಿವೆ, ವಿಷಯ ಪ್ರಭೇದಗಳಿವೆ. ಒಂದೊಂದು ಪ್ರಭೇದದಲ್ಲೂ ಕೋಟಿ ಕೋಟಿ ಪ್ರತಿರೂಪಗಳು. ಪ್ರತಿ ಜೀವಿಯೂ ಇರುವುದು, ಪ್ರಕೃತಿ ಮತ್ತು ಪುರುಷನ ಸಂಯೋಗದಿಂದ. (ಇಲ್ಲಿ ಪುರುಷ ಎಂದರೆ ಗಂಡಸು ಎಂಬ ಅರ್ಥವಲ್ಲ. ಅಂದರೆ ಪರಮಾತ್ಮನಿಂದಾದ ವಸ್ತುಗಳೊಳಕ್ಕೆ ಪರಮಾತ್ಮನೇ ಚೇತನಾ ರೂಪದಿಂದ ಸೇರಿ ಅದನ್ನೊಂದು ಜೀವಿಯನ್ನಾಗಿಸಿರುವಾಗ, ಈ ಜಗತ್ತಿನಲ್ಲಿ

ಇರುವ ಎಲ್ಲವೂ ಆ ಪರಮಾತ್ಮನೇ ಅಲ್ಲವೇ. ಆದರೆ ಬೇರೆ ಬೇರೆ ರೂಪಗಳನ್ನು ಕೊಟ್ಟು ಅವುಗಳನ್ನು ಬೇರೆ ಬೇರೆ ಎಂದು ಗುರುತಿಸುವಂತೆ ಮಾಡಿದ್ದಾನೆ.

ಈ ಜಗತ್ತು ಒಂದು ಮಹಾಸಾಗರ. ಇದನ್ನು ಜಗತ್ಸಾಗರವೆನ್ನಬಹುದು. ಈ ಜಗತ್ಸಾಗರದ ಒಂದೊಂದು ಬಿಂದುವೂ ಒಂದೊಂದು ಜೀವಿ. ಆ ಜೀವಿ ಪ್ರತಿಬಿಂಬಿಸುವುದೂ ಸಹ ಆ ಪಾರಮಾತ್ಮ ತತ್ತ್ವವನ್ನೇ. ಆಕಾಶದಲ್ಲಿ ಒಬ್ಬ ಸೂರ್ಯ. ಭೂಮಿಯ ಮೇಲೆ ಇರುವ ಸಕಲ ಪಾತ್ರೆಗಳ ನೀರಲ್ಲೂ ಒಂದೇ ಸೂರ್ಯ ಬೇರೆ ಬೇರೆಯಾಗಿ ಪೂರ್ಣವಾಗಿ ಪ್ರತಿ ಬಿಂಬಿಸುವುದಿಲ್ಲವೇ! ಹಾಗೆಯೇ ಎಲ್ಲ ಚರಾಚರಗಳಲ್ಲೂ ಆ ಪರಮಾತ್ಮನೇ ಪ್ರತಿಬಿಂಬಿಸುತ್ತಾನೆ ಮತ್ತು ಎಲ್ಲ ಪ್ರಾಣಿಗಳಲ್ಲೂ ಆ ಪರಮಾತ್ಮನೇ ಬೇರೆ ಬೇರೆ ರೂಪಗಳನ್ನು ಧರಿಸಿ ವಾಸಿಸುತ್ತಿದ್ದಾನೆ ಎನ್ನುವುದೇ ಈ ಮುಕ್ತಕದ ಹೂರಣ.

ಹಾಗಾಗಿ ವಾಚಕರೆ, ಎಂದು ನಮಗೆ ಈ ವಿಚಾರ ಮನದಲ್ಲಿ ಗಟ್ಟಿಯಾಗಿ ನಿಲ್ಲುತ್ತದೋ ಮತ್ತು ಹೊರ ರೂಪದ ಭೇದವನ್ನು ಗುರುತಿಸದೆ ಆಂತರ್ಯದಲ್ಲಿ ನಿವಸಿಸುವ ಅಥವಾ ವಿಲಸಿಸುವ ಆ ಪರಮಾತ್ಮನನ್ನು ಕಾಣುವ ಪ್ರವೃತ್ತಿ ಬೆಳೆಯುತ್ತದೋ ಅಂದು ನಾವು ಜಾತಿ ಮತ, ಭಾಷೆ, ವರ್ಣ, ಭಾಗ್ಯ ಮುಂತಾದ

(180)

ಕಗ್ಗರಸಧಾರೆ — ಸಚ್ಚಿದಾನಂದ ತತ್ತ್ವ 122-128

ವಿಷಯಗಳಾಧಾರಿತ ಭೇದ ಮಾಡದೆ ಇಡೀ ವಿಶ್ವವನ್ನೇ ಬದುಕಲು ಒಂದು ಸುಂದರ ತಾಣವನ್ನಾಗಿಸಬಹುದು. ಆದರೆ ತಮಗೆಲ್ಲರಿಗೂ ಗೊತ್ತಿರುವಂತೆ ಇಂದಿನ ವಸ್ತು ಸ್ಥಿತಿಯೇ ಬೇರೆಯಾಗಿದೆ. ಇಂದು ಮನುಷ್ಯ ಮನುಷ್ಯನ ಮಧ್ಯದಲ್ಲಿ ಭೇದ ಉಂಟಾಗಲು ಸಾವಿರಾರು ಕಾರಣಗಳು. ಇದರ ಬಗ್ಗೆ ಬರೆದರೆ ಕೊನೆಯೇ ಇಲ್ಲದಂತಾಗುತ್ತದೆ. ಹಾಗಾಗಿ ವಾಚಕರೆ ನಾವು ನಮ್ಮ ನಡುವಿನಲ್ಲಿರುವ ಭೇದಗಳನ್ನು ಅಳಿಸಿ ಒಂದು ಸೌಹಾರ್ದಯುತವಾದ ಬಾಳನ್ನು, ಅದರಿಂದ ಒಂದು ಸುಂದರ ಸಮಾಜವನ್ನು ಕಟ್ಟಲು ಪ್ರಯತ್ನಪಡಬಹುದಲ್ಲ!!!

**ಮುಕ್ತಕ-128** **ಹೊರಗಾವುದೊಳಗಾವುದೀ ಸೃಷ್ಟಿ ಚಕ್ರದಲಿ ।**
**ಎರಡನೊಂದಾಗಿಹುದು ಹರಿವ ನಮ್ಮುಸಿರು ॥**
**ಇರುವುದುಳಿದಿನಿತು ಹೊರಗಾಳಿ ಯೋಗಿಗಳೊಳಂ ।**
**ಬರಿ ಸುಷಿರಪಿಂಡ ಜಗ-ಮಂಕುತಿಮ್ಮ ॥**

ಹೊರಗಾವುದೊಳಗಾವುದೀ=ಹೊರಗೆ ಆವುದು+ಒಳಗೆ ಆವುದು,
ಎರಡನೊಂದಾಗಿಪುದು=ಎರಡನು ಒಂದಾಗಿಪುದು, ಇರುವುದುಳಿದಿನಿತು=ಇರುವುದು+ಉಳಿದ+ಇನಿತು,
ಯೋಗಿಗಳೊಳಂ=ಯೋಗಿಗಳ+ಒಳಂ,
ಸುಷಿರಪಿಂಡ=ಕೊಳಲುಗಳ ಸಮೂಹ

ಈ ಸೃಷ್ಟಿಯಲ್ಲಿ ಹೊರಗೆ ಯಾವುದು, ಒಳಗೆ ಯಾವುದು? ಹೊರ ಒಳಗನ್ನು ಒಂದೇ ಆಗಿಪುದು, ಹರಿವ ನಮ್ಮುಸಿರು. ಯೋಗಿಗಳು ಮಾತ್ರ ತಮ್ಮ ಸಾಧನೆಯಿಂದ ಉಸಿರು ಬಿಗಿ ಹಿಡಿದು ಬಿಟ್ಟ ಉಸಿರನ್ನು ತಡೆಯಬಹುದು. ಆದರೆ ಈ ಜಗವೆಲ್ಲ ಒಂದು ಕೊಳಲುಗಳ ಸಮೂಹ ಎಂದು ಈ ಮುಕ್ತಕದಲ್ಲಿ ಪ್ರಸ್ತಾಪಿಸುತ್ತಾರೆ ಮಾನ್ಯ ಗುಂಡಪ್ಪನವರು.

ನಮ್ಮ ಸುತ್ತಲೂ ಗಾಳಿ ಇದ್ದರೆ ನಾವು ಇರಬಹುದು. ಅಂದರೆ ನಮ್ಮ ಸುತ್ತ ಗಾಳಿ, ಆ ಗಾಳಿ ನಮ್ಮ ಒಳಗೆ ಹೋಗಿ ಹೊರಬರುತ್ತಾ ಇದ್ದರೆ ನಾವೂ ಜೀವಂತ. ಅಂದರೆ ನಮ್ಮ ಒಳಗೂ ಹೊರಗೂ ಅದೇ ಗಾಳಿ, ಇದರಲ್ಲಿ ಒಳಗು ಯಾವುದು ಹೊರಗು ಯಾವುದು. ನಾವಿರುವುದೇ ಅದರಲ್ಲಿ. ಇನ್ನು ನಮ್ಮೊಳಗಿರುವುದು ನಮ್ಮ ಒಳಗೆ ಹೇಗೆ? ಹಾಗಾಗಿ ಹೊರಗೂ ಒಳಗುಗಳ ಅಂತರವೇ ಇಲ್ಲ ಇದ್ದರೂ ಆ ಅಂತರವನ್ನು ಅರ್ಥಮಾಡಿಕೊಳ್ಳುವುದು ಅಷ್ಟು ಸುಲಭವಲ್ಲ.

ಕೆಲವು ಯೋಗಿಗಳು ತಮ್ಮ ಸಾಧನೆಯಿಂದ ಪ್ರಾಣಾಯಾಮ ಮುಂತಾದವುಗಳಿಂದ ಕೆಲಕಾಲ ತಮ್ಮೊಳಗಿನ ಉಸಿರನ್ನು ಒಳಗೇ ಇರಿಸಿಕೊಳ್ಳುವುದೋ ಅಥವಾ ಹೊರಗೆ ಉಸಿರು ಬಿಟ್ಟು, ಕೆಲಕಾಲ ಉಸಿರಾಡದೆಯೇ ಇರಬಹುದು. ಆದರೆ ಇಡೀ ಜಗತ್ತೇ ಉಸಿರಾಡುತ್ತಿದೆ. ಪ್ರಾಣಿ, ಪಕ್ಷಿ, ಕ್ರಿಮಿ, ಕೀಟ, ಮೀನು, ಗಿಡ, ಮರ, ಬಳ್ಳಿ, ಹೀಗೆ ಎಲ್ಲವೂ ಉಸಿರಿನ ಬಲದಿಂದಲೇ ಜೀವಿಸಿವೆ. ಉಸಿರಿನ ನಾಳ ಆಡುತ್ತಿದರೆ ಜೀವನ ಇಲ್ಲದಿದ್ದರೆ ಮರಣ.

ಇದನ್ನೇ ಮಾನ್ಯ ಗುಂಡಪ್ಪನವರು "ಸುಷಿರಪಿಂಡ" ಎನ್ನುತ್ತಾರೆ. ಸುಷ್ಕರ ಎಂದರೆ ಕೊಳಲು ಅಥವಾ ಪಿಳ್ಳಂಗೋವಿ ಎಂದು ಅರ್ಥ. ಆ ಪಿಳ್ಳಂಗೋವಿಯಲ್ಲಿ ನಾವು ಉಸಿರನ್ನು ಊದಿದರೆ ಹೇಗೆ ನಾದ ಬರುತ್ತದೋ, ಹೇಗೆ ಆ ನಾದವೇ ಆ ಪಿಳ್ಳಂಗೋವಿಯ ಜೀವಾಳವೋ, ಹಾಗೆಯೇ ಈ ಜಗತ್ತಿನ ವ್ಯಾಪಾರವೆಲ್ಲ ನಡೆಯುವುದು ಆ ಪರಮಾತ್ಮ ನಮ್ಮೆಲ್ಲರೊಳಗೆ ಉಸಿರೆಂಬ ಜೀವ ಹೇತುವನ್ನಿಟ್ಟು ನಮ್ಮನ್ನೆಲ್ಲ ಜೀವಂತವಾಗಿಟ್ಟು ಈ ಜಗದ ನಾದ ಹೊರಡಿಸುತ್ತಿದ್ದಾನೆ. ಜಗನ್ನಾಟಕವನ್ನಾಡಿಸುತ್ತಿದ್ದಾನೆ. ನಮ್ಮಿಂದ ಹೊರಡುವ ಶಬ್ದ ಸಹಿತವಾದ ಭಾವ ಮತ್ತು ಶಬ್ದ ರಹಿತವಾದ ಭಾವ ಎಲ್ಲವೂ ಆ ಪರಮಾತ್ಮ ಜೀವಿಗಳೆಂಬ ಪಿಳ್ಳಂಗೋವಿಗಳಲ್ಲಿ, ಅಂದರೆ ನಮ್ಮಲ್ಲಿ, ಹೊರಡಿಸುವ ನಾದವಲ್ಲವೇ?

ವಾಚಕರೆ, ಇಲ್ಲಿ ನಮ್ಮ, ಅಂದರೆ "ಆತ್ಮ"ದ್ದು, ನಮ್ಮ ಸ್ವಂತ ಯಾವುದೂ ಇಲ್ಲ. ಎಲ್ಲವೂ ಎರವಲು, ಈ ದೇಹ, ಭೂಮಿಯಿಂದ, ಮನಸ್ಸು ಬುದ್ಧಿಗಳನ್ನು ಪಂಚ ಭೂತಗಳಿಂದ, ಆತ್ಮನನ್ನು ಪರಮಾತ್ಮನಿಂದ ಎರವಲು ಪಡೆದು ನಾದ ಹೊರಡಿಸುವ ನರರು ನಾವು. ಮನಸ್ಸಿನ ವ್ಯಾಪಾರ, ಬುದ್ಧಿಯ ಗ್ರಹಣ, ಶೇಖರಣ ಮತ್ತು ಉಪಯೋಗ ಈ ದೇಹದೊಳಗಿನ ಸಕಲವೂ ಎರವಲು. ಎಲ್ಲವನ್ನೂ ಪಡೆದು ಉಪಯೋಗಿಸುವಷ್ಟು ದಿನ ಉಪಯೋಗಿಸಿ ನಂತರ ಸಾಲ ತೀರಿಸಿದ ಹಾಗೆ ಹಿಂತಿರುಗಿಸಿ ಮತ್ತೆ ಎರವಲು ಪಡೆಯಲು ಉದ್ಯುಕ್ತರಾಗಬೇಕು. ಆದರೆ ಪಡೆದ ಸಾಲವನ್ನು ಹೇಗೆ ಉಪಯೋಗಿಸಿ, ಜಗತ್ತಿನಲ್ಲಿ ನಮ್ಮ ವ್ಯಾಪಾರವನ್ನು ಹೇಗೆ ವೃದ್ಧಿಗೊಳಿಸುವುದು ಎನ್ನುವುದು ನಮಗೆ ಬಿಟ್ಟದ್ದು. ದುರ್ವ್ಯವಹಾರ ಮಾಡಿ ಎಲ್ಲವನ್ನೂ ಕಳೆದುಕೊಂಡು ಗತಿಹೀನರಾಗಬಹುದು, ಸದುಪಯೋಗಪಡಿಸಿಕೊಂಡು ಸದ್ಗತಿಯನ್ನೂ ಪಡೆಯಬಹುದು. ನಮಗೆ ಸಂಪೂರ್ಣ ಸ್ವಾತಂತ್ರ್ಯವಿದೆ. ಅದಕ್ಕೆ ನಮ್ಮ ಪುರಂದರ ದಾಸರು "ಮಾನವ ಜನ್ಮ ದೊಡ್ಡದು ಅದ ಹಾಳು ಮಾಡಿಕೊಳ್ಳಬೇಡಿರೋ ಹುಚ್ಚಪ್ಪಗಳಿರಾ" ಎಂದು ಒಂದು ಎಚ್ಚರಿಕೆಯ ಮಾತು ಹೇಳಿದ್ದಾರೆ. ನಮ್ಮ ನಮ್ಮ ಜೀವನವನ್ನು "ಸದ್" ಆಗಿಸುವ ಹಾದಿಯಲ್ಲಿ ನಮಗೆ ಜಯವಾಗಲಿ.

# ನಿತ್ಯ ಪುರಾತನ-ನಿತ್ಯ ನೂತನ 129-133

**ಮುಕ್ತಕ-129** **ಧರೆಯ ನೀರ್ಗಾಗಸದ ನೀರಿಳಿದು ಬೆರೆವಂತೆ |**

**ನರನ ಪ್ರಾಕ್ತನಕೆ ನೂತನಸತ್ವ ಬೆರೆತು ||**

**ಪರಿವುದೀ ವಿಶ್ವಜೀವನಲಹರಿಯನವರತ |**

**ಚಿರಪತ್ನನೂತ್ನ ಜಗ-ಮಂಕುತಿಮ್ಮ ||**

ನೀರ್ಗಾಗಸದ=ನೀರಿಗೆ+ಆಗಸದ, ವಿಶ್ವಜೀವನಲಹರಿಯನವರತ=ವಿಶ್ವ+ಜೀವನ+ಲಹರಿ+ಅನವರತ, ಪರಿವುದೀ=ಪರಿವುದು+ಈ.

ಪ್ರಾಕ್ತನ=ಹಳತು, ಪರಿವುದು-ಹರಿಯುವುದು, ಅನವರತ=ನಿರಂತರ, ಪ್ರತ್ನನೂತ-ಹಳತು ಮತ್ತು ಹೊಸತು

ಭೂಮಿಯ ನೀರಿಗೆ ಆಗಸದ ಮಳೆಯ ನೀರು ಇಳಿದು ಬೆರೆಯುವಂತೆ, ಮನುಷ್ಯನ ಪುರಾತನತೆಗೆ ನೂತನತ್ವ ಬೆರೆತು ನಿರಂತರವಾಗಿ ಹರಿಯುವುದು ಈ ಜೀವನ ಲಹರಿ, ಹಾಗಾಗಿ ಹಳತು ಮತ್ತು ಹೊಸತರ ನಿರಂತರ ಸಮ್ಮಿಲನವೇ ಈ ಜಗತ್ತು ಎಂದು ಮಾನ್ಯ ಗುಂಡಪ್ಪನವರು ಪ್ರಸ್ತಾಪಿಸುತ್ತಾರೆ ಈ ಮುಕ್ತಕದಲ್ಲಿ.

(182)

ಕಗ್ಗರಸಧಾರೆ — ನಿತ್ಯ ಪುರಾತನ-ನಿತ್ಯ ನೂತನ 129-133

ಆಕಾಶದ ನೀರು ಆಕಾಶದಲ್ಲಿ ಇತ್ತೇ? ಇಲ್ಲ, ಅದು ಈ ಭೂಮಿಯ ಮೇಲಿನ ನೀರೇ ಆವಿಯಾಗಿ, ಮೋಡವಾಗಿ ಮತ್ತೆ ಧರೆಗೆ ಇಳಿಯುತ್ತದೆ. ಆಗ ನಾವು ಅದನ್ನು ಹೊಸ ಮಳೆ ಎಂದು ಕರೆಯುತ್ತೇವೆ. ಆ ರೂಪ ಹೊಸತಾದರೂ ಅದರ ಮೂಲ ಹಳತಲ್ಲವೇ? ಆದರೂ ಅದಕ್ಕೊಂದು ಹೊಸ ಬಣ್ಣ, ಅದರ ಆಗಮನ ಹೊಸ ಭಾವವನ್ನು ತರುತ್ತದೆ. ಹೊಸ ಸಂಭ್ರಮದ ಸ್ವಾಗತವಿರುತ್ತದೆ. ಆ ಭಾವವೂ ನಮ್ಮಲ್ಲಿ ಹಿಂದೆಯೂ ಬಂದಿತ್ತು, ಹಾಗಾಗಿ ಅದು ಪುರಾತನ, ಇಂದೂ ಬಂದಿದೆ. ಹಾಗಾಗಿ ನೂತನ.

ಈ ಜಗತ್ತಿನ ಎಲ್ಲವೂ ಹೀಗೇ. ಹಳತಿನ ಆಧಾರದ ಮೇಲೆ ಹೊಸ ಹೊಸ ವಿಚಾರಗಳು, ಆವಿಷ್ಕಾರಗಳು, ಭಾವಗಳು, ಸಾಹಿತ್ಯ, ಸಂಗೀತ, ಸಂಸ್ಕೃತಿ ಎಲ್ಲವೂ ಸಹ ಹಳೆಯದರಿಂದಲೇ ಹೊಸರೂಪ ತಾಳುತ್ತದೆ. ಅದನ್ನು ನಾವು ನೂತನವೆನ್ನುತ್ತೇವೆ. ಏನೋ ಹೊಸದನ್ನು ಕಂಡುಹಿಡಿದ ಹಾಗೆ ಅಥವಾ ಕಂಡ ಹಾಗೆ ಸಂಭ್ರಮಿಸುತ್ತೇವೆ. ಆದರೆ ಹಳತು ಹೊಸದರ ಮೂಲ. ಹಳತಿಗೆ ಅದಕ್ಕಿಂತ ಹಳತಿನದು ಮೂಲ.

ಹೀಗೆ ಹಳತು ಹೊಸತುಗಳ ಪ್ರವಾಹದ ಚಲನೆ ಈ ಜಗತ್ತಿನಲ್ಲಿ ನಿರಂತರವಾಗಿ ನಡೆದೇ ಇರುತ್ತದೆ. ನಮ್ಮ ಕನ್ನಡ ಭಾಷೆಯನ್ನೇ ತೆಗೆದುಕೊಳ್ಳೋಣ. ಭಾಷೆ ಒಂದೇ ದಿನದಲ್ಲಿ ಉಗಮವಾಗಲಿಲ್ಲ. ಒಂದು ವಿಕಸನ ಪ್ರಕ್ರಿಯೆಯಲ್ಲಿ ಹರಿದು ಹಲವಾರು ರೂಪಗಳನ್ನು ತಳೆದು, ಪಡೆದು ಮತ್ತೆ ಆ ವಿಕಸನ ಪ್ರಕ್ರಿಯೆಯಲ್ಲೇ ರೂಪಾಂತರಗೊಳ್ಳುತ್ತಾ, ಇಂದಿನ ರೂಪ ಪಡೆದಿದೆ. ಓದುವ ಬರೆಯುವ ಮತ್ತು ಆಡುವ ಎಲ್ಲ ರೂಪಗಳಲ್ಲೂ ಅದು ಬದಲಾಗುತ್ತಾ ಇದೆ. ಹಳತಿನ ಆಧಾರದ ಮೇಲೆ ಹೊಸ ಹೊಸ ರೂಪ ಪಡೆಯುತ್ತದೆ. ಇಂದು ನಾವು ಹಳೆಗನ್ನಡವನ್ನು ಓದಲು ಸಮರ್ಥರಲ್ಲ. ಈಗಿನ ಹೊಸ ಕನ್ನಡ ಓದುತ್ತೇವೆ. ಆದರೆ ಇಂದಿನ ಭಾಷೆಯು ಅಂದಿನ ಭಾಷೆಯ ರೂಪಾಂತರಿತ ರೂಪವೆಂದು ಅರಿಯಬೇಕು.

ಒಂದು ಮರ ನೂರಾರು ವರ್ಷಗಳ ಕಾಲ ಜೀವಂತವಾಗಿರುತ್ತದೆ. ಅದರ ಬೇರುಗಳು ಭೂತಲದಲ್ಲಿ ಸುತ್ತಲೂ ಬಹಳ ಕಾಲದಿಂದ ಹರಡಿಕೊಂಡಿರುತ್ತವೆ. ಅದರ ಕಾಂಡ ಭದ್ರವಾಗಿ ಭೂಮಿಯಲ್ಲಿ ನಾಟಿಕೊಂಡು ಇರುತ್ತದೆ. ಪ್ರತೀ ವರ್ಷವೂ ಆ ಮರ ತನ್ನ ದೇಹವನ್ನು ಕೊಡವಿಕೊಂಡಂತೆ ತನ್ನ ಎಲೆಗಳನ್ನೆಲ್ಲ ಉದುರಲು ಬಿಟ್ಟು ಮತ್ತೆ ಹೊಸ ಚಿಗುರನ್ನು ಮತ್ತು ಅದರ ಮೂಲಕ ಹೊಸ ಹೂ, ಕಾಯಿ, ಹಣ್ಣುಗಳನ್ನು ತಳೆಯುವುದಿಲ್ಲವೇ? ಈ ಪ್ರಕ್ರಿಯೆಯನ್ನು ನಾವು ಜಗತ್ತಿನ ಪ್ರತೀ ವಸ್ತುವಿಗೂ ಅನ್ವಯಿಸಿಕೊಳ್ಳಬಹುದು. ನಮ್ಮ ಯೋಚನೆ ಎಷ್ಟು ದೂರ ಹೋಗಬಲ್ಲದೋ ಅಷ್ಟೂ ದೂರ ಹರಿಸಿ ನೋಡಿದಾಗ, ನಮಗೆ ಈ ಹಳತು ಹೊಸತುಗಳ ಸಮ್ಮಿಲಿತ ರೂಪದ ಪರಿಚಯ ಖಂಡಿತ ಆಗುತ್ತದೆ. ನಮ್ಮ ಎಲ್ಲ ಹೊಸತೂ ಸಹ ಹಳತಿನ ಅಡಿಪಾಯದ ಮೇಲೆ ನಿಂತ ಹೊಸ ರೂಪ ಎಂದು ನಾವು ಅರ್ಥಮಾಡಿಕೊಂಡಾಗ ಈ ಜಗಜ್ಜೀವನದ ನಿರಂತರತೆಯ ರೂಪ ನಮಗೆ ಗೋಚರವಾಗುತ್ತದೆ.





**ಮುಕ್ತಕ-130**

**ರಾಮನಡಿಯಿಟ್ಟ ನೆಲ, ಭೀಮನುಸಿರಿದ ಗಾಳಿ |**
**ವ್ಯೋಮದೆ ಭಗೀರಥಂ ತಂದ ಸುರತಟನಿ ||**
**ಸೋಮನಂ ಪೆತ್ತ ಕಡಲೀ ಪುರಾತನಗಳಿಗೆ |**
**ನಾವೆಂತು ಹೊಸಬರೆಲೊ-ಮಂಕುತಿಮ್ಮ ||**

ರಾಮನಡಿಯಿಟ್ಟ=ರಾಮನು+ಅಡಿ+ಇಟ್ಟ, ಭೀಮನುಸಿರಿದ=ಭೀಮನು+ಉಸುರಿದ,
ಪುರಾತನಗಳಿರೆ=ಪುರಾತನಗಳು+ಇರೆ, ಹೊಸಬರೆಲೊ=ಹೊಸಬರು+ಎಲೊ.
ವ್ಯೋಮದೆ=ಆಕಾಶದಿಂದ, ಸುರತಟನಿ=ಗಂಗಾನದಿ, ಸೋಮನಂ=ಚಂದ್ರನನ್ನು, ಪೆತ್ತ =ಹೆತ್ತ,
ಕಡಲೀ=ಸಮುದ್ರವು, ಪುರಾತನಗಳಿರೆ=ಪುರಾತನವಾಗಿರಲು

ರಾಮನು ನಡೆದಾಡಿದ ನೆಲ, ಭೀಮನು ಉಸಿರಾಡಿದ ಗಾಳಿ, ದಿವಿಯಿಂದ ಭಗೀರಥ ಈ ಭೂಮಿಗೆ ತಂದ ಆಕಾಶ ಗಂಗೆ, ಸಮುದ್ರ ಮಂಥನದಲ್ಲಿ ಕ್ಷೀರಸಾಗರದಲ್ಲಿ ಹುಟ್ಟಿದ ಆ ಚಂದ್ರ, ಇವೆಲ್ಲವೂ ಪುರಾತನವೇ ಆಗಿರಲು, "ನಾವು ಹೇಗೆ ಈ ಭೂಮಿಯಲ್ಲಿ ಹೊಸಬರಾಗುತ್ತೇವೆ?" ಎಂದು ಒಂದು ಪ್ರಶ್ನೆಯನ್ನು ಕೇಳುತ್ತಾರೆ ಮಾನ್ಯ ಗುಂಡಪ್ಪನವರು.

ತ್ರೇತಾಯುಗದಲ್ಲಿ, ಪೂರ್ವದಲ್ಲಿ ರಾಮನು ನಡೆದಾಡಿದ ಸರಯೂ ನದೀ ತೀರ, ಪಂಚವಟಿ, ದಂಡಕಾರಣ್ಯ, ರಾಮೇಶ್ವರ ಎಲ್ಲವೂ ಇಂದೂ ಇವೆ. ದ್ವಾಪರದಲ್ಲಿ ಭೀಮನೂ ಸಹ ಇಂದು ಇರುವ ಗಾಳಿಯನ್ನೇ ಉಸಿರಾಡುತ್ತಿದ್ದನು. ಭಗೀರಥನು ದಿವಿಯಿಂದ ಭುವಿಗೆ ತಂದ ಆ ಪರಮ ಪಾವನೆ ಗಂಗಾ ಮಾತೆ ಇನ್ನೂ ಹಾಗೆಯೇ ಹರಿದು ಈ ಭರತಖಂಡವನ್ನು ಪವಿತ್ರಗೊಳಿಸುತ್ತಿದ್ದಾಳೆ. ಪುರಾಣಗಳ ಪ್ರಕಾರ ಸಮುದ್ರ ಮಂಥನದಲ್ಲಿ ಉದ್ಭವವಾದ ಚಂದ್ರನು ಇನ್ನೂ ನಮಗೆ ಕಾಣುತ್ತಿದ್ದಾನೆ. ಹಾಗೆ ಎಲ್ಲ ಪುರಾತನ ವಸ್ತುಗಳೂ ನಮ್ಮೊಂದಿಗೆ ಇರುವಾಗ, ನಾವು ನೂತನರು, ಹೊಸಬರು ಹೇಗಾಗುತ್ತೇವೆ, ಎನ್ನುವುದೇ ಈ ಮುಕ್ತಕದ ಹೂರಣ.

ಮಹಾಭಾರತ ಯುದ್ಧದಲ್ಲಿ ಅರ್ಜುನ "ನನ್ನ ಬಾಂಧವರನ್ನು ಕೊಂದು ಸಿಗುವ ರಾಜ್ಯ ನನಗೇಕೆ" ಎಂದು ಗೋಳಾಡುತ್ತಾ, "ನಾ ಯುದ್ಧ ಮಾಡುವುದಿಲ್ಲ' ಎಂದಾಗ ಕೃಷ್ಣ ಹೇಳುತ್ತಾನೆ, "ನಿನ್ನ ಮುಂದೆ ನಿಂತಿರುವವರು ಹಿಂದೆಯೂ ಇದ್ದರು, ಇಂದೂ ಇದ್ದಾರೆ, ಮುಂದೆಯೂ ಇರುತ್ತಾರೆ. ಹಾಗಾಗಿ ಅವರಿಗಾಗಿ ನೀನು ಚಿಂತಿಸಬೇಡ" ಎಂದು. ಈ ಪ್ರಪಂಚ ಒಂದು ನಿರಂತರ ಪಯಣಿಸುವ ಆಕಾಶಕಾಯವಿದ್ದ ಹಾಗೆ, ಇಲ್ಲಿ ಅದೇ ವಸ್ತುಗಳು ಮತ್ತೆ ಮತ್ತೆ ಬಂದು ಹೋಗುತ್ತಿರುತ್ತವೆ. ಅಂದಿನ ನೂತನವು ಇಂದಿಗೆ ಪುರಾತನವಾಗುತ್ತದೆ ಅಂದಿನ ಪುರಾತನವು ಇಂದಿಗೆ ನೂತನವಾಗುತ್ತದೆ.

ನಮ್ಮ ತಾತ ಚಿಕ್ಕ ಹುಡುಗನಾಗಿದ್ದಾಗ, ಅವರು ಅವರ ತಾತನಿಗೆ ನೂತನ. ಕಾಲಾನುಕಾಲಕ್ಕೆ ಅವರಿಗೆ ಮಕ್ಕಳಾದಾಗ, ಅವರ ಮಕ್ಕಳು ನೂತನರು. ಮಕ್ಕಳಿಗೆ ಅವರು ದೊಡ್ಡವರು. ಮಕ್ಕಳ ಮಕ್ಕಳಿಗೆ ವೃದ್ಧರು. ನಮಗೆ ಅವರು ಪುರಾತನರು. ಅವರು ಈಗ ಬರೀ ನೆನಪು ಮಾತ್ರ ನೋಡಿದಿರಾ ನೂತನವು ಹೇಗೆ ಪುರಾತನವಾಯ್ತು ಮತ್ತು ಪುರಾತನವು ಹೇಗೆ ನೂತನವಾಯ್ತು!! ಇದು ಈ ಜಗತ್ತಿನ ಎಲ್ಲ ಜೀವಿಗಳಲ್ಲಿಯೂ ಸಹಜ. ಆದರೆ ಒಂದು ವಿಷಯ ಗಮನಿಸಬೇಕು. ಇಲ್ಲಿ ನೂತನವಾಗುವುದು ಏನು ಪುರಾತನವಾಗಿ ಉಳಿಯುವುದು ಏನು?





`ಸದಾ ನೂತನವಾಗಿ ಇರುವುದು ಚೇತನ, ಪುರಾತನವಾಗುವುದು ರೂಪ. ಪುರಾತನವಾದ ರೂಪ ಮತ್ತೆ ನೂತನವಾಗುತ್ತದೆ. ಆದರೆ ನಿತ್ಯ ನೂತನವಾದ ನಿತ್ಯವಾದ ಮತ್ತು ಸತ್ಯವಾದ ಚೇತನ ಪುರಾತನ ರೂಪವನ್ನು ತೊರೆದು ನೂತನ ರೂಪವನ್ನು ಧಾರಣೆ ಮಾಡುತ್ತದೆ. ಹಾಗಾಗಿ ಪುರಾತನವಾಗುವುದು ಕೇವಲ ರೂಪ ಮಾತ್ರ. ನಿತ್ಯ ನೂತನ ಚೇತನ. ಹೀಗೆ ಪುರಾತನ ಮತ್ತು ನೂತನಗಳ ಪರಸ್ಪರ ಹೊಂದಾಣಿಕೆಯೇ ಜೀವನ. ನಾವು ನಮ್ಮನ್ನು ಚೇತನ ಎಂದು ಅರಿತರೆ ನಾವೂ ಸಹ ನಿತ್ಯ ನೂತನ.

**ಮುಕ್ತಕ-131** **ಪುಲಿಸಿಂಘದುಚ್ಚ್ವಾಸ, ಹಸು ಹುಲ್ಲೆ ಹಯದುಸಿರು |**
**ಹುಳು ಹಾವಿಲಿಯಸುಯ್ಯು, ಹಕ್ಕಿ ಹದ್ದುಯ್ದು ||**
**ಕಲೆತಿರ್ಪವೀಯಲ್ಲ ನಾಮುಸಿರ್ವೆಲರಿನಲಿ |**
**ಕಲಬೆರಕೆ ಜಗದುಸಿರು-ಮಂಕುತಿಮ್ಮ||**

ಪುಲಿಸಿಂಘದುಚ್ಚ್ವಾಸ=ಹುಲಿ+ಸಿಂಹದ+ಉಚ್ಛ್ವಾಸ, ಹಯದುಸಿರು=ಹಯದ+ಉಸಿರು, ಹದ್ದುಯ್ದು=ಹದ್ದ+ಹುಲ್ಲು, ಹಾವಿಲಿಯಸುಲ್ಲು=ಹಾವು+ಇಲಿಯ+ಸುಯ್ಯು,

ಕಲೆತಿರ್ಪವೀಯಲ್ಲ=ಕಲೆತು+ಇರ್ಪುದು+ಈ+ಎಲ್ಲ, ನಾಮುಸಿರ್ವೆಲರಿನಲಿ=ನಾವು+ಉಸಿರ್ವ+ಎಲರಿನಲಿ, ಜಗದುಸಿರು=ಜಗದ+ಉಸಿರು.

ಹಯ=ಕುದುರೆ, ಹುಲ್ಲು=ಉಸಿರು, ಇರ್ಪುದು=ಇರುವುದು, ಉಸಿರ್ವ=ಉಸಿರಾಡುವ, ಎಲರಿನಲಿ=ಗಾಳಿಯಲಿ, ಸುಲ್ಲು=ಉಸಿರು

ಹುಲಿ, ಸಿಂಹ, ಹಸು, ಜಿಂಕೆ, ಕುದುರೆ, ಹುಳು, ಹಾವು, ಇಲಿ, ಹಕ್ಕಿ, ಹದ್ದು ಈ ಎಲ್ಲ ಪ್ರಾಣಿ ಪಕ್ಷಿಗಳು ಉಸಿರಾಡುವ ಗಾಳಿಯೇ ನಾವು ಉಸಿರಾಡುವ ಗಾಳಿಯಲ್ಲಿ ಕಲೆತುಹೋಗಿದೆ. ಹಾಗಾಗಿ ಈ ಜಗತ್ತಿನ ಉಸಿರು ಕಲಬೆರಕೆ ಉಸಿರು ಎನ್ನುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಕೆಲ ಪ್ರಾಣಿಗಳು ಕಾಡಿನಲ್ಲಿ, ಕೆಲ ಪ್ರಾಣಿಗಳು ನಾಡಿನಲ್ಲಿ ವಾಸಿಸುತ್ತವೆ. ಕೆಲವು ನೆಲದ ಮೇಲೆ, ಕೆಲವು ಬಿಲದ ಒಳಗೆ, ಕೆಲವು ಮರದ ಮೇಲೆ. ಕೆಲವು ಗುಹೆಗಳಲ್ಲಿ. ಹೀಗೆ ಬೇರೆ ಬೇರೆ ಕಡೆ ವಾಸಿಸುವ ಪ್ರಾಣಿಗಳೆಲ್ಲವೂ ಉಸಿರಾಡುವ ಗಾಳಿ, ಮಾತ್ರ ಒಂದೇ ಅಲ್ಲವೇ? ಅಷ್ಟೇ ಅಲ್ಲ, ಅವು ಕುಡಿಯುವ ನೀರೂ ಸಹ ಆ ಒಂದೇ ಆಕಾಶದಿಂದ ಬೀಳುವ ಮಳೆಯೇ ಅಲ್ಲವೇ? ಇನ್ನು ಎಲ್ಲ ಪ್ರಾಣಿಗಳಿಗೂ ಆಹಾರಕ್ಕೆ ಆಧಾರಪಡುವುದು, ಎಲ್ಲರಿಗೂ ಅನ್ನಪೂರ್ಣೆಯಾದ ಈ ಭೂ ತಾಯಿಯನ್ನು, ಕೆಲವು ನೇರವಾಗಿ, ಕೆಲವು ಸುತ್ತಿ ಬಳಸಿ (indirect dependency). ಎಲ್ಲ ಪ್ರಾಣಿಗಳ ಮೇಲೆ ಬೀಳುವ ಬೆಳಕು ಮತ್ತು ಶಾಖಕ್ಕೂ ಮೂಲ ಸಹ ನಮಗೆ ಕಾಣುವ ಒಂದೇ ಸೂರ್ಯನದು, ಅಲ್ಲವೇ? ನಾವೂ ಸಹ, ಅಂದರೆ ಮನುಜರೂ ಸಹ ಗಾಳಿ, ನೀರು, ಬೆಳಕು ಮತ್ತು ಶಾಖವನ್ನು ಅದೇ ಮೂಲಗಳಿಂದ ಪಡೆಯುತ್ತೇವೆ.
ಇಲ್ಲಿ ಬೇರೆ ಬೇರೆ ಪ್ರಾಣಿಗಳು ಉಸಿರಾಡುವ ಗಾಳಿ ಯಾವುದು? ನಾವು ಉಸಿರಾಡುವ ಗಾಳಿ ಯಾವುದು, ಮೇಲಿಂದ ಹರಿದು ಬರುವ ನೀರಿಗೆ ಯಾರು ಮೊದಲು ಬಾಯಿಟ್ಟಿದ್ದರು ಎಂದು ಕಂಡುಹಿಡಿದುಕೊಳ್ಳುವುದು

ಸಾಧ್ಯವೇ ಇಲ್ಲ ಅಲ್ಲವೇ? ಅಂದರೆ ನಾವು ಈ ಇಳೆಯಲ್ಲಿ ಇದ್ದು ಹೋಗಲು ಬಂದಿದ್ದೇವೆ ಅಷ್ಟೇ. ಇಲ್ಲಿರುವ ಎಲ್ಲವನ್ನೂ ನಾವು ಇತರೊಂದಿಗೆ ಹಂಚಿಕೊಂಡೇ ಬಾಳಬೇಕು.

ಅದೇ ನೀರು ಬಾರಿ ಬಾರಿ ಆವಿಯಾಗುತ್ತದೆ. ಅದು ಮೋಡವಾಗಿ ಧರೆಗೆ ಮಳೆಯಾಗಿ ಇಳಿಯುವುದು. ಇದು ಒಂದು ಚಕ್ರ. ಈ ಚಕ್ರ ಎಷ್ಟು ದಿನಗಳಿಂದ ಸುತ್ತುತ್ತಿದೆ ಎಂದು ಹೇಗೆ ಹೇಳುವುದು? ಒಂದೊಂದು ಹನಿಯೂ ಬಹಳ ಪುರಾತನವಾದದ್ದು, ಈ ಭೂಮಿಯೂ ಸಹ ಬಹಳ ಪುರಾತನವಾದದ್ದು. ಇಲ್ಲಿ ಬಂದು ಹೋಗುವ ಚರಾಚರಗಳೂ ಸಹ ಬಹಳ ಪುರಾತನವಾದವು. ರೂಪ ಬದಲಾಯಿಸಿಕೊಂಡು ಮತ್ತೆ ಮತ್ತೆ ನೂತನವೆಂಬಂತೆ ಬಂದು ಹೋಗುತ್ತಿವೆ. ಕೆಲವು ಬಂದು ಬೇಗನೆ ರೂಪಾಂತರಗೊಳ್ಳುತ್ತವೆ ಮತ್ತೆ ಕೆಲವು ನಿಧಾನವಾಗಿ ಆಗುತ್ತವೆ.

ಮನುಷ್ಯರಾದ ನಾವೂ ಅಷ್ಟೇ. ಹಿಂದಿನವರು ಮಾಡಿದ್ದನ್ನೇ ನಾವು ಮಾಡುವುದು. ಮಾಡುವ ರೀತಿ ಸ್ವಲ್ಪ ವಿನೂತನವಾಗಿ ಕಾಣುತ್ತದೆ. ಅದೂ ಸಹ ಪುರಾತನದ ಅಡಿಪಾಯದ ಮೇಲೇ ಇರುತ್ತದೆ. ಹೀಗೆ ಈ ಜಗತ್ತೇ ಪುರಾತನ ಮತ್ತು ನೂತನತೆಯ ಒಂದು ಕಲಬೆರಕೆ ಎನ್ನುವುದು ಈ ಮುಕ್ತಕದ ಹೂರಣ.

**ಮುಕ್ತಕ-132** **ರಾಮನುಚ್ಛ್ವಾಸವದಿರದೆ ರಾವಣನೆಡೆಗೆ |**
**ರಾಮನುಂ ದಶಕಂಠನೆಲರನುಸಿರಿರನೆ ||**
**ರಾಮರಾವಣರಿಸಿರ್ಗಳಿಂದು ನಮ್ಮೊಳಗಿರವೇ? |**
**ಭೂಮಿಯಲಿ ಪೋಸತೇನೋ?-ಮಂಕುತಿಮ್ಮ ||**

ರಾಮನುಚ್ಛ್ವಾಸವಲೆದಿರದೆ=ರಾಮನ+ಉಚ್ಛ್ವಾಸವು+ಅಲೆದಿರದೆ, ರಾವಣನೆಡೆಗೆ=ರಾವಣನ ಎಡೆಗೆ,
ದಶಕಂಠನೆಲರನುಸಿರಿರನೆ=ದಶ+ಕಂಠನ+ಎಲರನು+ಉಸಿರಿರನೆ,
ರಾಮರಾವಣರುಸಿರ್ಗಳಿಂದು=ರಾಮ್+ರಾವಣರ+ಉಸಿರುಗಳು+ಇಂದು,
ನಮ್ಮೊಳಗಿರವೇ=ನಮ್ಮೊಳಗೇ+ಇರವೇ, ಮೋಸತೇನೋ=ಹೊಸತು+ಏನೋ. ಎಲರನು=ಗಾಳಿಯನು,
ಉಚ್ಛ್ವಾಸವು=ಶ್ವಾಸದ ಗಾಳಿ, ಪೋಸತೇನೋ=ಹೊಸದೇನೋ?

ರಾಮನು ಉಸಿರಾಡಿದ ಉಸಿರ ರಾವಣ ಉಸಿರಾಡಲಿಲ್ಲವೇ? ಹಾಗೆಯೇ ರಾಮನೂ ಸಹ ರಾವಣನ ಉಸಿರ ಉಸಿರಾಡಿರಬಹುದಲ್ಲವೇ? ಅಂದು ಬೀಸಿದ ಪವನನು ಇಂದೂ ಇರುವುದರಿಂದ ಅಂದು ರಾಮ ರಾವಣರು ಉಸಿರಾಡಿದ

ಉಸಿರು ನಮ್ಮೊಳಗೂ ಇರುವಾಗ ಈ ಭೂಮಿಯಲಿ ಹೊಸತು ಯಾವುದು ಎಂದು ಒಂದು ಪ್ರಶ್ನೆ ಎತ್ತುತ್ತಾರೆ ಮಾನ್ಯ ಗುಂಡಪ್ಪನವರು.

ಈ ಭೂಮಿಯೂ ಬಹಳ ಹಳತು. ಆದರೆ ಪ್ರತಿಬಾರಿ ಉತ್ತಾಗಲೂ ಹೊಸತನದಿಂದ ಮೆರೆಯುವ ಈ ಭೂಮಿ ಹೊಸ ರೂಪ ಧರಿಸುತ್ತದೆ. ಹಾಗೆಯೇ ಈ ಭೂಮಿಯ ಮೇಲೆ ಬೆಳೆಯುವ ಹೊಸ ಬೆಳೆ, ಮರಗಳಲ್ಲಿನ ಹೊಸ ಚಿಗುರು, ಹೂ ಹಣ್ಣುಗಳೂ ಸಹ ಹೊಸದಾಗಿವೆ. ಆದರೆ ಅದರ ಆಧಾರ ಹಳೆಯ ಮರ ಮತ್ತು ಆ ಮರಕ್ಕೆ ಆಧಾರ ಈ ಹಳೆಯ ಇಳೆ. ಹೀಗೆ ಹಳೆಯ ಮತ್ತು ಹೊಸದರ ಸಮ್ಮಿಲನವೇ





ಜೀವನ. ಹಳೆಯದು ಹಾಗೇ ಇದ್ದರೆ ಒಂದು ರೀತಿಯ ಏಕತಾನತೆ ಮೂಡಿ, ಸ್ವಾರಸ್ಯವಿಲ್ಲದ ಜೀವನವಾಗುತ್ತಿತ್ತು. ನಮಗೆ ಮತ್ತು ಈ ಇಳೆಗೆ ಮತ್ತೆ ಮತ್ತೆ ಬಂದು ಹೋಗುವ ಜೀವಿಗಳಿಗೆ ಒಂದು ಹುರುಪನ್ನು, ಒಂದು ಜೀವನೋತ್ಸಾಹವನ್ನು ತುಂಬುವ ಸಲುವಾಗಿ ಈ ರೀತಿ ಹೊಸತು ಹಳತರ ಸಮ್ಮಿಲಿತ ಜೀವನ ಚಕ್ರವನ್ನು ಆ ಪರಮ ಚೇತನ ವಿಧಿಸಿದೆ. ಹಳೆಯ ನೆನಪುಗಳು ಮತ್ತು ಅವುಗಳು ನೀಡುವ ಹೊಸ ಹುರುಪುಗಳೇ ಜೀವನ ಸಾರ.

ಹಾಗೆಯೇ ಬೀಸುವ ಗಾಳಿ, ಬೀಳುವ ಮಳೆ, ಹೊಸ ಬೆಳೆ, ಹೊಸ ಚಿಗುರು, ಹೂ ಹಣ್ಣುಗಳು ಎಲ್ಲವೂ ಸಹ ಹಿಂದೆಯೂ ಇದ್ದವು, ಇಂದೂ ಇವೆ ಮತ್ತು ಮುಂದೆಯೂ ಇರುತ್ತವೆ. ನಾವು ಚಿಕ್ಕಂದಿನಲ್ಲಿ ಘನವಾದ ಮಳೆಗಳನ್ನು ನೋಡಿದ್ದೆವು. ಆದರೆ ಈಗಲೂ ಆ ಮಳೆ ಆ ಮಿಂಚು ಆ ಗುಡುಗುಗಳ ಸದ್ದು ಕೇಳಿದಾಗ ಏನೋ ಒಂದು ಉತ್ಸಾಹ ಮೂಡುತ್ತದೆ. ಇಲ್ಲಿ ಬೀಸುವ ಗಾಳಿ ಇಡೀ ಭೂಮಿಯನ್ನು ಸುತ್ತಿ ಸುತ್ತಿ ಎಷ್ಟು ಕೋಟಿ ಕೋಟಿ ಬಾರಿ ಸುತ್ತಿದೆಯೋ

ಯಾರಿಗೆ ಲೆಕ್ಕ. ಆ ಗಾಳಿ ಕಂಡ ಜನರೆಷ್ಟು, ಆ ಗಾಳಿ ಕಂಡ ಜನರ ನೋವೆಷ್ಟು ನಲಿವೆಷ್ಟು ಚರಿತ್ರೆಯೆಷ್ಟು, ಲೆಕ್ಕವಿದೆಯೇ?

ಆದರೂ ನಾವು ಪ್ರತಿಬಾರಿ ಉಸಿರನೆಳೆದುಕೊಂಡಾಗಲೂ, ಅದು ನಮಗೆ ಹೊಸ ಉಸಿರು. ಆದರೆ ಅದೇ ಉಸಿರು ಸಾವಿರ ಸಾವಿರ ಕೋಟಿ ಬಾರಿ ಒಳಹೊಕ್ಕು ಹೊರಗೆ ಬಂದಂತಹ ಹಳೆಯ ಗಾಳಿಯೇ ಅಲ್ಲವೇ. ಪ್ರತಿಬಾರಿ ನಾವು ಉಸಿರಾಡಿದಾಗಲೂ, ಒಂದು ಚೈತನ್ಯ ತುಂಬುತ್ತದೆ, ಉತ್ಸಾಹ ಮೂಡುತ್ತದೆ. ಆ ಉತ್ಸಾಹವನ್ನು ಕಾಪಾಡಲೋಸುಗವೇ, ಅದರಲ್ಲಿ ಒಂದು ಹೊಸತನವನ್ನು ಕಾಣುವ ಮನೋಭಾವ ನಮಗೆ ಆ ದೇವರು ದಯಪಾಲಿಸಿದ್ದಾನೆ, ಅಲ್ಲವೇ? ಈ ಹಳತು ಹೊಸತುಗಳ ಭಾವ ಕೇವಲ ನಮ್ಮ ಮನೋಭಾವವಷ್ಟೇ! ಎಲ್ಲವೂ ಪುರಾತನವೆಂಬ ಒಂದು ನೀರವತೆಯ ಭಾವಕ್ಕಿಂತ ಎಲ್ಲದರಲ್ಲೂ ಒಂದು ನೂತನತೆಯನ್ನು ಕಾಣುವ ಉಲ್ಲಸಿತ ಮನೋಭಾವ ಒಳ್ಳೆಯದಲ್ಲವೇ. ಅದು ನಮ್ಮನ್ನು ಉತ್ಸಾಹಗೊಳಿಸುತ್ತದೆ ಮತ್ತು ಜೀವನದಲ್ಲಿ ಒಂದು ಆಶಾಭಾವವನ್ನು ತುಂಬುತ್ತದೆ.

ಸೌಂದರ್ಯ ನೋಡುವವನ ಕಣ್ಣಲ್ಲಿ ಎನ್ನುತಾರೆ ಜ್ಞಾನಿಗಳು. ನಾವೂ ಸಹ ಪುರಾತನದ ಅಥವಾ ಹಳತಿನ ತಳಹದಿಯಲ್ಲಿ ಪಲ್ಲವಿಸುವ ಹೊಸತನ್ನು ನೋಡುತ್ತಾ ನಮ್ಮ ನಮ್ಮ ಜೀವನಗಳಲ್ಲಿ ಹೊಸತು ಹಳತುಗಳ ಸಮ್ಮಿಶ್ರ ಅನುಭವವನ್ನು ಪಡೆಯೋಣವೇ?

**ಮುಕ್ತಕ-133**

**ಬಹಿರಂತರಗಳೊಂದು ಭೂತಭವ್ಯಗಳೊಂದು |**
**ಇಹಪರಂಗಳುಮೊಂದು ಚೈತನ್ಯವೊಂದು ||**
**ಬಹುಪಾತ್ರನಾಟಕದಿ ಮಾಯೆ ಶತವೇಷಗಳ |**
**ವಹಿಸಲೀವಳು ಪತಿಗೆ-ಮಂಕುತಿಮ್ಮ.**

ಬಹಿರಂತರಗಳೊಂದು=ಬಹಿರ+ಅಂತರಂಗಗಳು+ಒಂದು,

ಇಹಪರಂಗಳುಮೊಂದು=ಇಹ+ಪರಗಳುಂ+ಒಂದು, ಚೈತನ್ಯೊಂದು=ಚೈತನ್ಯವು+ಒಂದು,

ವಹಿಸಲೀವಳು=ವಹಿಸಲು+ಈವಳು

ಬಹಿರ=ಹೊರಗೆ, ಅಂತರ=ಒಳಗೆ, ಇಹ+ಬದುಕಿದ್ದಾಗಿನ ಜೀವನ, ಪರ=ಬದುಕಿನ ನಂತರದ ಜೀವನ ಒಳಗೂ ಹೊರಗುಗಳು ಒಂದೇ. ಭೂತ ಭವಿಷ್ಯತ್ತುಗಳು ಒಂದೇ. ಇಹ ಪರಗಳು ಒಂದೇ, ಏಕೆಂದರೆ ಇವೆಲ್ಲವೂ ಆಗಿರುವುದು, ಆಗುತ್ತಿರುವುದು ಒಂದೇ ಚೈತನ್ಯದಿಂದ. ಆದರೆ ಈ ಜಗತ್ತನ್ನು ಆವರಿಸಿರುವ ಮಾಯೆಯೆಂಬ ಮಾಯಾಂಗನೆ ಆ ಚೈತನ್ಯಕ್ಕೆ ಹಲವಾರು ರೂಪಗಳನ್ನು ವಹಿಸಲು ಕೊಡುತ್ತಾಳೆ, ಎಂದು ಈ ಮುಕ್ತಕದಲ್ಲಿ ಮಾನ್ಯ ಗುಂಡಪ್ಪನವರು ಪ್ರಸ್ತಾಪಿಸುತ್ತಾರೆ.

ಇಡೀ ಬ್ರಹ್ಮಾಂಡವೆ ಆ ಪರಮಾತ್ಮ ಚೈತನ್ಯದಿಂದಾಗಿದೆ, ಎಲ್ಲದರಲ್ಲೂ ಆ ಚೈತನ್ಯವೇ ತುಂಬಿದೆ, ಆ ಚೈತನ್ಯವೇ ನಿವಸಿಸಿದೆ ಎಂದ ಮೇಲೆ ಒಳಗೇನು ಹೊರಗೇನು ನೀ ಮಾಯೆಯೋ ನಿನ್ನೊಳು ಮಾಯೆಯೋ" ಎಂದು ಪುರಂದರ ದಾಸರಿಗೆ ಈ ಸಂದೇಹ ಬಂದಿತ್ತು ಎಂದ ಮೇಲೆ ನಾವೆಷ್ಟರವರು? ಹಿಂದೆ ನಡೆದದ್ದೂ ಮುಂದೆ ನಡೆಯುವುದೂ ಸಹ, ಆ ಪರಮ ಚೈತನ್ಯದ ಇಂಬಿನಿಂದಲೇ. ಆ ಪರಮಚೈತನ್ಯವೇ ಇಹದಲ್ಲೂ ಪರದಲ್ಲೂ ಇದೆ. ಆದರೆ ಈ ಜಗತ್ತು ಒಂದು ಮಾಯೆಯಿಂದ ಆವರಿಸಿದೆ. ಮಾಯೆಯೆಂದರೆ ಒಂದು ವಸ್ತುವಿನ ನಿಜಸ್ವರೂಪ ಬಯಲಾಗದೆ ಬೇರೆ ಏನೋ ಎಂಬಂತೆ ತೋರುವುದು. ಮಾಯೆ ಆವರಿಸಿರುವ ಕಾರಣದಿಂದಲೇ ಪ್ರತಿಯೊಬ್ಬರಿಗೂ ಇಡೀ ಜಗತ್ತೇ ಬೇರೆ ಬೇರೆ ರೀತಿ ಕಂಡದ್ದರಿಂದಲೇ, ಇಷ್ಟೊಂದು ಮತಗಳು, ಬೇರೆ ಬೇರೆ ವ್ಯಾಖ್ಯಾನಗಳು, ಬೇರೆ ಬೇರೆ ಅಭಿಪ್ರಾಯಗಳು. ಒಂದೇ ವಸ್ತುವಿಗೆ ಸಾವಿರಾರು ಪರಿಭಾಷೆಗಳು.

ಒಂದೇ ಆಗಿರುವ ಆ ಪರಮ ಚೈತನ್ಯವೇ ಎಲ್ಲ ರೂಪಗಳನ್ನೂ ಧರಿಸಿರುವುದರಿಂದ "ಬಹು ಪಾತ್ರನಾಟಕದಿ ಮಾಯೆ ಶತವೇಷ' ಎಂದರು ಗುಂಡಪ್ಪನವರು. "ಯತಃ ಸರ್ವಾಣಿ ಭೂತಾನಿ ಭವಂತ್ಯಾದಿ ಯುಗಾಗಮೆ" ಎಂದು ಪರಮಾತ್ಮ ಸ್ವರೂಪವನ್ನು ವಿವರಿಸುವಾಗ ಭೀಷ್ಮಪಿತಾಮಹರು ಧರ್ಮರಾಯನ ಪ್ರಶ್ನೆಗೆ ಉತ್ತರವೀಯುತ್ತಾ ಹೇಳುತ್ತಾರೆ. ಅಂದರೆ ಎಲ್ಲವೂ, ಎಲ್ಲ ರೂಪಗಳೂ ಅವನಿಂದಲೇ ಹೊರಟು ಅವನಿಂದಲೇ ಆಗಿ ಅವನ ಶಕ್ತಿಯಿಂದಲೇ ಜೀವಿಸುತ್ತಿವೆ. ಎಲ್ಲವೂ ಒಂದೇ ಆದರೂ ಮಾಯೆಯಿಂದ ನಮಗೆ ಬೇರೆ ಬೇರೆಯಾಗಿ ಕಾಣುತ್ತಿದೆ. ಆ ಪರಮ ಚೇತನ ಬೇರೆ ಬೇರೆಯಾಗಿ ಕಾಣುವುದಕ್ಕೆ ಮಾಯೆಯೇ ಕಾರಣ ಎನ್ನುವ ಅರ್ಥದಲ್ಲಿ ವಹಿಸಲೀವಳು ಪತಿಗೆ" ಎಂದು, ಮಾಯೆ ತನ್ನ ಪತಿಯಾದ ಆ ಪರಮಾತ್ಮನಿಗೆ ಭಿನ್ನ ಭಿನ್ನವಾದ ವೇಷಗಳನ್ನು ಧರಿಸುವಂತೆ ಮಾಡಿದ್ದಾಳೆ ಎನ್ನುತ್ತಾರೆ ನಮ್ಮ ಡಿ.ವಿ.ಜಿ.

ವಾಚಕರೆ ನಾವು ಮಾಯೆಯಿಂದಾವೃತವಾದ ಈ ಭಿನ್ನ ಭಿನ್ನವಾಗಿ ಕಾಣುವ ಜಗತ್ತನ್ನು ನೋಡುತ್ತಾ, ಇದು ಮಾಯೆ ಎಂದು ಅರಿತಾಗ, ನಮಗೆ ಅಂತಃದರ್ಶನವಾದಾಗ ಆ ಪರಮಾತ್ಮನ ನಿಜರೂಪ ಅರಿವಾಗುತ್ತದೆ. ಅಂತಹ ಅರಿವನ್ನು ಪಡೆಯುವ ದಾರಿಯಲ್ಲಿ ನಾವೂ ಸಹ ಮುನ್ನಡೆಯೋಣವೇ?





# ವಿಶ್ವಕೇಂದ್ರ ನೀನು 134-138

**ಮುಕ್ತಕ-134**

**ಏಕದಿಂದಲನೇಕ ಮತ್ತನೇಕದಿಂದಲೇಕ |**
**ವೀ ಕ್ರಮವೇ ವಿಶ್ವದಂಗಾಂಗಸಂಬಂಧ ||**
**ಲೋಕದಲಿ ಜಾತಿಯಲ್ಲಿ ವ್ಯಕ್ತಿಯಲಿ ಸಂಸ್ಥೆಯಲಿ |**
**ಸಾಕಲ್ಯದರಿವಿರಲಿ-ಮಂಕುತಿಮ್ಮ ||**

ಏಕದಿಂದಲನೇಕ=ಏಕದಿಂದಲಿ+ಅನೇಕ, ಮತ್ತನೇಕದಿಂದಲೇಕವೀ=ಮತ್ತೆ+ಅನೇಕದಿಂದಲಿ+ಏಕವು+ಈ, ವಿಶ್ವದಂಗಾಂಗಸಂಬಂಧ=ವಿಶ್ವದ+ಅಂಗಾಂಗ+ಸಂಬಂಧ, ಸಾಕಲ್ಯದರಿವಿರಲಿ=ಸಾಕಲ್ಯದ+ಅರಿವಿರಲಿ.

ಸಾಕಲ್ಯದ=ಏಕತೆಯ, ಸಮಾನತೆಯ

ಏಕದಿಂದ ಅನೇಕ ಮತ್ತು ಅನೇಕದಿಂದ ಏಕ. ಇದೇ ಕ್ರಮವೇ ವಿಶ್ವದ ಎಲ್ಲಾ ಅಂಗಗಳ ಸಂಬಂಧ. ಹಾಗಿರುವಾಗ ಲೋಕದಲ್ಲಿ ಜಾತಿಯಲ್ಲಿ ವ್ಯಕ್ತಿಯಲ್ಲಿ ಮತ್ತು ಈ ಜಗತ್ತಿನ ಎಲ್ಲ ಸಂಸ್ಥೆಗಳಲ್ಲಿ ಸಕಲದಲ್ಲೂ, ಈ ಒಂದು ವಿಧಿ, ಕ್ರಮ ಅಥವಾ ವ್ಯವಸ್ಥೆ ಇರಬೇಕು ಎಂದು ಮಾನ್ಯ ಗುಂಡಪ್ಪನವರು ಆದೇಶಿಸುತ್ತಿದ್ದಾರೆ, ಈ ಮುಕ್ತಕದಲ್ಲಿ.

ಇಡೀ ಜಗತ್ತೇ ಏಕದಿಂದ ಆದದ್ದು. ಅದು ಅನೇಕವಾಗಿ ಹರಡಿದೆ. ಅದರೂ ಎಲ್ಲವೂ ತಮ್ಮ ತಮ್ಮ ಅಸ್ತಿತ್ವವನ್ನು ಮತ್ತು ತಮ್ಮ ರೂಪವನ್ನು ಹಲವಂತೆ ತೋರಿದೆ. ಈ ಭೂಮಿ, ಸೂರ್ಯ, ಸೂರ್ಯಮಂಡಲಗಳು, ಕ್ಷೀರಪಥಗಳು, ಆಕಾಶಗಂಗೆಗಳು ಎಲ್ಲವೂ ಸಹ ಪ್ರತ್ಯೇಕ ಪ್ರತ್ಯೇಕವಾಗಿದ್ದರೂ, ಏಕ ಮೂಲದಿಂದಲೇ ಉದ್ಭವವಾಗಿದೆ. ಬೇರೆ ಬೇರೆಯಾಗಿ ನೋಡಿದಾಗ ಬೇರೆ ಬೇರೆಯಾಗಿಯೂ ಸಮಗ್ರವಾಗಿ ನೋಡಿದರೆ ವಿಶ್ವದ ಸಮಗ್ರ ರೂಪ ಕಾಣುತ್ತದೆ.

ಈ ಏಕದಿಂದ ಅನೇಕತೆಗೆ ಒಂದು ದೃಷ್ಟಾಂತವನ್ನು ನೋಡೋಣ. ಒಂದು ಬೃಹತ್ ಮರ. "ಒಂದೇ" ಒಂದು ಬೀಜದಿಂದ ಉದ್ಭವವಾದ ಮರ. ಪ್ರತೀ ವರ್ಷ ಹೊಸ ಚಿಗುರನ್ನು ತಳೆದು, ಹೂ ಬಿಟ್ಟು, ಕಾಯಿ ಬಿಟ್ಟು ಹಣ್ಣಾಗಿ ಉದುರುತ್ತದೆ. ಒಂದೇ ಮರದಿಂದ ಲಕ್ಷಾಂತರ ಬೀಜಗಳು ಉತ್ಪತ್ತಿಯಾಗುತ್ತವೆ. ಪ್ರತಿಯೊಂದು ಬೀಜದಿಂದಲೂ ಮತ್ತೊಂದು ಬೃಹತ್ ಮರವಾಗುವ ಸಂಭವ. ಇದು ಪ್ರತಿಯೊಂದು ಜೀವಿಯಲ್ಲೂ ಸಹಜ, ಮನುಷ್ಯನನ್ನೂ ಸೇರಿ.

ಇದನ್ನೇ ಮಾನ್ಯ ಗುಂಡಪ್ಪನವರು "ವಿಶ್ವದಂಗಾಂಗಸಂಬಂಧ" ಎಂದು ಕರೆದರು. ಈ ಏಕದಿಂದನೇಕದ ಮತ್ತು ಅನೇಕದಿಂದೇಕದ ಪ್ರಕ್ರಿಯೆ ಈ ಜಗತ್ತಿನ ಎಲ್ಲ ಅಂಗಗಳಿಗೂ ಅನ್ವಯಿಸುತ್ತದೆ ಎನ್ನುತ್ತಾರೆ. ಒಂದು ಅಂದರೆ ಏಕವಾದ ಆ ಪರಮಾತ್ಮನಿಂದಲೇ ಎಲ್ಲವೂ (ಹಲವು) ಆಗಿದೆ ಎನ್ನುವುದು ವೇದಾಂತದ ವಿಚಾರ.

ನಾವು ವಾಸಿಸುವ ಈ ಸಮಾಜ ಮತ್ತು ಈ ಸಮಾಜದ ವ್ಯವಸ್ಥೆಯನ್ನು ನೋಡೋಣ. ಎಲ್ಲರೂ ಸಮಾನರು, ಎಲ್ಲರಿಗೂ ಈ ಸಮಾಜದಲ್ಲಿ ಶಾಂತಿಯಿಂದ ಸಮಾನವಾಗಿ ಬಾಳಲು ಹಕ್ಕಿದೆ. ಯಾವುದೇ "ಒಂದು"

ಅಥವಾ "ಒಬ್ಬ" ವ್ಯಕ್ತಿಯ ಹಿತಕ್ಕೆ ಈ ಸಮಾಜವಲ್ಲ ಎಂಬ ಅನೇಕದ ಹಿತವನ್ನು ಬಯಸುವ ಸಿದ್ಧಾಂತದ ಮೇಲೆ ನಮ್ಮ ಸಮಾಜ ನಿರ್ಮಾಣವಾಗಿದೆ. ಒಂದು ಮನೆಯಲ್ಲಿ "ಒಬ್ಬ" ಹಿರಿಯ. ಅವನು ಯೋಚಿಸುವುದು ಯೋಚಿಸಬೇಕಾದದ್ದು, ಆ ಮನೆಯ ಹಲವರ ಹಿತ, ಮತ್ತೆ ಆ ಹಲವರು ಆ ಒಬ್ಬನಿಗೆ ಪೂರಕವಾಗಿದ್ದರೆ, ಆ ಮನೆಯಲ್ಲಿ ನೆಮ್ಮದಿ ಶಾಂತಿ ಮತ್ತು ಸುಖ.

ಇದನ್ನು ನಾವು ಒಂದು ಸಂಸ್ಥೆಗೆ ಅನ್ವಯಿಸಿದರೆ, ಸಂಸ್ಥೆಯ ಮುಖ್ಯಸ್ಥನ ಆದೇಶದ ಮೇರೆಗೆ ನಡೆಯುವುದು ಆ ಸಂಸ್ಥೆಯ ಎಲ್ಲಾ ಕೆಲಸ ಕಾರ್ಯಗಳು. ಆದೇಶ ಸರಿಯಿದ್ದರೆ, ಕೆಲಸ ಸಮರ್ಪಕ. ಹಾಗೆಯೇ ಈ ಎಲ್ಲರೂ (ಹಲವರು) ಸಮರ್ಪಕವಾಗಿ ಕೆಲಸ ಮಾಡಿದರೆ ಅವನಿಗೆ ಒಳ್ಳೆಯ ಹೆಸರು. ಹೀಗೆ ಏಕದ ಮತ್ತು ಅನೇಕದ ಪರಸ್ಪರ ಪೂರಕತೆಗಳು ನಮಗೆ ಜಗತ್ತಿನ ಎಲ್ಲದರಲ್ಲೂ ಕಾಣುತ್ತದೆ. ಒಬ್ಬರು(ಏಕವು) ಹಲವರ (ಅನೇಕದ) ಮೇಲೆ ಮತ್ತು ಹಲವರು ಒಬ್ಬರ ಮೇಲೆ ಆಧಾರ ಪಟ್ಟಿರುವುದು ಸಹಜ ಕ್ರಮ. ಈ ಸಹಜತೆ ಎಲ್ಲದರಲ್ಲೂ ಇದೆ. ಅದನ್ನು ಅರಿತಿರಬೇಕು ಎನ್ನುವುದೇ ಈ ಮುಕ್ತಕದ ಹೂರಣ.

**ಮುಕ್ತಕ-135** **ಸಂಪೂರ್ಣ ಗೋಳದಲ್ಲಿ ನೆನೆದೆಡೆಯ ಕೇಂದ್ರವಲ |**
**ಕಂಪಿಸುವ ಕೇಂದ್ರ ನೀಂ ಬ್ರಹ್ಮ ಕಂದುಕದಿ ||**
**ಶಂಪಾತರಂಗವದರೊಳು ತುಂಬಿ ಪರಿಯುತಿದೆ |**
**ದಂಬೋಳಿ ನೀನಾಗು-ಮಂಕುತಿಮ್ಮ ||**

ನೆನೆದೆಡೆಯೆ=ನೆನೆದ+ಎಡೆಯೆ, ಶಂಪಾತರಂಗವದರೊಳು=ಶಂಪಾತರಂಗವು+ಅದರೊಳು
ಶಂಪಾತರಂಗ=ಮಿಂಚಿನ ಅಲೆಗಳು, ದಂಬೋಳಿ=ವಜ್ರಾಯುಧ.

ಈ ಭೂಮಿಯಲ್ಲಿ ಪ್ರತಿಯೊಂದು ಕಣ ಕಣವೂ ಮಿಂಚಿನ ತರಂಗಗಳ ಕೇಂದ್ರ ಬಿಂದುವಿನಂತೆ, ಬ್ರಹ್ಮ ಸೃಷ್ಟಿ ಮಾಡಿದ ಈ ಭೂಮಂಡಲದಲ್ಲಿ ನೀನೂ ಸಹ ಒಂದು ಕೇಂದ್ರ ಬಿಂದು. ನಿನ್ನಲ್ಲೂ ಮಿಂಚಿನ ತರಂಗಗಳು ಹರಿಯುತ್ತಿವೆ. ಹೀಗೆ ಹರಿಯುವ ಎಲ್ಲ ತರಂಗಗಳನ್ನೂ ಒಟ್ಟು ಮಾಡಿ ನಿನ್ನ ಬುದ್ಧಿಯನ್ನು ವಜ್ರಾಯುಧವನ್ನಾಗಿಸಿಕೊಂಡು

ಸಾಧನೆಯನ್ನು ಮಾಡು ಎಂದು ವಾಚಕರಿಗೆ ಒಂದು ಸೂಚನೆಯನ್ನು ನೀಡಿದ್ದಾರೆ ಈ ಮುಕ್ತಕದಲ್ಲಿ ಮಾನ್ಯ ಗುಂಡಪ್ಪನವರು.

ಈ ಇಡೀ ಪ್ರಪಂಚವೇ ಅಣುಗಳಿಂದಾದುದು. ಪ್ರತಿ ಅಣುವೂ ಒಂದು ಶಕ್ತಿ ಕೇಂದ್ರ, ಎಲ್ಲಾ ಶಕ್ತಿ ಕೇಂದ್ರಗಳು ಒಟ್ಟಾರೆಯಾಗಿ ಒಂದು ಶಕ್ತಿ ಸಮೂಹ. ನಾವೆಲ್ಲಾ ಅಂತಹ ಶಕ್ತಿ ಸಮೂಹಗಳು. ಎಲ್ಲ ಕಡೆಯೂ ಹರಿದಂತೆ ನಮ್ಮಲ್ಲೂ ಆ ಅಣು ಸಮೂಹದ ಶಕ್ತಿ ಹರಿಯುತಿದೆ. ಆ ಶಕ್ತಿಯೇ ನಮಗೆ ಕಾರ್ಯ ಪ್ರವೃತ್ತತೆಯನ್ನು ನೀಡುತ್ತದೆ. ನಮ್ಮ ದೇಹವೆಲ್ಲವೂ ಕೇವಲ ಜೀವಾಣುಗಳಿಂದ ಆಗಿವೆ. ಪ್ರತಿಯೊಂದು ಜೀವಾಣುವೂ ಒಂದು ಶಕ್ತಿ ಕೇಂದ್ರ ಈ ಜೀವಾಣುಗಳ ಒಟ್ಟು ಸಮೂಹವೇ ನಾವು.

ಇದು ಮಾನವರಾದ ನಮಗಷ್ಟೇ ಸೀಮಿತವಲ್ಲ. ಸಕಲ ಚರಾಚರವೂ ಸಹ ಹೀಗೇ ಮಾಡಲ್ಪಟ್ಟಿದೆ. ಒಂದು ಬೀಜವು ತನ್ನದೇ ಶಕ್ತಿಯಿಂದ ಮೊಳೆತು, ಸಸಿಯಾಗಿ, ಗಿಡವಾಗಿ, ಮರವಾಗಿ, ಹೆಮ್ಮರವಾಗಿ ನೂರಾರು





ವರ್ಷಗಳ ಕಾಲ ಜೀವಿಸುತ್ತದೆ. ಇದು ಒಂದು ದೃಷ್ಟಾಂತ ಅಷ್ಟೇ. ಈ ಜಗತ್ತಿನ ಎಲ್ಲವೂ ಹಾಗೇಯೇ! ಒಂದು ಸಣ್ಣ ಇರುವೆಯಿಂದ ಹಿಡಿದು ಒಂದು ಬೃಹತ್ತಾದ ಆನೆಯವರೆಗೆ, ಎಲ್ಲವೂ ಒಂದೊಂದು ಶಕ್ತಿ ಬಿಂದುಗಳೇ ಅಲ್ಲವೇ?

ವಾಚಕರೆ, ಆ ಶಕ್ತಿಯು ಕೇವಲ ದೈಹಿಕ ಶಕ್ತಿಯೆಂದು ಅರ್ಥೈಸಬಾರದು. ಏಕೆಂದರೆ ಈ ದೈಹಿಕ ಶಕ್ತಿ ಮತ್ತು ಮಾನಸಿಕ ಶಕ್ತಿಗಳು ಒಂದಕ್ಕೊಂದು ಪೂರಕವಲ್ಲವೇ? ಮನಸ್ಸು ದೃಢವಾಗಿದ್ದರೆ ದೇಹವೂ ದೃಢ ಹಾಗೆಯೇ ಮನಸ್ಸು ದೃಢವಾಗಿದ್ದರೆ ದೇಹಾರೋಗ್ಯವೂ ಉತ್ತಮ. ಹಾಗಾಗಿ ನಮ್ಮಲ್ಲಿ "ಶಂಪಾತರಂಗವದರೊಳು ತುಂಬಿ ಪರಿಯುತಿದೆ" ಎನ್ನುವಂತೆ ಒಂದು ಮಿಂಚಿನಂತ ಶಕ್ತಿ ಹರಿಯುತ್ತದೆ.

ನಮ್ಮ ಶಕ್ತಿಯನ್ನು ಗುರುತಿಸಿ, ಕೇಂದ್ರೀಕರಿಸಿ, ಎಲ್ಲ ಶಕ್ತಿಯನ್ನೂ ನಮ್ಮ ಗುರಿಯನ್ನು ತಲುಪಲು ಉಪಯೋಗಿಸಿ ವಜ್ರವು ಕಲ್ಲನ್ನು ಕತ್ತರಿಸುವಂತೆ, ನಮ್ಮ ಧ್ಯೆಯ ಸಾಧನೆಯಲ್ಲಿ ಬರುವ ಅಡ್ಡಿಗಳನ್ನೆಲ್ಲ ತೊಲಗಿಸಿ, ನಮ್ಮ ದಾರಿಯನ್ನು ಸುಗಮವಾಗಿಸಿಕೊಳ್ಳಬೇಕು. ನಾವು ನಮ್ಮ ಕ್ಲಿಷ್ಟವಾದ ಪರಿಸ್ಥಿತಿಯಿಂದ ಹೊರಬರಲು, ಕ್ಲಿಷ್ಟವಾದ ಸಮಸ್ಯೆಗಳನ್ನು ಪರಿಹರಿಸುವಂತಹ ವಜ್ರಾಯುಧವಾಗಬೇಕು, ಎನ್ನುವುದೇ ಈ ಮುಕ್ತಕದ ಹೂರಣ. ಅಂತಹ ಪ್ರಯತ್ನವನ್ನು ನಾವು ಮಾಡಬೇಕು.

**ಮುಕ್ತಕ-136** **ವಿಶ್ವಪರಿಧಿಯದೆಲ್ಲೋ ಸೂರ್ಯಚಂದ್ರರಿನಾಚೆ ।**
**ವಿಶ್ವಕೇಂದ್ರವು ನೀನೆ, ನೀನೆಣಿಸಿದೆಡೆಯೆ ॥**
**ನಿಶ್ವಸಿತ ಸಂಬಂಧ ನಿನಗಂ ದಿಗಂತಕಂ ।**
**ಪುಷ್ಪವಾಗಿರು ನೀನು-ಮಂಕುತಿಮ್ಮ ॥**

ವಿಶ್ವಪರಿಧಿಯದೆಲ್ಲೊ=ವಿಶ್ವದ+ಪರಿಧಿ+ಅದು+ಎಲ್ಲೊ, ಸೂರ್ಯಚಂದ್ರರಿನಾಚೆ=ಸೂರ್ಯ+ಚಂದ್ರರಿನ+ಆಚೆ,
ನೀನೆಣಿಸಿದೆಡೆಯೆ=ನೀನು+ಎಣಿಸಿದ+ಎಡೆಯೇ,
ನಿಶ್ವಸಿತ=ಉಸಿರಾಡುವ, ದಿಗಂತ=ಆಕಾಶದ ವ್ಯಾಪ್ತಿ,

ನೀನು ಒಂದು ಕೇಂದ್ರ ಬಿಂದು. ಇಡೀ ವಿಶ್ವದ ಪರಿಧಿಯಲ್ಲಿ, ಸೂರ್ಯ ಚಂದ್ರರಿಗೂ ಆಚೆ ನೀನು ಎಲ್ಲಿ ನಿಂತರೆ ಅಲ್ಲಿ ನೀನು ಒಂದು ಬಿಂದುವಾಗಿರುವೆ. ನಿನಗೂ ದಿಗಂತಕ್ಕೂ ನಿನ್ನ ಉಸಿರಾಟದ ಸಂಬಂಧವಿದೆ. ಹಾಗಾಗಿ ನೀನು ನಿನ್ನ ಶಕ್ತಿಯ ಸುಗಂಧವನ್ನು ಎಲ್ಲೆಡೆ ಹರಡು ಎಂದು ಒಂದು ಆದೇಶವನ್ನು ಕೊಡುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ನಾನು ಒಂದೆಡೆ ನಿಂತರೆ, ಎನ್ನ ಸುತ್ತಲೂ ಜಗತ್ತು. ಅಂದರೆ ನಾನು ಒಂದು ಬಿಂದು. ಇದೇ ರೀತಿ ಎಲ್ಲರೂ ಒಂದೊಂದು ಬಿಂದುಗಳು. ಸೂರ್ಯ ಚಂದ್ರರು, ಎಲ್ಲ ಆಕಾಶಕಾಯಗಳು, ಈ ಜಗತ್ತಿನ ಎಲ್ಲ ಜೀವಿಗಳೂ ಸಹ ಜಗತ್ತಿನಲ್ಲಿ ಒಂದೊಂದು ಬಿಂದುಗಳೇ ಅಲ್ಲವೇ? ನಾವು ಎಲ್ಲಿ ನಿಂತರೆ ಅಲ್ಲಿ ಒಂದು ಬಿಂದು. ಸುತ್ತಲೂ ಜಗತ್ತು. ನಾನು ನಿಂತಲ್ಲಿಂದಲೇ ನನಗೆ ಈ ಜಗತ್ತಿನೊಂದಿಗೆ ಸಂಬಂಧವುಂಟಾಗುತ್ತದೆ. ಆದರೆ ಆ ಸಂಬಂಧ

"ನಿಶ್ವಸಿತ ಸಂಬಂಧ" ಎಂದು ಮಾನ್ಯ ಗುಂಡಪ್ಪನವರು ಹೇಳುತ್ತಾರೆ. ಎಂದರೆ ನಮ್ಮ ನಿಶ್ವಾಸ ಉಚ್ಛಾಸಗಳು ನಡೆಯುತ್ತಿರುವ ತನಕ ನಮಗೆ ನಮ್ಮ ಸುತ್ತಲಿರುವ ಈ ಜಗತ್ತಿನೊಡನೆ ಭೌತಿಕ ಸಂಬಂಧ ಮತ್ತು ದಿಗಂತದವರೆಗೆ ನಮ್ಮ ಮಾನಸಿಕ ಮತ್ತು ಬೌದ್ಧಿಕ ಸಂಬಂಧಗಳು ಇರುತ್ತವೆ. ಎಂದು ಆ ಶ್ವಾಸ ನಿಲ್ಲುತ್ತದೋ ಅಂದು ಈ ಸಂಬಂಧಗಳಿಗೆಲ್ಲಾ ಒಂದು ರೀತಿಯ ಅಂತ್ಯ

ನಾವು ನಮ್ಮ ಸುತ್ತಲಿನ ಜಗತ್ತಿನೊಡನೆ ಇರುವ ಸಂಬಂಧಗಳನ್ನು ಒಂದು ಬಾರಿ ಪರೀಕ್ಷಿಸಿ ನೋಡಿದರೆ ಅದು ಎಂತಹ ಸಂಬಂಧ ಎಂದು ನಮಗೆ ಅರ್ಥವಾಗಬೇಕು. ಅದು ಪ್ರೀತಿಯದೋ? ಸ್ವಾರ್ಥದ್ದೋ? ದ್ವೇಷದ್ದೋ? ಶುದ್ಧತೆಯದ್ದೋ? ಅನುರಾಗದ್ದೋ? ಎಂದು. ನಿಂತ ಕಡೆಯಿಂದಲೇ ನಾವು ನಮ್ಮ ಪರಿಸರ ಸಮಾಜ ಮತ್ತು ಜಗತ್ತಿನೊಡನೆ ಹಲವಾರು ವಿಧವಾದ ಸಂಬಂಧಗಳನ್ನು ಬೆಳೆಸಿಕೊಳ್ಳುತ್ತೇವೆ.

ಕೆಲವರೊಂದಿಗೆ ಸ್ವಾರ್ಥರಹಿತ ಪ್ರೀತಿ ಮತ್ತೆ ಕೆಲವರೊಂದಿಗೆ ಸ್ವಾರ್ಥಪೂರಿತ ಪ್ರೀತಿಯ ಸಂಬಂಧ, ಕೆಲವರೊಂದಿಗೆ ಸಕಾರಣ ದ್ವೇಷ (ಅದು ಒಳ್ಳೆಯದೋ ಅಥವಾ ಕೆಟ್ಟದ್ದೋ ಎಂಬುದು ಒತ್ತಟ್ಟಿಗೆ ಇರಲಿ) ಕೆಲವರೊಂದಿಗೆ ವಿನಾಕಾರಣ ದ್ವೇಷ. ಹೀಗೆ ಹಲವಾರು ರೀತಿಯ ಸಂಬಂಧಗಳು ಇರುತ್ತವೆ. ಆದರೆ ಜೀವನದಲ್ಲಿ ಪ್ರತೀ ಪ್ರಾಣಿಯು ಬಯಸುವ ಆನಂದ ಮತ್ತು ಸುಖಗಳ ಪ್ರಮಾಣ ಮತ್ತು ಗುಣ ಅವು ತಮ್ಮ ಸುತ್ತಲಿನ ಜಗತ್ತಿನೊಂದಿಗೆ ಇಟ್ಟಿರುವ ಸಂಬಂಧ ಸಂಪರ್ಕಗಳ ಮೇಲೆ ಆಧಾರಪಟ್ಟಿರುತ್ತದೆ.

ನಮ್ಮ ಗುಣ ಒಳ್ಳೆಯದಾದರೆ ಈ ಜಗತ್ತೇ ನಮಗೆ ಒಳ್ಳೆಯದಾಗಿ ಕಾಣುತ್ತದೆ. ಮೊದಲಲ್ಲಿ ಸ್ವಲ್ಪ ಕಠಿಣ ಎನಿಸಬಹುದು. ಕ್ರಮೇಣ ಸರಿಹೋಗುವುದು. ಏಕೆಂದರೆ "ನಾವು ಏನನ್ನು ಪಡೆದುಕೊಂಡಿರುತ್ತೇವೆಯೋ ಅದನ್ನೇ ಕೊಡಲು ಸಾಧ್ಯ ಮತ್ತು ಏನನ್ನು ನೀಡುತ್ತೇವೆಯೋ ಅದನ್ನೇ ಪಡೆಯಲು ಸಾಧ್ಯ ಹಾಗಾಗಿ ನಮಗೆ ಈ ಜಗತ್ತಿನಿಂದ ಒಳ್ಳೆಯದೆ" ಬೇಕಾದರೆ ನಾವೂ ಸಹ ನಮ್ಮ ಸುತ್ತಲಿನ ಜಗತ್ತಿಗೆ ಒಳ್ಳೆಯದನ್ನೇ ನೀಡಿದರೆ ನಮಗದು ಸಿಗುತ್ತದೆ, ಇದನ್ನೇ ಮಾನ್ಯ ಗುಂಡಪ್ಪನವರು "ಪುಷ್ಪವಾಗಿರು ನೀನು" ಎಂದು ಒಂದು ಸೂಕ್ತ ಸಲಹೆಯನ್ನು ನೀಡಿ, ನೀನು ಸಭ್ಯತೆಯ, ಪ್ರೀತಿಯ, ಜ್ಞಾನದ, ಸೌಹಾರ್ದತೆಯ ಸುಗಂಧವನ್ನು ಈ ಜಗಕ್ಕೆ ನೀಡುವಂಥವನಾಗು ಎಂದು ಒಂದು

ಆದೇಶವನ್ನು ಈ ಮುಕ್ತಕದಲ್ಲಿ ನೀಡಿದ್ದಾರೆ. ವಾಚಕರೆ ನಮಗೇನು ಬೇಕು ಎನ್ನುವುದು ನಮಗೆ ತಿಳಿದಿರಬೇಕು. ನಾವೂ ಸಹ ಅದನ್ನು ನೀಡಲು ಸಿದ್ಧರಿರಬೇಕು. ಆಗ ನಾವು ನಿಂತ ಬಿಂದುವಿನಿಂದಲೇ ನಮಗೆ ಜಗತ್ತು ಸುಂದರವಾಗಿ ಕಾಣುವುದು.

**ಮುಕ್ತಕ-137** **ನಾನೆನುವವನೆ ವಿಶ್ವಚಕ್ರನಾಭಿಯವಂಗೆ |**
**ಕಾಣಬಹ ದಿಗ್ವಿವರ ಚಕ್ರನೇಮಿಪಥ ||**
**ಅನಂತ್ಯವೀ ಜಗಚ್ಚಕ್ರನಾಭಿಕ್ರಮತೆ |**
**ತಾನೊಂದೆ ಸತ್ವವದು-ಮಂಕುತಿಮ್ಮ ||**

ನಾನೆನುವವನೆ=ನಾನು+ಎನುವವನೆ, ವಿಶ್ವಚಕ್ರನಾಭಿಯವಂಗೆ=ವಿಶ್ವ+ಚಕ್ರ+ನಾಭಿ+ಅವಂಗೆ, ದಿಗ್ವಿವರ=ದಿಕ್+ವಿವರ, ಅನಂತ್ಯವೀ=ಅನಂತ್ಯವು+ಈ, ಜಗಚಕ್ರನಾಭಿಕ್ರಮತೆ=ಜಗತ್+ಚಕ್ರ+ನಾಭಿ+ಕ್ರಮತೆ, ತಾನೊಂದೆ=ತಾನು+ಒಂದೆ.





ಚಕ್ರನೇಮಿಪಥ=ಬಂಡಿ ಚಕ್ರದ ಸುತ್ತೂ ಬಳಸಲ್ಪಟ್ಟಿರುವ ಕಬ್ಬಿಣದ ಬಳೆ, ನಾಭಿ=ಕೇಂದ್ರ ಬಿಂದು

ನಾನು ಎಂದು ಯಾರಾದರೂ ಅಂದರೆ ಅವನು ಅವನ ಮಟ್ಟಿಗೆ ಅವನ ಸುತ್ತಲಿರುವ ಜಗತ್ತಿಗೆ ಒಂದು 'ಜಗಚ್ಚಕ್ರಕ್ಕೆ ನಾಭಿ"ಯಂತಾಗುತ್ತಾನೆ. ಅವನು ನೋಡುತ್ತಿರುವುದು ಜಗತ್ತಿನ ಚಕ್ರದ ಅನಂತ ಉರುಳಾಟ. ಅದೊಂದೇ ಜೀವನದ ತಿರುಳು ಎನ್ನುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ನಾನು ಇದ್ದೇನೆ. ನನ್ನ ಸುತ್ತ ಈ ಜಗತ್ತು. ಅಂದರೆ ಅದು ಒಂದು ಚಕ್ರ, ಈ ನನ್ನ 'ಜಗಚ್ಚಕ್ರಕ್ಕೆ' ಕಾಣಬಹ 'ದಿಗ್ವಿವರ' ಅಂದರೆ ನಾನೆಷ್ಟು ದೂರ ಕಾಣುತ್ತೇನೋ, ನನ್ನ ಸಂಬಂಧ ಸಂಪರ್ಕಗಳು ಎಷ್ಟು ದೂರ ಹರಡಿಕೊಂಡಿದೆಯೋ ಅದೇ ನನ್ನ ಚಕ್ರದ "ನೇಮಿಪಥ". ಅಂದರೆ ಚಕ್ರದ ಹೊರ ಸುತ್ತಳತೆ. ಅಂದರೆ ನಾನು ನನ್ನ

ಸಂಬಂಧಗಳ ಸ್ವರೂಪವೆಷ್ಟು ದೊಡ್ಡದೋ ಅಷ್ಟು ದೊಡ್ಡದು ನನ್ನ ಚಕ್ರ ನನ್ನ ಒಂದೊಂದು ಸಂಬಂಧಗಳೂ ಸಹ ಈ ಚಕ್ರದ ಒಂದೊಂದು ಅಡ್ಡ ಪಟ್ಟಿಗಳು. ಹೇಗೆ ಚಕ್ರದ ಪಟ್ಟಿಗಳು ಹಾಳಾದರೆ ಹೊಸಪಟ್ಟಿಗಳನ್ನು ಹಾಕುತ್ತೇವೆಯೋ ಹಾಗೇ ನಮ್ಮ ಬದುಕಿನಲ್ಲೂ ಸಂದರ್ಭಕ್ಕನುಸಾರವಾಗಿ ನಮ್ಮ ಸಂಬಂಧಗಳೂ ಸಹ ಬದಲಾಗುತ್ತಲೇ ಇರುತ್ತವೆ. ಆದರೆ ಆ ಬದಲಾದ ಸಂದರ್ಭದಲ್ಲೂ ನಾವು ಆ ಚಕ್ರದ ಬಿಂದುವಾಗಿಯೇ ಉಳಿಯುತ್ತೇವೆ. ನಾವೇ ಆ ಚಕ್ರದ ಕೇಂದ್ರ ಬಿಂದು, ಅದನ್ನೇ ಮಾನ್ಯ ಗುಂಡಪ್ಪನವರು "ತಾನೊಂದೆ ಸತ್ವವದು" ಎಂದಿದ್ದಾರೆ.

ಪ್ರತಿಯೊಬ್ಬರದೂ ಒಂದೊಂದು ಚಕ್ರ, ಪ್ರತಿ ಚಕ್ರಕ್ಕೂ ಒಂದೊಂದು "ನೇಮಿಪಥ" ಕೆಲವರ ಚಕ್ರ ದೊಡ್ಡದು ಕೆಲವರ ಚಕ್ರ ಚಿಕ್ಕದು. ಪ್ರತಿಯೊಬ್ಬರೂ ತಮ್ಮ ತಮ್ಮ ಸಂಬಂಧವನ್ನು ಹೇಗೆ ಇಟ್ಟುಕೊಂಡಿರುತ್ತಾರೋ ಅವರವರ ಚಕ್ರದ ಸ್ವರೂಪವೂ ಹಾಗೇ ಇರುತ್ತದೆ ಮತ್ತು ಅವರವರ ಚಕ್ರದ ಸ್ವರೂಪವೂ ಅವರವರ ಸಂಬಂಧದ ಸ್ವರೂಪದ ಮೇಲೆ ಆಧಾರಪಟ್ಟಿರುತ್ತದೆ. ಈ ಮನುಷ್ಯ ಮನುಷ್ಯರ ನಡುವೆ ಇರುವ ಸಂಬಂಧಗಳು ಮತ್ತು ಇಡೀ ಸೃಷ್ಟಿಯೊಡನೆ ಎಲ್ಲ ಮನುಷ್ಯರ ಸಂಪರ್ಕವು ಒಂದು ಸಂಕೀರ್ಣ ಮತ್ತು ಅನಂತ ಸಂಬಂಧಗಳ ಸರಮಾಲೆಯೇ ಅಲ್ಲವೇ? ಇದನ್ನೇ ಮಾನ್ಯ ಗುಂಡಪ್ಪನವರು "ಅನಂತ್ಯವೀ ಜಗಚ್ಚಕ್ರನಾಭಿಕ್ರಮತೆ" ಎಂದು ಉಲ್ಲೇಖಿಸಿದ್ದಾರೆ.

ವಾಚಕರೆ ನಾವು ನೋಡಬೇಕಾದದ್ದು, ಅವಲೋಕಿಸಬೇಕಾದದ್ದು ಏನೆಂದರೆ, ನಮ್ಮ ಚಕ್ರದ ಸ್ವರೂಪವನ್ನು ಮತ್ತು ಸಂಬಂಧ ಸ್ವರೂಪವಾದ ಈ ಚಕ್ರದ ಅಡ್ಡಪಟ್ಟಿಗಳ ಸತ್ವವನ್ನು ಮತ್ತು ಸ್ವಾಸ್ಥ್ಯವನ್ನು, ಅಂತಹ ಅವಲೋಕನವು ಇಂದಿನ ಪರಿಸ್ಥಿತಿಯಲ್ಲಿ ಹೆಚ್ಚು ಅವಶ್ಯವಲ್ಲವೇ? ಸಾಧ್ಯವಾದರೆ ಸ್ವಾರ್ಥ, ಅಸೂಯೆ ದ್ವೇಷ ಮುಂತಾದವುಗಳಿಂದಾದ ನಮ್ಮ ಚಕ್ರದ ಪಟ್ಟಿಗಳನ್ನು ತೆಗೆದು ಪ್ರೀತಿ, ಪ್ರೇಮ, ವಿಶ್ವಾಸ ಸುಮನಸ್ಸಿನಂಥ ಪಟ್ಟಿಗಳಿಂದ ಮತ್ತೆ ನಮ್ಮ ಜೀವನದ ಚಕ್ರವನ್ನು ನಿರ್ಮಿಸಿದರೆ ಅದರ ಕೇಂದ್ರ ಬಿಂದುವಾದ ನಾವು ಸಂತೋಷದಿಂದಿರಬಹುದು ಅಲ್ಲವೇ?





**ಮುಕ್ತಕ-138** **ಬಾನಾಚೆಯಿಂ ವಿಶ್ವಸತ್ವ ತಾನಿಳಿದಿಳೆಗೆ ।**

**ನಾನೆನುವ ಚೇತನದಿ ರೂಪಗೊಂಡಿಹುದೋ ॥**

**ನಾನೆನುವ ಕೇಂದ್ರದಿನೆ ಹೊರಟ ಸತ್ವದ ಪರಿಧಿ |**

**ಬಾನಾಚೆ ಹಬ್ಬಿಹುದೋ?-ಮಂಕುತಿಮ್ಮ ||**

ಬಾನಾಚೆಯಿಂ=ಬಾನ+ಆಚೆಯಿಂದ, ತಾನಿಳಿದಿಳೆಗೆ=ತಾನು+ಇಳಿದು+ಇಳೆಗೆ, ನಾನೆನುವ=ನಾನು+ಎನುವ,

ಕೇಂದ್ರದಿನೆ=ಕೇಂದ್ರದ+ಇನೆ ಬಾನು=ಆಕಾಶ,

ವಿಶ್ವಸತ್ವ=ಜಗತ್ಸೃಷ್ಟಿಯ ಸತ್ವ, ಇಳೆಗೆ=ಭೂಮಿಗೆ, ಪರಿಧಿ=ವೃತ್ತದ ಹೊರಭಾಗ,

ಆಕಾಶದಾಚೆ ಅಂದರೆ ನಮಗಿಂತ ಬಹಳ ದೂರದಿ ಇರುವ ವಿಶ್ವ ಸತ್ವವು ತಾನು ಈ ಭೂಮಿಗೆ ಇಳಿದು "ನಾನು" ಎನ್ನುವ ಚೇತನದ ರೂಪ ತಳೆದಿದೆಯೋ ಅಥವಾ "ನಾನು" ಎನ್ನುವ ಒಂದು ಬಿಂದುವಿನಿಂದ ಹೊರಟ ಸತ್ವವು ಆಕಾಶದಾಚೆ ಹಬ್ಬಿಹುದೋ ಎಂದು ಒಂದು ಜಿಜ್ಞಾಸಾ ಭರಿತ ಉದ್ಗಾರವನ್ನು ಎತ್ತುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಒಂದು ಜೀವಿ ಈ ಭೂಮಿಗೆ ಬರಬೇಕಾದರೆ ಪರಮ ಚೇತನದ ಒಂದಂಶ ಧರೆಯಲ್ಲಿ ಒಂದು ಕಾಯವ ಧರಿಸಿ, ಪಂಚಭೂತಾಂಶವಾದ ಮನಸ್ಸು ಬುದ್ಧಿಗಳ ಸಂಸರ್ಗದಿಂದ ಜೀವಿಯಾಗಿ ಈ ಜಗತ್ತಿನಲ್ಲಿ ಜೀವಿಸುತ್ತದೆ. ಇದನ್ನೇ ಗುಂಡಪ್ಪನವರು "ತಾನಿಳಿದಿಳೆಗೆ" ಎನ್ನುತ್ತಾರೆ. ಒಂದೊಂದು ಜೀವಿಗೆ ಒಂದೊಂದು ಆಯುವಿನ ಕಾಲ. ಆಯಸ್ಸು ಮುಗಿದಂತೆ ದೇಹ ಮನಸ್ಸು ಬುದ್ಧಿಗಳ ಸಂಗವನ್ನು ಆ ಚೇತನ ತೊರೆದು ಹೋಗುತ್ತದೆ. ಹೋದದ್ದು ಎಲ್ಲಿಗೆ ಹೋಗುತ್ತದೆ ಎನ್ನುವುದನ್ನು "ಕಠ" ಉಪನಿಷತ್ತಿನಲ್ಲಿ ಯಮ, ನಚಿಕೇತನಿಗೆ ಆತ್ಮ ತತ್ವವನ್ನು ವಿವರಿಸುವಾಗ ಹೇಳುತ್ತಾನೆ. ಆತ್ಮ ದೇಹವನ್ನು ತೊರೆದು ತನ್ನೊಡನೆ ಈ ಜನ್ಮದಲ್ಲಿ ಸಂಚಿತವಾದ ಎಲ್ಲ ವಾಸನೆಗಳನ್ನು ಪೂರ್ವ ಕರ್ಮ ರೂಪದಲ್ಲಿ ತನ್ನ ಸುತ್ತ ಒಂದು ಸೂಕ್ಷ್ಮ ಶರೀರದಲ್ಲಿ ಕೊಂಡು ಹೋಗುತ್ತದೆ. ಮತ್ತೆ ಅದು ಇನ್ನೊಂದು ಸ್ಥೂಲ ದೇಹವನ್ನು ಧರಿಸಿದಾಗ ಆ ಎಲ್ಲ ಪೂರ್ವ ಕರ್ಮಗಳನ್ನೂ, ವಾಸನೆಗಳನ್ನೂ ಪ್ರಕಟಗೊಳಿಸಿ ಮತ್ತೆ ಪೂರೈಸಿಕೊಳ್ಳುತ್ತದೆ. ಅಲ್ಲಿಯ ತನಕ ಆಕಾಶದಲ್ಲಿ ಅಣುರೂಪದಲ್ಲಿ ಗಾಳಿಯಲ್ಲಿ ಸೇರಿಕೊಂಡಿರುತ್ತದೆ. "ಪುನರಪಿ ಜನನಂ, ಪುನರಪಿ ಮರಣಂ" ಎಂದು ಆಚಾರ್ಯ ಶಂಕರರು ಹೇಳುವಂತೆ ಅಥವಾ "ಜಾತಸ್ಯ ಮರಣಂ ಧೃವಂ, ಧೃವಂ ಜನ್ಮಂ ಮೃತಸ್ಯಚ' ಎಂದು ಭಗವಾನ್ ಶ್ರೀ ಕೃಷ್ಣ ಹೇಳಿದಂತೆ ಆತ್ಮವು ಮತ್ತೆ ಮತ್ತೆ ಜನ್ಮ ತಳೆಯುತ್ತದೆ.

ಹೀಗೆ ಆಕಾಶ ತತ್ವದಲ್ಲಿರುವ ಆ ಬೃಹತ್ ಚೇತನದಿಂದ ಒಂದು ಅಂಶ ಧರೆಗೆ ದೇಹಧಾರಣೆಗೆ ಬರುತ್ತದೆ. ಬಂದು ಜೀವಿಸುತ್ತದೆ, ಮತ್ತೆ ಆಕಾಶಕ್ಕೇರುತ್ತದೆ ಮತ್ತೆ ಬರುತ್ತದೆ ಮತ್ತೆ ಹೋಗುತ್ತದೆ. ಪ್ರತಿಬಾರಿ ಬಂದಾಗಲೂ ಒಂದು

ಬಿಂದುವಿನಂತೆ ಇಲ್ಲಿರುತ್ತದೆ. ಇಲ್ಲಿನ ಹಲವಾರು ಬಿಂದುಗಳೊಡನೆ ಸಂಬಂಧದ ಚಕ್ರಗಮನ. ಈ ಭೂಮಿಯ ಮೇಲೆ ಎಷ್ಟು ಜೀವರಾಶಿಗಳಿವೆಯೋ ಅಷ್ಟೇಯೋ, ಹೆಚ್ಚ ಅಥವಾ ಕಡಿಮೆಯೋ ಜೀವರಾಶಿಗಳು ಆಕಾಶದಲ್ಲಿಯೂ ಅಣು ರೂಪದಲ್ಲಿ ಇದೆ ಎಂದು ನಮ್ಮ ನಂಬಿಕೆ. ಅಲ್ಲಿಯದು ಇಲ್ಲಿಗೆ ಬರುತ್ತವೆ, ಇಲ್ಲಿಯವು ಅಲ್ಲಿಗೆ ಹೋಗುತ್ತವೆ. ಇದೇ ಈ ಮುಕ್ತಕದ ಹೂರಣ.





ಆದರೆ ಈ ಪ್ರಕ್ರಿಯೆಯನ್ನು ನಾಲ್ಕು ಸಾಲುಗಳಲ್ಲಿ ವಿವರಿಸಲು ಸಾಧ್ಯವಿಲ್ಲ. ಕೇವಲ ಮಹಾ ಮಹಾ ವಿದ್ವಾಂಸರು ಮಾತ್ರ ಇದನ್ನು ಸೂಕ್ತವಾಗಿ ವಿವರಿಸಬಲ್ಲರು. ಎಂದು ಆ ಜೀವ ಪೂರ್ವ ಕರ್ಮ ರಹಿತವಾಗುತ್ತದೋ ಅಥವಾ ಎಂದು ಆ ಜೀವ ವಾಸನಾರಹಿತವಾಗುತ್ತದೋ ಅಂದು ಅದು ಪ್ರಕೃತಿ ಸಂಬಂಧವನ್ನು ತೊರೆದು ಶುದ್ಧವಾಗಿ ತನ್ನ ಸ್ವಸ್ಥಾನವಾದ ಪರಮಾತ್ಮನನ್ನು ಸೇರುತ್ತದೆ, ಎನ್ನುತ್ತದೆ ಭಾರತೀಯ ವೇದಾಂತ.

ವಾಚಕರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ ಒಂದು ಸಂದೇಹದ ರೂಪದಲ್ಲಿ ಈ ವಿಚಾರವನ್ನು ನಮ್ಮ ಮುಂದೆ ಪ್ರಸ್ತಾಪ ಮಾಡಿದ್ದರೂ, ನಮ್ಮನ್ನು ವಿಚಾರಕ್ಕೆ ಹಚ್ಚುವುದಕ್ಕೊಸ್ಕರವೇ ಈ ರೀತಿಯ ಪ್ರಸ್ತಾಪಮಾಡಿದ್ದಾರೆ ಎಂದು ನನ್ನ ನಂಬಿಕೆ. ಈ ವಿಚಾರವನ್ನು ನಂಬಬೇಕು. ಏಕೆಂದರೆ ನಂಬಿಕೆಯೆ ನಮ್ಮ ಅಸ್ತಿತ್ವದ ಆಧಾರವಲ್ಲವೇ?

# ಸತತ ಕೃಷಿ ಪ್ರಕೃತಿ 139-143

**ಮುಕ್ತಕ-139**

**ಸೃಷ್ಟಿಕತೆ ಕಟ್ಟು ಕಥೆ ; ವಿಲಯ ಕಥೆ ಬರಿಯ ಕಥೆ |**
**ಹುಟ್ಟು ಸಾವುಗಳೊಂದೆ ಪುರುಳಿನೆರಡು ದಶೆ ||**
**ನಿತ್ಯಪರಿವರ್ತನೆಯೆ ಚೈತನ್ಯನರ್ತನೆಯೆ |**
**ಸತ್ಯ ಜಗದಲಿ ಕಾಣೋ-ಮಂಕುತಿಮ್ಮ ||**

ಪುರುಳಿನೆರಡು=ಹುರುಳಿನ, ಸಾರದ ಎರಡು ಮುಖ

ಸೃಷ್ಟಿ ಎನ್ನುವುದು, ಲಯ ಎನ್ನುವುದು, ಹುಟ್ಟು ಸಾವು ಎನ್ನುವುದು ಕೇವಲ ಕಲ್ಪನಾ ಕತೆಗಳಷ್ಟೇ!! ಈ ಜಗದಲ್ಲಿ ಪ್ರತಿನಿತ್ಯ ಪರಿವರ್ತನೆಯಾಗುವುದೇ ಸತ್ಯ. ಅದನ್ನು ಕಾಣು ಎಂದು ಮಾನ್ಯ ಗುಂಡಪ್ಪನವರು ಒಂದು ಆದೇಶವನ್ನು ನಮಗೆ ಕೊಡುತ್ತಾರೆ ಈ ಮುಕ್ತಕದಲ್ಲಿ.

ಈ ಜಗತ್ತಿನಲ್ಲಿ ಎಲ್ಲವೂ ಮೊದಲಿನಿಂದ ಇದೆ. ಮುಂದೆಯೂ ಇರುತ್ತದೆ. ಯಾವುದಕ್ಕೂ ನಾಶವಿಲ್ಲ. ಯಾವುದಕ್ಕೂ ಅಂತ್ಯವಿಲ್ಲ. ಹಾಗಾಗಿ ಈ ಜಗತ್ತನ್ನು ಅನಂತ ಎಂದಿದ್ದಾರೆ. ನಮ್ಮ ಪೂರ್ವಜರು. ನಮ್ಮ ಋಷಿ ಮುನಿಗಳು ಸಾಮಾನ್ಯ ಜನರಿಗೆ, ಇಲ್ಲಿ ಆಗುವ ರೂಪಾಂತರದ ಪ್ರಕ್ರಿಯೆಯನ್ನು ವಿವರಿಸಿದರೆ ಅರ್ಥವಾಗುವುದಿಲ್ಲ ಎಂಬ ಕಾರಣಕ್ಕೇ ಇರಬೇಕು, ಇದಕ್ಕೆ ಹುಟ್ಟು ಸಾವು ಎಂದು ಹೆಸರಿಟ್ಟು ಕರೆದಿರುವುದು. ಇಲ್ಲಿ ಹುಟ್ಟು ಸಾವುಗಳೆಂಬುದು ಕೇವಲ ಬಾಹ್ಯ ಪರಿಕಲ್ಪನೆ. ಎಲ್ಲವೂ ಒಂದು ರೂಪಾಂತರ ಪ್ರಕ್ರಿಯೆಯಲ್ಲಿ ಬೇರೆ ಬೇರೆ ಹಂತಗಳಲ್ಲಿ ಇರುತ್ತದೆ. ಇದನ್ನು ಜನ್ಮ, ಬಾಲ್ಯ, ಕೌಮಾರ್ಯ, ಯೌವನ, ಪ್ರೌಢ, ವಾರ್ಧಕ್ಯ, ಮರಣ ಎಂದು ಈ ರೂಪಾಂತರದ ಬೇರೆ ಬೇರೆ ಹಂತಗಳನ್ನು ಬೇರೆ ಬೇರೆ ಹೆಸರುಗಳಿಂದ ಕರೆದು ನಮ್ಮಂಥಹ ಸಾಮಾನ್ಯರಿಗೆ ಅರ್ಥವಾಗುವಂತೆ ಅನುವು ಮಾಡಿಕೊಟ್ಟಿದ್ದಾರೆ.

ನಾ ಮತ್ತೆ ಮತ್ತೆ ಅದೇ ಉದಾಹರಣೆಯನ್ನು ಕೊಡುತ್ತೇನೆ. ನೋಡಿ ಒಂದು ಮರದ ಬೀಜ ಭೂಮಿಯಲ್ಲಿ ಹುದುಗಿ, ನೀರು ಮತ್ತು ಮಣ್ಣಿನೊಳಗೆ, ಮಣ್ಣಿನ ಸಾರಗಳ ಸಂಪರ್ಕದಿಂದ, ರೂಪಾಂತರಗೊಂಡು





ಮೊಳಕೆಯೊಡೆದು, ಸಸಿಯಾಗಿ, ಗಿಡವಾಗಿ, ಮರವಾಗಿ, ಹೆಮ್ಮರವಾಗಿ ರೂಪುಗೊಳ್ಳುತ್ತದೆ. ಆ ಬೀಜವೇ ಈ ಮರವಾಯಿತೆಂದಾದ ಮೇಲೆ ಇದು ಕೇವಲ ರೂಪಾಂತರವಷ್ಟೇ ಅಲ್ಲವೇ? ಇದನ್ನೇ ನಾವು ಎಲ್ಲ ಚರಾಚರ ಸೃಷ್ಟಿಗೂ

ಅನ್ವಯಿಸಿಕೊಳ್ಳಬಹುದು. ಒಂದು ಮಾನವ ಶಿಶು ತಾಯ ಗರ್ಭದಲ್ಲಿ ರೂಪುಗೊಂಡು ಈ ಭೂಮಿಯಮೇಲೆ ಜನ್ಮ ಪಡೆದಂದಿನಿಂದ ಬೆಳೆದು, ಮೇಲೆ ಹೇಳಿದ ಎಲ್ಲ ಹಂತಗಳನ್ನೂ ದಾಟಿ ಕೊನೆಗೆ ಒಂದು ದಿನ ಇಲ್ಲವಾಗುವುದೂ ಸಹ ಈ ರೂಪಾಂತರದ ಪ್ರಕ್ರಿಯೆ ಅಲ್ಲದೆ ಮತ್ತೇನು? ಅಣುಗಳ ಸಮೂಹವೇ ಈ ರೂಪಗಳು ಎಲ್ಲ ಅಣುಗಳೂ ಆ ಪರಮ ಅಣುವಿನ ಒಂದು ಭಾಗವೇ ಅಲ್ಲವೇ?

ಆದರೆ ಮಾಯೆಯಿಂದ ನಾವು ಎಲ್ಲವನ್ನೂ ಬೇರೆ ಬೇರೆಯಾಗಿ ಗುರುತಿಸುವಂತಾಗಿದೆ. ಇದು ಆ ಪರಮಾತ್ಮನ ಲೀಲೆ, ನಾವೆಲ್ಲಾ ಅವನ ಲೀಲಾವಿನೋದದಲ್ಲಿ ಒಂದೊಂದು ರೂಪಗಳಷ್ಟೇ. ಇದನ್ನು ಗಟ್ಟಿಯಾಗಿ ನಂಬಿದರೆ ನಮಗೆ ಈ ಜಗತ್ತಿನೊಂದಿಗೆ ಅತೀವವಾದ ಅಂಟು ಮತ್ತು ಅಂಟಿನಿಂದಾದ ನಂಟು ಇರದು. ಅಂತಹ ಸ್ಥಿತಿಯಲ್ಲಿ ಸುಖ ದುಃಖಗಳ ಸಂಕೋಲೆಯಿಂದ ಬಿಡುಗಡೆಯಾಗಿ ಒಂದು ನಿರ್ಲಿಪ್ತ ಆನಂದದ ಭಾವ ಇರುವುದು.

**ಮುಕ್ತಕ-140** **ಋತುಚಕ್ರ ತಿರುಗುವುದು ಕಾಲನೆದೆ ಮರುಗುವುದು ।**
**ಮೃತನ ಮಣ್ಣಿಂದ ಹೊಸಹುಲ್ಲು ಬೆಳೆಯುವುದು ॥**
**ಕ್ಷಿತಿ ಗರ್ಭ ಧರಿಸುವಳು ಮತ್ತುದಿಸುವುದು ಜೀವ ।**
**ಸತತ ಕೃಷಿಯೋ ಪ್ರಕೃತಿ-ಮಂಕುತಿಮ್ಮ ॥**

ಕೃಷಿಯೋ=ಪ್ರಯತ್ನ, ಮತ್ತುದಿಸುವುದು=ಮತ್ತೆ ಉದಯಿಸುವುದು, ಕ್ಷಿತಿ=ಇಳೆ

ಋತುಗಳ ಚಕ್ರ ತಿರುಗುತ್ತಲೇ ಇರುತ್ತದೆ. ಕಾಲನು ತನ್ನ ಪದಾಘಾತದಲ್ಲಿ ಮೃತರಾಗುವವರ ನೆನೆದು ಮರುಗುತ್ತಾನೆ. ಹಾಗೆ ಮೃತರಾದವರು ಮಣ್ಣಾದ ಮೇಲೆ ಆ ಭೂಮಿಯ ಮೇಲೆ ಮತ್ತೆ ಹೊಸ ಹುಲ್ಲು ಹುಟ್ಟುತ್ತದೆ. ಈ ಧರೆ ಮತ್ತೆ ಮತ್ತೆ ಗರ್ಭ ಧರಿಸಿ ಹೊಸ ಹೊಸ ಪಲ್ಲವಗಳಿಗೆ ಎಡೆಮಾಡಿ ಕೊಡುತ್ತಾಳೆ. ಮತ್ತೆ ಮತ್ತೆ ಹೊಸ ಜೀವ ಉದಯಿಸುವುದು. ನಿರಂತರವಾಗಿ ನಡೆಯುವ ಕೃಷಿಯೇ ಈ ಪ್ರಕೃತಿ ಎಂದು ಒಂದು ಸುಂದರ ವಿಷಯವನ್ನು ಪ್ರಸ್ತಾಪಿಸುತ್ತಾರೆ ಮಾನ್ಯ ಗುಂಡಪ್ಪನವರು.

ಸೃಷ್ಟಿಯ ಆದಿಯಲ್ಲಿ ಏನಿತ್ತೋ ಏನೋ ನಾನರಿಯೆ. ಆದರೆ ಅಂದಿನಿಂದ ಇಂದಿಗೂ ಪ್ರತಿ ಕ್ಷಣ ಅಗಣಿತ ಜೀವಿಗಳು ಈ ಜಗತ್ತಿನಲ್ಲಿ ಜನಿಸುತ್ತಿದ್ದಾರೆ ಮತ್ತು ಅಳಿಯುತ್ತಿದ್ದಾರೆ. ಕೋಟ್ಯಾಂತರ ಜೀವಿಗಳ ಸೃಷ್ಟಿ ಮತ್ತು ಅಳಿವು ಪ್ರತಿಕ್ಷಣವೂ ನಡೆಯುತ್ತಿದೆ. ಪ್ರಾಣಿಗಳು ಪಕ್ಷಿಗಳು ಕೀಟಗಳು ಮಾನವರು ಮತ್ತು ಜಲಚರಗಳಲ್ಲಿ ನಿರಂತರ ಈ ಪ್ರಕ್ರಿಯೆ

ನಡೆಯುತ್ತಿದೆ. ಅವ್ಯಾಹತ ಹರಿಯುವ ಕಾಲದ ರಂಗಮಂಟಪದಲ್ಲಿ ನಡೆದಾಡುವ ಪಾತ್ರಗಳ ಕುಸಿಯುವಿಕೆ ಮತ್ತು ಹೊಸ ಹೊಸ ಪಾತ್ರಗಳ ಸೃಷ್ಟಿ ಮತ್ತು ನಲಿದಾಟ, ಕಾಲನೆಷ್ಟು ಅವ್ಯಾಹತನೋ ಅಷ್ಟೇ ಅವ್ಯಾಹತವಾಗಿ ನಡೆಯುತ್ತಲೇ ಇರುತ್ತದೆ. ಒಂದು ದೇಹ ಮತ್ತು ಚೇತನದ ನಿರಂತರ ಆಗಮನ,

(196)

ಕಗ್ಗರಸಧಾರೆ ಸತತ ಕೃಷಿ ಪ್ರಕೃತಿ 139-143

ಸಮಾಗಮನ, ಜೀವನ ಮತ್ತು ನಿರ್ಗಮನದ ಆಟವೇ ಈ ಇಳೆಯಲ್ಲಿ. ಆ ಪರಮಾತ್ಮನ ಸೃಷ್ಟಿ ಸ್ಥಿತಿ ಲಯಗಳಾಟ. ಇದೆ ಪ್ರಕೃತಿ ಮತ್ತು ಅದರ ಸಹಜ ಸ್ಥಿತಿ.

ಬಂಧುಗಳೇ, ನಾವು ಬೇಕೆಂದರೂ, ಬೇಡವೆಂದರೂ, ಇಷ್ಟಪಟ್ಟರೂ, ಪಡದೆ ಇದ್ದರೂ ನಮ್ಮ ನಿಮಿತ್ತವಿಲ್ಲದೆಯೇ ನಡೆಯುವ ಈ ಗೊಂಬೆಯಾಟದಲ್ಲಿ ನಾವೆಲ್ಲಾ ಕೇವಲ ಪಾತ್ರಧಾರಿಗಳು. ಆ ಜಗನ್ನಾಟಕ ಸೂತ್ರಧಾರಿ ಆಡಿಸುವ ಬೊಂಬೆಗಳು. ನಮ್ಮ ಪಾತ್ರ ಬಂದಾಗ ನಮ್ಮ ಪ್ರವೇಶ, ಪಾತ್ರ ಮುಗಿದೊಡನೆ ನಿರ್ಗಮನ, ಇವೆರಡರ ನಡುವೆ ನಾವಾಡುವ ಆಟ ಹೇಳತೀರದು. ಅಜ್ಞಾನದಿಂದ "ನಾನು" ಎಂದುಕೊಂಡು ನಾವು ಪಡುವ ಪಾಡನ್ನು ನೋಡಿ ಆ ಪರಮಾತ್ಮನೂ ಸಹ ನೋಡಿ ನಗುತ್ತಿರಬೇಕು, ಅಲ್ಲವೇ? ಈ ಜಗತ್ತಿನ ಎಲ್ಲ ಮಾನವರಿಗೂ "ನಾವು ಒಂದು ದಿನ ಈ ಪಾತ್ರದಿಂದ ನಿರ್ಗಮಿಸಲೇ ಬೇಕು" ಎಂದು ಗೊತ್ತು. ಆ ಸತ್ಯವನ್ನು ಮರೆಸಿ ನಮ್ಮಿಂದ ಹಲವಾರು ಕೆಲಸಗಳನ್ನು ಮಾಡಿಸುವುದು ಮಾಯೆ. ನಮಗರ್ಥವಾಗದ ಮಾಯೆ. ನಾವು ನಿರ್ದೇಶಕನು ಸೂಚಿಸಿದ ಮಾರ್ಗದಲ್ಲಿ ನಮ್ಮ ಪಾತ್ರ ವಹಿಸಿದರೆ ಸುಖ, ನಮ್ಮ "ಅಹಂ"ಕಾರದ ಮಾತು ಕೇಳಿದರೆ ದುಃಖ. ಆಯ್ಕೆ ನಮ್ಮದು. ಸುಖ ಅಥವಾ ದುಃಖ ನಮ್ಮದು.

**ಮುಕ್ತಕ-141** **ಹಳೆ ಸೂರ್ಯ-ಹಳೆ ಚಂದ್ರ ಹಳೆ ಭೂಮಿ ಹಳೆ ನೀರು**
**ಹಳೆ ಹಿಮಾಚಲ ಗಂಗೆ ಹಳೆ ವಂಶ ಚರಿತೆ**
**ಹಳೆಯವಿವು ನೀನಿದರೊಳಾವುದನು ಕಳೆದೀಯೋ?**
**ಹಳತು ಹೊಸತರೊಳಿರದೆ?-ಮಂಕುತಿಮ್ಮ**

ಹಳೆಯವಿವು=ಹಳೆಯವು+ಇವು, ನೀನಿದರೊಳಾವುದನು=ನೀನು+ಇದರೊಳು+ಆವುದನು,
ಹೊಸತರೊಳಿರದೆ=ಹೊಸತರೊಳು+ಇರದೇ.

ನಾವು ನೋಡುವ ಸೂರ್ಯ, ಚಂದ್ರ, ಈ ಭೂಮಿ, ನಮ್ಮ ದೇಶದ ಹೆಮ್ಮೆಯ ಹಿಮಾಲಯ, ಹಿಂದೆ ಆಗಿಹೋದ ವಂಶಗಳ ಚರಿತ್ರೆ ಎಲ್ಲವೂ ಹಳೆಯದೇ ಅಲ್ಲವೇ? ಅವರಲ್ಲಿ ನೀನು ಯಾವುದನ್ನು ತೆಗೆದು ಹಾಕಬೇಕು ಅಥವಾ ಅಳಿಸಿಹಾಕಬೇಕು ಎಂದುಕೊಂಡಿದ್ದೀಯೇ? ಹಳತು ಹೊಸತರಲ್ಲಿ ಇರಲು ಸಾಧ್ಯವಿಲ್ಲವೇ? ಎಂದು ಒಂದು ವಿಷಯವನ್ನು ಪ್ರಶ್ನಾರೂಪದಲ್ಲಿ ಪ್ರಸ್ತಾಪಿಸುತ್ತಾರೆ ಮಾನ್ಯ ಗುಂಡಪ್ಪನವರು.
ನಾವು ನೋಡುವ ಆಕಾಶ ಮತ್ತು ಆ ಆಕಾಶದ ಎಲ್ಲ ಕಾಯಗಳು, ನಮ್ಮ ಸೌರಮಂಡಲದ ಸೂರ್ಯ ಚಂದ್ರರು ನಾವಿರುವ ಈ ಭೂಮಿ ಮತ್ತು ಭೂಮಿಯ ಮೇಲಿರುವ ಬೆಟ್ಟ, ಗುಡ್ಡ, ನದಿ ಮತ್ತು ಮಾನವರಾದ ನಮ್ಮ ಪೂರ್ವಜರ ಚರಿತ್ರೆ ಮುಂತಾದವುಗಳೆಲ್ಲವೂ ಹಳತು. ಆದರೆ ಹಳತೆಂದು ಇದಾವುದನ್ನೂ ಮರೆಯಲು, ನಮ್ಮ ಬದುಕಿನಿಂದ ದೂರಾಗಿಸುವುದು ಸಾಧ್ಯವಿಲ್ಲ. ಹಳತೆ ನಮ್ಮ ಇಂದಿನದಕ್ಕೆ ಅಡಿಪಾಯ, ಆ ಹಿಮಾಚಲ ನಮ್ಮ ದೇಶವನ್ನು ಇಂದಿಗೂ ಹಲವಾರು ವಿಧದಲ್ಲಿ ರಕ್ಷಿಸುತ್ತಿದೆ. ಆ ಗಂಗೆ ಇಂದಿಗೂ ಹರಿಯುತ್ತಾ ನಮ್ಮ ದೇಶದ ಜನ ಜೀವನದ ಮೇಲೆ ಪ್ರಭಾವ ಬೀರುತ್ತಲೇ ಇದ್ದಾಳೆ. ಆ ಸೂರ್ಯ ಚಂದ್ರರೂ ಸಹ ಅಂದಿನಿಂದ





ಇಂದಿನವರೆಗೆ ನಮ್ಮ ಅಸ್ತಿತ್ವಕ್ಕೆ ಸಹಾಯಕರಾಗೇ ಇದ್ದಾರೆ. ಇವಾವುದನ್ನೂ ನಾವು ಬಿಡಲಾಗದು. ನಮ್ಮ ಅಸ್ತಿತ್ವಕ್ಕೆ ಆಧಾರವಾಗಿರುವ ಈ ಎಲ್ಲವನ್ನೂ ನಾವು ಬಿಟ್ಟರೆ ಅಥವಾ ಮರೆತರೆ ನಮ್ಮ ಬೇರುಗಳು ಅಲುಗಾಡಿ ನಾವು

ನಿಂತ ನೆಲ ಅಲುಗಾಡುವುದು. ನಮ್ಮ ಆಧಾರ ಬಲಹೀನವಾಗುವುದು ಮತ್ತು ನಮ್ಮ ಪತನದ ಆರಂಭ ಅಲ್ಲಿಂದಲೇ ಸಾಗುತ್ತದೆ.

ಈ ವಿಚಾರಗಳನ್ನೇ ಇಂದಿನ ವಿದ್ಯಮಾನಗಳಿಗೆ ಅನ್ವಯಿಸಿಕೊಂಡರೆ, ನಾವು ಈಗಾಗಲೇ ಪತನದ ಹಾದಿಯಲ್ಲಿ ಸಾಗಿದ್ದೇವೆ! ನಮಗೆ ಹಳೆಯದರ ಮೇಲೆ ಸ್ವಲ್ಪವೂ ಗೌರವವಿಲ್ಲ. ನಮ್ಮ ಪೂರ್ವಜರ ಬಗ್ಗೆ, ಅವರ ಜೀವನ ಶೈಲಿಯಲ್ಲಿನ ಗಟ್ಟಿತನದ ಬಗ್ಗೆ, ನಮಗೆ ಕಿಂಚಿತ್ತೂ ಆಸಕ್ತಿಯಿಲ್ಲ. ನಮಗೆ ನಮ್ಮದೇ ಲೋಕ, ವೃದ್ಧ ತಂದೆ ತಾಯಿಯರು ನಮ್ಮ ಆನಂದ, ಸಂತೋಷದ, ಆಧಾರವಾಗದೆ ಇಂದು ಬೇಸರಕ್ಕೆ, ಕಷ್ಟಕ್ಕೆ ಕಾರಣರಾಗಿದ್ದಾರೆ. ನಮಗೆ ಕೇವಲ ನಾವೇ ಮುಖ್ಯ. ಅವರಿಂದ ನಾವಿದ್ದೇವೆ, ಅವರಿಗೆ ನಾವು ಇಂದು ನೀಡದ ಪ್ರೀತಿ ಗೌರವಗಳನ್ನು ನಾವೂ ಸಹ ನಮ್ಮ ಮಕ್ಕಳಿಂದ ವೃದ್ಧರಾದ ಮೇಲೆ ಅಪೇಕ್ಷೆ ಪಡುವಂಥಹ ಸ್ಥಿತಿ ನಮಗೆ ಬರಬಹುದು. ನಾವು ಪ್ರೀತಿ ವಿಶ್ವಾಸ ಗೌರವಗಳನ್ನು ಅಪೇಕ್ಷಿಸಬೇಕಾದರೆ ಇಂದು ನಾವು ನೀಡಬೇಕು, ಏಕೆಂದರೆ ನಾವು ಇಂದು ನೀಡದ್ದನ್ನು ಮುಂದೆ ಅಪೇಕ್ಷೆಪಡಲಾಗುವುದಿಲ್ಲ ಎಂಬ ಕಿಂಚಿತ್ ಸಾಮಾನ್ಯ ಜ್ಞಾನವಾದರೂ ಇಲ್ಲ ನಮಗೆ, ಇದು ಪತನವಲ್ಲದೆ ಮತ್ತೇನು?

ನಮ್ಮ ಭಾರತೀಯ ಸಂಸ್ಕೃತಿ, ಸಾಹಿತ್ಯ, ಸಂಗೀತ, ಕಲೆ ಇವೆಲ್ಲವೂ ಒಂದು ಪರಂಪರೆಯಿಂದ ಬಂದದ್ದು. ಹಳತಿನ ಆಧಾರದ ಮೇಲೆಯೇ ಹೊಸ ಹೊಸ ಆಯಾಮಗಳನ್ನು ಬೆಳೆಸಿಕೊಂಡು ಹಳತಿನ ಬೇರುಗಳನ್ನು ಮತ್ತಷ್ಟು ದೃಢವಾಗಿಸಿ, ಹೊಸ ರೂಪ ತಳೆದು ಜಾಜ್ವಲ್ಯಮಾನವಾಗಿ ಬೆಳೆದಿದ್ದು, ಆದರೆ ಇಂದು ಒಟ್ಟು ಸಮುದಾಯದ ಗತಿ ಬೇರೆಲ್ಲೋ ಹೋಗುತ್ತಿದೆ. ಹಳತನ್ನು ಮರೆತು ಬೇರೆ ಏನನ್ನೋ ಕಾಣಲು, "ಶೂನ್ಯದಲ್ಲಿ ಸಂತೋಷವನ್ನು ಹುಡುಕುವ ಪ್ರಯತ್ನ ನಡೆದಿದೆ. ಇದು ಸಲ್ಲ, ಮತ್ತೆ ನಾವು ನಮ್ಮ ಪುರಾತನ ಬೇರುಗಳಿಗೆ ನೀರೆರೆದು ಹಸಿರಾಗಿಸಿ ಹಳತಿನ ವಿಶಾಲ ರಂಗಸ್ಥಳದಲ್ಲಿ ನಮ್ಮ ಜೀವನದ ಪಾತ್ರಗಳನ್ನು ಧರಿಸಿದಾಗ, ಸಂತೋಷದ ಬದುಕು, ಚೈತನ್ಯದ ಬದುಕು ನಮ್ಮದಾಗಬಹುದು. ಇಲ್ಲದಿದ್ದರೆ ಪತನ ಶತಃಸಿದ್ಧ. ನಮ್ಮ ಇಂದಿನದಲ್ಲಿ ಹಳತಿನ ಎಲ್ಲ ಬಣ್ಣ ರುಚಿ ಗಂಧಗಳೂ ಸಹ ಇವೆ. ಇದನ್ನೇ ಮಾನ್ಯ ಗುಂಡಪ್ಪನವರು ಹಳತು ಹೊಸತರೊಳಿರದೆ" ಎಂದು ಸೂಚ್ಯವಾಗಿ ಕೇಳಿದ್ದಾರೆ, ಈ ಮುಕ್ತಕದಲ್ಲಿ.

ವಾಚಕರೆ ನಾವು ನಮ್ಮ ಪರಂಪರೆಯನ್ನು, ಅದರ ಆಧಾರದ ಮೇಲೆ ಬೆಳೆದ ನಮ್ಮ ಸಂಸ್ಕಾರ, ಸಂಸ್ಕೃತಿಗಳನ್ನು ಉಳಿಸಿಕೊಳ್ಳಲು ಸಿಗುವ ಪ್ರತಿಯೊಂದು ಅವಕಾಶವನ್ನೂ ಬಿಡದೆ ನಿರಂತರ ಪ್ರಯತ್ನ ಮಾಡಿದಾಗ ನಮ್ಮ ಜೀವನವು ಒಂದು ಧನ್ಯ ಮತ್ತು ಸಫಲ ಜೀವನವಾಗಬಹುದು ಅಲ್ಲವೇ?

**ಮುಕ್ತಕ-142**

**ಮೂಲವಸ್ತುವದೊಂದು ಲೀಲೆಗೋಸುಗನೂರು |**
**ಕಾಲದೃಷ್ಟಿಗೆ ಬಹುಳ ಕೇವಲದೊಳೇಕ ||**
**ಸ್ಥೂಲವಿವಿಧದಿ ಬಾಳಿ ಸೂಕ್ಷ್ಮ ಸಾಮ್ಯವ ತಾಳಿ |**
**ಆಳುತಿರು ಜೀವನವ-ಮಂಕುತಿಮ್ಮ ||**

ಮೂಲವಸ್ತುವದೊಂದು=ಮೂಲ+ವಸ್ತುವು+ಅದು+ಒಂದು, ಲೀಲೆಗೊಸುಗನೂರು=ಲೀಲೆಗೋಸುಗ+ನೂರು, ಕೇವಲದೊಳೇಕ=ಕೇವಲದ+ಒಳು+ಏಕ.

ಮೂಲವಸ್ತು=ಈ ಜಗತ್ತನ್ನು ಸೃಜಿಸಿದ ಚೇತನ, ಲೀಲೆ=ವಿನೋದ, ಸ್ಥೂಲವಿವಿಧದಿ=ಹಲವಾರು ಸ್ಥೂಲ ರೂಪಗಳನ್ನು, ಸಾಮ್ಯವ=ಸಮಾನತೆಯ.

ಇಡೀ ಜಗತ್ತಿನ ಮೂಲ ವಸ್ತುವು ಒಂದೇ. ಆ ಪರಮಾತ್ಮ ತನ್ನ ಲೀಲಾ ವಿನೋದಕ್ಕಾಗಿ ತನ್ನನ್ನೇ ತಾನು ಹಲವಾಗಿಸಿಕೊಂಡಿದ್ದಾನೆ. ಕಾಲದ ನೋಟಕ್ಕೆ ಬಹಳವಾಗಿ ಕಂಡರೂ ಅದು ಕೇವಲ ಒಂದೇ. ಸ್ಥೂಲವಾಗಿ ನೋಡಿದಾಗ ಹಲವಾಗಿ ಬಾಳಿದರೂ ಸೂಕ್ಷ್ಮ ರೂಪದಿ ನೋಡಿದಾಗ ಜಗತ್ತಿನ ಎಲ್ಲ ವಸ್ತುಗಳಲ್ಲೂ ಸಾಮ್ಯತೆಯನ್ನು ತೋರುತ್ತಾ ಆ ಆತ್ಮನೇ ಆಳುತ್ತಿದ್ದಾನೆ, ಎಂದು ಪ್ರಸ್ತಾಪಿಸುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಜಗತ್ತಿನ ಎಲ್ಲವೂ ಒಂದೇ ಮೂಲದಿಂದ ಬಂದು ಹಲವಾಗಿ ಪ್ರಕಟಗೊಂಡಿದೆ ಎನ್ನುವುದು ಪ್ರಮಾಣಸಿದ್ಧ, ಆದರೂ ನಮಗೆ ಅದು ಬೇರೆ ಬೇರೆಯಾಗಿ ಕಾಣುತ್ತವೆ. ಹಾಗೆ ಬೇರೆ ಬೇರೆ ಕಾಣುವುದು ಕೇವಲ ಸ್ಥೂಲ ರೂಪ. ಆದರೆ ಸೂಕ್ಷ್ಮ ರೂಪದಲ್ಲಿ ನೋಡಿದರೆ ಎಲ್ಲವೂ ಒಂದೇ ಎಂದು ತೋರುತ್ತದೆ ಮತ್ತು ಅರ್ಥವಾಗುತ್ತದೆ. ನಮ್ಮ ಇಂದ್ರಿಯಗಳಿಗೆ ಗೋಚರವಾಗುವ ಪ್ರತಿಯೊಂದೂ ಸ್ಥೂಲ ರೂಪದಲ್ಲಿ ಇದ್ದು ಈ ಸ್ಥೂಲ ರೂಪಕ್ಕೆ ಚಲನೆಯನ್ನು ನೀಡುವ ಚೇತನವೇ ಸೂಕ್ಷ್ಮ ರೂಪದಲ್ಲಿ ಇದೆ. ಆ ಚೇತನವು ಪರಮ ಚೈತನ್ಯದ ಒಂದು ಅಂಶವಷ್ಟೇ. ಆ ಪರಮ ಚೈತನ್ಯವೇ ಇಡೀ ವಿಶ್ವಕ್ಕೆ ಮೂಲ. ಆ ಪರಮಾತ್ಮ ಕೇವಲ ತನ್ನ ಲೀಲಾ ವಿನೋದಕ್ಕಾಗಿ ಎಲ್ಲವನ್ನೂ ಸೃಜಿಸಿ, ಅದಕ್ಕೆ ಚೈತನ್ಯ ರೂಪದಲ್ಲಿ ತಾನೇ

ಒಳಹೊಕ್ಕು, ತನ್ನ ಲೀಲೆಯನ್ನು ನಡೆಸಿದ್ದಾನೆ. ಅದನ್ನೇ ಮಾನ್ಯ ಗುಂಡಪ್ಪನವರು "ಸ್ಥೂಲವಿವಿಧದಿ ಬಾಳಿ ಸೂಕ್ಷ್ಮ ಸಾಮ್ಯವ ತಾಳಿ" ಎಂದಿದ್ದಾರೆ.

ಇಲ್ಲಿ ನಾವು ಮುಖ್ಯವಾಗಿ ನೋಡಬೇಕಾದುದೇನೆಂದರೆ ಸ್ಥೂಲ ರೂಪದಲ್ಲಿರುವ ನಾವೆಲ್ಲಾ ಬೇರೆ ಬೇರೆಯಾಗಿ ಗುರುತಿಸಿಕೊಂಡರೂ ಮತ್ತು ಬೇರೆ ಬೇರೆ ರೂಪಗಳಿಗೆ ಬೇರೆ ಬೇರೆ ಹೆಸರುಗಳನ್ನೂ ಇಟ್ಟರೂ ನಮ್ಮಲ್ಲಿ ಇರುವ ಸಾಮ್ಯತೆ ಏನೆಂದರೆ ಏಕರೂಪದಲ್ಲಿರುವ ಆ ಸೂಕ್ಷ್ಮ ಚೇತನವೇ. ಅಂದರೆ ಬೇರೆ ಬೇರೆ ರೂಪದಲ್ಲಿ ಇದ್ದರೂ ನಮ್ಮಲ್ಲಿ ಇರುವ ಆ ಸಾಮ್ಯ ರೂಪದ ಚೇತನವೇ ಪರಮಾತ್ಮ.

ಹೇಗೆ ಸಾಮ್ಯ ರೂಪದ, ಒಂದೇ ತೆರನಾಗಿರುವ, ವಿದ್ಯುತ್ ಹಲವಾರು ವಿಧದ ವಿವಿಧ ರೂಪದ ವಿದ್ಯುತ್ ಬಲ್ಬುಗಳನ್ನು ಬೆಳಗುತ್ತದೆಯೋ ಹಾಗೆ ಕೋಟ್ಯಾಂತರ ರೂಪಗಳನ್ನು ಧರಿಸಿರುವುದು, ಆ ರೂಪಗಳನ್ನು ಬೆಳಗುವುದೂ ಸಹ ಸಾಮ್ಯ ರೂಪದ ಚೇತನ ಅಥವಾ ಆತ್ಮ. ನಾವು ನಮ್ಮ ನಮ್ಮ ರೂಪಗಳ "ಮರೆಸಿ" ಕಂಡರೆ ನಮಗೆ ಕಾಣುವುದು ಆ ಏಕರೂಪದ ಪರಮಾತ್ಮ ಮಾತ್ರ ಎನ್ನುವುದೇ ಈ ಮುಕ್ತಕದ ಹೂರಣ.

(199)

| | |
|---|---|
| ಸತತ ಕೃಷಿ ಪ್ರಕೃತಿ 139-143 | ಕಗ್ಗರಸಧಾರೆ |

ಆದರೆ ಮಾಯೆ ನಮ್ಮನ್ನು ಹಿಡಿದು ಬಂಧಿಸಿ ಬಿಟ್ಟಿದೆ. ನಾವು, ಆ ಸೂಕ್ಷ್ಮವಾಗಿ ಸಾಮ್ಯತೆಯಿಂದ ಎಲ್ಲ ಜೀವಿಗಳಲ್ಲೂ ಇರುವ, ಆ ಪರಮಾತ್ಮನನ್ನು ಕಾಣಲು ಅಶಕ್ಯರಾಗಿದ್ದೇವೆ. ಮಾಯೆಯಿಂದ ಆವರಿಸಲ್ಪಟ್ಟ ನಮ್ಮ ಮನಸ್ಸು ಬುದ್ಧಿಗಳು ಈ ಭೇದದ ಭಾವದಿಂದ ಹೊರಬರಬೇಕಾದರೆ, ಮುಕ್ತನಾಗಬೇಕಾದರೆ ಆರು ವೈರಿಗಳ ಸೆರೆಯಿಂದ ಹೊರಬರಬೇಕು.

ವಾಚಕ ಮಹಾಶಯರೇ, ಅದು ಸಾಧ್ಯವೋ, ಇಲ್ಲವೋ ನಾನರಿಯೆ! ಸಾಧ್ಯವಿರಬಹುದು. ಎಂದು ಮತ್ತು ಹೇಗೆ ಸಾಧ್ಯವೆಂದು ನಾನರಿಯೆ !! ಆದರೆ ಸಾಧ್ಯವಾದಲ್ಲಿ ಇಡೀ ಭುವನವೇ ನಾವು ಶಾಂತಿಯಿಂದ, ಸೌಹಾರ್ದತೆಯಿಂದ, ಪ್ರೀತಿಯಿಂದ, ಪ್ರೇಮದಿಂದ ಮತ್ತು ಆನಂದದಿಂದ ಬಾಳಲು ಎಲ್ಲ ಜೀವಿಗಳೂ ಇಷ್ಟಪಡುವ ಒಂದು ಸುಂದರ ತಾಣವಾಗುವುದರಲ್ಲಿ ಸಂದೇಹವೇ ಇಲ್ಲ.

**ಮುಕ್ತಕ-143** **ಧಾತ್ರಿಯನು ಮದುವೆಮಂಟಪದೊಲು ಸಿಂಗರಿಸಿ |**

**ಕ್ಷಾತ್ರದಗ್ನಿಗಳ ನರಹೃದಯಗಳೊಳಿರಿಸಿ ||**

**ಕೃತ್ರಿಮವನೆಡೆಬಿಡದೆ ನಡೆಸಿ ನಗುವ ವಿಲಾಸಿ |**

**ಚಿತ್ರಕಾರಿಯೋ ಮಾಯೆ-ಮಂಕುತಿಮ್ಮ ||**

ಮದುವೆಮಂಟಪದೊಲು=ಮದುವೆ+ಮಂಟಪದ+ಒಲು, ಕ್ಷಾತ್ರದಗ್ನಿಗಳ=ಕ್ಷಾತ್ರದ+ಅಗ್ನಿಗಳ, ನರಹೃದಯಗಳೊಳಿರಿಸಿ=ನರ+ಹೃದಯದೊಳು+ಇರಿಸಿ, ಕೃತ್ರಿಮವನೆಡೆಬಿಡದೆ=ಕೃತ್ರಿಮವನು+ಎಡೆಬಿಡದೆ ಧಾತ್ರಿ=ಭೂಮಿ, ಮಂಟಪದೊಲು=ಮಂಟಪದ ಹಾಗೆ, ಕ್ಷಾತ್ರದಗ್ನಿಗಳ=ಕ್ರಿಯಾತ್ಮಕವಾದ ಚೈತನ್ಯವನ್ನು, ಕೃತ್ರಿಮ=ಅಸಹಜತೆ, ವಿಲಾಸಿ ಚಿತ್ರಕಾರಿಯೋ=ವಿಲಸಿಸಿರುವ ಮಾಯಾಂಗನೆ.

ಈ ಧರಣಿಯನ್ನು ಮನುಷ್ಯನ ಕಣ್ಣಿಗೆ ಸುಂದರವಾಗಿ ಕಾಣುವಂತೆ, ಮದುವೆ ಮಂಟಪದಂತೆ ಸಿಂಗರಿಸಿ, ಇದರೊಳಗೆ ಸಂಪೂರ್ಣವಾಗಿ ತನ್ನನ್ನು ತಾನು ತೊಡಗಿಸಿಕೊಳ್ಳಲು ಬೇಕಾದ ಆಸ್ಥೆ ಮತ್ತು ಆಸೆಯನ್ನು ಅವನ ಹೃದಯದಲ್ಲಿ ತುಂಬಿ ಸತ್ಯವನ್ನು ಮರೆಸಿ ಕೇವಲ ಅಸಹಜತೆಯನ್ನು ಮೆರೆಯುವಂತೆ ಮಾಡಿರುವ ಮತ್ತು ನೋಡಿ ನಗುತ್ತಿರುವ "ಮಾಯೆ", ಒಂದು ಸುಂದರ ಚಿತ್ರಕಾರಿಯೋ? ಎಂದು ಒಂದು ಗಹನವಾದ ವಿಷಯವನ್ನು ಪ್ರಸ್ತಾಪಿಸುತ್ತಾರೆ. ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಹೌದಲ್ಲವೇ ಸಹೃದಯರೇ, ಇಡೀ ಜಗತ್ತು ಹಲವಾರು ಭೂ ವಿನ್ಯಾಸಗಳಿಂದ, ಬೆಟ್ಟ ಗುಡ್ಡಗಳಿಂದ, ನದಿ ತೊರೆ ಮತ್ತು ಧುಮ್ಮಿಕ್ಕುವ ಝುರಿಗಳಿಂದ, ಕೋಟಿ ಕೋಟಿ ವಿನ್ಯಾಸ, ಬಣ್ಣ ಮತ್ತು ಆಕಾರಗಳಿಂದ ಕೂಡಿದ ಕ್ರಿಮಿ, ಕೀಟ, ಹುಳ, ಹುಪ್ಪಟೆ, ಪ್ರಾಣಿ, ಪಕ್ಷಿ, ಮನುಷ್ಯ, ಗಿಡ, ಮರಗಳು, ಹೂ, ಹಣ್ಣುಗಳು, ಸುಗಂಧಗಳು, ಹೀಗೆ ಹೇಳಲಾಗದಷ್ಟು, ವೈವಿಧ್ಯತೆಯಿಂದ ಕೂಡಿದೆ. ಇಲ್ಲಿ ಹುಟ್ಟಿದ ಪ್ರತಿ ಮನುಷ್ಯನೂ ಅವನ ಜೀವನದಲ್ಲಿ ಒಂದು ಬಾರಿಯಾದರೂ ಇದರ ಈ ಅಂದವನ್ನು ನೋಡಿ "ಆಹಾ ಎಷ್ಟು ಚೆನ್ನಾಗಿದೆ' ಎಂದು ಒಂದು ಉದ್ಗಾರವನ್ನು ತೆಗೆಯದೆ ಇರಲು ಸಾಧ್ಯವೇ ಇಲ್ಲ. ಒಂದೊಂದು ಕಡೆಯಲ್ಲಿ ಒಂದೊಂದು ವಿನ್ಯಾಸ. ಮಣ್ಣಿನ ಗುಣ ಬೇರೆ, ನೀರಿನ ಗುಣ ಬೇರೆ, ಗಾಳಿಯ ಮತ್ತದರ ಗಂಧದ ಗುಣ ಬೇರೆ. ಇವುಗಳ ಗುಣಗಳಿಗೆ

ಅನುಸಾರವಾಗಿ ಎಲ್ಲ ಜೀವಿಗಳ ಗುಣಗಳೂ ಬೇರೆ ಬೇರೆ. ಆದರೂ ಪ್ರತಿ ವೈವಿಧ್ಯತೆಯಲ್ಲೂ ಒಂದು ಮನಮೋಹಕ ಸುಂದರತೆ. ಇದನ್ನು ನೋಡಿ ಆನಂದಿಸದೇ, ಆಕರ್ಷಿತನಾ(ಳಾ)ಗದೆ ಇರುವ ಮನುಷ್ಯ ಇರಲು ಸಾಧ್ಯವೇ ಇಲ್ಲ ಅಲ್ಲವೇ?

ಆದರೆ ಇದು ಇಹ. ಇದು ಇಹವಾದರೆ ಪರವೂ ಒಂದು ಉಂಟು. ನಾವು ಇರುವುದೇ ಇಹದಲ್ಲಿ. ನಮ್ಮದು ಪರಕ್ಕೆ ಹೋಗುವ ಪರದಾಟ. ಆದರೆ ಇಲ್ಲಿರುವ ಅಂದರೆ ಇಹದಲ್ಲಿರುವ ಎಲ್ಲ ಅಂದಗಳೂ ಅಶಾಶ್ವತವಾದರೂ, ಮನುಷ್ಯನನ್ನು ಆಕರ್ಷಿಸಿ ಮೋಹಗೊಳಿಸಿ ತನ್ನೆಡೆಗೆ ಸೆಳೆಯುತ್ತಿದೆ. ಈ ಸೆಳೆತದಿಂದ ಹೊರಬರಲು ಮಾನವನ ನಿರಂತರ ಪ್ರಯತ್ನ ನಡೆದೇ ಇದೆ. ಜನ್ಮ ಜನ್ಮಾಂತರದಿಂದ ನಡೆಯುತ್ತಲೇ ಇದೆ. ಪ್ರತಿ ಜನ್ಮದಲ್ಲೂ ಕೆಲವರು ಕೆಲವು ಹೆಜ್ಜೆ ಮುನ್ನಡೆಯುತ್ತಾರೆ, ಕೆಲವರು ಹಿನ್ನಡೆಯನ್ನೂ ಹಾಕುತ್ತಾರೆ. ಮತ್ತೆ ಮುನ್ನಡೆಯುವ ಪ್ರಯತ್ನ. "ಎಣ್ಣೆ ಸುರಿದ ನುಣುಪಾದ ನೆಲದ ಮೇಲೆ ನಡೆಯಲು ಪ್ರಯತ್ನ ಪಡುವವನ ರೀತಿ". ಈ ಜಗತ್ತಿನ ಮಾಯೆಯೆಂಬ ಎಣ್ಣೆ ನಮ್ಮನ್ನು ಮುನ್ನಡೆಯಲು ಬಿಡುವುದೇ ಇಲ್ಲ. ಬಹಳಷ್ಟು ಸಾರಿ ಜಾರಿ ಬೀಳುವುದೇ ನಮ್ಮ ಪಾಡು.

ಈ ಜಗತ್ತನ್ನು, ಆಕರ್ಷಣೀಯವಾದ ಈ ಜಗತ್ತಿನ ಸೊಬಗನ್ನು, ನಮ್ಮನ್ನು ಈ ಆಕರ್ಷಣೆಯ ವೃತ್ತದೊಳಕ್ಕೆ ಸೆಳೆದುಕೊಳ್ಳುವ ಮಾಯೆಯನ್ನು, ಸೃಷ್ಟಿಸಿದ ಆ ದೈವವೂ ಸಹ ಈ ನಮ್ಮ ಪಾಡನ್ನು ಕಂಡು ಒಳಗೊಳಗೇ ಹಲವಾರು ಬಾರಿ ನಕ್ಕಿರಬಹುದು, ಗಹಗಹಿಸಿ ಅಟ್ಟಹಾಸದ ಕೇಕೆ ಹಾಕಿರಬಹುದು, ಅಣಕವಾಡಿರಬಹುದು. "ಜಗವನ್ನು ಸೃಜಿಸಿ, ನಿನ್ನನ್ನು ಸೃಷ್ಟಿಮಾಡಿ, ಜಗಕ್ಕೆ ಅಂದವನ್ನು ಕೊಟ್ಟು, ಮಾಯೆಯ ಪ್ರಾಬಲ್ಯದಿಂದ ಈ ಜಗತ್ತಿನಲ್ಲಿ ನಿನಗೆ ಆಸೆಯನ್ನೂ ಹುಟ್ಟಿಸಿ, ನನ್ನ ಸೇರುವಾಸೆಯನ್ನೂ ಕೊಟ್ಟು ಅದರ ಸೆಳೆತದಲ್ಲಿ ಸಿಕ್ಕಿಹಾಕಿಕೊಂಡು ಪರದಾಡುವಂತೆ ಮಾಡಿದ್ದೇನೆ. ಇದರಿಂದ ಬಿಡಿಸಿಕೊಳ್ಳುವ ಮಾರ್ಗವನ್ನೂ ತೋರಿದ್ದೇನೆ. ನಿನ್ನ ಶಕ್ತಿಯಿಂದ ಬಿಡಿಸಿಕೊಂಡು ಬರುವೆಯೋ ಅಥವಾ ಅದರ ಸೆಳೆತದಲ್ಲೇ ಅಲ್ಲೇ ಒದ್ದಾಡುವೆಯೋ" ಎಂದು ತಮಾಷೆಯಾಟವನ್ನು ಆಡುತ್ತಿದ್ದಾನೆ.

ಇದು ಮಾಯೆ ಎಂದು ಬಹಳಷ್ಟು ಜನರಿಗೆ ಅರಿವಾಗುವುದೇ ಇಲ್ಲ. ಹಾಗೆ ಅರಿವಾದವರಲ್ಲಿ ಬಹಳಷ್ಟು ಜನ ಇದರಿಂದ ಮುಕ್ತರಾಗುವ ಪ್ರಯತ್ನವನ್ನೇ ಮಾಡುವುದಿಲ್ಲ. ಹಾಗೆ ಪ್ರಯತ್ನ ಪಟ್ಟವರಲ್ಲಿ ತದೇಕಚಿತ್ತದಿಂದ

ಮುಂದುವರೆದವರು ವಿರಳ. ಹಾಗೆ ಮುಂದುವರೆದವರಲ್ಲಿ ಮುಕ್ತಿ ಪಡೆದವರು ಅತೀ ವಿರಳ. ವಾಚಕರೆ ನಾವೂ ಸಹ ಬಿಡುಗಡೆಯ ಪ್ರಯತ್ನ ಪಡುವ, ದಿಟ್ಟ ಹೆಜ್ಜೆಯನ್ನು ಇಡುವ ಸಂಕಲ್ಪವನ್ನು ಇಂದೇ ಮಾಡೋಣವೆ?





# ಮಾಯೆ ಕೇಕಯಪುತ್ರಿ 144-148

**ಮುಕ್ತಕ-144**

**ವಾಯುವಂ ಕಾಣ್ಬನಾರ್? ತತ್ರಯೆಯ ಕಾಣನಾರ್? |**
**ಮಾಯೆಯಂತಪರೀಕ್ಷೆ ಸತ್ವದೀಕ್ಷ್ಯ ಕೃತಿ |**
**ರಾಯನಂ ಕಾಣಲಾಗದೆ ಮಂತ್ರಿಯಡೆ ಸಾರ್ವ |**
**ದೇಯಾರ್ಥಿವೊಲು ನೀನು-ಮಂಕುತಿಮ್ಮ ||**

ಮಾಯೆಯಂತಪರೀಕ್ಷ್ಯ=ಮಾಯೆ+ಎಂತ+ಅಪರೀಕ್ಷ್ಯ=ಮಾಯೆಯನ್ನು ಪರೀಕ್ಷೆ ಮಾಡಲಾಗದು,
ಸತ್ವದೀಕ್ಷ್ಯ ಕೃತಿ=ಸತ್ವದ+ಕೃತಿ+ಈಕ್ಷ್ಯ=ಸತ್ವದ ಕಾರ್ಯ ನೋಡಲು ಸಾಧ್ಯ.
ವಾಯುವಂ=ಗಾಳಿಯನ್ನು, ಕಾಣ್ಬನಾರ್=ಕಾಣುವವರಾರು?, ತತ್ರಯೆಯ=ಅದರ ಕ್ರಿಯೆಯ,
ಕಾಣನಾರ್=ಕಾಣದವರಾರು. ರಾಯನಂ=ರಾಜನನ್ನು, ಕಾಣಲಾಗದೆ=ನೋಡಲಾಗದೆ,
ಮಂತ್ರಿಯಡೆ=ಮಂತ್ರಿಯ ಕಡೆಗೆ, ಸಾರ್ವ=ಹೋಗುವ, ದೇಯಾರ್ಥಿವೊಲು ನೀನು=ಬೇಡುವವನಂತೆ ನೀನು.

ಗಾಳಿಯನ್ನು ನೋಡಿದವರು ಯಾರು! ಆದರೆ ಅದರ ಕ್ರಿಯೆಯನ್ನು ಅನುಭವಿಸದವರಾರು. ಮಾಯೆಯನ್ನು ಪರೀಕ್ಷಿಸಲು ಸಾಧ್ಯವಿಲ್ಲ. ಆದರೆ ಆ ಪರಮಾತ್ಮನ ಕ್ರಿಯೆಯನ್ನು ನಾವು ನೋಡಬಹುದು, ರಾಜನನ್ನು ನೋಡಲಾಗದೆ ಅವನ ಸೇವಕ ಮಂತ್ರಿಯ ಬಳಿ ಹೋಗಿ ಬೇಡುವವನಂತೆ ನೀ ಇದ್ದೀಯೇ ಎಂದು ಮಾನ್ಯ ಗುಂಡಪ್ಪನವರು ತಮಗೆ ತಾವು ಹೇಳಿಕೊಳ್ಳುತ್ತಾ ನಮ್ಮ ಸ್ಥಿತಿಯೂ ಹಾಗೆ ಇದೆ ಎಂದು ಸೂಚ್ಯವಾಗಿ ಹೇಳುತ್ತಾರೆ.

ಗಾಳಿಯನ್ನು ನೋಡಿದವರಿಲ್ಲ. ಧೂಳನ್ನು ನೋಡಿರಬಹುದು. ಹಾಗೆ ಗಾಳಿಯನ್ನು ನೋಡದಿದ್ದರೂ ಅದಿಲ್ಲದೆ ನಮಗೆ ಜೀವನವೇ ಇಲ್ಲ. ಉಸಿರಾಡುವುದು ಸಹಜ ಕ್ರಿಯೆ. ಆದರೆ ನಮ್ಮ ಗಮನ ಎಲ್ಲ ಕಾಲದಲ್ಲಿಯೂ ನಾವಾಡುವ ಉಸಿರಿನ ಮೇಲೆ ಇರುವುದಿಲ್ಲ ಅಲ್ಲವೇ? ಇಡೀ ಜಗತ್ತಿನಲ್ಲಿ ಇರುವ ಎಲ್ಲ ಚರಾಚರ ಜೀವಿಗಳಿಗೂ ಗಾಳಿಯೇ ಜೀವಾಧಾರ. ಆದರೆ ಅದು ಹೇಗೆ ಕೆಲಸ ಮಾಡುತ್ತದೆ ಎಂದು ನಮಗೆ ಗೊತ್ತಿರದಿದ್ದರೂ ನಮ್ಮ ಆಧಾರ ಅದು. ಹಾಗೆಯೇ ಈ ಜಗತ್ತಿನಲ್ಲಿ ಮಾಯೆಯನ್ನು ಅರಿತವರಿಲ್ಲ. ಆದರೆ ನಮ್ಮೆಲ್ಲರ ಮೇಲೆ ಮಾಯೆಯ ಮುಸುಕನ್ನು ಹಾಕಿ, ನಾವು ಈ ಮಾಯೆಯ ಹಿಡಿತದಲ್ಲಿರುವಂತೆ ಮಾಡಿ, ಈ ಜಗನ್ನಾಟಕವನ್ನು ಆಡಿಸುವ ಆ ಪರಮಾತ್ಮನ ಕೃತಿಯನ್ನು ನಾವು ಪ್ರತಿಯೊಂದು ವಸ್ತುವಿನಲ್ಲೂ ನೋಡಬಹುದು. ಅಲ್ಲಿ ಸತ್ಯವಿದೆ. ಆದರೆ ಸತ್ಯವನ್ನು ಮಾಯೆ ಮುಸುಕಿದೆ. ಹಾಗಾಗಿ ಅದರ ಕ್ರಿಯೆ ಕಂಡರೂ ಅದು ಹೇಗೆ ನಡೆಯುತ್ತದೆ ಎಂದು ಅರಿಯಲು ಮಹಾಮಹಿಮರಿಗೂ ಸಾಧ್ಯವಾಗಿಲ್ಲ.

ನಮಗೆ "ಇದು ಮಾಯೆ" "ಇದು ಸತ್ಯವಲ್ಲ" ಎಂದು ಅರಿವು ಹೇಗಾಗುತ್ತದೆ! ಇದಕ್ಕೆ ನಮ್ಮ ಪೂರ್ವಜರು, ಋಷಿ ಮುನಿಗಳು ಹಲವಾರು ಮಾರ್ಗಗಳನ್ನು ತೋರಿದ್ದಾರೆ. ಧ್ಯಾನ, ತಪಸ್ಸು ಯಜ್ಞ ಯಾಗಗಳಿಂದ ಆ ಪರಮ ಪುರುಷನ ನಿಜ ಸ್ವರೂಪವನ್ನು ಕಾಣಬಹುದೆಂದು ಹೇಳಿದ್ದಾರೆ. ಆದರೆ ನಾವು ಈ ಜಗತ್ತಿನಲ್ಲಿ

ಕೇವಲ ಮಾಯೆಯ ಹಿಡಿತದಲ್ಲಿದ್ದೇವೆ. ಒಂದು ಕ್ಷಣವೂ ಇದರಿಂದ ಮುಕ್ತಿಯೇ ಇಲ್ಲ. ಕೆಲವರಿಗೆ ತಾವು ಮಾಯೆಯಲ್ಲಿದ್ದೇವೆಂದು ಗೊತ್ತು. ಆದರೆ ಅವರೂ ಸಹ ಈ ಜಗತ್ತಿನ ಮೋಹದಲ್ಲಿ ಅದನ್ನು ಮರೆತಿದ್ದಾರೆ. ಪಾಪ ಕೆಲವರಿಗೆ ಅದರ ಅರಿವೇ ಇಲ್ಲ.

ಜಗನ್ನಾಟಕವನ್ನು ಆಡಿಸುವ ಆ ಪರಮಾತ್ಮನ ಕೃತಿಯನ್ನು ಈ ಮಾಯೆ ಮರೆಸಿದ್ದರೂ ನಮಗದನ್ನು ಅರಿಯಲಾಗದಿದ್ದರೂ ಅದರ ಅನುಭವವನ್ನು, ಆ ಅನುಭವದ ಆನಂದವನ್ನು ಪಡೆಯಲು ಸಮರ್ಥರಾಗಿದ್ದೇವೆ. ಆದರೆ ನಾವು ಅಜ್ಞಾನದಿಂದ ಆ ಪರಮ ಚೇತನದ ಕೃಪೆಗೆ ಪಾತ್ರರಾಗುವುದರ ಬದಲು "ರಾಯನಂ ಕಾಣಲಾಗದೆ ಮಂತ್ರಿಯಡೆ ಸಾರ್ವ" ಎಂದು ಗುಂಡಪ್ಪನವರು ಹೇಳುವಂತೆ, ಅವನ ಮಂತ್ರಿಗಳಾದ ಕಂಡ ಕಂಡ ದೇವ ದೇವತೆಗಳನ್ನು, ಗ್ರಹಗಳನ್ನು ನಂಬಿ ಈ ಜಗತ್ತಿನಲ್ಲಿ ಆನಂದವನ್ನು ಪಡೆಯಲು ಪ್ರಯತ್ನ ಮಾಡುತ್ತಿದ್ದೇವೆ. ನೇರ ಆ ಪರಮಾತ್ಮನಿಗೆ ಶರಣಾಗಿಬಿಟ್ಟರೆ, ನಮ್ಮೆಲ್ಲ ಹಿತವನ್ನೂ ಅವನೇ ನೋಡಿಕೊಳ್ಳುತ್ತಾನೆ ಎಂದು ಗೊತ್ತಿದ್ದರೂ ಅರಿತುಕೊಳ್ಳಲಾಗದಂತೆ ಮಾಯೆಯ ಹಿಡಿತದಲ್ಲಿ ಸಿಕ್ಕಿಬಿದ್ದಿದ್ದೇವೆ. ಇದರಿಂದ ಮುಕ್ತಿಪಡೆಯುವುದೇ ನಮ್ಮ ಮೂಲ ಗುರಿಯಾಗಿರಬೇಕು. ಸತ್ಯವನ್ನು ಅರಿಯಬೇಕು. ನಿಮಗೂ ನಮಗೂ ಅಂತಹ ಗುರಿಯನ್ನು ಮುಟ್ಟುವ ಪ್ರಯತ್ನ ಮಾಡುವ ಅವಕಾಶ ಸಿಗಲಿ.

**ಮುಕ್ತಕ-145**

**ಮಾಯೆಯೇ ಸರಸಿ, ನಿರ್ಗುಣ ಸತ್ತ್ವದಿಂದೇನು? |**
**ಮಾಯೆ ಬಿಡೆ ಜಗವೆತ್ತ? ಜೀವಕಥೆಯೆತ್ತ? ||**
**ಮೇಯವಲ್ಲದ ಮಹಿಮೆ ಛಾಯೆಯಾ ಬ್ರಹ್ಮನದು |**
**ತಾಯವಳು ನೀಂ ಮಗುವು-ಮಂಕುತಿಮ್ಮ ||**

ಸತ್ವದಿಂದೇನು=ಸತ್ವದಿಂದ+ಏನು?, ಮೇಯವಲ್ಲದ=ಮೇಯವು+ಅಲ್ಲದ, ತಾಯವಳು=ತಾಯಿ+ಅವಳು.
ಮೇಯ=ಸಕಾರಣ, ಅರ್ಥವಾಗುವುದು

ನಮ್ಮ ಜೀವನದ ಜೊತೆಗೆ ಸರಸವಾಡುವ ಆ ಸರಸಿಯೇ ಈ ಮಾಯೆ. ಗುಣ ರಹಿತವಾದ ಸತ್ವದಿಂದ ಏನು ಪ್ರಯೋಜನ. ಈ ಮಾಯೆಯೇ ಇಲ್ಲದೆ ಹೋದರೆ ಈ ಜಗತ್ತಿನಲ್ಲಿ ವೈವಿಧ್ಯತೆ ಇಲ್ಲದೆ, ಸ್ವಾರಸ್ಯವೇ ಇಲ್ಲದೆ ಹೋಗುತ್ತಿತ್ತು. ಅರ್ಥವಾಗದ (ಮೇಯವಲ್ಲದ) ಈ ಮಾಯೆಯ ಮಹಿಮೆ ಆ ಸೃಷ್ಟಿಕರ್ತ ಬ್ರಹ್ಮನ ಛಾಯೆ (ನೆರಳು) ಈ ಮಾಯೆ ತಾಯಿ ಇದ್ದ ಹಾಗೆ, ನಾವೆಲ್ಲಾ ಅವಳ ಮಕ್ಕಳಂತೆ ಎಂದು ಒಂದು ಸ್ವಾರಸ್ಯಕರ ವಿಷಯವನ್ನು ಈ ಮುಕ್ತಕದಲ್ಲಿ ಅರುಹಿದ್ದಾರೆ ಮಾನ್ಯ ಗುಂಡಪ್ಪನವರು.

ನಾವು ಈ ಜಗತ್ತನ್ನು "ಮಾಯಾ ಪ್ರಪಂಚ" ಎಂದು ಎಷ್ಟೋ ಬಾರಿ ಕೇಳಿದ್ದೇವೆ. ಅಂದರೆ ಈ ಜಗತ್ತೆಲ್ಲ ಮಾಯೆಯಿಂದ ತುಂಬಿದೆ. ಈ ಮಾಯೆಯಿಂದಲೇ ಅಲ್ಲವೇ ಈ ಜಗತ್ತಿನ ಎಲ್ಲ ಭಾವಗಳು. ಅದು ಒಳ್ಳೆಯದೋ ಕೆಟ್ಟದ್ದೋ ಎನ್ನುವ ಪರಿಭಾಷೆಗೆ ಈ ಭಾವನೆಗಳನ್ನು ಒಡ್ಡದೆ, ಹಾಗೇ ನೋಡಿದರೆ ಮಾಯಾ ಜನಿತವಾದ ಭಾವಗಳೇ ಎಲ್ಲವೂ ಎಂದು ತಿಳಿಯುತ್ತದೆ. ಈ ಭಾವುಕತೆ ಇಲ್ಲದೆ ಹೋಗಿದ್ದರೆ, ಎಲ್ಲರೂ





ಭಾವ ಶೂನ್ಯರಾಗಿ, ಕೇವಲ ಪರಬ್ರಹ್ಮನನ್ನು ಕುರಿತು ಧ್ಯಾನವನ್ನೋ, ತಪಸ್ಸನ್ನೋ ಮಾಡುತ್ತಾ ಇದ್ದಿದ್ದರೆ, ಇಡೀ ಜಗತ್ತೇ ಎಷ್ಟು ನೀರಸವಾಗಿರುತಿತ್ತು ಅಲ್ಲವೇ ವಾಚಕರೆ?

ಹಾಗೆ ಆ ಪರಬ್ರಹ್ಮ ವಸ್ತುವಿನಿಂದಲೇ ಈ ಜಗತ್ತು ಮಾಡಲ್ಪಟ್ಟಿದೆ ಎಂದು ಒಪ್ಪಿಕೊಂಡರೆ, ಈ ಜಗತ್ತನ್ನು "ಮಾಯೆ" ಎಂಬ ಸಾಧನದಿಂದಲೇ ಮಾಡಲ್ಪಟ್ಟಿದೆ ಎಂದು ಅರಿತುಕೊಳ್ಳಬೇಕು. ಎಷ್ಟೊಂದು ವೈವಿಧ್ಯತೆಯಿಂದ ಕೂಡಿದ ಈ ಜಗತ್ತು ನಮ್ಮ ಅರಿವಿಗೆ ಬಾರದ ಈ ಮಾಯಾ ಜಾಲದಿಂದಲೇ ಮಾಡಲ್ಪಟ್ಟಿದೆ. ಕೋಟಿ ಕೋಟಿ ಬಗೆಯ ಗಿಡ ಮರಗಳು, ಹೂ ಹಣ್ಣುಗಳು, ಪಶು ಪಕ್ಷಿಗಳು, ಕೀಟ ಪ್ರಾಣಿಗಳು, ಅವುಗಳ ಬಣ್ಣಗಳು ಆಕಾರಗಳು ರುಚಿಗಳು ಸುಗಂಧಗಳು ಎಲ್ಲವನ್ನೂ ಮಾಯೆಯೇ ಮಾಡಿದೆ ಎಂದರೆ ತಪ್ಪಾಗಲಾರದು.

ಇನ್ನು ಮನುಷ್ಯನನ್ನು ತೆಗೆದುಕೊಳ್ಳೋಣ. ಅಬ್ಬಾ! ಇವನಲ್ಲಿರುವ ವೈವಿಧ್ಯತೆಗೆ ಮಿತಿಯೇ ಇಲ್ಲ. ಇವನ ಚಿತ್ರ ವಿಚಿತ್ರ ಯೋಚನೆಗಳು ಮತ್ತು ಭಾವಗಳು, ಆವಿಷ್ಕಾರಗಳು, ಭಾಷೆಗಳು, ಕಲೆಗಳು, ಸಂಸ್ಕೃತಿಗಳು, ಮತಗಳು,

ಜಾತಿಗಳು, ಧರ್ಮಗಳು, ಎಲ್ಲವೂ ಈ ಜಗತ್ತನ್ನು ಒಂದು ವೈವಿಧ್ಯಮಯ ಸುಂದರ ತಾಣವನ್ನಾಗಿಸುವುದರಲ್ಲಿ ಮಾಯೆಯ ಕೈವಾಡ ಸಂಪೂರ್ಣವಾಗಿದೆ. ಯಾವುದಾದರೂ ಒಂದು "ಏಕೆ ಹೀಗಾಗಿದೆ" ಎಂದರೆ, "ಅದು ಮಾಯೆ" ಅರ್ಥವಾಗುವುದಿಲ್ಲ ಎಂದು ಉತ್ತರ ಸಿಗುತ್ತದೆ. ಇದನ್ನೇ ಗುಂಡಪ್ಪನವರು "ಮೇಯವಲ್ಲದ ಮಹಿಮೆ" ಎಂದರು ಈ ಮುಕ್ತಕದಲ್ಲಿ.

ನಮ್ಮನ್ನು ಪರಮಾತ್ಮ ಸೃಷ್ಟಿಸಿ, ಮಾಯೆಯ ಹಿಡಿತದಲ್ಲಿ ಸಿಕ್ಕಿಸಿ "ಇದರಿಂದ ಬಿಡಿಸಿಕೊಂಡು ಬಾ ನೋಡೋಣ" ಎಂದು ಒಂದು ಸವಾಲು ಹಾಕಿದ್ದಾನೆ. ಆದರೆ ವಾಚಕರೆ ಈ ಮಾಯೆಯ ಪ್ರಭಾವ ಇಲ್ಲದೆ ಹೋಗಿದ್ದಿದ್ದರೆ ಈ ನಮ್ಮ ಪ್ರಪಂಚ ಹೇಗಿದ್ದಿರಬಹುದು ಎಂದು ಊಹಿಸಲೂ ಸಾಧ್ಯವಿಲ್ಲ ಅಲ್ಲವೇ? ನೀವೂ ಸಹ ಇದನ್ನೇ ಯೋಚಿಸುವ ಪ್ರಯತ್ನ ಮಾಡಿ.

**ಮುಕ್ತಕ-146** **ರಾಯ ಮುದಿದಶರಥನನಾಡಿಸುತ ಕೈಕೇಯಿ ।**
**ಸ್ವೀಯ ವಶದಲ್ಲಿ ಕೋಸಲವನಾಳಿದಂತೆ ॥**
**ಮಾಯೆ ಬೊಮ್ಮನ ಬಿನದವಡಿಸಿ ನಮ್ಮಿ ಜಗವ ।**
**ಕಾಯುವಳು ತನ್ನಿಚ್ಛೆ-ಮಂಕುತಿಮ್ಮ ॥**

ಮುದಿದಶರಥನನಾಡಿಸುತ=ಮುದಿ+ದಶರಥನನು+ಆಡಿಸುತ,

ಕೋಸಲವನಾಳಿದಂತೆ=ಕೊಸಳವನು+ಆಳಿದಂತೆ, ಬಿನದವಡಿಸಿ=ಬಿನದವ+ಆಡಿಸಿ,

ರಾಯ=ರಾಜ, ಸ್ವೀಯ-ತನ್ನ, ಸ್ವಇಚ್ಛೆ, ಬೊಮ್ಮನ=ಪರಬ್ರಹ್ಮನ, ಬಿನದವಡಿಸಿ=ವಿನೋದಪಡಿಸಿ,

ಇಲ್ಲಿ ಮಾನ್ಯ ಗುಂಡಪ್ಪನವರು ರಾಮಾಯಣದ ಒಂದು ಪ್ರಸಂಗವನ್ನು ತರುತ್ತಾರೆ. ದಾಸಿ ಮಂಥರೆಯ ಮಾತ ಕೇಳಿ, ತಾನು ಪಡೆದ ವರಗಳ ಬಲದಿಂದ, ತನ್ನ ಗಂಡನಾದ ಮುದುಕ ದಶರಥನಲ್ಲಿ, ಯುವರಾಜ ರಾಮನು ಪಟ್ಟಕ್ಕೇರದೆ ತನ್ನ ಮಗನಾದ ಭರತನು ರಾಜನಾಗಬೇಕೆಂಬ ಬಯಕೆಯ ಮುಂದಿಟ್ಟು, ತನ್ನ

ಮೋಹದ ಬಲೆಯನ್ನು ಬೀಸಿ, ಅವನನ್ನು ಒಪ್ಪಿಸುತ್ತಾಳೆ. ದುಃಖಿತನಾದಾಗ್ಯೂ, ಅವಳ ಮೋಹದಲ್ಲಿ, ಅವಳಿಚ್ಛೆಯಂತೆ ರಾಜ್ಯಭಾರ ಮಾಡಲು ಬಿಡುತ್ತಾನೆ. ಹಾಗೆಯೆ ಪರಬ್ರಹ್ಮನನ್ನು ಆನಂದಪಡಿಸುತ್ತಾ, ಈ ಮಾಯೆಯಂಬ ಮಾಯಾಂಗನೆ ತನ್ನ ಇಚ್ಛೆಯಂತೆ ಈ ಜಗವನಾಳುತ್ತಿದ್ದಾಳೆ, ಎಂದು ಮಾಯೆಯ ಪ್ರಭಾವವನ್ನು ವಿವರಿಸುತ್ತಾರೆ, ಶ್ರೀ ಗುಂಡಪ್ಪನವರು.

ಅಮೇಯವಾದ ಮಾಯೆಯನ್ನು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ. ಅದು ನಮ್ಮನ್ನು ಭ್ರಮಾ ಲೋಕಕ್ಕೆ ತಳ್ಳುತ್ತದೆ. ಅಲ್ಲೂ ಸಹ ದಶರಥನು 'ಇಲ್ಲ ಸಾಧ್ಯವಿಲ್ಲ" ಎಂದಿದ್ದರೆ ರಾಮಾಯಣವೇ ನಡೆಯುತ್ತಿರಲಿಲ್ಲ. ಹಾಗೆಯೇ ನಮ್ಮ ಜೀವನಗಳಲ್ಲೂ ನಾವು ಎಷ್ಟೋ ಬಾರಿ ಅಂತಹ ಭ್ರಮೆಗಳಿಗೆ ತುತ್ತಾಗಿ, ಆ ಕ್ಷಣದಲ್ಲಿ ಕೆಲವು ನಿರ್ಧಾರಗಳನ್ನು ತೆಗೆದುಕೊಂಡು ನಂತರ ದೀರ್ಘಕಾಲ ಪರದಾಡುವಂತಹ ಸ್ಥಿತಿಗೆ ಬೀಳುವುದಿಲ್ಲವೇ? ಹಾಗೆ.

ಮಾಯೆ ಪರಬ್ರಹ್ಮನ ನೆರಳು. ಅವಳಿಗೆ ಛಾಯಾ ಎಂದೂ ಹೆಸರಿದೆ. ಈ ಮಾಯೆಯ ಮಗಳೇ 'ಭ್ರಮಾ" ಇವಳು ನಮ್ಮನ್ನು ಸತ್ಯದಿಂದ ಆದಷ್ಟೂ ದೂರ ಇಡಲು ಪ್ರಯತ್ನಿಸುತ್ತಾಳೆ ಮತ್ತು ಸಾಕಷ್ಟು ಯಶಸ್ವಿಯೂ ಆಗುತ್ತಾಳೆ. ಅವಳ ಪ್ರಲೋಭನೆಗಳು ಅಧಿಕ. ನಮ್ಮಲ್ಲಿ ಕಂಡ ಕಂಡ ಆಸೆಗಳನ್ನು ಹುಟ್ಟಿಸುವುದಕ್ಕೂ ಅವಳೇ ಕಾರಣ. ನಮಗೆ ಸತ್ಯವಲ್ಲದ್ದನ್ನು ತೋರಿಸಿ, "ಅದರೊಳಗೆ ಆನಂದವಿದೆ, ಸುಖವಿದೆ, ಇದೇ ಸುಖ, ಇದು ಬಿಟ್ಟರೆ ಬೇರೆ ಇಲ್ಲ, ಇಂದು ಬಿಟ್ಟರೆ ಮತ್ತೆ ಸಿಗುವುದಿಲ್ಲ" ಎನ್ನುವಂತಹ ಭ್ರಮೆಯಿಂದ ಕೂಡಿದ ಭಾವಗಳನ್ನು ನಮ್ಮ ಮನಸ್ಸಿನಲ್ಲಿ ತುಂಬಿ, ನಮ್ಮನ್ನು ಒಂದು ಸೂತ್ರದ ಗೊಂಬೆಯಂತೆ ಆಡಿಸುವವಳೇ ಈ "ಭ್ರಮಾ". ಈ ಜಗತ್ತಿನಲ್ಲಿ ನಡೆದ ಕತೆಗಳು, ಪುರಾಣಗಳು ಮತ್ತು ಆ ಕಥಾ ಪುರಾಣಗಳಲ್ಲಿ ನಮಗೆ ವಿವರಿಸಲ್ಪಟ್ಟಿರುವ ಹಲವಾರು ರೋಚಕ ಪ್ರಸಂಗಗಳು ಎಲ್ಲವೂ ಈ "ಭ್ರಮೆಯ" ಕಾರಣವೇ.

ಹಾಗಾದರೆ ಈ ಭ್ರಮೆ ಮಾಯೆಯನ್ನು ಅನುಸರಿಸುತ್ತಾ ನಮಗೆಲ್ಲ ಮೋಸ ಮಾಡುತ್ತಿದ್ದಾಳೆಯೇ? ಎಂದರೆ "ಹೌದು ಮತ್ತು ಇಲ್ಲ" ಎನ್ನುವ ಉತ್ತರ ಸಿಗುತ್ತದೆ. "ಹೌದು" ಏಕೆಂದರೆ ಇದರ ಮುಸುಕಿನಲ್ಲಿ ಇರುವ ನಮಗೆ ಸತ್ಯದ ಗೋಚರವಾಗುವುದೇ ಇಲ್ಲ. ಇಂದು ಸತ್ಯ ಎಂದು ನಂಬಿಕೊಂಡದ್ದು ನಾಳೆಗೆ ಸುಳ್ಳಾಗಿಬಿಡುತ್ತದೆ. ವ್ಯಕ್ತಿ, ವಸ್ತು ಮತ್ತು ವಿಷಯ ಎಲ್ಲ ಬದಲಾಗಿಬಿಡುತ್ತದೆ. ಅದು ಬದಲಾದ ಹಾಗೆ ನಮ್ಮ ಪರಿಸ್ಥಿತಿಯೂ ಬದಲಾಗುತ್ತದೆ. ನಿನ್ನೆಯ ಸತ್ಯ ಇಂದಿಗೆ ಸುಳ್ಳು ಮತ್ತು ಇಂದಿನ ಸತ್ಯ ನಾಳೆಗೆ ಸುಳ್ಳು, ಕೆಲವು ಬಾರಿ ಸತ್ಯವೇ ಸುಳ್ಳಾಗಿ ಕಾಣಬಹುದು ಮತ್ತು ಸುಳ್ಳೇ ಸತ್ಯವಾಗಿ ಕಾಣಬಹುದು. ಈ ಕಣ್ಣ ಮುಚ್ಚಾಲೆ ಆಟದಲ್ಲಿ ನಾವೆಲ್ಲಾ ನಲುಗಿ ಹೋಗುತ್ತೇವೆ. ಆದರೆ ಇದನ್ನೇ ಸತ್ಯವೆಂದು

ನಂಬಿಕೊಂಡು ಇದರಲ್ಲೇ ಆನಂದವನ್ನು ಕಾಣುವ ಜನರೇ ಅಧಿಕ. ಒಂದು ಸಿನೆಮಾ ನೋಡುವಾಗ, ಅಲ್ಲಿ ನಡೆಯುವುದೆಲ್ಲವೂ ಸತ್ಯವಲ್ಲ ಎಂದು ಗೊತ್ತಿದ್ದರೂ, ಮೂರು ಗಂಟೆಗಳ ಕಾಲ ಅದನ್ನೇ ಸತ್ಯವೆಂದು ನಂಬಿ ಅದರಲ್ಲೇ ಮಗ್ನರಾಗಿ, ತೀವ್ರತೆಯಿಂದ ಅದನ್ನು ಅನುಭವಿಸುವವರೆಷ್ಟು, ಅನುಸರಿಸುವವರೆಷ್ಟು ಮತ್ತು ಅತ್ತು ಗೋಳಾಡುವವರೆಷ್ಟು ಮತ್ತು ಅದರ ಬಗ್ಗೆಯೇ ಚರ್ಚೆ ಮಾಡುವವರೆಷ್ಟು ಜನ ನೋಡಿದಿರಾ ಭ್ರಮೆಯ ಆಟ!!!

(205)

ಮಾಯೆ ಕೇಕಯಪುತ್ರಿ 144-148 ಕಗ್ಗರಸಧಾರೆ

"ಇಲ್ಲ" ಏಕೆಂದರೆ, ಆಕೆ ನಮಗೆ "ನನ್ನನ್ನು ಬಿಟ್ಟರೆ ನಿಮಗೆ ಸತ್ಯ ದರ್ಶನವಾಗುತ್ತದೆ' ಎಂಬುದನ್ನೂ ಸಹ ನಾವು ಆ ಭ್ರಮಾಲೋಕದಲ್ಲಿ ಇರುವಾಗಲೇ ಅರಿವು ಮಾಡಿಕೊಡುತ್ತಾಳೆ ಅಲ್ಲವೇ? ಅರಿತು ಭ್ರಮೆಯಿಂದ ಹೊರಗೆ ಬಂದು ಮಾಯಾ ಲೋಕದಿಂದ ಮುಕ್ತರಾಗಬೇಕಾದರೆ ಸತ್ಯವರಿಯಬೇಕು. ಈ ಜಗತ್ತಿನಲ್ಲಿ ನಮ್ಮ ಬದುಕು "ಅಶಾಶ್ವತ" ಎಂದು ಅರಿಯಬೇಕು. "ಯಾವುದೂ ನಾವಲ್ಲ ಮತ್ತು ಯಾವುದೂ ನಮ್ಮದಲ್ಲ ನಾವು ಧರಿಸಿರುವುದು ಕೇವಲ ಪಾತ್ರಗಳು" ಎಂಬ ದೃಢ ನಂಬಿಕೆ ಮತ್ತು ವಿಶ್ವಾಸದಿಂದ ಮಾತ್ರ ನಮಗೆ ಸತ್ಯದರಿವು ಆಗಿ, ಶುದ್ಧ ಸತ್ವ ಅರ್ಥವಾಗುತ್ತದೆ. ಹಾಗೆ ಅರ್ಥವಾದ ಸತ್ವವನ್ನು ನಾವು ನಮ್ಮದಾಗಿಸಿಕೊಂಡು ಅದನ್ನು ನಮ್ಮ ಸ್ವಭಾವವನ್ನಾಗಿಸಿಕೊಂಡರೆ, ನಾವು ಈ ಮಾಯೆಯ ಮಗಳಾದ ಭ್ರಮೆಯ ಹಿಡಿತದಿಂದ ಮುಕ್ತರಾಗಿ ಸತ್ಯವರಿತು, ಮಾಯೆ ಮತ್ತು ಭ್ರಮೆಯ ಸಹವಾಸದಲ್ಲಿ ಉದ್ಭವವಾಗುವ ತೊಂದರೆಗಳಿಂದ ಮುಕ್ತರಾಗಿ, ಶುದ್ಧ ಮತ್ತು ನಿಜ ಆನಂದದಿಂದ ಇರಬಹುದು. "ಆದರೆ ನಮಗೆ ರಂಜನೀಯವಾದ 'ಭ್ರಮಾಲೋಕ ಬೇಕೋ ಅಥವಾ 'ಆನಂದಮಯವಾದ ಸತ್ವಲೋಕ' ಬೇಕೋ ನಾವೇ ನಿರ್ಧರಿಸಿಕೊಳ್ಳಬೇಕು. ನಮ್ಮ ಇಚ್ಛೆ ಬಹಳ ಮುಖ್ಯ. ನಾವು ಏನನ್ನು ಬಯಸಿದರೆ ಅದು ನಮಗೆ ಸಿಗುತ್ತದೆ.

**ಮುಕ್ತಕ-147** **ಮಾಯೆಯೊಮ್ಮೊಮ್ಮೆ ತೋರುವಳು ಮಿಗಿಲಕ್ಕರೆಯ |**

**ಮಾಯಿಪಳು ಗಾಯಗಳನೀವಳಿಷ್ಟಗಳ ||**

**ಮೈಯ ನೀಂ ಮರೆಯೆ ನೂಕುವಳಾಗ ಪಾತಳಕೆ |**

**ಪ್ರೇಯಸೂತನೆಯವಳು-ಮಂಕುತಿಮ್ಮ ||**

ಮಾಯೆಯೊಮ್ಮೊಮ್ಮೆ=ಮಾಯೆಯು+ಒಮ್ಮೊಮ್ಮೆ, ಮಿಗಿಲಕ್ಕರೆಯ=ಮಿಗಿಲು+ಅಕ್ಕರೆಯ,

ಮಾಯಿಪಳು ಗಾಯಗಳನೀವಳಿಷ್ಟಗಳ=ಮಾಯಿಪಳು+ಗಾಯಗಳ+ಈವಳು+ಇಷ್ಟಗಳ,

ನೂಕುವಳಾಗ=ನೂಕುವಳು+ಆಗ, ಮಿಗಿಲಕ್ಕರೆಯ=ಅತಿಯಾದ ಅಕ್ಕರೆ ಅಥವಾ ಪ್ರೀತಿ.

ಮಾಯಿಪಳು=ಗಾಯ ಮಾಗುವಂತೆ ಮಾಡುವಳು, ನೂಕುವಳಾಗ+ತಳ್ಳುವಳು ಆಗ, ಪಾತಳಕೆ=ಪಾತಾಳಕ್ಕೆ,

ಪ್ರೇಯಪೂತನೆಯವಳು=ವಿಷವನುಣಿಸುವ ಪೂತನೆಯಂತೆ.

ನಮಗೆ ಅರ್ಥವೇ ಆಗದ ಈ ಮಾಯೆಯ ಮತ್ತೊಂದು ಸ್ವರೂಪವನ್ನು ವಿವರಿಸುತ್ತಾ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ, ಆಗಾಗ ಈ ಮಾಯೆ ನಮ್ಮ ಮೇಲೆ ಅತೀ ಪ್ರೀತಿಯನ್ನು ತೋರಿ ನಮ್ಮ ದುಃಖಗಳನ್ನು ತೀರಿಸುವಂತೆ ಮಾಡಿ ನಮ್ಮ ಆಸೆಗಳನ್ನು ತೀರಿಸುತ್ತಾಳೆ. ಆದರೆ ಆ ಸಂತೋಷದಲ್ಲಿ ನಾವೇನಾದರೂ ಮೈ ಮರೆತು ನಡೆದುಕೊಂಡೆವೋ, ತಕ್ಷಣವೇ ನಮ್ಮನ್ನು ಪಾತಾಳಕ್ಕೆ ತಳ್ಳಿ ಬಿಡುತ್ತಾಳೆ. ಮೂಲತಃ ರಾಕ್ಷಸ ಗುಣವನ್ನು ಹೊಂದಿದವಳಾದರೂ ತಾನು ಸುಂದರ ರೂಪ ಧರಿಸಿ 'ಕೃಷ್ಣನಿಗೆ ವಿಷಪೂರಿತ ಹಾಲನ್ನು ಕುಡಿಸಲು ಪ್ರಯತ್ನಿಸಿದ 'ಪೂತನೆಯಂತೆ" ಎಂದು ಬಹಳ ಸುಂದರವಾಗಿ ಒಂದು ಗಹನವಾದ ವಿಚಾರವನ್ನು ಪ್ರಸ್ತಾಪ ಮಾಡುತ್ತಾರೆ.

ನಮ್ಮ ಜೀವನವನ್ನು ಒಂದು ಬಾರಿ ಅವಲೋಕಿಸಿ ನೋಡಿದರೆ, ಈ ವಿಷಯ ಅರ್ಥವಾಗುತ್ತದೆ. ಕೆಲವರ ಜೀವನ ಸುಗಮವಾಗಿ ಆದಿಯಿಂದ ಅಂತ್ಯದವರೆಗೆ ನಡೆದುಕೊಂಡು ಹೋಗುವುದನ್ನು ನಾವು ಕಾಣುತ್ತೇವೆ.

ಅವರ ಸಂಖ್ಯೆ ಬಹಳ ಕಡಿಮೆ. ಬಹಳಷ್ಟು ಜನರ ಜೀವನ ಒಂದು ರಂಗಿನ ಚಕ್ರದಂತೆ (roller coaster ride) ಇರುತ್ತದೆ. ಆಸೆಗಳ ಬೆನ್ನು ಹತ್ತಿ ಹೋದವರಿಗೆ ಮೊದಮೊದಲು ಎಲ್ಲವೂ ಸುಂದರವಾಗಿ ಕಂಡರೂ, ಅನುಭವಗಳಾಗುತ್ತ ಆಗುತ್ತಾ ಏಳುಬೀಳುಗಳು ಎಡರು ತೊಡರುಗಳು ಬೇಕಾದಷ್ಟು ಬರುತ್ತವೆ. ಎಲ್ಲರೂ ವಯೋಧರ್ಮಕ್ಕೆ ಅನುಗುಣವಾಗಿ ಈ ಜಗತ್ತಿನ ಸುಖ ಸೌಲಭ್ಯಗಳನ್ನು ಅನುಭವಿಸುವ ತವಕದಲ್ಲಿರುತ್ತಾರೆ. ವಿಷಯಾಕರ್ಷಣೆ ಹೇಗಿರುತ್ತದೆ ಎಂದರೆ ಸೂಕ್ತಾಸೂಕ್ತತೆಯನ್ನು ಪರೀಕ್ಷಿಸಿ ನೋಡುವ ತಾಳ್ಮೆ ಮತ್ತು ಜಾಣ್ಮೆ ಯಾರಲ್ಲೂ ಇರುವುದಿಲ್ಲ. ಬಯಕೆಯಲ್ಲಿ ವಿವೇಚನೆ ಇರುವುದಿಲ್ಲ. ಪಡೆದರೆ ಸಂಪೂರ್ಣ ತೃಪ್ತಿ ಇರುವುದಿಲ್ಲ. ಏನೋ ಅತೃಪ್ತಿ, ಸಂಕಷ್ಟ, ನೋವು ಜಿಗುಪ್ಸೆ, ಜೀವನ ಕಷ್ಟವೆಂದು ಅನ್ನಿಸತೊಡಗುತ್ತದೆ.

ಇವಕ್ಕೆಲ್ಲ ಕಾರಣ ಹುಡುಕುತ್ತಾ ಜನ ದೇವರು, ದೇವತೆಗಳು, ಗ್ರಹಗಳು, ಜಾತಕ, ಸ್ವಾಮಿಗಳು, ಸಿದ್ಧರು ಹೀಗೆ ಎಲ್ಲೆಲ್ಲೋ ಸುತ್ತುತ್ತಾರೆ. ತಮ್ಮ ತಾಪತ್ರಯಗಳಿಗೆ ಪರಿಹಾರಗಳನ್ನು ಕಂಡುಕೊಳ್ಳಲು ಪ್ರಯತ್ನಪಡುತ್ತಾರೆ. ತಾತ್ಕಾಲಿಕ ಪರಿಹಾರಗಳನ್ನು ಕಂಡುಕೊಳ್ಳುತ್ತಾರೆ. ನಂಬಿಕೆಗಳನ್ನು ಬೆಳೆಸಿಕೊಳ್ಳುತ್ತಾರೆ. ತಮ್ಮ ನಂಬಿಕೆಗಳನ್ನು ಬೇರೆಯವರ ಮೇಲೆ ಹೇರುತ್ತಾರೆ. ಎಲ್ಲರೂ ಯಾವುದಾದರೊಂದು ರೀತಿಯ ಕಷ್ಟಗಳ ಸಂಕೋಲೆಗಳಲ್ಲಿ ಸಿಕ್ಕು ತೊಳಲಾಡುತ್ತಿರುತ್ತಾರೆ.

"ನೂಕುವಳಾಗ ಪಾತಳಕೆ" ಎಂದು ಬಹಳ ಸೂಕ್ತವಾಗಿ ಹೇಳಿದ್ದಾರೆ ಗುಂಡಪ್ಪನವರು. ಮೊದಲು ಆಸೆ ಹುಟ್ಟಿಸುವುದು, ಪಡೆದುಕೊಳ್ಳುವ ಪ್ರಯತ್ನ ಮಾಡಿಸುವುದು, ಪಡೆದನೆಂಬ, ಗೆದ್ದೆನೆಂಬ ಭಾವ ಮೂಡಿಸುವುದು, ಅಹಂಕಾರ ಹುಟ್ಟಿಸುವುದು, ಮತ್ತೆ ಕೆಳಕ್ಕೆ ತಳ್ಳುವುದು. ಆಸೆಯೇ ಮಾಯೆಯ ಮೊದಲ ಅಸ್ತ್ರ, ಆಸೆ ಹುಟ್ಟಿಸಿ, ಎಲ್ಲವನ್ನೂ ಸುಂದರವಾಗಿ ಸುಗಮವಾಗಿ ತೋರಿಸುತ್ತಾ ಎಲ್ಲರನ್ನೂ ತನ್ನ ಹಿಡಿತಕ್ಕೆ ಸೆಳೆದುಕೊಳ್ಳುವುದೇ ಮಾಯೆಯ ಕಾರ್ಯ ವೈಖರಿ. ಬಹಳ ಸಾವಧಾನದಿಂದ ಇದ್ದರೆ, ಇದರ ಹಿಡಿತದಿಂದ ತಪ್ಪಿಸಿಕೊಳ್ಳಲಾಗದಿದ್ದರೂ, ಬಂದದ್ದನ್ನು ಅನುಭವಿಸುವ ಧೈರ್ಯ, ಸ್ಥೈರ್ಯವನ್ನು ಪಡೆದುಕೊಳ್ಳಬಹುದು. ಇದರ ಹಿಡಿತದಿಂದ ಬಿಡಿಸಿಕೊಳ್ಳಲು ಮೊದಲು ಆಸೆಯನ್ನು ಬಿಡಬೇಕು. ಸಾಧ್ಯವಾಗದಿದ್ದರೆ, ಅತಿಯಾಸೆಯನ್ನು ಬಿಡಬೇಕು. ನಮಗೆ ಆಗುವುದೆಲ್ಲ ಆ ಪರಮಾತ್ಮನ ಕೃಪೆಯಿಂದ ಆಗುತ್ತದೆ ಎಂಬ ದೃಢ ಭಾವವನ್ನು ತಳೆಯಬೇಕು. ಹಾಗಾದರೆ ಮಾಯೆಯ ಹಿಡಿತದಲ್ಲಿ ಇದ್ದರೂ ಸಮಾಧಾನದಿಂದ ಇರಬಹುದು.

**ಮುಕ್ತಕ-148**

**ಪ್ರಕೃತಿಯಿಂ ಸೊರಗಿರುವ ನರನಾರು ಸೃಷ್ಟಿಯಲಿ? |**
**ಸ್ವಕೃತಿಯೆಂದವನೆನುವುದವಳಿರದೊಡಿರದು ||**
**ಸುಕೃತವೆನಿಸುವುದವಳ ನೀಂ ವಶಕೆ ಕೊಳುವ ನಯ |**
**ವಿಕೃತಿಗೆಡೆಯಾಗದಿರೊ-ಮಂಕುತಿಮ್ಮ ||**

ಪೊರಗಿರುವ=ಪೊರಗೆ+ಇರುವ, ನರನಾರು=ನರನು+ಯಾರು,
ಸ್ವಕೃತಿಯೆಂದವನೆನುವುದವಳಿರದೊಡಿರದು=ಸ್ವಕೃತಿ+ಎಂದು+ಅವನು+ಎನುವುದು+ಅವಳು+ಇರದೊಡೆ+ಇರದು,
ಸುಕೃತವೆನಿಸುವುದವಳ=ಸುಕೃತ+ಎನಿಸುವುದು+ಅವಳ,
ವಿಕೃತಿಗೆಡೆಯಾಗದಿರೊ=ವಿಕೃತಿಗೆ+ಎಡೆ+ಆಗದಿರೋ.





ಹೊರಗೆ=ಹೊರಗೆ, ಸ್ವಕೃತಿ=ತನ್ನ ಕಾರ್ಯ, ಸುಕೃತ=ಒಳ್ಳೆಯ ಕೆಲಸ, ವಿಕೃತಿ=ಕೆಲಸ ಕೆಡುವುದು.

ಈ ಜಗತ್ತಿನ ಪ್ರಕೃತಿಯ ಪ್ರಭಾವದಿಂದ ಹೊರೆಗೆ ಇರುವ ಮನುಷ್ಯ ಯಾರು. ಯಾರಾದರೂ ಇದನ್ನು ನಾನು ಮಾಡಿದ್ದು' ಎಂದರೂ ಸಹ ಪ್ರಕೃತಿಯ ಪ್ರಭಾವದಲ್ಲೇ ಮಾಡಿರಬೇಕಲ್ಲವೇ? ಆದರೆ ಪ್ರಕೃತಿಯ ಪ್ರಭಾವದಲ್ಲಿ ಇದ್ದರೂ ಸಂಪೂರ್ಣ ಅದರ ವಶವಾಗದೆ, ತನ್ನ ಪ್ರತಿಭೆಯಿಂದ ಮಾಡುವ ಕೆಲಸವನ್ನು ಒಳ್ಳೆಯ ಕೆಲಸವೆನ್ನುತ್ತಾರೆ. ಆದರೆ ಕೆಲಸ ಮಾಡುವಾಗ ಸಂಪೂರ್ಣ ಪ್ರಕೃತಿಯ ಪ್ರಭಾವಕ್ಕೆ ಒಳಗಾಗಿ, ಕೆಲಸ ಕೆಡಿಸಿಕೊಳ್ಳದೆ ಅಂದರೆ ಅದನ್ನು ವಿಕೃತಗೊಳಿಸದೆ ಕೆಲಸವನ್ನು ಮಾಡೋ ಎಂದು ನಮಗೆ ಒಂದು ಎಚ್ಚರಿಕೆಯನ್ನು ನೀಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ನಾವೆಲ್ಲ, ಅಂದರೆ ಈ ಭೂಮಿಯ ಮೇಲಿನ ಎಲ್ಲವೂ ಪ್ರಕೃತಿ ಎಂದು ಪರಿಗಣಿಸಲಾಗುತ್ತದೆ. ಪ್ರಕೃತಿ ಎನ್ನುವ ಪದಕ್ಕೆ ಸ್ವಭಾವವೆಂದೂ ಹೆಸರು. ನಮ್ಮ ಜೀವನ ಈ ನಾವಿರುವ ಪ್ರಪಂಚದ ಪ್ರಕೃತಿಯ ಪ್ರಭಾವಕ್ಕೆ ಎಲ್ಲಾ ಸಮಯದಲ್ಲೂ ಒಳಗಾಗಿರುತ್ತದೆ. ಇದರಿಂದ ನಾವು ಬೇರೆ ಆಗಲು ಸಾಧ್ಯವೇ ಇಲ್ಲ. ನಮ್ಮ ಉಸಿರಾಟದಿಂದ ಹಿಡಿದು

ಎಲ್ಲವೂ ಈ ಪ್ರಕೃತಿಯ ಆಧಿಪತ್ಯಕ್ಕೆ ಒಳಪಟ್ಟದ್ದೆ ಅಲ್ಲವೇ? ನಾವು ಈ ಪ್ರಕೃತಿಯ ಒಂದು ಅವಿಭಾಜ್ಯ ಅಂಗವಲ್ಲದೆ ಮತ್ತೇನು? ಆದರೆ ಎಲ್ಲ ಪ್ರಾಣಿಗಳಂತೆ ನಾವು ಮಾನವರೂ ಸಹ, ಸ್ವತಂತ್ರವಾಗಿ ಯೋಚನೆ ಮಾಡುತ್ತೇವೆ. ಆದರೆ ನಮ್ಮ ಯೋಚನೆಗಳು ಅನ್ಯ ಪ್ರಾಣಿಗಳಿಗಿಂತ ಭಿನ್ನವಾದದ್ದು. ಒಂದೇ ಪ್ರಕೃತಿಯನ್ನು ಹಂಚಿಕೊಂಡರೂ ನಮ್ಮ ಆಲೋಚನೆಗಳು ಭಿನ್ನವಾಗಿಯೇ ಇವೆ. ನಾವು ಸಹಜವಾಗಿ ಪ್ರಕೃತಿಯ ಜೊತೆ ಜೊತೆಗೆ ಸಮನ್ವಯದಿಂದ ಬಾಳಬಹುದು. ಪ್ರಕೃತಿಯನ್ನು ಉಪಯೋಗಿಸಿಕೊಂಡು ಸಹಜ ಸೌಂದರ್ಯದಿಂದ ಬಾಳು ನಡೆಸಬಹುದು. ಅನ್ಯ ಪ್ರಾಣಿಗಳೆಲ್ಲವೂ ಪ್ರಕೃತಿ ಸಹಜವಾಗಿಯೇ ಜೀವಿಸುತ್ತವೆ, ಅಲ್ಲವೇ? ಆದರೆ ಮನುಷ್ಯ ಮಾತ್ರ ಭಿನ್ನ . ಏಕೆಂದರೆ ಇವನಿಗೆ ಒಂದು ಉನ್ನತ ಬುದ್ಧಿವಂತಿಕೆಯನ್ನು ಆ ಪರಮಾತ್ಮ ಕರುಣಿಸಿದ್ದಾನೆ ಅಲ್ಲವೇ?

ಈ ಪ್ರಕೃತಿಯಲ್ಲಿ ಇದ್ದು, ಪ್ರಕೃತಿಯೊಂದಿಗೆ ತನ್ನ ಬುದ್ಧಿವಂತಿಕೆಯನ್ನು ಉಪಯೋಗಿಸಿ, ಜಗತ್ತನ್ನು ಇನ್ನೂ ಸುಂದರವನ್ನಾಗಿಸುವುದು ಅವನಿಂದ ಸಾಧ್ಯ. ಅದು ಸುಕೃತಿಯಾಗುತ್ತದೆ. ಆದರೆ ಸಮನ್ವಯದಿಂದ ಬಾಳುವುದನ್ನು ಬಿಟ್ಟು ತನ್ನ ಸ್ವಾರ್ಥ ಮುಂತಾದ ದುರ್ಗುಣಗಳಿಂದ ಅವನು ಪ್ರಕೃತಿಯನ್ನು ಹಾಳುಗೆಡವಿ ತನ್ನ ನಾಶವನ್ನೇ ತಂದುಕೊಂಡಿದ್ದಾನೆ. ಅಷ್ಟೇ ಅಲ್ಲದೆ ಮುಂದಿನ ಪೀಳಿಗೆಗಳಿಗೆ ಒಂದು ದುರಂತದ ಪರಿಸ್ಥಿತಿಯನ್ನು ನಿರ್ಮಾಣ ಮಾಡಿದ್ದಾನೆ. ಇದು ವಿಕೃತಿ. ಇದು ಬಹಳ ಶೋಚನೀಯ ಸ್ಥಿತಿ ಆದರೆ ಅನಿವಾರಣೀಯವಲ್ಲ.
ಕೆಲವರು ಈ ನಿಟ್ಟಿನಲ್ಲಿ ಬಹಳ ಒಳ್ಳೆಯ ಕೆಲಸವನ್ನು ಮಾಡುತ್ತಿದ್ದಾರೆ. ಆದರೆ ಅದು ಸಾಲದು. ಸಮಗ್ರವಾಗಿ ಇಡೀ ಸಮಾಜವೇ ಈ ಕೆಲಸದಲ್ಲಿ ತೊಡಗಿಸಿಕೊಂಡರೆ, ನಮ್ಮ ಮುಂದಿನ ಪೀಳಿಗೆಗಳಿಗೆ ಸಹಜವಾಗಿ ಪ್ರಕೃತಿಯೊಂದಿಗೆ ಸಮನ್ವಯದಿಂದ ಬಾಳಲು ನಾವು ಅವಕಾಶ ಮಾಡಿಕೊಡಬಹುದು. ಒಂದು ವಿಷಯವನ್ನು ಎಲ್ಲರೂ ಅರಿತುಕೊಳ್ಳಬೇಕು. ನಮಗೆ ಉಪಯೋಗಕ್ಕೆ ಬರುವ ಯಾವುದೇ ವಸ್ತುವನ್ನು ನಾವು ಜತನ ಮಾಡಿದರೆ, ಅದು ನಮ್ಮನ್ನು ದೀರ್ಘಕಾಲ ಕಾಪಾಡುತ್ತದೆ. ಇಲ್ಲದಿದ್ದರೆ ಇಲ್ಲ. ಇದು ಪ್ರಕೃತಿಗೂ ಅನ್ವಯ.

(208)

| ಕಗ್ಗರಸಧಾರೆ | ದೊರೆ ಮೂವರು 149-153 |
|---|---|

ಬಂಧುಗಳೇ, ನಿಮ್ಮ ವೃತ್ತಗಳಲ್ಲಿ ಪ್ರಕೃತಿಯನ್ನು ಕಾಯುವ ಮತ್ತು ಕಾಪಾಡುವ ಕಾರ್ಯಗಳಲ್ಲಿ ಎಲ್ಲರೂ ತೊಡಗಿಸಿಕೊಂಡರೆ ಅದೇ ಸುಕೃತಿ.

# ದೊರೆ ಮೂವರು 149-153

**ಮುಕ್ತಕ-149** **ಅರಸನೊಬ್ಬನಲ್ಲ; ಮೂವರು ಬಾಳನಾಳುವರು |**

**ನರ ಕರುಮ ದೈವಗಳು ತೊಡಕದಕೆ ಸಾಜ |**

**ಗುರಿಯಿಡದ, ಮೊದಲು ಕೊನೆಯಿರದ, ದರಬಾರಿನಲಿ |**

**ಸರಿಯೇನೋ ತಪ್ಪೇನೋ?-ಮಂಕುತಿಮ್ಮ ||**

ಅರಸನೊಬ್ಬನಲ್ಲ=ಅರಸನು+ಒಬ್ಬನಲ್ಲ, ಬಾಳನಾಳುವರು=ಬಾಳನು+ಆಳುವರು,
ತೊಡಕದಕೆ=ತೊಡಕು+ಅದಕೆ.
ಅರಸನು=ರಾಜನು, ಒಡೆಯನು, ನರ=ಮನುಷ್ಯ, ಕರುಮ=ಕರ್ಮ, ದೈವಗಳು=ಆ ಪರಮಾತ್ಮ ಮತ್ತು ಅವನ ಗುಂಪು, ಸಾಜ=ಸಹಜ. ಗುರಿಯಿಡದ=ಪೂರ್ವ ನಿರ್ಧಾರಿತ ಕಾರಣವಿಲ್ಲದೆ.

ನಮ್ಮ ಬಾಳಿಗೆ ಅರಸ ಅಥವಾ ಒಡೆಯ ಒಬ್ಬನಲ್ಲ. ಮೂರು ಜನರಿದ್ದಾರೆ. ನಾವು, ನಮ್ಮ ಪೂರ್ವ ಕರ್ಮ ಮತ್ತು ದೈವ. ಹೀಗೆ ಒಂದು ಕಾರ್ಯಕ್ಕೆ ಮೂರು ಅರಸರಿದ್ದಾಗ, ತೊಡಕುಂಟಾಗುವುದು ಸಹಜ. ಒಂದು ಆದಿ ಮತ್ತು ಒಂದು ಅಂತ್ಯವಿರದ ಮತ್ತು ಯಾವುದೇ ನಿರ್ಧಾರಿತ ಗುರಿಯಿರದ ಈ ಬಾಳಿನಲ್ಲಿ ನಡೆಯುವುದರಲ್ಲಿ ಸರಿಯೇನೋ ತಪ್ಪೇನೋ ಎಂದು ಒಂದು ಮಹತ್ತಾದ ವಿಷಯವನ್ನು ಪ್ರಸ್ತಾಪಿಸುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಈ ಜಗತ್ತು ಒಂದು ದರ್ಬಾರು. ಇಲ್ಲಿ ಸಕಲ ಚರಾಚರಗಳ ಬಾಳು. ಅವುಗಳ ನಡುವೆ ನಾವು. ನಮ್ಮ ಬಾಳಿಗೆ ಮೂವರು ಒಡೆಯರು. ನಾವು, ನಮ್ಮ ಕರ್ಮ ಮತ್ತು ನಮ್ಮನ್ನಾಳುವ ದೈವ, ನಾವು ಎಂದರೆ ಹೇಗೆ? ಎಲ್ಲವೂ ದೈವ ನಿಯಾಮಕವಲ್ಲವೇ? ನಮ್ಮ ಕರ್ಮಗಳೂ ಪೂರ್ವ ನಿರ್ಧಾರಿತ ಮತ್ತು ಪೂರ್ವ ನಿಯೋಜಿತವಲ್ಲವೇ? ಹೀಗೆ ಹತ್ತು ಹಲವಾರು ಸಂದೇಹಗಳು ನಮ್ಮ ಮನದಲ್ಲಿ ಉದ್ಭವವಾಗುವುದು ಸಹಜ. ಆದರೆ ಇದು ಬಹಳ ಸೂಕ್ಷ್ಮವಾದ ವಿಷಯ.

ನಮಗೆ ಒಂದು ಸ್ವತಂತ್ರವಾದ ಯೋಚನಾ ಶಕ್ತಿಯನ್ನು ಪರಮಾತ್ಮ ಕೊಟ್ಟಿದ್ದಾನೆ. ಇದರಿಂದ ನಾವು ಕೆಲಸಗಳನ್ನು ಮಾಡುವಾಗ 'ನಾವು ಮಾಡುತ್ತಿದ್ದೇವೆ' ಎಂದು ಅಂದುಕೊಳ್ಳುತ್ತೇವೆ. ಆದರೆ ನಾವು ಹುಟ್ಟುವಾಗ ನಮ್ಮ ಪೂರ್ವ ಜನ್ಮದಿಂದ ಸಂಚಿತ ಕರ್ಮ ಮತ್ತು ವಾಸನೆಗಳನ್ನು ತೆಗೆದುಕೊಂಡೆ ಬರುತ್ತೇವೆ ಎನ್ನುವುದು ಭಾರತೀಯ ವೇದಾಂತ, ಹಾಗೆ ತಂದ, ಸಂಚಿತ ಕರ್ಮ ವಾಸನೆಗಳು, ನಾವು ಜನ್ಮ ಪಡೆದ ಮೇಲೆ ನಾವು ಹುಟ್ಟಿದ ವಂಶದ

ಗುಣಗಳು, ನಮ್ಮ ಪರಿಸರ, ಸಮಾಜ, ವಿದ್ಯೆ, ಸಹವಾಸ ಮುಂತಾದವುಗಳಿಂದ ಪುನಃ ಸಂಚಯವಾಗುವ ಗುಣಗಳು ನಮ್ಮ ಕರ್ಮಗಳನ್ನು ನಿರ್ದೇಶಿಸುತ್ತವೆ.

(209)

ದೊರೆ ಮೂವರು 149-153 ಕಗ್ಗರಸಧಾರೆ

ಆದರೆ ಕೆಲವು ಬಾರಿ ನಮ್ಮ ಬುದ್ಧಿ ಶಕ್ತಿಯನ್ನು ಉಪಯೋಗಿಸಿದರೂ, ನಮ್ಮ ಎಲ್ಲ ವಿದ್ಯೆ ಸಂಸ್ಕಾರಗಳನ್ನು ಉಪಯೋಗಿಸಿದರೂ ನಾವಂದುಕೊಂಡ ಕೆಲಸ ಆಗದೆ ಹೋಗುವ ಸಂಭವ ಉಂಟು. ಅದಕ್ಕೆ ಕಾರಣವನ್ನು ಹುಡುಕಿ ಕೆದಕಿ ನೋಡಿದರೂ ನಮಗರ್ಥವಾಗದೆ ಹೋಗಬಹುದು. ಏಕೆಂದರೆ ನಮ್ಮ ವೈಯಕ್ತಿಕ ಬುದ್ಧಿವಂತಿಕೆ ಮತ್ತು ನಾವು ಕಲಿತ ಬುದ್ಧಿಗಳಿಗಿಂತ ಮಿಗಿಲಾದ ಆ ದೈವೀ ಶಕ್ತಿಯೂ ತನ್ನ ಪಾತ್ರವನ್ನು ಆಡಿಯೇ ತೋರುತ್ತದೆ. ಇವರು ಮೂವರೂ ತಮ್ಮ ತಮ್ಮ ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತಿರಲು, ಎಷ್ಟೋ ಸಲ ಆ ಕಾರ್ಯಗಳು ಕೆಡಲೂಬಹುದು. ಇದನ್ನೇ ಮಾನ್ಯ ಗುಂಡಪ್ಪನವರು "ತೊಡಕದಕೆ ಸಾಜ" ಎಂದರು.

ಹಾಗಾಗಿ ನಮ್ಮನ್ನು ನಿಯಂತ್ರಿಸುವವರು ನಾವು, ನಮ್ಮ ಕರ್ಮಗಳು ಮತ್ತು ಆ ದೈವ. ಇದೆ ಅರ್ಥದಲ್ಲಿ ಮಾನ್ಯ ಗುಂಡಪ್ಪನವರು ನಮ್ಮನ್ನು ಆಳುವ ಅರಸರು ಮೂವರು ಎಂದು ಹೇಳಿದ್ದಾರೆ. ನಮ್ಮ ಜೀವನದ ಪಯಣ ಎಂದು ಮೊದಲಾಯಿತು ಎಂದು ನಮಗೆ ಗೊತ್ತಿಲ್ಲ. ಎಂದು ಕೊನೆಯೋ ಗೊತ್ತಿಲ್ಲ. ಈ ಜಗತ್ತಿನಲ್ಲಿ ನಮ್ಮ ಜನ್ಮ ಜನ್ಮಾಂತರದ ಈ ಪಯಣದ ಗುರಿಯೇನೋ ಗೊತ್ತಿಲ್ಲ.

ಆದರೆ ನಾವು ಬಾಳಲೇ ಬೇಕು. ಈ ಜಗತ್ತಿನಲ್ಲಿ ಹುಟ್ಟಿದ ಮೇಲೆ ಬಾಳಲೇಬೇಕು. ಆದ್ದರಿಂದ, ನಮ್ಮ ಪೂರ್ವಕರ್ಮದಿಂದ ಸಂಚಯನವಾದ ಗುಣಗಳನ್ನು ಉಳಿಸಿಕೊಂಡು ತಿದ್ದಿಕೊಂಡು, ಈ ಜೀವನದಲ್ಲಿ ಆರ್ಜಿಸಿದ ಜ್ಞಾನ ಮತ್ತು ಅನುಭವಗಳನ್ನು ನಮ್ಮ ವೈಯಕ್ತಿಕ ಬುದ್ಧಿವಂತಿಕೆಯೊಂದಿಗೆ ಸಮನ್ವಯ ಮಾಡಿಕೊಂಡು, ದೈವವನ್ನು ನಂಬಿ ಅದರ ಸಹಾಯವನ್ನೂ ಪಡೆದುಕೊಂಡು, ನಮ್ಮನ್ನಾಳುವ ಮೂರೂ ಅರಸರನ್ನು ಏಕಮುಖವಾಗಿ ದಂಡಿಗೆ

ಕರೆದುಕೊಂಡು ಹೊರಟರೆ, ನಾವು ಈ ಜೀವನದ ಯುದ್ಧವನ್ನು ಗೆಲ್ಲಬಹುದು. ವಾಚಕರೆ, ಅಂತಹ ಪ್ರಯತ್ನವನ್ನು ನಮ್ಮ ನಮ್ಮ ಜೀವದಲ್ಲೂ ಮಾಡೋಣವೆ?

**ಮುಕ್ತಕ-150** **ದೊರೆ ಮೂವರಿರುವಲ್ಲಿ ಸರಿಯಿಹುದೆ ಸೋಜಿಗವು |**
**ಕೊರತೆ ಹೆಚ್ಚಿಕೆಗಳಿರಲಚ್ಚರಿಯದೇನು? ||**
**ಬರಲಿ ಬರುವುದು, ಸರಿವುದೆಲ್ಲ ಸರಿಯಲಿ; ನಿನಗೆ |**
**ಪರಿವೆಯೇನಿಲ್ಲೆಲವೋ-ಮಂಕುತಿಮ್ಮ ||**

ಮೂವರಿರುವಲ್ಲಿ=ಮೂವರು+ಇರುವಲ್ಲಿ, ಸರಿಯಿಹುದೆ=ಸರಿ+ಇಹುದೆ,
ಹೆಚ್ಚಿಕೆಗಳಿರಲಚ್ಚರಿಯದೇನು=ಹೆಚ್ಚಿಕೆಗಳು+ಇರಲು+ಅಚ್ಚರಿ+ಅದೇನು,
ಪರಿವೆಯೇನಿಲ್ಲೆಲವೋ=ಪರಿವೆ+ಏನು+ಇಲ್ಲ+ಎಲವೋ
ಸರಿಯಿಹುದೆ=ಸರಿಯಾಗಿರುವುದೇ, ಸೋಜಿಗವು=ಆಶ್ಚರ್ಯವು, ಹೆಚ್ಚಿಕೆ=ಆಧಿಕ್ಯ,
ಸರಿವುದೆಲ್ಲ=ಕಳೆದುಹೋಗುವುದು, ಸರಿಯಲಿ=ಮುಂದಕ್ಕೆ ಹೋಗಲಿ, ಪರಿವೆ=ಅರಿವು.

ನಮ್ಮನ್ನಾಳುವ ದೊರೆಗಳು ಮೂವರು ಇರುವಲ್ಲಿ, ಎಲ್ಲವೂ ಸರಿಯಿದ್ದರೆ ಅದು ಆಶ್ಚರ್ಯವೇ ಸರಿ. ಹೆಚ್ಚು ಕಡಿಮೆಗಳು, ಕೊರತೆ, ಹೆಚ್ಚಳಿಕೆಗಳು ಇದ್ದರೆ ಅಚ್ಚರಿಯಿಲ್ಲ. ಬರುವುದು ಬರಲಿ ನಡೆಯುವುದೆಲ್ಲ ನಡೆಯಲಿ ಅದನ್ನು ಕುರಿತು ನೀನು ಹೆಚ್ಚಾಗಿ ಚಿಂತಿಸುವೆ ಏಕೋ, ಎಂದು ಒಂದು ಪ್ರಶ್ನೆಯನ್ನು ಕೇಳುತ್ತಾರೆ.





ಜೀವನದಲ್ಲಿ ಒಂದು ನಿರ್ಲಿಪ್ತ ಭಾವ ಬೇಕು. ಯಾವುದನ್ನೂ ಅತಿಯಾಗಿ ಮನಸ್ಸಿಗೆ ಹಚ್ಚಿಕೊಳ್ಳದೆ “ಬಂದದ್ದೆಲ್ಲಾ ಬರಲಿ, ಆ ಗೋವಿಂದನ ದಯೆ ಇರಲಿ” ಎಂದು ಇದ್ದರೆ ಮನಸ್ಸಿಗೆ ಅಲ್ಪ ಸ್ವಲ್ಪ ನೆಮ್ಮದಿ. ಅಲ್ಲವೇ ವಾಚಕರೆ? ನಮ್ಮ ಬಾಳನ್ನು ಆಳುವವರು ಮತ್ತು ನಿರ್ಧರಿಸುವವರು ನಮ್ಮ ವ್ಯಕ್ತಿಗತ ಬುದ್ಧಿಶಕ್ತಿ, ನಮ್ಮ ಪೂರ್ವ ಕರ್ಮ ಮತ್ತು ಆ ಪರಮ ಚೇತನವೆಂಬ ಮೂರು ಅರಸರು ಇರುವಾಗ, ಎಲ್ಲವೂ ಸಮರ್ಪಕವಾಗಿ ಇರುವ ಸ್ಥಿತಿ ಇರುವುದೇ ಇಲ್ಲ. ಏಕೆಂದರೆ,

ನಾವು ನಮ್ಮ ಪರಿಮಿತ ಬುದ್ಧಿಶಕ್ತಿಯಿಂದ ಯೋಚನೆ ಮಾಡುತ್ತೇವೆ. ಅದರ ಪ್ರಕಾರ ನಮ್ಮ ಕೆಲಸಗಳನ್ನು ಮಾಡುತ್ತೇವೆ. ನಮಗೆ ನಮ್ಮ ಪೂರ್ವ ಕರ್ಮವೂ ಗೊತ್ತಿಲ್ಲ, ಆ ಪರಮಾತ್ಮನ ಇಚ್ಚೆಯೂ ಗೊತ್ತಿಲ್ಲ.

ನಾವು ಹಲವಾರು ಕೋನಗಳಿಂದ ಪ್ರಭಾವಿತವಾದ ನಮ್ಮ ಪರಿಮಿತ ಮತಿಯಿಂದ ಯೋಚಿಸಿ, "ಹೇ ಪರಮಾತ್ಮ ಕಾಪಾಡು, ನನಗೆ ಈ ಕೆಲಸ ಆಗುವಂತೆ ಕರುಣಿಸು" ಎಂದೆಲ್ಲ ಬೇಡುತ್ತೇವೆ. ಆದರೆ ನಮ್ಮ ಕೆಲಸ ಆಗುವುದಕ್ಕೆ ಇರುವ ಅನ್ಯ ಕಾರಣಗಳು, ನಮ್ಮ ಚಟುವಟಿಕೆಗಳ ಮೇಲೆ ನಮ್ಮ ಪೂರ್ವ ಕರ್ಮದ ಪ್ರಭಾವ ಮತ್ತು ದೈವೇಚ್ಛೆ, ಇವೆಲ್ಲವೂ ಕಾರಣವಾಗುತ್ತವೆ. ಹಾಗಿರುವಾಗ ನಮ್ಮ ಕೆಲಸ ನಾವಂದುಕೊಂಡಂತೆ ಆಗೇ ಆಗುತ್ತದೆ ಎಂದು ಹೇಳಲಾಗುತ್ತದೆಯೇ? ಇಂತಹ ಪರಿಸ್ಥಿತಿಯಲ್ಲಿ ನಾವು ನಮ್ಮ ಕೆಲಸಗಳಾಗದಿದ್ದರೆ ಆಶ್ಚರ್ಯಪಡಬೇಕಾಗಿಲ್ಲ ಅಲ್ಲವೇ?

ತಿರುವನಂತಪುರದ ರಾಜರಾಗಿದ್ದ ರಾಜ ಕುಲಶೇಖರರು "ಮುಕುಂದಮಾಲ" ಎಂಬ ಒಂದು ಸ್ತೋತ್ರರತ್ನದಲ್ಲಿ "ಯದ್ ಯದ್ ಭವ್ಯಂ ಭವತು ಭಗವನ್ ಪೂರ್ವ ಕರ್ಮಾನುರೂಪಂ, ಏತತ್ ಪ್ರಾರ್ತ್ಯಂ ಮಮ ಬಹುಮತಂ ಜನ್ಮಜನ್ಮಾಂತರೇಪಿ ತ್ವತ್ಪಾದಾಂಬೋರುಹ ಯುಗಗತಾ ನಿಶ್ಚಲಾ ಭಕ್ತಿರಸ್ತು' ಎಂದು ಹೇಳುತ್ತಾರೆ. "ಹೇ ಪರಮಾತ್ಮ ಜನ್ಮ ಜನ್ಮಾಂತರದಲ್ಲಿ ಸಂಚಿತವಾದ ನನ್ನ ಪೂರ್ವಕರ್ಮದ ಅನುಸಾರವಾಗಿ ಏನೆಲ್ಲಾ ನಡೆಯಬೇಕೋ ಅದೆಲ್ಲ ನಡೆಯಲಿ. ಆದರೆ ಅದನ್ನೆಲ್ಲ ಅನುಭವಿಸುವಾಗ ನನ್ನ ಮನಸ್ಸು ನಿನ್ನ ಚರಣಗಳಲ್ಲಿ ಇರಲಿ" ಎನ್ನುವ ಅರ್ಥದಲ್ಲಿ ಹೇಳುತ್ತಾರೆ. ಇದನ್ನೇ ಗುಂಡಪ್ಪನವರು "ಬರಲಿ ಬರುವುದು, ಸರಿವುದೆಲ್ಲ ಸರಿಯಲಿ" ಎಂದು ಈ ಮುಕ್ತಕದಲ್ಲಿ ಪ್ರಸ್ತಾಪ ಮಾಡಿದ್ದಾರೆ.

ನಾವು ನಮ್ಮ ಬುದ್ಧಿ ಶುದ್ಧವಾಗಿ ಇಟ್ಟುಕೊಳ್ಳಬೇಕು, ನಮ್ಮ ಪೂರ್ವಕರ್ಮದ ಬಗ್ಗೆ ಚಿಂತಿಸದೆ, ದೈವದಲ್ಲಿ ನಂಬಿಕೆ ಇಟ್ಟುಕೊಳ್ಳಬೇಕು. ಫಲಿತದ ಬಗ್ಗೆ ನಿರ್ಲಿಪ್ತ ಭಾವನೆ ಇರಬೇಕು. ಆಗ ಮನಸ್ಸಿಗೆ ನೆಮ್ಮದಿ ಸಿಗುತ್ತದೆ, ಶಾಂತಿ ಸಿಗುತ್ತದೆ ಮತ್ತು ಒಂದು ತೃಪ್ತ ಭಾವನೆ ಸಿಗುತ್ತದೆ. ಅದರ ಬಗ್ಗೆ ನಾವು ಚಿಂತಿಸಿ ಪ್ರಯೋಜನವಿಲ್ಲ ಎಂದು ಒಂದು ಸಲಹೆಯನ್ನೂ ನೀಡಿದ್ದಾರೆ ಮಾನ್ಯ ಗುಂಡಪ್ಪನವರು. ಬಂಧುಗಳೇ ನಾವು ನಮ್ಮನ್ನಾಳುವ ಈ ಮೂವರಿಗೂ ಒಂದು ದೀರ್ಘದಂಡ ಪ್ರಣಾಮ ಮಾಡಿ ಒಂದು ನಿರ್ಲಿಪ್ತ ಭಾವ ಬೆಳೆಸಿಕೊಂಡರೆ ನಮಗೆ ಸುಖವಿದೆ ಇಲ್ಲದಿದ್ದರೆ ಪ್ರತಿ ನಿತ್ಯ, ಪ್ರತಿ ಕ್ಷಣ ನಾವು ನೋವನ್ನುಣ್ಣುತ್ತಲೇ ಇರಬೇಕು.

**ಮುಕ್ತಕ-151**

**ದೈವವೆನಿಸಿರುತೆ ವಿಶ್ವಪ್ರಕೃತಿಶಕ್ತಿಯಲಿ ।**
**ಜೀವವಾಸನೆಗಳಲ್ಲಿ ಪೂರ್ವಕೃತವೆನಿಸಿ ॥**
**ಧೀವರ್ತನೆಯಲ್ಲಿ ಪೌರುಷವೆನಿಸಿ ಪರಸತ್ವ ।**
**ತ್ರೈವಿಧದೊಳಿರುತಿಹುದು-ಮಂಕುತಿಮ್ಮ ॥**

ದೈವವೆನಿಸಿರುತೆ=ದೈವ+ಎನಿಸಿ+ಇರುತೆ, ತ್ರೈವಿಧದೊಳಿರುತಿಹುದು=ತ್ರೈವಿಧದೊಳು+ಇರುತಿಹುದು.
ಪೂರ್ವಕೃತ=ಹಿಂದೆ ಮಾಡಿದ ಕರ್ಮ, ಧೀವರ್ತನೆಯಲಿ ಧೈರ್ಯದಲಿ, ಪೌರುಷವೆನಿಸಿ=ಶಕ್ತಯೆನಿಸಿ, ತ್ರೈವಿಧ=ಮೂರು ವಿಧದಲ್ಲಿ

ಪರಮಾತ್ಮ ಈ ಜಗತ್ತನ್ನು ಸೃಷ್ಟಿಸಿ ಪ್ರಕೃತಿಯ ಮೂಲಕ ಇದನ್ನು ನಡೆಸುತ್ತಾನೆ. ಈ ಜಗದ ಜೀವಿಗಳು, ತಮ್ಮ ಪೂರ್ವ ಮತ್ತು ಪೂರ್ವಜನ್ಮದ ವಾಸನಾ ಪ್ರೇರಿತ ಕರ್ಮಗಳ ಅನುಸಾರವಾಗಿ ತಮ್ಮ ಜೀವನ ನಡೆಸುತ್ತಿದ್ದಾರೆ. ಜೀವಿಗಳು ತಮ್ಮ ತಮ್ಮ ಪೂರ್ವಕರ್ಮಗಳನ್ನು ತಿದ್ದಿಕೊಂಡು ಮುನ್ನಡೆಯಲು "ಧೀ" ಅಂದರೆ ವಿವೇಚನಾ ಶಕ್ತಿಯನ್ನೂ ಕೊಟ್ಟಿದ್ದಾನೆ. ಹೀಗೆ ಪರಮಾತ್ಮ, ಪ್ರಕೃತಿ ಮತ್ತು ಜೀವಿಗಳ ಧೀ ಶಕ್ತಿಗಳ ಬಲದಿಂದಲೇ ಈ ಜಗದ್ವ್ಯಾಪಾರ ನಡೆಸುತ್ತಾನೆ ಎಂದು ಪ್ರಸ್ತಾಪಿಸುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಒಂದು ಪರಮ ಚೇತನ. ಅದನ್ನೇ ನಾವುಗಳು ಪರಮಾತ್ಮ ಎಂದು ಕರೆಯುತ್ತೇವೆ. ಆ ಪರಮಾತ್ಮ ತಾನೊಬ್ಬನಿದ್ದು, ತಾನು ಹಲವಾಗಬೇಕೆನ್ನುವ ಸಂಕಲ್ಪದಿಂದ, ಈ ಜಗತ್ತನ್ನು ಸೃಷ್ಟಿ ಮಾಡಿ ಮತ್ತು ಇದನ್ನು ನಡೆಸಿಕೊಂಡು ಹೋಗಲು ಪ್ರಕೃತಿಯನ್ನು ನಿಯಮಿಸಿದ. ಈ ಪ್ರಕೃತಿಯ ಮೂಲಕ ಎಲ್ಲ ಚರಾಚರಗಳ ಮೇಲೆ ಆ ಪರಮ ಚೇತನದ ಆಧಿಪತ್ಯ. ಈ ಜಗತ್ತಿನಲ್ಲಿ ಯಾವುದೂ ಈ ಪ್ರಕೃತಿಯ ಪ್ರಭಾವದ ಪರಿಧಿಯಿಂದ ಹೊರಗಿಲ್ಲ. ಹಾಗಾಗಿ ಎಲ್ಲವೂ ಆ ಪರಮಾತ್ಮನಿಂದ ಪ್ರೇರಿತ, ಪ್ರಭಾವಿತ ಮತ್ತು ದೈವಕ್ಕೆ ಅಧೀನ.

ಜೀವಿಗಳು ತಮ್ಮ ಪೂರ್ವ ಕರ್ಮದಿಂದ ಮತ್ತು ಪೂರ್ವ ಜನ್ಮದಿಂದ ಸಂಚಿತವಾದ ವಾಸನೆಗಳ ಸಹಿತ ಮತ್ತೊಂದು ಜನ್ಮ ಪಡೆಯುತ್ತವೆ. ತಮ್ಮ ಪೋಷಕರ, ವಂಶವಾಹಿನಿಯ, ಪರಿಸರದ, ವಿದ್ಯೆಯ, ಸಹವಾಸದ ಮತ್ತು ಸಂಗದ ಪ್ರಭಾವದಿಂದ ಮತ್ತೊಂದು ವ್ಯಕ್ತಿತ್ವದ ವಿಕಸನವಾಗುತ್ತದೆ.

ಈ ಜೀವಿಗಳಿಗೆ ಸ್ವಂತಿಕೆಯಿಂದ ಕೂಡಿದ ಒಂದು "ಬುದ್ಧಿಶಕ್ತಿ" ಆ ಪರಮಾತ್ಮ ಕರುಣಿಸಿದ್ದಾನೆ. ಅದನ್ನು ಉಪಯೋಗಿಸಿ ಪಾರಮಾರ್ಥಿಕ ಔನ್ನತ್ಯವನ್ನು ಪಡೆಯುವ ಸದವಕಾಶವನ್ನೂ ಕೊಟ್ಟಿದ್ದಾನೆ. ಅದಕ್ಕೆ ದಾರಿ ತೋರುವ "ಪರಸತ್ವ" ವನ್ನು ನಮಗೆ ವೇದೋಪನಿಷತ್ತುಗಳು, ಪುರಾಣಗಳು, ನೀತಿ ಕಥೆಗಳು, ಸಾಧುಗಳ, ಮುನಿಪುಂಗವರ ಜೀವನ ಮತ್ತು ಬೋಧನೆಗಳ ರೂಪದಲ್ಲಿ ಕೊಟ್ಟಿದ್ದಾನೆ. ಇವುಗಳನ್ನೆಲ್ಲ ಉಪಯೋಗಿಸಿಕೊಂಡು ನಾವು ಉನ್ನತಿಯನ್ನಾದರೂ ಪಡೆಯಬಹುದು ಅಥವಾ ಅವುಗಳನ್ನು ಅರಿಯದೆ, ಜನ್ಮ ಜನ್ಮಾಂತರಕ್ಕೆ ನಮ್ಮ ಕರ್ಮ ಶೇಷವನ್ನು ಹೆಚ್ಚಿಸಿಕೊಳ್ಳುತ್ತಾ ಹೋಗಬಹುದು.





ಹೀಗೆ ಪರಮಾತ್ಮ, ಪ್ರಕೃತಿ ಮತ್ತು ನಮ್ಮ ಪೂರ್ವ ಸಂಚಿತ ಕರ್ಮಗಳು ನಮ್ಮ ಜೀವನವನ್ನು ನಡೆಸುತ್ತವೆ. ಇದನ್ನು ಉತ್ತಮಗೊಳಿಸುವುದಕ್ಕೆ ನಮಗೆ "ಧೀ' ಇದೆ. ಅದನ್ನು ಉಪಯೋಗಿಸಿಕೊಳ್ಳಿ ಎಂದು ಒಂದು ಆದೇಶವನ್ನು ಸೂಚ್ಯವಾಗಿ ನಮಗೆ ನೀಡಿದ್ದಾರೆ ಮಾನ್ಯ ಗುಂಡಪ್ಪನವರು, ಈ ಮುಕ್ತಕದಲ್ಲಿ. ಉಪಯೋಗಿಸಿಕೊಳ್ಳುವುದು ಅಥವಾ ಬಿಡುವುದು ನಮ್ಮ ನಮ್ಮ ಆಯ್ಕೆಗೆ ಬಿಟ್ಟದ್ದು.

**ಮುಕ್ತಕ-152**

**ಪುಣ್ಯಪಾಪ ಋಣಾನುಬಂಧ ವಾಸನೆಗಳಿವು |**
**ಜನ್ಮಾಂತರದ ಕರ್ಮಶೇಷದಂಶಗಳು ||**
**ಎಣ್ಣಿಕೆಗೆ ಸಿಲುಕದಾಕಸ್ಮಿಕ ಯದೃಚ್ಛೆಗಳು |**
**ಸನ್ನಿಹಿತ ದೈವಕದೆ-ಮಂಕುತಿಮ್ಮ ||**

ಕರ್ಮಶೇಷದಂಶಗಳು=ಕರ್ಮ+ಶೇಷದ+ಅಂಶಗಳು, ಸಿಲುಕದಾಕಸ್ಮಿಕ=ಸಿಲುಕದ+ಆಕಸ್ಮಿಕ.

ಯದೃಚ್ಛೆಗಳು=ಸ್ವತಂತ್ರ, ದೈವ ಮತ್ತು ಅದೃಷ್ಟಗಳು, ಎಣ್ಣಿಕೆಗೆ=ಎಣಿಸಲು, ಸನ್ನಿಹಿತ=ಹತ್ತಿರ.

ಒಂದು ಬೀಜ ತನ್ನ ತಾಯಿ ಮರದಿಂದ ಬೇರ್ಪಟ್ಟು, ಮುಂದೆ ಭೂಮಿ, ನೀರು ಮತ್ತು ಬೆಳಕಿನ ಸಂಸರ್ಗದಿಂದ ತಾನೂ ಮೊಳಕೆಯೊಡೆದು, ಸಸಿಯಾಗಿ, ಗಿಡವಾಗಿ ಮರವಾಗಿ ಬೆಳೆದಾಗ, ತನ್ನ ತಾಯಿಮರದಿಂದ ಪಡೆದುಕೊಂಡ ಬಂದ ಎಲ್ಲ ಗುಣಗಳನ್ನೂ ನಾವು ಕಾಣಲಾಗದಿದ್ದರೂ ಆ ಮರದಲ್ಲಿ ಪ್ರಕಟಿಸುವಂತೆ, ಪ್ರಕಾಶಿಸುವಂತೆ, ಎಲ್ಲ ಜೀವಿಗಳೂ ತಮ್ಮ ತಮ್ಮ ಪೂರ್ವಜನ್ಮದಲ್ಲಿ ಆರ್ಜಿಸಿದ ಗುಣಗಳು ಮತ್ತು ಅಂಟಿಸಿಕೊಂಡ ವಾಸನೆಗಳನ್ನು ಒಂದು ಸೂಕ್ಷ್ಮ ಶರೀರದಲ್ಲಿ ಹೊತ್ತು ತಂದು ಮತ್ತೊಂದು ಶರೀರ (ಬೀಜಕ್ಕೆ, ಭೂಮಿ ಮತ್ತು ನೀರಂತೆ) ಸಿಕ್ಕಾಗ ಆ ಗುಣಗಳನ್ನು ಮತ್ತು ವಾಸನೆಗಳನ್ನು ಪ್ರಕಾಶಗೊಳಿಸುತ್ತಾ ಅನುಭವಿಸುತ್ತವೆ ಎನ್ನುವುದು ಭಾರತೀಯ ಸನಾತನ ಸಿದ್ಧಾಂತದ ಸಾರ. ಇದನ್ನೇ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ ಉಲ್ಲೇಖ ಮಾಡಿದ್ದಾರೆ.

ನಮ್ಮ ಕೆಲಸ ಕಾರ್ಯಗಳಲ್ಲಿ ಪಾಪ, ಪುಣ್ಯ, ಋಣಾನುಬಂಧ ಎಂದು ಕರೆಯಲ್ಪಡುವುದೆಲ್ಲವೂ ಇಂತಹ ಪೂರ್ವ ಜನ್ಮದ ವಾಸನೆಗೆ ಸಂಬಂಧಪಟ್ಟವುಗಳೇ. ಜನ್ಮ ಜನ್ಮಾಂತರದ ಕರ್ಮ ಶೇಷವನ್ನು ಸವೆಸಲು ಪಡೆದುಕೊಂಡದ್ದೇ ಮತ್ತೊಂದು ಜನ್ಮ. ಆದರೆ ಅವೆಲ್ಲವನ್ನೂ ಸವೆಸುವಾಗ, ನಮ್ಮ ನಮ್ಮ ಜೀವನಗಳಲ್ಲಿ ಹಲವಾರು ಘಟನೆಗಳು ನಡೆಯುತ್ತವೆ. ಕೆಲವಕ್ಕೆ ನಾವು ಅರ್ಥೈಸಬಹುದು. ಆದರೆ ಬಹುತೇಕ ನಮ್ಮ ಊಹೆಗೂ ನಿಲುಕದ ಹಾಗೆ ನಡೆಯುತ್ತವೆ. ನಾವು 'ಇದು ಏಕೆ ಹೀಗಾಯಿತು" ಎಂದು ಕಾರಣಗಳನ್ನು ಹುಡುಕುತ್ತಾ ಎಷ್ಟು ದೂರ ನಮ್ಮ ಯೋಚನೆಗಳನ್ನು ಹರಿ ಬಿಟ್ಟರೂ ಅರ್ಥವಾಗುವುದೇ ಇಲ್ಲ, ಅಲ್ಲವೇ ವಾಚಕರೆ?

ಇದನ್ನೇ ಮಾನ್ಯ ಗುಂಡಪ್ಪನವರು "ಎಣಿಕೆಗೆ ಸಿಲುಕದಾಕಸ್ಮಿಕ" ಎಂದಿದ್ದಾರೆ. ಹೀಗೆ ನಮ್ಮ ಆಗು ಹೋಗುಗಳಿಗೆ ಕಾರಣಗಳನ್ನು ಹುಡುಕುತ್ತಾ, ನಾವು ನಮ್ಮ ಪೂರ್ವ ಕರ್ಮವನ್ನೋ, ಅದೃಷ್ಟವನ್ನೂ, ಅನ್ಯರನ್ನೂ, ತಮ್ಮನ್ನೇ ತಾವೋ, ಗ್ರಹಗತಿಗಳನ್ನೋ, ಅಥವಾ ಸರ್ವ ನಿಯಂತ್ರಕನಾದ ಆ ಪರಮಾತ್ಮನನ್ನೂ ಹಳಿದು ಅಥವಾ ಹೊಗಳಿ, ತೃಪ್ತಿಪಟ್ಟುಕೊಳ್ಳುತ್ತೇವೆ.

ಆದರೆ ನಮ್ಮ ಅರಿವಿಗೆ ಬಾರದ ನಮ್ಮ ಪೂರ್ವ ಮತ್ತು ಪೂರ್ವ ಜನ್ಮದ ಕರ್ಮಗಳು ನಮ್ಮ ಇಂದಿನ ಕರ್ಮಗಳನ್ನು ನಿಯಂತ್ರಿಸಿದರೂ, ನಮಗೊಂದು ವಿವೇಚನೆಯನ್ನು ಕೊಟ್ಟು, ಸರಿ ತಪ್ಪುಗಳ ವಿಶ್ಲೇಷಣೆ ಮಾಡುವ ಕ್ಷಮತೆಯನ್ನು ಕೊಟ್ಟು ಆ ಪರಮಾತ್ಮ ನಮ್ಮ ಪೂರ್ವ ಕರ್ಮ ಮತ್ತು ಪೂರ್ವ ಜನ್ಮದ ವಾಸನೆಗಳ ಪ್ರಭಾವವನ್ನು ಕಡಿಮೆ ಮಾಡಿಕೊಳ್ಳುವ ಅವಕಾಶವನ್ನೂ ಇತ್ತಿದ್ದಾನೆ ಮತ್ತು ಪ್ರತಿ ಹೆಜ್ಜೆಯಲ್ಲೂ ನಮ್ಮನ್ನು ಸರಿ ಮಾರ್ಗದಲ್ಲಿ ಕೊಂಡು ಒಯ್ಯಲು ನಮ್ಮೊಡನೆ ಇರಲು ತಯಾರಾಗಿದ್ದಾನೆ. ಆದರೆ ನಮ್ಮನ್ನು ಈ ಪ್ರಪಂಚದ ಇಂದ್ರಿಯಾಧಾರಿತ ಆಕರ್ಷಣೆಗಳೇ ಹೆಚ್ಚು ಹೆಚ್ಚಾಗಿ ಸೆಳೆದು, ಆರು ಶತ್ರು (ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯ)ಗಳಿಗೆ ಬಲಿಯಾಗಿ ಇನ್ನಷ್ಟು ಕರ್ಮವನ್ನು ಮತ್ತು ವಾಸನೆಗಳ ಅಂಟನ್ನು ಹೆಚ್ಚಿಸಿಕೊಳ್ಳುವಂತೆ ಮಾಡುತ್ತದೆ.

ಪಾಪ, ಆ ಪರಮಾತ್ಮನಿಗೆ ನಮಗೆ ಕರುಣೆಯಿಂದ ಸಹಾಯ ಮಾಡುವುದೇ ಒಂದು ಕೆಲಸ. ನಮ್ಮ ಎಲ್ಲ ಕೆಲಸಗಳಲ್ಲೂ ಅವನ ಪ್ರಮೇಯವುಂಟು. ನಮ್ಮ ಇಚ್ಛೆಯು ಯಾವ ಕಡೆ ವಾಲಿದರೆ ನಾವು ಅದಾಗುವುದಕ್ಕೆ ಸಹಾಯ ಮಾಡುತ್ತಾನೆ. ಅದನ್ನರಿಯದೆ ನಾವು ಏನೇನನ್ನೋ ಆಶಿಸಿದರೆ, ತಪ್ಪು ನಮ್ಮದೇ ಅಲ್ಲವೇ?

"

ಹಾಗಾಗಿ ವಾಚಕರೆ, ನಾವು "ಅವನಿಂದ ಏನನ್ನೂ ಬೇಡದೆ, ಕೇವಲ "ಅವನನ್ನು ಮಾತ್ರ ಬೇಡಿದರೆ, ನಾವು ಆ "ಸತ್" ವಸ್ತುವನ್ನು ನಮ್ಮದಾಗಿಸಿಕೊಂಡು ನಮ್ಮ ಕರ್ಮ ಶೇಷವನ್ನು ಮತ್ತು ವಾಸನೆಗಳನ್ನು ಕಳೆದುಕೊಳ್ಳಬಹುದು. ಹೇಳುವುದು ಸುಲಭ, ಪಾಲಿಸಿವುದು ಕಷ್ಟ. ಆದರೆ ಅಸಾಧ್ಯವಲ್ಲ. ಅದನ್ನು ಸಾಧಿಸುವ ಪ್ರಯತ್ನವನ್ನು ನಾವೂ ಸಹ ಮಾಡೋಣವೆ?

**ಮುಕ್ತಕ-153**

**ಪ್ರಾರಬ್ಧ ಕರ್ಮಮುಂ ದೈವಿಕದ ಲೀಲೆಯುಂ ।**
**ತೋರುವುದದುಷ್ಟವಿಧಿಯೆಂಬ ಹೆಸರುಗಳಿಂ ||**
**ಆರುಮಳೆವವರಿಲ್ಲವವುಗಳಾವೇಗಗಳ |**
**ಪೌರುಷವು ನವಸತ್ವ-ಮಂಕುತಿಮ್ಮ ||**

ತೋರುವುದದುಷ್ಟವಿಧಿಯೆಂಬ=ತೋರುವುದು+ಅದು+ಅದೃಷ್ಟ+ವಿಧಿಯೆಂಬ,

ಆರುಮಳೆವವರಿಲ್ಲವವುಗಳಾವೇಗಗಳ=ಆರುಂ+ಅಳೆವವರು+ಇಲ್ಲ+ಅವುಗಳಾ+ವೇಗಗಳ,

ಪ್ರಾರಬ್ಧ=ಪೂರ್ವದಿಂದ ಬಂದ, ದೈವಿಕದ=ದೈವ ಪ್ರೇರಿತ, ಲೀಲೆಯುಂ=ಆಟವು, ಪೆಸರುಗಳಿಂ=ಹೆಸರುಗಳಿಂದ, ಆರುಂ=ಯಾರೂ, ಪೌರುಷವು=ಶಕ್ತಿಯು, ನವಸತ್ವ=ಹೊಸ ತಿರುಳು

ಪೂರ್ವ ಮತ್ತು ಪೂರ್ವಜನ್ಮ ಕರ್ಮವು ನಮಗೆ ಪ್ರಾಪ್ತವಾಗುವುದು ಒಂದು ದೈವೀ ಕ್ರಿಯೆ, ಕಾಣಲು ಸಾಧ್ಯವಿಲ್ಲವಾದ್ದರಿಂದ ಇದನ್ನು ದೈವಲೀಲೆಯೆನ್ನಬೇಕು. ಅದನ್ನು ಅದೃಷ್ಟ (ಕಣ್ಣಿಗೆ ಕಾಣದ್ದು ಎಂದು ಅರ್ಥ) ಅಥವಾ ವಿಧಿ ಎಂದು ಕರೆಯಲ್ಪಡುತ್ತದೆ. ಅವುಗಳ ಚಲನೆ ಮತ್ತು ವೇಗವನ್ನು ಯಾರಿಂದಲೂ ಅಳೆಯಲು ಸಾಧ್ಯವಿಲ್ಲ. ಸ್ವಪ್ರಯತ್ನದಿಂದ ಹೊಸತನವನ್ನು ಕಂಡುಕೊಳ್ಳಬಹುದು, ಎಂಬುದು ಈ ಮುಕ್ತಕದ ಹೂರಣ.

(214)

| ಕಗ್ಗರಸಧಾರೆ | ದೊರೆ ಮೂವರು 149-153 |
| --- | --- |

ನಮ್ಮ ಕಣ್ಣಿಗೆ ಕಾಣದ ಆತ್ಮವು ಲ ದೇಹವನ್ನು ತೊರೆದು ಒಂದು ಸೂಕ್ಷ್ಮ ದೇಹದೊಳಕ್ಕೆ ಹೋಗುವಾಗ, ಹಿಂದಿನ ಜನ್ಮದಲ್ಲಿ, ದೇಹ ಮನಸ್ಸು ಬುದ್ಧಿಗಳ ಸಂಸರ್ಗದಿಂದ ನಡೆಸಿದ ಕರ್ಮಕಾಂಡದ ಶೇಷವನ್ನು ಮತ್ತು ಆರ್ಜಿಸಿದ ವಾಸನೆಗಳನ್ನೂ ಹೊತ್ತು ತರುತ್ತದೆ ಎಂದು ಹಿಂದಿನ ಮುಕ್ತಕದಲ್ಲಿ ವಿವರಿಸಿದ್ದೇನೆ. ನಮ್ಮ ಕಣ್ಣಿಗೆ ಕಾಣದ್ದು ಆದ್ದರಿಂದ "ಅ-ದೃಷ್ಟ". ಪರಮಾತ್ಮನ ಇಚ್ಛೆಯಂತೆ ನಡೆಯುವುದು ಆದ್ದರಿಂದ "ಲೀಲೆ". ಆದರೆ ನಮಗೆ ಇದು ಹೇಗೆ ಬರುತ್ತದೆ, ಹೇಗೆ ನಡೆಯುತ್ತದೆ, ನಮ್ಮ ಬದುಕುಗಳಲ್ಲಿ ಅದರ ಪಾತ್ರವನ್ನು ಹೇಗೆ ನಿಭಾಯಿಸುತ್ತದೆ ಎನ್ನುವುದು ನಮ್ಮ ಊಹೆಗೂ ಸಿಗದು.

ನಾವು ಸಾಮಾನ್ಯವಾಗಿ "ಏನು ಕರ್ಮವೋ' 'ಈ ಪ್ರಾರಬ್ಧ ಕರ್ಮ ಬಿಡೋಲ್ಲ" ಎಂದು ನಮ್ಮ ಪರಿಸ್ಥಿತಿಯು ಕೆಟ್ಟಾಗ ನಮ್ಮ ಅದೃಷ್ಟವನ್ನು ಹಳಿದುಕೊಳ್ಳುವುದು ಸರ್ವೇ ಸಾಮಾನ್ಯ. ಹಿಂದಿನಿಂದ ತಂದದ್ದು "ಏಕೆ, ಏನು, ಹೇಗೆ' ಎಂದು ನಮಗೆ ಅರಿವಿಲ್ಲ. ಅದರ ಬಗ್ಗೆ ಯೋಚಿಸಿ ಫಲವಿಲ್ಲ. ಏನು ವಿಧಿಯೋ ಅದನ್ನು ಅನುಭವಿಸಿಯೇ ತೀರಬೇಕು.

ಎಲ್ಲ ತತ್ವಜ್ಞಾನಿಗಳೂ ಸಂತರೂ ಸಾಧುಗಳೂ ಇಂತಹ ಬುದ್ಧಿವಾದವನ್ನು ಹೇಳುತ್ತಲೇ ಇರುತ್ತಾರೆ. ಆದರೆ ಸಂಸಾರದ ನಂಟಿನಲ್ಲಿರುವವರಿಗೆ ಕೇಳುವಾಗ ತಲೆದೂಗಿ ಮತ್ತೆ ಪ್ರಾಪಂಚಿಕ ಚಿಂತೆಗಳ ಹಾದಿ ಹಿಡಿಯುವುದು ಸರ್ವೇಸಾಮಾನ್ಯ. ಯಾರಿಗೂ ಅರ್ಥವಾಗದ್ದು, ಅದನ್ನು ಅಳೆಯಲು ಸಾಧ್ಯವಿಲ್ಲ, ಎಂದ ಮೇಲೆ ಅರ್ಥಮಾಡಿಕೊಳ್ಳುವುದು ಹೇಗೆ, ಬಿಡುವುದು ಹೇಗೆ?

ನಮ್ಮಂತಹ ಸಾಮಾನ್ಯ ಮನುಷ್ಯರು ಗತಿಸಿದ ಘಟನೆಗಳನ್ನು ಮೆಲುಕು ಹಾಕಿ ಒಂದು ಮರಣೋತ್ತರ ಕ್ರಿಯೆಯನ್ನು (postmortem) ಮಾಡುವುದು, ಇಲ್ಲದಿದ್ದರೆ ಮುಂದೆ ನಡೆಯಬೇಕಾದ ಕೆಲಸಗಳ ಬಗ್ಗೆ ಯೋಚನೆ ಮತ್ತು ಯೋಜನೆಗಳನ್ನು ಮನದೊಳಗೆ ಹಾಕುವುದು ಸಹಜ. ಇಲ್ಲಿ ಗುಂಡಪ್ಪನವರು ಒಂದು ಪರಿಹಾರವನ್ನು ಸೂಚಿಸುತ್ತಾರೆ. 'ಪೌರುಷವು ನವಸತ್ವ" ಎಂದಿದ್ದಾರೆ. ನಮಗೆ ಒಂದು ವಿವೇಚನಾ ಶಕ್ತಿಯನ್ನು ಪರಮಾತ್ಮ ಕೊಟ್ಟಿರುವುದರಿಂದ, ನಾವು ಪೌರುಷದಿಂದ ಅಂದರೆ ಧೈರ್ಯದಿಂದ ಬಂದದ್ದನ್ನು ಎದುರಿಸಬೇಕು. ಏಕೆಂದರೆ ಅದು ಅನಿವಾರ್ಯ.

ನಮ್ಮ ವಿವೇಚನೆಯಿಂದ ನಮ್ಮ "ಇಂದನ್ನು" ಸರಿಪಡಿಸಿಕೊಂಡರೆ ಮತ್ತು ಒಂದು ನವ ಸತ್ವವನ್ನು ನಮ್ಮ ಬಾಳಲ್ಲಿ ತಂದುಕೊಂಡರೆ ನಮ್ಮ "ನಾಳೆ" ಸುಂದರವಾಗಬಹುದು ಮತ್ತು ಪ್ರಾರಬ್ಧ ಕರ್ಮ ಮತ್ತು ಅದರೊಟ್ಟಿಗೆ ಬರುವ ಪೂರ್ವ ವಾಸನೆಗಳು ಕಡಿಮೆಯಾಗಿ ಸತ್ವಯುತವಾದ ಸಜೀವನವನ್ನು ನಡೆಸಿ ಮುಂದಕ್ಕೆ, ಅಂದರೆ ಮುಂದಿನ ಜನ್ಮದ ಬದುಕಿಗೆ ಕೊಂಡು ಹೋಗಬೇಕಾದ ಕರ್ಮ ಮತ್ತು ವಾಸನೆಗಳನ್ನು ಕಡಿಮೆ ಮಾಡಿಕೊಳ್ಳಬಹುದು ಎಂದು ಒಂದು ಸಲಹೆಯನ್ನು ಇತ್ತಿದ್ದಾರೆನಿಸುತ್ತದೆ. ವಾಚಕರೆ ನಾವು, ನೀವೂ ಸಹ ಅನುಕರಣೀಯವಾದ ಮತ್ತು ಅನುಸರಣೀಯವಾದ ಮಾರ್ಗವಿದೆಂದು ನಂಬೋಣ ಅಲ್ಲವೇ?





# ವಿಧಿ-ವಿಧಾನ 154-158

**ಮುಕ್ತಕ-154** **ಪೊಸರಸಂ ಬೇರಿಗನುದಿನಮೊದವಿ ಧರೆಯಿಂದ।**

**ಸಸಿಗೆ ಹೊಸತಳಿರ ತಲೆಯಲ್ಲಿ ಮುಡಿಸುವಂತೆ ||**

**ಹೊಸ ಸೃಷ್ಟಿಸತ್ವಮೆತ್ತಣಿನೋ ಬರುತನುದಿನಂ ।**

**ಪೊಸತಾಗಿಹುದು ಜಗವ-ಮಂಕುತಿಮ್ಮ ||**

ಪೊಸರಸಂ=ಪೊಸ+ರಸಂ, ಬೇರಿಗನುದಿನಮೊದವಿ=ಬೇರಿಗೆ+ಅನುದಿನಂ+ಒದವಿ,

ಸೃಷ್ಟಿಸತ್ವಮೆತ್ತಣಿನೋ=ಸೃಷ್ಟಿ ಸತ್ವ+ಎತ್ತಣಿನೋ, ಬರುತನುದಿನಂ=ಬರುತ+ಅನುದಿನಂ,

ಪೊಸತಾಗಿಪುದು=ಪೊಸತು+ಆಗಿಪುದು

ಪೊಸರಸಂ=ಪೊಸ ರಸವನ್ನು, ಅನುದಿನಂ=ಪ್ರತಿನಿತ್ಯ, ಒದವಿ=ಒದಗಿಸಿ, ಎತ್ತಣಿನೋ=ಎಲ್ಲಿಂದಲೋ, ಪೊಸತು=ಹೊಸತು, ಆಗಿಪುದು=ಆಗ ಮಾಡುತ್ತದೆ.

ಒಂದು ಗಿಡದ ಬೇರಿಗೆ ಹೊಸ ರಸವನ್ನು ಸತ್ವವಾಗಿ ಪೂರೈಸಿ, ಗಿಡದಲ್ಲಿ ಹೊಸ ಚಿಗುರನ್ನು ಮೂಡಿಸುವಂತೆ, ಹೊಸ ಸೃಷ್ಟಿಗೆ ಅನುವಾದ ಸತ್ವವು ಎಲ್ಲಿಂದಲೋ ಬಂದು ಈ ಜಗವನ್ನೆಲ್ಲ ಹೊಸತಾಗಿಸುತ್ತದೆ ಎಂದು ಜಗತ್ತಿನಲ್ಲಿ ನಿರಂತರ ನಡೆಯುವ ಹೊಸತನದ ಆನಂದ ನೃತ್ಯವನ್ನು ಬಣ್ಣಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಒಂದು ತುಳಸಿಗಿಡವನ್ನು ಗಮನಿಸಿ, ಬೆಳೆದ ಒಂದು ದಳವನ್ನು ಕಿತ್ತುಕೊಂಡರೆ, ಪಕ್ಕದಿಂದ ಎರಡು ಸಣ್ಣ ದಳಗಳು ತಲೆಯೆತ್ತುತ್ತವೆ. ಎಷ್ಟು ಚೆಂದ ಅಲ್ಲವೇ? ಆ ಗಿಡ ನಿಮ್ಮನ್ನು ಕೀಳಬೇಡ ಎನ್ನುವುದಿಲ್ಲ. ಕಿತ್ತ ಮರುಕ್ಷಣದಿಂದಲೇ ಮತ್ತೆ ಚಿಗುರೊಡೆಯಲು ಶುರು. ಹಾಗೆ ಚಿಗುರೊಡೆಯಲು ಬೇಕಾದ ಶಕ್ತಿ ಮತ್ತು ಸತ್ವವು ಅದಕ್ಕೆ ಎಲ್ಲಿಂದ ಬರುತ್ತದೋ ನಾವು ಕಂಡಿಲ್ಲ. ಯಾವುದೋ ಒಂದು ಅಜ್ಞಾತ ಶಕ್ತಿ ಆ ಸತ್ವವನ್ನು ತುಂಬುತ್ತದೆ ಮತ್ತು ಆ ಗಿಡದ ಸೊಬಗನ್ನು ಕಾಪಾಡುತ್ತದೆ.

ಇದು ಬಹುತೇಕ ಈ ಜಗತ್ತಿನ ಎಲ್ಲ ಚರಾಚರಜೀವಿಗಳಿಗೂ ಅನ್ವಯಿಸಿಕೊಳ್ಳಬಹುದು. ಹಳೆಯದರ ನೆರಳಿನಲ್ಲೇ ಹೊಸತು ಪಲ್ಲವಿಸುತ್ತಿರುತ್ತದೆ. ಹೊಸತನವನ್ನು ತುಂಬುತ್ತಿರುತ್ತದೆ. ಹೊಸ ಚೈತನ್ಯವನ್ನು ತುಂಬುವ ಆ ಚೇತನವಾವುದೆಂದು ನಮಗೆ ಸೋಜಿಗವುಂಟಾಗಬಹುದು. ಆದರೆ ಇದರಲ್ಲಿ ಸೋಜಿಗಪಡುವುದೇನೂ ಇಲ್ಲ.

ಎಲ್ಲದಕ್ಕೂ ಆ ಪರಮ ಚೈತನ್ಯವೇ ಕಾರಣವೆಂದ ಮೇಲೆ, ಇದಕ್ಕೂ ಅದೇ ಆಗಿರಬೇಕು ಅಲ್ಲವೇ?, ಹೊಸ ಹೊಸ ವಿಚಾರಗಳು ಭಾವಗಳು ಮಾನವರ ಮನದಲ್ಲಿ ಬರಲೂ ಸಹ ಆ ಪರಮ ಚೈತನ್ಯದ ಲೀಲೆಯಿಂದಲೇ ಆಗಬೇಕು. ಆದರೆ ಅದು ಹೇಗೆ ಬರುತ್ತದೆ ಎಲ್ಲಿಂದ ಬರುತ್ತದೆ, ಎಂದು ಆಲೋಚಿಸಿದರೆ ನಮಗರ್ಥವಾಗದ ವಿಚಾರ.

ಸ್ವತಂತ್ರವಾದ ಆ ಪರಮ ಚೈತನ್ಯವು ತನ್ನದೇ ರೀತಿಯಲ್ಲಿ ಕಾರ್ಯಗಳನ್ನು ಮಾಡುತ್ತಾ, ತನಗೆ ಹೇಗೆ, ಏನು, ಎಷ್ಟು, ಯಾವಾಗ, ಎಲ್ಲಿ, ಬೇಕೋ ಅದನ್ನೆಲ್ಲ ಹಾಗೆ ನಿರ್ಮಿಸಿಕೊಳ್ಳುವ ಶಕ್ತಿ ಮತ್ತು ಸತ್ವವನ್ನು ಹೊಂದಿದೆ. ಹಾಗಾಗಿಯೇ ಈ ಜಗತ್ತಿನಲ್ಲಿ ನಮಗೆ ಹಲವು ಪುರಾತನವಾದದ್ದು ಕಾಣುತ್ತದೆ. ಉದಾ: ನಮ್ಮ ಹಿಮಾಲಯ ಶಿಖರ ಮತ್ತು ಅದರಿಂದಲೇ, ಪ್ರತೀ ವರ್ಷ ಹೊಸತನವನ್ನು ಹೊತ್ತು ಹರಿದು ಬರುವ ಗಂಗೆ. ಹೀಗೆಯೇ ನಾವು ಎಲ್ಲಿ ಕಂಡರೂ ನಮಗೆ ಈ "ಹೊಸ ಸೃಷ್ಟಿ ಸತ್ವದ ವಿಕಸಿತ ರೂಪ ಕಾಣುತ್ತದೆ. ಹೊಸತನ್ನು ನೋಡುತ್ತೇವೆ. ಅನುಭವಿಸುತ್ತೇವೆ. ಆನಂದಿಸುತ್ತೇವೆ. ಹೀಗೆ ಸೃಷ್ಟಿಯಲ್ಲಿ ಪ್ರತಿನಿತ್ಯ ಹೊಸತನ್ನು ತುಂಬುವ ಆ ಪರಮ ಚೈತನ್ಯಕ್ಕೆ ಶಿರಬಾಗಿ ನಮಿಸೋಣ.

**ಮುಕ್ತಕ-155**

**ಶ್ವಸನನಾಗಸದಿನಿಳಿದದ್ರಿಗುಹೆಗಳೊಳಲೆಯು ।**
**ತುಸಿರಾಗಿ ನಮ್ಮೊಳಾವಗಮಾಡುವಂತೆ ॥**
**ವಿಸರಸತ್ವಮದೊಂದದೆತ್ತಣಿನೋ ಬಂದು ನ ।**
**ಮ್ಮಸುಗಳೊಳವೊಗುತಿಹುದು-ಮಂಕುತಿಮ್ಮ ॥**

ಶ್ವಸನನಾಗಸದಿನಿಳಿದರಿಗುಹೆಗಳೊಳಲೆಯುತುಸಿರಾಗಿ=ಶ್ವಸನ+ಅನ್+ಆಗಸದಿನ್+ಇಳಿದು+
ಅದ್ರಿ+ಗುಹೆಗಳೊಳು+ಅಲೆಯುತ+ಉಸಿರಾಗಿ, ನಮ್ಮೊಳಾವರಮಾಡುವಂತೆ=ನಮ್ಮೊಳು+ಆವಗ+ಮಾಡುವಂತೆ,
ವಿಸರಸತ್ವಮದೊಂದದೆತ್ತಣಿನೋ=ವಿಸರ+ಸತ್ವಂ+ಅದೊಂದು+ಎತ್ತಣಿನೋ,
ನಮ್ಮಸುಗಳೊಳವೊಗುತಿಹುದು=ನಮ್ಮ+ಅಸುಗಳ+ಒಳ+ಒಗುತಿಹುದು,
ಶ್ವಸನ=ಗಾಳಿ, ಉಸಿರು, ಆಗಸದಿನ್=ಆಕಾಶದಿಂದ, ಅದ್ರಿ=ಬೆಟ್ಟ, ಆವಗ=ಯಾವಾಗಲೂ, ಸದಾಕಾಲ,
ವಿಸರ=ವಿಸ್ತಾರವಾದ, ಎತ್ತಣಿನೋ=ಎತ್ತಲ್ಲಿಂದಲೋ, ಅಸುಗಳ=ಉಸಿರು, ಪ್ರಾಣ,
ಒಗುತಿಹುದು=ಹೊಕ್ಕುತ್ತಿದೆ.

ನಮ್ಮ ಉಸಿರಾಗಿರುವ ಈ ಗಾಳಿಯು ಆಕಾಶದಿಂದ ಇಳಿದು, ಬೆಟ್ಟಗಳ ಮೇಲೆ ಬೀಸಿ, ಗುಹೆಗಳಲ್ಲಿ ನುಗ್ಗಿ, ಉಸಿರಾಗಿ ನಮ್ಮ ಒಡಲೊಳಗೆ ಆಡುವಂತೆ ಮಾಡುವ, ಒಂದು ವಿಸ್ತಾರ ಸತ್ವವು ಎಲ್ಲಿಂದಲೋ ಬಂದು ನಮ್ಮ ಪ್ರಾಣಗಳ ಒಳಗೆ ನುಗ್ಗುತ್ತಿದೆ ಎಂದು ಪ್ರಸ್ತಾಪಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ. ನಾವೆಳೆದುಕೊಳ್ಳುವ ಉಸಿರು ನಮಗೆ ಬಹಳ ಮುಖ್ಯ. ಉಚ್ಛ್ವಾಸ ನಿಶ್ವಾಸಗಳು ನಮಗೆ ನಿರಂತರ ಆಡುತ್ತಿದ್ದರೆ ಮಾತ್ರ ನಮ್ಮ ಅಸ್ತಿತ್ವ ಅದು ಆಡುವ ತನಕ ನಾವಿರುತ್ತೇವೆ, ನಮಗೊಂದು ಹೆಸರಿರುತ್ತದೆ. ಇಲ್ಲದಿದ್ದರೆ ನಮ್ಮನ್ನು "ಹೆಣ"ವೆನ್ನುತ್ತಾರೆ. ಆದರೆ ಈ ಉಸಿರು ಎಲ್ಲಿಂದೆಲ್ಲೆಲ್ಲಿಗೆ ಹೊಕ್ಕು ನಮ್ಮ ತನಕ ಬರುತ್ತದೆ ಎಂದು ಯೋಚಿಸಿದರೆ ನಮಗೆ ಗೊತ್ತಾಗುವುದಿಲ್ಲ. ವೇದವು "ಆಕಾಶಾದ್ವಾಯು" ಎನ್ನುತ್ತದೆ. ಅದು ಆಕಾಶದಿಂದ ಹೊರಟು, ಬೆಟ್ಟ, ಗುಹೆಗಳಲ್ಲಿ ಹೊಕ್ಕು, ನಮ್ಮ ತನಕ ಬರುತ್ತದೆ. ನಾವು ಉಸಿರಾಡುತ್ತೇವೆ. ಬದುಕುತ್ತೇವೆ.

ಆದರೆ ನಮಗೆ ಬಹಳ ಅವಶ್ಯವಾದ, "ಉಸಿರನ್ನು ಎಲ್ಲಿಂದಲೋ ತಂದು ನಮ್ಮ ತನಕ ತಲುಪಿಸುವುದು ಒಂದು ವಿಸರಸತ್ವ" ವಿಸ್ತಾರವಾದ ಸತ್ವವೆನ್ನುತ್ತಾರೆ ಶ್ರೀ ಡಿ.ವಿ.ಜಿ. ಇಡೀ ಸೃಷ್ಟಿಯಲ್ಲಿ ಬೇರೆ ಬೇರೆ ಗ್ರಹಗಳಲ್ಲಿಯೂ





ಸಹ ಇರುವ ಯಾವುದೇ ಜೀವಿಯು ಬದುಕಲು ಬೇಕಾದುದೇ ಈ ಉಸಿರು. ಆಹಾರ, ಉಡುಗೆ, ತೊಡಿಗೆ, ಮುಂತಾದವುಗಳು ಎಷ್ಟೇ ಭಿನ್ನವಾದರೂ, ಜೀವಿಯಾದರೆ ಅದಕ್ಕೆ ಈ ಉಸಿರೇ ಆಧಾರ. ಹಾಗಾಗಿ ಇಡೀ ನಭೋಮಂಡಲವನ್ನು ಆವರಿಸಿಕೊಂಡು ಎಲ್ಲ ಜೀವಿಗಳ ಅಸ್ತಿತ್ವಕ್ಕೆ ಆಧಾರವಾಗಿರುವ ಈ ಉಸಿರನ್ನು "ಪ್ರಾಣವಾಯ್ತು" ಎನ್ನುತಾರೆ. ಮಾಧ್ವ ಸಂಪ್ರದಾಯದಲ್ಲಿ ಇದಕ್ಕೆ "ವಾಯು ಜೀವೋತ್ತಮ" ಎನ್ನುತ್ತಾರೆ. ಇಂತಹ ಉಸಿರನ್ನು ನಮಗೆ ಕೊಡುವ ಆ ಪರಮ ತತ್ವವೇ, ಪರಮ ಚೇತನ, ಆ ಪರಮ ಚೇತನದ ಕೃಪೆಯಿಂದಲೇ ನಾವು ಉಸಿರಾಡುತ್ತಾ ಬದುಕಿದ್ದೇವೆ.

ದೇಹಧಾರಣೆಗೆ ಅತ್ಯವಶ್ಯಕವಾದದ್ದು ವಾಯು. ಆದ್ದರಿಂದ, ದೇಹ ಪುಷ್ಟಿಗೆ ನಾವು ತೆಗೆದುಕೊಳ್ಳುವ ಆಹಾರವನ್ನು ಸೇವಿಸುವಾಗ, ಆಹಾರದ ಮೊದಲ ಭಾಗವನ್ನು, ನಮ್ಮ ದೇಹದಲ್ಲಿ ಬೇರೆ ಬೇರೆ ಕಾರ್ಯೋನ್ಮುಖವಾದ ಪ್ರಾಣ, ವ್ಯಾನ,

ಉದಾನ, ಸಮಾನ ಮತ್ತು ಅಪಾನ, ಎಂಬ ವಾಯು ರೂಪಗಳಿಗೆ ಆಹುತಿಯನ್ನಾಗಿ ನೀಡುವ ಸಂಪ್ರದಾಯವು ವೇದೋಕ್ತವು ಮತ್ತು ಪರಮ ಸೂಕ್ತವು.

ಇಂದು ಆ ಉಸಿರಿಗೂ ಬರ ಬಂದಿದೆ. ಶುದ್ಧಗಾಳಿಯನ್ನು ಜನರು ಹುಡುಕಿಕೊಂಡು ಹೋಗುವ ಕಾಲ ಬಂದಿದೆ. ಎಲ್ಲ ಕಡೆಯೂ ಗಾಳಿ ಕಲುಷಿತವಾಗುತ್ತಿದೆ. ವಾಚಕರೆ ಇಂದಿನ ಪರಿಸ್ಥಿತಿ ಹೀಗೆಯೇ ಮುಂದುವರೆದರೆ, ಮುಂದೆ ಗಾಳಿಯ ಚೀಲವನ್ನು ಕಟ್ಟಿಕೊಂಡೆ ತಿರುಗಬೇಕಾದ ಪರಿಸ್ಥಿತಿ ಬರಬಹುದು. ಅಂತಹ ಪರಿಸ್ಥಿತಿ
ಬರದಿರಲೆಂದು ಆಶಿಸೋಣ.

**ಮುಕ್ತಕ-156** **ತೋಯಿಸುತ ಬೇಯಿಸುತ ಹೆಚ್ಚುತ್ತ ಕೊಚ್ಚುತ್ತ ।**
**ಕಾಯಿಸುತ ಕರಿಯುತ್ತ ಹುರಿಯುತ್ತ ಸುಡುತ ॥**
**ಈಯವನಿಯೊಲೆಯೊಳೆಮ್ಮಯ ಬಾಳನಟ್ಟು ವಿಧಿ ।**
**ಬಾಯ ಚಪ್ಪರಿಸುವನು-ಮಂಕುತಿಮ್ಮ ॥**

ಈಯವನಿಯೊಲೆಯೊಳೆಮ್ಮಯ=ಈ+ಅವನಿ+ಒಲೆಯೊಳು+ಎಮ್ಮಯ, ಬಾಳನಟ್ಟು-ಬಾಳನು+ಅಟ್ಟು
ತೋಯಿಸುತ=ನೆನೆಸುತ್ತಾ, ಕೊಚ್ಚುತ್ತ=ಕತ್ತರಿಸುತ್ತ, ಅವನಿ=ಭೂಮಿ, ಎಮ್ಮಯ=ನಮ್ಮ, ಬಾಳನಟ್ಟು=ಬಾಳಲು ತಳ್ಳುವ,

ಈ ವಿಧಿ ಅನ್ನುವುದು ನಮ್ಮನ್ನು ಈ ಭೂಮಿ ಎನ್ನುವ ಒಲೆಯಲ್ಲಿ, ನೆನೆಸುತ್ತ, ಬೇಯಿಸುತ್ತ, ಹೆಚ್ಚುತ್ತ, ಕೊಚ್ಚುತ್ತ, ಕಾಯಿಸುತ್ತ, ಕರಿಯುತ್ತ, ಹುರಿಯುತ್ತ, ಸುಡುತ್ತ, ನಮ್ಮನ್ನು ಆಡಿಸುತ್ತ, ತಾನು ಒಂದು ರುಚಿಯಾದ ಪಕ್ವಾನ್ನವನ್ನು ತಿಂದು ಆಸ್ವಾದಿಸುವಂತೆ ಬಾಯಿ ಚಪ್ಪರಿಸುತ್ತಿದೆ, ಎಂದು ಒಂದು ಗಹನವಾದ ವಿಷಯವನ್ನು ವಿನೋದವಾಗಿ ಪ್ರಸ್ತಾಪಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ನಾವು ಒಂದು ತರಕಾರಿಯನ್ನು ಮನೆಗೆ ತಂದರೆ ಮೊದಲು ಅದನ್ನು ತೊಳೆದು (ತೋಯಿಸುತ್ತ) ಹೆಚ್ಚಿ ಅಥವಾ ಕೊಚ್ಚಿ, ಬೇಯಿಸಿಯೋ ಅಥವಾ ಎಣ್ಣೆಯಲ್ಲಿ ಕರಿದೋ ಅಥವಾ ಹುರಿದೋ ಅಥವಾ ಸುಟ್ಟೋ

ಒಂದು ಪಲ್ಯವನ್ನೋ ಅಥವಾ ಹುಳಿಯನ್ನೋ ಮಾಡಿ ಬಾಯಿ ಲೊಟ್ಟೆ ಹೊಡೆಯುತ್ತಾ ತಿಂದು ಆನಂದ ಪಡುವುದಿಲ್ಲವೇ? ಹಾಗೆಯೇ ಆ ಪರಮ ಚೇತನ "ವಿಧಿ'ಯ ವೇಷಧರಿಸಿ, ನಮ್ಮನ್ನು ಈ ಭೂಮಿಗೆ ತಂದು ಶೈಶವ, ಬಾಲ್ಯ, ಕೌಮಾರ್ಯ, ವಯಸ್ಕ, ಪ್ರೌಢ ಮತ್ತು ವೃದ್ಧಾಪ್ಯದ ಮಜಲುಗಳಲ್ಲಿ ಅಡ್ಡಾಡಿಸಿ, ಹೊರಳಾಡಿಸಿ, ಪರದಾಡಿಸಿ, ತಿಣುಕಾಡಿಸಿ, ನಗಿಸಿ, ಅಳಿಸಿ, ದರ್ಪದಿಂದ, ದೈನ್ಯತೆಯಿಂದ, ರಾಜನಂತೆ, ಭಿಕಾರಿಯಂತೆ, ಸುಂದರವಾಗಿಸಿ, ರೂಪಗೆಡಿಸಿ, ಇನ್ನೂ ಏನೇನೋ ಅವಸ್ಥೆಗಳಲ್ಲಿ ನಮ್ಮ ಜೀವನದ ಬಂಡಿಯನ್ನು ಎಗ್ಗಾಮುಗ್ಗಾ ಓಡಿಸಿ ನಮ್ಮನ್ನು ಮಂಗನಾಟ ಆಡಿಸಿ ತಾನು ನೋಡಿ ಕೇಕೆಹಾಕಿ ಅಟ್ಟಹಾಸದ ನಗುವ ನಗುತ್ತ ಸಂತಸಪಡುತ್ತಾನೆ, ಎನ್ನುವುದೇ ಈ ಮುಕ್ತಕದ ಹೂರಣ.

ನಾವು ನಮ್ಮ ಸುತ್ತಲಿನ ಪ್ರಪಂಚವನ್ನು ನೋಡಿದರೆ, ಪ್ರತಿಯೊಬ್ಬರ ಜೀವನವೂ ಬೇರೆ ಬೇರೆ ರೀತಿಯದ್ದಾಗಿರುತ್ತದೆ. ಅದಕ್ಕೆ ಕಾರಣವನ್ನು ಹುಡುಕಲು ಸಾಧ್ಯವಿಲ್ಲ. ಹಾಗೆ ನಮಗೆ ಕೆಲವು ಕಾರಣಗಳು ಕಂಡರೂ ಆ ಕಾರಣಕ್ಕೆ ಏನು ಕಾರಣ ಎಂದು ಒಂದು ಪ್ರಶ್ನೆ ಕೇಳಿದರೆ ಅಯ್ಯೋ ಬಿಡಿ "ಹಣೆಬರಹಕ್ಕೆ ಯಾರು ಹೊಣೆ" ಅಂತಲೋ "ಪ್ರಾರಬ್ಧ ಕರ್ಮ ಯಾರೂ ತಪ್ಪಿಸಕ್ಕಾಗಲ್ಲ" ಎನ್ನುವ ಉದ್ಗಾರ ಉತ್ತರವಾಗಿ ಸಿಗುತ್ತದೆ. ಒಬ್ಬ ಕುಂಟ, ಒಬ್ಬ ಕುರುಡ, ಒಬ್ಬ ಧನಿಕ, ಒಬ್ಬ ಬಡವ, ಒಬ್ಬ ಒಳ್ಳೆಯವ, ಒಬ್ಬ ಪಾತಕಿ, ಒಬ್ಬ ಜ್ಞಾನಿ ಮತ್ತೊಬ್ಬ ಅಜ್ಞಾನಿ ಹೀಗೆ ಸಾವಿರಾರು ವೈವಿಧ್ಯತೆಗಳ ಬಾಳನ್ನು ಆ ಪರಮಾತ್ಮ ವಿಧಿ ರೂಪದಲ್ಲಿ ಎಲ್ಲರಿಗೂ ಕೊಟ್ಟಿದ್ದಾನೆ.

"ವಿಧಿ" ಎಂದರೆ ಮೊದಲೇ ನಿರ್ಧರಿಸಿದ್ದು ಎಂದು ಒಂದು ಅರ್ಥ. ನಮ್ಮ ಜೀವನದ ಪರಿ ಮೊದಲೇ ನಿರ್ಧಾರಿತವಾಗಿರುತ್ತದೆ. ಆದರೆ ನಮಗೆ ಆಗುವುದನ್ನು ನಾವು ಆ ಪರಮಾತ್ಮ ಕೊಟ್ಟ ಜ್ಞಾನದಿಂದ ಮತ್ತು ನಮ್ಮ ಪ್ರಯತ್ನದಿಂದ ಮತ್ತು ನಾವು ನಂಬಿದ ಆ ಪರಮಾತ್ಮನ ಕೃಪೆಯಿಂದ ಕೊಂಚಮಟ್ಟಿಗೆ ಬದಲಾಯಿಸಿಕೊಳ್ಳಬಹುದು ಎಂಬುದೂ ಸಹ ಅಭಿಪ್ರಾಯವಿದೆ. ಅದಕ್ಕೆ ಬೇಕಾದ ಹತ್ತು ಹಲವಾರು ಮಾರ್ಗಗಳೂ, ಚತುರೋಪಯಗಳೂ ನಮ್ಮ ವೇದ, ಪುರಾಣ, ಭಾಗವತ, ಭಗವದ್ಗೀತೆ, ಮುಂತಾದವುಗಳಿಂದಲೂ ದೊರೆಯುತ್ತದೆ. "ಲಭ್ಯವನ್ನು ಅನುಭವಿಸುತ್ತಾ, ತೃಪ್ತಿಯಿಂದ ಸಂತೋಷದಿಂದ ಇರಬೇಕು. ಬೇರೆ ಮಾರ್ಗವಿಲ್ಲ. ಇದು ನಿರಾಶಾವಾದವಲ್ಲ. ವಾಸ್ತವವಾದ. ಇವುಗಳನ್ನು ಸರಿಯಾಗಿ ಅರ್ಥಮಾಡಿಕೊಂಡು ತೃಪ್ತಿಯ ಜೀವನ ಮಾಡಿದರೆ ಸುಖ.

**ಮುಕ್ತಕ-157** **ಪರಬೊಮ್ಮನಾ ವಿಧಿಯ ನೇಮಿಸಿಹುದೇತಕನೆ |**

**ನರಜಾತಿ ಸಾನುಭೂತಿಯ ಕಲಿಯಲೆಂದೆ ||**

**ಪರರೆಂಬರಿಲ್ಲ ಆತ್ಮಾಂಶರೆಲ್ಲರೆನುತೆ |**

**ಬೆರೆ ನೀನು ವಿಶ್ವದಲಿ ಮಂಕುತಿಮ್ಮ ||**

ಪರಬೊಮ್ಮನಾ=ಪರಬೊಮ್ಮನು+ಆ, ನೇಮಿಸಿಹುದೇತಕೆನೆ=ನೇಮಿಸಿಹುದು+ಏತಕೆ+ಎನೆ, ಪರರೆಂಬರಿಲ್ಲ=ಪರರು+ಎಂಬರು+ಇಲ್ಲ, ಆತ್ಮಾಂಶರೆಲ್ಲರೆನುತೆ=ಆತ್ಮ+ಅಂಶರು+ಎಲ್ಲರು+ಎನುತೆ ಸಾನುಭೂತಿಯ ಸಹಾನುಭೂತಿ, ಪರರು=ಅನ್ಯರು.

(219)

ವಿಧಿ-ವಿಧಾನ 154-158 ಕಗ್ಗರಸಧಾರೆ

ಪರಬ್ರಹ್ಮನು ಆ "ವಿಧಿ"ಯನ್ನು ಏಕೆ ನೇಮಿಸಿದ್ದಾನೆ? ಎಂದರೆ, ಮನುಷ್ಯರು ಪರಸ್ಪರ ಸಹಾನುಭೂತಿಯನ್ನು ಕಲಿಯಲಿ ಎಂದೂ ಮತ್ತು ಪರರು ಯಾರೂ ಇಲ್ಲ, ಎಲ್ಲರೂ ಆತ್ಮದ ಒಂದು ಅಂಶವೆಂದು ಅರಿತು ನೀನೂ ಬೆರೆತು ವಿಶ್ವದಲ್ಲಿ ಬಾಳು ಎಂದು ಒಂದು ಆದೇಶವನ್ನು ನೀಡುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

"ವಿಧಿ"ಯನ್ನು ಆ ಪರಮಾತ್ಮ ನಿಯಮಿಸಿರುವುದು. ಪ್ರತಿಯೊಬ್ಬರಿಗೂ ಬೇರೆ ಬೇರೆ ವಿಧಿಯನ್ನು ನಿಯಮಿಸಿ ಎಲ್ಲರನ್ನೂ ಬೇರೆ ಬೇರೆಯಾಗಿ ನಿರ್ಮಿಸಿ, "ನಾನು ಅನ್ಯರಿಂದ ಬೇರೆ" ಎನ್ನುವ ಭಾವವನ್ನು, ನಮ್ಮ ಮನಸ್ಸು ಮತ್ತು ಸ್ವಭಾವಗಳಲ್ಲಿ ತುಂಬಿ, ಈ ಜಗನ್ನಾಟಕವನ್ನು ಆಡಿಸುತ್ತಿದ್ದಾನೆ ಆ ಪರಮಾತ್ಮ. ಆ ಪರಮ ಚೇತನ ಜಗತ್ತಿನ ಎಲ್ಲ ಪ್ರಾಣಿಗಳಲ್ಲು ಬೇರೆ ಬೇರೆ ರೂಪಗಳನ್ನು ಧರಿಸಿದೆ ಎಂಬುದು ಸಿದ್ಧಾಂತ. ಬಾಹ್ಯ ರೂಪಗಳು ಬೇರೆ ಬೇರೆ ಆದರೂ ಚೇತನದ ಸಾಮ್ಯವಿದೆ ಎಂದು "ತಿಳಿ"ದರೂ ಸಹ "ಅರಿ"ಯದೆ ನಮ್ಮನ್ನು ನಾವು ಬಾಹ್ಯ ರೂಪದಿಂದ ಗುರುತಿಸಿಕೊಳ್ಳುತ್ತೇವೆ. ಇದೇ ಮಾಯೆ" !!!!

ಬಾಹ್ಯ ರೂಪ ಅಶಾಶ್ವತ. ಆಂತರ್ಯದ ಚೇತನ ಮಾತ್ರ ನಿರಂತರ, ಅನಂತ ಮತ್ತು ಶಾಶ್ವತ. ಹಾಗಾಗಿ ಅದೇ ಸತ್ಯ. ಏಕೆಂದರೆ ಯಾವುದು ನಿತ್ಯವೋ ಅದು ಸತ್ಯ. ನಾವು ಸತ್ಯವನ್ನು ಅರಿತು ಅನುಭವಿಸಿದರೆ ನಮಗೆ ಎಲ್ಲ ಜೀವಿಗಳಲ್ಲಿ ಇರುವ, ಒಂದೇ ರೂಪದ ಆ ಪರಮ ಚೇತನದ ಅಸ್ತಿತ್ವ ಅರ್ಥವಾಗುವುದು. ಯಸ್ತು ಸರ್ವಾಣಿ ಭೂತಾನ್ಯಾತ್ಮವಾನುಪಷ್ಯತಿ | ಸರ್ವಭೂತೇಷು ಚಾತ್ಮಾನಂ ತತೋ ನ ವಿಜುಗುಪ್ಸತೇ ॥ (ಈಶಾವಾಸ್ಯ-6) ಎಂದು ಬಹಳ ಸುಂದರವಾಗಿ ಈಶಾವಾಸ್ತೋಪನಿಷತ್ತಿನಲ್ಲಿ ಉಲ್ಲೇಖ ಮಾಡಲಾಗಿದೆ.

ಯಾರು ಎಲ್ಲಾ ಭೂತಗಳನ್ನೂ (ಭೂತ=ಭವತಿ ಇತಿ ಭೂತಃ, ಅಂದರೆ ಯಾವುದು ಇದೆಯೋ, ಅದು ಭೂತ) ಆತ್ಮನಲ್ಲಿ ನೋಡುವರೋ ಮತ್ತು ಯಾರು ಎಲ್ಲ ಭೂತಗಳಲ್ಲಿಯೂ ಆತ್ಮನನ್ನೇ ಕಾಣುವರೋ ಅವರಲ್ಲಿ ಭೇದಭಾವದ ಸ್ವಭಾವವಿರುವುದಿಲ್ಲ. ಇದನ್ನೇ ತನ್ನಂತೆ ಪರರ ಬಗೆದೊಡೆ ಕೈಲಾಸ ಬಿನ್ನಾಣವಕ್ಕು ಸರ್ವಜ್ಞ" ಎಂದು ಸರ್ವಜ್ಞನ ವಚನ ಹೇಳುತ್ತದೆ. ನಾವು ಯಾರನ್ನಾದರೂ ಕಂಡಾಗ "ನಮಸ್ಕಾರ" ಎನ್ನುತ್ತೇವೆ. ಆ ನಮಸ್ಕಾರ ಹೊರ ರೂಪಕ್ಕಲ್ಲ, ಆದರೆ ಆ ರೂಪವನ್ನು ಧರಿಸಿರುವ ಪರಮಾತ್ಮ ಸ್ವರೂಪ ಆತ್ಮಕ್ಕೆ. ಇದೇ ಸತ್ಯ.

ಹಾಗಾಗಿ ವಾಚಕರೆ ಪರಮಾತ್ಮನು ನಮ್ಮನ್ನು ಬೇರೆ ಬೇರೆ ರೂಪದಲ್ಲಿ ಈ ಭೂಮಿಗೆ ತಂದಿದ್ದರೂ ಒಳಗಿರುವ ಚೇತನದ ಸಾಮ್ಯತೆಯನ್ನು ಮನಗಂಡು, ನಾವೆಲ್ಲಾ ಒಂದೇ ಎಂದು ಮನಗಂಡು, ಪರಸ್ಪರ ಪ್ರೀತಿ ವಿಶ್ವಾಸ ಸಹಬಾಳ್ವೆ, ಸೌಹಾರ್ದಯುತ ಬಾಳನ್ನು ನಡೆಸಿದರೆ ಈ ಜಗತ್ತೇ ಎಷ್ಟು ಸುಂದರವಾಗಿರುತ್ತದೆ ಅಲ್ಲವೇ?





**ಮುಕ್ತಕ-158**

**ಕರವೆರಡದೃಷ್ಟಕ್ಕೆ ನರನ ಪೂರ್ವಿಕವೊಂದು |**
**ಪೆರತೊಂದು ನವಸೃಷ್ಟಿಸತ್ವವಾ ಬೊಗಸೆ ||**
**ಧರಿಸಿಹುದು ಮನುಜಜೀವಿತವನದರೊತ್ತಡದೆ |**
**ಪರಿದಾಟ ನಮಗೆಲ್ಲ-ಮಂಕುತಿಮ್ಮ ||**

ಕರವೆರಡದೃಷ್ಟಕ್ಕೆ=ಕರವು+ಎರಡು+ಅದೃಷ್ಟಕ್ಕೆ, ಪೂರ್ವಿಕವೊಂದು=ಪೂರ್ವಿಕವು+ಒಂದು,

ಪೆರತೊಂದು=ಪರೆತು+ಒಂದು, ಮನುಜಜೀವಿತವನದರೊತ್ತಡದೆ=ಮನುಜಜೀವಿತವನು+ಅದರ+ಒತ್ತಡದೆ.

ಕರವು=ಕೈಗಳು, ಪೂರ್ವಿಕವು=ಹಿಂದಿಂದ ಬಂದದ್ದು, ಪರೆತು=ದೊಡ್ಡದ್ದಾದ, ಮಹತ್ತಾದ,

ನವಸೃಷ್ಟಿಸತ್ತ್ವವಾ=ಹೊಸದೊಂದು ಸೃಷ್ಟಿಗೆ ಹೂರಣ,

ನಮ್ಮ ಪೂರ್ವಜನ್ಮದ ರೇಖೆಗಳನ್ನು ಹೊತ್ತ ಎಡಗೈ ಮತ್ತು ಈ ಜನ್ಮದ ಆಗು ಹೋಗುಗಳನ್ನು ಬಿತ್ತರಿಸುವ ಬಲಗೈಯ ರೇಖೆಗಳು ಎರಡೂ ಕೈಗಳಲ್ಲಿ, ಈ ಎರಡೂ ಕೈಗಳನ್ನು ಜೋಡಿಸಿದಾಗ ಒಂದು ಬೊಗಸೆಯಾಗುತ್ತದೆ. ಈ ಬೊಗಸೆಯಿಂದ ನಾವು ಹೊಸ ಹೊಸ ಕೆಲಸವನ್ನು ಮಾಡುತ್ತಾ ಇಲ್ಲಿನ ಒತ್ತಡಗಳನ್ನು ಅನುಭವಿಸುತ್ತಾ, ಪರದಾಡುತ್ತಿರುತ್ತೇವೆ ಎಂದು ಉಲ್ಲೇಖ ಮಾಡಿದ್ದಾರೆ ಮಾನ್ಯ ಗುಂಡಪ್ಪನವರು.

ಹಸ್ತಸಾಮುದ್ರಿಕಾ ಶಾಸ್ತ್ರದ ಪ್ರಕಾರ ನಮ್ಮ ಎಡಗೈನ ರೇಖೆಗಳು ನಮ್ಮ ಪೂರ್ವ ಜನ್ಮದ ವೃತ್ತಾಂತವನ್ನು ಹೇಳುತ್ತವೆಯಂತೆ ಮತ್ತು ಬಲಗೈನ ರೇಖೆಗಳು ನಮ್ಮ ಈ ಜನ್ಮದ ಅದೃಷ್ಟವನ್ನು ತಿಳಿಸುತ್ತವೆಯಂತೆ. ಅದೃಷ್ಟವೆಂದರೆ ನಮಗೆ ಕಾಣದ್ದು. ಹಾಗೆ ನೋಡಿದರೆ, ಹಿಂದಿನ ಜನ್ಮದ ವೃತ್ತಾಂತವೂ ನಮಗೆ ಗೊತ್ತಿಲ್ಲ ಮತ್ತು ಈ ಜನ್ಮದಲ್ಲಿ ಆಗುವ ವಿಷಯಗಳೂ ನಮಗೆ ಗೊತ್ತಿಲ್ಲ. ಎರಡೂ ಅದೃಷ್ಟವೇ. ಅಂದರೆ ನಮಗೆ ಗೊತ್ತಿರದ ಪೂರ್ವ ಕರ್ಮ ಮತ್ತು ನಮ್ಮ ಭವಿಷ್ಯ, ಇವೆರಡನ್ನೂ ಒಟ್ಟಾಗಿಸಿ ಒಂದು ಬೊಗಸೆಯಾಗಿಸಿ ನಮ್ಮ ಕಾರ್ಯಗಳನ್ನು ಮಾಡಿ ಜೀವನದಲ್ಲಿ ಆನಂದವನ್ನು ಕಾಣಲು ಪ್ರಯತ್ನಿಸುವ ನಾವು ಸದಾಕಾಲ ಒಂದು ರೀತಿಯ ಒತ್ತಡದಲ್ಲೇ ಇರುತ್ತೇವೆ ಎಂಬುದೇ ಈ ಮುಕ್ತಕದ ಹೂರಣ.

ಮುಖ್ಯ ತತ್ವ ಮತ್ತು ಸತ್ವವೇನೆಂದರೆ, ನಾವು ಹಿಂದಿನಿಂದ ತಂದ ಪೂರ್ವ ಕರ್ಮ (ಎಡಗೈ) ಮತ್ತು ಇಂದು ನಮ್ಮ ಜ್ಞಾನ ಮತ್ತು ಕೃಷಿಯಿಂದ ನಡೆಯುವ ಈಗಿನ ಕಾರ್ಯಗಳು(ಬಲಗೈ). ಇವೆರಡನ್ನೂ ಜೋಡಿಸಿ ನಾವು ಈ ಜಗತ್ತಿನಲ್ಲಿ ಕೆಲಸ ಮಾಡುವಾಗ ಬಹಳ ಒತ್ತಡಕ್ಕೊಳಗಾಗುತ್ತೇವೆ. ಆಗ ಈ ಜೋಡಿಸಿದ ಕೈಗಳನ್ನು ಪರಮಾತ್ಮನೆಡೆಗೆ ಮಾಡಿ ಅವನ ಕೃಪೆಯನ್ನು ಯಾಚಿಸಿದರೆ ಮತ್ತು ಅವನಿಗೆ ಶರಣಾದರೆ ಬದುಕಿನ ಜಂಜಡವನ್ನು ತಡೆದುಕೊಳ್ಳಬಹುದು. ಬೆಳಗ್ಗೆ ಏಳುವಾಗ ಕೈಜೋಡಿಸಿ ಭೂತ ಭವಿಷ್ಯತ್ತುಗಳನ್ನು ಒಟ್ಟಿಗೆ ಸೇರಿಸಿ ಎರಡನ್ನೂ ಪರಮಾತ್ಮನ ಚರಣಗಳಿಗೆ ಅರ್ಪಿಸಿ "ಇಂದಿನ ದಿನ ನಿನ್ನ ಕೃಪೆ ಇರಲಿ ತಂದೆ" ಎಂದು ನಿವೇದನೆ ಮಾಡಿ ಅಂದಿನ ಕೆಲಸ ಕಾರ್ಯಗಳಲ್ಲಿ ಪ್ರವೃತ್ತರಾಗಬೇಕು. ಮತ್ತೆ ನಾಳೆ ಅದೇ ಪ್ರಕ್ರಿಯೆ. ಇದರಲ್ಲಿ ನೆಮ್ಮದಿ ಉಂಟು ಶಾಂತಿ ಉಂಟು.

# ಅದೃಷ್ಟ ತಂತ್ರ 159-163

**ಮುಕ್ತಕ-159** **ತಾಪಿಸುತೆ ತಣಿಯಿಸುತೆ ಕುಲುಕಿಸುತೆ ಋತುವೈದ್ಯ |**

**ಭೂಪುಟದಿ ಜೀವರಸಗಳ ಪಚಿಸುವಂತೆ ||**

**ಪಾಪಿಯಂ ಪ್ರೋತ್ಸಾಹಿಸಿ ಸುಕೃತಿಯ ಪರೀಕ್ಷಿಸುತ |**

**ವೇಪಿಪನು ವಿಧಿ ನಮ್ಮ-ಮಂಕುತಿಮ್ಮ ||**

ತಾಪಿಸುತೆ=ಸುಡುತ್ತಾ, ತಣಿಯಿಸುತೆ=ತೋಯಿಸುತ್ತಾ, ಕುಲುಕಿಸುತೆ=ಅಲುಗಿಸುತ್ತಾ,

ಋತುವೈದ್ಯ=ಬದಲಾಗುವ ಋತುಮಾನ, ಭೂಪಟದಿ=ಭೂಮಿಯ ಮೇಲೆ,

ಪಚಿಸುವಂತೆ=ಜೀರ್ಣವಾಗಿಸುವಂತೆ,

ಸುಕೃತಿಯ=ಒಳ್ಳೆಯ ಕೆಲಸವನ್ನು ಮಾಡುವವನು, ವೇಪಿಪನು=ನಡುಗಿಸುತ್ತಾನೆ.

ಬಿಸಿಲಲ್ಲಿ ಸುಟ್ಟು, ಮಳೆಯಲ್ಲಿ ನೆನೆಸಿ, ಚಳಿಗಾಲದಲ್ಲಿ ನಡುಗಿಸಿ, ಋತು ಬದಲಾವಣೆಯಿಂದ ಈ ಭೂಮಿಯಲ್ಲಿ ಜೀವರಸಗಳ ಪಾಕ ಮಾಡಿ ಪಕ್ವ ಮಾಡುವಂತೆ, ನಮ್ಮನ್ನು ವಿಧಿಯು ಹಲಬಗೆಯ ಪರೀಕ್ಷೆಗಳಿಗೊಡ್ಡಿ, ದುಷ್ಟನನ್ನು ಪ್ರೋತ್ಸಾಹಿಸಿ, ಒಳ್ಳೆಯ ಕೆಲಸ ಮಾಡುವವರನ್ನು ಇನ್ನೂ ಪರೀಕ್ಷೆಗೆ ಒಳಪಡಿಸುತ್ತಾ, ನಮ್ಮನ್ನು ನಡುಗಿಸುತ್ತಾನೆ ಎನ್ನುವುದೇ ಈ ಮುಕ್ತಕದ ಹೂರಣ.

ಈ ಜಗತ್ತಿನಲ್ಲಿ, ಮನುಷ್ಯನನ್ನೂ ಸೇರಿ ಎಷ್ಟು ಪ್ರಾಣಿಗಳಿವೆಯೋ ಎಲ್ಲವನ್ನೂ ಏಕಕಾಲದಲ್ಲಿ ಅವರವರ ಪೂರ್ವ ಕರ್ಮಗಳಿಗೆ ಅನುಸಾರವಾಗಿ, ವಿಧಿ ಆಟ ಆಡಿಸುತ್ತದೆ. ಸಂಕಷ್ಟಗಳ ಬಿಸಿಲಿನ ಬೇಗೆಯಲ್ಲಿ ಸುಡುತ್ತಾ, ದುಃಖದ ಕಡಲಿನಲ್ಲಿ ನೆನೆಸುತ್ತಾ, ಅಕಸ್ಮಾತ್ತಾಗಿ ನಡೆಯುವ ಸಂಭವಗಳಿಂದ ನಡುಗಿಸುತ್ತಾ, ನಲುಗಿಸುತ್ತಾ ಕಾಲಕಾಲಕ್ಕೆ ಋತುಗಳು ಬದಲಾಗುವಂತೆ ನಮ್ಮ ಪರಿಸ್ಥಿತಿಯನ್ನೂ ಬದಲಾಯಿಸುತ್ತಲೇ ಇರುತ್ತದೆ. ಹಲವು ಬಾರಿ ಸುಖ, ಹಲವು ಬಾರಿ ದುಃಖ, ಹಲವು ಬಾರಿ ನಿರಾಸೆ, ಹಲವು ಬಾರಿ ನಿರ್ಲಿಪ್ತತೆಯಂತ ಸ್ಥಿತಿಗಳಲ್ಲಿ ನಮ್ಮನ್ನು ನೂಕಿ, ಋತು ಪರಿವರ್ತನೆಯಿಂದ ಭೂಮಿಯಲ್ಲಿ ಮತ್ತು ವಾತಾವರಣದಲ್ಲಿ ಆಗುವ ಬದಲಾವಣೆಯಂತೆ, ನಮ್ಮ ಸ್ಥಿತಿಯೂ ಬದಲಾಗುತ್ತಿರುತ್ತದೆ.

ದಾಸರು "ಸತ್ಯವಂತರಿಗಿದು ಕಾಲವಲ್ಲ, ದುಷ್ಟಜನರಿಗೆ ಇದು ಸುಭಿಕ್ಷಕಾಲ' ಎಂದು ಈಗ್ಗೆ ಆರೇಳು ಶತಮಾನಗಳ ಹಿಂದೆಯೇ ಹಾಡಿದ್ದರು. ಈ ವಿಧಿ ಸಜ್ಜನರನ್ನು "ಇವರೆಷ್ಟು ಗಟ್ಟಿ ಇದ್ದಾರೆಯೋ ನೋಡಿಯೇ ಬಿಡೋಣ!" ಎನ್ನುವಂತೆ ಸದಾಕಾಲ ಸಂಕಷ್ಟಗಳ ಮಾಲೆಗಳನ್ನು ಹಾಕುತ್ತಾ ಪರೀಕ್ಷಿಸುತ್ತಿರುತ್ತದೆಯಂತೆ, ಇವರಿಗೆ ಇನ್ನಷ್ಟು ಗಟ್ಟಿಯಾಗುವುದಕ್ಕೆ ಪ್ರೇರಕವಾಗಿರುತ್ತದಂತೆ.

ಹಾಗೆಯೇ ದುಷ್ಟರಿಗೆ ಮತ್ತಷ್ಟು ದುಷ್ಕಾರ್ಯಗಳನ್ನು ಮಾಡಲು ಸದಾಕಾಲ ಪ್ರೇರೇಪಿಸುತ್ತಾ, ಅವರನ್ನು ಪಾಪದ ಕೂಪಕ್ಕೆ ತಳ್ಳುತ್ತಾ, ಆ ದುಷ್ಟರಿಗೆ "ಅಯ್ಯೋ ನಾವು ಮಾಡುವುದು ತಪ್ಪು" ಎಂದು ಅರಿವಾಗಿಸಿ ಮತ್ತು ಅವರು ಬದಲಾಗುವ ತನಕ ಅವರಿಗೆ ಇನ್ನಷ್ಟು ಪಾಪಗಳನ್ನು ಮಾಡಲು ಸಹಾಯ ಮಾಡುತ್ತಲೇ ಇರುತ್ತದಂತೆ.





ಇದು ವಿಧಿಯ ಆಟ. ಇವೆಲ್ಲ ಆಗುವುದು ನಾವು ಈ ಸಂಸಾರಕ್ಕೆ ಮತ್ತು ಈ ಜಗತ್ತಿಗೆ ಅಂಟಿಕೊಂಡಿರುವ ತನಕ ಅಥವಾ ನಾವು ಇಲ್ಲಿನ ಆಗುಹೋಗುಗಳಿಗೆ ಪ್ರತಿಕ್ರಿಯೆ ನೀಡುತ್ತಿರುವ ತನಕ. ನಾವು ನಿರ್ಲಿಪ್ತ ಭಾವವನ್ನು ಎಂದು ಬೆಳೆಸಿಕೊಳ್ಳುತ್ತೇವೆಯೋ, ಈ ಸಂಸಾರದಲ್ಲಿ ಇದ್ದೂ ಇಲ್ಲದ ಹಾಗೆ ಇರುತ್ತೇವೆಯೋ ಅಂದು ಈ ವಿಧಿಯ ಯಾವ ಆಟವೂ ನಮ್ಮ ಮುಂದೆ ನಡೆಯುವುದಿಲ್ಲ. ಬಾಳು "ತಾವರೆ ಎಲೆಯ ಮೇಲಿನ ನೀರ ಹನಿಯಂತಿರಬೇಕು" ಎಂದು ಭಗವದ್ಗೀತೆಯ ಉಲ್ಲೇಖ. ಹಾಗಿದ್ದರೆ ಈ ವಿಧಿಯ ಆಟವನ್ನು ಎದುರಿಸುವಲ್ಲಿ ನಮಗೆ ಜಯ ಖಂಡಿತ.

**ಮುಕ್ತಕ-160**

**ಆವ ಬೇಳೆಯದಾವ ನೀರಿನಲಿ ಬೇಯುವುದೋ ।**
**ಆವ ಜೀವದ ಪಾಕವಾವ ತಾಪದಿನೋ ॥**
**ಆ ವಿವರವನ್ನು ಕಾಣದಾಕ್ಷೇಪಣೆಯದೇನು ।**
**ದೈವಗುಟ್ಟದು ತಿಳಿಯೆ-ಮಂಕುತಿಮ್ಮ ॥**

ಬೇಳೆಯದಾವ=ಬೇಳೆಯು+ಅದಾವ, ಕಾಣದಾಕ್ಷೇಪಣೆಯದೇನು=ಕಾಣದ+ಆಕ್ಷೇಪಣೆ+ಅದೇನು

ಯಾವ ಬೇಳೆ ಯಾವ ನೀರಿನಲಿ ಬೇಯುವುದೋ ಗೊತ್ತಿಲ್ಲವಲ್ಲ! ಹಾಗೆಯೇ ಪ್ರತಿಯೊಬ್ಬರೂ ಪಕ್ವವಾಗಲು ಯಾವ ಕರ್ಮಗಳನ್ನು ಅನುಭವಿಸಿ, ಸುಟ್ಟು, ಬೆಂದು, ತೊಯ್ದು, ನೊಂದು ಎಷ್ಟು ದಿನ ಅನುಭವಿಸಬೇಕೋ ಯಾರಿಗೂ ಅರ್ಥವಾಗದು. ಪ್ರತಿಯೊಬ್ಬರೂ ಈ ಅನುಭವದ ಯಾವುದೋ ಒಂದು ಸ್ತರದಲ್ಲಿರುತ್ತಾರೆ, ಹಾಗಾಗಿ ಮತ್ತೊಬ್ಬರನ್ನು ವಿಮರ್ಶೆ ಅಥವಾ ಆಕ್ಷೇಪಣೆ ಮಾಡಬೇಡ, ಏಕೆಂದರೆ ಇದು ದೈವ ಅಥವಾ ವಿಧಿಯ ರಹಸ್ಯ ಇದನ್ನು ಅರಿತುಕೋ ಎಂದು ಒಂದು ಆದೇಶವನ್ನು ನೀಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ನಾವು ನಮ್ಮ ಸುತ್ತ ಮುತ್ತ ನೋಡಿದಾಗ, ಒಬ್ಬೊಬ್ಬರದು ಒಂದೊಂದು ಸ್ವಭಾವ ಮತ್ತು ಪ್ರತಿಯೊಬ್ಬರಿಗೂ ಅವರವರದೇ ಸಮಸ್ಯೆ ಮತ್ತು ಆ ಸಮಸ್ಯೆಗಳಿಗೆ ಅವರವರದೇ ಕಾರಣಗಳು. ಯಾರಿಗೋ ಏನೋ ಆದರೆ, ನಾವು ತಕ್ಷಣ ಅದನ್ನು ವಿಶ್ಲೇಷಣೆ ಮಾಡುತ್ತಾ ನಮ್ಮ ಪೂರ್ವಾಗ್ರಹ ಪೀಡಿತ ಅಥವಾ ವಿವೇಚನಾರಹಿತವಾದ ತೀರ್ಪನ್ನು ಕೊಟ್ಟುಬಿಡುತ್ತೇವೆ. ಆದರೆ ಒಬ್ಬ ವ್ಯಕ್ತಿ ಯಾವುದೋ ಒಂದು ಸ್ಥಿತಿಯಲ್ಲಿದ್ದಾನೆಯೆಂದು ಅವನು "ಅದೇ" ಎಂದಾಗಲೀ, ಅವನು ಸದಾಕಾಲ "ಹಾಗೆಯೇ" ಎಂದಾಗಲೀ ತೀರ್ಮಾನಿಸಲಾಗುವುದಿಲ್ಲ ಮತ್ತು ಹಾಗೆ ತೀರ್ಮಾನಿಸುವುದು ತಪ್ಪು.
ಅವರವರ ಪೂರ್ವ ಕರ್ಮಗಳಿಗನುಸಾರವಾಗಿ ಮತ್ತು ಅವರ ಇಂದಿನ ಸ್ವಭಾವ ಮತ್ತು ಕೆಲಸಗಳಿಗನುಸಾರವಾಗಿ ಕೆಲವರು ಕೆಲ ಅನುಭವಗಳನ್ನು ಪಡೆಯುತ್ತಿರುತ್ತಾರೆ. ಇದೆಲ್ಲ ಆ ವಿಧಿಯ ಕೈವಾಡ. ಇದು ದೈವ ರಹಸ್ಯ. ಇದು ಅರ್ಥವಾಗುವುದಿಲ್ಲ ಮತ್ತು ಇದನ್ನು ಭೇದಿಸುವ ಪ್ರಯತ್ನವೂ ವ್ಯರ್ಥ. ಪ್ರತಿ ಜೀವಿಯೂ ಆ ವಿಧಿಯೊಡ್ಡುವ ಹಲವಾರು ಕಷ್ಟ, ನಷ್ಟ, ನೋವು, ಸಂಕಟಗಳ ಒತ್ತಡದ ಅನುಭವಗಳಿಂದ ಪ್ರತಿನಿತ್ಯ, ಜನ್ಮ ಜನ್ಮಾಂತರದಿಂದಲೂ





ಪಕ್ವವಾಗುತ್ತಲೇ ಇರುತ್ತಾನೆ. ಇಂದು ಅವನಿರುವುದು ಒಂದು ಹಂತ. ಅದಕ್ಕೆ ಕಾರಣಗಳು ಸೂಕ್ಷ್ಮಾತಿ ಸೂಕ್ಷ್ಮ, ಇದು ಎಲ್ಲರ ಪರಿಸ್ಥಿತಿ.

ಹಾಗಾಗಿ ಒಬ್ಬರು ಇನ್ನೊಬ್ಬರನ್ನು ಆಕ್ಷೇಪಣೆ ಮಾಡುವುದಾಗಲೀ ಅಥವಾ ವಿಶ್ಲೇಷಣೆ ಮಾಡುವುದಾಗಲೀ ಮಾಡಬಾರದು. ಅದು ಅಪರಾಧ. ನಾವೂ ಸಹ ಪಕ್ವವಾಗುವ ಯಾವುದೋ ಒಂದು ಸ್ತರದಲ್ಲಿದ್ದೇವೆ. ಎಂದು ನಾವು ಸಂಪೂರ್ಣ ಪಕ್ವವಾಗುತ್ತೇವೋ ಅಂದು ನಾವು ಈ ಸುಖ ದುಃಖದ ಸಂಕೋಲೆಗಳಿಂದ ಮುಕ್ತರಾಗುತ್ತೇವೆ ಎನ್ನುವುದು ಹಿರಿಯರ ಆದೇಶ. ನಮ್ಮನ್ನು ಪಕ್ವವಾಗಿಸುವ ಆ "ವಿಧಿ" ಮತ್ತು ವಿಧಿಯ ಮಾಲೀಕ ಆ ಪರಮಾತ್ಮನಿಗೆ ಶರಣಾಗಿ, ಬರುವುದನ್ನೆಲ್ಲ ಅನುಭವಿಸಿ ಶೀಘ್ರವಾಗಿ "ಪಕ್ವವಾಗುವ ಪ್ರಯತ್ನವನ್ನು ನಾವು ಮಾಡಬೇಕು.

**ಮುಕ್ತಕ-161**

**ವಿಧಿಯ ಹೊರೆಗಳನ್ನು ತಪ್ಪಿಸಿಕೊಳ್ಳುವನೆಲ್ಲಿಹನು |**
**ಬೆದರಿಕೆಯನದರಿಂದ ನೀಗಿಪನು ಸಖನು ||**
**ಎದೆಯನುಕ್ಕಾಗಿಸಾನಿಸು ಬೆನ್ನ-ತುಟಿಯ ಬಿಗಿ |**
**ವಿಧಿಯಗಸ, ನೀಂ ಕತ್ತೆ-ಮಂಕುತಿಮ್ಮ ||**

ತಪ್ಪಿಸಿಕೊಳ್ಳುವನೆಲ್ಲಿಹನು=ತಪ್ಪಿಸಿಕೊಳ್ಳುವನು+ಎಲ್ಲಿಹನು, ಬೆದರಿಕೆಯನದರಿಂದ=ಬೆದರಿಕೆಯನು+ಅದರಿಂದ,
ಎದೆಯನುಕ್ಕಾಗಿಸಾನಿಸು=ಎದೆಯನು+ಉಕ್ಕಾಗಿಸಿ+ಆನಿಸು,
ನೀಗಿಪನು=ಹೋಗಲಾಡಿಸುವನು, ಸಖನು=ಸ್ನೇಹಿತನು

ಈ ಜಗತ್ತಿನಲ್ಲಿ ಅನಾದಿ ಕಾಲದಿಂದಲೂ ಹುಟ್ಟಿದವರು ಮತ್ತು ಕಾಲವಾದವರು ಯಾರೂ ಸಹ ಈ ವಿಧಿಯು ಹೇರಿಸುವ ಹೊರೆಗಳ ಭಾರಗಳಿಂದ ತಪ್ಪಿಸಿಕೊಳ್ಳಲು ಸಾಧ್ಯವೇ ಆಗಿಲ್ಲ. ಈ ಹೊರೆಯನ್ನು ಹೊರುವ ಹೆದರಿಕೆಯನ್ನು ನೀಗಿಸುವವನೇ ನಮ್ಮ ನಿಜವಾದ ಸ್ನೇಹಿತ. "ನಿನ್ನ ಮನಸ್ಸನ್ನು ಕಬ್ಬಿಣದಂತೆ ಗಟ್ಟಿಯಾಗಿಸಿ, ಬೆನ್ನ ಮೇಲೆ ಹೊರೆ ಹೊತ್ತು, ತುಟಿಪಿಟಕ್ಕೆನ್ನದೆ ಮುಂದೆ ಸಾಗು, ಏಕೆಂದರೆ, ವಿಧಿಯು ಅಗಸನಾದರೆ ನೀನು ಕತ್ತೆಯಂತೆ" ಎಂದು ಒಂದು ಸುಂದರ ಉಪಮೆಯೊಂದಿಗೆ ವಾಸ್ತವಿಕತೆಯ ಸತ್ಯವನ್ನು ಪ್ರಸ್ತಾಪಿಸಿದ್ದಾರೆ ಈ ಮುಕ್ತಕದಲ್ಲಿ ಮಾನ್ಯ ಗುಂಡಪ್ಪನವರು.

ಈ "ವಿಧಿ"ಯ ಹೊರೆ ಮತ್ತು ಅದರ ಪರಿಣಾಮಗಳಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಅದನ್ನು ಅನುಭವಿಸಿಯೇ ತೀರಬೇಕು. ಅನುಭವಿಸಿ ತೀರಿಸಬೇಕು. ಹಿಂದಿನಿಂದ ತಂದದ್ದನ್ನು ಅನುಭವಿಸುವಾಗ ಮತ್ತಷ್ಟನ್ನು ಕಟ್ಟಿಕೊಳ್ಳುವುದು ನಮ್ಮೆಲ್ಲರ ಪರಿ. ಹೀಗೆ ನಾವು ನಮ್ಮ ವಿಧಿ ಲಿಖಿತವನ್ನು ಅನುಭವಿಸುವಾಗ ನಮಗೆ ಯಾರಾದರೂ ಒಂದೆರಡು ಸಾಂತ್ವನದ ಮಾತುಗಳಾಡಿದರೆ ಅವರೇ ನಮ್ಮ ನಿಜವಾದ ಸ್ನೇಹಿತರು. ನೀವು ಅಕಸ್ಮಾತ್ ಈ ವಿಧಿ ಲಿಖಿತದಲ್ಲಿ

ಸುಖವನ್ನು ಅನುಭವಿಸುತ್ತಿದ್ದರೆ, ನಿಮ್ಮ ಸುಖದಲ್ಲಿ ಭಾಗಿಯಾಗಲು ಎಲ್ಲರೂ ಹಾತೊರೆಯುತ್ತಾರೆ. ಆದರೆ ನೀವು ಕಷ್ಟದಲ್ಲಿದ್ದಾಗ, ನಿಮ್ಮನ್ನು "ಮೂಸಲೂ" ಯಾರೂ ಬರುವುದಿಲ್ಲ. ಅಂತಹ ಸ್ಥಿತಿಯಲ್ಲೂ ನಿಮಗೆ





ವಸ್ತುರೂಪದಲ್ಲಿ ಯಾವ ಸಹಾಯವನ್ನು ಮಾಡದಿದ್ದರೂ ನಿಮ್ಮೊಡನೆ ಇದ್ದು ನಿಮಗೆ ಸಾಂತ್ವನದ ಮಾತುಗಳನ್ನಾಡಿದರೆ ಅವರೇ ನಮ್ಮ ನಿಜವಾದ ಸ್ನೇಹಿತರು.

"ಅನುಭವಿಸಿ ತೀರಿಸಬೇಕು' ಎಂದು ಹೇಳಿದೆ. ಅನ್ಯ ಮಾರ್ಗವಿಲ್ಲ. ಇಂದು ಅನುಭವಿಸದಿದ್ದರೆ ನಾಳೆ ಅನುಭವಿಸಬೇಕಾಗುತ್ತದೆ. ಉದಾಹರಣೆಗೆ, ನಿಮ್ಮ ಬಳಿ ಒಂದು ರೂಪಾಯಿಯೂ ಇಲ್ಲ. ನಾಳೆ ಹತ್ತು ಸಿಗುವುದು. ಇಂದು ಹಸಿವು. ಇಂದು ಯಾರ ಬಳಿಯಲ್ಲಾದರೂ ಹತ್ತು ಸಾಲ ತೆಗೆದುಕೊಂಡು ಉಂಡರೆ, ಅದು ವಿಧಿ ಲಿಖಿತದ ಅನುಭವವನ್ನು ಮುಂದೂಡಿದಂತಾಗುತ್ತದೆ, ತೀರಿಸಿದಂತಾಗುವುದಿಲ್ಲ. ಅಲ್ಲದೆ ಇಂದು ಹಸಿದಿದ್ದು, ಆ ನೋವನ್ನು ಅನುಭವಿಸಿ, ನಾಳೆ ನಿಮ್ಮ ಹತ್ತರಿಂದ ಉಂಡರೆ, ಸುಖ. ಹೀಗೆಯೇ ಜೀವನದಲ್ಲಿ ಬರುವ ಎಲ್ಲವನ್ನೂ ಅನುಭವಿಸಿಯೇ ತೀರಿಸಬೇಕು. ಇಲ್ಲದಿದ್ದರೆ ಮತ್ತೊಂದು ಜನ್ಮಕ್ಕೆ, ಮಗದೊಂದು ಜನ್ಮಕ್ಕೆ ಹೊತ್ತು ಹೋಗಬೇಕು. ಒಂದು ಕಡಲೆ ಕಾಯಿ ಬೀಜವನ್ನು ಹಾಗೆ ನೆಟ್ಟರೆ ಸಸಿ. ಹುರಿದು ಬಿಟ್ಟರೆ ಮತ್ತೆ ಮೊಳಕೆ ಒಡೆಯುವುದೇ ಇಲ್ಲ. ಹಾಗೆ ನಮ್ಮ ಕರ್ಮವನ್ನು ಶೇಷವಿಲ್ಲದಂತೆ ಸುಟ್ಟರೆ ಮುಕ್ತಿ, ಇಲ್ಲದಿದ್ದರೆ ಮತ್ತೆ ಮತ್ತೆ ಕರ್ಮದ ಸಂಕೋಲೆಗಳ ಜೀವನದ ಸುಳಿಯಲ್ಲೇ ಇರಬೇಕು.

ವಾಚಕರೆ ಈ "ವಿಧಿ'ಯೆನ್ನುವುದು ನಮ್ಮ ಮೇಲೆ ನಮ್ಮ ಪೂರ್ವಕರ್ಮಗಳ ಮೂಟೆಯನ್ನು ಹೊರಿಸುವ ಅಗಸನಂತೆ, ನಾವು ಅದನ್ನು ಹೊರುವ ಕತ್ತೆಗಳಂತೆ. ನಾವೇ ಹೊರೆಯನ್ನು ಹೊರಬೇಕು, ಹೊತ್ತು, ಅನುಭವಿಸಿ ನೀಗಿಸಿಕೊಳ್ಳಬೇಕು. ಅದಕ್ಕೆ ಹಲ ಮಾರ್ಗಗಳುಂಟು. ಮುಖ್ಯವಾಗಿ "ಸತ್ಸಂಗ'ವೇ ಇದಕ್ಕೆ ಮಾರ್ಗ ಎಂದು ನಮ್ಮ ಕರ್ಮಗಳ ಗಂಟು ಕರಗುತ್ತದೋ ಅಂದು ನಮಗೆ ಮುಕ್ತಿ.

**ಮುಕ್ತಕ-162** **ಟಗರೆರಡ ಬೆಳೆಸಿ ಕೊಬ್ಬಿಸಿ ಕೆಣಕಿ ಹುರಿಗೊಳಿಸಿ |**

**ಜಗಳವಾಡಿಸಿ ದೈವಜೀವಗಳ ಪೆಸರಿಂ ||**

**ನಗುತಲಿರುವನು ನೋಡಿ ಪರಬೊಮ್ಮನೇಂ ಬಿನದಿ |**

**ಬಿಗಿಯದಿರು ನೀಂ ಬೀಗಿ-ಮಂಕುತಿಮ್ಮ ||**

ಟಗರೆರಡ=ಟಗರು+ಎರಡ, ಜಗಳವಾಡಿಸಿ=ಜಗಳವ+ಆಡಿಸಿ, ನಗುತಲಿರುವನು=ನಗುತಲಿ+ಇರುವನು,

ಪರಬೊಮ್ಮನೇಂ=ಪರಬೊಮ್ಮನು+ಏಂ, ಬಿಗಿಯದಿರು=ಬಿಗಿಯದೆ+ಇರು

ಪೆಸರಿಂ=ಹೆಸರಿಂದ, ಬಿನದಿ=ಸಂತೋಷದಿಂದ, ಬಿಗಿಯದಿರು=ಗರ್ವಪಡದಿರು, ಬೀಗಿ=ಅಹಂಕಾರದಿಂದ

ವಿಧಿಯ ರೂಪದಲ್ಲಿ ಆ ದೈವ ಮತ್ತು ನಿನ್ನ ರೂಪದಲ್ಲಿ ಈ ಜೀವ ಇವೆರಡನ್ನೂ ಕೊಬ್ಬಿದ ಟಗರುಗಳಂತೆ ಬೆಳೆಸಿ ಒಂದು ಇನ್ನೊಂದರ ಮೇಲೆ ಸೆಣಸಾಡಿಸುತ್ತಾ, ಆ ಪರಮಾತ್ಮ ನಗುತ್ತಿದ್ದಾನೆ. ನೀನು ನಿನ್ನ ಅಹಂಕಾರದಿಂದ ಗರ್ವ ಪಡದಿರು, ಎಂದು ಗುಂಡಪ್ಪನವರು ಒಂದು ಸಂದೇಶ ಮತ್ತು ಒಂದು ಆದೇಶವನ್ನು ಕೊಡುತ್ತಾರೆ ಈ ಮುಕ್ತಕದಲ್ಲಿ.

(225)

ಅದೃಷ್ಟ ತಂತ್ರ 159-163 ಕಗ್ಗರಸಧಾರೆ

ಒಂದು ಆ ಪರಮಾತ್ಮನಿಂದ ನಿಯಮಿಸಲ್ಪಟ್ಟ ವಿಧಿ, ನಮ್ಮನ್ನಾಡಿಸುವ ವಿಧಿ. ನಮ್ಮ ಪೂರ್ವ ಕರ್ಮಗಳ ಲೆಕ್ಕವಿಟ್ಟು ಪ್ರತೀ ಕೆಲಸ ಕಾರ್ಯಗಳಲ್ಲಿ ತನ್ನ ಪ್ರಭಾವವನ್ನು ಬೀರುತ್ತಾ ನಮ್ಮನ್ನಾಡಿಸುವ ವಿಧಿ. ಅದು ಒಂದು ಕೊಬ್ಬಿದ ಟಗರು. ಇನ್ನೊಂದು, ನಮಗೆ ನಮ್ಮ ಪೂರ್ವಕರ್ಮಗಳ ಪರಿಚಯವೂ ಇಲ್ಲ ಮತ್ತು ಲೆಕ್ಕವೂ ಇಲ್ಲ. ನಮ್ಮ "ಅಹಂ"ನ್ನು ಇಟ್ಟುಕೊಂಡು ಇಲ್ಲಿ ಜೀವನವನ್ನು ನಡೆಸುವ ಹೋರಾಟ ಮಾಡುತ್ತಿದ್ದೇವೆ. ಏಳು- ಬೀಳುಗಳು, ಸುಖ ದುಃಖಗಳು, ನೋವು-ನಲಿವುಗಳು, ಪ್ರೀತಿ-ದ್ವೇಷಗಳು ಮುಂತಾದ ಭಾವಗಳನ್ನು ಹೊತ್ತು ಹುಟ್ಟಿದಾರಭ್ಯ ಸಾಯುವತನಕ ಹೋರಾಡುತ್ತಲೇ ಇರುವ ನಾವು, ಇನ್ನೊಂದು ಟಗರು. ಈ ಜಗತ್ತಿನ ನಮ್ಮ ಬದುಕೇ ಇವೆರಡರ ನಡುವಿನ ತಿಕ್ಕಾಟ.

ನಮ್ಮ ಅಜ್ಞಾನದಿಂದ ಮತ್ತು ಅಹಂಕಾರದಿಂದ ವಿಧಿಯೊಡನೆ ಹೋರಾಡುವ ಪ್ರಯತ್ನ ಮಾಡುತ್ತೇವೆ. ಎದುರಿಗಿದ್ದರೆ ಹೋರಾಡಬಹುದು. ನಮ್ಮ ಕಣ್ಣಿಗೆ ಕಾಣದೆ ಮರೆಯಲ್ಲಿ ನಿಂತು ಹೋರಾಟಕ್ಕೆ ಕರೆಯುವ ಈ ವಿಧಿಯೊಡನೆ ಹೋರಾಡಲು ಸಾಧ್ಯವೇ? ಇದು ಆ ಪರಮಾತ್ಮನ ಆಟ. ಅವನು ತನ್ನ ವಿನೋದಕ್ಕಾಗಿಯೇ ತಾನೇ ರಚಿಸಿಕೊಂಡ ಒಂದು ನಾಟಕ.

ಪರಿಹಾರವನ್ನು ಗುಂಡಪ್ಪನವರು ಸೂಚಿಸಿದ್ದಾರೆ. "ಬಿಗಿಯದಿರು ನೀಂ ಬೀಗಿ" ಎಂದರು. ಅಹಂಕಾರ ಭಾವದಿಂದ ಗರ್ವ ಪಡದೆ ಆ ಪರಮಾತ್ಮನಿಗೆ ಶರಣಾಗಿ ಬಿಟ್ಟರೆ, ಪೂರ್ವಕರ್ಮ ಸವೆಸಲು, ಹೊಸ ಕರ್ಮಗಳನ್ನು ಕಟ್ಟಿಕೊಳ್ಳದೆ ಇರಲು, ಕ್ರಮೇಣ ಕರ್ಮಶೇಷವನ್ನು ಅಳಿಸಲು ಶಕ್ತಿಯನ್ನು ಅವನೇ ಕೊಡುತ್ತಾನೆ. ಆಗ ದ್ವಂದ್ವಗಳ ಸುಳಿಯಿಂದ ನಾವು ಹೊರಬಂದು, ಎರಡು ಟಗರುಗಳ ನಡುವೆ ಹೋರಾಟ ಕಡಿಮೆಯಾಗಿ ಅಥವಾ ಹೋರಾಟ ನಿಂತು, ಸಮನ್ವಯ ಉಂಟಾಗಿ ಆನಂದದಿಂದ ಇರಬಹುದು.

**ಮುಕ್ತಕ-163** **ಮಾನುಷ್ಯಚರಿತೆಯಚ್ಛಿನ್ನವಾಹಿನಿ ಸಾಗ |**
**ಲಾನುಪೂರ್ವ್ಯದ ಕರ್ಮ ಋಣಶೇಷವಿನಿತು ||**
**ತಾನಿರಲೆಬೇಕಲ್ತೆ ಪೌರುಷಸ್ಪರ್ಧನೆಗೆ |**
**ಆನೆಗಂಕುಶದಂತೆ-ಮಂಕುತಿಮ್ಮ ||**

ಮಾನುಷ್ಯಚರಿತೆಯಚ್ಛಿನ್ನವಾಹಿನಿ=ಮಾನುಷ್ಯಚರಿತೆ+ಅಚ್ಛಿನ್ನವಾಹಿನಿ,
ಸಾಗಲಾನುಪೂರ್ವ್ಯದ=ಸಾಗಲು+ಅನುಪೂರ್ವ್ಯದ, ಋಣಶೇಷವಿನಿತು=ಋಣ+ಶೇಷವು+ಇನಿತು,
ತಾನಿರಲೆಬೇಕಲ್ತೆ=ತಾನು+ಇರಲೆ+ಬೇಕಲೆ, ಆನೆಗಂಕುಶದಂತೆ=ಆನೆಗೆ+ಅಂಕುಶದಂತೆ,
ಅಚ್ಛಿನ್ನವಾಹಿನಿ=ನಿರಂತರ ಹರಿಯುವ, ಅನುಪೂರ್ವ್ಯದ=ಹಿಂದಿನಿಂದ ಬಂದ,

ಮನುಷ್ಯನ ಜೀವನ ಹೀಗೇ ನಿರಂತರವಾಗಿ ಸಾಗುತ್ತಿರಬೇಕಾದರೆ, ಪ್ರತೀ ಜನ್ಮದಲ್ಲೂ ಒಂದಷ್ಟು ಕರ್ಮಶೇಷ ಉಳಿಸಿಕೊಂಡಿರಬೇಕು. ನಿಷ್ಕೇಶವಾಗಿ ಬಿಟ್ಟರೆ ಪುನರ್ಜನ್ಮವಿರುವುದಿಲ್ಲ, ಹಾಗಾಗಿ ಒಂದಿಷ್ಟು ಋಣ ಶೇಷ ಉಳಿಯುವಂತೆ ಮಾಡಿ ಆ ಪರಮಾತ್ಮ ನಮ್ಮನ್ನು ಮತ್ತೆ ಮತ್ತೆ ಪಾತ್ರ ಧರಿಸುವಂತೆ ಮಾಡುತ್ತಾನೆ. ಆನೆಯನ್ನು ಅಂಕುಶದಿಂದ ಹತೋಟಿಯಲ್ಲಿ ಇಟ್ಟಿರುವಂತೆ, ಎಂದು ಉಲ್ಲೇಖಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಕಗ್ಗರಸಧಾರೆ ಅಳಿವಿಲ್ಲ ವಿಶ್ವಕ್ಕೆ 164-168

ಎಲ್ಲ ಮಹಾತ್ಮರೂ ಈ ಜಗತ್ತು ಒಂದು ನಾಟಕ ಮಂದಿರ, ನಾವೆಲ್ಲಾ ಕೇವಲ ಪಾತ್ರಧಾರಿಗಳು ಮತ್ತು ನಮ್ಮನ್ನಾಡಿಸುವ ಆ ಸೂತ್ರಧಾರನೇ ಆ ಪರಮಾತ್ಮ ಎಂದು ಅನಾದಿ ಕಾಲದಿಂದ ಹೇಳುತ್ತಲೇ ಬಂದಿದ್ದಾರೆ. ಈ ಜಗತ್ತಿನ ಎಲ್ಲ ಚರಾಚರ ಜೀವಿಗಳ ಜೀವನವನ್ನು ತನ್ನ ವಿನೋದಕ್ಕಾಗಿ ತಾನೇ ಸೃಷ್ಟಿಸಿ ಅವುಗಳ ನಿರಂತರತೆಯನ್ನು ಕಾಯುವುದಕ್ಕಾಗಿ ಅವುಗಳಿಗೆ ಕರ್ಮವೆಂಬ ಅಂಟನ್ನು ಇಟ್ಟು, ತಾನು ಇವುಗಳ ಆಟವನ್ನು ನೋಡಿ ಆನಂದಿಸುತ್ತಿದ್ದಾನೆ ಎಂಬುದು ನಮ್ಮ ನಂಬಿಕೆ. ಹೀಗೇ ಕರ್ಮಗಳ ಕೊಂಡಿಗಳ ಬಂಧನದಿಂದಲೇ ನಮಗೆ ಜನ್ಮ ಜನ್ಮಾಂತರದ ಸಂಬಂಧ. ಇಲ್ಲಿ ಒಂದು ವಿಚಾರವನ್ನು ನಾವು ನೋಡಬೇಕು. ಆ ಪರಮಾತ್ಮನೇ ಎಲ್ಲರನ್ನೂ ಸೃಜಿಸಿ ಎಲ್ಲರೊಳಗೂ ತಾನೇ ಜೀವಾತ್ಮ ರೂಪದಲ್ಲಿ ಪ್ರವೇಶಿಸಿ ತಾನೇ ಎಲ್ಲವನ್ನೂ ಅನುಭವಿಸುತ್ತಿದ್ದಾನೆ ಎಂದ ಮೇಲೆ, ಇಲ್ಲಿ ನಾವು ಅನುಭವಿಸುವುದೇನು? ಆ "ನಾವು" ಎಂದರೆ ಯಾರು? ನಾವುಗಳು ಈ "ನಾನು" ಎನ್ನುವ ಭಾವದಿಂದ ಎಲ್ಲ ಕರ್ಮಗಳನ್ನು ನಾವು ಅನುಭವಿಸುತ್ತಿದ್ದೇವೆ. ಇದು ನನ್ನ ಕರ್ಮ ಎಂದು ಒಂದು ಪ್ರಾಕೃತ ಅಥವಾ ವ್ಯಾವಹಾರಿಕ ಭಾವದಿಂದ ಅಂದುಕೊಳ್ಳುತ್ತೇವೆ. ಇದು ಸಹಜ.

ಆದರೆ ಪರಮಾತ್ಮ ತನ್ನ ಆನಂದಕ್ಕಾಗಿ ರಚಿಸಿದ ಜಗನ್ನಾಟಕದಲ್ಲಿ, ನಮ್ಮದೊಂದು ಪಾತ್ರ. ಈ ಪಾತ್ರಕ್ಕೆ ಹೂರಣ ನಮ್ಮ ಕರ್ಮ, ಕರ್ಮವಿದ್ದಷ್ಟೂ ದಿನ ನಮ್ಮ ಪಾತ್ರ ನಿರಂತರ. ಈ ಪಾತ್ರವನ್ನು ಹೀಗೇ ಮುಂದುವರೆಸಿಕೊಂಡು ಹೋಗಲು ಮತ್ತು ನಮ್ಮನ್ನು ನಿಯಂತ್ರಿಸಲು, ಆನೆಗೆ ಅಂಕುಶದಂತೆ, ನಮಗೆ ಕರ್ಮಶೇಷವನ್ನು ಸದಾಕಾಲ ಇಟ್ಟಿರುತ್ತಾನೆ. ಆದರೆ ನಾವು ಈ ಜಗತ್ತಿನಲ್ಲೇ ರಕ್ತಿಯನ್ನು (ಆಸಕ್ತಿ) ತೋರುತ್ತಾ ಇರುವಷ್ಟು ದಿನ ಅವನಿಗೂ ಸಂತೋಷ, ಏಕೆಂದರೆ ನಾಟಕ ಮುಂದುವರೆಯುವುದಲ್ಲ!!! ನಾವು ವಿರಕ್ತಿಯನ್ನು ತೋರಿದರೆ ಮತ್ತು ಜಗತ್ತಿನ ಯಾವುದನ್ನೂ ಬೇಡದೆ

"ಜಗನ್ನಾಥನನ್ನೇ ಮನದೊಳಗೆ ಬಂದು ಕೂರೆಂದು ಬೇಡಿದರೆ ನಮ್ಮ ಪಾತ್ರಕ್ಕೊಂದು ತೆರೆಯೆಳೆಯಬಹುದು, ಮುಕ್ತಿ ಪಡೆಯಬಹುದು. "ಅಂಕುಶ"ದ "ಅಂಕೆ"ಯಿಂದ ಹೊರಬರಬಹುದು. ಹೇಳುವುದು ಸುಲಭ, ಅಭ್ಯಾಸ ಕಷ್ಟ, ಅಸಾಧ್ಯವಲ್ಲ. ಪ್ರಯತ್ನಪಡಬೇಕು!!!

# ಅಳಿವಿಲ್ಲ ವಿಶ್ವಕ್ಕೆ 164-168

**ಮುಕ್ತಕ-164**

**ಹಳೆಯ ಮಲೆ ಹಳೆಯ ನೆಲವಾದೊಡೆಯುಮೊರತೆ ಮಳೆ।**
**ಹೊಳೆನೀರಿನಾವಗಂ ಹೊಸದಾಗಿಸುವವೊಲ್।**
**ಹಳೆಯಕರ್ಮವ ಹೊಸದು ಕೊಚ್ಚಿ ಪೌರುಷನದಿಯ।**
**ಬೆಳೆಯುವುದು ನವತೆಯಲಿ-ಮಂಕುತಿಮ್ಮ॥**

ನೆಲವಾದೊಡೆಯುಮೊರತೆ=ನೆಲವು+ಆದೊಡೆಯುಂ+ಮೊರತೆ,
ಹೊಳೆನೀರಿನಾವಗಂ=ಹೊಳೆ+ನೀರಿಗೆ+ಆವಗಂ, ಪೊಸದಾಗಿಸುವವೊಲ್=ಪೊಸದಾಗಿಸುವ+ವೋಲ್,
ಮೊರೆತ=ನಿರಂತರ, ಧಾರಾಕಾರ, ಆವಗಂ=ಯಾವಾಗಲೂ, ಹೊಸದಾಗಿಸುವವೊಲ್ ಹೊಸದಾಗಿಸುವಂತೆ,
ನವತೆಯಲಿ=ಹೊಸತಿನಲಿ,





ಹಳೆಯ ಭೂಮಿ ಮತ್ತು ಹಳೆಯ ಬೆಟ್ಟವಾದರೂ ಹೊಸದಾಗಿ ಸುರಿಯುವ ಮಳೆಯು ನದೀ ನೀರನ್ನು ಹೊಸದಾಗಿಸುವಂತೆ, ಹೊಸ ಕರ್ಮಗಳು ಹಳೆಯ ಕರ್ಮಗಳನ್ನು ಕೊಚ್ಚಿಕೊಂಡು ಹೋಗಿ, ಮತ್ತೆ ಹೊಸ ಹೊಸ

ಕರ್ಮಗಳ ಸಾಂಗತ್ಯವನ್ನು ನಮಗೆ ನೀಡುವುದು, ಎಂದು ಈ ಮುಕ್ತಕದಲ್ಲಿ ಕರ್ಮ ಪರಿವರ್ತನೆಯ ವೃತ್ತಾಂತವನ್ನು ಉಲ್ಲೇಖಿಸಿದ್ದಾರೆ, ಮಾನ್ಯ ಗುಂಡಪ್ಪನವರು.

ಕರ್ಮಗಳ ಸರಪಳಿ ಒಂದು ನದೀ ಪ್ರವಾಹವಿದ್ದಂತೆ. ಹೇಗೆ ಒಂದು ನದಿಯು ತನ್ನ ಸಂಪರ್ಕಕ್ಕೆ ಬಂದ ಎಲ್ಲವನ್ನು ಸೇರಿಸಿಕೊಂಡು ಮುಂದೆ ಮುಂದೆ ಸಾಗಿ ಸಮುದ್ರವನ್ನು ಸೇರಿಕೊಳ್ಳುತ್ತದೆಯೋ, ಹಾಗೆಯೇ ನಮ್ಮ ಜೀವನದಲ್ಲೂ ನಮ್ಮ ಸಂಗಕ್ಕೆ ಬಂದ ಎಲ್ಲದರೊಡನೆ ನಮಗೆ ಕರ್ಮ ಸಂಬಂಧವೇರ್ಪಟ್ಟು, ನಮ್ಮ ಜೀವನದ ಪಯಣವೂ ಸಾಗುತ್ತಿರುತ್ತದೆ. ಹಾಗೆ ಸಾಗಿದ ನದಿ, ಕಡಲನ್ನು ಸೇರಿ ಮತ್ತೆ ಆವಿಯಾಗಿ, ಮೋಡವಾಗಿ, ಮಳೆಯಾಗಿ ಸುರಿದಾಗ ಹೊಸ ನೀರಂತೆ ಸುರಿಯುತ್ತದೆ. ಆದರೆ ಅದು ಸುರಿಯುವ ಭೂಮಿ ಮತ್ತು ಗುಡ್ಡಗಳು ಹಳೆಯದಾದರೂ ಸುರಿಯುವ ಮಳೆ ಮತ್ತು ಮಳೆಯ ನೀರು ಮತ್ತು ಅದರಿಂದಾದ ನದಿಯೂ ಹೊಸದಾಗಿರುತ್ತದೆ. ಅದೇ ರೀತಿ ಕರ್ಮಗಳ ಸಂಕೋಲೆಯಿಂದ ಬಂಧಿತರಾದ ನಾವುಗಳೂ ಸಹ ಹಳೆಯ ಕರ್ಮಗಳ ಸಂಕೋಲೆಯ ಹಳೆಯ ಕೊಂಡಿಗಳನ್ನು ಬಿಡಿಸಿಕೊಳ್ಳುತ್ತಾ ಹೊಸ ಕೊಂಡಿಗಳಿಂದ ಬಂಧಿತರಾಗುತ್ತಾ ಇರುತ್ತೇವೆ. ಹಳೆಯ ಜೀವನ ಕಳೆದು, ಜೀವನ ಹೊಸದಾಗುತ್ತಾ ಹೋಗುತ್ತದೆ.

ಪೂರ್ವಜನ್ಮದ ಕರ್ಮಶೇಷದ ಪರಿಚಯ ನಮಗೆ ಇರದಿದ್ದರೂ ಅದನ್ನು ನಾವು ಅನುಭವಿಸುತ್ತಲೇ ಇರುತ್ತೇವೆ. ನಮ್ಮ ಹೊಸ ಕರ್ಮಗಳು ನಮಗೆ ಗೊತ್ತು, ಕೆಲವು ಅರ್ಥವಾಗುತ್ತವೆ ಮತ್ತೆ ಕೆಲವು ಅರ್ಥವಾಗುವುದಿಲ್ಲ. ಅರ್ಥವಾಗಲಿ ಬಿಡಲಿ ನಮ್ಮ ಕರ್ಮವನ್ನು ನಾವು ಅನುಭವಿಸಿಯೇ ತೀರಬೇಕು. ಹಾಗೆ ಅನುಭವಿಸುವಾಗ, ಕುಲಶೇಕರರು ಹೇಳುವಂತೆ "ಯದ್ ಯದ್ ಭವ್ಯಂ ಭವತು ಭಗವನ್ ಪೂರ್ವ ಕರ್ಮಾನುರೂಪಂ, ಏತತ್ ಪ್ರಾರ್ತ್ಯಂ ಮಮ ಬಹುಮತಂ ಜನ್ಮ ಜನ್ಮಾಂತರೇಪಿ, ತ್ವತ್ ಪಾದಾಂಬೋರುಹಯುಗಗತಾ ನಿಶ್ಚಲಾ ಭಕ್ತಿರಸ್ತು", ಅರ್ಥಾತ್ "ಹೇ ಪರಮಾತ್ಮ, ಜನ್ಮ ಜನ್ಮಾಂತರದಿಂದ ನನ್ನ ಪೂರ್ವಕರ್ಮಕ್ಕೆ ಅನುಗುಣವಾಗಿ, ಏನೇನು ಆಗಬೇಕೋ ಅದೆಲ್ಲ ಆಗಲಿ, ಅದನ್ನೆಲ್ಲ ಅನುಭವಿಸಲು ನಾ ಸಿದ್ಧನಿದ್ದೇನೆ, ಆದರೆ ಅದನ್ನು ಅನುಭವಿಸುವಾಗ, ನನ್ನ ಮನಸ್ಸು ನಿನ್ನ ಪಾದಾರವಿಂದದಲ್ಲಿ ನಿಶ್ಚಲವಾಗಿ ನಿಲ್ಲಲಿ". ಎಂತಹ ಅದ್ಭುತ ವಿಚಾರ.

ನಾ ಹಿಂದೆಯೂ ಹೇಳಿದ್ದೇನೆ, ಈಗಲೂ ಹೇಳುತ್ತೇನೆ, ನಮ್ಮ ಕರ್ಮಗಳನ್ನು ಅನುಭವಿಸಿಯೇ ತೀರಬೇಕು ಮತ್ತು ಅನುಭವಿಸಿ ತೀರಿಸಬೇಕು. ಅನ್ಯಥಾ ದಾರಿಯಿಲ್ಲ. ಹಾಗೆ ಅನುಭವಿಸುವಾಗ ಹೊಸ ಕರ್ಮಗಳನ್ನು ಸಾಧ್ಯವಾದಷ್ಟು ಸಂಚಯನ ಮಾಡದೆ, ಕಟ್ಟಿಕೊಂಡದ್ದನ್ನು ಕರಗಿಸಿಕೊಂಡು ನಮ್ಮ ಹೊರುವ ಭಾರವನ್ನು ಕಡಿಮೆ ಮಾಡಿಕೊಂಡರೆ, ಜೀವನ ಹಗುರವಾಗುತ್ತದೆ. ಕರ್ಮ ಪೂರ್ತಿ ಖಾಲಿಯಾದಾಗ ನಮಗೆ ಮುಕ್ತಿ. ಇದರ ಪ್ರಕ್ರಿಯೆ ಬಹಳ

ಕಷ್ಟ, ನಿರಂತರ ಸಾಧನೆ ಬೇಕು, ಸಾಧಿಸಬೇಕೆಂಬ ಹಠ ಬೇಕು. ಅಸಾಧ್ಯವಲ್ಲ. ವಾಚಕರೆ ಪರಮಾತ್ಮನಿಗೆ ಶರಣಾಗಿ ಪ್ರಯತ್ನ ಪಡುವ, ಅವನ ಕೃಪೆ ಇದ್ದರೆ ಅಸಾಧ್ಯವಾವುದೂ ಇಲ್ಲ.





**ಮುಕ್ತಕ-165**

**ಹೊಸಹೊಸದು ತಾನಾಗುತಿರ್ದೊಡಂ ತನ್ನಯ |**
**ಪ್ರಸವ ಪ್ರವಾಹ ಭೂಮಿಗಳ ಹಳೆತನದಿಂ ||**
**ನಸುಸೋಂಕು ವಾಸನೆಯ ಪೊನಲೊಂದಬೇಕಲ್ತೆ |**
**ಹೊಸದು ಹಳದಾಗದೆ-ಮಂಕುತಿಮ್ಮ ||**

ತಾನಾಗುತಿರ್ದೊಡಂ=ತಾನು+ಆಗುತಿರ್ದೊಡಂ, ಪೊನಲೊಂದಬೇಕಲ್ತೆ=ಪೊನಲ್+ಒಂದುಬೇಕಲ್ತೆ, ಪೊನಲ್=ನದಿ

ಹೊಸಮಳೆಯಿಂದ ಸೃಷ್ಟಿಯಾದ ಹೊಸನೀರಿನ ನದಿ ಹರಿಯುವುದು ಹಳೆಯ ದಾರಿಯಲ್ಲೇ ಅಲ್ಲವೇ? ಅದರ ಹರಿಯುವ ಪಾತ್ರವೇನೂ ಬದಲಾಗುವುದಿಲ್ಲ ಅಲ್ಲವೇ? ಅದು ಉಗಮವಾಗುವ ಬೆಟ್ಟವೂ ಹಳತೇ ಮತ್ತು ಅದು ಹರಿಯುವ ಭೂಮಿಯೂ ಹಳತೇ. ಹಾಗೆ ಹೊಸತನವನ್ನು ತುಂಬಿಕೊಂಡ ನದಿ ಆ ಹಳೆಯ ಭೂಮಿಯ ಗುಣಗಳನ್ನೂ ಹೊತ್ತು ಹೊಸದರಂತೆ ಹರಿಯುತ್ತದೆ. ಹಳತನ್ನು ಉಳಿಸಿಕೊಂಡು ಹೊಸ ರೂಪ ಧರಿಸಿ ಸಾಗುವುದೇ ಈ ಜೀವನದ ನದಿ ಎಂಬ ಅರ್ಥದಲ್ಲಿದೆ ಈ ಮುಕ್ತಕದ ಹೂರಣ.

ತಾಯ ಗರ್ಭದಲ್ಲಿ ಮಗುವಿನ ಅಂಕುರವಾದಾಗ, ಅದು ಹೊಸ ಮಗು. ಆದರೆ ಆ ಮಗು ತನ್ನ ತಂದೆ ಮತ್ತು ತನ್ನ ತಾಯಿಯ, ಎರಡೂ ಕಡೆಯ ಏಳುತಲೆಮಾರಿನ ಹಿಂದಿನವರಿಂದ ಬರುವ ವಂಶವಾಹಿನಿಯನ್ನು ಹೊತ್ತೇ ಈ ಜಗತ್ತಿಗೆ ಬರುತ್ತದೆ ಮತ್ತು ಬೆಳೆಯುತ್ತದೆ. ಮಗು ಹೊಸದಾದರೂ, ಅದರ ರೂಪ ಹೊಸದಾದರೂ ಅದರ ಗುಣಗಳು,

ಹಳೆಯ ತಲೆಮಾರಿನ ಯಾರನ್ನೋ ಹೋಲುವುದನ್ನು ನಾವು ಕಾಣುತ್ತೇವೆ. ಒಂದು ಗರ್ಭದಲ್ಲಿ ಹುಟ್ಟಿದ ಅವಳಿ ಗಂಡು ಮಕ್ಕಳಲ್ಲಿ ಒಬ್ಬ ತಾಯಿಯ ತಂದೆಯಂತೆಯೂ ಮತ್ತು ಮತ್ತೊಬ್ಬ ತಂದೆಯ ತಂದೆಯಂತೆಯೂ ಇರುವುದನ್ನು ನಾನು ಕಂಡಿದ್ದೇನೆ. ಇಲ್ಲಿ ಮಕ್ಕಳು ಹೊಸದಾದರೂ ಹಳತಿನ ಗುಣಗಳನ್ನು ಹೊತ್ತು ತರುತ್ತಾರೆ.

ಹಾಗೆಯೇ ಈ ಜೀವನದಲ್ಲಿ ನಾವು ಹೊಸತೆಂದು ಯಾವುದನ್ನು ಕರೆಯುತ್ತೇವೆಯೋ, ಅದು ಹಳತಿನ ಆಧಾರದ ಮೇಲೆಯೇ ಪ್ರಕಟಗೊಂಡು ಪ್ರಕಾಶಿಸುತ್ತದೆ. ಇದನ್ನು ನಾವು ಈ ಜಗತ್ತಿನ ಸಮಸ್ತದಲ್ಲೂ ಕಾಣಬಹುದು. ಗಿಡ, ಮರ, ಬಳ್ಳಿ, ಪ್ರಾಣಿ, ಪಕ್ಷಿ, ಕ್ರಿಮಿ, ಕೀಟ ಹೀಗೇ ಎಲ್ಲದರಲ್ಲೂ ಕಾಣಬಹುದು.
ಸೃಷ್ಟಿ ಕ್ರಮದಲ್ಲಿ ನಮ್ಮ ಪ್ರಯಾಣ ಒಂದು ಬಾರಿ ಶುರುವಾಗಿ ಬಿಟ್ಟರೆ ಕರ್ಮಗಳ, ಗುಣಗಳ ಮತ್ತು ವಾಸನೆಗಳನ್ನು ಹೊತ್ತುಕೊಂಡು ಹರಿಯುವ, ಜೀವನದ ಪ್ರವಾಹ ನಿರಂತರ ನಡೆಯುತ್ತದೆ. ಹಳತನ್ನು ಬಿಟ್ಟು ಹೊಸತನ್ನು ಹಿಡಿದು, ಹೊಸತನ್ನು ಹಳತಿನೊಂದಿಗೆ ಮಿಳಿತ ಮಾಡಿ, ಹೊಸತನ್ನು ಹಳತಾಗಿಸುತ್ತಾ, ಮತ್ತೆ ಹೊಸತನ್ನು ಪಡೆದುಕೊಳ್ಳುತ್ತಾ ನಿರಂತರ ಸಾಗುತ್ತಲೇ ಇರುತ್ತದೆ. ನಮ್ಮ ರೂಪ ಬದಲಾಯಿಸುತ್ತಾ ಹೋಗುವ ಈ ಜೀವನದ ಪ್ರಯಾಣ, ಹೊಸತನ್ನು ಏನೂ ಪಡೆಯದೆ, ಇರುವುದನ್ನೆಲ್ಲ ಖಾಲಿ ಮಾಡಿದಾಗ ನಮ್ಮ ಪ್ರಯಾಣಕ್ಕೊಂದು ಅಂತ್ಯ ಮತ್ತು ಸದಾ ನವ ನವೀನವಾದ ಅನಂತ ವಿಶ್ವದಲ್ಲಿ ಲೀನ.

ವಾಚಕರೆ ಮನಸ್ಸು ಬುದ್ಧಿ ದೇಹಗಳಿಗೆ ರಂಜನೆಯನ್ನು ಕೊಡುವ ಈ ಜಗತ್ತಿನ ವಾಸನೆಯನ್ನು ಬಿಡುವುದು ಅಷ್ಟು ಸುಲಭವಲ್ಲ. ನಮ್ಮ ಜೀವನದ ಅವಧಿಯಲ್ಲಿ ನಾವು ನಮ್ಮ ಕೆಲಸ ಕಾರ್ಯಗಳನ್ನು ಮಾಡುವಾಗ





ಏನೇನನ್ನೋ ಅಂಟಿಸಿಕೊಂಡುಬಿಡುತ್ತೇವೆ. ಆದರೆ ಹೊಸತನ್ನು ಅಂಟಿಸಿಕೊಳ್ಳದೆ, ಇರುವುದನ್ನು ಕಳೆದು ಕೊಂಡು, ಮತ್ತೆ ಹಿಂತಿರುಗಿ ನೋಡದಂತಹ ಪ್ರಯತ್ನವನ್ನು ಮಾಡಿದರೆ, ಕರ್ಮ ಶೇಷವಿಲ್ಲದೆ ಮುಕ್ತಿ ಪಡೆಯಬಹುದು.

ಮುಕ್ತಕ-166 ಹುಳು ಹುಟ್ಟಿ ಸಾಯುತಿರೆ, ನೆಲ ಸವೆದು ಕರಗುತಿರೆ |
ಕಡಲೊಳೆತ್ತಲೋ ಹೊಸದ್ವೀಪವೇಳುವುದು ||
ಕಳೆಯುತೊಂದಿರಲಿಲ್ಲಿ ಬೆಳೆವು ದಿನ್ನೊಂದೆಲ್ಲೋ |
ಅಳಿವಿಲ್ಲ ವಿಶ್ವಕ್ಕೆ-ಮಂಕುತಿಮ್ಮ ||

ಕಡಲೊಳೆತ್ತಲೋ=ಕಡಲೊಳು+ಎತ್ತಲೋ, ದ್ವೀಪವೇಳುವುದು-ದ್ವೀಪವು+ಏಳುವುದು,

ಕಳೆಯುತೊಂದಿರಲಿಲ್ಲಿ=ಕಳೆಯುತ+ಒಂದು+ಇರಲು+ಇಲ್ಲಿ,

ಬೆಳೆವುದಿನ್ನೊಂದೆಲ್ಲೋ=ಬೆಳೆವುದು+ಇನ್ನೊಂದು+ಇನ್ನೆಲ್ಲೋ

ಈ ಜಗತ್ತಿನಲ್ಲಿ ಒಂದು ಹುಳ ಸತ್ತರೆ ಹತ್ತು ಹುಟ್ಟುತ್ತವೆ. ನಾವು ಒಂದು ಸೊಳ್ಳೆಯನ್ನು ಹೊಸಕಿ ಹಾಕಿದರೆ, ಬೇರೆಲ್ಲೋ ಸಾವಿರ ಹುಟ್ಟಿರುತ್ತದೆ. ಒಂದು ಸಸಿ ನಾಶವಾದರೆ ಬದಲಾಗಿ ಸಾವಿರಾರು ಹುಟ್ಟುತ್ತವೆ. ಭೂಮಿಯ ಮೇಲೆಯೂ ಬದಲಾಗುತ್ತಿರುತ್ತದೆ. ಎಲ್ಲೋ ಸಾಗರ ವಿಸ್ತಾರಗೊಂಡು ಕೆಲ ನೆಲ ಭಾಗ ಕೊಚ್ಚಿ, ಮುಚ್ಚಿಕೊಂಡು ಹೋದರೆ, ಮತ್ತೆಲ್ಲೋ ಕೆಲ ದ್ವೀಪಗಳು ತಲೆಯೆತ್ತುತ್ತವೆ. ಒಂದು ಎಲ್ಲೋ ಕಳೆದು ಹೋಯಿತು ಎಂದರೆ ಮತ್ತೆಲ್ಲೋ ಇನ್ನೊಂದು ಬೆಳೆದು ನಿಂತಿರುತ್ತದೆ. ಹೀಗೆ ಅಳಿವು, ಉಳಿವುಗಳ ಪ್ರಕ್ರಿಯೆ ನಿರಂತರವಾಗಿ ಮತ್ತು ನಿರಾತಂಕವಾಗಿ ಈ ಜಗತ್ತಿನಲ್ಲಿ ನಡೆಯುತ್ತಿರುತ್ತದೆ. ಹಾಗಾಗಿ ಈ ಜಗತ್ತಿಗೆ ಅಳಿವಿಲ್ಲ ಎನ್ನುವುದೇ ಗುಂಡಪ್ಪನವರ ಈ ಮುಕ್ತಕದ ಹೂರಣ.

ಈ ಪ್ರಕ್ರಿಯೆ ಕೇವಲ ವಸ್ತು ನಿಷ್ಟವಾದ ರೂಪ ಬದಲಾವಣೆಗೆ ಮಾತ್ರ ಸೀಮಿತವಲ್ಲ. ಇದು ಮನುಷ್ಯನ ಆಲೋಚನೆಗಳು, ಅವನ ಕರ್ಮಗಳು (ಕೆಲಸ ಎಂಬ ಅರ್ಥದಲ್ಲಿ), ಅವನ ಸಂಬಂಧಗಳು ಎಲ್ಲಕ್ಕೂ ಅನ್ವಯವಾಗುತ್ತದೆ. ಮನುಷ್ಯನ ಮನದಲ್ಲಿ ಉದ್ಭವವಾಗುವ ಆಲೋಚನೆಗಳನ್ನೇ ನೋಡಿ. ಒಂದಾದ ಮೇಲೆ ಒಂದರಂತೆ ಹೊಸ ಹೊಸ ಆಲೋಚನೆಗಳು, ಒಂದು ಇಂಗಿದರೆ ಮತ್ತೊಂದು ಎದ್ದು ನಿಲ್ಲುತ್ತದೆ. ಅಂತ್ಯವೇ ಇಲ್ಲದ ಆಲೋಚನೆಗಳ ಸರಪಳಿ, ಕೊಂಡಿಯ ಕೊನೆಯೇ ಕಾಣದ ಯೋಚನೆಗಳು, ಆಲೋಚನೆಗಳು. ಇದೇ ರೀತಿ ನಾವು ಮಾಡುವ ಕೆಲಸಗಳನ್ನು ನೋಡಿದರೆ, ನಮ್ಮ ಮನಸ್ಸಿನಲ್ಲಿ ಆಗುವ ಚಿತ್ರ ಬದಲಾವಣೆಗೆ ಅನುಗುಣವಾಗಿ ನಮ್ಮ ಕೆಲಸಗಳೂ ಬದಲಾಗುತ್ತಾ ಹೋಗುತ್ತವೆ. ಏನೋ ಆಗಿದ್ದವರು ಏನೋ ಆಗಿಬಿಡುತ್ತಾರೆ.

"ಬುದ್ಧಿಃ ಕರ್ಮಾನುಸಾರಿಣಿ" ಎನ್ನುವ ಒಂದು ಮಾತು ಇದೆ. ಕೆಲಬಾರಿ ನಮ್ಮ ಪೂರ್ವ ಕರ್ಮಕ್ಕನುಗುಣವಾಗಿ ನಮ್ಮ ಬುದ್ಧಿಯೂ ಮತ್ತೆ ಕೆಲವು ಬಾರಿ "ನಮ್ಮ ಬುದ್ಧಿ ಹಾಗೆ ಓಡುವುದು, ಹಾಗಾಗಿ ಆ ಕರ್ಮಗಳು" ಎನ್ನುವಂತೆ ಒಟ್ಟಾರೆ ಬುದ್ಧಿ ಬದಲಾಗುತ್ತಾ ಹೋಗುತ್ತದೆ. “ಇವರು ಯಾಕೋ ಮೊದಲಿನ ಹಾಗೆ ಇಲ್ಲ" ಎನ್ನುವ ಮಾತು ನಾವು ಆಗಾಗ ಕೇಳುತ್ತಿರುತ್ತೇವೆ. ಹಾಗೆಯೇ ನಮ್ಮ ಸಂಬಂಧಗಳೂ ಸಹ, ಇಂದು

ಮಿತ್ರರು. ನಾಳೆ ಶತ್ರುಗಳು. ನಮ್ಮ ಬಾಲ್ಯದ ಸ್ನೇಹಿತರು ಕೆಲವರು ಕಳೆದೇ ಹೋಗಿದ್ದಾರೆ. ಆದರೆ ಹೊಸ ಹೊಸ ಸ್ನೇಹಿತರು ಅಂಟಿಕೊಳ್ಳುತ್ತಾರೆ. ಪರಸ್ಪರ ಸಂಬಂಧಗಳೂ ಸಹ ಹಾಗೆಯೇ.

ಈ ಕಳಕೊಳ್ಳುವ ಮತ್ತು ಹೊಸೆದುಕೊಳ್ಳುವ ಕ್ರಮ ಸ್ನೇಹದಲ್ಲಿ ನಾವು ಬಹಳವಾಗಿ ಕಾಣುತ್ತೇವೆ. ಇದೇ ರೀತಿ ಜಗತ್ತಿನ ಪ್ರತಿಯೊಂದೂ ಸಹ. ಒಂದು ಅಳಿದರೆ ಹತ್ತು ಹುಟ್ಟುತ್ತವೆ. ಪ್ರಾಣಿ, ಪಕ್ಷಿ, ಕೀಟ, ಸಸಿ, ಗಿಡ, ಋತುಮಾನಗಳು ಎಲ್ಲವೂ ಒಂದಾದ ಮೇಲೆ ಒಂದರಂತೆ, ಕುದಿಯುವ ನೀರಿನಲ್ಲಿ ಗುಳ್ಳೆಗಳು ಎದ್ದು ಎದ್ದು ಒಡೆದು ಒಡೆದು ಮತ್ತೆ ಮತ್ತೆ ಏಳುತ್ತಲೇ ಇರುವಂತೆ ಹುಟ್ಟುತ್ತವೆ, ಅಳಿಯುತ್ತವೆ.

ಇದಕ್ಕೆ ಪರಿಹಾರ ಉಂಟೇ? ಎಂದರೆ ಆ ಪ್ರಶ್ನೆಗೆ ತಕ್ಷಣ ಉತ್ತರ ಹೇಳಲು ಸಾಧ್ಯವಿಲ್ಲ. ಏಕೆಂದರೆ ಇದು ಪ್ರಕೃತಿ ನಿಯಮ. ಈ ಬದಲಾಗುವ ಆಲೋಚನೆಗಳು ಕರ್ಮಗಳು ಸಂಬಂಧಗಳು ಎಲ್ಲವೂ ಸಹ ಮಾನವರಲ್ಲಿ ಹೆಚ್ಚು. ಅನ್ಯ ಪ್ರಾಣಿಗಳಲ್ಲಿ ಅವು ಸೀಮಿತ. ಆದರೆ ಈ ಪ್ರಕೃತಿಯ ಒಂದು ಅಂಶವಾದ್ದರಿಂದ ಈ ಪ್ರಕ್ರಿಯೆಗೆ ಅಧೀನವಾಗಿದ್ದೇವೆ. ಎಂದೂ ಅಳಿವಿಲ್ಲದ ಈ ಅನಂತ ವಿಶ್ವದಲ್ಲಿ ಹೀಗಲ್ಲದಿದ್ದರೆ ಹಾಗೆ, ಹಾಗಲ್ಲದಿದ್ದರೆ ಮತ್ತೊಂದು ರೀತಿಯಲ್ಲಿ ಬದುಕಲೇ ಬೇಕು, ಬಾಳಲೇ ಬೇಕು, ಅನ್ಯ ಮಾರ್ಗವಿಲ್ಲ. ಆದರೆ ಆ ಬದುಕು ಪರಸ್ಪರ ಪ್ರೀತಿ ಪ್ರೇಮಗಳಿಂದ, ಸ್ನೇಹ ಸೌಹಾರ್ದತೆಯಿಂದ ಕೂಡಿದ್ದರೆ ಬದಲಾದ ಸಂದರ್ಭಗಳಲ್ಲೂ ನಾವು ಆನಂದದಿಂದಿರಬಹುದು.

**ಮುಕ್ತಕ-167** **ಕ್ಷಿತಿಚಕ್ರ ರವಿಚಕ್ರ ಋತುಚಕ್ರಗಳಿಗಿಹುದು |**
**ಮಿತವೃತ್ತಿ; ನರಿನಿಗಂತೆಯೆ ಕರ್ಮನಿಯತಿ ||**

**ಕ್ಷಿತಿಕಂಪ ರಾಹುಕೇತುಭ್ರಮೆ ನರಪ್ರಗತಿ ।**

**ಅತಿಚರಿತೆ ಪ್ರಕೃತಿಯಲಿ-ಮಂಕುತಿಮ್ಮ ॥**

ಕ್ಷಿತಿಚಕ್ರ=ಭೂಭ್ರಮಣೆ, ರವಿಚಕ್ರ=ಸೂರ್ಯನ ಪಥ ಚಲನೆ. (ಇದೂ ಸಹ ಭೂಮಿಯ ಚಲನೆಯಿಂದಲೇ),

ಮಿತವೃತ್ತಿ=ಪರಿಮಿತ ಕಾರ್ಯ, ಕ್ಷಿತಿಕಂಪ=ಭೂ ಕಂಪನ

ಅತಿಚರಿತೆ=ಎಲ್ಲೆ ದಾಟಿ ಹೋಗುವುದು, ಮಿತಿಯಿಲ್ಲದ ನಡೆ ಅಥವಾ ಅತಿ ಪ್ರಗತಿ.

ಭೂಮಿಗೆ ಎರಡು ರೀತಿಯ ಚಲನೆಗಳಿವೆ. ಒಂದು ಅದು ತನ್ನ ಅಕ್ಷದ ಮೇಲೆ ಸುತ್ತುತ್ತಿರುತ್ತದೆ. ಹಾಗೆ ಸುತ್ತಿಕೊಂಡೇ ಸೂರ್ಯನ ಪರಿಭ್ರಮಣೆ ಮಾಡುತ್ತದೆ. ಈ ಎರಡೂ ಸುತ್ತುವಿಕೆಯಿಂದ ಋತು ಬದಲಾವಣೆಗಳಾಗುತ್ತವೆ. ನಮ್ಮ ಎಲ್ಲ ಕಾಲಗಣನೆ, ದಿನ, ವಾರ, ತಿಂಗಳುಗಳ ಲೆಕ್ಕಕ್ಕೆ ಈ ಸುತ್ತುವಿಕೆಯೇ ಆಧಾರ. ಆದರೆ ಅವುಗಳಿಗೆ ಅಷ್ಟು ಬಿಟ್ಟರೆ ಬೇರೆ ಕೆಲಸವಿಲ್ಲ. ಅಂದರೆ ಅವುಗಳ ಪ್ರವೃತ್ತಿಗೆ ಒಂದು ಮಿತಿ ಇದೆ. ಅವು ಎಂದಿಗೂ ತಮ್ಮ ಮಿತಿಗಳನ್ನು ಮೀರಿ ಕೆಲಸ ಮಾಡಲಾರವು.

ಈ ಭೂಮಿಯಲ್ಲಿ ಮನುಷ್ಯನಿಗೂ ಮತ್ತು ಅವನ ಕಾರ್ಯ ಪ್ರವೃತ್ತಿಗೂ ಇದೇ ರೀತಿಯ ಮಿತಿ ಇದೆ. ಅವನ ಕರ್ಮವೇ ಅವನಿಗೆ ಮಿತಿಯನ್ನು ನಿಯಮಿಸಿ, ಅವನನ್ನು ತನ್ನ ಪರಿಧಿಯೊಳಗಷ್ಟೇ ಕೆಲಸ ಮಾಡುವಂತೆ





ಮಾಡುತ್ತದೆ. ಆದರೆ ಇವನಿಗೆ ಒಂದು ಅಪರಿಮಿತ ಬುದ್ಧಿಶಕ್ತಿಯನ್ನು ಕೊಟ್ಟುಬಿಟ್ಟಿದ್ದಾನೆ ಪರಮಾತ್ಮ. ಅದನ್ನಿಟ್ಟುಕೊಂಡು ಇವನು ಆಡುವ ಆಟಕ್ಕೆ ಮಿತಿಯೇ ಇಲ್ಲ. ಜಗತ್ತಿನ ಸೃಷ್ಟಿ ಕ್ರಮಕ್ಕೆ ಒಂದು ಅತಿಬುದ್ಧಿಯ ವ್ಯಾಖ್ಯಾನವನ್ನು ಮಾಡುತ್ತಾನೆ. ಇಲ್ಲಾಗುವ ಭೂಕಂಪಗಳಿಗೆ, ಗ್ರಹಣಗಳಿಗೆ ಇವನದೇ ಆದಂತಹ ಪರಿಭಾಷೆ. ರಾಹು ಕೇತುಗಳು ಗ್ರಹಣ ಕಾಲದಲ್ಲಿ ಸೂರ್ಯನನ್ನು ನುಂಗಿಬಿಡುತ್ತವೆ ಎಂದು ಒಂದು ಭ್ರಮೆಯನ್ನು ಸೃಷ್ಟಿಸಿ ಬಿಟ್ಟಿದ್ದಾನೆ. ಅಷ್ಟೇ ಅಲ್ಲ ಇವನು ತನ್ನ ಅತೀ ಬುದ್ಧಿಯನ್ನು ಉಪಯೋಗಿಸಿ ವ್ಯಾಖ್ಯಾನ ಮಾಡದೆ ಇರುವ ವಸ್ತುವೇ ಇಲ್ಲ. ಇವನ

ವ್ಯಾಖ್ಯಾನವನ್ನು ಪಾಪದ ಜನರು ನಂಬುತ್ತಾರೆ ಮತ್ತು ಅವನು ತೋಡುವ ಹಳ್ಳದಲ್ಲಿ ಬೀಳುತ್ತಾರೆ. ಇದನ್ನೇ ಗುಂಡಪ್ಪನವರು "ಅತಿಚರಿತೆ" ಎಂದರು.

"ಅತಿ ಚರಿತೆ" ಎಂದರೆ ಮಿತಿಮೀರಿದ ನಡೆ ಎಂದು ಅರ್ಥ. ಇಲ್ಲಿ ನರನಿಗೆ ಎಲ್ಲವೂ ಅತಿ, ಸಹಜತೆ ಇಲ್ಲವೇ ಇಲ್ಲ. ಇವನ ಆಸೆ ಅತಿ, ಇವನ ಭ್ರಮೆಗಳು ಅತಿ, ಇವನ ಊಹೆಗಳು ಅತಿ. ಈ ರೀತಿಯ ಅತಿ ಪ್ರವರ್ತನೆಯಿಂದ ಇವನು ಈ ಜಗತ್ತನ್ನು ಹಾಳುಗೆಡುವುದರಲ್ಲಿ ತೊಡಗಿದ್ದಾನೆ. ಇವನ ಈ ಪ್ರವೃತ್ತಿಯಿಂದ ಎಲ್ಲಿ ನೋಡಿದರೂ ಆರ್ಥಿಕ, ಸಾಮಾಜಿಕ, ಧಾರ್ಮಿಕ ಅಸಮಾನತೆ ಮತ್ತು ಅತಿರೇಕತೆ, ಅರ್ಥಹೀನ ಪ್ರವೃತ್ತಿ. ಕೇವಲ ಅಂಧಾನುಕರಣೆ.

ಧರ್ಮದ ಹೆಸರಿನಲ್ಲಿ ಯುದ್ಧಗಳು, ಭಾಷೆಯ ಹೆಸರಿನಲ್ಲಿ ಕಿತ್ತಾಟ, ಜಾತಿಯ ಹೆಸರಿನಲ್ಲಿ ಹೋರಾಟ, ಭೂಮಿಗಾಗಿ, ನೀರಿಗಾಗಿ ಹೋರಾಟ, "ಸಮುದ್ರದಲ್ಲಿ ಮೀನು ಹಿಡಿಯಲು ಹೋದವರನ್ನು ಎಲ್ಲೆ ಮೀರಿ ಹೋದರೆಂದು ಬಂಧಿಸಿದ್ದಾರಂತೆ". ವಿಶಾಲವಾದ ಸಮುದ್ರದಲ್ಲಿ "ಎಲ್ಲೆಯ ಗೆರೆ" ಎಳೆಯುವಂತಾ ಅತಿ ಬುದ್ಧಿವಂತಿಕೆ ನಮ್ಮ ನರನಿಗೆ ಮಾತ್ರ ಬರುತ್ತದೆ!!!.

ಸತ್ಯ ಧರ್ಮಗಳು, ಪ್ರೀತಿ ವಿಶ್ವಾಸಗಳು, ಪ್ರೇಮ ಅನುರಾಗಗಳು, ಪರಸ್ಪರ ಕರುಣೆ ಅನುಕಂಪಗಳು ರಾಜಿಸಬೇಕಾದ ಮನುಕುಲದಲ್ಲಿ "ಅತಿಚರಣೆ" ಆಗಿ ಸುಳ್ಳು, ಮೋಸ, ತಟವಟ, ಅತ್ಯಾಸೆ, ಅಹಂಕಾರ ಮುಂತಾದ ದುರ್ಗುಣಗಳನ್ನು ಬೆಳೆಸಿಕೊಂಡು ಇಡೀ ಜಗತ್ತನ್ನೇ ನಾಶಮಾಡಲು ಬೇಕಾದ ಎಲ್ಲ ಉಪಕರಣಗಳನ್ನೂ ಮತ್ತು ಉಪಾಯಗಳನ್ನೂ ರೂಢಿಸಿಕೊಂಡಿದ್ದಾನೆ. ಪರಮಾತ್ಮನ ಇಚ್ಛೆಯನ್ನು ಧಿಕ್ಕರಿಸಿದ್ದಾನೆ. ಅವನ ವಿನಾಶವನ್ನು ಅವನೇ ತಂದುಕೊಂಡಿದ್ದಾನೆ.

ಈ ಸ್ಥಿತಿ ಬದಲಾಗಬೇಕಾದರೆ ಇವನ ಮನಸ್ಸು ಬದಲಾಗಬೇಕು. ಸಾಮೂಹಿಕವಾಗಿರುವ ಇಂತಹ ಸಾಂಕ್ರಾಮಿಕ ರೋಗಕ್ಕೆ ಸಾಮೂಹಿಕ ಚಿಕಿತ್ಸೆಯೇ ನಡೆಯಬೇಕು. ಎಲ್ಲ ಸಜ್ಜನರೂ ಈ ನಿಟ್ಟಿನಲ್ಲಿ ಒಮ್ಮತದಿಂದ ಕೆಲಸ ಮಾಡಿದರೆ ಈ ಜಗತ್ತೂ ಸುಧಾರಿಸಬಹುದೇನೋ!!!!

**ಮುಕ್ತಕ-168**

**ಅನುಬಂಧ ಜೀವಜೀವಕೆ ಪುರಾಕೃತದಿಂದ |**
**ಮನದ ರಾಗದ್ವೇಷವಾಸನೆಗಳದರಿಂದ ||**
**ತನುಕಾಂತಿ ಮೋಹ ವಿಕೃತಿಗಳುಮಾ ತೊಡಕಿನವು |**
**ಕೊನೆಯಿರದ ಬಲೆಯೋ ಅದು-ಮಂಕುತಿಮ್ಮ ||**

ರಾಗದ್ವೇಷವಾಸನೆಗಳದರಿಂ=ರಾಗ-ದ್ವೇಷ+ವಾಸನೆಗಳು+ಆದರಿಂ

ಜೀವಿ ಜೀವಿಗಳ ಮಧ್ಯೆ ಇರುವ ಅನುಬಂಧವು ಪೂರ್ವಕರ್ಮದಿಂದಲೇ ಉಂಟಾಗುತ್ತದೆ. ಮನಸ್ಸಿನ ಕೋಪ ದ್ವೇಷ ಮತ್ತು ವಾಸನೆಗಳೂ ಸಹ ಇದರಿಂದಲೇ, ದೇಹದ ಹೊಳಪು ಅದರ ಆಕರ್ಷಣೆ ಮತ್ತು ಆ ಆಕರ್ಷಣೆಯಿಂದ ಉಂಟಾಗುವ ತೊಂದರೆ ತೊಡಕುಗಳು ಒಂದು ಅಂತ್ಯವಿಲ್ಲದ ಬಲೆಯಂತೆ ಎಂದು ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ ಉಲ್ಲೇಖಿಸುತ್ತಾರೆ.

ನಾವು ಇಂತಹವರ ಮನೆಯಲ್ಲೇ ಜನಿಸಬೇಕೆಂದು ನಾವು ಹೊತ್ತು ತಂದ ಪೂರ್ವಕರ್ಮಗಳೇ ನಿರ್ಧರಿಸುತ್ತವೆಯಂತೆ. ಇಲ್ಲಿ ಜನಿಸಿದ ಮೇಲೆ ನಾವು ಬೆಳೆಸಿಕೊಳ್ಳುವ ಸಂಬಂಧಗಳು, ಸ್ನೇಹಗಳೂ ಸಹ ಆ ಪೂರ್ವಕರ್ಮದ ಪ್ರಭಾವದಿಂದಲೇ ಎನ್ನುತ್ತಾರೆ ಅರಿತವರು. ಅದು ಬಹಳಷ್ಟು ಮಟ್ಟಿಗೆ ನಿಜವೆನ್ನಿಸುತ್ತದೆ. ಏಕೆಂದರೆ, ನೋಡಿ ಜೀವನದಲ್ಲಿ ನಾವು ಹೇಗೆ ಮತ್ತೊಬ್ಬರೊಡನೆ ಬಂಧನಗಳನ್ನು ಬೆಳೆಸಿಕೊಳ್ಳುತ್ತೇವೆ!!! ಯಾರದೋ ಸ್ನೇಹ ಉಂಟಾಗುತ್ತದೆ, ಯಾರದೋ ಬಿಟ್ಟು ಹೋಗುತ್ತದೆ. ಯಾರ ಮೇಲೋ ಪ್ರೀತಿ, ಯಾರ ಮೇಲೋ ಕೋಪ, ಯಾರ ಮೇಲೋ ದ್ವೇಷ, ಯಾರಿಂದಲೋ ತೊಂದರೆ, ಯಾರಿಗೋ ಉಪಕಾರ ಮಾಡುವುದು, ಯಾರಿಂದಲೋ ಸಹಾಯ

ಪಡೆಯುವುದು ಇದು ನಿರಂತರವಾಗಿ ಸಾಯುವತಕನ ನಡೆಯುತ್ತಲೇ ಇರುತ್ತದೆ.

ಯಾರದೋ ಮನೆಯಲ್ಲಿ ನಾವು ಊಟ ಮಾಡುತ್ತೇವೆ, ಇನ್ಯಾರೋ ನಮ್ಮ ಮನೆಯಲ್ಲಿ. ಕೆಲ ಸ್ನೇಹಿತರು ಒಂದಷ್ಟು ದಿನ ನಮ್ಮೊಡನೆ ಇರುತ್ತಾರೆ, ಕೆಲವರು ಕಳೆದೇ ಹೋಗುತ್ತಾರೆ. ಎಷ್ಟು ಹುಡುಕಿದರೂ ಸಿಗುವುದಿಲ್ಲ. ಯಾರೋ ಹೊಸ ಹೊಸ ಸ್ನೇಹಿತರು ಸಿಗುತ್ತಾರೆ. ಹೀಗೆ ಸ್ನೇಹಗಳ, ಬಂಧುತ್ವದ, ಪ್ರೀತಿಯ, ಪ್ರೇಮದ ಸಂಬಂಧಗಳು ನಮಗೆ ಈ ಜಗತ್ತಿನ ಯಾರ್ಯಾರೊಂದಿಗೋ ಉಂಟಾಗುತ್ತದೆ.

ಇದೆಲ್ಲ ಏಕೆ ಆಗುತ್ತದೆ! ನಾವಂದುಕೊಳ್ಳುವುದು ಏನು! ಆಗುವುದು ಏನು! ಇದಕ್ಕೆಲ್ಲ ಕಾರಣವೇನು, ಎಂದು ಹುಡುಕಿದರೆ ಖಂಡಿತ ನಮಗೆ ಸ್ಪಷ್ಟವಾದ ಉತ್ತರ ಸಿಗುವುದಿಲ್ಲ. ಏಕೆಂದರೆ ನಮ್ಮನ್ನು ನಿಯಂತ್ರಿಸುವ, ನಾವು ಕಾಣದ, ನಮಗರ್ಥವಾಗದ, ವಿಧಿಯು ನಮ್ಮ ಈ ಬಂಧಗಳನ್ನೂ, ಸಂಬಂಧಗಳನ್ನೂ ನಿಯಂತ್ರಿಸುತ್ತಿರುತ್ತದೆ. "ಋಣ"ವೆಂದರೆ ನಾವು ಪಡೆದುಕೊಂಡದ್ದು ಮತ್ತು ಆರ್ಜಿಸಿದ್ದು ಎಂದು ಅರ್ಥ ಬರುತ್ತದೆ. ನಮ್ಮವರು 'ಋಣಾನುಬಂಧ ರೂಪೇಣ ಪಶು ಪತ್ನಿ ಸುತಾಲಯ" ಎಂದುಬಿಟ್ಟರು.

ಸಕಲವನ್ನೂ ಇದರೊಳಗೆ ಸೇರಿಸಬೇಕಿತ್ತು. ಆದರೆ ಸಾಂಕೇತಿಕವಾಗಿ ಮೂರನ್ನೇ ಸೇರಿಸಿದ್ದಾರೆ. ನಮಗೆ ಆಗುವುದೆಲ್ಲವೂ ಈ "ಋಣ" ಅಥವಾ "ಪೂರ್ವ ಕರ್ಮ'ದ ಅನುಸಾರವಾಗಿ ಎಂದು ಮನದಟ್ಟು





ಮಾಡಿಕೊಳ್ಳಬೇಕು. ನಮ್ಮ ಪ್ರಮೇಯ ಸ್ವಲ್ಪ ಮಾತ್ರ ಉಂಟು. ಹಾಗಾಗಿ ಏಕೆ, ಏನು, ಹೇಗೆ, ಹೀಗೇಕೆ, ಹಾಗೇಕೆ, ಎನ್ನುವ ಪ್ರಶ್ನೆಗಳಿಗೆ ಹೆಚ್ಚು ಮಹತ್ವ ಕೊಡದೆ ಶಾಂತವಾಗಿ ಬಂದದ್ದನ್ನು ಸಮಾಧಾನದಿಂದ ಅನುಭವಿಸುವುದೇ ಲೇಸು, ಏಕೆಂದರೆ ಇದೊಂದು ಬಲೆ, ಇದರೊಳಗೆ ನಮ್ಮ ಬದುಕು. ಇಲ್ಲಿ ಇರುವಷ್ಟು ದಿನವೂ ಈ ಬಂಧ-ಸಂಬಂಧಗಳ ವಿಚಿತ್ರವನ್ನು ಅನುಭವಿಸಲೇ ಬೇಕು.

# ಋಣಾನುಬಂಧ 169-173

**ಮುಕ್ತಕ-169** **ಋಣದ ಮೂಟೆಯ ಹೊರಿಸಿ, ಪೂರ್ವಾರ್ಜಿತದ ಹುರಿಯ |**

**ಕುಣಿಕೆಯಲಿ ನಿನ್ನ ಕೊರಳನು ಬಿಗಿದು ವಿಧಿಯು ||**

**ತೃಣದ ಕಡ್ಡಿಯ ಮುಂದೆ ಹಿಡಿದಾಶೆ ತೋರುತಿರೆ |**

**ಕುಣಿವ ಗರ್ದಭ ನೀನು-ಮಂಕುತಿಮ್ಮ ||**

ಪೂರ್ವಾರ್ಜಿತದ=ಪೂರ್ವ+ರ್ಜಿತದ, ಹಿಡಿದಾಶೆ=ಹಿಡಿದು+ಆಸೆ, ತೋರುತಿರೆ=ತೋರುತ+ಇರೆ.

ಋಣ=ಸಾಲ, ಪೂರ್ವ ಕರ್ಮ, ಪೂರ್ವಾರ್ಜಿತ=ಹಿಂದೆಯೇ ಸಂಪಾದಿಸಿದ, ಹುರಿ=ಹಗ್ಗ, ಕುಣಿಕೆ=ಬಿಗಿಸಲು ಒಂದು ರೀತಿಯ ಗಂಟು, ವಿಧಿಯು=ನಮ್ಮನ್ನೆಲ್ಲ ಆಡಿಸುವುದು, ತೃಣದ=ಹುಲ್ಲಿನ, ಗರ್ದಭ=ಕತ್ತೆ.

ಋಣದ ಮೂಟೆಯನ್ನು ನಮ್ಮ ಮೇಲೆ ಹೊರಿಸಿ, ಅದನ್ನು, ಪೂರ್ವಾರ್ಜಿತವೆಂಬ ಹುರಿಯಿಂದ ಕುಣಿಕೆ ಮಾಡಿ ನಮ್ಮ ಕೊರಳಿಗೆ, ಬಿಗಿದಿದ್ದಾನೆ ಆ ವಿಧಿ, ನಮ್ಮ ಮುಂದೆ ಒಂದು ಸಣ್ಣ ಹುಲ್ಲುಕಡ್ಡಿಯಂತಹ ಆಸೆಯನ್ನು ತೋರಿಸುತ್ತಾ, ನಮ್ಮ ಬಾಳನ್ನು ಎಳೆದುಕೊಂಡು ಹೋಗುತ್ತಿದ್ದಾನೆ. ಅವನ ತಾಳಕ್ಕೆ ಕುಣಿಯುವ ಕತ್ತೆ "ನೀನು" ಎಂದು ತಮಗೆ ತಾವು ಹೇಳಿಕೊಳ್ಳುತ್ತಾ ಇಡೀ ಮನುಕುಲದ ಸ್ಥಿತಿಯನ್ನು ವಿಡಂಬನಾತ್ಮಕವಾಗಿ ವರ್ಣಿಸಿದ್ದಾರೆ, ಮಾನ್ಯ ಗುಂಡಪ್ಪನವರು.

ನಾವೆಲ್ಲರೂ ನಮ್ಮ ಪೂರ್ವಾರ್ಜಿತ ಕರ್ಮದ ಮೂಟೆಗಳನ್ನು ಹೊತ್ತುಕೊಂಡೇ ಬಂದಿದ್ದೇವೆ. ನಮ್ಮ ಕೊರಳಿಗೆ ಈ ಮೂಟೆಯನ್ನು ವಿಧಿ ಕಟ್ಟಿಬಿಟ್ಟಿದೆ. ಇದನ್ನು ಹೊತ್ತುಕೊಂಡು ಜೀವನ ಸಾಗಿಸುತ್ತಾ, ಇದರಲ್ಲಿ ತಂದದ್ದನ್ನು ಅನುಭವಿಸುತ್ತಾ ಇರಬೇಕು. ಆದರೆ ಒಂದು ವಿಷಯ ಗಮನಿಸಬೇಕು. ಒಂದು ನಾವು ಪೂರ್ವ ಕರ್ಮ ಹೊತ್ತಿದ್ದೇವೆ, ಎರಡು ಅದನ್ನು ಹೊತ್ತು ಜೀವನ ಸಾಗಿಸುವಾಗ ನಮ್ಮ ವಿಧಿ ನಮಗೆ, ವಸ್ತು ವಿಷಯ ಮತ್ತು ವ್ಯಕ್ತಿಗಳಲ್ಲಿ ಆಸೆಯೆಂಬ ಒಂದು ಆಮಿಷವನ್ನು ನಮ್ಮ ಮನದಲ್ಲಿ ಇಟ್ಟು, ಹೊತ್ತು ತಂದ ಕರ್ಮದ ಗಂಟನ್ನು ಹೆಚ್ಚಿಸಿಕೊಳ್ಳುವಂತೆ ಮಾಡುತ್ತದೆ. ಆದರೆ ಈ ನಮ್ಮ ಆಸೆಗಳು ತೃಣದಂತೆ ಬಹಳ ಹಗುರವಾದದ್ದು, ಒಂದು ಪೂರ್ಣಗೊಂಡರೆ ಇನ್ನೊಂದು ಉದ್ಭವ, ಅದಾದರೆ ಮತ್ತೊಂದು, ಹೀಗೆ ಆಸೆಗಳ ತುಂಬದ ಚೀಲ ನಮ್ಮನ್ನು ಬಿಡದೆ ಹಿಡಿದು ಬಿಟ್ಟಿದೆ. ಅದನ್ನು ನಾವು ಹೊರುತ್ತಿದ್ದೇವೆ.

ಈ "ಆಸೆಗಳ ಅಂತ್ಯವಿಲ್ಲದ ಏಣಿ" ಹತ್ತುವ ನಾವು ಒಂದಾದ ಮೇಲೆ ಒಂದು ಮೆಟ್ಟಿಲನ್ನು ಹತ್ತುತ್ತಾ ಹತ್ತುತ್ತಾ ಹೋಗುತ್ತಲೇ ಇದ್ದೇವೆ. ವಿಧಿ, ಈ ಆಸೆಯೆಂಬ ಒಂದು ತುಣುಕನ್ನು ನಮ್ಮ ಮುಂದೆ ತೋರಿಸಿ ನಮ್ಮನ್ನು ಮಂಗನಾಟ ಆಡಿಸುತ್ತದೆ. ಒಂದು ಹಿಡಿ ಹುಲ್ಲನ್ನು ತೋರಿಸುತ್ತಾ ಅದರಲ್ಲಿ ಆಸೆ ಹುಟ್ಟಿಸುತ್ತಾ ಭಾರವಾದ ಬಟ್ಟೆಗಳ ಹೊರೆಯನ್ನು ಹೊರುವಂತೆ ಮಾಡುವ ಅಗಸನಂತೆ, ವಿಧಿ ಇದೆ. ಅಂತಹ ಭಾರವನ್ನು ಹೊರುವ ಕತ್ತೆಗಳೇ ನಾವು ಎಂದು ಸೂಚ್ಯವಾಗಿ ಗುಂಡಪ್ಪನವರು ಅಣಕವಾಡಿದ್ದಾರೆ.

ಹೌದಲ್ಲವೇ ವಾಚಕರೆ ನಮ್ಮಲ್ಲಿ ಆಸೆಗಳು ಬತ್ತುವುದೇ ಇಲ್ಲ. ಒಂದಾದ ಮೇಲೆ ಒಂದರಂತೆ ಮೇಲೇಳುವ, ಎಂದೂ "ಆರದ ಬುಗ್ಗೆ"ಯಂತೆ. ಆಸೆಗಳೇ ನಮ್ಮೆಲ್ಲ ಸಮಸ್ಯೆಗಳಿಗೂ ಕಾರಣವಲ್ಲವೇ! ಇದನ್ನೇ ಗೌತಮ ಬುದ್ಧನು "ಆಸೆಯೇ ದುಃಖಕ್ಕೆ ಮೂಲ" ಎಂದ. ಆದರೆ ಆಸೆ ಪಡುವುದು ತಪ್ಪಲ್ಲ. ಏಕೆಂದರೆ ಇಷ್ಟು ಸುಂದರವಾದ ಜಗತ್ತು ನೀರಸವಾಗದೆ, ಮಾನವನ ಕ್ರಿಯಾಶೀಲತೆಗೆ ಇಂಬು ಕೊಡುವುದೇ ಆ "ಆಸೆ". ಆದರೆ "ಏನು ಆಸೆ ಪಡಬೇಕು, ಎಷ್ಟು ಆಸೆ ಪಡಬೇಕು, ಯಾವಾಗ ಆಸೆ ಪಡಬೇಕು' ಎನ್ನುವ ವಿವೇಚನೆ ಇದ್ದರೆ ಸಮಸ್ಯೆಗಳ ತೀವ್ರತೆ ಕಡಿಮೆಯಾಗಬಹುದು. ಇಲ್ಲದಿದ್ದರೆ ನಮ್ಮ ದುಃಖಕ್ಕೆ ಕೊನೆಯೇ ಇರುವುದಿಲ್ಲ. ಪ್ರತಿಯೊಬ್ಬರೂ ತಮ್ಮ ತಮ್ಮ ಮಿತಿಗಳನ್ನು ಅರಿತರೆ, ಅರಿತು ನಡೆದುಕೊಂಡರೆ ಒಳ್ಳೆಯದು. ಇಲ್ಲದಿದ್ದರೆ ದುಃಖವೇ ಕಟ್ಟಿಟ್ಟ ಬುತ್ತಿ, ಆಯ್ಕೆ ಮಾಡಿಕೊಳ್ಳಲು ನಾವು ಸಂಪೂರ್ಣ ಸ್ವತಂತ್ರರು ಅಲ್ಲವೇ?

**ಮುಕ್ತಕ-170**

**ಉಣುವುದುಡುವುದು ಪಡುವುದಾಡುವುದು ಮಾಡುವುದು ।**
**ಋಣಗಳೆಲ್ಲವು ಪೂರ್ವಸಂಚಿತಾಂಶಗಳು ।**
**ಹಣೆಯೊಳದು ಲಿಖಿತಮಿರೆಯುಂ ವಾಚಿಸುವವನಿಲ್ಲ ।**
**ಗೊಣಗಾಟವಳಿಸುವುದೇ?-ಮಂಕುತಿಮ್ಮ ॥**

ಉಣುವುದುಡುವುದು=ಉಣುವುದು+ಉಡುವುದು, ಪಡುವುದಾಡುವುದು=ಪಡುವುದು+ಆಡುವುದು,
ಹಣೆಯೊಳದು=ಹಣೆಯಳು+ಅದು, ಲಿಖಿತಮಿರೆಯುಂ=ಲಿಖಿತಂ+ಇರೆಯುಂ,
ಗೊಣಗಾಟವಳಿಸುವುದೇ=ಗೊಣಗಾಟವು+ಅಳಿಸುವುದೇ.

ಉಣುವುದು=ತಿನ್ನುವುದು, ಉಡುವುದು=ಧರಿಸುವುದು, ಪಡುವುದು=ಅನುಭವಿಸುವುದು, ಆಡುವುದು=ಮಾಡುವುದು, ಋಣ=ಪಡೆದುಕೊಂಡ ಸಾಲ, ಹಣೆಯೊಳದು ಲಿಖಿತಮಿರೆ=ಹಣೆಯಲ್ಲಿ ಅದು ಬರೆದಿದ್ದರೆ, ವಾಚಿಸುವವನಿಲ್ಲ=ಓದುವವನಿಲ್ಲ,

ನಾವು ಉಣುವುದು, ಉಡುವುದು, ಆಡುವುದು, ಪಡುವುದು, ಪಾಡುವುದು, ಪರದಾಡುವುದು ಮತ್ತು ಇವುಗಳಿಗೆ ಸಂಬಂಧಪಟ್ಟ ವ್ಯಕ್ತಿಗಳೆಲ್ಲರ ಸಂಬಂಧಗಳೂ, ಕೇವಲ ಋಣ ರೂಪದಲ್ಲೇ ನಮಗೆ ಸಂದಿವೆ. ನಮ್ಮ ಹಣೆಬರಹವೇ ಈ ರೀತಿ ಇರುವಾಗ, ಅದನ್ನು ಓದಲು ಯಾರಿಗೂ ಆಗುವುದಿಲ್ಲ. ಓದಲಾಗದಿದ್ದರೂ ಅದನ್ನು ಕುರಿತು ಗೊಣಗಾಡಿದರೆ, ಬರೆದ ಬರಹ ಅಳಿಸಲಾಗುವುದೇ, ಎಂದು ಪ್ರಾರಬ್ಧ ಕರ್ಮದ ಒಂದು ವಿಷಯವನ್ನು ಪ್ರಸ್ತಾಪಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

| (235) |
|---|

| ಋಣಾನುಬಂಧ 169-173 | ಕಗ್ಗರಸಧಾರೆ |
|---|---|

ನಮ್ಮ ಎಲ್ಲ ಕೆಲಸಗಳೂ ಒಂದು ಪೂರ್ವ ನಿರ್ಧಾರಿತ ರೀತಿಯಲ್ಲೇ ನಡೆಯುತ್ತದೆ. ಇದಕ್ಕೆ ಕಾರಣವುಂಟು ಆದರೆ ನಮಗೆ ಆ ಕಾರಣಗಳು ಗೋಚರವಾಗುವುದಿಲ್ಲ. ಆದರೆ ಗೋಚರವಾಗುವುದು ಕಾರಣವಾಗಿರುವುದಿಲ್ಲ. ನಾವಂದುಕೊಂಡದ್ದು ನಾವಂದುಕೊಂಡ ಹಾಗೆ ಏಕಾಗುವುದಿಲ್ಲ? ಬೇರೇನೋ ಏಕಾಗುತ್ತದೆ? ಎಂದು ನಾವು ಎಷ್ಟೇ ಯೋಚನೆ ಮಾಡಿದರೂ ಅರ್ಥವಾಗುವುದಿಲ್ಲ. ಏಕೆಂದರೆ ಕಾರಣಗಳು ನಮ್ಮದೇ ಆದರೂ ನಮ್ಮ ಅರಿವಿನಲ್ಲಿ ಇಲ್ಲದ ನಮ್ಮ ಪೂರ್ವಕರ್ಮಗಳಿಗೆ ಕೊಂಡಿ ಹಾಕಿಕೊಂಡಿರುತ್ತದೆ. ಅವು ಪೂರ್ವ ಸಂಚಿತ ಕರ್ಮಗಳಾಗಿರಬಹುದು ಅಥವಾ ಪೂರ್ವ ಜನ್ಮದ ಕರ್ಮಶೇಷವಾಗಿರಬಹುದು.

ನಮ್ಮ ಹಣೆ ಬರಹವನ್ನು ಯಾರಿಗೂ ಓದಲಾಗುವುದಿಲ್ಲ. ಉದ್ದಾಮ ಜ್ಯೋತಿಷ್ಯ ಪಂಡಿತರಿಗೂ ಅರ್ಥೈಸಲಾಗದ ರೂಪ ಈ ವಿಧಿಯದ್ದು, ಹಣೆಬರಹದ್ದು. ಅವರವರಿಗೆ ತೋಚಿದ ರೀತಿಯಲ್ಲಿ ಅವರವರ ಕ್ಷಮತೆಗೆ ಅನುಗುಣವಾಗಿ ಹಾಕಿದ ಲೆಕ್ಕಾಚಾರದಿಂದ, ಏನನ್ನೋ ಹೇಳುತ್ತಾರೆ. ಅದು ಎಂದಿಗೂ ಸಂಪೂರ್ಣ ಸತ್ಯವಾಗುವುದಿಲ್ಲ.

ಅವರನ್ನು ಬಿಟ್ಟು ಬೇರೆ ಇನ್ಯಾರನ್ನೋ ಕೇಳುತ್ತೇವೆ. ಅವರೂ ಸಹ ಏನನ್ನೋ ಹೇಳುತ್ತಾರೆ. ಆದರೆ ಯಾರಿಗೂ ನಮ್ಮ ಹಣೆಬರಹವನ್ನು ನಿಖರವಾಗಿ ಹೇಳಲು ಸಾಧ್ಯವಿಲ್ಲ.

ಹಾಗಾಗಿ ವಾಚಕರೆ, ನಮ್ಮ ವಿಧಿಯನ್ನು ನಮಗೆ ಅರ್ಥ ಮಾಡಿಕೊಳ್ಳಲೋ ಅಥವಾ ಬದಲಾಯಿಸಲೋ ಸಾಧ್ಯವಿಲ್ಲ ಎಂದಾದ ಮೇಲೆ ಅದನ್ನು ಕುರಿತು ಚಿಂತಿಸುವುದಾಗಲೀ, ಗೊಣಗಾಡುವುದಾಗಲೀ ಮಾಡುವುದರಿಂದ ಏನು ಪ್ರಯೋಜನ? ಮಾನಸಿಕ ಕ್ಷೋಭೆಯ ಹೊರತು ಬೇರೇನೂ ಪ್ರಯೋಜನವಿಲ್ಲ!!! ಅದನ್ನು ಬಂದ ಹಾಗೆ, ಅನುಭವಿಸುವುದೇ ಲೇಸು. ಆಗುವುದನ್ನು ತಪ್ಪಿಸಲು ಸಾಧ್ಯವಿಲ್ಲವಾದಾಗ ಸಾವಧಾನವಾಗಿ ಅನುಭವಿಸಿದರೆ, ಕಡೆ ಪಕ್ಷ ಮಾನಸಿಕ ಕೋಭೆ ಇರುವುದಿಲ್ಲ ಅಲ್ಲವೇ? ಅಂತಹ ಪ್ರಯತ್ನವನ್ನು ನಾವೂ ಸಹ ಮಾಡೋಣವೆ?

**ಮುಕ್ತಕ-171**

**ಇಂದು ಮದುವೆಯ ಹಬ್ಬ; ನಾಳೆ ವೈಕುಂಠ ತಿಥಿ |**
**ಇಂದು ಮೃಷ್ಟಾನ್ನ ಸುಖ ; ನಾಳೆ ಭಿಕ್ಷಾನ್ನ ||**
**ಇಂದು ಬರಿಯುಪವಾಸ : ನಾಳೆ ಪಾರಣೆ-ಯಿಂತು |**
**ಸಂದಿರುವುದನ್ನಋಣ-ಮಂಕುತಿಮ್ಮ ||**

ಬರಿಯುಪವಾಸ=ಬರಿಯ ಉಪವಾಸ, ಸಂದಿರುವುದನ್ನಋಣ ಸಂದಿರುವುದು+ಅನ್ನ+ಋಣ ವೈಕುಂಠ=ಸತ್ತ ನಂತರ ಮಾಡುವ ಹದಿಮೂರನೇ ದಿನದ ಊಟ, ಮೃಷ್ಟಾನ್ನ=ಸ್ವಾದಿಷ್ಟ ಭೋಜನ, ಭಿಕ್ಷಾನ್ನ=ತಿರುಪೆಯ ಅನ್ನ, ಪಾರಣೆ=ದ್ವಾದಶಿಯ ಮೊದಲ ಊಟ, ಅನ್ನಋಣ=ತಿನ್ನುವ ಅನ್ನದ ಋಣ.

ನಮಗೆ ದಕ್ಕುವ ಅನ್ನದ ಋಣ ಒಂದೊಂದು ದಿನ ಒಂದೊಂದು ರೀತಿಯಲ್ಲಿ ಇರುತ್ತದೆ ಎಂದು ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ ಸ್ಪಷ್ಟವಾಗಿ, ಸುಲಲಿತವಾಗಿ ಬರೆದಿದ್ದಾರೆ. ನಮ್ಮ ಜೀವನದಲ್ಲಿ ಇಂತಹದನ್ನು ನಾವು ಬಹಳ ನೋಡುತ್ತೇವೆ. ಇಂದು ಹಬ್ಬದ ವಾತಾವರಣ, ನಾಳೆ ಸೂತಕದ ಭಾವ. ಇಂದು ಪುಷ್ಕಳ

ಭೋಜನ ನಾಳೆ ಉಪವಾಸ. ಇಂದು ನಮ್ಮ ಮನೆಯಲ್ಲೇ ಊಟ, ನಾಳೆ ಇನ್ನೆಲ್ಲೋ, ಇನ್ಯಾರ ಮನೆಯಲ್ಲೋ. ಹೀಗೆ ಅನ್ನದ ಋಣ ಒಂದೊಂದು ದಿನ ಒಂದೊಂದು ರೀತಿ. ಈ ಜಗತ್ತಿನ ಪರಿಯೇ ಈ ರೀತಿ,

ಇದನ್ನು ಕೇವಲ ನಾವು ತಿನ್ನುವ ಭೋಜನಕ್ಕೆ ಅಷ್ಟೇ ಅನ್ವಯಿಸಬಾರದು. ನಮಗೆ ಸಿಗುವಂಥಾ ಪ್ರತಿ ವಸ್ತುವಿಗೂ ಇದನ್ನು ಅನ್ವಯಿಸಿಕೊಳ್ಳಬೇಕು. ನಮಗೆ ಸಿಗುವ ಮನೆ, ತಂದೆ ತಾಯಿಯರು, ಅಣ್ಣ ತಮ್ಮಂದಿರು, ಅಕ್ಕ ತಂಗಿಯರು, ಬಂಧುಗಳು, ಸ್ನೇಹಿತರು, ನಾವು ಮಾಡುವ ಕೆಲಸ, ಅದರಿಂದಾಗುವ ಪ್ರಯೋಜನಗಳು ಎಲ್ಲವೂ ನಮ್ಮ ಪೂರ್ವ ಸಂಚಿತ ಋಣಕ್ಕೆ ಸಂಬಂಧವಿಟ್ಟುಕೊಂಡೇ ಇರುತ್ತದೆ. ಇಂದು ಸಿಗುವುದು ಹಿಂದೆ ನಾವು ಗಳಿಸಿದ ವಸ್ತು, ವಿಷಯ ಮತ್ತು ವ್ಯಕ್ತಿಗಳ ಒಟ್ಟಿಗಿನ ಸಂಬಂಧವನ್ನು ಆಧರಿಸಿರುತ್ತದೆ. ಹಾಗೆಯೇ ನಮಗೆ ನಾಳೆ ಅಥವಾ ಮುಂದಿನ ಜನ್ಮದಲ್ಲಿ ಸಿಗುವುದು ಇಂದಿನ ಅಥವಾ ಈ ಜನ್ಮದ ನಮ್ಮ ಕರ್ಮಗಳನ್ನು ಆಧರಿಸಿರುತ್ತದೆ.

ಇಂದು ಏನು ಸಿಗುತ್ತಿದೆಯೋ ಅದು ಪೂರ್ವಕರ್ಮದ ಆಧಾರವಾದರೆ ಅದನ್ನು ನಾವು ಬದಲಾಯಿಸಲು ಸಾಧ್ಯವಿಲ್ಲ. ಆದರೆ ಮುಂದೆ ಸಿಗುವುದು ಇಂದಿನ ಕರ್ಮದ ಮೇಲೆ ಆಧರಿಸಿರುತ್ತದೆ ಎಂದರೆ, ಇಂದಿನ ಕರ್ಮಗಳು ಸುಧಾರಿತ ಕರ್ಮಗಳಾದರೆ, ನಾಳಿನ ನಮ್ಮ ಬದುಕು ಸುಧಾರಿತವಾಗಿರಬಹುದು. ಅಂದರೆ ನಮಗೆ ಏನು ಬೇಕೋ, ಮುಂದೆ ನಾವು ಹೇಗಿರಬೇಕೋ ಅದನ್ನು ನಮ್ಮ ಇಂದಿನ ಕರ್ಮ ನಿರ್ಧರಿಸುವುದಾದರೆ ನಮ್ಮ ಭವಿತವನ್ನು ಸುಧಾರಿಸಿಕೊಳ್ಳುವ ಸಾಧ್ಯತೆ ಇದೆ ಅಲ್ಲವೇ? ಈ ಪೂರ್ವ ಕರ್ಮ, ಇಂದಿನ ನಮ್ಮ ಕೆಲಸಗಳು, ಇವುಗಳನ್ನಾಧಾರಿತ ನಮ್ಮ ಭವಿಷ್ಯಕಾಲ, ಇವುಗಳನ್ನು ನಂಬಿ, ಇವುಗಳನ್ನು ಅರ್ಥಮಾಡಿಕೊಂಡು, ನಮ್ಮ ಮುಂದಿನ ಜೀವನವನ್ನು ಸುಧಾರಿಸಿಕೊಳ್ಳಲು ಪ್ರಯತ್ನಿಸಬೇಕು ಅಷ್ಟೇ. ಫಲಾಫಲಗಳು ಪರಮಾತ್ಮನಿಚ್ಛೆ!!!

**ಮುಕ್ತಕ-172**

**ಅರಿ ಮಿತ್ರ ಸತಿ ಪುತ್ರ ಬಂಧುಬಳಗವದೆಲ್ಲ |**
**ಕರುಮದವತಾರಗಳೊ, ಋಣಲತೆಯ ಚಿಗುರೋ ||**
**ಕುರಿಯನಾಗಿಸಿ ನಿನ್ನ ಕಾಪಿಡುವ ಸಂಸಾರ |**
**ವುರಿಮಾರಿಯಾದೀತೋ-ಮಂಕುತಿಮ್ಮ ||**

ಕರುಮದವತಾರಗಳೋ=ಕರುಮದ+ಅವತಾರಗಳೋ,

ವುರಿಮಾರಿಯಾದೀತೋ=ಉರಿ+ಮಾರಿ+ಆದೀತೋ.

ಅರಿ=ಶತ್ರು

ಶತ್ರು, ಮಿತ್ರ, ಹೆಂಡತಿ, ಮಗ-ಮಗಳು, ಬಂಧು ಬಳಗವೆಲ್ಲ ನಮ್ಮ ಪೂರ್ವ ಕರ್ಮದಿಂದಲೇ ಲಭ್ಯವಾದವು ಅಥವಾ ನಾವು ಉಳಿಸಿಕೊಂಡು ಬಂದ ವಾಸನಾ ಶೇಷವೆಂಬ ಬಳ್ಳಿಯ ಹೊಸ ಹೊಸ ಚಿಗುರುಗಳೋ? ಈ ಸಂಸಾರದಲ್ಲಿ ನಾವು ಗೊತ್ತು ಗುರಿಯಿಲ್ಲದ, ತಲೆ ತಗ್ಗಿಸಿ ನಡೆಯುವ ಕುರಿಗಳಂತೆ ಇರುವಾಗ ಈ ಸಂಸಾರ ಉರಿಮಾರಿಯಾದೀತು ಎಂದು ಒಂದು ಎಚ್ಚರಿಕೆಯ ಭಾವವನ್ನು ಈ ಮುಕ್ತಕದಲ್ಲಿ ಮಾನ್ಯ ಗುಂಡಪ್ಪನವರು ಪ್ರಸ್ತಾಪಿಸಿದ್ದಾರೆ.

(237)

ಋಣಾನುಬಂಧ 169-173 ಕಗ್ಗರಸಧಾರೆ

ನಾವು ಯಾರೊಂದಿಗೋ ಮಿತ್ರತ್ವವನ್ನು ಬೆಳೆಸಿಕೊಳ್ಳುತ್ತೇವೆ. ಯಾರಲ್ಲೋ ಶತ್ರುಭಾವ, ಅಂದರೆ ಹಲವರು ನಮಗೆ ಇಷ್ಟವಾಗುತ್ತಾರೆ, ಕೆಲವರು ಇಷ್ಟವಾಗುವುದಿಲ್ಲ. ಇದು ಪೂರ್ವ ವಿಧಿತ ಎಂದು ಒಪ್ಪಲೇಬೇಕು. ಇದು ಕಾಕತಾಳೀಯವೆಂದು ವಾದಿಸುವವರೂ ಇದ್ದಾರೆ. ಆದರೆ ನಮ್ಮೆಲ್ಲ ಆಗುಹೋಗುಗಳಿಗೆ ಒಂದು ಪರಮ ಶಕ್ತಿ ಕಾರಣವೆಂದು ಒಪ್ಪಿದರೆ, ಅದರ ಅಧೀನದಲ್ಲಿರುವ ವಿಧಿಯ ಪ್ರಭಾವ ನಮ್ಮ ಮೇಲಿದೆ ಎಂದರೆ ಅದನ್ನು ಕಾಕತಾಳೀಯವಲ್ಲ, ಪೂರ್ವ ವಿದಿತವೆಂದು ನಂಬಲೇ ಬೇಕು. ಏಕೆಂದರೆ ಬೇರೆ ಪರಿಭಾಷೆ, ನಮಗೆ ಮಾಡಲು ಆಗುವುದಿಲ್ಲ. "ಋಣಾನುಬಂಧ ರೂಪೇಣ, ಪಶು ಪತ್ನಿ ಸುತಾಲಯ" ಎಂದು ಉಕ್ತಿಯೇ ಉಂಟಲ್ಲ !!!!

ಇನ್ನು ನಾವು ಯಾರಿಗೋ ಮಗನಾಗೋ, ಮಗಳಾಗೋ ಹುಟ್ಟುತ್ತೇವೆ. ನಾವು ಯಾರ ಮನೆಯಲ್ಲಿ ಹುಟ್ಟಬೇಕು ಎಂದು ನಾವು ನಿರ್ಧಾರ ಮಾಡಲು ಸಾಧ್ಯವೇ? ಹಾಗೆಯೇ ನಮಗೆ ಮಕ್ಕಳಾಗುತ್ತವೆ. ಯಾರು ನಮಗೆ ಮಕ್ಕಳಾಗಿ ಹುಟ್ಟಬೇಕು ಎನ್ನುವುದನ್ನೂ ಸಹ ನಾವು ಆಯ್ಕೆಮಾಡಲಾಗುವುದೇ? ಸಾಧ್ಯವೇ ಇಲ್ಲ. ಈ ತಂದೆ ತಾಯಿ ಮತ್ತು ಮಕ್ಕಳ ಬಂಧವೂ ಪೂರ್ವ ಕರ್ಮದಾಧಾರದ ಮೇಲೆಯೇ ಆಗುತ್ತದೆ, ಎನ್ನುವುದು ನಮ್ಮ ಗಟ್ಟಿ ನಂಬಿಕೆ.

ನಾವು ಹುಟ್ಟಿದಾರಭ್ಯ ಸಾಯುವತನಕ ನಮಗಾಗುವ ಆಗುಹೋಗುಗಳು ನಾವು ಕಟ್ಟಿಕೊಳ್ಳುವ ಸಂಬಂಧಗಳು, ಬಂಧಗಳು, ಬೆಳೆಸಿಕೊಳ್ಳುವ ರಾಗ ದ್ವೇಷಗಳು, ಪ್ರೀತಿ ವಿಶ್ವಾಸಗಳು ಎಲ್ಲವೂ ಯಾವುದೋ ಒಂದು ನಿರ್ದಿಷ್ಟ ಪೂರ್ವ ನಿಯೋಜಿತವಾಗಿರುತ್ತದೆ. ಯಾರೋ ನಮಗೆ ಅನೀರಿಕ್ಷಿತವಾಗಿ ಮಿತ್ರರಾಗುತ್ತಾರೆ, ನಮ್ಮನ್ನು ಚೆನ್ನಾಗಿ ಉಪಯೋಗಿಸಿಕೊಳ್ಳುತ್ತಾರೆ, ಮೋಸ ಮಾಡಿ ಹೋಗಿಬಿಡುತ್ತಾರೆ. ಮತ್ತೆ ಸಿಗುವುದೇ ಇಲ್ಲ. ನಮ್ಮ ಅವರ ಸಂಬಂಧ ಒಂದು ನಿರ್ದಿಷ್ಟ ಕಾಲಕ್ಕೆ ಮಾತ್ರ ಇರುತ್ತದೆ. ಮತ್ತೆ ಯಾರೋ ಅರಿಯದವರು, ಅವರಿಂದ ನಾವೇನೂ ಅಪೇಕ್ಷೆಪಡದಿದ್ದರೂ ನಮಗೆ ತುಂಬಾ ಸಹಾಯ ಮಾಡಿ ನಮ್ಮ ಸಂತೋಷಕ್ಕೆ ಕಾರಣರಾಗುತ್ತಾರೆ. ಇದೆಲ್ಲ ಪೂರ್ವ ವಿಧಿತವೆಂದು ನಂಬಲೇಬೇಕು, ಅನ್ಯಥಾ ಮಾರ್ಗವಿಲ್ಲ.

ಆದರೆ ಇವೆಲ್ಲವನ್ನೂ ಅನುಭವಿಸುತ್ತಾ ಒಂದು ನಿರ್ಲಿಪ್ತ ಭಾವ ಬೆಳೆಸಿಕೊಂಡರೆ, ಬಾಳು ಹಸನಾದೀತು. ಇಲ್ಲಿಗೆ ಅಂಟಿಕೊಂಡಿದ್ದರೆ, ಇಲ್ಲಿಯೇ ರಕ್ತರಾಗಿದ್ದರೆ ನಮಗೆ ಈ ಸಂಸಾರದ ಹಿಂಸೆ "ಉರಿ ಮಾರಿಯಂತೆ" ಎಂದಿದ್ದಾರೆ ಶ್ರೀ ಗುಂಡಪ್ಪನವರು. ಹುಟ್ಟಿದ್ದೇವೆ, ಇರಬೇಕಾಗಿರುವುದು ಅನಿವಾರ್ಯ. ಇದ್ದರೂ ಇಲ್ಲದ ಹಾಗೆ ಇದ್ದರೆ ನೆಮ್ಮದಿ. ಇಲ್ಲದಿದ್ದರೆ "ಉರಿ ಮಾರಿಯ" ಬಿಸಿ ತಾಗಿಯೇ ತಾಗುತ್ತದೆ. ಹುಷಾರಾಗಿರಿ.





**ಮುಕ್ತಕ-173**

**ದಂದುಗದ ಬಾಗಿನಗಳವರ ನಲುಮೆಗಳು ।**
**ಬಂಧುಬಳಗವುಮಂತಕನ ಚಮುವೋ, ಛಚಮು ।**
**ಕುಂದಿಷ್ಟುವಾತ್ಮನವರ್ಗಳುಪಕಾರಗಳು ।**
**ಮಂದಿಗಾಗದಿರು ಬಲಿ-ಮಂಕುತಿಮ್ಮ ॥**

ಬಂಧುಬಳಗವುಮಂತಕನ=ಬಂಧುಬಳಗವುಂ+ಅಂತಕನ, ಬಾಗಿನಗಳವರ=ಬಾಗಿನಗಳು+ಅವರ,
ಕುಂದಿಷ್ಟುವಾತ್ಮನವರ್ಗಳುಪಕಾರಗಳು=ಕುಂದಿಷ್ಟುವವು+ಆತ್ಮನ+ಅವರ್ಗಳ+ಉಪಕಾರಗಳು

ಅಂತಕನ=ಯಮನ, ಚಮುವೋ=ಸೈನ್ಯವೋ, ಛದ್ಮಚಮು=ವೇಷಧಾರೀ ಸೈನ್ಯ, ದುಂದುಗದ=ಕಷ್ಟ, ತೊಂದರೆಗಳಿಂದ ಕೂಡಿದ, ಬಾಗಿನಗಳು=ಕೊಡುಗೆಗಳು, ನಲುಮೆಗಳು=ಪ್ರೀತಿ ವಿಶ್ವಾಸಗಳು, ಕುಂದಿಪ್ಪವವು=ಕುಗ್ಗಿಸುವವು, ಅವರ್ಗಳ=ಅವರುಗಳ

ನಮಗಿರುವ ಬಂಧುಗಳು ಮಾರು ವೇಷದಲ್ಲಿರುವ ಯಮನ ಸೈನ್ಯದಂತಿರುವರು. ಅವರು ಮಾಡುವ ಉಪಕಾರಗಳು ಮತ್ತು ಅವರು ನೀಡುವ ಕೊಡುಗೆಗಳು ನಮಗೆ ನೋವುಂಟುಮಾಡಿ ನಮ್ಮ ಆತ್ಮವನ್ನು ಕುಗ್ಗಿಸುತ್ತದೆ. ಹಾಗಾಗಿ ನೀನು ಎಚ್ಚರಿಕೆಯಿಂದ ಇದ್ದು ಈ ಮಂದಿಯ ಉಪಟಳಕ್ಕೆ ಬಲಿಯಾಗದಿರು ಎಂದು ಎಚ್ಚರಿಕೆಯ ಮಾತನ್ನು ಆಡುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಇದು ಬಹುಶಃ ಎಲ್ಲರಿಗೂ ಅರ್ಥವಾಗುತ್ತದೆ, ಏಕೆಂದರೆ ಇದು ಸುಮಾರು ಎಲ್ಲರ ಅನುಭವವೂ ಆಗಿರುತ್ತದೆ. ಎಲ್ಲರೂ ವೇಷಧಾರಿಗಳೇ. ಅಂದರೆ ಒಳಗೊಂದು ಹೊರಗೊಂದು. ಅವರು ಹೇಳುವುದು ಒಳಭಾವವಲ್ಲ. ಅದಕ್ಕೆ ಒಂದು ಗುಪ್ತ ಯೋಜನೆಯೇ (hidden agenda) ಇರುತ್ತದೆ. ಅರ್ಥಮಾಡಿಕೊಂಡು ನಾವು ವರ್ತಿಸುವುದೋ ಅಥವಾ ಸ್ಪಂದಿಸುವುದೋ ಮಾಡಿದರೆ, ಕ್ಷೇಮ. ಇಲ್ಲದಿದ್ದರೆ, ಗುಂಡಪ್ಪನವರು ಹೇಳಿದಂತೆ ನಾವು ಅವರ ಗುಪ್ತ ಯೋಜನೆಗೆ ಬಲಿಯಾಗಬೇಕಾದೀತು. ಹಾಗೆ ನಾವು ಬಲಿಯಾದರೆ, ತುಂಬಾ ನೋವನ್ನು, ಕೋಭೆಯನ್ನು ಅನುಭವಿಸಬೇಕಾಗಬಹುದು.

ನಮ್ಮ ಬಂಧು ಬಳಗದಲ್ಲಿ ಅಥವಾ ಸ್ನೇಹಿತರ ಗುಂಪಿನಲ್ಲಿ ಎಲ್ಲರೂ ಹಾಗೆ ಇರುವುದಿಲ್ಲ. ಆದರೆ ಛದ್ಮ ರೂಪದಲ್ಲಿರುವವರನ್ನು ಅರಿತುಕೊಳ್ಳುವುದು ಹೇಗೆ? ನೋಡಿದರೆ ನಮಗೇನೋ ಉಪಕಾರ ಮಾಡುವವರಂತೆ ಕಾಣುವವರು. ವಾಸ್ತವದಲ್ಲಿ ಕೇಡು ಬಯಸುವ ಉದ್ದೇಶದಿಂದಲೇ ನಮ್ಮ ಬಳಿ ಬಂದಿರುತ್ತಾರೆ. ಇವರುಗಳನ್ನು ಅರಿಯಲು ಬಹಳ ಕಷ್ಟಪಡಬೇಕಾಗುವುದು. ಅದರೊಳಗೂ ನೀವು ಹಣವಂತರಾದರೆ ನಿಮ್ಮ ಬಳಿ ಅವರ ವರ್ತನೆಯೇ ಬೇರೆ. ನಿಮಗೆ ವಿಧೇಯರಾಗಿ, ನಿಮ್ಮನ್ನು ಪೂಸಿಹೊಡೆದು ನಿಮ್ಮಿಂದ ಏನಾದರೂ ಕಿಲುಬಿಕೊಂಡು ಹೋಗಬೇಕೆಂಬುದೇ ಅವರ ಗುರಿ. ಆದರೆ ನೀವು ನಿರ್ಗತಿಕರಾದರೆ ನೀವು ನಿಜವಾಗಿಯೂ ಕಷ್ಟದಲ್ಲಿದ್ದರೂ ನಿಮ್ಮನ್ನು ಮೂಸುವುದೂ ಇಲ್ಲ. ಇದು ಜನಗಳ ವರ್ತನೆ. ಒಂದು ವೇಳೆ ನೀವು ಚೆನ್ನಾಗಿದ್ದವರು, ಸಿರಿವಂತರಾಗಿದ್ದವರು ಕಾರಣಾಂತರದಿಂದ ನಿರ್ಗತಿಕರಾಗಿ ಬಿಟ್ಟರೆ, ಆಗ ನೋಡಬೇಕು ಅವರ ವರ್ತನೆ. ನಿಮ್ಮನ್ನು ನೋಡಿದರೆ "ಪಾಪ"ವೆಂಬುವಂತೆ, ನಿಮ್ಮಿಂದ ದೂರ ಹೋಗುತ್ತಾರೆ. ಇವರ ವರ್ತನೆಯಿಂದ ಆತ್ಮ ಸೊರಗುತ್ತದೆ. ಮನಸ್ಸು ಕುಗ್ಗುತ್ತದೆ. ಮತ್ತೆ ಮೇಲೆ ಬಾರದ ಹಾಗೆ ಮುದುಡಿ ಬಿಡುತ್ತದೆ.

ಇದು ತಂದೆ ತಾಯಿಗಳೊಡನೆ ಮಕ್ಕಳ ಸಂಬಂಧವಿರಬಹುದು, ಒಂದು ತಾಯಿಯ ಮಕ್ಕಳಲ್ಲಿನ ಪರಸ್ಪರ ಸಂಬಂಧವಿರಬಹುದು, ಹತ್ತಿರದ ಬಂಧುವರ್ಗದಲ್ಲಿರಬಹುದು ಅಥವಾ ಸ್ನೇಹಿತರಲ್ಲಿರಬಹುದು. ಏಕೆ ಹೀಗೆ ಎಂದರೆ, ಮಾನವ ಬರ ಬರುತ್ತಾ ತುಂಬಾ ಸ್ವಾರ್ಥಿಯಾಗುತ್ತಿದ್ದಾನೆ. ಅವನ ದೃಷ್ಟಿ ತೀರ ಸಂಕುಚಿತವಾಗುತ್ತಿದೆ. ಒಂದು ವಿಶಾಲ ಮನೋಭಾವದ ಕೊರತೆ ಎಲ್ಲೆಲ್ಲೂ ಎದ್ದು ಕಾಣುತ್ತಿದೆ. ಇದಕ್ಕೆ ಕಾರಣಗಳು ಹಲವಾರಿರಬಹುದು. ಆದರೆ ವಸ್ತು ಸ್ಥಿತಿ ಒಂದೇ. ಸ್ವಾರ್ಥ, ಅಹಂಕಾರ, ಅನುಕಂಪದ ಕರುಣೆಯ ಅಭಾವ, ಪ್ರೀತಿಯ, ಪರಸ್ಪರ ವಿಶ್ವಾಸದ, ಸತ್ಯದ, ಶ್ರದ್ಧೆಯ, ಸತ್ಯದ ಅಭಾವ, ಈ ರೀತಿಯ ಅಭಾವಗಳ ಮಹಾಪೂರವೇ, ಇದಕ್ಕೆ ಕಾರಣ.

ಸಹೃದಯ ವಾಚಕರೆ, ಈಗ್ಗೆ ಎಪ್ಪತ್ತು ವರ್ಷಗಳ ಹಿಂದೆಯೇ ಗುಂಡಪ್ಪನವರಿಗೆ ಈ ಭಾವ ಬಂದಿರಬೇಕಾದರೆ ಇಂದು ಅವರಿದ್ದಿದ್ದರೆ ಏನು ಬರೆಯುತ್ತಿದ್ದರೋ ನಾ ಅರಿಯೆ!!! ನಮ್ಮ ಪರಿಮಿತ ಮತಿಯ ಮಿತಿಯಲ್ಲಿ ಪರಸ್ಪರ ಸಂಬಂಧವನ್ನು ಸೂಕ್ಷ್ಮವಾಗಿ ಅವಲೋಕಿಸುತ್ತಲೇ ಇರಬೇಕು. ನಮ್ಮನ್ನು ಇಂತಹವರಿಂದ ರಕ್ಷಿಸಿಕೊಳ್ಳುವ ಪ್ರಯತ್ನ ನಿರಂತರವಾಗಿ ಮಾಡುತ್ತಲೇ ಇರಬೇಕು.

# ಮಂದಹಸಿತದ ಕೊಲೆ 174-178

**ಮುಕ್ತಕ-174**

**ತಂದೆ ಮಕ್ಕಳಿಗೆ ಹದಗೆಟ್ಟುದನು ಕಾಣೆಯಾ? |**
**ಹೊಂದಿರುವರವರ್ ಅಹಂತೆಯು ಮೊಳೆಯುವನಕ ||**
**ತಂದೆಯಾರ್ ಮಕ್ಕಳಾರ್ ನಾನೆಂಬುದೆದ್ದುನಿಲೆ? |**
**ಬಂಧ ಮುರಿವುದು ಬಳಿಕ-ಮಂಕುತಿಮ್ಮ ||**

ಹದಗೆಟ್ಟುದನು=ಹದ+ಕೆಟ್ಟುದನು, ನಾನೆಂಬುದೆದ್ದುನಿಲೆ=ನಾನು+ಎಂಬುದು+ಎದ್ದುನಿಲೆ,

ಹೊಂದಿರುವರವರ್=ಹೊಂದಿರುವರು+ಅವರು.

ಹದಗೆಟ್ಟುದನು=ಕೆಟ್ಟದಾದ ಸ್ಥಿತಿ, ಅಹಂತೆಯು=ಅಹಂಕಾರವು,

ಮೊಳೆಯುವತನಕ=ಮನಗಳಲ್ಲಿ ಉಂಟಾಗುವ ತನಕ

ತಂದೆ ಮಕ್ಕಳ ಸಂಬಂಧವನ್ನು ಕುರಿತು ಒಂದು ಚೆಂದಾದ ಮುಕ್ತಕವಿದು. ಇಂದಿನ ಪ್ರಪಂಚದಲ್ಲಿ, ತಂದೆ ಮಕ್ಕಳ ಬಾಂಧವ್ಯದ ರೂಪ ಹದಗೆಟ್ಟು ಹೋಗಿರುವುದನ್ನು ನೋಡಿ. ಈ ಸಂಬಂಧಗಳು ಮಕ್ಕಳಲ್ಲಿ ಅಹಂಕಾರ ಮೊಳೆಯುವ ತನಕ, ಸರಿ ಸುಮಾರಾಗಿರುತ್ತದೆ. ಹಾಗೆ ಪ್ರತಿಯೊಬ್ಬರ ಮನಸ್ಸಲ್ಲೂ ಅಹಂಕಾರ ಎದ್ದು ನಿಂತರೆ ತಂದೆಯಾರೋ ಮಕ್ಕಳಾರೋ? ಈ ಸಂಬಂಧಗಳ ಬಂಧ ಮುರಿದು ಬೀಳುತ್ತದೆ ಎಂದು ಉಲ್ಲೇಖ ಮಾಡುತ್ತಾರೆ, ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಸಾಮಾನ್ಯವಾಗಿ ಎಲ್ಲರೂ ಒಂದಲ್ಲ ಒಂದು ರೀತಿಯ ಮಾನಸಿಕ ಒತ್ತಡದಿಂದ ಮತ್ತು ಅನಾರೋಗ್ಯದಿಂದ ತೊಳಲಾಡುತ್ತಿರುವುದರಿಂದ ಎಲ್ಲ ಪ್ರದೇಶಗಳಲ್ಲೂ ವೈದ್ಯಶಾಲೆಗಳು ಅಣಬೆಗಳಂತೆ ಎದ್ದು ನಿಲ್ಲುತ್ತಿವೆ. ಅಂತೆಯೇ ತಂದೆ ತಾಯಿಗಳ ಮತ್ತು ಮಕ್ಕಳ ನಡುವಿನ ಪರಸ್ಪರ ಸಂಬಂಧಗಳ ಸ್ವಾಸ್ಥ್ಯವೂ ಹದಗೆಡುತ್ತಿರುವುದರಿಂದ





ಎಲ್ಲಾ ಕಡೆಯೂ ವೃದ್ಧಾಶ್ರಮಗಳು ಎದ್ದು ನಿಲ್ಲುತ್ತಿವೆ. ಇಂದಿನ ಯಾಂತ್ರಿಕ ಬದುಕಿನ ಕಾರಣ ಯಾರಿಗೂ ಮತ್ತೊಬ್ಬರ ಬಗ್ಗೆ ನಿಗಾ ವಹಿಸಲಾಗಲೀ, ಮುತುವರ್ಜಿ ವಹಿಸಲಾಗಲೀ ಸಮಯದ ಅಭಾವ ಒಂದು ಕಾರಣವಾದರೆ, ಮಕ್ಕಳು ದೊಡ್ಡವರಾದ ಮೇಲೆ ಅವರ ಜೀವನ ಸಂಗಾತಿಗಳು ಅನ್ಯರ ಮನೆಗಳಿಂದ ವಿವಿಧ ಪರಿಸರಗಳಿಂದ ಬರುತ್ತಾರಾದ್ದರಿಂದ ಮತ್ತು ಅವರದೇ ಗುಣಗಳು ಅಭ್ಯಾಸಗಳು ಮತ್ತು ಸಂಸ್ಕಾರಗಳನ್ನು ತರುತ್ತಾರಾದ್ದರಿಂದ, ಹೊಂದಾಣಿಕೆ ಕಷ್ಟವಾಗುತ್ತದೆ.

ಹಿಂದಿನ ಕಾಲದಂತೆ ಹಲ್ಲು ಕಚ್ಚಿಕೊಂಡು, ಸಹಿಸಿಕೊಂಡು ಹೋಗುವ ತಾಳ್ಮೆ ಇಂದಿನವರಿಗೆ ಇಲ್ಲವಾದ್ದರಿಂದ ಅಪ್ಪ-ಅಮ್ಮ ಮತ್ತು ಮಕ್ಕಳ ಪರಸ್ಪರ ಸಂಬಂಧಗಳು ಹದಗೆಡುತ್ತವೆ. ಅವಿಭಕ್ತ ಕುಟುಂಬಗಳಲ್ಲಿ ಇರಬೇಕಾದರೆ, ನಿಸ್ವಾರ್ಥ, ಸಹನೆ, ಒಪ್ಪಿಕೊಳ್ಳುವಿಕೆ, ಅಪ್ಪಿಕೊಳ್ಳುವಿಕೆ, ಬಿಟ್ಟುಕೊಡುವಿಕೆ ಮುಂತಾದ ಗುಣಗಳು ಸದಸ್ಯರೆಲ್ಲರಲ್ಲೂ ಇರಬೇಕು. ಅದು ಇಲ್ಲದಿದ್ದರೆ ದೂರ ಸರಿಯುವುದು ಸಹಜ. ಆ ತಂದೆ ತಾಯಿಗಳೂ ಸಹ, "ನಮಗೆ ವಯಸ್ಸಾಯಿತು, ಇನ್ನು ನಾವು ಸಾಧಿಸುವುದೇನೂ ಇಲ್ಲ. ಮಕ್ಕಳ ಸಂತೋಷಕ್ಕಾಗಿ ಇನ್ನು ಶೇಷ ಜೀವನವನ್ನು ಶಾಂತಿಯಿಂದ ಕಳೆದರೆ ಸಾಕು ಎಂದು ತಮ್ಮ "ಅಹಂ" ಬಿಟ್ಟು ಬಾಳಿದರೆ ಮಕ್ಕಳೂ ಸಹ ಆ ತಂದೆ ತಾಯಿಯರ ಮೇಲೆ ಪ್ರೀತಿ ವಿಶ್ವಾಸವನ್ನು ಬೆಳೆಸಿಕೊಂಡು ಅವರ ಅಂತ್ಯ ಕಾಲದವರೆಗೆ ಅವರನ್ನು ಚೆನ್ನಾಗಿ ನೋಡಿಕೊಳ್ಳುವ ಸಾಧ್ಯತೆ ಇದೆ. ಇಲ್ಲದಿದ್ದರೆ, ಅಹಂಕಾರದ ಹಗ್ಗವನ್ನು ಇಬ್ಬರೂ ಕಟ್ಟಿಕೊಂಡು "ನಾ ಹೆಚ್ಚ ನೀ ಹೆಚ್ಚ" ಎಂದು ಎಳೆದಾಡಿದರೆ ಬಂಧನವು ಮುರಿದು ಬೀಳುವುದು ಖಂಡಿತ.

ಮಕ್ಕಳು ತಂದೆ ತಾಯಿಯರನ್ನು ಇವರು ನಮ್ಮನ್ನು ಹೊತ್ತು ಹೆತ್ತು ಸಾಕಿ ಸಲುಹಿದವರು. ನಾವಿಂದು ಹೀಗಿದ್ದೇವೆ ಎನ್ನುವುದಕ್ಕೆ ಅವರೇ ಕಾರಣ, ನಮ್ಮ ಅಸ್ತಿತ್ವವೇ ಅವರಿಂದ, ಅವರಿಗೆ ನೋವಾಗದಂತೆ ನಾವು ನಡೆದುಕೊಳ್ಳಬೇಕು' ಎಂದೂ ಮತ್ತು ಆ ತಂದೆ ತಾಯಿಯರು "ಈ ಮಕ್ಕಳು ನಾವು ಹೆತ್ತ ಮಕ್ಕಳು. ನಮ್ಮ ಜೀವನದ ಅಂತ್ಯ ಕಾಲಕ್ಕೆ, ಅವರ ಸುಖದಲ್ಲಿ ನಮ್ಮ ಸುಖವನ್ನು, ಅವರ ಆನಂದದಲ್ಲಿ ನಮ್ಮ ಆನಂದವನ್ನು ಕಂಡುಕೊಳ್ಳುತ್ತಾ ನಮ್ಮ ಶೇಷ ಜೀವನವನ್ನು ಶಾಂತವಾಗಿ ಕಳೆಯುವ" ಎಂದು ಆಲೋಚನೆ ಮಾಡಿ ನಡೆದು ಕೊಂಡರೆ ಇಬ್ಬರ ಜೀವನವೂ ಸುಖವಾಗಿರುತ್ತದೆ. ಇಲ್ಲದಿದ್ದರೆ "ಕಿತ್ತಾಡುತ್ತಾ ಒಟ್ಟಿಗಿರುವ ಬದಲು ದೂರವಿದ್ದು ಪ್ರೀತಿ ವಿಶ್ವಾಸವನ್ನು ಕಾಪಾಡಿಕೊಳ್ಳುವಾ ಎಂದೋ ಅಥವಾ ನಮ್ಮ ನಮ್ಮ ಜೀವನವನ್ನು ನಾವು ನೋಡಿಕೊಳ್ಳುವಾ" ಎಂದೋ ಎಲ್ಲರೂ ಪರಸ್ಪರ ದೂರ ಸರಿಯುತ್ತಾರೆ. ವಾಚಕರೆ ಇದೊಂದು ವಿಷಮ ಪರಿಸ್ಥಿತಿ ಇದರ ನಿವಾರಣೆ ಕಷ್ಟವೆನಿಸುತ್ತದೆ. ಅಹಂಕಾರವನ್ನು ಬಿಟ್ಟರೆ ಮಾತ್ರ ಸಾಧ್ಯ.

**ಮುಕ್ತಕ-175** **ಕಾಂಕ್ಷೆಗಳ ಭೋಧಿಸುವ ಬಂಧುಸಖುರುಪಕಾರ |**

**ಯಕ್ಷಿಯರು ಮ್ಯಾಕ್ಬತನಿಗೆಸಗಿದುಪದೇಶ ||**

**ಉತ್ಸಾಹವಿದ್ದೇನು? ವಾತ್ಸಲ್ಯವಿದ್ದೇನು? |**

**ಅಕ್ಷಿನಿರ್ಮಲವೇನೋ?-ಮಂಕುತಿಮ್ಮ**

ಬಂಧುಸಖುರುಪಕಾರ=ಬಂಧು+ಸಖುರ+ಉಪಕಾರ,

ಮ್ಯಾಕ್ ಬೆತನಿಗೆಸಗಿದುಪವೇಶ= ಮ್ಯಾಕ್ಬತ್ನಿಗೆ+ಎಸಗಿದ+ಉಪದೇಶ,

ಕಾಂಕ್ಷೆಗಳ=ಆಸೆಗಳ, ಸಖುರು=ಸ್ನೇಹಿತರು, ಮ್ಯಾಕ್ಬತ=ಶೇಕ್ಸಪಿಯರ್‌ನ ಮ್ಯಾಕ್ಬತ್ ನಾಟಕದ ಒಂದು ಪಾತ್ರ, ಅಕ್ಷಿ=ಕಣ್ಣು, ನೋಟ.

ನಮ್ಮಲ್ಲಿ ಆಸೆಗಳನ್ನು ಹುಟ್ಟಿಸುವ ಮತ್ತು ವಸ್ತು ವಿಷಯವಾಗಿ ನಮಗೆ ಬೋಧನೆ ಮಾಡುವ ನಮ್ಮ ಬಂಧುಗಳು, ಸ್ನೇಹಿತರು, ಕೇವಲ ಯಕ್ಷಿಣಿಯರು ಮ್ಯಾಕ್ಬೆತ-ನಿಗೆ ಮಾಡಿದ ಉಪದೇಶದಂತೆ ಇದೆ. ನಮ್ಮನ್ನು ಕುರಿತು ಅವರಲ್ಲಿ ವಿಶ್ವಾಸವಿದ್ದರೇನು ಅಥವಾ ಪ್ರೀತಿ ಅನುರಾಗವಿದ್ದರೇನು, ಅವರ ಉದ್ದೇಶಗಳು ಕಲುಷಿತವಾಗಿದೆಯೇನೋ ನೋಡಿಕೋ ಎಂದು ಒಂದು ಸೂಚನೆಯನ್ನು ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ ನೀಡುತ್ತಾರೆ.

ಇಲ್ಲಿ ಮಾನ್ಯ ಗುಂಡಪ್ಪನವರು, ಶೇಕ್ಸ್ ಪಿಯರ್‌ನ ಒಂದು ದುರಂತ ನಾಟಕದ ಉಲ್ಲೇಖ ಮಾಡುತ್ತಾರೆ. ಸ್ಕಾಟ್ಲಾಂಡಿನ ದೊರೆ ಡಂಕನ್. ಅವನ ಸೇನಾಧಿಪತಿ ಮ್ಯಾಕ್ಬತ್. ಅವನು ಒಂದು ಬಾರಿ ಯುದ್ಧದಲ್ಲಿ ಗೆದ್ದು ಹಿಂತಿರುಗುತ್ತಿರುವಾಗ ಯಕ್ಷಿಣಿಯರು, "ದಳವಾಯಿಯಾದ ನೀನು, ರಾಜ ಡಂಕನನನ್ನು ಕೊಂದು ಬಿಡು. ಆಗ ನೀನೆ ರಾಜನಾಗತ್ತೀಯೇ" ಎಂದು ದುರ್ಬೋಧನೆ ಮಾಡುತ್ತಾರೆ. ಅದನ್ನೇ ತಲೆಯಲ್ಲಿರಿಸಿಕೊಂಡು ಅವನು ಆ ರಾಜನನ್ನು ಕೊಂದು ಪಡಬಾರದ ಕಷ್ಟದ ಕೋಟಲೆಗೆ ಸಿಕ್ಕಿಹಾಕಿಕೊಳ್ಳುತ್ತಾನೆ. ಹಾಗೆಯೇ ನಮ್ಮ ಸ್ಥಿತಿಯೂ ಆಗಬಾರದು ಎಂದು ಸೂಚ್ಯವಾಗಿ ಗುಂಡಪ್ಪನವರು ನಮ್ಮನ್ನು ಎಚ್ಚರಿಸುತ್ತಾರೆ.

ನಮಗೆ ನಮ್ಮ ಜೀವನದಲ್ಲಿ ನಮ್ಮ ಬಂಧುಗಳೋ, ನಮ್ಮ ಸ್ನೇಹಿತರೋ, ಹೀಗೆ ಮತ್ಯಾರೋ ಪ್ರತಿ ಸಂದರ್ಭದಲ್ಲೂ ಒಂದು ಸೂಚನೆಯನ್ನೋ ಅಥವಾ ಒಂದು ಸಲಹೆಯನ್ನೂ ಕೊಡುತ್ತಲೇ ಇರುತ್ತಾರೆ. ನಾವು ಕೇಳಲಿ ಬಿಡಲಿ, ಅವರ ಸಲಹೆಯ ಅವಶ್ಯಕತೆ ಇರಲಿ ಬಿಡಲಿ, "ಪುಗಸಟ್ಟೆ" ಸಲಹೆ ಕೊಡುವವರಂತೂ ಬೇಕಾದಷ್ಟು ಜನ ಸಿಗುತ್ತಾರೆ. ನಾವೂ ಸಹ ದುರಾಸೆಯಿಂದ, ಸ್ವಾರ್ಥದಿಂದ ಅಂತಹ ಸಲಹೆಗಳನ್ನು ಪೂರ್ವಾಪರ ವಿಚಾರ ಮತ್ತು ವಿವೇಚನೆಯಿಲ್ಲದೆ ಅವರು ಕೊಟ್ಟ ಸಲಹೆಗಳನ್ನು ಪಾಲಿಸುತ್ತಾ ಹೋದರೆ ತೀರ ತೊಂದರೆಗಳಲ್ಲಿ ಸಿಕ್ಕು

ತೊಳಲಾಡುತ್ತೇವೆ. ನಂತರ ನಮ್ಮ ಪರಿಸ್ಥಿತಿಗೆ ಪರರನ್ನು ದೂಷಿಸುತ್ತಾ ಗೋಳಾಡುತ್ತೇವೆ. ನಾವು ನಮ್ಮ ವಿವೇಚನೆಯನ್ನು ಉಪಯೋಗಿಸಿ ನಿರ್ಧಾರಗಳನ್ನು ತೆಗೆದುಕೊಂಡರೆ ಲೇಸು.

ಹಿಂದಿಯಲ್ಲಿ ಒಂದು ಮಾತನ್ನು ಹೇಳುತ್ತಾರೆ "ಸಬ್ ಕೀ ಸುನೋ ಅಪನೀ ಕರೋ" ಅನ್ಯರು ಹೇಳಿದ್ದನ್ನು ಕೇಳು ಆದರೆ ನಿನ್ನ ನಿರ್ಧಾರ ನೀನೆ ತೆಗೆದುಕೋ ಎಂದು. ನಮ್ಮ ಜೀವನದ ಪ್ರತಿ ಹೆಜ್ಜೆಯಲ್ಲೂ ನಾವು ಅನ್ಯರ ಸಲಹೆ, ಸೂಚನೆಗಳನ್ನು ಕೇಳುತ್ತಾ ಹೋದರೆ ಬಹಳ ಸಂಕಟದಲ್ಲಿ ಸಿಕ್ಕು ಕಷ್ಟಕ್ಕೆ ಬೀಳಬೇಕಾಗುತ್ತದೆ.

(242)

| ಕಗ್ಗರಸಧಾರೆ | ಮಂದಹಸಿತದ ಕೊಲೆ 174-178 |
|---|---|

ಅನ್ಯರು ಕೊಡುವ ಸಲಹೆ ಅವರ ಅನುಭವದ ಆಧಾರದ ಮೇಲೆ ನೀಡಿರಬಹುದು. ಅವರು ನಿರ್ಮಲ ಅಂತಃಕರಣದಿಂದ ಒಳ್ಳೆಯ ಉದ್ದೇಶ ಇಟ್ಟುಕೊಂಡೇ ಹೇಳಿರಬಹುದು. ಪಾಲಿಸಿದರೆ ಪರಿಣಾಮ ಕೆಲವು ವೇಳೆ ಸರಿಯಾಗಬಹುದು. ಆಗದೆಯೂ ಇರಬಹುದು.

ಆದರೆ ನಮ್ಮನ್ನು ಪ್ರಲೋಭನೆಗಳಿಗೆ ತಳ್ಳುವಂತಹ ಸಲಹೆಗಳೇ ಬಹಳವಾಗಿ ಸಿಗುತ್ತವೆ. ಅನ್ಯರು ಒಂದು ಸಣ್ಣ ಸಲಹೆ ನೀಡಿದರೆ, ನಾವು ಅದನ್ನು ಬಹಳ ತೀವ್ರವಾಗಿ ತೆಗೆದುಕೊಂಡು, ಬಹುವಾಗಿ ಕಲ್ಪಿಸಿಕೊಂಡು ಒಂದಕ್ಕೆ ಹತ್ತನ್ನು ಮಾಡಿ, ಕೆಲಸ ಕೆಟ್ಟಾಗ ಪರರನ್ನು ದೂಷಿಸುವ ಕೆಲಸ ಮಾಡುತ್ತೇವೆ. ಅವರು ಹೇಳಿದ್ದು ಒಂದು. ಆ ಒಂದು ನಮ್ಮನ್ನು ಹತ್ತಕ್ಕೆ ಎಳೆದುಕೊಂಡು ಹೋಗುತ್ತದೆ. ನಮ್ಮ ಕರ್ಮಕ್ಕೆ ಪರರನ್ನು ದೂಷಿಸುವ, ನಮ್ಮ ವಿಧಿಯನ್ನು ಬೈಯುವ, ಗ್ರಹಚಾರದ ಕಾರಣವನ್ನು ಹೇಳುತ್ತೇವೆ. ನಾವು ಎಂದಿಗೂ "ಆಹಾ ಇದು ನಾನು ಮಾಡಿದ ತಪ್ಪು' ಎಂದು ಒಪ್ಪಿಕೊಳ್ಳುವುದೇ ಇಲ್ಲ. ಆದ್ದರಿಂದ ವಾಚಕರೆ, ಪರರು ಹೇಳಿದ್ದು ಕೇಳುತ್ತಾ, ವಿಶ್ಲೇಷಣೆ ಮಾಡುತ್ತಾ, ನಮ್ಮ ವಿವೇಚನೆಯನ್ನು ಉಪಯೋಗಿಸಿ, ನಿರ್ಧಾರಗಳನ್ನು ತೆಗೆದುಕೊಂಡರೆ, ಏನೇ ಆದರೂ ನಾವು ಪರರ ದೂಷಿಸುವ ಪರಿಸ್ಥಿತಿ ಬರುವುದಿಲ್ಲ. ನಮ್ಮ ಮನಸ್ಸನ್ನು ಶುದ್ಧವಾಗಿಟ್ಟುಕೊಳ್ಳಬಹುದು.

**ಮುಕ್ತಕ-176**

**ಇಂಗಿತಜ್ಞಾನವಿಲ್ಲದ ಬಂಧುಪರಿವಾರ ।**
**ಹಂಗಿಸುವ ಛಲವುಳ್ಳ ಸತಿಪುತ್ರಸಖರು ॥**
**ಬಂಗಾರದಸಿ ಚುಚ್ಚಿ ಸಿಂಗರದ ಬೊಟ್ಟೆನುವ ।**
**ಮಂಗಬುದ್ಧಿಯ ಜನರು-ಮಂಕುತಿಮ್ಮ ॥**

ಬೊಟ್ಟೆನುವ=ಬೊಟ್ಟು+ಎನುವ.

ಬಂಗಾರದಸಿ=ಬಂಗಾರದ ಕತ್ತಿ, ಸಿಂಗಾರ ಬೊಟ್ಟೆನುವ=ಅಲಂಕಾರದ ತಿಲಕವೆನುವ

ಮಂಗಬುದ್ಧಿಯ=ಕೋತಿ ಬುದ್ಧಿಯ ಜನ.

ಪರರ ಮನಸ್ಸಿನಲ್ಲಿ ಏನಿದೆ ಎಂದು ಅರಿಯದೆ ನಮಗೆ ಕೆಲಸಕ್ಕೆ ಬಾರದ ಬುದ್ಧಿವಾದವನ್ನು ಹೇಳುವ ಬಂಧುಗಳು ಮತ್ತು ಪರಿವಾರದವರು, ನಮ್ಮನ್ನು ಹಂಗಿಸುವ ಹಠ ಮತ್ತು ಧೈರ್ಯ ಮಾಡುವ ನಮ್ಮದೇ ಪತ್ನಿ, ಪುತ್ರ ಮತ್ತು ಸ್ನೇಹಿತರು ಮತ್ತು ಅವರು ಮಾಡುವ ಸಲಹೆ ಸೂಚನೆಗೆ "ಸರಿ" ಎನ್ನುವಂತೆ ನಮ್ಮನ್ನು ಅವರು ಮಾಡುವ ಬಲವಂತ ಹೇಗಿದೆಯೆಂದರೆ, ಚಿನ್ನದ ಕತ್ತಿಯಲ್ಲಿ ನಮ್ಮನ್ನು ಚುಚ್ಚಿ ಅದು ಅಲಂಕಾರದ ತಿಲಕ ಎಂದು ಹೇಳುವ ಮಂಗ ಬುದ್ಧಿಯ ಜನರು ಎಂದು ಮಾನ್ಯ ಗುಂಡಪ್ಪನವರು ಟೀಕಾರೂಪದಲ್ಲಿ ಈ ಮುಕ್ತಕದಲ್ಲಿ ಉಲ್ಲೇಖ ಮಾಡಿದ್ದಾರೆ.

ಖಂಡಿತ ಯಾರಿಗೂ ಇನ್ನೊಬ್ಬರ ಮನಸಲ್ಲೇನಿದೆ ಎಂದು ಅರಿಯುವುದು ಸಾಧ್ಯವಿಲ್ಲ. ಆದರೆ "ತನ್ನಂತೆ ಪರರ ಬಗೆದೊಡೆ ಕೈಲಾಸ ಬಿನ್ನಾಣವಕ್ಕು ಸರ್ವಜ್ಞ" ಎಂಬ ಸರ್ವಜ್ಞ ವಚನದಂತೆ, ತಮ್ಮನ್ನು ಪರರ ಸ್ಥಾನದಲ್ಲಿ ಇಟ್ಟು ನೋಡಿದರೆ ಅವರು ಕೊಡುವ ಸಲಹೆ ಸೂಚನೆಗಳು ಬದಲಾಗಬಹುದು. ಆದರೆ

ಹಾಗಾಗುವುದಿಲ್ಲ. ತಾವು ಕೊಡುವ ಸೂಚನೆ ಸಲಹೆಗಳು ಪರರಿಗೆ ಉಪಯೋಗವಾಗುತ್ತೋ ಅಥವಾ ತೊಂದರೆಯಾಗುತ್ತೋ ಎಂದು ಯೋಚನೆ ಮಾಡದೆ ತಮ್ಮ ಮಂಗಬುದ್ಧಿಯಿಂದ ಪರರಿಗೆ ಸಲಹೆಗಳನ್ನು ಕೊಡುತ್ತಿರುತ್ತಾರೆ. ಅಷ್ಟೇ ಅಲ್ಲ ತಮ್ಮ ಸಲಹೆಗಳನ್ನು ಪಾಲಿಸುವಂತೆ ಒತ್ತಾಯಿಸುತ್ತಾರೆ. ಅಕಸ್ಮಾತ್ ನಾವು ಅವರ ಸೂಚನೆಗಳನ್ನು ಕೇಳಿ ನಮಗೆ ಒಳ್ಳೆಯದಾದರೆ, ಅದು ಅವರ 'ವಿಜಯ'ವೆಂಬಂತೆ ಬೀಗುತ್ತಾರೆ.

ಆದರೆ ನಾವು ಅವರ ಸೂಚನೆಯನ್ನು ಪಾಲಿಸಿ "ಕೆಟ್ಟರೆ" ಅದು "ನಮ್ಮ ಕರ್ಮ ಅಥವಾ ಹಣೆಬರಹ' ಎಂದು ಹಣೆಪಟ್ಟಿ ಕಟ್ಟಿ ನಮ್ಮಿಂದ ಖಂಡಿತ ದೂರವಾಗುತ್ತಾರೆ. ಅಷ್ಟೇ ಅಲ್ಲ "ನಮ್ಮ ಸಲಹೆಯನ್ನು ಸರಿಯಾಗಿ ಕೇಳಲಿಲ್ಲ" ಎಂದು ನಮ್ಮನ್ನು ಹಂಗಿಸುತ್ತಾರೆ, ಅಣಕವಾಡುತ್ತಾರೆ. ನಮ್ಮ ಹೆಂಡತಿ (ಗಂಡ), ಮಕ್ಕಳು ಅಥವಾ ಸ್ನೇಹಿತರು ಎಲ್ಲರೂ ಇದೇ ಪಟ್ಟಿಯಲ್ಲಿ ಸೇರುತ್ತಾರೆ. ನಾವು ಸೋತಾಗ ಅಥವಾ ಕೆಟ್ಟಾಗ ಎಲ್ಲರೂ ನಮ್ಮಿಂದ ದೂರಾಗುತ್ತಾರೆ.

ಹಾಗಾಗಿ ವಾಚಕರೆ, ನಮ್ಮ ವಿವೇಚನೆಯನ್ನು ಭದ್ರಪಡಿಸಿಕೊಳ್ಳಬೇಕು. ನಮ್ಮ ನಿರ್ಧಾರಗಳನ್ನು ನಾವೇ ತೆಗೆದುಕೊಳ್ಳಬೇಕು. ಪರರ ಸಲಹೆ ಸೂಚನೆಗಳನ್ನು ಕೇಳಿದರೂ, ಅಳೆದು ಸುರಿದು ನೋಡಿ ನಮ್ಮ ನಿರ್ಧಾರವನ್ನು ನಾವೇ ತೆಗೆದುಕೊಳ್ಳಬೇಕು ಮತ್ತು ಅದರ ಪರಿಣಾಮಗಳಿಗೆ ನಾವೇ ಬಾಧ್ಯರಾಗಬೇಕು. ನಮ್ಮ ಹಣೆಗೆ ಪಟ್ಟಿಯನ್ನು ನಾವೇ ಕಟ್ಟಿಕೊಂಡರೆ ಸಮಾಧಾನ. ಆ ಅವಕಾಶವನ್ನು ಪರರಿಗೆ ಕೊಡಬಾರದು, ಅವರ ಚುಚ್ಚುಮಾತುಗಳಿಗೆ ಅವಕಾಶವೇ ಕೊಡಬಾರದು. "ಲೋಕದ ಜನರು ಕಾಗೆಗಳಂತೆ" ಎನ್ನುವ ಒಂದು ಗಾದೆ ಮಾತಿದೆ. ಅವರು ಮಾತನಾಡುತ್ತಲೇ ಇರುತ್ತಾರೆ. ನಾವು ತಲೆ ಕೆಡಿಸಿಕೊಳ್ಳದೆ, ಸಮಾಧಾನದಿಂದ ಇರಬೇಕು. ಇಂತಹ ಪ್ರಯತ್ನವನ್ನು ಎಲ್ಲರೂ ಮಾಡಬೇಕು. ಹಾಗಾದರೆ, ನಮ್ಮ ಮನಸ್ಸಿನ ನೆಮ್ಮದಿಯನ್ನು ಕಾಪಾಡಿಕೊಳ್ಳಬಹುದು.

**ಮುಕ್ತಕ-177**

**ಬಂಧುವುಂ ಮಿತ್ರನುಂ ಭೃತ್ಯನುಂ ಶತ್ರುವೊಲೆ |**
**ದಂಡಧರನೋಲಗಕೆ ನಿನ್ನನೆಳೆವವರೋ ||**
**ಅಂದದೊಡವೆಯ, ಮೊನೆಗಳಿಂದೆದೆಯನೊತ್ತುವಾ |**
**ಮಂದಹಸಿತ ಕೊಲೆಯೊ-ಮಂಕುತಿಮ್ಮ ||**

ದಂಡಧರನೋಲಗಕೆ=ದಂಡಧರನ+ಓಲಗಕೆ, ನಿನ್ನನೆಳೆವವರೋ=ನಿನ್ನನ್ನು+ಎಳೆವವರೋ,

ಅಂದದೊಡವೆಯ=ಅಂದದ+ಒಡವೆಯ,

ಮೊನೆಗಳಿಂದೆದೆಯನೊತ್ತುವಾ=ಮೊನೆಗಳಿಂದ+ಎದೆಯನು+ಒತ್ತುವಾ,

ಬಂಧುವುಂ=ಬಂಧುವು, ಮಿತ್ರನುಂ=ಸ್ನೇಹಿತನು, ಭೃತ್ಯನುಂ=ಸೇವಕನು, ಶತ್ರುವೊಲೆ=ಶತ್ರುವಿನಂತೆ,

ದಂಡಧರನ ಓಲಗಕೆ=ಯಮನದರ್ಬಾರಿಗೆ, ಅಂದದೊಡವೆಯ=ಚೆನ್ನಾದ ಒಡವೆಗಳ,

ಮೊನೆಗಳಿಂದೆದೆಯನೊತ್ತುವಾ=ಚೂಪಾದ ಕೊನೆಗಳಿಂದ ನಮ್ಮ ಎದೆಗೆ ಒತ್ತುವಂತೆ.

ಸ್ವಾರ್ಥವಿಲ್ಲದೆ ನಮಗೆ ಸಹಾಯ ಮಾಡುವವರು ಇಡೀ ಜಗತ್ತಿನಲ್ಲೇ ಕಾಣಸಿಗುವುದು ದುರ್ಲಭ, ನಮಗೆ ಸಹಾಯ ಮಾಡುವವರೆಲ್ಲ, ತಮ್ಮದೇ ಆದ ಕಾರಣಗಳಿಗಾಗಿ ನಮಗೆ ಒದಗುತ್ತಿರುತ್ತಾರೆ. ಆದರೆ ಅವರು





ಮಾಡುವ ಸಹಾಯ ಅವರಿಗೇ ಹೆಚ್ಚು ಉಪಕಾರಿಯಾಗಿ ನಮಗೆ ಕಷ್ಟಗಳ ಫಲ ಮಾತ್ರ ಸಿಗುತ್ತವೆ. ಅವರೆಲ್ಲ ನಮಗೆ ಮಿತ್ರರಂತೆ ಕಂಡರೂ ವಾಸ್ತವದಲ್ಲಿ ಅವರು ನಮಗೆ ಶತ್ರುಗಳಂತಾಗಿ, ನಮಗೆ ಯಮಲೋಕದ ದರ್ಶನ ಮಾಡಿಸುವವರಂತೆ ಎಂದು ಒಂದು ಕಟುಸತ್ಯವನ್ನು ಅರುಹುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಹೌದು, ಈ ಜಗದಲ್ಲಿ ಸ್ವಾರ್ಥವಿಲ್ಲದೆ ಒದಗುವವರು ವಿರಳ. ನಮಗೆ ಸಹಾಯ ಮಾಡುವ ನೆಪದಲ್ಲಿ ತಮ್ಮ ಸ್ವಾರ್ಥವನ್ನು ಸಾಧಿಸುವವರೇ ಅಧಿಕ. ಅವರು ಬಂಧುಗಳೇ ಆಗಿರಲಿ, ಮಿತ್ರರೇ ಆಗಿರಲಿ ಅಥವಾ ನಮ್ಮ ಸೇವಕರೆ ಆಗಿರಲಿ, ಎಲ್ಲರ ವರ್ತನೆಯೂ ಹಾಗೇ ಇರುತ್ತದೆ. ನಮಗೆ ಒದಗುವ ಮಿತ್ರರಂತೆ ಕಂಡರೂ ಅವರು ವಾಸ್ತವದಲ್ಲಿ

ನಮಗೆ ಅಹಿತವನ್ನೇ ಉಂಟು ಮಾಡುವ ಶತ್ರುಗಳಂತೆ ವರ್ತಿಸುತ್ತಾರೆ. ಅವರು ಉಪಕಾರ ಮಾಡುವಂತೆ ನಟಿಸಿ, ತಮ್ಮ ಬೇಳೆ ಬೇಯಿಸಿಕೊಂಡು "ಹೊಳೆ ದಾಟಿದ ಮೇಲೆ ಅಂಬಿಗ........." ಎಂಬಂತೆ ನಮ್ಮನ್ನು ನಮ್ಮ ಕರ್ಮಕ್ಕೆ ಬಿಟ್ಟು ಹೊಗುವುದನ್ನು ನೋಡಿದರೆ, ಇವರೇನು ನಮ್ಮನ್ನು ಯಮಸದನಕ್ಕೆ ಕೊಂಡು ಹೋಗುವ ಯಮ ಕಿಂಕರರೋ ಎಂದು ಅನುಮಾನ ಬರುತ್ತದೆ.

ಹಾಗೆ ನಮಗೆ ನೋವುಂಟಾಗುವ ಇವರ ಉಪಕಾರಗಳು, ನಗು ನಗುತ್ತಾ ನಮ್ಮನ್ನು ಕೊಂದಂತೆ ಅಲ್ಲವೇ? ಇವರೆಲ್ಲ ನಮ್ಮ "ಹಿತ ಚಿಂತಕರು" ಅಂದರೆ "ನಮಗೆ ಹಿತವಾದರೆ ಅವರಿಗೆ ಚಿಂತೆಯಾಗುತ್ತದೆಯೆಂತೆ" ಅವರ ಪ್ರಕಾರ ಅವರು ಮಾಡುವುದು ನಮಗೆ ಮಹದುಪಕಾರ. ಆದರೆ ವಾಸ್ತವದಲ್ಲಿ ಅವರು ಮಾಡುವ ಉಪಕಾರಗಳು, ಚೂಪಾದ ಮೊನೆಗಳುಳ್ಳ ಮತ್ತು ಧರಿಸಿದರೆ ನಮ್ಮ ಎದೆಗೆ ಒತ್ತುವಂಥಾ, ಚಿನ್ನದ ಒಡವೆಗಳಂತೆ ಇರುತ್ತದೆ. ನಮಗೆ ಹಿತಮಾಡುವುದು ಬಿಟ್ಟು ನಮಗೆ ತೊಂದರೆಯನ್ನೇ ಕೊಡುತ್ತದೆ.

ತೈತ್ತರೀಯ ಉಪನಿಷತ್ತು, ಅನ್ಯರಿಗೆ ಯಾವುದಾದರೂ ಒಂದು ವಸ್ತುವನ್ನೋ, ಸಲಹೆಯನ್ನೂ, ಸಹಾಯವನ್ನೂ ಕೊಡುವ ವಿಷಯದಲ್ಲಿ ಹೀಗೆ ಹೇಳುತ್ತದೆ. ಶ್ರದ್ದೆಯಿಂದ ಕೊಡು, ಅಶ್ರದ್ದೆಯಿಂದ ಕೊಡಬೇಡ, ಒಳ್ಳೆಯದನ್ನೇ ಕೊಡು, ಹೃತ್ಪೂರ್ವಕವಾಗಿ ಕೊಡು, ಸಂಪೂರ್ಣವಾಗಿ ಕೊಡು, ಹೆದರಿಕೆಯಿಂದ ಕೊಡು, ಹಾಗೆ ಏನು ಕೊಡುವುದು ಎಂದು ಅನುಮಾನ ಬಂದಾಗ, ಪ್ರಾಜ್ಞರನ್ನು ಕೇಳಿ ಯೋಗ್ಯವಾದ ವಸ್ತುವನ್ನು ಕೊಡು" ಎಂದು ಹೇಳುತ್ತದೆ.

ಈ ರೀತಿ ಯೋಚನೆ ಮಾಡಿ, ಒಳ್ಳೆಯ ಉಪಕಾರವನ್ನು ಮಾಡುವವರು ಇಂದು ಯಾರು ಇದ್ದಾರೆ ಹೇಳಿ? ಒಂದು ಕಾಲಕ್ಕೆ "ಪರೋಪಕಾರಂ ಇದಂ ಶರೀರಂ" ಎನ್ನುತ್ತಿದ್ದರು. ಈಗಿನ ಕಾಲಕ್ಕೆ ಪರಾಪಕಾರಂ ಇದಂ ಶರೀರಂ" ಎಂದು ಬದಲಾಯಿಸಿಕೊಳ್ಳುವ ಸ್ಥಿತಿ ಬಂದಿದೆ. ಇಂತಹ ಸ್ಥಿತಿಯಲ್ಲಿ ನಾವು ಪರರಿಂದ ಉಪಕಾರದ ಅಪೇಕ್ಷೆ ಪಡದಂಥಾ ಸ್ಥಿತಿಯನ್ನು ಕರುಣಿಸು ದೇವಾ!!!!" ಎಂದು ಬೇಡುವುದೇ ಒಳ್ಳೆಯದು.

**ಮುಕ್ತಕ-178**

**ದ್ವೇಷರೋಷಗಳವೋಲೆ ನೇಹಮುಂ ಮೋಹಮುಂ ।**
**ಪಾಶವಾಗಲ್ಬಹುದು ನಿನಗೆ ಮೈ ಮರೆಸಿ ||**
**ವಾಸನೆಗಳುರುಬಿ ಚಿತ್ತ ಜ್ವರಗಂಳ ಬಿತ್ತಿ ।**
**ಮೋಸದಲಿ ಕೊಲ್ಲುವುವೋ-ಮಂಕುತಿಮ್ಮ ||**

ದ್ವೇಷರೋಷಗಳವೊಲೆ-ದ್ವೇಷ+ರೋಷಗಳ+ವೊಲೆ, ಪಾಶವಾಗಹುದು=ಪಾಶವು+ಆಗಲು+ಬಹುದು,
ವಾಸನೆಗಳುರುಬಿ=ವಾಸನೆಗಳು+ಉರುಬಿ
ನೇಹಮುಂ=ಸ್ನೇಹವು, ಮೋಹಮುಂ=ಪ್ರೀತಿ ಪ್ರೇಮಗಳು, ಪಾಶವು=ಒರುಳು,
ವಾಸನೆಗಳು=ಅಂಟಿಕೊಳ್ಳುವ ಗುಣಗಳು, ಉರುಬಿ=ಉಕ್ಕಿ ಹರಿದು, ಚಿತ್ತ ಜ್ವರಂಗಳ ಬಿತ್ತಿ=ಮನಸ್ಸಿನಲ್ಲಿ ತಾಪಗಳನ್ನು ಉಂಟುಮಾಡಿ,

ಈ ಜಗತ್ತಿನಲ್ಲಿ ಪರಸ್ಪರ ಸಂಬಂಧಗಳು ದ್ವೇಷ, ರೋಷ, ಪ್ರೀತಿ, ಪ್ರೇಮ, ಅನುರಾಗ, ಮೋಹಗಳಿಂದ ಕೂಡಿದ್ದು ಅವುಗಳು, ನಿನಗೆ ಅರಿವಾಗದಂತೆ ನಿನ್ನ ಕುತ್ತಿಗೆಗೆ ಉರುಳಾಗುವುದು. ಈ ಎಲ್ಲ ಸಂಬಂಧಗಳು ನಿನ್ನ ಮನಸ್ಸಿನಲ್ಲಿ ತಾಪವನ್ನು ಉಂಟುಮಾಡಿ ನಿನಗರಿವಿಲ್ಲದಂತೆಯೇ ನಿನ್ನನ್ನು ಕೊಲ್ಲುತ್ತದೆಯೋ ಎಂದು ಒಂದು ವಾಸ್ತವಿಕ ಸತ್ಯವನ್ನು ಸೂಚ್ಯವಾಗಿ ನಮಗೆ ಅರುಹುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ನಮಗೆ ಯಾರ ಮೇಲೋ ದ್ವೇಷವುಂಟಾಗುತ್ತದೆ, ಮತ್ಯಾರ ಮೇಲೋ ರೋಷವುಂಟಾಗುತ್ತದೆ. ಕೆಲವರನ್ನು ನಾವು ಪ್ರೀತಿಸುತ್ತೇವೆ ಮತ್ಯಾರನ್ನೋ ನಾವು ಮೋಹಿಸುತ್ತೇವೆ. ಈ ಎಲ್ಲ ಭಾವಗಳಿಗೂ ಒಂದು ಕಾರಣವಿಲ್ಲದೆ ಇರಬಹುದು. ಕಾರಣವಿದ್ದರೂ ನಮ್ಮ ಅರಿವಿಗೆ ಬಾರದೆ ಇರಬಹುದು ಅಥವಾ ಬಂದರೂ ಅರ್ಥವಾಗದೆ ಇರಬಹುದು. ಪರಸ್ಪರ ನಂಟಿನ ಅಂಟು ನಮಗರಿವಿಲ್ಲದ ಹಾಗೆಯೇ ಅಂಟಿಕೊಂಡು, ಆ ಅಂಟೇ, ನಮಗೆ ಅರಿವಾಗದಂತೆಯೇ, ನಮ್ಮನ್ನು ತನ್ನ ಪಾಶದಲ್ಲಿ ಸಿಕ್ಕಿಸಿಕೊಂಡುಬಿಡುತ್ತದೆ. ಈ ಪಾಶವೇ ನಮ್ಮ ಜೀವನಕ್ಕೆ-
ಬದುಕಿಗೆ ಮುಳುವಾಗಿಬಿಡಬಹುದು.

ಈ ರೀತಿಯ ಸಂಬಂಧಗಳಿಂದ ಮತ್ತು ಭಾವನಾತ್ಮಕವಾದ ಬಂಧನಗಳಿಂದ ನಮಗೆ ಗೊತ್ತಿಲ್ಲದೆಯೇ, ನಾವು ಒಬ್ಬರಿಗೊಬ್ಬರು ಹೆಣೆದುಕೊಳ್ಳುತ್ತಾ ಹೋಗುತ್ತೇವೆ. ಕೆಲವರ ಒಟ್ಟಿಗೆ ನಮ್ಮ ಬಾಂಧವ್ಯ ಕೆಲ ಕಾಲ ಒಳ್ಳೆಯದಾಗಿದ್ದರೆ ಮತ್ತೆ ಕೆಲಕಾಲ ಕೆಟ್ಟು ಹೋಗುತ್ತದೆ. ದೀರ್ಘಕಾಲ ಉಳಿಯುವ ಸಂಬಂಧಗಳಿರುತ್ತವೆ. ಅಲ್ಪ ಕಾಲದಲ್ಲಿ ಕಡಿದು ಹೋಗುವ ಸ್ನೇಹ ಸಂಬಂಧಗಳೂ ಇರುತ್ತವೆ. ಅನಿವಾರ್ಯ ಸಂಬಂಧಗಳು, ನಿರ್ಬಂಧಿತ ಸಂಬಂಧಗಳು, ಕಾಲ್ಪನಿಕ ಸಂಬಂಧಗಳು, ಹೀಗೆ ಪ್ರತಿ ಮನುಷ್ಯನೂ ಅವನ ಹುಟ್ಟಿನಿಂದ ಮರಣದ ತನಕ, ಅವನಿಗೆ ಬೇಕೋ. ಬೇಡವೋ, ಗೊತ್ತಿದ್ದೋ ಗೊತ್ತಿಲ್ಲದೆಯೋ ಹಲವಾರು ರೂಪಗಳ ಸಂಬಂಧಗಳಿಂದ ಈ ಜಗತ್ತಿಗೆ ಕೊಂಡಿ ಹಾಕಿಕೊಂಡೇ ಇರುತ್ತಾನೆ.

ಈ ಸ್ನೇಹ ಸಂಬಂಧಗಳ ಪರಿಣಾಮ ನಮ್ಮ ಮನಸ್ಸು ಬುದ್ಧಿಗಳ ಮೇಲೆ ಅಗಾಧವಾಗಿ ಆಗಿ ನಮ್ಮ ನೆನಪುಗಳಲ್ಲಿ, ವಾಸ್ತವದಲ್ಲಿ ಮತ್ತು ಯೋಚನೆಗಳಲ್ಲಿ ಆವರಿಸಿಕೊಂಡುಬಿಡುತ್ತದೆ. ತತ್ಕಾರಣ ನಮ್ಮನ್ನು ಒಂದು ಕೋತಿಯಂತೆ





ಆಡಿಸುತ್ತದೆ, ತಲೆ ಕೆಡಿಸುತ್ತದೆ ಮತ್ತು ಹುಚ್ಚು ಹಿಡಿಸುತ್ತದೆ. ಆ ಹುಚ್ಚಿನ ಗುಂಗು ತಲೆಯಲ್ಲಾ ತುಂಬಿ "ನಾವು" ಏನು ಮಾಡುತ್ತಿದ್ದೇವೆ ಎನ್ನುವ ಪರಿವೆಯೇ ಇಲ್ಲದಂತಾಗುತ್ತದೆ. ಏನೋ ಆಗಬೇಕಿದ್ದ ನಾವು, ನಮ್ಮ ವೈಯಕ್ತಿಕ ಸಾಮರ್ಥ್ಯವನ್ನು ಬೆಳಕಿಗೆ ತರಲಾಗದೆ, ಏನೋ ಆಗಿ ಮೋಸ ಹೋಗಿ ಬಿಡುತ್ತೇವೆ. ಈ ಜಗತ್ತಿನಲ್ಲಿ ಕೇವಲ ಬೆರಳೆಣಿಕೆಯಷ್ಟು ಜನಕ್ಕೆ ಮಾತ್ರ ಒಂದು ಸಾರ್ಥಕ್ಯ ಜೀವನ ನಡೆಸುವ ಭಾಗ್ಯ ಆ ಪರಮಾತ್ಮ ಕರುಣಿಸಿರುತ್ತಾನೆ. ಮಿಕ್ಕ ನಾವೆಲ್ಲ "ಸಿಂಬಳದ ಹುಳುವಿನಂತೆ" ಒದ್ದಾಡುತ್ತಿರುತ್ತೇವೆ ಅಲ್ಲವೇ? ವಾಚಕರೆ ಯಾರಿಗೆ ತಾವೇನು ಮಾಡಬೇಕೆಂದುಕೊಳ್ಳುತ್ತಾರೋ ಅದನ್ನು ಮಾಡಲು ಆದರೆ ಅವರೇ ಧನ್ಯರು!!!!

# ಪುಣ್ಯ-ಪಾಪ 179-183

**ಮುಕ್ತಕ-179**

**ಕರುಮ ಬಂದಿದಿರಹುದು ಮೋಹನದ ರೂಪಿನಲಿ |**
**ಕಿರುನಗುವು ಕುಡಿನೋಟ ಕೊಂಕುನುಡಿಗಳು ||**
**ಕರೆದು ತಳ್ಳುವ, ತಳ್ಕರಿಸುತೊಳಗೆ ಕಿಚ್ಚಿಡುವ |**
**ತರಳತೆಯದೇಂ ತಂತ್ರ-ಮಂಕುತಿಮ್ಮ ||**

ಬಂದಿದಿರಹುದು=ಬಂದು+ಇದಿರು+ಇಹುದು, ತಳ್ಕರಿಸುತೊಳಗೆ=ತಳ್ಕರಿಸುತ+ಒಳಗೆ,
ತರಳತೆಯದೇಂ=ತರಳತೆಯು+ಅದು+ಏಂ,
ಕರುಮ=ನಮ್ಮ ಪೂರ್ವ ಕರ್ಮ, ಮೋಹನ=ಮೋಹಕ್ಕೊಳಪಡಿಸುವ, ತಳ್ಕರಿಸುತ=ತಬ್ಬಿಕೊಂಡು,
ತರಳತೆಯು=ಚಪಲತೆಯು

ನಮ್ಮ ಪೂರ್ವ ಕರ್ಮವು ನಮ್ಮನ್ನು ಈ ಜಗತ್ತನ್ನು ಪ್ರೀತಿಸುವಂತೆ ಮಾಡುತ್ತದೆ. ನಮ್ಮನ್ನು ಆಕರ್ಷಿಸುತ್ತದೆ. ಆ ಆಕರ್ಷಣೆಯಲ್ಲಿ ಸಿಕ್ಕು ನಾವು ಜಗದ ಜನರ ಕುಹಕದ ಕಿರುನಗೆ, ತಿರಸ್ಕಾರದ ಕುಡಿನೋಟ ಮತ್ತು ಕೊಂಕು ನುಡಿಗಳಿಗೆ ಬಲಿಯಾಗುತ್ತೇವೆ. ನಮ್ಮನ್ನು ಕರೆದಂತೆ ಮಾಡಿ, ತಬ್ಬಿಕೊಂಡಂತೆ ಮಾಡಿ ಪುನಃ ತಳ್ಳಿಬಿಡುವ ಈ ಚಪಲತೆಯ ಉಪಾಯ ಅಥವಾ ಉದ್ದೇಶ ಏನು ಎಂದು ತಿಳಿಯದಾಗಿದೆ ಎಂದು ಪ್ರಸ್ತಾಪ ಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ನಾವು ಈ ಜಗತ್ತಿಗೆ ನಮ್ಮ ಪೂರ್ವ ಕರ್ಮವನ್ನು ಕಳೆಯಲೆಂದೇ ಬರುತ್ತೇವೆ ಎಂದು ಹೇಳುತ್ತದೆ ನಮ್ಮ ಭಾರತೀಯ ಸಿದ್ಧಾಂತ. ಆ ಕರ್ಮವೇ ಈ ಜಗತ್ತಿನಲ್ಲಿ ಆಸೆ ಮತ್ತು ಆಸ್ಥೆಯನ್ನು ನಮ್ಮ ಮನಸ್ಸುಗಳಲ್ಲಿ ಉಂಟುಮಾಡಿ, ಈ ಜಗತ್ತಿನೊಂದಿಗೆ ನಂಟನ್ನೂ, ನಮಗೆ ಮೋಹವನ್ನೂ ಉಂಟುಮಾಡುತ್ತದೆ. ಹಾಗಾಗಿ ನಮ್ಮ ಎಲ್ಲ ಕಾರ್ಯ ಕಲಾಪಗಳೂ ನಡೆಯುತ್ತವೆ. ಅಕಸ್ಮಾತ್ ಹಾಗಿಲ್ಲದಿದ್ದಿದ್ದರೆ, ಏನಾಗುತ್ತಿತ್ತು ಎಂದು ಊಹಿಸಲೂ ಕಷ್ಟ.

ಈ ಜಗತ್ತಿನೊಂದಿಗಿನ ಜನರೊಡನೆ ಪರಸ್ಪರ ಸಂಬಂಧಗಳು ಹೇಗಿರುತ್ತವೆಯೆಂದು ಒಮ್ಮೆ ನೋಡಿದರೆ, ನಾವು ವಸ್ತು ವಿಷಯ ಮತ್ತು ವ್ಯಕ್ತಿಗಳೊಂದಿಗೆ, ಆಕರ್ಷಿತರಾಗುತ್ತೇವೆ, ಮೋಹಿತರಾಗುತ್ತೇವೆ, ಅಂಟಿಕೊಳ್ಳುತ್ತೇವೆ. ಈ ಅಂಟಿಕೊಳ್ಳುವಿಕೆಯಿಂದ ವಸ್ತು ವಿಷಯ ಮತ್ತು ವ್ಯಕ್ತಿಗಳೊಂದಿಗೆ ಸಂಬಂಧವೇರ್ಪಟ್ಟು ನಾವು ಬಹಳ

ಸಂಕಷ್ಟಗಳಲ್ಲಿ ಸಿಕ್ಕಿಕೊಳ್ಳುವ ಸಾಧ್ಯತೆಗಳೇ ಹೆಚ್ಚು. ಮೊದಲು ಒಂದು ವಸ್ತು ವಿಷಯ ಮತ್ತು ವ್ಯಕ್ತಿಗಳೊಂದಿಗೆ ಸಂಬಂಧವನ್ನು ಬೆಳೆಸಿಕೊಳ್ಳುತ್ತೇವೆ, ನಮ್ಮ ಆಸೆ ಆಕಾಂಕ್ಷೆಗಳನ್ನು ಅದರೊಟ್ಟಿಗೆ ಗಂಟು ಹಾಕಿಕೊಳ್ಳುತ್ತೇವೆ. ಕೆಲ ದಿನಗಳ ಬಳಿಕ ನಮಗೆ ನಿಜ ಸ್ಥಿತಿ ಅರ್ಥವಾಗುತ್ತದೆ. ಅದನ್ನು ಬಿಡುತ್ತೇವೆ, ಮತ್ತೊಂದಕ್ಕೆ ಅಂಟಿಕೊಳ್ಳುತ್ತೇವೆ.

ವ್ಯಕ್ತಿಗಳೊಂದಿಗಂತೂ ಈ ವಿಷಯ ಬಹಳ ಸತ್ಯ. "familiarity breeds contempt" ಎನ್ನುವ ಮಾತಿದೆ. ಹಾಗೆಯೇ ಮೊದಲು ಆಕರ್ಷಣೆ, ಅದನ್ನು ಪಡೆದುಕೊಳ್ಳುವ ಆಸೆ, ಪಡೆದ ಮೇಲೆ ನಿಜರೂಪದ ಅರಿವಾದಾಗ, ನಿರಾಸೆ, ಅಸಹನೆ, ಅಸಹ್ಯ, ನೋವು ಎಲ್ಲ ಉಂಟಾಗುತ್ತದೆ. ನಮ್ಮ ವೈಫಲ್ಯವನ್ನು ಕಂಡು ನಗುವವರು, ಕುಟಿಲವಾಡುವವರು, ಅಣಕವಾಡುವವರು, ನಮ್ಮನ್ನು ಅಪ್ಪಿಕೊಂಡು ಆಪ್ಯಾಯತೆ ತೋರಿದವರು ನಮ್ಮನ್ನು ದೂಡುವುದು, ನಮ್ಮಿಂದ ದೂರಾಗುವುದು ಸರ್ವೇ ಸಾಮಾನ್ಯ ಎಲ್ಲರ ಜೀವನದಲ್ಲೂ ನಡೆಯುತ್ತದೆ.

ಹೀಗೆ ದಿನ ದಿನಕ್ಕೆ ಬದಲಾಗುವ ನಮ್ಮ ಸ್ಥಿತಿ ಮತ್ತು ನಮ್ಮ ಸುತ್ತಲಿನ ಜನಗಳ ವರ್ತನೆಗೆ ಕಾರಣವೇನೆಂದು ಯೋಚಿಸಿದರೆ ನಮಗೆ ಸರಿಯಾದ ಉತ್ತರ ಸಿಗುವುದಿಲ್ಲ. ಬಹಳಷ್ಟು ಸಾರಿ ನಾವು ಪರರನ್ನು ನಮ್ಮ ಅನಿಷ್ಟಕ್ಕೆ ಕಾರಣವಾಗಿಸುತ್ತೇವೆ, ಮತ್ತೆ ಕೆಲ ವೇಳೆ ನಮ್ಮನ್ನೇ ದೂಷಿಸಿಕೊಳ್ಳುತ್ತೇವೆ. ಆವೇಶದಲ್ಲಿ ಹಳಹಳಿಸುತ್ತೇವೆ. ಆದರೆ ಸ್ಪಷ್ಟ ಕಾರಣ ನಮಗೆ ಕಾಣುವುದಿಲ್ಲ. ಆಗ "ಅಯ್ಯೋ ನಮ್ಮ ಕರ್ಮಕೆಟ್ಟಿತ್ತು" ಎಂದು ಎಲ್ಲವನ್ನೂ ನಮ್ಮ ಕರ್ಮಕ್ಕೆ ಅಂಟಿಸಿ ಬಿಡುತ್ತೇವೆ. ವಾಚಕರೆ ಇದು ಎಲ್ಲರ ಸ್ಥಿತಿ. ಯಾರಿಗೂ ಇದರಿಂದ ವಿನಾಯತಿ ಇಲ್ಲ.

**ಮುಕ್ತಕ-180**

**ಮೃತ್ಯು ತಾಂ ಬಂದು ಮೋಹಿನಿಯ ರೂಪದಿ ನಿನ್ನ |**
**ಚಿತ್ತವನು ಸೆರೆವಿಡಿದು ನೆತ್ತರನು ಬಸಿದು ||**
**ನಿತ್ಯ ನಿನ್ನಸುವ ಲವ ಲವ ಪೀರುತಲಿ ದೀರ್ಘ |**
**ಹತ್ಯೆಯಲಿ ಹರುಷಿಪಳೋ-ಮಂಕುತಿಮ್ಮ ||**

ನಿನ್ನಸುವ=ನಿನ್ನ+ಅಸುವ, ಅಸು=ಪ್ರಾಣ

ಪಿಶಾಚಿಗಳಲ್ಲಿ ಮೋಹಿನಿ ಎಂಬುದು ಒಂದು ಹೆಣ್ಣು ರೂಪಿನ ಪಿಶಾಚಿ, ಅದು ಅತೀ ಸುಂದರವಾಗಿ ತನ್ನ ಪಾಶಕ್ಕೆ ಸಿಕ್ಕವನ ರಕ್ತ, ವೀರ್ಯಗಳನ್ನೆಲ್ಲ ಕೊಂಚ ಕೊಂಚವಾಗಿ ಹೀರಿ ಶಕ್ತಿ ಹೀನನನ್ನಾಗಿಸಿ ದೀರ್ಘಕಾಲ ನರಳುವಂತೆ ಮಾಡಿ, ಕಡೆಗೆ ಸಾವಿನ ತೆಕ್ಕೆಗೆ ನೂಕುತ್ತಾಳೆ. ಇದು ಈ ಮುಕ್ತಕದ ಹೂರಣ. ನಾವೆಲ್ಲಾ ಹೇಗೆ ಈ ಜೀವನದ "ಮೋಹಿನೀ" ಬಲೆಯಲ್ಲಿ ಸಿಕ್ಕು ನಮ್ಮ ಬಾಳನ್ನು ಅಳಿವಿನೆಡೆಗೆ ತೆಗೆದುಕೊಂಡು ಹೋಗುತ್ತಿದ್ದೇವೆ ಎಂದು ಸ್ಪಷ್ಟವಾಗಿ ಬರೆದಿದ್ದಾರೆ ಮಾನ್ಯ ಗುಂಡಪ್ಪನವರು.

ಇಲ್ಲಿ ಮೋಹಿನಿ ಎಂದರೆ, ನಾವು ಯಾವುದನ್ನು ಮೋಹಿಸಿ, ಯಾವುದರ ಹಿಂದೆ ಓಡುತ್ತೇವೆಯೋ ಅದೇ ಮೋಹಿನಿ, ಈ ನಮ್ಮ ಇಷ್ಟಗಳು ನಮ್ಮನ್ನು ಕಷ್ಟದ ಸಂಕೋಲೆಯಲ್ಲಿ ಸಿಕ್ಕಿಸುತ್ತದಲ್ಲ, ಆ ಕಷ್ಟಗಳೇ ನಮ್ಮನ್ನು





ಪೀಡಿಸುವ ಪಿಶಾಚಿಗಳು. ಜೀವನದಲ್ಲಿ ನಾವು ಪ್ರತಿನಿತ್ಯ ಓಡುತ್ತಿರುತ್ತೇವೆ, ಯಾವುದಾವುದರ ಹಿಂದೆಯೋ ಓಡುತ್ತಿರುತ್ತೇವೆ. ಅವುಗಳು ನಮಗೆ ಸತ್ಯವಾಗಿ ಅವಶ್ಯವೋ ಅಲ್ಲವೋ, ಹಿತವೋ, ಅಹಿತವೋ, ಸಾಧ್ಯವೋ ಅಸಾಧ್ಯವೋ ಎಂಬುದರ ಪರಿವೆ ಮತ್ತು ವಿವೇಚನೆಯಿಲ್ಲದೆ ಓಡುತ್ತಿರುತ್ತೇವೆ. ಓಡಿ ಓಡಿ ಅಲ್ಲಿ ಏನನ್ನೂ ಪಡೆಯದೆ, ಆದರೂ ಏನನ್ನೋ ಸಾಧಿಸಿದೆವೆಂಬ ಭಾವದಲ್ಲಿ ಬೀಗುತ್ತಾ, ಶಕ್ತಿಯೆಲ್ಲಾ ಕುಂದಿ, ಸುಸ್ತಾಗಿ, ಸಾವಿನ ತೆಕ್ಕೆಗೆ ಸೇರುತ್ತೇವೆ. ಇದು ಬಹುಶಃ ಎಲ್ಲರ ಜೀವನದ ಶೈಲಿಯೂ ಹೌದು.

ನಮ್ಮ "ಬೇಕು"ಗಳು ನಮ್ಮನ್ನು ಈ ಜಗತ್ತಿಗೆ ಬಿಡಿಸಲಾರದ ನಂಟಿಂದ ಅಂಟಿಸಿ ಬಿಡುತ್ತದೆ. ಗಾಯದ ಮೇಲೆ ಅಂಟಿಸಿದ ಪಟ್ಟಿಯಂತೆ, ಗಾಯ ಮಾಗುವವರೆಗೆ ತೆಗೆಯುವಹಾಗಿಲ್ಲ. ತೆಗೆಯಲು ಪ್ರಯತ್ನಪಟ್ಟರೆ ಗಾಯ ಮತ್ತೆ ವ್ರಣವಾಗುತ್ತದೆ. ಗಾಯ ಮಾಗಬೇಕು, ಮಾಗಿದರೆ ಮೇಲಂಟಿಸಿದ ಪಟ್ಟಿ ತಾನೇ ತಾನಾಗಿ ಕಳಚಿಕೊಳ್ಳುತ್ತದೆ. ಹಾಗೆಯೇ ನಾವೂ ಸಹ ಮಾಗಿದರೆ, ಅಂದರೆ ಆಂತರಿಕವಾಗಿ ಪಕ್ವವಾದರೆ, ಈ "ಬೇಕು"ಗಳು ಮಾಡುವ ಗಾಯ ಮಾಗುತ್ತದೆ.

ನೋವಿಲ್ಲದ ಸ್ಥಿತಿಗೆ ತಲುಪಬಹುದು. ಆದರೆ "ಹರಿದಾಡುವಂಥಾ ಮನವ ನಿಲಿಸುವುದು ಬಲು ಕಷ್ಟ' ಎಂದು ದಾಸರು ಅಪ್ಪಣೆ ಕೊಡಿಸಿದ್ದಾರೆ. ಇಂತಹ ಮನಸ್ಸನ್ನು ಪಕ್ವವಾಗಿಸಬೇಕು. ಈ "ಮೋಹಿನಿ"ಯ ಹಿಡಿತದಿಂದ ಹೊರಬರಬೇಕು.

"ಒಂದೇ ಸಮಯದಲ್ಲಿ ಒಂದೇ ಸ್ಥಳದಲ್ಲಿ ಎರಡು ವಸ್ತುಗಳು ಇರಲು ಸಾಧ್ಯವಿಲ್ಲ" ಇದು ಭೌತಶಾಸ್ತ್ರದ ಸಿದ್ಧಾಂತ. ಅದರ ಪ್ರಕಾರ, 'ಮೋಹಿನಿ'ಗೆ ವಿರುದ್ಧವಾದ ನಿರ್ಲಿಪ್ತತೆಯ ದೇವತೆಯನ್ನು ಮನಸ್ಸಿನಲ್ಲಿ ಪ್ರತಿಷ್ಠಾಪಿಸಿದರೆ. ಆ ಪಿಶಾಚಿ, ಓಡುವ ಸಂಪೂರ್ಣ ಸಾಧ್ಯತೆ ಖಂಡಿತ ಇದೆ. ಪ್ರಯತ್ನ ಮಾಡಬೇಕು ಅಷ್ಟೇ. ವಾಚಕರೆ ನಾವು ನಮ್ಮ ಪೂರ್ವ ಕರ್ಮದ ಅನುಸಾರವಾಗಿ ಏನಾದರೂ ಮಾಡುತ್ತಲೇ ಇರಬೇಕು. ಆದರೆ ನಮ್ಮನ್ನು ಸನ್ಮಾರ್ಗಕ್ಕೆ
ಕೊಂಡು ಹೋಗುವ ಕೆಲಸ ಮಾಡಿದರೆ, ಜೀವನ ಆನಂದದಾಯಕವಾಗಿರಬಹುದು.

**ಮುಕ್ತಕ-181** **ಕ್ಷಣವೊಂದರೊಳೆ ಪೂರ್ತಿ ಕೊಲ್ಲುವುದು ಯಮಶೂಲ |**
**ಕ್ಷಣವನುಕ್ಷಣ ಕೊಲ್ಲುವುವು ಮೋಹಮಮತೆ ||**
**ಕುಣಿಕೆಯನು ನಿನ್ನ ಕೊರಳಿಗೆ ಹೂಡಿ ಚಿರಕಾಲ |**
**ವಣುವಣುವೆ ಬಿಗಿಯುವುವೋ-ಮಂಕುತಿಮ್ಮ ||**

ಕ್ಷಣವೊಂದರೊಳೆ=ಕ್ಷಣ+ಒಂದರೊಳೆ, ಕ್ಷಣವನುಕ್ಷಣ=ಕ್ಷಣ+ಅನುಕ್ಷಣ, ವಣುವಣುವೆ=ಅಣು+ಅಣುವೆ

ಯಮನ ಶೂಲ ಕ್ಷಣ ಮಾತ್ರದಲ್ಲಿ ಒಂದೇ ಬಾರಿ ಕೊಲ್ಲುವುದು. ಆದರೆ ಈ ಜಗತ್ತಿನ ಮೋಹವು ನಮ್ಮ ಕುತ್ತಿಗೆಗೆ ಕುಣಿಕೆ ಹಾಕಿ ಅನುದಿನವೂ ಕ್ಷಣ ಕ್ಷಣವೂ ನಮ್ಮನ್ನು ಸೆಳೆಯುತ್ತಾ, ಕೊಲ್ಲುತ್ತಲೇ ಇರುತ್ತದೆ ಎಂದು ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ ಪ್ರಸ್ತಾಪ ಮಾಡುತ್ತಾರೆ.

ನಮ್ಮ ಜೀವನದಲ್ಲಿ ನಾವು ಬಹಳಷ್ಟು ವ್ಯಕ್ತಿ, ವಿಷಯ ಮತ್ತು ವಸ್ತುಗಳಿಗೆ ಅಂಟಿಕೊಂಡಿರುತ್ತೇವೆ. ಕೆಲವಕ್ಕೆ ನಮ್ಮ ಇಷ್ಟದಿಂದ ಮತ್ತೆ ಕೆಲವಕ್ಕೆ ಅನಿವಾರ್ಯತೆಯಿಂದ. ದೈಹಿಕ, ಮಾನಸಿಕ ಮತ್ತು ಭೌತಿಕ ಸಂಬಂಧಗಳಿಂದ ನಮ್ಮ ನಂಟು ಈ ಜಗತ್ತಿನೊಂದಿಗೆ ನಮ್ಮ ಹುಟ್ಟಿನಿಂದ ಅಂತ್ಯದವರೆಗೆ ನಿರಂತರವಾಗಿರುತ್ತದೆ. ಅನ್ಯ ಮಾರ್ಗವಿಲ್ಲ.

ಇದು ಸರಿಯೇ ಎಂದು ಯೋಚಿಸಿದರೆ, ಹೌದು ಈ ಬಂಧನಗಳಿಲ್ಲದೆ ಇದ್ದರೆ ಬದುಕು ನೀರಸವಾಗುತ್ತದೆ. ಆದರೆ ಯಾವುದೇ ಬಂಧನಗಳು ತಾವೇ ತಾವಾಗಿ ಉಂಟಾಗುವುದಿಲ್ಲ. ನಾವು ಹೋಗಿ ಅದನ್ನು ಹಿಡಿದುಕೊಳ್ಳುತ್ತೇವೆ. ಮೊದಲು ನಾವು ಅದನ್ನು ಇಷ್ಟಪಡುತ್ತೇವೆ. ನಂತರ ಅದು ನಮ್ಮನ್ನು ಬಿಡದೆ ಹಿಡಿದುಕೊಂಡುಬಿಡುತ್ತದೆ. ಇಷ್ಟವಿರಲಿ ಅಥವಾ ಇಲ್ಲದಿರಲಿ ಅದರೊಂದಿಗೆ ಬದುಕು ಅನಿವಾರ್ಯ. ಅದರಿಂದ ಬಿಡುಗಡೆ ಅಸಾಧ್ಯವಲ್ಲ ಆದರೆ, ಅಷ್ಟು ಸುಲಭವಲ್ಲ.

ನಮ್ಮ ಈ ಸಂಬಂಧಗಳು ಎಲ್ಲಿಯ ತನಕ ತಮ್ಮ ಶುದ್ಧತೆಯನ್ನು ಉಳಿಸಿಕೊಳ್ಳುತ್ತವೋ, ಅಲ್ಲಿಯ ತನಕ ಅವು ಎಲ್ಲರಿಗೂ ಆನಂದವನ್ನು ನೀಡುತ್ತಿರುತ್ತವೆ. ಎಂದು ಈ ಬಂಧಗಳಿಗೆ, ಸ್ವಾರ್ಥದ, ಮೋಹದ, ಅಹಂಕಾರದ, ದೈನ್ಯತೆಯ, ಲೇಪನವಾಗುತ್ತದೋ ಅಂದು ಅಪ್ಯಾಯಮಾನವಾಗಿದ್ದ ಸಂಬಂಧಗಳು ಕಲುಷಿತವಾಗಿ ನೋವಿಗೆ ಕಾರಣವಾಗುತ್ತದೆ. ಸುಲಭದಲ್ಲಿ ಬಿಡಲಾಗದ ಬಂಧ-ಸಂಬಂಧಗಳಂತೂ ಪ್ರತಿನಿತ್ಯ ವೇದನೆಯನ್ನು ಕೊಡುವ ಕುತ್ತಿಗೆಯ ಕುಣಿಕೆಯಂತಾಗುತ್ತದೆ. ನಮ್ಮನ್ನು ಜಗ್ಗಿ ಜಗ್ಗಿ ಹತಾಶರನ್ನಾಗಿಸುತ್ತದೆ. ಇದಕ್ಕೆ ಕಾರಣ ನಾವು ಕಟ್ಟಿ ಕೊಂಡ ಸಂಬಂಧಗಳು. ಇದನ್ನೇ ಶ್ರೀ ಕೃಷ್ಣ ಪರಮಾತ್ಮ ಭಗವದ್ಗೀತೆಯಲ್ಲಿ "ಸಂಗಾತ್ ಸಂಜಾಯತೆ ಕಾಮ, ಕಾಮಾತ್ ಕ್ರೋದೋಭಿಜಾಯತೆ, ಕ್ರೋದಾತ್ ಭವತಿ ಸಂಮೋಹಃ, ಸಂಮೋಹಾತ್ ಸ್ಮೃತಿ ವಿಭ್ರಮಃ, ಸ್ಮೃತಿ ವಿಭ್ರಮಾತ್ ಬುದ್ಧಿನಾಶಃ, ಬುದ್ಧಿನಾಶೋ ಪ್ರಣಶ್ಯತಿ." ಎನ್ನುತ್ತಾನೆ. ಮೊದಲು ಸಂಗ, ನಂತರ ಆಸೆ, ದುರಾಸೆ, ಮೋಹ, ಮದ, ಅವಿವೇಕ ಮತ್ತು ಬುದ್ಧಿನಾಶ. ಹೀಗೆ ಒಂದಕ್ಕೊಂದು ಅಂಟಿಕೊಂಡು, ಸಾಂಕ್ರಾಮಿಕ ರೋಗದಂತೆ ನಮ್ಮ ಮನಸ್ಸು ಬುದ್ಧಿ ದೇಹಗಳನ್ನಾದರಿಸಿ, ನಮ್ಮನ್ನು ಅಧೋಗತಿಗೆ ತಳ್ಳುವುದು ಈ ಬಂಧನಗಳು.

ವಾಚಕರೆ, ಈ ಜಗತ್ತಿನಲ್ಲಿ ಹುಟ್ಟಿದ ಮೇಲೆ ಈ ಬಂಧನಗಳಿಂದ ಬಿಡುಗಡೆ ಇಲ್ಲ. ತಾವೇ ತಾವಾಗಿ ಉಂಟಾದ ಬಂಧನಗಳಿಂದ ಅಷ್ಟಾಗಿ ನಮಗೆ ತೊಂದರೆಗಳಿಲ್ಲ. ಬರುತ್ತವೆ ಹೋಗುತ್ತವೆ. ಆದರೆ ನಾವು ಇಷ್ಟಪಟ್ಟು ಮೋಹದಿಂದ ಗಂಟು ಹಾಕಿಕೊಂಡ ಬಂಧನಗಳಿವೆಯಲ್ಲ, ಅವು ನಮಗೆ ಅತೀ ಹಿಂಸೆಯನ್ನು ಕೊಡುತ್ತವೆ. ಹಾಗಾಗಿ ನಮ್ಮ ಜೀವನವನ್ನು ಆನಂದಮಯವಾಗಿಸಿಕೊಳ್ಳಬೇಕಾದರೆ, ನಾವಾಗೇ ಬಂಧನಗಳಿಗೆ ಸಿಕ್ಕಿಕೊಳ್ಳದೆ, ಸ್ವಾಭಾವಿಕವಾಗಿ ಉಂಟಾದ ಬಂಧಗಳನ್ನು ಒಂದು "ನಿರ್ಲಿಪ್ತತೆ" ಯಿಂದ ಅನುಭವಿಸಿದರೆ ಸುಖ, ಇಲ್ಲದಿದ್ದರೆ ಗುಂಡಪ್ಪನವರು ಹೇಳಿದ ಹಾಗೆ ಒಂದು ನರಕ ಯಾತನೆ. ಅದನ್ನು ಅನುಭವಿಸಿದವರಿಗೆ ಮಾತ್ರ ಗೊತ್ತು ಅದರ ನೋವು.

"ಅತಿಯಾಗಿ ಯಾವುದಕ್ಕೂ ಅಂಟದೆ "ಮಿತಿ" ಗಳನ್ನು ಅರಿತು ಬಾಳಿದರೆ “ಹಿತ” .

**ಮುಕ್ತಕ-182**

**ಋಣದಜಾಲವನಂತ, ಕರುಮಚಕ್ರವನಂತ |**
**ಜನುಮಜನುಮದ ಕಥೆಯ ತಂತುಗಳನಂತ ||**
**ಅನವರತ ನೂತನವಿದೆನಿಪ ವಿಶ್ವದ ತಂತ್ರ |**
**ಬಿನದ ಪರಬೊಮ್ಮಂಗೆ-ಮಂಕುತಿಮ್ಮ ||**

ಋಣದಜಾಲವನಂತ=ಋಣದ+ಜಾಲವು+ಅನಂತ, ಕರುಮಚಕ್ರವನಂತ=ಕರುಮ+ಚಕ್ರವು+ಅನಂತ, ತಂತುಗಳನಂತ=ತಂತುಗಳು+ಅನಂತ, ನೂತನವಿದೆನಿಪ=ನೂತನವು+ಇದು+ಎನಿಪ





ಜಾಲವು=ಬಲೆಯು, ಕರುಮ=ಕರ್ಮ, ತಂತು=ಎಳೆ, ಹಗ್ಗ, ದಾರ, ಅನವರತ=ಎಡೆಬಿಡದೆ, ನಿರಂತರ, ನೂತನವು=ಹೊಸದು, ಬಿನದ=ವಿನೋದ, ಪರಬೊಮ್ಮಂಗೆ=ಪರಮಾತ್ಮನಿಗೆ.

ಈ ಜಗತ್ತಿನೊಂದಿಗೆ ನಮ್ಮ ಋಣದ ಸಂಬಂಧ ಕೊನೆಯಿಲ್ಲದ್ದು. ನಾವು ಅದರೊಳಗೆ ಇದ್ದು, ನಮ್ಮನ್ನೂ ಸೇರಿಸಿಕೊಂಡು ಸುತ್ತುವ ಕರ್ಮಚಕ್ರದ ಸುತ್ತಾಟ, ಕೊನೆಯಿಲ್ಲದ್ದು. ಒಂದು ಜನ್ಮದಿಂದ ಇನ್ನೊಂದು ಜನ್ಮಕ್ಕೆ ನಮ್ಮನ್ನು ಹೆಣೆದುಕೊಳ್ಳುವ ಸಂಕೋಲೆಗಳೂ ಕೊನೆಮೊದಲಿಲ್ಲದ್ದು. ಆದರೂ ಪ್ರತೀ ಬಾರಿಯೂ ನಮಗೆ ಇದು ಹೊಸದು ಎಂದು ಅನಿಸುವ ಈ ವಿಶ್ವದ ತಂತ್ರವನ್ನು ಆ ಪರಮಾತ್ಮ ತನ್ನ ವಿನೋದಕ್ಕಾಗಿಯೇ ಸೃಷ್ಟಿಸಿಕೊಂಡಂತಿದೆ, ಎಂದು ವೇದಾಂತದ ಒಂದು ಸೂಕ್ಷ್ಮ ವಿಚಾರವನ್ನು ಪ್ರಸ್ತಾಪಿಸುತ್ತಾರೆ, ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ನಮ್ಮ ಕರ್ಮಶೇಷದ ಬಲೆಯ ವಿಸ್ತಾರ ಅಂತ್ಯವಿಲ್ಲದ್ದು. ಹಿಂದಿನ ಕರ್ಮ ಇಂದು ಅನುಭವಿಸಬೇಕು. ಇಂದಿನ ಕರ್ಮ ನಾಳೆಗೆ. ಹೀಗೆ ಹಳೆಯದನ್ನು ಕಳೆಯುತ್ತಾ ಹೊಸದನ್ನು ಸಂಚಯನ ಮಾಡುತ್ತಾ, ನಿರಂತರವಾಗಿ ಈ ಕರ್ಮದ

ಬಲೆಯಲ್ಲಿ ನಾವು ಸಿಕ್ಕಿಹಾಕಿಕೊಂಡಿದ್ದೇವೆ. ಈ ನಮ್ಮ ಪೂರ್ವಜನ್ಮದ ಮತ್ತು ಈ ಜನ್ಮದ ಪೂರ್ವ ಕರ್ಮವೇ ನಾವು ಹೊತ್ತು ತರುವ ಅಥವಾ ಸಂಚಯನ ಮಾಡುವ ಋಣ, ಅಂದರೆ ಸಾಲ. ಈ ಸಾಲ ತೀರುವುದೇ ಇಲ್ಲ. ಹಳೆಯ ಸಾಲ ತೀರಿಸುವುದು, ಹೊಸ ಸಾಲ ಮಾಡುವುದು. ಒಂದು ಸಾಲಕ್ಕೆ ಮತ್ತೊಂದು ಸಾಲದ ಕೊಂಡಿ, ಹಿಂದಿನ ಜನ್ಮದ ಸಂಚಿತ ಕರ್ಮವನ್ನು ಈ ಜನ್ಮಕ್ಕೆ ತಂದು ಅದನ್ನು ಅನುಭವಿಸುತ್ತಾ, ಮತ್ತೆ ಈ ಜನ್ಮದಲ್ಲಿ ಹೊಸ ಹೊಸ ಕರ್ಮಗಳನ್ನು ಸಂಚಯನ ಮಾಡುತ್ತಾ, ಮುಂದಿನ ಜನ್ಮಕ್ಕೆ ಶೇಷ ಕರ್ಮವನ್ನು ಹೊತ್ತು ಹೋಗುವುದೇ ವಿಧಿ.

ಆದರೂ ಪ್ರತೀ ಜನ್ಮದಲ್ಲೂ ನಮ್ಮ ಜೀವನ, ಹುಟ್ಟು, ಸ್ನೇಹ, ಬಾಂಧವ್ಯಗಳು, ಈ ಜಗತ್ತು, ಹೀಗೆ ಎಲ್ಲವೂ, ಹೊಸದೆಂಬ ಒಂದು ಭಾವ. ಎಷ್ಟು ಜನ್ಮ ಕಳೆದಿದ್ದೇವೋ, ಇನ್ನೂ ಎಷ್ಟು ಜನ್ಮ ಕಳೆಯಬೇಕೋ ನಮಗರಿವಿಲ್ಲ, ನಮ್ಮರಿವಿಗೆ ಬರುವುದೂ ಇಲ್ಲ. ಇದು ಆ ಪರಮಾತ್ಮನಿಗೊಂದು ವಿನೋದದ ಆಟ. ನಮ್ಮನ್ನಾಡಿಸುವುದೇ ಅವನಿಗೊಂದು ವಿನೋದ. ಆದರೆ, ಇದರಿಂದ ಮುಕ್ತಿ ಇಲ್ಲವೇ? ಎಂದರೆ, ಉಂಟು. ಎಲ್ಲ ಕರ್ಮಗಳನ್ನೂ ಮಾಡುತ್ತಾ 'ನಾನು ಮಾಡುತ್ತಿಲ್ಲ-ಇದು ಅವನಾಟ, ನಾನೊಂದು ಕೈಗೊಂಬೆ-ಅವನಿಚ್ಛೆಯಂತೆ ಏನು ಬೇಕೋ ಅದನ್ನು ಮಾಡಿಸಲಿ" ಎಂದು ಒಂದು ನಿರ್ಲಿಪ್ತ ಭಾವ ತಳೆದರೆ, ನಾವು ಮುಕ್ತರಾದಂತೆಯೇ ಅಲ್ಲವೇ? ಯಾವುದರಿಂದ ಮುಕ್ತಿ? ಕರ್ಮದಿಂದಲ್ಲ, ಆದರೆ ಕರ್ಮದ ಬಂಧನದಿಂದ.

ಇದನ್ನೇ ರಾಜ ಕುಲಶೇಖರರು ತಮ್ಮ "ಮುಕುಂದಮಾಲ ಸ್ತೋತ್ರ ರತ್ನದಲ್ಲಿ" "ಯದ್ ಯದ್ ಭವ್ಯಂ ಭವತು ಭಗವನ್ ಪೂರ್ವ ಕರ್ಮಾನುರೂಪಂ, ಏತತ್ ಪ್ರಾರ್ತ್ಯಂ ಮಮ ಬಹುಮತಂ ಜನ್ಮ ಜನ್ಮಾಂತರೇಪಿ, ತ್ವತ್ ಪಾದಾಂಬೋರುಹ ಯುಗಗತಾ ನಿಶ್ಚಲಾ ಭಕ್ತಿರಸ್ತು" ಎಂದರು. ಅಂದರೆ "ಹೇ ಪರಮಾತ್ಮ ಜನ್ಮ ಜನ್ಮಾಂತರದ ಕರ್ಮಶೇಷದ ಅನುಗುಣವಾಗಿ ನನಗೆ ಈ ಜನ್ಮದಲ್ಲಿ ಏನೆಲ್ಲಾ ನಡೆಯಬೇಕೋ, ಅದೆಲ್ಲ ನಡೆಯಲಿ, ಅದರಿಂದ ಆಗುವ ಎಲ್ಲ ಪರಿಣಾಮಗಳನ್ನೂ ನಾನು ಅನುಭವಿಸಲು ತಯಾರಾಗಿದ್ದೇನೆ. ಆದರೆ ನಾನು ಹಾಗೆ ಅನುಭವಿಸುವಾಗ, ನನ್ನ ಮನಸ್ಸು ಮಾತ್ರ ನಿನ್ನ ಪಾದಾರವಿಂದದಲ್ಲಿ ನಿಲ್ಲಲಿ" ಎಂದು ಬೇಡುತ್ತಾರೆ.

ಮಹಾನ್ ಭಕ್ತರಾದ ಅವರಿಗೆ ಅಂತಹ ಭಾವ ಬಂದದ್ದು ಸಹಜವೇ. ವಾಚಕರೆ, ಅಂತಹ ಭಾವ ನಮಗೂ ಬಂದರೆ ನಾವೂ ಈ ಕರ್ಮಶೇಷದ ಬಂಧನದಿಂದ ಮುಕ್ತರಾಗಬಹುದು.

**ಮುಕ್ತಕ-183** **ಪುಣ್ಯದಿಂದ ಬಂದ ಸಿರಿ ಮದಮೋಹಗಳ ಮೂಲ |**
**ಖಿನ್ನನಾಗಿಪ ಪಾಪಫಲವಾತ್ಮಶುದ್ಧಿ ||**
**ಅನ್ಯೋನ್ಯಜನಕಗಳು ಪುಣ್ಯಪಾಪಗಳಿಂತು |**
**ಧನ್ಯನುಭಯವಮೀರೆ-ಮಂಕುತಿಮ್ಮ ||**

ಖಿನ್ನನಾಗಿಪ=ಖಿನ್ನನ್+ಆಗಿ, ಪಾಪಫಲವಾತ್ಮಶುದ್ಧಿ=ಪಾಪ+ಫಲವು+ಆತ್ಮಶುದ್ಧಿ,
ಧನ್ಯನುಭಯವ=ಧನ್ಯನು+ಉಭಯವ
ಖಿನ್ನ=ನೊಂದವ, ಅನ್ಯೋನ್ಯಜನಕಗಳು=ಪರಸ್ಪರ ಉಂಟಾಗುವವು, ಉಭಯವ=ಎರಡನ್ನೂ

ಒಬ್ಬ ವ್ಯಕ್ತಿ ಮಾಡಿದ ಪುಣ್ಯಕಾರ್ಯದಿಂದ ಅವನಿಗೆ ಸುಖ ಸಂಪತ್ತುಗಳು ಆನಂದಗಳು ಲಭಿಸುವುವು. ಹಾಗೆಯೆ ಅವನು ಮಾಡಿದ ಪಾಪಕರ್ಮಗಳಿಂದ ನೋವು, ದುಃಖ, ಕಷ್ಟ ಪಡೆಯುವನು. ಆದರೆ ಈ ಪಾಪ ಪುಣ್ಯಗಳನ್ನೂ ಮೀರಿ ಅವುಗಳ ಪರಿಧಿಯಿಂದ ಮೇಲೇರುವವನೇ ಧನ್ಯ ಎಂದು ಉಲ್ಲೇಖಿಸುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಈ ಜಗತ್ತಿನಲ್ಲಿ ಒಳ್ಳೆಯದನ್ನು ಮಾಡಿದರೆ ಪುಣ್ಯ, ಕೆಟ್ಟದ್ದನ್ನು ಮಾಡಿದರೆ ಪಾಪ ಎಂಬ ಒಂದು ಪ್ರತೀತಿ ಇದೆ. ಪುಣ್ಯ ಮಾಡಿದರೆ ಒಳ್ಳೆಯ ಫಲ, ಪಾಪ ಮಾಡಿದರೆ, ಕೆಟ್ಟ ಫಲವೆಂದೂ ಪ್ರತೀತಿಯಿದೆ, ಆದರೆ ಪ್ರತೀ ಮನುಷ್ಯನೂ ತಾನು ಮಾಡಿದ ಪುಣ್ಯ ಕಾರ್ಯಗಳನ್ನು ಮರೆತು, ಆ ಕಾರ್ಯಗಳಿಂದಲೇ ಇಂದು ನನಗೆ ಈ ಸೌಲಭ್ಯಗಳು ಲಭ್ಯವಾಗಿವೆ ಎನ್ನುವುದನ್ನು ಮರೆತು, "ನಾನು" ಮಾಡಿದೆ ಎಂದು ಅಹಂಕಾರವನ್ನೂ ಮದವನ್ನೂ ತೋರುತ್ತಾ, ತನ್ನ ಪುಣ್ಯ ಫಲವನ್ನು ಅನುಭವಿಸುತ್ತಾನೆ. ಹಾಗೆ ವರ್ತಿಸುತ್ತಾ ಒಂದು ವ್ಯಕ್ತಿ ಪುಣ್ಯ ಕೆಲಸಗಳನ್ನು ಮಾಡಿ ಆರ್ಜಿಸಿದ ಸಂಪತ್ತುಗಳಿಂದ ಮತ್ತು ಐಹಿಕ ಭೋಗಗಳಿಂದ ತನ್ನ ವ್ಯಕ್ತಿತ್ವಕ್ಕೆ ಕುಂದು ತಂದುಕೊಳ್ಳುತ್ತಾನೆ. ಅವನಿಗೆ ಮೋಹ ಉಂಟಾಗಿ, ಮದವು ಇನ್ನೂ ಹೆಚ್ಚುತ್ತದೆ. ಈ ರೀತಿ ಅವನು ತನ್ನ ಪುಣ್ಯ ಫಲವನ್ನು ಕರಗಿಸುತ್ತಾನೆ. ಅಧೋಗತಿಗೆ ಹೋಗುತ್ತಾನೆ.

ಹಾಗೆಯೇ ಒಬ್ಬನು ಕೇವಲ ಪಾಪ ಕರ್ಮಗಳನ್ನೇ ಮಾಡಿದ್ದಾನೆ ಎಂದು ಇಟ್ಟುಕೊಳ್ಳಿ. ಅದರಿಂದ ಅವನಿಗೆ ಕಷ್ಟ, ನೋವು, ಹಿಂಸೆಯಂಥಾ ಎಲ್ಲ ಪಾಪ ಫಲಗಳೂ ದೊರೆಯುತ್ತವೆ. ಅವನು ಖಿನ್ನನಾಗುತ್ತಾನೆ. ತನ್ನ ತಪ್ಪುಗಳ ಅವಲೋಕನ ಮಾಡಿಕೊಳ್ಳುತ್ತಾನೆ. ಆ ಪಾಪ ಕರ್ಮಗಳ ಫಲವನ್ನು ಅನುಭವಿಸುತ್ತಾನೆ. ಅವನಿಗೆ ಬೇರೆ ವಿಧಿಯಿಲ್ಲ. ಹಾಗೆ ಅನುಭವಿಸುವಾಗ ಅವನು ತನ್ನ ತಪ್ಪನ್ನು ಅರಿತು ಮತ್ತೆ ಪಾಪ ಕರ್ಮಗಳನ್ನು ಮಾಡದೆ, ಒಳ್ಳೆಯ ಕೆಲಸಗಳನ್ನು ಮಾಡಲು ದೃಢ ನಿಶ್ಚಯನಾಗಿ ಅಥವಾ ಪಾಪ ಮಾಡಬಾರದೆಂಬ ನಿಶ್ಚಯದಿಂದ ಶುದ್ಧನಾಗುತ್ತಾನೆ. ಉನ್ನತ ಗತಿಯನ್ನು ಪಡೆಯುತ್ತಾನೆ.

| (252) |
|---|

| ಕಗ್ಗರಸಧಾರೆ | ಲೋಕ ಸಹವಾಸ 184-188 |
|---|---|

ಯಾರಾದರೂ ತುಂಬಾ ಆನಂದದಿಂದ ಇದ್ದಾರೆ, ಸುಖವಾಗಿದ್ದಾರೆ ಎಂದರೆ ಅವರು ತಮ್ಮ ಪುಣ್ಯವನ್ನು ಕರಗಿಸುತ್ತಿದ್ದಾರೆ ಎಂದೂ, ಯಾರಾದರೂ ಬಹಳ ಸಂಕಷ್ಟದಲ್ಲಿ ಇದ್ದರೆ, ಯಾತನೆ, ಖಿನ್ನತೆ, ಬಡತನ, ಹಿಂಸೆ ಅನುಭವಿಸುತ್ತಿದ್ದರೆ, ಅವರು ತಮ್ಮ ಪಾಪಗಳನ್ನು ಕಳೆದುಕೊಂಡು ಕರಗಿಸುತ್ತಿದ್ದಾರೆ ಎಂದೂ ಅರ್ಥ.

ಹಾಗಾಗಿ, ಯಾರು ಪುಣ್ಯ ಕೆಲಸ ಮಾಡಿ ಅದರ ಫಲವನ್ನು, ಸ್ವಾರ್ಥದಿಂದ ಅನುಭವಿಸದೆ, ಮದ ಮೋಹಗಳ ಭಾವದಿಂದ ಮುಕ್ತರಾಗುತ್ತಾರೋ, ಯಾರು ತನ್ನ ಪಾಪ ಕರ್ಮದಿಂದ ಸಂದ ಕಷ್ಟಗಳ ಕೋಟಲೆಯನ್ನು ಅನುಭವಿಸುವಾಗ, ಕೋಪ, ಸೇಡು, ಅಹಂಕಾರದ ಭಾವ ಬಿಟ್ಟು, ತನ್ನ ಕಷ್ಟಗಳಿಗೆ ತನ್ನನ್ನಲ್ಲದೆ, ಬೇರೆ ಯಾರನ್ನೂ ದೂಷಿಸದೆ ಪರಮಾತ್ಮನ ಇಚ್ಛೆಯಂತೆ ನಡೆಯುವುದೆಲ್ಲ ನಡೆಯಲಿ ಎಂದು ಬಂದ ಕಷ್ಟವನ್ನು ಅನುಭವಿಸಿ ತೀರಿಸಿಬಿಡುತ್ತಾನೋ, ಇಬ್ಬರೂ ಈ ಲೋಕದಲ್ಲಿ ಧನ್ಯರು ಎಂದು ಹೇಳುತ್ತಾರೆ ಮಾನ್ಯ ಗುಂಡಪ್ಪನವರು.

ಪುಣ್ಯಫಲದ ಮದಪೂರಿತ ಅಹಂಕಾರ ಅಥವಾ ಪಾಪಫಲದ ಖಿನ್ನತೆ ಮತ್ತು ದೈನ್ಯತೆಯ ಭಾವವನ್ನು ಮೀರಿ ನಿಂತಾಗ ಮನುಷ್ಯ ಧನ್ಯನಾಗುತ್ತಾನೆ ಎನ್ನುವುದೇ ಈ ಮುಕ್ತಕದ ಹೂರಣ. ನಾವೂ ಸಹ ಅಂತಹ ಭಾವಗಳಿಗೆ ಬಲಿಯಾಗದೆ, ಅದರಿಂದ ಮೀರಿ ಬೆಳೆಯುವ ಪ್ರಯತ್ನಪಡಬೇಕು.

# ಲೋಕ ಸಹವಾಸ 184-188

**ಮುಕ್ತಕ-184**

**ನೋಡುನೋಡುತ ಲೋಕಸಹವಾಸ ಸಾಕಹುದು |**
**ಬಾಡುತಿಹ ಹೂಮಾಲೆ, ಗೂಢವಿಹ ಕಜ್ಜಿ**
**ತೋಡದಿರು ಬಾಳ್ವೆಯಾಳವನು; ಮೆಲ್ಮೇಲೆ ನೀ |**
**ನೋಡಾಡು ಹಗುರದಿಂ-ಮಂಕುತಿಮ್ಮ ||**

ಬಾಳ್ವೆಯಾಳವನು=ಬಾಳ್ವೆಯ+ಆಳವನು, ಮೆಲೇಲೆ=ಮೇಲೆ+ಮೇಲೆ, ನೋಡಾಡು=ನೋಡಿ+ಆಡು, ಸಾಕಹುದು=ಸಾಕಾಗುವುದು, ಗೂಢವಿಹ=ಸುಪ್ತವಾಗಿಹ, ಹಗುರದಿಂ=ಹಗುರದಿಂದ.

ಈ ಲೋಕದಲ್ಲಿ ನಮ್ಮ ಬಾಳ್ವೆ ಮೊದಮೊದಲು ಆನಂದವಾಗಿರುತ್ತದೆ. ಎಲ್ಲವೂ ವಿನೂತನವಾಗಿರುತ್ತದೆ. ಎಲ್ಲವೂ ಇಷ್ಟಪಡುವಂತಿರುತ್ತದೆ. ಕಾಲಕ್ರಮೇಣ ಬಾಡುತಿಹ ಹೂ ಮಾಲೆಯಂತೆಯೋ ಅಥವಾ ಬಹಳ ದಿನದಿಂದ ಬಾಧಿಸುತ್ತಿರುವ ಕಜ್ಜಿಯಂತೆಯೋ, "ಸಾಕಪ್ಪಾ ಸಾಕು" ಎಂದು ಅನ್ನಿಸತೊಡಗುತ್ತದೆ. ಹಾಗಾಗಿ ಈ ಲೋಕದ ಸಹವಾಸದಲ್ಲಿ ತುಂಬಾ ಆಳವಾಗಿ ಇಳಿಯದೆ, ಮೇಲೆ ಮೇಲೆ ಹಗುರವಾಗಿ ಓಡಾಡಿಕೊಂಡು ನಿನ್ನ ಜೀವನವನ್ನು "ಬಾಳು" ಎಂದು ಸೂಚನೆಯನ್ನು ಕೊಡುತ್ತಾರೆ ಮಾನ್ಯ ಗುಂಡಪ್ಪನವರು ನಮಗೆ ಈ ಮುಕ್ತಕದಲ್ಲಿ.

ಸಹೃದಯರೇ, ನೋಡಿ ನಮಗೆ ಒಂದು ವಿಷಯ ಚೆನ್ನಾಗಿ ಗೊತ್ತು ಮತ್ತು ಅದುವೇ ಸತ್ಯ. ನಾವು ಈ ಜಗತ್ತಿನಲ್ಲಿ ಶಾಶ್ವತವಾಗಿ ಇರುವುದಿಲ್ಲ. ನಾವು ಈ ರೂಪದಲ್ಲಿ ಈ ಜನ್ಮದಲ್ಲಿ ಕೇವಲ ಕೆಲ ಕಾಲ ಮಾತ್ರ ಇರಲು ಸಾಧ್ಯ. ಹಾಗಿದ್ದರೂ ನಾವು ಮಾಡುವ ಕೆಲಸವೆಲ್ಲವೂ, ನಾವು ಇಲ್ಲಿ ಇದೇ ರೂಪದಲ್ಲಿ ಶಾಶ್ವತವಾಗಿ

ಇರುತ್ತೇವೆ" ಎನ್ನುವ ಒಂದು ಭ್ರಮೆಯನ್ನು ಇಟ್ಟುಕೊಂಡೇ ಮಾಡುತ್ತೇವೆ. ನಾನು, ನನ್ನ ವಂಶ, ನನ್ನ ಪರಂಪರೆ, ನನ್ನ ಸಂಸಾರ, ನನ್ನ ಆಸ್ತಿ, ಮನೆ, ಮಠ ಹೀಗೆ ಎಲ್ಲವನ್ನೂ ನಾವು ನಿರಂತರವಾಗಿ ಅನುಭವಿಸುತ್ತೇವೆ' ಎನ್ನುವ ಭ್ರಮೆಯಲ್ಲಿರುತ್ತೇವೆ.

ಈ ಜನ್ಮದಲ್ಲಿ, ಈ ರೂಪ ತಳೆದು ಹುಟ್ಟಿರುವ ನಾವು, ಈ ರೂಪವನ್ನು ಬಿಟ್ಟು ಮತ್ತೊಂದು ರೂಪವನ್ನು ಧರಿಸುವಾಗ, ಎಲ್ಲಿ ಹುಟ್ಟುತ್ತೇವೆಯೋ, ಏನಾಗಿ ಹುಟ್ಟುತ್ತೇವೆಯೋ ಗೊತ್ತಿಲ್ಲ ಮತ್ತು ಅದನ್ನು ಅರಿಯುವುದೂ ಸಾಧ್ಯವಿಲ್ಲ. ಅಷ್ಟೇ ಅಲ್ಲ ಈ ಜನ್ಮದಿಂದ ಮತ್ತೊಂದು ಜನ್ಮಕ್ಕೆ ಹೋಗುವಾಗ, ಈ ಜನ್ಮದಲ್ಲಿ ಸಂಚಯಿಸಿದ ಕರ್ಮ ಶೇಷ ಮತ್ತು ವಾಸನೆಗಳನ್ನಷ್ಟೇ ಕೊಂಡು ಹೋಗಬಹುದು. ಮತ್ತೆಲ್ಲವನ್ನೂ ಇಲ್ಲೇ ಬಿಟ್ಟು ಹೋಗಬೇಕು. ನಾವು ಆರ್ಜಿಸಿದ ವಸ್ತು, ವಿಷಯ ಮತ್ತು ವ್ಯಕ್ತಿಗಳು ಏನಾದರು, ಹೇಗಿದ್ದಾರೆ ಎನ್ನುವ ಅರಿವು ನಮಗೆ ಇದನ್ನು ಬಿಟ್ಟು ಹೋದ ಮೇಲೆ ಕಿಂಚಿತ್ತೂ ಇರುವುದಿಲ್ಲ. ಆದರೂ ನಾವು ಈ ಜೀವನಕ್ಕೆ ಅಂಟಿಕೊಂಡಿರುತ್ತೇವೆ. ಆಳವಾಗಿ ಇದರೊಳಕ್ಕೆ ಇಳಿದುಬಿಡುತ್ತೇವೆ.

ಜೀವನವನ್ನು ನಡೆಸುತ್ತಾ ನಡೆಸುತ್ತಾ ನಮಗೆ ಇದರ ನಿಸ್ಸಾರತೆ ಅರ್ಥವಾಗುವಾಗ, ಇದು ಒಂದು ಬಾಡುತ್ತಿರುವ ಹೂವಿನ ದಂಡೆಯಂತೆ ಅಥವಾ ಬಹಳ ದಿನದಿಂದ ಬಾಧಿಸುತ್ತಿರುವ ಕಜ್ಜಿಯಂತೆ ಎಂದು ಅನ್ನಿಸತೊಡಗುತ್ತದೆ. ದೇಹದ ಶಕ್ತಿ ಕುಂದಿ, ಗತ ಜೀವನದ ಜ್ಞಾಪಕಗಳು ಮನಸ್ಸು ಬುದ್ಧಿಯನ್ನು ಆವರಿಸಿಕೊಂಡು, ಏನೇ ಮಾಡಬೇಕೆಂದರೂ ಏನೂ ಮಾಡಲಾಗದ ಸ್ಥಿತಿಗೆ ತಲುಪುತ್ತೇವೆ. ಈ ಸ್ಥಿತಿ ಅಸಹನೀಯ.

ಇದಕ್ಕೆ ಪರಿಹಾರವಾಗಿ ಮಾನ್ಯ ಗುಂಡಪ್ಪನವರು ನಮಗೆ ಒಂದು ಸಲಹೆಯನ್ನು ನೀಡುತ್ತಾರೆ. ಕೃಷ್ಣ ಭಗವದ್ಗೀತೆಯಲ್ಲಿ ಹೇಳುವಂತೆ, ನಾವು ತಾವರೆ ಎಲೆಯ ಮೇಲಿನ ನೀರಿನ ಹನಿಯಂತೆ ಜೀವನ ಮಾಡಬೇಕು. ಇದ್ದೂ ಇಲ್ಲದ ಹಾಗೆ ಇರಬೇಕು. ಎಲ್ಲ ಕೆಲಸಗಳನ್ನೂ ಮಾಡುತ್ತಿದ್ದರೂ ಅದಕ್ಕೆ ಅಂಟದ ಹಾಗೆ, ಆಳಕ್ಕೆ ಹೋಗದೆ ಇರಬೇಕು. ಆಳವಾಗಿ ಮತ್ತು ಗಾಢವಾಗಿ ಈ ಬದುಕಿಗೆ, ಸಂಸಾರಕ್ಕೆ ಮತ್ತು ಈ ಜಗತ್ತಿಗೆ ಅಂಟದೆ ಇದ್ದರೆ ಮನಸ್ಸಿಗೆ ನೆಮ್ಮದಿ ಮತ್ತು ನಿರಾಳ, ಆದರೆ ಬಾಳ ಬೇಕು, ಸಕ್ರಿಯವಾಗಿ ಬಾಳಬೇಕು. ಈ ಬಾಳಿನ ಸತ್ಯವನ್ನರಿತು ಬಾಳಬೇಕು. ಇದರ ನಶ್ವರತೆಯನ್ನು ಅರಿತು ಬಾಳಬೇಕು. ಅಂತಹ ಭಾವವನ್ನು ತಳೆಯುವುದು ಮತ್ತು ಹಾಗೆ ಜೀವಿಸುವುದು, ಈ ಪ್ರಾಕೃತ ದೇಹವನ್ನು ಹೊತ್ತ ನಮ್ಮಂಥಹ ಹುಲುಮಾನವರಿಗೆ ಕಷ್ಟಸಾಧ್ಯ. ಆದರೆ ಅಸಾಧ್ಯವಲ್ಲ. ಪ್ರಯತ್ನಪಡಬೇಕು ಅಷ್ಟೇ.

**ಮುಕ್ತಕ-185**

**ಹೃದಯಜೀವನಕಿನಿತು ಬೆಲೆಯಿರದೆ? ಫಲವಿರದೆ?**
**ಮಧುರಭಾವ ಪ್ರೇಮ ದಯೆಯಲ್ಲ ಬರಿದೆ?**
**ವಿಧಿಯಂಗಡಿಯೊಳದನು ಕಸವೆಂದು ತಳ್ಳುವೊಡೆ**
**ಬದುಕಿನಲಿ ತಿರುಳೇನು-ಮಂಕುತಿಮ್ಮ**

ಹೃದಯಜೀವನಕಿನಿತು=ಹೃದಯ+ಜೀವನಕೆ+ಇನಿತು,





ವಿಧಿಯಂಗಡಿಯೊಳದನು=ವಿಧಿಯ+ಅಂಗಡಿಯೊಳು+ಅದನು,

ಇನಿತು=ಸ್ವಲ್ಪವೂ, ತಿರುಳೇನು=ಸ್ವಾರಸ್ಯವೇನು

ಹೃದಯವಂತಿಕೆಯಿಂದ ನಡೆಸುವ ಜೀವನಕೆ ಬೆಲೆಯೇ ಇಲ್ಲವೇ? ಅದಕ್ಕೇನೂ ಪ್ರಯೋಜನವಿಲ್ಲವೆ? ಪರಸ್ಪರ ಸವಿಯಾದ ಭಾವನೆಗಳು, ಪ್ರೇಮಾನುರಾಗಗಳು, ದಯೆ ದಾಕ್ಷಿಣ್ಯಗಳು ಕೇವಲ ಪೊಳ್ಳೆ? ವಿಧಿಯ ಆಟದಲ್ಲಿ ಇದನ್ನೆಲ್ಲಾ ಕೆಲಸಕ್ಕೆ ಬಾರದ್ದು ಎಂದು ತಿರಸ್ಕರಿಸುವ ಹಾಗಿದ್ದರೆ, ಈ ಜೀವನದ ಸ್ವಾರಸ್ಯವೇನು ಎಂದು ಒಂದು ಪ್ರಶ್ನಾ ರೂಪದ ಪ್ರಸ್ತಾಪವನ್ನು ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ ಮಾಡುತ್ತಾರೆ.

ಕೊಂಚಮಟ್ಟಿಗೆ ಇನ್ನೂ ನಮ್ಮ ಭಾರತೀಯ ಅಸ್ಮಿತೆಯ ಬೇರುಗಳು ಭದ್ರವಾಗಿದ್ದ ಕಾಲಕ್ಕೇ, ಇಂತಹ ಒಂದು ಪ್ರಶ್ನೆಯನ್ನು ಕೇಳುವ ಗುಂಡಪ್ಪನವರು ಇಂದು ಏನು ಹೇಳುತ್ತಿದ್ದರೋ? ಆ ಭಗವಂತನೇ ಬಲ್ಲ!!! ಇರಲಿ, ನಾವು ಇಂದಿನ ಪರಿಸ್ಥಿತಿಯನ್ನು ನೋಡುವ, ಲಕ್ಷಕ್ಕೊಬ್ಬರಂತೆ ಯಾರಾದರೂ ಹೃದಯವಂತರು, ಸ್ವಾರ್ಥರಹಿತರು, ಮಧುರವಾದ ಪ್ರೇಮಾನುರಾಗಗಳ ಶುದ್ಧ ಭಾವವನ್ನು ಇಟ್ಟುಕೊಂಡಿರುವವರು ನಮಗೆ ಈ ಲೋಕದಲ್ಲಿ ಸಿಗಬಹುದು. ಆದರೆ ಒಟ್ಟಾರೆ ಸಮಾಜದ ಪರಿಸ್ಥಿತಿ ಹದಗೆಟ್ಟು ಹೋಗಿದೆ. ಅವರು ಉಲ್ಲೇಖ ಮಾಡುವ ಆ ಹೃದಯವಂತಿಕೆ, ಪ್ರೇಮ, ದಯೆ, ಮಧುರ ಭಾವಗಳ ಸ್ಥಳವನ್ನು ಇಂದು ಸ್ವಾರ್ಥ, ಅಸೂಯೆ, ನಿರ್ದಯೆ, ಕಾಠಿಣ್ಯ, ನಿರ್ಲಕ್ಷ್ಯ ಮುಂತಾದವು

ಆಕ್ರಮಿಸಿಕೊಂಡು ಬಿಟ್ಟಿದೆ. ಕಾರಣವನ್ನು ಯಾವುದೋ ಒಂದು ನಿರ್ದಿಷ್ಟ ವ್ಯಕ್ತಿಗೋ, ಘಟನೆಗೋ ಆರೋಪಿಸಲಾಗುವುದಿಲ್ಲ. ಕಾಲಕ್ರಮೇಣ ಎಲ್ಲವೂ ಬದಲಾಗಿದೆ. ಜೀವನಶೈಲಿ ಬದಲಾಗಿದೆ.

ನಮ್ಮ ದೇಶದ ಮೇಲೆ ಪರಕೀಯರ ಆಕ್ರಮಣದ ಕಾರಣ ಕಾಲಕ್ರಮೇಣದಲ್ಲಿ ಹತ್ತು ಹಲವಾರು ಪ್ರಭಾವಗಳಿಂದ ಸಮಾಜದಲ್ಲಿನ ವ್ಯಕ್ತಿಗಳ ಪರಸ್ಪರ ಸಂಬಂಧಗಳಲ್ಲಿ ಬದಲಾವಣೆಗಳು ಬಂದಿವೆ. ಹಣದ ಪ್ರಾಮುಖ್ಯತೆ ಹೆಚ್ಚಾಗಿದೆ, ಸಂಬಂಧಗಳೆಲ್ಲ ವ್ಯವಹಾರಗಳಾಗಿವೆ. ಪ್ರಾಪಂಚಿಕ ಭೋಗಲೋಲುಪತೆಯೇ ಹೆಚ್ಚಾಗಿ, ವಸ್ತು ವಿಷಯ ಮತ್ತು ವ್ಯಕ್ತಿಗಳನ್ನು ಪಡೆಯುವ, ಅವುಗಳ ಮೇಲೆ ಸ್ವಾಮಿತ್ವವನ್ನು ಸ್ಥಾಪಿಸುವ ಮತ್ತು ನಿರಂತರವಾಗಿ ತಮ್ಮದಾಗಿಸಿಕೊಂಡು ಅನುಭವಿಸುವ ಭಾವಗಳಿಂದ, ನಮ್ಮ ಸಮಾಜ ಮತ್ತು ಸಂಸ್ಕಾರಗಳ ವಿದ್ಯಮಾನಗಳು ತುಂಬಿಹೋದವು. ನಮ್ಮ ಭಾರತೀಯ ಸಮಾಜದ ಮೂಲ ತತ್ವಗಳಾದ ಸತ್ಯ, ಧರ್ಮ, ನ್ಯಾಯ ನೀತಿಗಳು ನೇಪಥ್ಯಕ್ಕೆ ಸರಿಯತೊಡಗಿವೆ. ಇಂದು ಬಹಳ ಸತ್ಯವಂತ, ಬಹಳ ಧರ್ಮಿಷ್ಠನಿಗೆ "ಹುಚ್ಚ" ನೆಂಬ ಬಿರುದನ್ನು ಕೊಡಲಾಗುತ್ತೆ. 'ಋತಂಚ ಸ್ವಾಧ್ಯಾಯ ಪ್ರವಚನೇಚ, ಸತ್ಯಂಚ ಸ್ವಾಧ್ಯಾಯ ಪ್ರವಚನೇಚ" ಎನ್ನುವ ಉಪನಿಷತ್ತಿನ ವಾಕ್ಕುಗಳಿಗೆ ಅರ್ಥವೇ ಇಲ್ಲದಾಗಿದೆ. ಜೀವನದಲ್ಲಿ ಸ್ವಾರಸ್ಯವಿಲ್ಲದಾಗಿದೆ.

ಇಂದು ತಂದೆ ತಾಯಿ ಮತ್ತು ಮಕ್ಕಳ ನಡುವೆಯಾಗಲಿ, ಅಣ್ಣ-ತಮ್ಮ, ಅಕ್ಕ-ತಂಗಿಯರ ನಡುವೆಯಾಗಲೀ ಬಂಧು-ಬಳಗದೊಡನೆಯಾಗಲೀ, ಸ್ನೇಹಿತರೊಡನೆಯಾಗಲೀ ಪರಸ್ಪರ ಬಾಂಧವ್ಯವೇ ಇಲ್ಲ. ಎಲ್ಲ ವ್ಯವಹಾರವಾಗಿ ಬಿಟ್ಟಿದೆ. ಪ್ರೀತಿ-ಪ್ರೇಮಗಳು, ಸ್ನೇಹ-ಸೌಹಾರ್ದತೆಗಳು, ಮಮತೆ-ಅನುರಾಗಗಳು ಕೇವಲ ಬೂಟಾಟಿಕೆಯಾಗಿ ಬಿಟ್ಟಿದೆ. ಇದರ ವಿಷಯ ಮಾತನಾಡಿದರೆ, "ಏನು ಸ್ವಾಮಿ ಮಾಡುವುದು, ಕಲಿಗಾಲ' ಎನ್ನುವ ಮಾತು

ನಮಗೆ ಕೇಳಿಬರುತ್ತದೆ. ಬಹುಶಃ ಆ ಪರಮಾತ್ಮನಿಗೆ ಜನರನ್ನು ಬದಲಾಯಿಸುವ ಅಥವಾ ಮಾರ್ಪಾಡು ಮಾಡುವ ತಂತ್ರವಿರಬಹುದು. ವಿಧಿಯೇ ಈ ರೀತಿಯಿರಬಹುದು. ಆದರೂ ಇಂದಿಗೂ ಸತ್ಯ, ಧರ್ಮ, ನ್ಯಾಯ, ನೀತಿ, ಪ್ರೇಮ, ಅನುರಾಗ, ಮುಂತಾದ ಸದ್ಭಾವಗಳಿಗೆ ಬೆಲೆ ಇದೆ ಎಂದು ಅರಿತು ಅವುಗಳನ್ನು ಉಳಿಸಿಕೊಂಡು ಬೆಳೆಸಿಕೊಂಡರೆ, ಕಾಲಕ್ರಮೇಣ ಎಲ್ಲ ಬದಲಾಗಿ ಮತ್ತೆ ಈ ಜಗತ್ತು ಸುಂದರವಾಗಬಹುದು. ಆದರೆ ಇಡೀ ಸಮಾಜವೇ ಬದಲಾಗಬೇಕಾದರೆ ಒಂದು ದೊಡ್ಡ ಶಸ್ತ್ರ ಚಿಕಿತ್ಸೆಯೇ ಬೇಕಾಗಿದೆ ಎಂದು ಅನ್ನಿಸುತ್ತದೆ. ಅದನ್ನು ಮಾಡುವವನೇ ಆ ಪರಮಾತ್ಮ. ಅವನ ಕೃಪೆಗಾಗಿ ಕಾಯುತ್ತಾ ಇರಬೇಕು. ಹಾಗಾಗಿ ನಾವು 'ಸರ್ವೇ ಜನಾಃ ಸುಜನಾ ಭವಂತು ಸರ್ವೇ ಸುಜನಾಃ ಸುಖಿನಃ ಸಂತು" ಎಂದು ಆಶಿಸಬೇಕು.

**ಮುಕ್ತಕ-186** **ತಡಕಾಟ ಬದುಕೆಲ್ಲಬೇಕಾಕಿಜೀವ ತ |**
**ನ್ನೊಡನಾಡಿ ಜೀವಗಳ ತಡಕಿ ಕೈಚಾಚಿ ||**
**ಪಿಡಿಯಲಲೆದಾಡುಗುಂ, ಪ್ರೀತಿ ಋಣ ಮಮತೆಗಳ |**
**ಮಡುವೊಳೋಲಾಡುತ್ತೆ-ಮಂಕುತಿಮ್ಮ ||**

ಬದುಕೆಲ್ಲವೇಕಾಕಿಜೀವ=ಬದುಕು+ಎಲ್ಲ+ಏಕಾಕಿ+ಜೀವ, ತನ್ನೊಡನಾಡಿ=ತನ್ನ+ಒಡನಾಡಿ,
ಪಿಡಿಯಲಲೆದಾಡುಗುಂ=ಪಿಡಿಯಲು+ಅಲೆದಾಡುಗುಂ, ಮಡುವೊಳೋಲಾಡುತ್ತೆ=ಮಡುವೊಳು+ಓಲಾಡುತ್ತೆ
ಮಡುವೊಳು=ಸುಳಿಯೊಳು.

ಒಂದು ಜೀವ ಬದುಕಿನಲ್ಲಿ ಏಕಾಕಿಯಾಗಿದ್ದು ಒಡನಾಡಿ ಜೀವಗಳ ಹುಡುಕಿ ಹಿಡಿದು, ಪ್ರೀತಿ, ಕರ್ಮಶೇಷ ಮತ್ತು ಅಪ್ಯಾಯತೆಗಳ ಬಂಧನಗಳ ಸುಳಿಯಲ್ಲಿ ಸಿಕ್ಕು ಜೀವಿಸುತ್ತದೆ ಎಂಬುದೇ ಈ ಮುಕ್ತಕದ ಹೂರಣ.

ಪ್ರತಿ ಜೀವಿಯೂ ಮೂಲ ರೂಪದಲ್ಲಿ ಏಕಾಕಿ. ತಾಯಿಯ ಗರ್ಭದಲ್ಲಿ ಸೃಷ್ಟಿಯಾದ ಭ್ರೂಣದೊಳಗೆ ಬಂದು ಸೇರಿಕೊಂಡು ಈ ಜಗತ್ತಿಗೆ ಒಂದು ರೂಪದೊಂದಿಗೆ ಬಂದು ಎರಗುತ್ತದೆ. ಎರಗಿದಾಕ್ಷಣ, ತನ್ನ ಅಸ್ತಿತ್ವವನ್ನು ಪಡೆದು, ತಾಯಿ, ತಂದೆ, ಅಣ್ಣ, ತಮ್ಮ, ಅಕ್ಕ, ತಂಗಿ, ಎನ್ನುವ ಬಾಂಧವ್ಯದಲ್ಲಿ ಮೊಟ್ಟಮೊದಲಿಗೆ ತನ್ನ ಸಂಬಂಧವನ್ನು ಈ ಜಗತ್ತಿನಲ್ಲಿ ಬೆಳೆಸಿಕೊಳ್ಳುತ್ತದೆ. ಬೆಳೆದು ದೊಡ್ಡದಾಗುತ್ತಾ, ಸುತ್ತಲಿನ ಪರಿಸರದೊಂದಿಗೆ, ತನ್ನ ಸಂಪರ್ಕ-ಸಂಬಂಧದ

ಜಾಲವನ್ನು ಹೆಚ್ಚಿಸಿಕೊಳ್ಳುತ್ತಾ ಹೋಗುತ್ತದೆ. ನೆರೆಹೊರೆ, ಸ್ನೇಹಿತರು, ಅನ್ಯ ಪ್ರಾಣಿಗಳು, ಪರಿಸರದಲ್ಲಿ ಇರುವ ಎಲ್ಲದರೊಟ್ಟಿಗೆ ಒಂದು ಭಾವನಾತ್ಮಕವಾದ ಸಂಬಂಧವನ್ನು ಕಟ್ಟಿಕೊಳ್ಳುತ್ತದೆ.

ಒಂದೇ ಜೀವಿಯಾದರೂ, ಹಲವರೊಡನೆ ಮತ್ತು ಹಲವೊಡನೆ ತಾನು ಕಟ್ಟಿಕೊಳ್ಳುವ ಸಂಬಂಧದ ರೂಪಗಳು ಅನೇಕ. ಪ್ರೀತಿಯ, ಪ್ರೇಮದ, ಕೋಪದ, ದ್ವೇಷದ, ಅಹಂಕಾರದ, ಅಸೂಯೆಯ, ಹೀಗೆ ಹಲವಾರು ಭಾವನೆಗಳ ತಂತುವಿನೊಂದಿಗೆ ತನ್ನ ಸಂಪರ್ಕವನ್ನು ಕಟ್ಟಿಕೊಳ್ಳುತ್ತದೆ. ಅಷ್ಟೇ ಅಲ್ಲ, ಆ ಜೀವಿಯ ಸಂಬಂಧದ ರೂಪ, ಕಾಲಕಾಲಕ್ಕೆ, ಕಾಲಧರ್ಮಕ್ಕನುಗುಣವಾಗಿ, ವಯೋಧರ್ಮಕ್ಕನುಗುಣವಾಗಿ ಮತ್ತು ಬೇರೆ ಬೇರೆ ಕಾರಣಗಳಿಗೆ, ಬೇರೆ ಬೇರೆ ರೂಪಗಳನ್ನು ತಾಳುತ್ತದೆ. ಇದೊಂದು ಸುಳಿ, ನದಿಯ ಮಡುವಿನಲ್ಲಿ ಹೇಗೆ





ನೀರು ಸುತ್ತುತ್ತಾ ಇರುತ್ತದೆಯೋ, ಹಾಗೆಯೇ ಜೀವಿಯೂ ಈ ಭೂಮಿಯಲ್ಲಿ ಇರುವ ತನಕ, ಎಲ್ಲರೊಂದಿಗೆ ಮತ್ತು ಎಲ್ಲದರೊಂದಿಗೆ ಚಿತ್ರ ವಿಚಿತ್ರವಾದ ಸಂಬಂಧಗಳನ್ನು ಪಡೆದುಕೊಂಡು ಸುತ್ತುತ್ತಾ ಇರುತ್ತದೆ. ಹಾಗೆ ಸುತ್ತುವುದೇ ಜೀವನ. ಇದೇ ಬದುಕು ಎನ್ನುತ್ತಾರೆ ಮಾನ್ಯ ಗುಂಡಪ್ಪನವರು.

ಈ ಸಂಬಂಧಗಳ ಸುಳಿಯಲ್ಲಿ ಸುತ್ತಾಟ ಜೀವಿಗೆ ನಿರಂತರವಾಗಿ ನಡೆದೇ ಇರುತ್ತದೆ. ಜನ್ಮಜನ್ಮಾಂತರಗಳಲ್ಲೂ ಅವ್ಯಾಹತವಾಗಿ ಸುತ್ತುತ್ತಲೇ ಇರುತ್ತದೆ. ಈ ಬಂಧನಗಳಿಂದ ಮುಕ್ತರಾಗುವ ಪ್ರಯತ್ನವೇ ಆಧ್ಯಾತ್ಮ ಅಂದರೆ ವಾಸನಾರಹಿತವಾಗಿ ಮೊಟ್ಟಮೊದಲಿಗೆ ಈ ಜಗತ್ತಿನ ಸಂಪರ್ಕಕ್ಕೆ ಬಂದ ಜೀವಿ ಮತ್ತೆ ವಾಸನಾ ರಹಿತವಾಗಿ, ಕರ್ಮ ಶೇಷ ರಹಿತವಾಗಿ, ಸಂಬಂಧಗಳ ಬಂಧನದಿಂದ, ಬಂಧಿಸಿರುವ ಸಂಕೋಲೆಯ ಪ್ರತೀ ಕೊಂಡಿಯನ್ನು ಕಳಚಿಕೊಂಡು ಮತ್ತೆ ತನ್ನ ಸ್ವಸ್ಥಾನ ಸೇರುವುದೇ ಆಧ್ಯಾತ್ಮದ ಗುರಿ. ಆಗ ಇಲ್ಲಿ ಇದ್ದರೂ ಇಲ್ಲದ ಹಾಗೆ, ಅಂಟದ ಹಾಗೆ ಇರಲು ಆದರೆ,

ಅದೇ ಆಧ್ಯಾತ್ಮ ಸಾಧನೆಯ ಫಲ. ಮಾತುಗಳಲ್ಲಿ ವರ್ಣಿಸಲು, ಪದಗಳಲ್ಲಿ ಬರೆಯಲು ಸುಲಭ ಆದರೆ ಆ ಸ್ಥಿತಿಯನ್ನು ತಲುಪುವುದಕ್ಕೆ ದೀರ್ಘಕಾಲದ ಸಾಧನೆ ಬೇಕು. ಅಸಾಧ್ಯವಲ್ಲ ಆದರೆ ಕಷ್ಟ ಸಾಧ್ಯ.

**ಮುಕ್ತಕ-187**

**ನುಡಿಗಟ್ಟಿನಾಟದಕ್ಕರಚೀಟಿಯೊಟ್ಟಿನಲಿ |**
**ತಡಕಿ ನಾವಾಯ್ದಾಯ್ತು ನುಡಿಜೋಡಿಪಂತೆ ||**
**ಬಿಡಿಜೀವ ಸಂಗಾತಿಜೀವಗಳನರಸಿ |**
**ಪಡೆದಂದು ಪೂರ್ಣವದು-ಮಂಕುತಿಮ್ಮ ||**

ನುಡಿಗಟ್ಟಿನಾಟದಕ್ಕರಚೀಟಿಯೊಟ್ಟಿನಲಿ=ನುಡಿ+ಕಟ್ಟಿನ+ಆಟದ+ಅಕ್ಕರ+ಚೀಟಿಯ+ಒಟ್ಟಿನಲಿ,
ನಾವಾಯ್ದಾಯ್ತು-ನಾವು+ಆಯ್ದು+ಆಯ್ದು,
ಸಂಗಾತಿಜೀವಗಳನರಸಿ=ಸಂಗಾತಿ+ಜೀವಿಗಳನು+ಅರಸಿ,ಪಡೆದಂದು=ಪಡೆದ+ಅಂದು,
ಪೂರ್ಣವದು=ಪೂರ್ಣವು+ಅದು ನುಡಿಗಟ್ಟಿನಾಟ=ಪದ ಜೋಡಣೆಯ ಆಟ,
ಜೋಡಿಪಂತೆ=ಜೋಡಿಸುವಂತೆ. ಬಿಡಿಜೀವ=ಒಂಟಿ ಜೀವ

"ನುಡಿಕಟ್ಟು" ಎನ್ನುವುದು ಒಂದು ಆಟ. ಸೂಕ್ತ ಅಕ್ಷರಗಳ ಜೋಡಣೆಯನ್ನು ಮಾಡುತ್ತಾ, ಪದಗಳ ವಿನ್ಯಾಸವನ್ನು ಮಾಡುವುದು. ಅದನ್ನಾಡುವುದಕ್ಕೆ ಉಪಯೋಗಿಸುವ ಅಕ್ಷರಗಳನ್ನು ಬರೆದ ಚೀಟಿಗಳನ್ನು ನಾವು ಆಯುವಂತೆ, ಜೀವನದಲ್ಲೂ ನಮಗೆ ಬೇಕಾದ ಸೂಕ್ತ ಸಂಗಾತಿ ಜೀವಗಳನ್ನಾರಿಸಿಕೊಂಡರೆ, ಅಂದು ನಮ್ಮ ಜೀವನದ ವಿನ್ಯಾಸದ ಜೋಡಣೆ ಪೂರ್ಣವಾಗುವುದೆಂದು ಅಪ್ಪಣೆ ಕೊಡಿಸಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಆ ನುಡಿಗಟ್ಟಿನಾಟದಲಿ, ಅಕ್ಷರಗಳು ಸರಿಯಾಗಿ ಸಿಗದೇ ಹೋದರೆ ಪದವೂ ಹೊಂದುವುದಿಲ್ಲ, ವಿನ್ಯಾಸವೂ ಸರಿಯಾಗುವುದಿಲ್ಲ. ಸರಿಯಾದ ಅಕ್ಷರಗಳು ಸಿಕ್ಕರೆ ಪದ ಸರಿಯಾಗುತ್ತದೆ. ಹಾಗೆಯೇ ನಮ್ಮ ಜೀವನದಲ್ಲೂ ನಾವು ನಮಗೆ ಸರಿಹೊಂದುವಂತ ಜೀವಿಗಳನ್ನು ಹುಡುಕುತ್ತೇವೆ ಮತ್ತು ನಿರಂತರವಾಗಿ ಹುಡುಕುತ್ತಲೇ

ಇರುತ್ತೇವೆ. ಸಿಕ್ಕರೆ ಸಂತೋಷ, ಸಿಗದಿದ್ದರೆ ಮತ್ತೆ ಪ್ರಯತ್ನ ನಡೆಯುತ್ತಲೇ ಇರುತ್ತದೆ, ಅರಿಯದೆ ಕೆಲವರನ್ನು ಹುಡುಕಿ ಸೇರುತ್ತೇವೆ. ಸ್ವಲ್ಪ ದಿನವಾದ ನಂತರ ಬೇಡವೆನಿಸುತ್ತದೆ. ಆಗ ಆ "ಪದ" ಗಳಿಂದ ಎಲ್ಲ ಅಕ್ಷರಗಳನ್ನು ತೆಗೆದುಕೊಂಡು ಮತ್ತೆ ಹೊಸ ಅಕ್ಷರಗಳನ್ನು ಹುಡುಕಿ, ಹೊಸ ಪದ ಜೋಡಣೆಯ ಕೆಲಸ.

ಆದರೆ ನಾವು ಹುಡುಕುವ ಮತ್ತು ಆಯ್ದುಕೊಳ್ಳುವ ಅಕ್ಷರಗಳೇ ಸರಿಯಾಗಿಲ್ಲದಿದ್ದರೆ, ಪದ ದೋಷಪೂರಿತವಾಗಿರುತ್ತದೆ. ಹಾಗೆಯೇ ನಮ್ಮ ಆಯ್ಕೆ ಸರಿಯಿಲ್ಲದಿದ್ದರೆ, ಅನ್ಯರೊಡನೆ ನಮ್ಮ ಸಂಬಂಧಗಳೂ ಸರಿಯಾಗಿರುವುದಿಲ್ಲ. ಆಗ ನಾವು ಸಾಮಾನ್ಯವಾಗಿ ನಮ್ಮ ಆಯ್ಕೆಯನ್ನು ದೂರದೆ, ಅಕ್ಷರವನ್ನು ದೂರುತ್ತೇವೆ. ಪದಗಳನ್ನು ದೂರುತ್ತೇವೆ.

ಅಂದರೆ ನಾವು ಮಾಡಿದ ಆಯ್ಕೆ ಸರಿಯಾಗಲಿಲ್ಲವೆಂದುಕೊಳ್ಳದೆ, ನಾವು ಆಯ್ಕೆ ಮಾಡಿದ ವಸ್ತುವನ್ನೋ ವಿಷಯವನ್ನೋ ಅಥವಾ ವ್ಯಕ್ತಿಯನ್ನೂ ದೂರುತ್ತೇವೆ. ಜೀವನದಲ್ಲಿ ನಮಗೆ ಸಂಪೂರ್ಣವಾಗಿ ಸರಿಹೊಂದುವಂಥಾ ವ್ಯಕ್ತಿಗಳು ಸಿಗಲು ಸಾಧ್ಯವೇ? ಬಹಳ ದುರ್ಲಭ. ಏಕೆಂದರೆ ಪ್ರತಿಯೊಬ್ಬರೂ ಬೇರೆ ಬೇರೆ ರೀತಿಯ ವ್ಯಕ್ತಿತ್ವ, ಭಾವನೆಗಳನ್ನು ಹೊತ್ತೇ ಹುಟ್ಟಿರುತ್ತಾರೆ. ಅದು ಅವರ ಸ್ವಭಾವವೆನ್ನಬಹುದು. ಸ್ವಭಾವ ಅಷ್ಟು ಸುಲಭವಾಗಿ ಬದಲಾಗುವುದಿಲ್ಲ. ಹಾಗಾಗಿ ಒಬ್ಬರಿಗೊಬ್ಬರು ಸಂಪೂರ್ಣ ಹೊಂದಾಣಿಕೆ ಸಾಧ್ಯವೇ ಇಲ್ಲ !!!!!

"ಇಬ್ಬರು ವ್ಯಕ್ತಿಗಳಿದ್ದರೆ ಮೂರು ಅಭಿಪ್ರಾಯಗಳಿರುತ್ತವೆ" ಎನ್ನುವ ಒಂದು ಮಾತಿದೆ. ಹಾಗೆ ನಮಗೆ ನಮ್ಮ ಭಾವನೆಗಳಿಗೆ ಸಂಪೂರ್ಣ ಏಕೀಭಾವ ತೋರುವ ವ್ಯಕ್ತಿ ಸಿಕ್ಕರೆ ಮತ್ತು ಅಂಥವರ ಸಾಂಗತ್ಯ ನಮಗೆ ಜೀವನ ಪೂರ್ತಿ ಲಭ್ಯವಾದರೆ ಅದು ನಮ್ಮ ಸೌಭಾಗ್ಯವೇ ಸರಿ. ಆದರೆ ವಾಚಕರೆ ಅಂತಹ ಒಂದು ಆದರ್ಶ ಸ್ಥಿತಿ (Ideal situation) ಸಾಧ್ಯವೇ ಇಲ್ಲ. ಪ್ರತಿಯೊಬ್ಬರೂ ಮತ್ತೊಬ್ಬರೊಂದಿಗೆ ಬಹಳಷ್ಟು ಹೊಂದಿಕೊಂಡು, ತಮ್ಮ ಅವಶ್ಯಕತೆಗಳನ್ನು ಬದಿಗೊತ್ತಿ, ತಮ್ಮ ಭಾವನೆಗಳಿಗೆ ಅತೀ ಮಹತ್ವಕೊಡದೆ, ಅನ್ಯರ ಕೊರತೆಗಳನ್ನು ಕಡೆಗಣಿಸುತ್ತಾ, ಹೊಂದಿಕೊಂಡು ಹೋದರೆ ಒಂದು ಸಾಮರಸ್ಯದ ಜೀವನ ಮಾಡಬಹುದು. ಇಲ್ಲದಿದ್ದರೆ ಪ್ರತಿ ನಿತ್ಯ ಸಮರಸದ ಕೊರತೆಯಿಂದ ಕೇವಲ "ಸಮರವೇ" ಆಗುತ್ತದೆ.

**ಮುಕ್ತಕ-188** **ರಸರುಚಿಗಳನ್ನು ಕಲಿಸಿ ಪಕ್ವಾನ್ನಗಳ ಪಚಿಸಿ।**
**ರಸನೆಯಲಿ ನೀರಿಳಿಸಿ ಬಿಸಿಯುಸಿರ ಬಿಡಿಸಿ ||**
**ದಶದಿಶೆಗಳಿಂ ಮುತ್ತಿ ಬರುವ ಪ್ರಕೃತಿಗೆದಾರು।**
**ವಶನಾಗದಿಹ ನರನು?-ಮಂಕುತಿಮ್ಮ "**

ಪ್ರಕೃತಿಗೆದಾರು+ಪ್ರಕೃತಿಗೆ+ಅದಾರು, ವಶನಾಗದಿಹ=ವಶನು+ಆಗದಿಹ
ರಸನಾ=ನಾಲಿಗೆ

ರುಚಿರುಚಿಯಾದ ರಸಭರಿತವಾದ ಅಡುಗೆಗಳನ್ನು ಮಾಡಲು ಕಲಿಸಿ, ಇವುಗಳನ್ನು ಸವಿಯುವ ತವಕದಲಿ ನಾಲಿಗೆಯಲಿ ನೀರಿಳಿಸಿ, ಹಲವಾರು ರೀತಿಯ ಪಕ್ವಾನ್ನಗಳನ್ನು ಜೀರ್ಣಿಸಿಕೊಂಡು, ಜಿಹ್ವಾ ಚಾಪಲ್ಯವನ್ನು





ತೀರಿಸಿಕೊಳ್ಳಲು ಅನುವಾಗುವಂತೆ ಮತ್ತೆ ಮತ್ತೆ ಆಸೆಪಡುವಂತೆ, ಪ್ರಕೃತಿಯೇ ಹತ್ತಾರು ಕಡೆಗಳಿಂದ ನಮ್ಮನ್ನು ಸೆಳೆಯುತ್ತಿರುವಾಗ, ಇದಕ್ಕೆ ವಶನಾಗದವನು ಯಾರು? ಎಂದು ಕೇಳುತ್ತಾರೆ ಮಾನ್ಯ ಗುಂಡಪ್ಪನವರು.

ಆಹಾರವನ್ನು ತಿನ್ನುವುದು ಸ್ವಾಭಾವಿಕ, ಅದನ್ನು ರುಚಿರುಚಿಯಾಗಿ ಮಾಡಿ ತಿನ್ನುವುದು ರಸಿಕತೆ. ಹಾಗೆ ವಿಧ ವಿಧವಾದ, ರುಚಿ ರುಚಿಯಾದ ಆಹಾರವನ್ನು ಮಾಡಲು ಬೇಕಾದ ಆಸೆ, ಆಸ್ಥೆ, ಪರಿಕರಗಳು, ಆ ಪರಿಕರಗಳನ್ನು ಪ್ರಯೋಗಿಸಿ ಸೂಕ್ತವಾಗಿ ಪಾಕಮಾಡುವ ಕಲೆ, ಎಲ್ಲವೂ ನಮಗೆ ಪ್ರಕೃತಿದತ್ತವಾಗಿ ಬಂದಿದೆ. ಹಾಗೆ ಬಂದ ಕಲೆಯನ್ನು ನಾವು ಮನುಷ್ಯರು ಪ್ರತಿನಿತ್ಯ ನೂತನ, ವಿನೂತನವಾದ ಪ್ರಯೋಗಗಳನ್ನು ಮಾಡಿ ಹೊಸ ಹೊಸ ರುಚಿಕರವಾದ ಆಹಾರಗಳ ಆವಿಷ್ಕರಿಸುವ ಕೆಲಸ ಜಗತ್ತಿನಾದ್ಯಂತ ನಿರಂತರವಾಗಿ ಮಾಡುತ್ತಲೇ ಇದ್ದೇವೆ. ಇವುಗಳನ್ನೆಲ್ಲ ಅನುಭವಿಸದೆ ಇವುಗಳಿಂದ ಆಕರ್ಷಿತರಾಗದೆ ಇರುವವರು ಈ ಜಗತ್ತಿನಲ್ಲಿ ವಿರಳ. ಇಂದು ಜಗತ್ತಿನಲ್ಲಿ ಪಾಕಶಾಸ್ತ್ರವೇ ಒಂದು ಪ್ರಮುಖ ವ್ಯಾಪಾರೀ ಉದ್ಯಮವಾಗಿದೆ.

ಒಂದು ಬಾರಿ, ಇಂದು ಇರುವ ಅಡುಗೆಯ ವಿಧಾನಗಳು ಮತ್ತು ತಯಾರಾಗುವ ವಿಧ ವಿಧವಾದ ಪಕ್ವಾನ್ನಗಳ ಯಾದಿಯನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ಅಷ್ಟು ದೊಡ್ಡದಾಗುತ್ತದೆ ಆ ಪಟ್ಟಿ, ಯಾರಿಗೆ ಏನೇನು ಬೇಕೋ ಅದೆಲ್ಲವೂ ಇದೆ. ಪ್ರತಿಯೊಬ್ಬರನ್ನೂ ತೃಪ್ತಿಪಡಿಸುವ ಸಲಕರಣೆಗಳನ್ನು ಆ ಪರಮಾತ್ಮ ಪ್ರಕೃತಿಯ ಮೂಲಕ ನಮಗೆ ಒದಗಿಸಿದ್ದಾನೆ. ಇರಲಿ ಇದರ ಬಗ್ಗೆ ಬಹಳ ಬರೆಯಬಹುದು. ಅದೊಂದು ಸಂಶೋಧನಾ ಗ್ರಂಥವೇ ಆಗುವುದು.

ಆದರೆ ನಾವುಣ್ಣುವುದೆಲ್ಲವನ್ನೂ ನಾಲಿಗೆ ರುಚಿ ನೋಡಿ ರುಚಿಕರವೆಂದೋ, ರುಚಿಹೀನವೆಂದೋ ಒಂದು ನಿರ್ಧಾರಕ್ಕೆ ಬರುತ್ತದೆ. ಆದರೆ ನಾಲಿಗೆ ಇರುವುದೇ ಮೂರು ಅಂಗುಲ, ಆ ಮೂರು ಅಂಗುಲದಲ್ಲಿ ಮೂರು ಭಾಗಗಳು. ಮೊದಲನೆಯದು ಖಾರ, ನಂತರ ಸಿಹಿ, ಕಡೆಗೆ ಕಹಿ. ಹೀಗೆ ನಮ್ಮ ನಾಲಿಗೆಯ ಮೇಲಿರುವ ರುಚಿ ಗುಳ್ಳೆಗಳು ಬೇರೆ ಬೇರೆ ರುಚಿಗಳನ್ನು ಅನುಭವಿಸಿ ತಿಳಿಸುತ್ತದೆ. ಯಾವುದೇ ಆಹಾರ ನಮ್ಮ ನಾಲಿಗೆಗೆ ತಾಕುವ ತನಕ ಅದರ ರುಚಿ ಗೊತ್ತಿರುವುದಿಲ್ಲ. ನಾಲಿಗೆಯ ಮೂರೂ ಭಾಗಗಳನ್ನು ದಾಟಿ ಗಂಟಲ ಬಳಿ ಬರುವಾಗ ನಾವು ತಿಂದ ಆಹಾರ ತನ್ನ ರೂಪ, ಸ್ವರೂಪ, ಹೆಸರುಗಳನ್ನೂ ಕಳೆದುಕೊಂಡು ನಮ್ಮ ಹೊಟ್ಟೆಯೊಳಕ್ಕೆ ಹೋಗಿಬಿಡುತ್ತದೆ, ಕಳೆದು ಹೋಗಿಬಿಡುತ್ತದೆ. ಅಂದರೆ ಇಷ್ಟೊಂದು ಕಷ್ಟಪಟ್ಟು ತಯಾರಿಸಿದ ಆ ಆಹಾರದ ಪ್ರಯಾಣದ ಕಾಲ ಒಂದು ನಿಮಿಷ ಕೂಡ ಇಲ್ಲ.

ಆದರೂ ಪ್ರತಿ ನಿತ್ಯ ನಮಗೆ ಈ ಆಹಾರದಲ್ಲಿ ಮತ್ತು ಅದರ ರುಚಿಯಲ್ಲಿ ಇಷ್ಟೊಂದು ಆಸೆ ಅಕ್ಕರೆಯನ್ನು ಪ್ರಕೃತಿ ನಮ್ಮಲ್ಲಿ ಉಂಟುಮಾಡುತ್ತದೆ ಮತ್ತು ಆಕರ್ಷಣೆಗೆ ಒಳಪಡಿಸುತ್ತದೆ. ಇದನ್ನು ಪಡೆಯಲು ನಮ್ಮನ್ನು ಪರದಾಡಿಸುತ್ತದೆ, ಗೋಳಾಡಿಸುತ್ತದೆ, ಬೆವರಿಳಿಸುತ್ತದೆ. ಆದರೂ ಇಡೀ ಜಗತ್ತಿನಲ್ಲಿ ಈ ಆಹಾರದ, ಪಕ್ವಾನ್ನಗಳ, ರುಚಿಯ ಮತ್ತು ಆಹಾರದ ಸುವಾಸನೆಯಿಂದ ಆಕರ್ಷಿತರಾಗದೆ ಇರುವವರು ಯಾರೂ ಇಲ್ಲ.

# ನರಿ-ವಾನರ-ನರ 189-193

**ಮುಕ್ತಕ-189**

**ಪರಿಪರಿಯ ರೂಪಕಾಂತಿಗಳ ಕಣ್ಣಾಗಿಸುವ |**
**ಪರಿಪರಿಯ ಫಲಮಧುರಗಳ ರಸನೆಗುಣಿಪ ||**
**ಪರಿಪರಿಯ ಕಂಠರವಗಳ ಕಿವಿಗೆ ಸೋಕಿಸುವ |**
**ಗುರು ಸೃಷ್ಟಿ ರಸಿಕತೆಗೆ-ಮಂಕುತಿಮ್ಮ ||**

ರಸನೆಗುಣಿಪ=ರಸನೆಗೆ+ಉಣಿಪ, ಕಂಠರವಗಳ=ಕಂಠ+ರವಗಳ,
ರಸನೆ=ನಾಲಿಗೆ, ಉಣಿಪ=ಉಣಬಡಿಸುವ, ಕಂಠರವ=ಕಿವಿಯಾಲಿಸುವ ನಾದ,

ಪರಿ ಪರಿಯಾದ ರೂಪ ಕಾಂತಿಗಳು, ಹೂಗಳು ಹಣ್ಣುಗಳು ತಿಂಡಿ ತಿನಿಸುಗಳು, ಪರಿಪರಿಯಾದ ಮಧುರ ನಾದಗಳು ಇವುಗಳನ್ನೆಲ್ಲ ಸೃಷ್ಟಿಸಿ ನಮ್ಮ ಮನಸ್ಸಿಗೆ ಆನಂದವೀಯುವ ಈ ಪ್ರಕೃತಿಯೇ, ಸೃಷ್ಟಿಯೇ ನಮ್ಮ ರಸಿಕತೆಗೆ ಗುರು ಎಂದು ಪ್ರಸ್ತಾಪ ಮಾಡುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಯಾವುದಾದರೂ ಒಂದು ವಸ್ತುವಿನಲ್ಲಿರುವ ಗುಣ, ರುಚಿ, ರೂಪ, ನಾದ ಮುಂತಾದವುಗಳನ್ನು ನೋಡಿ ಸವಿದು, ಆಸ್ವಾದಿಸಿ ಮೆಚ್ಚುವುದು, ರಸಿಕತೆ. ಈ ರಸಿಕತೆ, ಸರ್ವೇಸಾಮಾನ್ಯ ಎಲ್ಲರಲ್ಲಿಯೂ ಇರುತ್ತದೆ. ಇಲ್ಲದವರೂ ಇದ್ದಾರೆ. ಆದರೆ ಈ ರಸಿಕತೆ ಎನ್ನುವುದು ಕೆಲವರಿಗೆ ಕೆಲ ವಿಷಯಗಳಲ್ಲೋ ಅಥವಾ ಯಾವುದೋ ಒಂದು ವಿಷಯದಲ್ಲೋ ಇರುತ್ತದೆ.

ಕೆಲವರಿಗೆ ಸಂಗೀತ ಕೇಳುವುದರಲ್ಲಿ ರಸಿಕತೆ, ಕೆಲವರಿಗೆ ಹಾಡುವುದರಲ್ಲಿ ರಸಿಕತೆ, ಕೆಲವರಿಗೆ ಚಿತ್ರ ಕಲೆ, ಕೆಲವರಿಗೆ ಶಿಲ್ಪ ಕಲೆ, ಕೆಲವರಿಗೆ ರುಚಿ ರುಚಿಯಾದ ಹಣ್ಣುಗಳನ್ನೂ ಅಥವಾ ತಿಂಡಿ ತಿನಿಸುಗಳನ್ನು ತಿಂದು ಆಸ್ವಾದಿಸುವುದರಲ್ಲಿ ರಸಿಕತೆ ಇರುತ್ತದೆ. ನಮ್ಮಲ್ಲಿ ಒಬ್ಬರು, ಕಾಫಿ ಕುಡಿದು, 15 ನಿಮಿಷ ಬಾಯಿ ಮುಚ್ಚಿ ಕುಳಿತಿರುತ್ತಿದ್ದರು. ಏಕೆಂದು ಕೇಳಿದರೆ, ಮಾತನಾಡಿದರೆ ಕಾಫಿಯ ಸುಗಂಧ (flavor) ಬಾಯಿಂದ ಹೊರ ಹೋಗುತ್ತದೆಂದು" ಅವರ ಅಂಬೋಣ. ಈ ರೀತಿಯ ರಸಿಕರೂ ಇದ್ದಾರೆ. ಕೆಲವರು ಕಾಫಿ ಕುಡಿದಾಕ್ಷಣ ಬಾಯಿ ಮುಕ್ಕಳಿಸುವವರೂ ಇದ್ದಾರೆ. ಹೀಗೆ ಬೇರೆ ಬೇರೆಯವರಿಗೆ ಬೇರೆ ಬೇರೆಯಾದ ಅಭಿರುಚಿ.

ಮತ್ತೆ ಕೆಲವರಿಗೆ, ಪ್ರಕೃತಿಯ ಅಥವಾ ಪ್ರಕೃತಿಯಲ್ಲಿನ ಸೃಷ್ಟಿಯ ರೂಪ ಲಾವಣ್ಯಗಳನ್ನು ಕಂಡು ಅಭಿನಂದಿಸುವ, ಆರಾಧಿಸುವ, ಆಸ್ವಾದಿಸುವ, ಪಡೆದುಕೊಳ್ಳಬೇಕೆಂದುಕೊಳ್ಳುವ ಅಥವಾ ಪಡೆದುಕೊಳ್ಳುವ, ಹೀಗೆ ಹತ್ತು ಹಲವಾರು ವಿಧದ ರಸಿಕತೆ ಇರುತ್ತದೆ. ಈ ರಸಿಕತೆ ಮಾನವನಿಗೆ ಆ ಪರಮಾತ್ಮ ನೀಡಿದ ಒಂದು ಶ್ರೇಷ್ಠ ವರ. ಬಹುಶಃ ಯಾವ ಅನ್ಯ ಜೀವಿಗೂ ಇಲ್ಲದ ಮತ್ತು ಕೇವಲ ಮಾನವನಿಗೆ ಇರುವ ಹಲವಾರು ಗುಣಗಳಲ್ಲೊಂದು, ಈ ರಸಿಕತೆ, ಪ್ರಕೃತಿಯಲ್ಲಿನ ರೂಪ, ರಸ, ಗಂಧ, ನಾದ, ರುಚಿ, ಭಾವ, ಎಲ್ಲವನ್ನೂ ರಸಿಕತೆಯಿಂದ ಆಸ್ವಾದಿಸುವ ಕ್ಷಮತೆಯನ್ನು ಮಾನವನಿಗೆ ಕೊಟ್ಟ ಸೃಷ್ಟಿಯೇ ಮನುಷ್ಯನಿಗೆ "ರಸಿಕತೆಯ ಗುರು" ಎಂದು ಮಾನ್ಯ ಗುಂಡಪ್ಪನವರು ಹೇಳುತ್ತಾರೆ.





ವಾಚಕರೆ, ಈ ರಸಿಕತೆ ನಮ್ಮಲ್ಲಿ ಇಲ್ಲದೆ ಇದ್ದಿದ್ದರೆ ಜೀವನ ಎಷ್ಟೊಂದು ಬರಡಾಗಿ, ನೀರಸವಾಗಿರುತ್ತಿತ್ತು ಎಂದು ನಾ ಬೇರೆ ಹೇಳಬೇಕೇ. ಹಾಗಾಗಿ ಆ ರಸಿಕತೆಯನ್ನು ನಮಗೆ ನೀಡಿದ ಈ ಸೃಷ್ಟಿಗೆ ಮತ್ತು ಆ ಸೃಷ್ಟಿಕರ್ತನಿಗೆ ನಮನಗಳನ್ನು ಸಲ್ಲಿಸೋಣ.

**ಮುಕ್ತಕ-190** **ಅಮೃತಕಣವಂ ಮರ್ತ್ಯಮೃದ್ಘಟದಿ ಬಯ್ತಿರಿಸಿ |**
**ವಿಮೃಶಬುದ್ಧಿಗೆ ಮೋಹದುಪನೇತ್ರವಿಡಿಸಿ ||**
**ಸಾಮ್ರಾಜ್ಯಮಧ್ಯದಲಿ ದುರ್ಭಿಕ್ಷವಾಗಿಪುದು |**
**ಕ್ರಮತೆಯೋ ನಮ್ರತೆಯೋ-ಮಂಕುತಿಮ್ಮ ||**

ಅಮೃತಕಣವಂ=ಅಮೃತ+ಕಣವಂ, ಮರ್ತ್ಯಮೃದ್ಘಟದಿ=ಮರ್ತ್ಯ+ಮೃತ್+ಘಟದಿ,
ಬಯ್ತಿರಿಸಿ=ಬಯ್ತು+ಇರಿಸಿ, ಮೋಹದುಪನೇತ್ರವಿಡಿಸಿ=ಮೋಹದ+ಉಪ+ನೇತ್ರ+ಇಡಿಸಿ,

ಅಮೃತ=ಸಾವಿಲ್ಲದ, ಕಣವಂ=ಕಣವನ್ನು, ಮರ್ತ್ಯ=ನಾಶವಾಗುವ, ಮೃತ್=ಮಣ್ಣಿನ,
ಘಟದಿ=ಮಡಿಕೆಯಲ್ಲಿ, ಬಯ್ತು=ಬಚ್ಚಿಟ್ಟು, ವಿಮೃಶಬುದ್ಧಿಗೆ=ವಿಮರ್ಶಾತ್ಮಕವಾದ ಬುದ್ಧಿ,
ಮೋಹದ=ಮಮಕಾರದ, ಉಪನೇತ್ರ-ಒಳನೋಟವನ್ನು, ಸಾಮ್ರಾಜ್ಯಮಧ್ಯದಲಿ=ಜೀವನವೆನ್ನುವ
ಸಾಮ್ರಾಜ್ಯದ ಮಧ್ಯದಲಿ, ದುರ್ಭಿಕ್ಷವಾಗಿಪುದು=ಏನೂ ಇಲ್ಲದಂತಾಗಿಸುವುದು,
ಕ್ರಮತೆಯೋ=ವಿಧಾನವೋ, ನಮೃತೆಯೋ=ಪ್ರಲೋಭನೆಯೋ

ನಾಶವಿಲ್ಲದ ಆತ್ಮ ಅಥವಾ ಚೇತನನನ್ನು, ನಾಶವಾಗುವಂತಹ ಈ ದೇಹವೆಂಬ ಮಣ್ಣಿನ ಮಡಿಕೆಯಲ್ಲಿ ಬಚ್ಚಿಟ್ಟು, ವಿಮರ್ಶೆ ಮಾಡುವಂತಾ ಬುದ್ಧಿಶಕ್ತಿಯನ್ನೂ ಕೊಟ್ಟು ವಿವೇಚನೆಯಿಂದಲೋ ಅಥವಾ ಮೋಹದಿಂದಲೋ ತನ್ನ ಬೇಕು ಬೇಡಗಳ ವಿಮರ್ಶೆ ಮಾಡುತ್ತಾ ಈ ಜಗತ್ತಿಗೆ ಅಂಟಿಕೊಳ್ಳುವಂತಹ ಮನವನಿತ್ತು, ಎಲ್ಲವೂ ಇರುವಾಗ ಇದ್ದಕ್ಕಿದ್ದಂತೆಯೇ ಏನೂ ಇಲ್ಲದಂತಾಗಿಸುವುದು ಇದೇನು ವಿಧಾನವೋ ಅಥವಾ ಮಾನವರಿಗೆ ಒಂದು ಪ್ರಲೋಭನೆಯೋ ಎಂದು ವಿಚಾರ ಮಾಡುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಮಣ್ಣಿಂದ ಆದ ದೇಹ. ಆ ದೇಹದೊಳಗೆ ಒಂದು ಆತ್ಮ, ಈ ದೇಹಾತ್ಮ ಸಂಬಂಧಕ್ಕೆ ಪೂರಕವಾಗಿ ಪಂಚ ಭೂತಗಳಿಂದಾದ, ಮನಸ್ಸು ಬುದ್ಧಿಗಳು. ಈ ನಾಲ್ಕರಿಂದ ನಮ್ಮ ಅಸ್ತಿತ್ವ  ಪ್ರಕೃತಿ ಸಂಬಂಧದಿಂದ, ಮನಸ್ಸು ಬುದ್ಧಿಗಳ ಪ್ರಲೋಭನೆಯಿಂದ ನಾವು ಈ ಜಗತ್ತಿಗೆ ಅಂಟಿಕೊಂಡು, ಮೋಹಿಸುತ್ತಾ ಇಲ್ಲಿರುವ ಎಲ್ಲ ವಸ್ತುಗಳನ್ನೂ ರಸಿಕತೆಯಿಂದ ಅನುಭವಿಸುತ್ತಾ ಜೀವಿಸುತ್ತೇವೆ.

ನಮ್ಮ ಜೀವನಕ್ಕೆ ಒಂದು ಅಂತ್ಯ ಉಂಟು, ಎಲ್ಲವನ್ನೂ ಬಿಟ್ಟು, ಈ ದೇಹವನ್ನು ತೊರೆದು ನಾವು ಹೋಗಲೇಬೇಕೆಂದು ಅರಿತಿದ್ದರೂ, ಇಲ್ಲಿ ಜೀವಿಸುವವರೆಲ್ಲರೂ, ಈ ಜಗತ್ತಿನಲ್ಲಿ ನಾವು ನಿರಂತರವಾಗಿ ಜೀವಿಸಿರುತ್ತೇವೆ ಎಂದು ಅಂದುಕೊಳ್ಳುತ್ತೇವೆ.

ಈ ಜಗತ್ತನ್ನು ಬಿಟ್ಟು ಹೋಗುವಾಗಲೂ "ಅಯ್ಯೋ ಬಿಟ್ಟು ಹೋಗಬೇಕಲ್ಲ' ಎಂದು ಕೊರಗುತ್ತಾ ಹೋಗುವವರೇ ಎಲ್ಲರೂ, ಇದೇ ನಮಗಿರುವ ಈ ಜಗತ್ತಿನ ಮೋಹ. ಈ ಮೋಹವನ್ನು ಕೊಟ್ಟವನೇ ಆ ಪರಮಾತ್ಮ. ಇದು ಅವನಿಗೊಂದು ಆಟ. ನಮಗೆ ಇದನ್ನೆಲ್ಲಾ ಕೊಟ್ಟು, ನಾವು ಪಡುವ ಪಾಡು ಅವನಿಗೆ ವಿನೋದ ಅಥವಾ ಈ ಜಗತ್ತನ್ನು ನಡೆಸುವ ಅವನ ವಿಧಾನವಿರಬಹುದು.

ಜೀವಿಗಳಿಗೆ ಈ ಮೋಹವನ್ನು ಕೊಟ್ಟದ್ದರಿಂದಲೇ ಈ ಜಗತ್ತಿನ ವೈವಿಧ್ಯಮಯ ಜೀವನದ ಆಟ ನಡೆಯುತ್ತಿದೆ. ಇಲ್ಲದಿದ್ದರೆ ಜಗತ್ತು, ಬಾಳು, ಜೀವನ, ಎಲ್ಲವೂ ನೀರಸವಾಗಿ, ಇಡೀ ಜಗತ್ತೇ ಒಂದು ಬೆಂಗಾಡಿನಂತಿರುತ್ತಿತ್ತು. ಇದರೊಳಗೆ ರಕ್ತಿಯಿಂದ ಇರುವುದು ಒಂದು ಹಂತದ ತನಕ ಸರಿ. ಆದರೆ ಜೀವನವಿಡೀ ಈ ಮೋಹಕ್ಕೆ ಅಂಟಿಕೊಂಡಿದ್ದರೆ ಇದನ್ನೆಲ್ಲಾ ಬಿಟ್ಟು ಹೋಗುವಾಗ ತೀವ್ರ ನೋವು ಮತ್ತು ಸಂಕಟವನ್ನು ಅನುಭವಿಸಬೇಕಾಗುತ್ತದೆ.

ಆದ್ದರಿಂದಲೇ, ಈ ಮೋಹವೆಂಬುದು ಪರಮಾತ್ಮ ಸೃಷ್ಟಿಯೇ ಆದರೂ ನಮ್ಮ ಹಿರಿಯರು, ಸಾಧು ಸಂತರು, ಭಕ್ತ ಶಿಖಾಮಣಿಗಳ ಬೋಧನೆಯು ಮತ್ತು ನಮ್ಮ ವೇದ, ಉಪನಿಷತ್ತುಗಳು, ಪುರಾಣಗಳು, ಹೀಗೆ ಎಲ್ಲವೂ ಈ ಮೋಹವನ್ನು ಬಿಟ್ಟರೆ ಆತ್ಮನಿಗೆ ಸುಖವೆಂದು ಬೋಧಿಸಿದ್ದಾರೆ. ಅಶಾಶ್ವತವಾದ ಇಂದ್ರಿಯ ಸುಖಕ್ಕಿಂತ ನಿತ್ಯವಾದ, ಸತ್ಯವಾದ, ಆತ್ಮಾನಂದ ಬೇಕಾದರೆ ಈ ಮೋಹವನ್ನು ಬಿಡಬೇಕೆಂದು ನಮ್ಮ ಸನಾತನ ಧರ್ಮದ ಅಭಿಪ್ರಾಯ. ಆದರೆ ಈ ಜಗತ್ತಿನಲ್ಲಿ ರಕ್ತಿಯಿಂದಿರುವುದೋ ಅಥವಾ ವಿರಕ್ತಿಯಿಂದಿರುವುದೋ ಎನ್ನುವುದು ಪ್ರತಿಯೊಬ್ಬರ ಸ್ವಂತ ವಿಚಾರಕ್ಕೆ ಬಿಟ್ಟದ್ದು.

**ಮುಕ್ತಕ-191**

**ಪೊಡೆಯುಣಿಸ ಮಿಗಹಕ್ಕಿಹುಳುಗಳಂದದಿ ನರನು |**
**ತಡಕುವನು; ತನ್ನಾತ್ಮದುಣಿಸ ಮರೆಯುವನು ||**
**ಒಡಲಿನಬ್ಬರವೇನು? ಆತುಮದ ನಾಣ್ಣೇನು |**
**ಪೊಡವಿಗಿದೆ ದುಮ್ಮಾನ-ಮಂಕುತಿಮ್ಮ ||**

ಪೊಡೆಯುಣಿಸ=ಮೊಡೆ+ಉಣಿಸ, ಮಿಗಹಕ್ಕಿಹುಳುಗಳಂದದಿ=ಮಿಗ+ಹಕ್ಕಿ+ಹುಳು+ಗಳಂದದಿ,
ತನ್ನಾತ್ಮದುಣಿಸ=ತನ್ನ+ಆತ್ಮದ+ಉಣಿಸ, ಒಡಲಿನಬ್ಬರವೇನು=ಒಡಲಿನ+ಅಬ್ಬರವು+ಅದೇನು,

ಪೊಡವಿಗಿದೆ=ಪೊಡವಿಗೆ+ಇದೆ

ಪೊಡೆಯುಣಿಸ=ಹೊಟ್ಟೆಯಾಹಾರ, ನಾನು=ಸಂಕೋಚ, ಒಡಲು=ದೇಹ, ಮೊಡವು=ಹೊಳಪು

ಅಥವಾ ತೇಜಸ್ಸು.

ಮನುಷ್ಯನು, ಪ್ರಾಣಿ, ಹಕ್ಕಿ, ಹುಳುಗಳ ರೀತಿ ತನ್ನ ಹೊಟ್ಟೆಪಾಡಿಗಾಗಿ ಆಹಾರಕ್ಕಾಗಿ ತಡಕಾಡುತ್ತಾನೆ. ಆದರೆ ಆತ್ಮಕ್ಕೆ ಬೇಕಾದ ಆಹಾರವನ್ನು ಕೊಡದೆ, ಅದನ್ನು ಸೊರಗಿಸುತ್ತಿದ್ದಾನೆ. ತೇಜೋರೂಪವಾದ ಆತ್ಮವು ಕಡೆಗಣಿಸಲ್ಪಟ್ಟಿದೆ. ಇದು ತೀರ ದುಃಖದ ವಿಚಾರ ಎಂದು ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ ಪ್ರಸ್ತಾಪ ಮಾಡಿದ್ದಾರೆ.





ಮನುಷ್ಯನನ್ನು ಬಿಟ್ಟು ಬೇರೆ ಎಲ್ಲಾ ಪ್ರಾಣಿಗಳು, ಕೇವಲ ತಮ್ಮ ಆಹಾರವನ್ನು ಹುಡುಕುವುದು, ತಮ್ಮನ್ನು ತಾವು ಕಾಪಾಡಿಕೊಳ್ಳುವುದು ಮತ್ತು ತಮ್ಮ ಸಂತತಿಯನ್ನು ಬೆಳೆಸುವ ಕಾರ್ಯದಲ್ಲಿ ಮಾತ್ರ ನಿರತರು. ಮನುಷ್ಯ ಮಾತ್ರ ಭಿನ್ನವಾಗಿ ಆಧ್ಯಾತ್ಮದ ದಾರಿಯಲ್ಲಿ ತನ್ನನ್ನು ತಾನು ತೊಡಗಿಸಿಕೊಂಡು ತನ್ನ ಮೂಲವಾದ ಪರಮಾತ್ಮನನ್ನು ಸೇರಲು ಪ್ರಯತ್ನ ಪಡುವ ಸಾಮರ್ಥ್ಯವನ್ನು ಹೊಂದಿದ್ದಾನೆ. ಅನ್ಯ ಪ್ರಾಣಿಗಳಿಗಿಂತ ಮನುಷ್ಯ ಎಷ್ಟೊಂದು ರೀತಿಯಲ್ಲಿ ಭಿನ್ನ ಎನ್ನುವುದು ಸರ್ವರಿಗೂ ವೇದ್ಯ. ಆ ಕಾರಣಕ್ಕಾಗಿಯೇ ಮನುಷ್ಯ ಬೇರೆ ಪ್ರಾಣಿಗಳಂತೆ ಅಲ್ಲದೆ ಊರ್ಧ್ವಮುಖನಾಗಿದ್ದಾನೆ. ತಾನು ಆತ್ಮ" ಎಂದು ಅರಿತುಕೊಳ್ಳಲು ಪ್ರಯತ್ನ ಪಡಲು ಅವನಿಗೆ ಸಾಮರ್ಥ್ಯವನ್ನು ಪರಮಾತ್ಮ ಕೊಟ್ಟಿದ್ದಾನೆ.

ಆತ್ಮಕ್ಕೆ ದೇಹವಿಲ್ಲದೆ ಇದ್ದರೆ ಅಸ್ತಿತ್ವವೇ ಇಲ್ಲ. ಅಂದರೆ ಆತ್ಮವು ತನ್ನ ಪೂರ್ವ ಕರ್ಮಗಳನ್ನು ಕಳೆದುಕೊಳ್ಳಲು ಪುನಃ ಜನ್ಮ ಪಡೆದುಕೊಳ್ಳುವುದಕ್ಕೆ ಒಂದು ಕಾಯ ಅಥವಾ ದೇಹದ ಅವಶ್ಯಕತೆ ಇದೆ. ಆತ್ಮೋದ್ಧಾರಕ್ಕೆ ದೇಹ ಒಂದು ಉಪಕರಣವಷ್ಟೇ. ಆದರೆ ಮನುಷ್ಯ ಈ ದೇಹಕ್ಕಷ್ಟೇ ಪ್ರಾಮುಖ್ಯತೆಯನ್ನು ನೀಡಿ ಆತ್ಮಕ್ಕೆ ನೀಡಬೇಕಾದ ಗಮನವನ್ನು ಕೊಡುತ್ತಿಲ್ಲ ಎನ್ನುವುದೇ ವಿಷಾದದ ಸಂಗತಿ. 'ಇದಂ ಶರೀರಂ, ಪರಿಣಾಮ ಪೇಶಲಂ ಪತತ್ಯವಶ್ಯಂ ಶ್ಲಥ ಸಂಧಿ

ಜರ್ಜರಂ" ಎಂದು ಕುಲಶೇಖರ ಆಳ್ವಾರರು ಹೇಳುತ್ತಾರೆ. ಎಂದರೆ ಕಾಲದ ಪರಿಣಾಮಗಳಿಗೊಳಗಾಗಿ ಈ ಶರೀರ ಬಿದ್ದು ಹೋಗುವುದು ಖಂಡಿತ ಎಂದು. ಇಂತಹ ದೇಹವನ್ನು ಕಾಪಾಡಿಕೊಳ್ಳುವುದಕ್ಕೋಸ್ಕರ, ಏನೆಲ್ಲಾ ಸಾಹಸ ಮಾಡುತ್ತಾನೆ ಮನುಷ್ಯ ಈ ದೇಹಕ್ಕೆ ಎಷ್ಟೊಂದು ಪ್ರಾಮುಖ್ಯತೆ ಎಷ್ಟೊಂದು ರೀತಿಯ ಅಲಂಕಾರ. ಆದರೆ ನಿರಂತರವಾದ, ನಿತ್ಯವಾದ ತನ್ನ ಆತ್ಮವನ್ನು ಕಾಪಾಡಿಕೊಳ್ಳಲು ಆತ್ಮದ ಉನ್ನತಿಗೆ, ಏನನ್ನೂ ಮಾಡುವುದಿಲ್ಲ.

ದೇಹವನ್ನು ಕಾಪಾಡಿಕೊಳ್ಳುವುದು ಅವಶ್ಯ. ಆದರೆ ಅದನ್ನು ಒಂದು ಉಪಕರಣ ಎಂದು ಅರಿತು, ಅದಕ್ಕೆ ಸೀಮಿತ ಪ್ರಾಮುಖ್ಯತೆಯನ್ನು ನೀಡಿ, ದೇಹವನ್ನು ಉಪಯೋಗಿಸಿಕೊಂಡು, ಆತ್ಮವನ್ನು ಅರಿಯಲು ಪ್ರಯತ್ನಪಡಬೇಕು. ಆ ದಾರಿಯಲ್ಲಿ ಮುಂದೆ ಸಾಗಲು ನಮ್ಮ ಪೂರ್ವಜರು ಸಾವಿರಾರು ಮಾರ್ಗಗಳನ್ನು ಸ್ವಾನುಭವದಿಂದ ನಮಗೆ ತೋರಿಸಿದ್ದಾರೆ. ಆದರೆ ನಾವು ಅದನ್ನು ಕಡೆಗಣಿಸಿದ್ದೇವೆ. ಒಂದು ದಿನದ 24 ಗಂಟೆಗಳಲ್ಲಿ ನಮಗೆ 5 ನಿಮಿಷವೂ ಧ್ಯಾನ ಮಾಡುವ ಸಮಯವಿರುವುದಿಲ್ಲ. ನಮಗೆ ಸದಾಕಾಲ ನಮ್ಮ ಬಾಹ್ಯವಾದ ಈ ದೇಹ, ಮನಸ್ಸು ಬುದ್ಧಿಗಳ ಮೂಲಕ ಈ ಜಗತ್ತಿನೊಂದಿಗೆ ಸಂಪರ್ಕ, ಜಗತ್ತಿನ ಮೇಲೆ ಅತೀವ ಮೋಹ ಮತ್ತು ಅತೀ ರಸಿಕತೆ. ನಮಗೆ ಬೇಡದೆ ಇರುವ ವಿಷಯವೇ ಇಲ್ಲ. ನಾವು ಸದಾಕಾಲ ಬಾಹ್ಯಮುಖಿಗಳು. ಎಲ್ಲವೂ ತೋರಿಕೆ, ಆಡಂಬರ ಮತ್ತು ಡಂಬಾಚಾರ. ಅಂತರ್ಮುಖಿಗಳಾಗುವುದೇ ಇಲ್ಲ. ಇದರಿಂದ ಸತ್ಯವಾದ ಆನಂದಸ್ವರೂಪಿಯಾದ ಆತ್ಮ ಸಂಕೋಚದಿಂದ ಸೊರಗಿ ಹೋಗಿದೆ. "ಆತ್ಮ!!!" ಎಂದರೇನು? ಎಂದು ಕೇಳುವ ಕಾಲ ಬಂದಿದೆ. ಇದು ವಿಷಾದನೀಯವಲ್ಲವೇ?

ವಾಚಕರೆ, ಈ ದೇಹ ಕೇವಲ ಒಂದು ಉಪಕರಣ. ಅದನ್ನು ಆರೋಗ್ಯವಾಗಿಟ್ಟುಕೊಳ್ಳಬೇಕು. ಏಕೆಂದರೆ ಈ ದೇಹದಿಂದಲೇ ಆತ್ಮಕ್ಕೆ ಮುಕ್ತಿ, ಆದ್ದರಿಂದ ಆತ್ಮವನ್ನು ಸೊರಗಲು ಬಿಡಬಾರದು, ಅಂತರ್ಮುಖಿಗಳಾಗಿ ಅದಕ್ಕೂ ಆಗಾಗ ಆಹಾರವನ್ನು ಕೊಡುತ್ತಲೇ ಇರಬೇಕು. ಅಂತಹ ಪ್ರಯತ್ನವನ್ನು ನಾವೆಲ್ಲಾ ಮಾಡೋಣ.

**ಮುಕ್ತಕ-192** **ದೇವದಾನವರ ರಣರಂಗ ಮಾನವಹೃದಯ ।**
**ಭಾವ ರಾಗ ಹಠಂಗಳವರ ಸೇನೆಗಳು ॥**
**ಭೂವಿಭವಜಯಗಳ ಭ್ರಾಂತಿಯಲಿ ಮರೆಯುವರು ।**
**ಜೀವಾಮೃತವನವರು-ಮಂಕುತಿಮ್ಮ ॥**

ಹಠಂಗಳವರ=ಹಠಂಗಳು+ಅವರ, ಭೂವಿಭವಜಯಗಳ=ಭೂ+ವಿಭವ+ಜಯಗಳ,
ಜೀವಾಮೃತವನವರು=ಜೀವಾಮೃತವನು+ಅವರು

ಇಂದಿನ ಸಮಾಜದಲ್ಲಿ ಮಾನವರ ನಡವಳಿಕೆಯನ್ನು ವಿಶ್ಲೇಷಣೆ ಮಾಡುತ್ತಾ, ಒಳ್ಳೆಯ ಮತ್ತು ಕೆಟ್ಟ ವಿಚಾರಗಳ ನಡುವಿನ ಯುದ್ಧ ಪ್ರತಿ ಹೃದಯದಲ್ಲೂ ನಡೆದಿದೆ ಮತ್ತು ಜನರೆಲ್ಲಾ ಭಾವುಕತೆ, ಕೋಪ ಮತ್ತು ಹಠವನ್ನು ಮನಗಳಲ್ಲಿ ತುಂಬಿಕೊಂಡು, ಈ ಜಗತ್ತಿನಲ್ಲಿ ವೈಭವದಿಂದ ಜೀವಿಸುತ್ತಿದ್ದೇವೆ ಎನ್ನುವ ಭ್ರಮೆಯಲ್ಲಿ ಜೀವಿಸುತ್ತಾ, ಆತ್ಮದ ವಿಚಾರವನ್ನು ತೊರೆದು, ಅದರಿಂದ ದೊರೆಯುವ ಅಮೃತದಂತಹ ಅನುಭವವನ್ನು ಮರೆತಿದ್ದಾರೆ ಎಂದು ಪ್ರಸ್ತಾಪ ಮಾಡುತ್ತಾರೆ ಮಾನ್ಯ ಗುಂಡಪ್ಪನವರು.

ನಮ್ಮಲ್ಲಿ ವಿಪುಲವಾದ ಪೌರಾಣಿಕ ಸಾಹಿತ್ಯವಿದೆ. ಅದರಲ್ಲೆಲ್ಲಾ ಒಂದು ಸಮಾನವಾದ ವಿಚಾರವಿದೆ. ಕೆಟ್ಟದ್ದರ ಮೇಲೆ ಒಳ್ಳೆಯದಕ್ಕೆ ವಿಜಯ. ಅದನ್ನು ಬರೆದವರು, ಆಯಾ ಕಥೆಗಳ ಪಾತ್ರಗಳ ಮೂಲಕ ಈ ತತ್ವವನ್ನು ಹೇಳಿದ್ದಾರೆ. ಹಾಗೆ ನೋಡಿದರೆ ಅದು ಜಗತ್ತಿನ ಎಲ್ಲ ಮನುಜರ ಕಥೆಯೇ ಎಂದು ಅನ್ನಿಸುತ್ತದೆ. ಎಲ್ಲ ಮಾನವರ ಹೃದಯಗಳಲ್ಲಿ ಒಳ್ಳೆಯದು ಮತ್ತು ಕೆಟ್ಟದ್ದರ ನಿರಂತರ ತಿಕ್ಕಾಟ ನಡೆದೇ ಇರುತ್ತದೆ. ಪ್ರತೀ ಮನುಷ್ಯನಿಗೂ ಒಳ್ಳೆಯದು ಮತ್ತು ಕೆಟ್ಟದ್ದರ ಅರಿವು ಇದ್ದು, ಅದೇ ರಾಮ ಮತ್ತು ರಾವಣರ ಪಾತ್ರವನ್ನು ವಹಿಸುತ್ತಿರುತ್ತದೆ. ಗುಣದ ಪ್ರಮಾಣದ ವ್ಯತ್ಯಾಸದಿಂದ ಆ ವ್ಯಕ್ತಿಯನ್ನು ಒಳ್ಳೆಯವನೆಂದೋ ಕೆಟ್ಟವನೆಂದೋ ಕರೆಯಲಾಗುತ್ತದೆ.

ಅಂತಹವರು ಈ ಜಗತ್ತಿನಲ್ಲಿ ತಮ್ಮ ಭಾವುಕತೆ, ಪ್ರೀತಿ ಪ್ರೇಮಗಳು, ದ್ವೇಷಾಸೂಯೆಗಳು, ಕೋಪ ತಾಪಗಳು, ಹೀಗೆ ಹತ್ತು ಹಲವಾರು ಭಾವನೆಗಳೊಂದಿಗೆ ವೈಭವದಿಂದ ಮೆರೆಯುತ್ತಾರೆ. ತಾವೇನೋ ಇಲ್ಲಿ ಶಾಶ್ವತವಾಗಿ ಇದ್ದು ಬಿಡುತ್ತಾರೇನೋ ಎನ್ನುವ ಹಾಗೆ ಮೆರೆಯುತ್ತಾರೆ. ಹಾಗೆ ಮೆರೆಯುವಾಗ ಅವರು ಆತ್ಮಾನುಸಂಧಾನದಿಂದ

ದೊರೆಯುವ ನಿಜವಾದ ಮತ್ತು ಶಾಶ್ವತ ಆನಂದವನ್ನು ಪಡೆಯಲು ಮರೆಯುತ್ತಾರೆ. ಹೊರಗಿನ ಭಾವಗಳನ್ನೇ ಒಳಗೂ ತುಂಬಿಕೊಂಡು, ಅಂತರ್ಮುಖಿಗಳಾಗಿ ಧ್ಯಾನ, ಭಕ್ತಿ ಮತ್ತು ವಿರಕ್ತಿಯಿಂದ ದೊರೆಯಬಹುದಾದ ಆನಂದದಿಂದ ವಂಚಿತರಾಗಿದ್ದಾರೆ. ಇಂದಿನ ನೂತನ ಜೀವನ ಶೈಲಿಯ ದುರಂತವೇ ಇದು. ಆತ್ಮನ ಮುಂದಿನ ಪ್ರಯಾಣಕ್ಕೆ ಯಾವ ಸಿದ್ಧತೆಯೂ ಇಲ್ಲ.

ವಿಪರ್ಯಾಸವೆಂದರೆ, ಪಾಪ ಈ ಆತ್ಮ ತನ್ನ ಮೂಲವನ್ನು ಸೇರುವ ಪ್ರಯಾಣದಲ್ಲಿ ಒಂದು ಹೆಜ್ಜೆ ಮುಂದೆ ಇಟ್ಟರೆ, ಇಂದಿನ ಜಗತ್ತಿನ ಸಂಪರ್ಕದಿಂದ ಹತ್ತು ಹೆಜ್ಜೆ ಹಿಂದೆ ಬರುತ್ತಿದೆ. ಹೀಗಾದರೆ ಅದು ತನ್ನ ಗಮ್ಯವನ್ನು ಮುಟ್ಟುವುದು ಎಂದೋ!!!! ವಾಚಕರೆ, ನಾವೂ ಸಹ ಇದರ ಬಗ್ಗೆ ಯೋಚಿಸಿ, ಈ ಜಗತ್ತಿನೊಂದಿಗಿನ ರಕ್ತಿಯನ್ನು ಕಡಿಮೆಯಾಗಿಸಿ, ಆತ್ಮದ ಮುನ್ನಡೆಗೆ ಅಣಿಮಾಡಿಕೊಡಲು, ಪ್ರಯತ್ನಿಸೋಣ.

(264)

| ಕಗ್ಗರಸಧಾರೆ | ನರಿ-ವಾನರ-ನರ 189-193 |
|---|---|

**ಮುಕ್ತಕ-193**

**ಪರಮೇಷ್ಠಿ ನಿಜಚಾತುರಿಯನಳೆಯೆ ನಿರಮಿಸಿದ |**
**ನೆರಡುಕೈಯಿಂದೆರಡು ಜಂತುಗಳ ಬಳಿಕ ||**
**ಇರದೆ ತಾನವನೊಂದುಗೂಡಿಸಲು ಬೆರಗಾಯ್ತು |**
**ನರಿಯು ವಾನರವು ನರ-ಮಂಕುತಿಮ್ಮ ||**

ನಿಜಚಾತುರಿಯನಳೆಯೆ=ನಿಜ+ಚಾತುರಿಯನು+ಅಳೆಯ,

ನೆರಡುಕೈಯಿಂದೆರಡು=ಎರಡು+ಕೈಗಳಿಂದ+ಎರಡು,

ತಾನವನೊಂದುಗೂಡಿಸಲು=ತಾನು+ಅವನು+ಒಂದು+ಕೂಡಿಸಲು, ಬೆರಗಾಯ್ತು=ಬೆರಗು+ಆಯ್ತು.

ಪರಮೇಷ್ಠಿ=ಬ್ರಹ್ಮ, ಚಾತುರಿಯನು=ಚಾತುರ್ಯವನು, ಅಳೆಯೆ=ಪರೀಕ್ಷಿಸಲು, ಜಂತು=ಪ್ರಾಣಿ (ಜೀವಂತಿ ಇತಿ ಜಂತು) ಬೆರಗು=ಆಶ್ಚರ್ಯ.

ಪರಬ್ರಹ್ಮನು ತನ್ನ ನಿಜವಾದ ಚಾತುರ್ಯವನ್ನು ಪರೀಕ್ಷಿಸಲು ತನ್ನ ಎರಡೂ ಕೈಗಳಿಂದ ಎರಡು ಪ್ರಾಣಿಗಳನ್ನು ಸೃಷ್ಟಿಸಿದನಂತೆ. ಒಂದು ನರಿ, ಇನ್ನೊಂದು ಮಂಗ, ಅವುಗಳನ್ನು ಸೃಷ್ಟಿಸಿದ ಮೇಲೆ, ಸುಮ್ಮನೆ ಇರದೆ, ಇವೆರಡನ್ನೂ ಒಂದಾಗಿ ಸೇರಿಸಿದನಂತೆ. ಆಶ್ಚರ್ಯವೆಂದರೆ ಅವೆರಡರ ಸಮ್ಮಿಲನದಿಂದ ಉಂಟಾದದ್ದು ನರ (ಮನುಷ್ಯ)ಪ್ರಾಣಿಯಂತೆ, ಎಂದು ಮಾನ್ಯ ಗುಂಡಪ್ಪನವರು ವಿಡಂಬನಾತ್ಮಕವಾಗಿ ಈ ಮುಕ್ತಕದಲ್ಲಿ ಪ್ರಸ್ತಾಪಿಸುತ್ತಾರೆ.

ವಿಜ್ಞಾನಿ ಡಾರ್ವಿನ್ನನ ಸಿದ್ಧಾಂತದ ಪ್ರಕಾರ ಮಂಗನಿಂದ ಮಾನವ ಎಂದಿದೆ. ಆ ಸಿದ್ಧಾಂತ ಸರಿಯಲ್ಲ ಎಂದು ಇತ್ತೀಚಿನ ವಿಜ್ಞಾನಿಗಳು ಪ್ರತಿಪಾದಿಸಿದ್ದಾರೆ. ಆದರೆ ನಮ್ಮ ಗುಂಡಪ್ಪನವರು ಒಂದು ವಿಚಿತ್ರವಾದ ವಿಷಯವನ್ನು ನಮ್ಮ ಮುಂದಿಟ್ಟಿದ್ದಾರೆ. ಮನುಷ್ಯ, ನರಿ ಮತ್ತು ಮಂಗನ ಮಿಶ್ರಣದಿಂದ ಆಗಿದ್ದಾನೆ ಎನ್ನುತ್ತಾರೆ. ಮನುಷ್ಯನ ಗುಣಗಳನ್ನು ವಿಶ್ಲೇಷಣೆ ಮಾಡಿ ಅವರು ಬಹುಶಃ ಈ ನಿರ್ಧಾರಕ್ಕೆ ಬಂದಿರಬಹುದು. ಏಕೆಂದರೆ ಮನುಷ್ಯನ ರೂಪ ಏನೇ ಆದರೂ, ಬಣ್ಣ ಏನೇ ಆದರೂ, ಲಿಂಗವೇನೆ ಆದರೂ, ಭಾಷೆ ಯಾವುದೇ ಆದರೂ, ದೇಶವಾವುದೇ ಆದರೂ ಮೂಲ ಗುಣಗಳು ಮಾತ್ರ ಒಂದೇ ಆಗಿವೆ ಎನ್ನುವುದು ಆಶ್ಚರ್ಯವಲ್ಲವೇ?

ಇವನಿಗೆ ಮಂಗ ಬುದ್ಧಿಯೂ ಇದೆ. ನರಿಯಂತೆ ಕುತಂತ್ರಿಯೂ ಹೌದು. ಮನುಷ್ಯನಿಗೆ, ಮಂಗನಂತೆ ಸ್ಥಿರ ಚಿತ್ತವಿಲ್ಲದೇ, ನರಿಯಂತೆ ಕುಟಿಲತೆಯಿಂದಲೂ ಕೂಡಿದ್ದಾನೆ. ಮಾನವನ ಮನಸ್ಸು ಒಂದು ಕಡೆ ನಿಲ್ಲುವುದೇ ಇಲ್ಲ. ಮಂಗ ಒಂದು ಕೊಂಬೆಯಿಂದ ಮತ್ತೊಂದು ಕೊಂಬೆಗೆ ನೆಗೆಯುವಂತೆ, ಮನುಷ್ಯನ ಮನಸ್ಸು ಸಹ ನಿಮಿಷ ನಿಮಿಷಕ್ಕೂ ವಿಷಯದಿಂದ ವಿಷಯಕ್ಕೆ ಹಾರುತ್ತಿರುತ್ತದೆ. ಒಂದು ಕ್ಷಣವೂ ಸ್ಥಿರ ಚಿತ್ತವಿರುವುದಿಲ್ಲ. ಅಷ್ಟೇ ಅಲ್ಲ, ಇವನಿಗೆ ಮಂಗನಂತೆಯೇ ಕುಚೇಷ್ಟೆಯನ್ನೂ ಸಹ ಮಾಡಲು ಬರುತ್ತದೆ. ಚಿಕ್ಕಂದಿನಲ್ಲಿ ಇದು ಹೆಚ್ಚು. "ಮಗನನ್ನು ಕೊಡು ಎಂದರೆ, ದೇವರೇ, ಮಧ್ಯದಲ್ಲಿ ಒಂದು ಸೊನ್ನೆಯನ್ನೂ ಇಟ್ಟು ಕೊಟಿದ್ದೀಯಲ್ಲಾ" ಎಂದು, ನಮ್ಮಜ್ಜಿ ಹೇಳುತ್ತಿದ್ದರು, ಆದರೆ ವಯಸ್ಸಾದಂತೆ ಈ ಮಂಗ ಚೇಷ್ಟೆಗಳು ಕಡಿಮೆಯಾದರೂ ಮಂಗ ಬುದ್ಧಿ ಕಡಿಮೆಯಾಗುವುದೇ ಇಲ್ಲ.

ಇನ್ನು ನರಿಯೋ ಪ್ರಾಣಿಗಳಲ್ಲೇ ಹೆಚ್ಚು ಬುದ್ಧಿವಂತ ಪ್ರಾಣಿ ಎಂದು ಹೆಸರು ಗಳಿಸಿದೆ. ಕುಟಿಲತೆಗೆ ಪ್ರಖ್ಯಾತಿ ಮನುಷ್ಯನೂ ಸಹ ಆ ನರಿಯ ಬುದ್ಧಿಯನ್ನು ಹೊಂದಿದ್ದಾನೆ. ತನಗೇನು ಬೇಕೋ ಅದನ್ನು ಪಡೆದುಕೊಳ್ಳಲು ಎಲ್ಲ ರೀತಿಯ ಉಪಾಯಗಳನ್ನೂ ಮಾಡಿ ಪರರಿಂದ ಬೇಡಿಯೋ, ಕದ್ದೋ, ಕಸಿದೋ, ವಂಚಿಸಿಯೋ, ಪಡೆದುಕೊಳ್ಳುತ್ತಾನೆ. ಒಂದು ಕಾಗೆಯನ್ನು ವಂಚಿಸಿ ಅದರ ಬಾಯಲ್ಲಿನ ಮಾಂಸದ ತುಂಡನ್ನು ಕಸಿದ ನರಿಯ ಕತೆಯನ್ನು ನೀವೆಲ್ಲ ಓದಿರುತ್ತೀರಿ.

ಮನುಷ್ಯನ ಬುದ್ದುಯೂ, ತನ್ನ ಕಾರ್ಯ ಸಾಧನೆಗೆ ಯಾವ ಹಂತಕ್ಕೆ ಬೇಕಾದರೂ ಇಳಿದು ಬಿಡುತ್ತದೆ. ಎಲ್ಲ ಮಾನವರೂ ಹಾಗೆಯೇ ಎಂದಲ್ಲ. ಪ್ರಸಕ್ತ ಸಮಾಜದಲ್ಲಿ ದುಡ್ಡಿಗೆ ಹೆಚ್ಚು ಮಹತ್ವವಿರುವ ಕಾಲದಲ್ಲಿ, ಅಸ್ತಿತ್ವಕ್ಕೆ ತೀವ್ರ ಪೈಪೋತಿಯ ಕಾಲದಲ್ಲಿ, ಮನುಷ್ಯ ಈ ನರಿ ಬುದ್ಧಿಯನ್ನುಅತಿಯಾಗಿ ಉಪಯೋಗಿಸುತ್ತಾನೆ ಹಾಗಾಗಿ ಗುಂಡಪ್ಪನವರು, ಮನುಷ್ಯ ಮಂಗ ಮತ್ತು ನರಿಯ ಮಿಶ್ರಣ ಎಂದು ಸೂಕ್ತವಾಗಿಯೇ ಹೇಳಿದ್ದಾರೆ.

ಆದರೆ ವಾಚಕರೆ ಅರ್ಥಮಾಡಿಕೊಳ್ಳಬೇಕಾದ ವಿಷಯವೇನೆಂದರೆ ನಾವು ಮನುಷ್ಯರು, ಮಾನವತೆಯಿಂದ ಬಾಳಬೇಕಾದವರು ನಮ್ಮಲ್ಲಿರುವ ಮಂಗನ ಚಂಚಲ ಬುದ್ಧಿಯನ್ನು ಮತ್ತು ನರಿಯ ಕುಟಿಚತೆಯನ್ನೂತೊರೆದು ಕೇವಲ ಮಾನವರಾಗಿ ಉಳಿಯಬೇಕು. “ ಬದುಕು ಬದುಕಲು ಬಿಡು “ ಎನ್ನುವ ತತ್ವವನ್ನು ನಮ್ಮ ಜಿವನದಲ್ಲಿ ಅಳವಡಿಸಿಕೊಂಡರೆ ಎಲ್ಲರೂ ಸಂತೋಷದಿಂದ ಸೌಹಾರ್ದತೆಯಿಂದ ಇರಬಹುದು ಎನ್ನುವುದು ನನ್ನ ಭಿಲ್ರಾಯ. ನೀವೂ ಸಹ ಒಪ್ಪುತ್ತೀರಲ್ಲವೇ?

# ನಾಲ್ಮೊಗ 194-198

**ಮುಕ್ತಕ- 194**

**ಅಂತರಂಗವನೆಲ್ಲ ಬಿಚ್ಚಿ ತೋರಿಪನಾರು? ।**
**ಆಂತರಗಭೀರಗಳ ತಾನೆ ಕಂಡವನಾರ? ||**
**ಗಂತಿಗಳು ಗಂಟುಗಳು ಮಡಿಪುಡಿಪುಗಳಲ್ಲಿ ।**
**ಸ್ವಂತಕೇ ದುರ್ದರ್ಶ- ಮಂಕುತಿಮ್ಮ ||**

ಅಂತರಂಗವನೆಲ್ಲ =ಅಂತರಂಗವನ್ನು+ಎಲ್ಲ, ತೋರಿಪನಾರು=ತೋರಿಪನು+ಯಾರು

ತಮ್ಮ ತಮ್ಮ ಅಂತರಂಗದಲ್ಲಿ ಏನಿದೆ ಎಂದು ತೋರುವವರು ಯಾರು ಅಥವಾ ಒಳಗಿರುವ ಗಂಭೀರತೆಯನ್ನು ಕಂಡವರಾರು, ವಿಚಾರ ಮತ್ತು ವಿಷಯಗಳು ಮನುಸ್ಸಿನ ಮಡಿಕೆ ಮಡಿಕೆಗಳಲ್ಲಿ, ತಿರುವು ತಿರುವುಗಳಲ್ಲಿ, ಗಂಟು ಗಂಟುಗಳಾಗಿ ಸೇರಿಕೊಂಡುಬಿಟ್ಟಿದೆ. ನಮ್ಮ ಮನದಾಳದಲ್ಲಿರುವುದು, ನಮ್ಮ ಅನುಭವಕ್ಕೆ ಬರುವುದು ಕಷ್ಟವಗಿದೆ ಎಂದು ಪ್ರಸ್ತಾಪ ಮಾಡುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಅಂತರಂಗದ ಆಳ ಬಹಳಗಾಧವಾಗಿದೆ. ಒಂದು ಸಮುದ್ರವೆಷ್ಟು ದೊಡ್ಡದೋ ಅಷ್ಟೇ ದೊಡ್ಡದಿರಬಹುದು ಅದರ ಆಳ ಮತ್ತು ವಿಸ್ತಾರ. ನಾವು ಅನ್ಯರಿಗೆ ನಮ್ಮ ಅಂತರಂಗವನ್ನು ಸಂಪೂರ್ಣವಾಗಿ ತೋರುವುದು ಸಾಧ್ಯವಿಲ್ಲ . ಒಂದೇ ಕ್ಷಣದಲ್ಲಿ ನಮ್ಮ ಮನಸ್ಸಿನಲ್ಲಿ ಹತ್ತು ಹಲವಾರು ವಿಚಾರಗಳು, ಆಲೋಚನೆಗಳು ತೆರೆ





ತೆರೆಯಾಗಿ ಬಂದು ಹೋಗುತ್ತವಲ್ಲವೇ? ಇವೆಲ್ಲ ಒಳಗೇ ಇದ್ದು ಆಗಾಗ ಸಮುದ್ರದ ಅಲೆಗಳಂತೆ ಏರುತ್ತವೆ ಮತ್ತು ಇಳಿಯುತ್ತವೆ. ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳ ಸಂಪರ್ಕದಿಂದ ಹೊಸದಾಗಿ ಎಷ್ಟೆಷ್ಟೋ ವಿಚಾರಗಳು ನಮ್ಮ ಮನಸ್ಸಿನೊಳಕ್ಕೆ ನುಗ್ಗುತ್ತಲೇ ಇರುತ್ತವೆ. ಹಲವು ಸ್ವಲ್ಪ ಕಾಲ ಇದ್ದು ಮರೆಯಾಗುತ್ತವೆ. ಮತ್ತೆ ಕೆಲವು ಮನಸ್ಸಿನ ಆಳದಲ್ಲಿ ಹೋಗಿ ಕುಳಿತು ಬಿಡುತ್ತವೆ. ಕೆಲವು ವಿಷಯಗಳು ಶಾಶ್ವತವಾಗಿ ಅಳಿಸಿ ಹೋಗಿರುತ್ತವೆ. ಯಾವುದೋ ಒಂದು ವಿಚಾರ ನಮ್ಮ ಮನಸ್ಸಿಗೆ ಏಕೆ ಬಂತು ಎಂದು ಹೇಳುವುದು ಬಹಳ ಕಷ್ಟದ ಕೆಲಸ.

ಅಷ್ಟೇ ಅಲ್ಲ ಯಾವ ವಿಚಾರ ಒಳಗೆ ಬರಬೇಕು, ಯಾವುದು ಬರಬಾರದು ಎಂದು ಸಾಮಾನ್ಯವಾಗಿ ನಾವು ನಿರ್ಧರಿಸಲಾಗುವುದಿಲ್ಲ ಮತ್ತು ವಿಚಾರಗಳು ನಮ್ಮ ಮನಸ್ಸಿನೊಳಕ್ಕೆ ನುಗ್ಗುವುದನ್ನು ನಾವು ನಿಯಂತ್ರಿಸಲೂ ಆಗುವುದಿಲ್ಲ. ನಮ್ಮ ಅಂತರಂಗದ ಭಾವ ನಮಗೇ ಅರ್ಥವಾಗುವುದು ಕಷ್ಟ. ಹಾಗಂದ ಮೇಲೆ ಅನ್ಯರು ಅದನ್ನು ಕಾಣಲಾಗುವುದೇ. ನಾವು ಅದನ್ನು ಎಷ್ಟೇ ವಿವರಿಸಲು ಪ್ರಯತ್ನಿಸಿದರೂ ಪರರಿಗೆ ಅದು ವೇದ್ಯವಾಗುವುದಿಲ್ಲ.

ಏಕೆಂದರೆ ಮಾನ್ಯ ಗುಂಡಪ್ಪನವರು ಹೇಳಿದ ಹಾಗೆ, ಅವು ನಮ್ಮ ಮನಸ್ಸಿನ ಪದರ ಪದರಗಳಲ್ಲಿ ಒಳಹೊಕ್ಕು ಗಂಟು ಗಂಟಾಗಿ, ಗೋಜಲು ಗೋಜಲಾಗಿ, ಸುರುಳಿ ಸುರುಳಿಯಾಗಿ ಸೇರಿಕೊಂಡುಬಿಟ್ಟಿರುತ್ತದೆ. ಎಲ್ಲ ರೀತಿಯ ಭಾವಗಳು, ಯೋಚನೆಗಳು, ಚಿಂತೆ, ಚಿಂತನೆಗಳು. ಹೀಗೇ ಸಾವಿರ ಸಾವಿರ ವಿಷಯಗಳು ಮನಸ್ಸಿನ ಆಂತರ್ಯದಲ್ಲಿ ತುಂಬಿಕೊಂಡಿರುತ್ತದೆ. ಆದರೆ ಈ ಯೋಚನೆಗಳು ಸುಮ್ಮನೆ ಬಂದು ಹೋದರೆ ಚಿಂತೆಯಿಲ್ಲ. ಅವು ನಮ್ಮನ್ನು ಅಲುಗಾಡಿಸಿ, ನಮ್ಮ ಜೀವನವನ್ನು ಕ್ಲಿಷ್ಟತೆಗೆ ತಳ್ಳಿದರೆ ಅದು ಕಷ್ಟದ ವಿಚಾರ. ಎಲ್ಲಿಯ ತನಕ ನಾವು ಅವುಗಳಿಗೆ ಅಂಟದೆ ಇರುತ್ತೇವೆಯೋ ಅಲ್ಲಿಯ ತನಕ ಒಳ್ಳೆಯದು. ಮನಸ್ಸನ್ನು ವಿಶ್ಲೇಷಣೆ ಮಾಡುವುದು ಸುಲಭವಲ್ಲ. ಅದನ್ನೇ ಮಾನ್ಯ ಗುಂಡಪ್ಪನವರು "ಸ್ವಂತಕೇ ದುರ್ದಶ" ಎಂದರು. ಆದರೂ ನಮ್ಮ ಪರಿಮಿತ ಮತಿಯ ಮಿತಿಯಲ್ಲಿ ನಮ್ಮ ನಮ್ಮ ಮನಸ್ಸುಗಳನ್ನು ತಹಬಂದಿಯಲ್ಲಿಟ್ಟುಕೊಂಡರೆ ಸುಖ.

**ಮುಕ್ತಕ-195**

**ಮೊಗ ನಾಲ್ಕು ನರನಿಗಂತೆಯೇ ನಾರಿಗಂ ಬಗೆಯೆ |**
**ಜಗಕೆ ಕಾಣಿಪುದೊಂದು, ಮನೆಯ ಜನಕೊಂದು ||**
**ಸೊಗಸಿನೆಳಸಿಕೆಗೊಂದು, ತನ್ನಾತ್ಮಕಿನ್ನೊಂದು |**
**ಬಗೆಯೆಷ್ಟೋ ಮೊಗವೆಷ್ಟು-ಮಂಕುತಿಮ್ಮ ||**

ನರನಿಗಂತೆಯೇ=ನರನಿಗು+ಅಂತೆಯೇ, ಕಾಣಿಪುದೊಂದು=ಕಾಣಿಪುದು+ಒಂದು,
ಸೊಗಸಿನೆಳಸಿಕೆಗೊಂದು=ಸೊಗಸಿನ+ಎಳಸಿಕೆಗೆ+ಒಂದು, ತನ್ನಾತ್ಮಕಿನ್ನೊಂದು ತನ್ನಾತ್ಮಕೆ+ಇನ್ನೊಂದು.

ನರನಿಗೆ, ನಾರಿಯನ್ನೂ ಸೇರಿ, ನಾಲ್ಕು ರೀತಿಯ ಮುಖಗಳಂತೆ. ಜಗತ್ತಿಗೆ ತೋರಲು ಒಂದು, ಮನೆಯಲ್ಲಿರುವ ಜನಗಳಿಗೆ ಒಂದು, ತನ್ನನ್ನು ತಾನೇ ನೋಡಿಕೊಳ್ಳುವುದಕ್ಕೆ ಒಂದು ಮುಖ ಮತ್ತು ಕಡೆಯದಾಗಿ ಅಂತರಾತ್ಮದ

ಮುಖ, ಹೀಗೆ ಮನುಷ್ಯನಿಗೆ ಹಲವಾರು ಮುಖವಾಡಗಳು ಇರುತ್ತವೆ ಎಂದು ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ ಪ್ರಸ್ತಾಪಿಸುತ್ತಾರೆ.

ಪ್ರತಿ ಮನುಷ್ಯನೂ ತನ್ನನ್ನು ತಾನು ತೋರಿಸಿಕೊಳ್ಳುವುದಕ್ಕೆ ಅವನ ಅಂತರಂಗದ ವ್ಯಕ್ತಿತ್ವಕ್ಕಿಂತ ಭಿನ್ನವಾದ ಮುಖವನ್ನು ಜಗತ್ತಿಗೆ ತೋರುತ್ತಿರುತ್ತಾನೆ. ಕಾರಣಗಳು ಹಲವಾರು ಇರಬಹುದು. ತಾನು ಏನು ಎಂಬುದನ್ನು ಜಗಕ್ಕೆ ತೋರುವ ಬಯಕೆ, ಅವಶ್ಯಕತೆ ಮತ್ತು ಅನಿವಾರ್ಯತೆಗಳಿಗಾಗಿ ಜಗವು ಮೆಚ್ಚುವಂತಹ ಮುಖವಾಡವನ್ನು ಹಾಕಿಕೊಳ್ಳುತ್ತಾನೆ ಅಥವಾ ಜಗವನ್ನು ಮೆಚ್ಚಿಸಲು ಪ್ರಯತ್ನಪಡುತ್ತಾನೆ. ಬಹಳಷ್ಟು ಬಾರಿ ತಾನು ಏನು ಅಲ್ಲವೋ ಅದನ್ನೇ ತೋರುತ್ತಿರುತ್ತಾನೆ. ಉದಾ! ನಮ್ಮ ರಾಜಕಾರಣಿಗಳನ್ನೇ ನೋಡೋಣ. ಪ್ರತಿಯೊಬ್ಬನೂ "ಸಮಾಜ ಸೇವಕನ" ಮುಖವಾಡವನ್ನು ಧರಿಸುತ್ತಾನೆ, ಅಲ್ಲವೇ. ಇದು ಮೊದಲನೆಯ ಮುಖ.

ಇನ್ನು ತನ್ನ ಮನೆಯವರಿಗೆ ತೋರುವ ಮುಖ. ಸಂಸಾರವನ್ನು ಕಟ್ಟಿಕೊಂಡ ಮೇಲೆ ತನ್ನ ಮನೆಯವರನ್ನು ನೋಡಿಕೊಳ್ಳುವ, ಕಾಪಾಡುವ ಜವಾಬ್ದಾರಿಯನ್ನು ಹೆಗಲಿಗೇರಿಸಿ ಕೊಂಡಿರುತ್ತಾನೆ(ಳೆ). ಸಾಮಾನ್ಯವಾಗಿ ಕೊರತೆಗಳ ನಡುವೆಯೇ ಜೀವನವನ್ನು ಸಾಗಿಸಬೇಕಾದ ಅನಿವಾರ್ಯತೆಯಿಂದ, ತನ್ನ ಮನೆಯ ಸದಸ್ಯರನೆಲ್ಲರನ್ನೂ ಮೆಚ್ಚಿಸುವುದಕ್ಕಾಗಿ ಎಲ್ಲವೂ ಸಮರ್ಪಕವಾಗಿರದಿದ್ದರೂ ಸಮರ್ಪಕವಾಗಿದೆ ಎನ್ನುವ ಒಂದು ಮುಖವನ್ನು ಸದಾ ಧರಿಸಿರುತ್ತಾನೆ. ಇದು ಎರಡನೆಯ ಮುಖ.

ಇನ್ನು ತನ್ನನ್ನು ತಾನೇ ನೋಡಿಕೊಳ್ಳುವ ಮುಖ. ತಾನೇನು, ತನ್ನ ಕೊರತೆಗಳು, ಸುಗುಣಗಳು, ದುರ್ಗುಣಗಳು, ಆಲೋಚನೆಗಳ ಶುದ್ಧತೆ ಮತ್ತು ಅಶುದ್ಧತೆ ಯಾವ ಮಟ್ಟದಲ್ಲಿ ಇವೆ ಎನ್ನುವ ಸತ್ಯದ ಅರಿವು ಪ್ರತಿಯೊಬ್ಬರಿಗೂ ಇರುತ್ತದೆ. ಅಂತರಂಗದಲ್ಲಿ ಅದನ್ನು ಒಪ್ಪಿಕೊಂಡರೂ, ತಾನು ಅದನ್ನು ಹೊರಗೆ ತೋರಿದರೆ ತನ್ನ ಅಸ್ತಿತ್ವಕ್ಕೇ ಧಕ್ಕೆ ಬರುತ್ತದೆಂಬ ಅರಿವೂ ಇರುತ್ತದೆ. ಇದು ತನ್ನ ಬಗ್ಗೆ ತನಗಿರುವ ಶುದ್ಧ ಅರಿವಿನ ಅಂತರಂಗದ ಮುಖ. ಇದು ಮೂರನೆಯ ಮುಖ.

ಪ್ರತಿ ಜೀವಿಯೂ ಆಧ್ಯಾತ್ಮ ಪ್ರಯಾಣದ ಯಾವುದೋ ಒಂದು ಹಂತದಲ್ಲಿ ಇರುತ್ತಾನೆ. ಪ್ರತಿ ಜೀವಿಗೂ ಅವನ ಜೀವನದ ಯಾವುದಾದರೂ ಸಮಯದಲ್ಲಿ ಈ ಜಗತ್ತಿನ ನಶ್ವರತೆಯ ಒಂದು ಆಯಾಮ ಗೋಚರಿಸುತ್ತದೆ. ಈ ಭಾವ

ನಿರಂತರವಾಗಲ್ಲದಿದ್ದರೂ ಆಗಾಗ ಬಂದು ಹೋಗುವ ಭಾವವಾಗಿರಬಹುದು. ಆ ಸಮಯದಲ್ಲಿ "ಅಯ್ಯೋ ಈ ಜಗತ್ತು ನಶ್ವರ, ನನ್ನ ಜೀವನ ಎಂದಿದ್ದರೂ ಕೊನೆಯಾಗಲೇ ಬೇಕು, ಒಂದು ದಿವಸ ಎಲ್ಲ ಬಿಟ್ಟು ಹೋಗಲೇ ಬೇಕು" ಎನ್ನುವ ಭಾವ ಬಂದು ಹೋಗಿರಬಹುದು. ಆ ಸಮಯದಲ್ಲಿ ಆ ವ್ಯಕ್ತಿ ಪರಮಾತ್ಮನನ್ನು ಅಂತರಂಗದಲ್ಲಿ ನೋಡುವ ಮುಖವನ್ನು ಹೊಂದಿರುತ್ತಾನೆ. ಇದು ನಾಲ್ಕನೆಯದು.

ಹೀಗೆ ಗುಂಡಪ್ಪನವರು ಹೇಳುವಂತೆ ಮನುಷ್ಯನಿಗೆ ನಾಲ್ಕು ಮುಖಗಳು. ವಾಸ್ತವ ಬದುಕಿನಲ್ಲಿ ಇವುಗಳ ಅನಿವಾರ್ಯತೆ ಎಲ್ಲರಿಗೂ ಗೊತ್ತಿರುವುದೇ, ಆದರೆ ಪ್ರಸಕ್ತ ಸಮಾಜದಲ್ಲಿ ಇನ್ನೂ ಹತ್ತು ಹಲವಾರು ಮುಖವಾಡಗಳನ್ನು ಧರಿಸಿ ಈ ಜಗತ್ತಿನಲ್ಲಿ ಮನುಷ್ಯ ತನ್ನ ಸ್ವಾರ್ಥ ಸಾಧನೆಯನ್ನು ಮಾಡುತ್ತಿದ್ದಾನೆ. ಇವನಿಗೆ





ರಾವಣನಂತೆ ತಲೆಗಳು ಮತ್ತು ಮುಖಗಳು, ಹತ್ತೇನು, ಅದಕ್ಕೂ ಹೆಚ್ಚಿರಬಹುದು. ನಮಗೆ ಎಷ್ಟು ಮುಖಗಳಿವೆ ಎಂದು ನಾವು ಆತ್ಮಾವಲೋಕನ ಮಾಡಿಕೊಂಡು ನಮಗಿರುವ ಮುಖವಾಡಗಳನ್ನು ಕಳಚಿದರೆ, ಮನಸ್ಸಿನ ಕ್ಲಿಷ್ಟತೆ ಕಡಿಮೆಯಾಗಬಹುದು.

**ಮುಕ್ತಕ-196** **ಮನುಜಲೋಕವಿಕಾರಗಳನು ನೀನಳಿಸುವೊಡೆ |**
**ಮನಕೊಂದು ದರ್ಪಣವ ನಿರವಿಸಂತಾನುಂ ||**
**ಅನುಭವಿಪರವರಂದು ತಮ್ಮಂತರಂಗಗಳ |**
**ಅನುಪಮಾಸಹ್ಯಗಳ-ಮಂಕುತಿಮ್ಮ ||**

ಮನುಜಲೋಕವಿಕಾರಗಳನು=ಮನುಜಲೋಕ+ವಿಕಾರಗಳನು, ನೀನಳಿಸುವೊಡೆ=ನೀನ್+ಅಳಿಸು+ಒಡೆ, ನಿರವಿಸೆಂತಾನುಂ=ನಿರವಿಸೆ+ಎಂತಾನುಂ, ಅನುಭವಿಪರವರಂದು=ಅನುಭವಿಪರ್+ಅವರ್+ಅಂದು, ತಮ್ಮಂತರಂಗಗಳ=ತಮ್ಮ+ಅಂತರಂಗಗಳ, ಅನುಪಮಾಸಹ್ಯಗಳ=ಅನುಪಮ+ಅಸಹ್ಯಗಳ.

ನಿರವಿಸೆ=ನಿರ್ಮಿಸೆ, ಎಂತಾನುಂ=ಹೇಗಾದರೂ

ಮನುಜರ ಮನಸ್ಸುಗಳಲ್ಲಿರುವ ವಿಕಾರಗಳನ್ನು ಅಳಿಸಿಹಾಕಿ, ಅವರಲ್ಲಿ ನಿರ್ಮಲ ಮನೋ ಪ್ರವೃತ್ತಿಯನ್ನು ಉಂಟು ಮಾಡಲು ಪ್ರಯತ್ನಿಸಿ, ಆ ಮನಸ್ಸು ತನ್ನನ್ನು ತಾನೇ ನೋಡಿಕೊಳ್ಳುವಂಥಾ ಒಂದು ಕನ್ನಡಿಯನ್ನು ತಯಾರಿಸಿದರೆ, ಆಗ ಅವರುಗಳು ತಮ್ಮ ಮನಸ್ಸಿನ ಭಾವನೆಗಳನ್ನು ನೋಡಿಕೊಂಡರೆ, ಅಂತರಂಗದಲ್ಲಿ ಹುದುಗಿರುವ ಹೋಲಿಸಲಾಗದಷ್ಟು ಅಸಹ್ಯಕರವಾದ ಭಾವನೆಗಳನ್ನು ಅನುಭವಿಸುತ್ತಾರೆ ಎನ್ನುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ಪ್ರತಿಯೊಬ್ಬರೂ ಒಪ್ಪಲೇಬೇಕಾದ ವಿಷಯವೆಂದರೆ, ನಮ್ಮ ಮನಸ್ಸುಗಳೊಳಗೆ ಯಾರಿಗೂ ಹೇಳಲಾರದಂತಹ ವಿಷಯಗಳೆಷ್ಟೋ ಅಡಗಿವೆ. ನಮ್ಮನ್ನು ಆ ವಿಷಯಗಳು ಆಗಾಗ ಒಂದು ಬೇರೆಯದೇ ಲೋಕಕ್ಕೆ ಕರೆದೊಯ್ಯುತ್ತವೆ. ನಮ್ಮಲ್ಲಿರುವ ಒಳ್ಳೆಯ ಭಾವಗಳನ್ನು ಮತ್ತು ನಾವು ಮಾಡಿದ ಒಳ್ಳೆಯ ಕಾರ್ಯಗಳನ್ನು ನಾವು ಬಚ್ಚಿಟ್ಟುಕೊಳ್ಳದೆ, ಎಲ್ಲರಿಗೂ ಸಾರುತ್ತೇವೆ. ಅನ್ಯರ ಗಮನ ಮತ್ತು ಪ್ರಶಂಸೆಯನ್ನು ಗಳಿಸುವುದಕ್ಕೋಸ್ಕರ.

ಆದರೆ ನಾವು ಹೇಳಿದ ಸುಳ್ಳನ್ನೋ, ಮಾಡಿದ ಕಳ್ಳತನವನ್ನೋ, ಪ್ರದರ್ಶಿಸಿದ ಕಪಟವನ್ನೋ, ನಮ್ಮ ಮನಸ್ಸಲ್ಲಿ ಬಂದ ಒಂದು ನೀಚ ಆಲೋಚನೆಯನ್ನೂ ಯಾರಿಗೂ ಹೇಳುವುದಿಲ್ಲ. ಅವುಗಳನ್ನು ನಮ್ಮನ್ನು ಕಟ್ಟಿಕೊಂಡವರಲ್ಲೋ, ನಮ್ಮನ್ನು ಹೆತ್ತವರಲ್ಲೋ, ನಾವು ಹೆತ್ತವರಲ್ಲೋ, ನಮಗೆ ಬಹಳ ಆಪ್ತರು ಎಂದು ಅನ್ನಿಸಿಕೊಳ್ಳುವರಲ್ಲೂ, ಹಂಚಿಕೊಳ್ಳುವುದಿಲ್ಲ. ಏಕೆಂದರೆ ನಾವು ಸದಾಕಾಲ ನಮ್ಮ ಶುದ್ಧ ಬಿಂಬವನ್ನು ಪ್ರದರ್ಶಿಸುವುದರಲ್ಲೇ ಆಸಕ್ತರು. ಇದನ್ನು ಬಹಿರಂಗವಾಗಲ್ಲದಿದ್ದರೂ ಕಡೆಯ ಪಕ್ಷ ಅಂತರಂಗದಲ್ಲಿಯಾದರೂ, ಎಲ್ಲರೂ ಸಮ್ಮತಿಸುವ ವಿಷಯವಲ್ಲವೇ?

(269)

| ನಾಲ್ಮೊಗ 194-198 | ಕಗ್ಗರಸಧಾರೆ |
|---|---|

ಈ ರೀತಿಯ ಮಾನಸಿಕ ವಿಕಾರಗಳನ್ನು ನಮ್ಮ ಮನಸ್ಸುಗಳಿಂದ ಅಳಿಸಿಹಾಕಲು ಪ್ರಯತ್ನಪಟ್ಟು ಮನದೊಳಗೆ ಅಡಗಿರುವ ವಿಚಾರಗಳನ್ನು ನೋಡಿಕೊಳ್ಳಲು ಒಂದು ಕನ್ನಡಿಯನ್ನೇನಾದರೂ ನಿರ್ಮಿಸಿದರೆ, ನಮಗಲ್ಲಿ ಕಾಣುವುದು

ಕೇವಲ ಇಂತಹ ಕುವಿಚಾರಗಳೇ ಹೊರತು ಬೇರಲ್ಲ. ಅದನ್ನು ಕಂಡು ನಾವು ನಮ್ಮ ಅಂತರಂಗದಲ್ಲಿ ನಾವೇ ಅಸಹ್ಯಪಡುವಂತಹ ಯಾತನಾ ಭಾವವನ್ನು ಅನುಭವಿಸಬೇಕಾಗುವುದು. ನಮ್ಮ ಮನದ ಆಳದಲ್ಲಿ ಅಡಗಿ ಕುಳಿತಿರುವ ಅಂತಹ ವಿಚಾರಗಳನ್ನು ಅರಿತು, ನಮಗೆ ನಾವೇ ಅಸಹ್ಯಪಟ್ಟುಕೊಳ್ಳುವ ಭಾವ ನಮಗೆ ಬರುತ್ತದೆ ಅಲ್ಲವೇ?

ಆದರೆ ಪ್ರಶ್ನೆ ಏನೆಂದರೆ, ನಮ್ಮ ಮನಸ್ಸುಗಳಲ್ಲಿ ಆ ರೀತಿಯ ಭಾವಗಳು ಸರಿಯೇ? ತಪ್ಪೇ? ಸಹಜವೇ? ಅಸಹಜವೇ? ಎಂದು ಒಂದು ಕ್ಷಣ ಯೋಚಿಸಿದಾಗ, ನನಗೆ ತೋರುವುದು ಹೀಗೆ. ಈ ರೀತಿಯ ಆಲೋಚನೆಗಳು ಬಹಳ ಸಹಜ. ಅವೆಲ್ಲ ಒಂದೇ ಬಾರಿಗೆ, ಕಾರಣವಿಲ್ಲದೆ ಬಂದು ನಮ್ಮ ಮನಸ್ಸಿನಲ್ಲಿ ಕೂರುವಂತಹ ವಿಚಾರಗಳಲ್ಲ. ಪೂರ್ವ ಕರ್ಮ, ಪ್ರಸ್ತುತ ಸಂಸ್ಕಾರಗಳು, ನಮ್ಮ ಸಂಗಗಳು, ನಮ್ಮ ವಿದ್ಯೆ, ನಮ್ಮ ಪರಿಸರ, ಹೀಗೆ ಹತ್ತು ಹಲವಾರು ಕಾರಣಗಳಿಂದ ನಮಗೆ ಈ ರೀತಿಯ ಆಲೋಚನೆಗಳು ಬರುತ್ತವೆ ಮತ್ತು ಬಂದ ವಿಚಾರಗಳು ಮನಸ್ಸಿನಲ್ಲಿ ಉಳಿಯುತ್ತವೆ. ಇದು ಬಹಳ ಸಹಜವಾಗಿ ಆಗುವ ಪ್ರಕ್ರಿಯೆ.

ನಮ್ಮ ಮನಸ್ಸಿನಲ್ಲಿ ಕೆಟ್ಟ ಅಥವಾ ನೀಚ ಆಲೋಚನೆಗಳಿವೆ ಎಂದಾಕ್ಷಣ ನಾವು ಕೊರಗಿ ಕುಗ್ಗಬೇಕಾಗಿಲ್ಲ. ಅದನ್ನು ಈ ದರ್ಪಣದಲ್ಲಿ ನೋಡಿಕೊಳ್ಳುವ ಧೈರ್ಯ ಮತ್ತು ನೋಡಿಕೊಂಡಾಗ ಅದರ ಅರಿವು, ನಮಗೆ ಆಗುತ್ತದಲ್ಲ ಅದೇ ಒಂದು ಸಾಧನೆ. ಅದು ಸರಿಯಲ್ಲ ಎಂದು ನಾವು ಒಪ್ಪಿಕೊಳ್ಳುವುದು ಮತ್ತೊಂದು ಸಾಧನೆ. ಅದನ್ನು ಅಳಿಸುವ ಮತ್ತು ಪುನಃ ಅಂತಹ ಆಲೋಚನೆಗಳು ಮತ್ತು ವಿಚಾರಗಳು ನಮ್ಮ ಮನದಲ್ಲಿ ನುಸುಳದ ಹಾಗೆ ಎಚ್ಚರ ವಹಿಸುವುದು ಒಂದು ಉತ್ತಮ ಸಾಧನೆ. ಹಾಗೆ ಅವುಗಳನ್ನು ತಡೆದು ನಮ್ಮ ಮನಸ್ಸುಗಳನ್ನು ಶುದ್ಧವಾಗಿಟ್ಟುಕೊಳ್ಳಲು ನಾವು ಯಶಸ್ವಿಯಾದರೆ ಅದು ಬೃಹತ್ ಸಾಧನೆ !!!

**ಮುಕ್ತಕ-197**

**ಕನಲ್ದ ಹುಲಿ ಕೆರಳ್ದ ಹರಿ ಮಲಳ್ಕರಡಿ ಛಲನಾಗ |**
**ಅಣಕು ಕಪಿ ಸೀಳ್ನಾಯಿ ಮೊದಲಾದ ಮೃಗದ ||**
**ಸೆಣಸುಮುಸುಡಿಯ ಘೋರದುಷ್ಟಚೇಷ್ಟೆಗಳೆಲ್ಲ |**
**ವಣಗಿಹುವು ನರಮನದಿ-ಮಂಕುತಿಮ್ಮ ||**

ಚೇಷ್ಟೆಗಳೆಲ್ಲವಣಗಿಹುವು ಚೇಷ್ಟೆಗಳೆಲ್ಲವು+ಅಣಗಿಹವು

ಕೋಪಗೊಂಡ ಹುಲಿ, ಕೆರಳಿದ ಸಿಂಹ, ಮುಳ್ಳಿನ ಕರಡಿ, ಛಲ ಹಿಡಿದ ನಾಗರಹಾವು, ಚೇಷ್ಟೆಯ ಕಪಿ, ಬೇಟೆಯಾಡುವ ಸೀಳು ನಾಯಿ ಮೊದಲಾದ ಮೃಗಗಳಂತೆ ಹೋರಾಡುವ ಮುಖವಾಡ ಹೊತ್ತು, ಘೋರವಾದ ದುಷ್ಟತೆಯಿಂದ ಕೂಡಿದ ಚೇಷ್ಟೆಗಳೆಲ್ಲ ಈ ಮಾನವನ ಮನಸ್ಸಿನಲ್ಲಿ ಅಡಗಿವೆ ಎಂದು ಹೇಳುತ್ತಾರೆ ಮಾನ್ಯ ಗುಂಡಪ್ಪನವರು.

(270)

ಕಗ್ಗರಸಧಾರೆ | ನಾಲ್ಕೊಗ 194-198

ಒಬ್ಬ ಮನುಷ್ಯ ಮಾನವ ಜನ್ಮವನ್ನು ತಳೆಯುವ ಮೊದಲು ಹಲವಾರು ಪ್ರಾಣಿ, ಪಕ್ಷಿ, ಕೀಟ ಮುಂತಾದ ದೇಹಗಳನ್ನು ಧರಿಸಿ ನಂತರ ಮಾನವ ಜನ್ಮವನ್ನು ಪಡೆಯುತ್ತಾನೆ ಎಂದು ಹೇಳುತ್ತದೆ ನಮ್ಮ ಸನಾತನ. ಒಂದು ಆತ್ಮ ಮನುಷ್ಯ ಜನ್ಮಕ್ಕೆ ಎಂದು ಬಂದಿತು ಎಂದು ಹೇಳಲು ಅಸಾಧ್ಯ. ಕೆಲ ಆತ್ಮಗಳು ಬಹಳ ಹಿಂದೆ ಮತ್ತು ಕೆಲ ಆತ್ಮಗಳು ಇತ್ತೀಚೆಗೆ ಬಂದಿರಬಹುದು. ಹಾಗೆ ಇತ್ತೀಚೆಗೆ ಬಂದ ಆತ್ಮಗಳು ತಮ್ಮ ಪೂರ್ವ ಜನ್ಮದ ವಾಸನೆಗಳನ್ನು ಸಂಪೂರ್ಣವಾಗಿ ಹೋಗಲಾಡಿಸಿಕೊಳ್ಳದೆ ಇದ್ದ ಪಕ್ಷದಲ್ಲಿ ಈ ಜನ್ಮದಲ್ಲೂ ಆ ವಾಸನೆಗಳ ಛಾಯೆ ಇರುವುದಲ್ಲವೇ? ಹಾಗೆ ಇದ್ದ ಗುಣಗಳೇ ಈಗ ಪ್ರದರ್ಶಿಸಲ್ಪಡುತ್ತವೆ.

ಹಾಗಾಗಿ ನಾವು ಕೆಲವರನ್ನು ಹುಲಿಯಂತೆ ಕೋಪಗೊಳ್ಳುವವರನ್ನೂ, ಸಿಂಹದಂತೆ ಕೆರಳುವವರನ್ನೂ, ಹಾವಿನಂತೆ ಛಲ ಹಿಡಿಯುವವರನ್ನೂ, ನಾಯಿಯಂತೆ ಆಡುವವರನ್ನೂ ನಮ್ಮ ಸಮಾಜದಲ್ಲಿ ಕಾಣುತ್ತೇವೆ. ಅಷ್ಟೇ ಏಕೆ ಒಬ್ಬನೇ ವ್ಯಕ್ತಿ ಬೇರೆ ಬೇರೆ ಸಮಯಗಳಲ್ಲಿ ಬೇರೆ ಬೇರೆ ಪ್ರಾಣಿಗಳಂತೆ ಆಡುವುದನ್ನೂ ನಾವು ಕಾಣುವುದಿಲ್ಲವೇ? "ಅವನು ಒಳ್ಳೆ ಕೋತಿ ಥರ ಆಡ್ತಾನೆ" ಅಥವಾ "ಯಾಕೋ ಒಳ್ಳೆ ನಾಯಿ ಥರ ಆಡ್ತೀಯಾ?" ಎನ್ನುವ ಮಾತುಗಳನ್ನು ನಾವು ಬಹಳಷ್ಟು ಬಾರಿ ಕೇಳುತ್ತೇವಲ್ಲವೇ? ಇದನ್ನೇ ಮಾನ್ಯ ಗುಂಡಪ್ಪನವರು" ಘೋರಚೇಷ್ಟೆಗಳೆಲ್ಲವಣಗಿಹುವು" ಎಂದು ಮಾನವನ ಮನಸ್ಸಿನ ಒಂದು ಮುಖವನ್ನು ವಿಶ್ಲೇಷಿಸುತ್ತಾರೆ.

ಪ್ರಾಣಿಗಳಿಗೆ ಅವು ಸಹಜ ಗುಣಗಳು. ಆದರೆ ಮನುಷ್ಯನಿಗೆ, ಗುಂಡಪ್ಪನವರು ಹೇಳುವಂತೆ ಅವು "ದುಷ್ಟ ಗುಣಗಳು" ಪ್ರಾಣಿಗಳು ತಮ್ಮನ್ನು ತಾವು ಕಾಪಾಡಿಕೊಳ್ಳಲು, ತಮ್ಮ ಸಂತತಿಯನ್ನು ಬೆಳೆಸಲು ಮತ್ತು ತಮ್ಮ ಆಹಾರ

ಹುಡುಕಲು ಮಾತ್ರ ಈ ಗುಣಗಳನ್ನು ಪ್ರದರ್ಶಿಸುತ್ತವೆ. ಆದರೆ ಮನುಷ್ಯ ದುರಾಸೆಯ, ಸ್ವಾರ್ಥದ ಮತ್ತು ಅಹಂಕಾರದ ಭಾವಗಳನ್ನು ಪ್ರದರ್ಶಿಸಲು ಈ ದುಷ್ಟ ಗುಣಗಳನ್ನು ಉಪಯೋಗಿಸುತ್ತಾನೆ. ಇಡೀ ಸೃಷ್ಟಿಯೇ ತನಗಾಗಿ ಸೃಷ್ಟಿಸಲ್ಪಟ್ಟಿದೆ ಎನ್ನುವ ದುರಹಂಕಾರ ಮನುಷ್ಯನಿಗೆ, ಸ್ವಾರ್ಥ ಸಾಧನೆಗಾಗಿ ಯಾವ ಪ್ರಾಣಿಯ ವೇಷವನ್ನಾದರೂ ಹಾಕಲು ಅಥವಾ ಯಾವುದೇ ಪ್ರಾಣಿಯ ಗುಣವನ್ನು ಪ್ರದರ್ಶಿಸಲು ಇವನು ಹೇಸುವುದಿಲ್ಲ.

ನಾವು ಮಾನವರು ಮೃಗಗಳ, ಕೀಟಗಳ ಮತ್ತು ಅನ್ಯ ಪ್ರಾಣಿಗಳ ದೈಹಿಕ ಸ್ಥರವನ್ನು ಬಿಟ್ಟು ಮೇಲೆ ಬಂದಿದ್ದೇವೆ. ಅವುಗಳ ಗುಣಗಳನ್ನು ಸಂಪೂರ್ಣವಾಗಿ ಬಿಟ್ಟರೆ, "ನಾವು ಮಾನವರು" ಎಂದು ಹೆಮ್ಮೆಯಿಂದ ಹೇಳಿಕೊಳ್ಳಬಹುದು. ಇಲ್ಲದಿದರೆ, ಆ ಗುಣಗಳನ್ನು ಬಿಡದಿದ್ದರೆ, ಮತ್ತೆ ಪ್ರಾಣಿಗಳಾಗುವ ಸಂಭವ ಉಂಟು. ಹಾಗಾಗಿ ನಾವು ಬಹಳ ಜಾಗರೂಕರಾಗಿ ನಮ್ಮ ಗುಣಗಳನ್ನು ನಾವೇ ವಿಶ್ಲೇಷಣೆ ಮಾಡುತ್ತಾ, ನಮ್ಮನ್ನು ಸುಧಾರಿಸಿಕೊಳ್ಳುವ ಪ್ರಯತ್ನವನ್ನು ಪಡಬೇಕು.





**ಮುಕ್ತಕ-198**

**ಸತ್ಯವಂತನನರಸೆಲೆನುತ ಪೇಟೆಯೊಳಗೆ ।**
**ಹಟ್ಟಹಗಳೊಳ್ ದೀವಿಗೆಯ ಹಿಡಿದು ನಡೆದು ॥**
**ಕೆಟ್ಟುದೀ ಜಗವೆಂದು ತೊಟ್ಟಿಯೊಳ್ ವಸಿಸಿದನು ।**
**ತಾತ್ವಿಕ ಡಯೋಜೆನಿಸ್-ಮಂಕುತಿಮ್ಮ ॥**

ಸತ್ಯವಂತನನರಸೆಲೆನುತ=ಸತ್ಯವಂತನನು+ಅರಸಲು+ಎನುತ, ಕೆಟ್ಟುದೀ=ಕೆಟ್ಟದು+ಈ

ಈಗ್ಗೆ 2424 ವರ್ಷಗಳ ಹಿಂದೆ ಗ್ರೀಕ್ ದೇಶದಲ್ಲಿ ಜನಿಸಿದ ಡಯೋಜೆನಿಸ್ ಎಂಬ ತತ್ವಜ್ಞಾನಿಯು "ಸತ್ಯವಂತನಾದ ವ್ಯಕ್ತಿ ಯಾರಾದರೂ ಸಿಗುವನೋ" ಎಂದು ಹಗಲಿನ ಹೊತ್ತಿನಲ್ಲಿ ದೀವಿಗೆಯನ್ನು ಹಿಡಿದುಕೊಂಡು ಪೇಟೆ ಬೀದಿಗಳಲ್ಲಿ ಹುಡುಕಿದನಂತೆ. ಅವನಿಗೆ ಯಾರೂ ಸಿಕ್ಕದಾಗ, "ಈ ಜಗತ್ತು ಕೆಟ್ಟು ಹೋಗಿದೆ' ಎಂದು ತನ್ನ

ಮನೆಯಲ್ಲಿ ಒಂದು ತೊಟ್ಟಿಯನ್ನು ಕಟ್ಟಿಸಿ, ಅದರೊಳಗೆ ವಾಸಿಸತೊಡಗಿದನಂತೆ, ಎನ್ನುತ್ತಾ ಒಂದು ವಿಡಂಬನೆಯನ್ನು ಈ ಮುಕ್ತಕದ ಮೂಲಕ ಮಾನ್ಯ ಗುಂಡಪ್ಪನವರು ಪ್ರಸ್ತಾಪ ಮಾಡಿದ್ದಾರೆ.

"ಕಿಸಾ ಗೌತಮಿಯಲ್ಲಿ ಗೌತಮನು "ಸಾವಿಲ್ಲದ ಮನೆಯ ಸಾಸಿವೆ ತಾ" ಎಂದನಂತೆ. ಹಾಗಲ್ಲದೆ "ಸುಳ್ಳನ್ನೇ ಹೇಳದವನ ಮನೆಯಲ್ಲಿ ಸಾಸಿವೆ ತಾ" ಎಂದಿದ್ದರೂ ಸಮರ್ಪಕವಾಗಿಯೇ ಇರುತ್ತಿತ್ತು ಎಂದು ಅನಿಸುತ್ತದೆ. ಏಕೆಂದರೆ ಈ ಜಗತ್ತಿನಲ್ಲಿ ಎಲ್ಲೂ ಎಂದಾದರೂ, ಒಂದಾದರೂ ಸುಳ್ಳನ್ನು ಹೇಳದಿರುವಂತಹ ವ್ಯಕ್ತಿ ಸಿಕ್ಕುವುದೇ ಇಲ್ಲ. ಇದೇ ಅನುಭವ ದಾರ್ಶನಿಕ ಡಯೋಜೆನಿಸ್‌ಗೂ ಆಯಿತು. 568 ವರ್ಷಗಳ ಹಿಂದಿನ, ನಮ್ಮ ಕನ್ನಡದ ಪುರಂದರ ದಾಸರು "ಸತ್ಯವಂತರಿಗೆ ಇದು ಕಾಲವಲ್ಲ, ದುಷ್ಟ ಜನರಿಗೆ ಇದು ಸುಭಿಕ್ಷಕಾಲ' ಎಂದು ಹೇಳಿದ್ದಾರೆ. ಅವರಿಗೆ ಹಾಗೆ ಅಂದೇ ಅನಿಸಿದ್ದರೆ, ಇಂದಿನ ಪರಿಸ್ಥಿತಿ ಏನು ಎಂದು ವಾಚಕರೇ ಊಹಿಸಿಕೊಳ್ಳಬಹುದು.

ನಮ್ಮ ಸನಾತನದಲ್ಲಿ "ಸತ್ಯಂ ಬ್ರೂಯಾತ್" "ಸತ್ಯಮೇವ ಜಯತೆ" "ಸತ್ಯಂ ವದ" "ಸತ್ಯಾ ನ ಪ್ರಮದಿತವ್ಯಂ' "ಸತ್ಯಂ ಚ ಸ್ವಾಧ್ಯಾಯ ಪ್ರವಚನೇಚ" ಎನ್ನುವ ಮತ್ತು ಸತ್ಯವನ್ನೇ ಹೇಳಬೇಕೆಂದು ಪ್ರತಿಪಾದಿಸುವ ಹಲವಾರು ಸೂಕ್ತಗಳು ಹೇರಳವಾಗಿ ಸಿಗುತ್ತದೆ. ಸತ್ಯದ ಮಹಿಮೆಯನ್ನು ಪುರಸ್ಕರಿಸಲು, "ಹರಿಶ್ಚಂದ್ರ"ನ ಕಥೆಯನ್ನು ಬರೆಯಲಾಯಿತು. ನಮ್ಮ ಭಾರತೀಯ ನೀತಿಕತೆಗಳಲ್ಲಿ, ಸುಭಾಷಿತಗಳಲ್ಲಿ, ಶಿವ ಶರಣರ ವಚನಗಳಲ್ಲಿ, ಸತ್ಯವನ್ನೇ ನುಡಿಯಬೇಕು, ನೃತವನ್ನು ನುಡಿಯಬಾರದು ಎಂದು ಹಲವಾರು ದೃಷ್ಟಾಂತಗಳಿಂದ ಸತ್ಯದ ಮಹಿಮೆಯನ್ನು ಕೊಂಡಾಡಿದ್ದಾರೆ. ಕೇವಲ ನಮ್ಮ ಕನ್ನಡದಲ್ಲಿ ಇರುವ "ಪುಣ್ಯಕೋಟಿಯ ಕತೆಯೇ ಮನ ಕರಗಿಸುವಂತೆ ಸತ್ಯವಚನದ ಮಹಿಮೆಯನ್ನು ತಿಳಿಸಿದೆಯಲ್ಲ.

ತೈತ್ತರೀಯ ಉಪನಿಷತ್ತಿನಲ್ಲಿ "ಸತ್ಯ" ಮತ್ತು "ಋತ"ವೆನ್ನುವ ಎರಡು ಉಲ್ಲೇಖಗಳು ಬರುತ್ತದೆ. ಮಾನ್ಯ ಗುಂಡಪ್ಪನವರು ಒಂದು ಸಣ್ಣ ಪುಸ್ತಕದಲ್ಲಿ ಅದನ್ನು ವಿಶ್ಲೇಷಣೆ ಮಾಡುತ್ತಾ 'ಋತ"ವೆಂದರೆ ಮನಸ್ಸಿನಲ್ಲಿ ಗೋಚರವಾದ ವಿಚಾರ ಮತ್ತು ಸತ್ಯವೆಂದರೆ ಆ ಮನಸ್ಸಿನೊಳಗಿನ ವಿಚಾರ ಹಾಗೆಯೇ ಪ್ರಕಟವಾದರೆ, ಹೇಳಿದರೆ ಅದು "ಸತ್ಯ"ವೆನಿಸಿಕೊಳ್ಳುತ್ತದೆ. ಹಾಗಾದರೆ ಒಳ್ಳೆಯದೇ? ಇಂದಿನ ಸಾಮಾಜಿಕ ಪರಿಸ್ಥಿತಿಯಲ್ಲಿ ಅದು ಸಾಧ್ಯವೂ ಅಲ್ಲ. ಮನಸ್ಸಿಗೆ ಬಂದ ವಿಚಾರವನ್ನೆಲ್ಲ ಹೊರಹಾಕುತ್ತಾ ಹೋದರೆ "ಹುಚ್ಚನೆಂಬ" ಬಿರುದನ್ನೂ

ಪಡೆದುಕೊಳ್ಳಬೇಕಾಗುತ್ತದೆ. ಹಾಗೆಯೇ “ನ ಬ್ರೂಯಾತ್ ಸತ್ಯಮಪ್ರಿಯಂ" ಎಂದರೆ ಅಪ್ರಿಯವಾದ ಸತ್ಯವನ್ನು ನುಡಿಯಬೇಡ, ಎಂದೂ ಹೇಳಿದ್ದಾರಲ್ಲವೆ?

ಸತ್ಯವನ್ನು ನುಡಿದರೆ ಮನಸ್ಸಿಗೆ ನಿರಾಳ. ಸತ್ಯವನ್ನು ನುಡಿದರೆ ನಮ್ಮ ಅಂತರಂಗ ಶುದ್ಧವಾಗಿರುತ್ತದೆ. ಸತ್ಯವನ್ನು ನುಡಿಯುತ್ತೇವೆಯೋ ಇಲ್ಲವೋ ಆದರೆ ಸುಳ್ಳು ಹೇಳುವ ಅವಶ್ಯಕತೆ ನಮಗೆ ಬಾರದಿದ್ದರೆ ಅದೇ ಪುಣ್ಯ. ಯಾರಿಗೆ ಏನು ಬೇಕೋ ಅದನ್ನು ನುಡಿಯಬಹುದು. ಹಾಗೆ ನುಡಿದದ್ದರಿಂದ ಬಂದದ್ದನ್ನು ಅನುಭವಿಸಬಹುದು. ಆಯ್ಕೆ ಅವರವರಿಗೇ ಬಿಟ್ಟದ್ದಲ್ಲವೇ?

# ವಿಧಿಯ ಕೈಚಕ್ರ 198-200

**ಮುಕ್ತಕ-199**

**ಪದರಪದರಗಳಿಹವು ಗಂಟುಗಂಟುಗಳಿಹವು |**
**ಹೃದಯದಲಿ ಬುದ್ಧಿಯಲ್ಲಿ ವಾಕ್ಚರ್ಯೆಗಳಲಿ ||**
**ಇದಮಿತ್ಥಂಮೆಲ್ಲಿಹುದು ಮನುಜಸ್ವಭಾವದಲಿ |**
**ವಿಧಿಯ ಕೈ ಚಿತ್ರವಿದು-ಮಂಕುತಿಮ್ಮ ||**

ಪದರಪದರಗಳಿಹವು=ಪದರ+ಪದರಗಳು+ಇಹವು, ಗಂಟುಗಂಟುಗಳಿಹವು-ಗಂಟು+ಗಂಟುಗಳಿಹವು,
ವಾಕ್ಚರ್ಯೆಗಳಲಿ=ವಾಕ್+ಚರ್ಯೆಗಳಲಿ, ಇದಮಿತ್ಥಂಮೆಲ್ಲಿಹುದು=ಇದಮಿತ್ಥಂ+ಎಲ್ಲಿಹುದು
ವಾಕ್ಚರ್ಯೆಗಳಲಿ=ಮಾತು ಮತ್ತು ಕೃತಿಯಲಿ, ಇದಮಿತ್ಥಂ= ಇದು "ಇದೇ" ಎಂದು ಹೇಳುವುದು

ಮನುಷ್ಯನ ಹೃದಯದ ಮತ್ತು ಬುದ್ಧಿಯ ಭಾವಗಳು, ಅವನ ಮಾತುಗಳು ಮತ್ತು ಕೃತಿಗಳು ಗೋಜಲು ಗೋಜಲಾಗಿಯೂ, ಸುಕ್ಕು ಸುಕ್ಕಾಗಿ ಗಂಟಾಗಿಯೂ ಇವೆ. ಮನುಷ್ಯರ ಸ್ವಭಾವ "ಹೀಗೇ" ಎಂದು ಹೇಳಲಾಗದು. ಬಹುಶಃ ಇದು ವಿಧಿಯ ಕ್ರಮದಿಂದಾದ ಚಿತ್ರವಿರಬಹುದು ಎಂದು ಮಾನ್ಯ ಗುಂಡಪ್ಪನವರು ಪ್ರಸ್ತಾಪಿಸುತ್ತಾರೆ.

ಮನುಷ್ಯರ ಮನಸ್ಸಿನ ವಿಚಾರಗಳನ್ನು ಅರಿಯುವುದೇ ಸಾಧ್ಯವಿಲ್ಲ. ಎಲ್ಲವೂ ನಿಗೂಢ. ಅಷ್ಟೇ ಅಲ್ಲ ಗೋಜಲು, ಕಗ್ಗಂಟು. ಒಂದು ಕ್ಷಣವಿದ್ದ ವಿಚಾರ ಮತ್ತೊಂದು ಕ್ಷಣವಿಲ್ಲ. ಕೆಲ ದಿವಸಗಳಲ್ಲಿ ಇದ್ದ ಸ್ವಭಾವ ಮತ್ತೊಂದು ಕಾಲಕ್ಕೆ ಇರುವುದಿಲ್ಲ. ಬಿಡಿಸಲಾಗದ ಗಂಟುಗಳ ಹಂದರವೇ ಮನುಷ್ಯನ ಮನಸ್ಸು ಎನ್ನುವುದು ಎಲ್ಲರಿಗೂ ತಿಳಿದ ವಿಚಾರವೇ ಆಗಿದೆ. ಅಷ್ಟೇ ಅಲ್ಲ ಆಡುವುದು ಒಂದಾದರೆ ಮಾಡುವುದು ಇನ್ನೊಂದು. ಕ್ಷಣ ಕ್ಷಣಕ್ಕೂ ಬದಲಾಗುವ ಮನಸ್ಸಿನ ಪರಿ.

ನಾವು ನಮ್ಮ ಜೀವನದಲ್ಲಿ ಹತ್ತು ಹಲವಾರು ವ್ಯಕ್ತಿಗಳೊಡನೆ ಸಂಪರ್ಕವನ್ನು ಹೊಂದಿರುತ್ತೇವೆ. “ಅವರು ನನಗೆ ಚೆನ್ನಾಗಿ ಗೊತ್ತು”  ಎಂದು ಹಲವರು ಹೇಳುವುದನ್ನು ನಾವು ಆಗಾಗ ಕೇಳುತ್ತಲಿರುತ್ತೇವೆ. ವಿಚಿತ್ರವಲ್ಲವೇ? ನಮಗೆ ನಾವೇ ಏನು ಎಂದು ಅರ್ಥವಾಗುವುದಿಲ್ಲ. ಹಾಗಿದ್ದ ಮೇಲೆ ಬೇರೆಯವರನ್ನು ಅವರು ನನಗೆ ಚೆನ್ನಾಗಿ ಗೊತ್ತು”  ಎಂದು ಹೇಳುವುದು ಎಷ್ಟು ಸೂಕ್ತ. ಪರಿಚಯ ಎನ್ನುವುದು ಸೂಕ್ತ ಪದವಾದೀತು. ಎಲ್ಲರ





ಮನಸ್ಸು ಹಾಗೆ ಏಕೆ ಇರುತ್ತದೆ? ನಮಗೇಕೆ ಅರ್ಥವಾಗುವುದಿಲ್ಲ ಎನ್ನುವ ಪ್ರಶ್ನೆಗೆ ನಮಗೆ ಉತ್ತರ ಸಿಗುವುದೇ ಇಲ್ಲ.

ಇದು ಏಕೆ ಹೀಗೆ ಇದೆ ಎಂದು ವಿಚಾರವಂತರ ಮನಗಳಲ್ಲಿ ಮಂಥನ ನಡೆದೇ ಇರುತ್ತದೆ. ಆದರೆ ಉತ್ತರ ಸಿಗುವುದೇ ಇಲ್ಲ. ಪ್ರಕೃತಿಯಲ್ಲಿ ಎಷ್ಟೊಂದು ವೈವಿಧ್ಯತೆ ಇದೆಯೋ ಅಷ್ಟೊಂದು ವೈವಿಧ್ಯತೆ ಈ ಮಾನವನ ಮನಸ್ಸಿನಲ್ಲಿದೆ. ಪ್ರಕೃತಿಯ ವೈವಿಧ್ಯತೆಯನ್ನು ಸೃಷ್ಟಿಸಿದ ಪರಮ ಚೇತನವೇ ಮನುಜ ಮನಸ್ಸಿನ ವೈವಿಧ್ಯತೆಯನ್ನೂ ಸೃಷ್ಟಿಸಿದೆ ಎನ್ನುವ ಅರ್ಥದಲ್ಲೇ ಮಾನ್ಯ ಗುಂಡಪ್ಪನವರು "ವಿಧಿಯ ಕೈ ಚಿತ್ರವಿದು' ಎಂದಿದ್ದಾರೆ.

ವಾಚಕರೆ ಮಾನವನ ಮನಸ್ಸು ಎನ್ನುವ ಗೊಂಡಾರಣ್ಯದಲ್ಲಿ ಇರುವ ದಾರಿಗಳೆಷ್ಟೋ, ಗುಹೆಗಳೆಷ್ಟೋ, ಬೆಟ್ಟ ಗುಡ್ಡಗಳೆಷ್ಟೋ, ಸುಳಿ-ಜಲಪಾತಗಳೆಷ್ಟೋ ಯಾರೂ ಅರಿಯಲು ಸಾಧ್ಯವಿಲ್ಲ. ಪಂಚಭೂತಗಳೆಷ್ಟು ವಿಶಾಲವೋ,

ನಿಗೂಢವೋ, ಅಷ್ಟೇ ನಿಗೂಢ ನಮ್ಮ ಮನಸ್ಸು. ಇದು ವಿಧಿಯಿಂದ ನಿರ್ಮಿತವಾದದ್ದು. ನಾವು ನಮ್ಮ ಸ್ವಪ್ರಯತ್ನದಿಂದ ಅಲ್ಪ ಸ್ವಲ್ಪ ಅರ್ಥಮಾಡಿಕೊಂಡು ನಮ್ಮನ್ನು ನಾವು ಸುಧಾರಿಸಿಕೊಳ್ಳಲು ಪ್ರಯತ್ನ ಪಡಬಹುದಷ್ಟೇ!!!!!

**ಮುಕ್ತಕ-200** **ಹೊಟ್ಟೆಯೊಂದರ ರಗಳೆ ಸಾಲದೆಂದೇನೋ ವಿಧಿ ।**
**ಹೊಟ್ಟೆ ಕಿಚ್ಚಿನ ಕಿಡಿಯ ನೆಟ್ಟಿಹನು ನರನೊಳ್ ||**
**ಹೊಟ್ಟೆ ತುಂಬಿದ ತೋಳ ಮಲಗೀತು ನೀಂ ಪೆರರ |**
**ದಿಟ್ಟಿಸುತ ಕರುಬುವೆಯೋ-ಮಂಕುತಿಮ್ಮ ||**

ಹೊಟ್ಟೆಯೊಂದರ=ಹೊಟ್ಟೆ+ಒಂದರ, ಸಾಲದೆಂದೇನೋ ಸಾಲದು+ಎಂದು+ಏನೋ, ನೆಟ್ಟಿಹನು=ನೆಟ್ಟು+ಇಹನು.
ಕಿಚ್ಚಿನ=ಬೆಂಕಿಯ, ಉರಿಯ, ಪೆರರ=ಪರರ, ದಿಟ್ಟಿಸುತ ನೆಟ್ಟ ನೋಟದಿ ನೋಡುತ,
ಕರುಬುವೆಯೋ-ಕೊರಗುವೆಯೋ.

ಊಟದ ಚಿಂತೆಯೊಂದು ಸಾಲದೇನೋ ಎಂಬಂತೆ, ಅಸೂಯೆ ಅಥವಾ ಹೊಟ್ಟೆಯುರಿಯ ಬೆಂಕಿಯನ್ನು ಮನುಷ್ಯರ ಮನಸ್ಸುಗಳಲ್ಲಿ ಆ ವಿಧಿಯು ನೆಟ್ಟಿದ್ದಾನೆ. ಹೊಟ್ಟೆಬಾಕತನಕ್ಕೆ ಅಥವಾ ಹಸಿವಿಗೆ ಹೆಸರಾದ ಪ್ರಾಣಿ ತೋಳ, ಆ ತೋಳವೂ ಹೊಟ್ಟೆ ತುಂಬಿದರೆ ನೆಮ್ಮದಿಯಿಂದ ನಿದ್ದೆ ಮಾಡುತ್ತದೆ. ಆದರೆ ಮನುಷ್ಯ ಮಾತ್ರ ಅನ್ಯರನ್ನು ನೋಡಿ ಕೊರಗುತ್ತಿರುತ್ತಾನೆ ಎಂದು ಮನುಷ್ಯರ ಅಸೂಯಾ ಪ್ರವೃತ್ತಿಯನ್ನು ಉಪಮೆಯ ಸಹಿತ ವಿಶ್ಲೇಷಣೆ ಮಾಡಿದ್ದಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ತಮಗಿಂತ ಕಡಿಮೆ ಇರುವವರನ್ನು ನೋಡಿ ಗರ್ವ ಅಥವಾ ಮದ ತೋರುವ ಪ್ರವೃತ್ತಿಯಂತೆಯೇ, ನಮಗಿಂತ ಅಧಿಕ ಪಡೆದವರನ್ನು ಕಂಡು ಅಸೂಯೆಪಡುವುದು ಮತ್ತು ಕೊರಗುವುದೂ ಸಹ ಅರಿಷಡ್ವರ್ಗಗಳಲ್ಲಿ ಒಂದು. ಸಾಮಾನ್ಯವಾಗಿ ಎಲ್ಲ ಮನುಷ್ಯರಲ್ಲೂ ಈ ಗುಣ, ಪರಿಮಾಣ ಭೇದವಿದ್ದರೂ ಇದ್ದೇ ಇರುತ್ತದೆ. "ಬಡತನಕೆ ಉಂಬುವ ಚಿಂತೆ, ಉಂಬುವುದಾದರೆ ಉಡುವ ಚಿಂತೆ, ಉಡುವುದಾದರೆ ಮನೆಯ ಚಿಂತೆ,

ಮನೆಯದಾದರೆ ಮಡದಿಯ ಚಿಂತೆ" ಎನ್ನುತ್ತಾರೆ ನಮ್ಮ ಶಿವ ಶರಣರು. ಮನುಷ್ಯರ ಈ ಅವಶ್ಯಕತೆಗಳ ಚಿಂತೆ ನಿರಂತರ, ಒಂದರ ನಂತರ ಒಂದು. ಒಂದಕ್ಕೂ ಇನ್ನೊಂದಕ್ಕೂ ಅಂತರವೇ ಇರುವುದಿಲ್ಲ. ಇಷ್ಟಾದರೆ ಅಷ್ಟರಾಸೆ" ಎಂದು ದಾಸರು ಹೇಳುವಂತೆ ಮೊದಲು ಅವಶ್ಯಕತೆಗಾಗಿ ಒಂದು ಆಸೆ ಮನಸ್ಸಲ್ಲಿ ಹುಟ್ಟುತ್ತದೆ. ಆ ಆಸೆ ಪೂರೈಸಿದರೆ ಇನ್ನೊಂದು ಆಸೆ ಹುಟ್ಟುತ್ತದೆ. ಮೊದಲು ಅವಶ್ಯಕತೆಗೆಷ್ಟು ಬೇಕೋ ಅಷ್ಟರ ಪೂರೈಕೆ ನಂತರ ಇನ್ನಷ್ಟು ಬೇಕೆನ್ನುವ ದುರಾಸೆ.

ಈ ಮುಕ್ತಕದಲ್ಲಿ ಮಾನ್ಯ ಗುಂಡಪ್ಪನವರು "ಹೊಟ್ಟೆ' ಎಂದು ಮಾನವನ ಮೂಲ ಅವಶ್ಯಕತೆಯನ್ನು ಉಲ್ಲೇಖಿಸಿದ್ದಾರೆ. ನಮಗೆ ಹೊಟ್ಟೆಯದಷ್ಟೇ ಅಲ್ಲ, ಇನ್ನೂ ಹತ್ತು ಹಲವಾರು ಅವಶ್ಯಕತೆಗಳುಂಟು. ಪ್ರತಿ ನಿತ್ಯ ಈ ಅವಶ್ಯಕತೆಗಳ ಪಟ್ಟಿ ಬೆಳೆಯುತ್ತಾ ಹೋಗುತ್ತದೆ. ನಾವು ಅವುಗಳನ್ನು ಮಿತಗೊಳಿಸಲು ಒಂದು ಗೆರೆ ಎಳೆಯಲು ಅಸಮರ್ಥರಾಗಿದ್ದೇವೆ. ಹೀಗೆ ನಮ್ಮ ಆಸೆಗಳ ಪಟ್ಟಿ ಮತ್ತು ಒಂದೊಂದು ಆಸೆಯೂ ಗಾತ್ರದಲ್ಲಿಯೂ ಬೆಳೆಯುತ್ತಾ ಹೋಗುತ್ತದೆ. ಹಾಗೆ ಬೃಹದಾಕಾರದಲ್ಲಿ ಬೆಳೆಯುವ ನಮ್ಮ ಆಸೆಗಳನ್ನು ಪೂರೈಸಿಕೊಳ್ಳಲು ನಾವು "ಪಡುವ ಪಾಡೇನು" ಎಂದು ಒಂದು ಬಾರಿ ಅವಲೋಕಿಸಿಕೊಂಡರೆ ನಮಗೆ ನಮ್ಮ ಬಗ್ಗೆಯೇ ಅಸಹ್ಯ ಬರುತ್ತದೆ.

ನಮ್ಮ ಸಾಮರ್ಥ್ಯವನ್ನು ಉಪಯೋಗಿಸಿ ನಾವು ನಮ್ಮ ಆಸೆಗಳ ಬೆಟ್ಟವನ್ನು ಏರಿದರೆ, ಸಾಧಿಸಿದರೆ ಸರಿ. ಆದರೆ ಸಾಮರ್ಥ್ಯವಿಲ್ಲದಿದ್ದರೂ ನಮ್ಮ ಯೋಗ್ಯತೆಗೆ ಮೀರಿದ ಆಸೆ ಪಡುವುದು, ಅದನ್ನು ಪೂರೈಸಿಕೊಳ್ಳಲಿಕ್ಕಾಗಿ ಮಾಡಬಾರದ ಕೆಲಸವನ್ನು ಮಾಡುತ್ತಾ, ನಮ್ಮ ಮತ್ತು ಅನ್ಯರ ಮನಸ್ಸಿನ ನೆಮ್ಮದಿಯನ್ನು ಹಾಳುಮಾಡುತ್ತಾ, ಆ ಪ್ರಯತ್ನದಲ್ಲಿ ಜಯಗಳಿಸಿದರೆ ಬೀಗುತ್ತಾ, ಸೋತರೆ ಕೊರಗುತ್ತಾ ಮತ್ತಷ್ಟು ಅಸೂಯೆಯನ್ನು ಹೆಚ್ಚಿಸಿಕೊಳ್ಳುತ್ತಾ, ಗತವನ್ನು ಮೆಲುಕು ಹಾಕುತ್ತಾ ಇನ್ನಷ್ಟು ಕೊರಗುವ ನಮ್ಮಂತವರು ಈ ಜಗತ್ತಿನಲ್ಲಿ ಬಹಳಷ್ಟು ಜನ ಸಿಗುತ್ತಾರೆ.

ನಮ್ಮ ಅವಶ್ಯಕತೆ ಏನು ಎಂದು ಮೊದಲು ಅರಿಯಬೇಕು. ನಮ್ಮ ಅವಶ್ಯಕತೆ ಎಷ್ಟು ಎಂದು ಅರಿಯಬೇಕು. ಅದನ್ನು ಪೂರೈಸಿಕೊಳ್ಳಲು ನಮಗೆ ಯೋಗ್ಯತೆ ಮತ್ತು ಸಾಮರ್ಥ್ಯ ಎರಡೂ ಇವೆಯೇ ಎಂದು ಯೋಚಿಸಬೇಕು. ನಮ್ಮ ಮನಸ್ಸು ಬುದ್ಧಿಗಳನ್ನು ಕೆಡಿಸದಂತಹ ಆಸೆಗಳನ್ನು ಪಡಬೇಕು. ಪಟ್ಟ ಆಸೆ ಎಲ್ಲವೂ ಪೂರ್ಣಗೊಳ್ಳುವುದಿಲ್ಲ. ನಾವು ಆಸೆ ಪಟ್ಟದ್ದು ಮತ್ತು ಪಟ್ಟಷ್ಟು ನಮಗೆ ಸಿಗುವುದಕ್ಕೆ, ನಮ್ಮ ಆಸೆಯಷ್ಟೇ ಅಲ್ಲ, ಅನ್ಯ ಕಾರಣಗಳೂ ಇರುತ್ತವೆ. ಹಾಗಾಗಿ

ಸಿಕ್ಕಿದ್ದಕ್ಕೆ ಸಂತೋಷದಿಂದ ತೃಪ್ತಿಯಿಂದ ಇದ್ದರೆ ಹೊಟ್ಟೆ ತುಂಬಿದ ತೋಳ ಮಲಗೀತು" ಎಂದು ಗುಂಡಪ್ಪನವರು ಹೇಳಿದಂತೆ ನಾವೂ ಮಲಗಿ ನಿದ್ದೆ ಮಾಡಬಹುದು. ಭಗವಾನ್ ಬುದ್ಧ "ಆಸೆಯೇ ದುಃಖಕ್ಕೆ ಮೂಲ" ಎಂದ. ಆದರೆ ನನಗನ್ನಿಸುವುದು ಏನೆಂದರೆ "ಆಸೆಯೇ ಬಾಳಿಗೆ ಮೂಲ" ಆದರೆ "ದುರಾಸೆಯೇ ದುಃಖಕ್ಕೆ ಮೂಲ" ವೆಂದರೆ ಹೆಚ್ಚು ಸಮರ್ಪಕವಾದೀತೇನೋ ಎಂದು ಅನಿಸುತ್ತದೆ.

ಹಾಗಾಗಿ ವಾಚಕರೆ, ಗೆರೆ ಎಳೆಯಬೇಕು, ನಮ್ಮ ಆಸೆಗಳಿಗೆ, ನಮ್ಮ ಅವಶ್ಯಕತೆ ಮತ್ತು ಸಾಮರ್ಥ್ಯದ ಮಿತಿಯನ್ನರಿತು ಗೆರೆ ಎಳೆಯಬೇಕು. ಎಳೆದರೆ ಬಾಳು ಸುಖವಾಗಿರುತ್ತದೆ. ಇಲ್ಲದಿದ್ದರೆ ಇಲ್ಲ. ಆಯ್ಕೆ ನಮ್ಮಲ್ಲೇ ಇದೆ ಅಲ್ಲವೇ?

***



# ರವಿ ತಿರುಮಲೈ

ಮೂಲತಃ ಕೋಲಾರ ಜಿಲ್ಲೆಯುವರಾದ ರವಿ ತಿರುಮಲೈಯವರು ವಾಣಿಜ್ಯ ಪದವಿ ಪಡೆದು ಕೆನರಾ ಬ್ಯಾಂಕಿನಲ್ಲಿ ೨೦ ವರ್ಷಗಳ ಸೇವೆ ಸಲ್ಲಿಸಿ, ನಿವೃತ್ತಿ ಪಡೆದು, ಬಹಳ ವರ್ಷಗಳ ಕಾಲ ಮೈಸೂರಿನಲ್ಲಿ ವಾಸಿಸಿ, ಪ್ರಸ್ತುತ ಬೆಂಗಳೂರಿನಲ್ಲಿದ್ದಾರೆ. ಪತ್ನಿ, ಒಬ್ಬ ಪುತ್ರ ಮತ್ತು ಒಬ್ಬ ಪುತ್ರಿಯ ಸುಖೀ ಸಂಸಾರದ ಕೇಂದ್ರ ಬಿಂದು ಇವರು. ಕನ್ನಡ ಪ್ರೇಮ, ಪುಸ್ತಕ ಓದುವುದು, ತರ್ಜುಮೆ ಮಾಡುವುದು, ಲೇಖನ, ಕವನ, ಹಾಡುಗಳನ್ನು ಬರೆಯುವುದು, ರಂಗಭೂಮಿ, ಹಳೆಯ ಚಿತ್ರ ಸಂಗೀತ, ಹೀಗೆ ಅವರ ಹವ್ಯಾಸಗಳು ಹಲವು. ಉತ್ತಮ ಶಾಸ್ತ್ರೀಯ ಸಂಗೀತ ಕೇಳುವುದೆಂದರೆ ಇವರಿಗೆ ಬಹಳ ಇಷ್ಟ. ಇವರ ಒಂದು ಕವನ ಸಂಕಲನ, ಒಂದು ಲೇಖನಗಳ ಸಂಗ್ರಹ ಸದ್ಯದಲ್ಲೇ ಪ್ರಕಟವಾಗಲಿದೆ.

ಪ್ರಚಾರಪ್ರಿಯರಲ್ಲದ ತಿರುಮಲೈಯವರು ಈಗ್ಗೆ ೮ ತಿಂಗಳಿಂದ ಮುಖಪುಸ್ತಕದಲ್ಲಿ ಕನ್ನಡ ಬ್ಲಾಗಿನಲ್ಲಿ ದಿನಕ್ಕೊಂದರಂತೆ ಬರೆದ " ಮಂಕುತಿಮ್ಮನಕಗ್ಗ" ಗಳ ವ್ಯಾಖ್ಯಾನದ ಸಂಗ್ರಹವೇ ಈ ಪುಸ್ತಕ. ಇದನ್ನು ಬರೆದ ಅವರು, ಇದು ತನಗೆ ಒಂದು ಕಲಿಕೆಯ ಮಾಧ್ಯಮ ಎಂದು ನಮ್ರರಾಗಿ ಹೇಳಿಕೊಳ್ಳುತ್ತಾರೆ.

ಬೆಲೆ : ರೂ. 250/-

ಪ್ರಕಾಶಕರು :ವಿಜಯರವಿ ಪ್ರಕಾಶನ, ಬೆಂಗಳೂರು - 560 041 ದೂರವಾಣಿ- 080-22451417